ವಿಜಯನಗರ ಕಾಲದ ಅಮರನಾಯಕರು: ಚಾರಿತ್ರಿಕ ವಿಶ್ಲೇಷಣೆ

(ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗಕ್ಕೆ
ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧನ ವಿದ್ಯಾರ್ಥಿ

ಸರಿತಾ ಟಿ.ಎಚ್.

ಮಾರ್ಗದರ್ಶಕರು

ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಪ್ರಾಧ್ಯಾಪಕರು

ಮಾತೆಂಬುದು ಜ್ಯೋತಿರ್ಲಿಂಗ

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೮

957

ವಿಜಯನಗರ ಕಾಲದ ಅಮರನಾಯಕರು:

ಚಾರಿತ್ರಿಕ ವಿಶ್ಲೇಷಣೆ

(ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗಕ್ಕೆ
ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧನ ವಿದ್ಯಾರ್ಥಿ
ಸರಿತಾ ಟಿ.ಎಚ್.

ಮಾರ್ಗದರ್ಶಕರು
ಡಾ. ವಿರೂಪಾಕ್ಷಿ ಪೂಜಾರಹಳ್ಳಿ
ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೧೮

ಸಂಶೋಧಕರ ಪ್ರಮಾಣಪತ್ರ

ವಿಜಯನಗರ ಕಾಲದ ಅಮರನಾಯಕರು: ಚಾರಿತ್ರಿಕ ವಿಶ್ಲೇಷಣೆ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ವಿರೂಪಾಕ್ಷಿ ಪೂಜಾರಹಳ್ಳಿ,** ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ. ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ **ಚರಿತ್ರೆ ವಿಭಾಗಕ್ಕೆ** ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Saritha T.H.

(ಸರಿತಾ ಟಿ.ಎಚ್.)

ದಿನಾಂಕ:

ಸ್ಥಳ: ವಿದ್ಯಾರಣ್ಯ

ಸಂಶೋಧನ ವಿದ್ಯಾರ್ಥಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ವಿಜಯನಗರ ಕಾಲದ ಅಮರನಾಯಕರು: ಚಾರಿತ್ರಿಕ ವಿಶ್ಲೇಷಣೆ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ಪಿಎಚ್.ಡಿ. ಪದವಿಗಾಗಿ **ಸರಿತಾ ಟಿ.ಎಚ್.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ. ವಿರೂಪಾಕ್ಷಿ ಪೂಜಾರಹಳ್ಳಿ
ಮಾರ್ಗದರ್ಶಕರು ಹಾಗೂ ಮುಖ್ಯಸ್ಥರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ :

ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ : ಒಂದು

ಪ್ರಸ್ತಾವನೆ

೧.೧ ಅಧ್ಯಯನದ ಉದ್ದೇಶ

೧.೨ ಅಧ್ಯಯನದ ವ್ಯಾಪ್ತಿ

೧.೩ ಅಧ್ಯಯನದ ವಿಧಾನ

೧.೪ ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

೧.೫ ಅಧ್ಯಯನದ ಸ್ವರೂಪ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಪ್ರಸ್ತಾವನೆ

ದಕ್ಷಿಣ ಭಾರತದ ಇತಿಹಾಸದಲ್ಲಿ ವಿಜಯನಗರದ ಸ್ಥಾಪನೆ, ಬೆಳವಣಿಗೆ, ಪತನ ಹಾಗೂ ವಿಜಯನಗರೋತ್ತರ ಕಾಲದ ರಾಜಕೀಯ ಸ್ಥಿತ್ಯಂತರಗಳು ಮಹತ್ತರವಾದಂತಹ ಬೆಳವಣಿಗೆಗಳನ್ನು ಉಂಟುಮಾಡಿದವು. ವಿಜಯನಗರದ ಹುಟ್ಟು, ದೇಶ ವಿದೇಶಗಳಲ್ಲಿ ಕೀರ್ತಿಯನ್ನು ಹೆಚ್ಚಿಸಿದರೆ ಅದರ ಅವನತಿಯು ಇಡೀ ದಕ್ಷಿಣ ಭಾರತದ ಹಲವಾರು ರಾಜಕೀಯ ಪಲ್ಲಟಗಳಿಗೆ ಕಾರಣವಾಯಿತು. ವಿಜಯನಗರದ ಉದಯ ಮತ್ತು ಬೆಳವಣಿಗೆಯು ಸಾಮ್ರಾಜ್ಯಶಾಹೀ ವ್ಯವಸ್ಥೆಯನ್ನು ಉತ್ತುಂಗ ಸ್ಥಿತಿಗೆ ಕೊಂಡೊಯ್ದರೆ, ಅದರ ಅವನತಿಯು ಜನಸಾಮಾನ್ಯರ ಬದುಕಿಗೆ ತೀರಾ ಹತ್ತಿರವಾದಂತಹ ಸ್ಥಾನಿಕ ಪ್ರಭುಗಳ ಹುಟ್ಟಿಗೆ ಕಾರಣವಾಯಿತು. ಮಹಾ ಮಂಡಲೇಶ್ವರ, ಮಾಂಡಳಿಕ, ಸಾಮಂತ, ನಾಯಕ ಮುಂತಾದ ಸ್ಥಾನಮಾನಗಳನ್ನು ಹೊಂದಿದ್ದ ಚಿಕ್ಕಪುಟ್ಟ ಊಳಿಗಮಾನ್ಯ ಅರಸು ಮನೆತನಗಳು ವಿಜಯನಗರದ ಪತನದ ನಂತರ ಸ್ವತಂತ್ರವಾದ ಪಾಳೆಯಪಟ್ಟುಗಳನ್ನು ಸ್ಥಾಪಿಸಿದರು. ಈ ಪಾಳೆಯಪಟ್ಟುಗಳ ಉಗಮ ವಿಜಯನಗರ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯ ಪ್ರಧಾನ ಭಾಗವಾಗಿದ್ದ ಅಮರನಾಯಕ ಪದ್ಧತಿಯಲ್ಲಿ ಅಂತರ್ಗತವಾಗಿತ್ತು. ಹೀಗಾಗಿ ವಿಜಯನಗರೋತ್ತರ ಪಾಳೆಯಗಾರರು ಮೂಲತಃ ರಾಜಕೀಯವಾಗಿ ತಮ್ಮ ನೆಲೆಯನ್ನು ಕಂಡುಕೊಂಡಿದ್ದು ವಿಜಯನಗರದಂತಹ ಬೃಹತ್ ಸಾಮ್ರಾಜ್ಯದ ಅಸ್ತಿತ್ವದಲ್ಲಿ. ದಕ್ಷಿಣ ಭಾರತದ ಬಹುಭಾಗವನ್ನು ತನ್ನ ನಿಯಂತ್ರಣದಲ್ಲಿರಿಸಿಕೊಂಡಿದ್ದ ವಿಜಯನಗರ ಸಾಮ್ರಾಜ್ಯವು ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬಂದಿದ್ದು ಅಮರನಾಯಕ ಪದ್ಧತಿಯಿಂದಲೇ. ಹೀಗಾಗಿ ಅಮರನಾಯಕರು ವಿಜಯನಗರದ ಆರ್ಥಿಕ ಮತ್ತು ಸೇನಾ ದೃಷ್ಟಿಯಿಂದಾಗಿ ಬಲಿಷ್ಠವಾದ ರಕ್ಷಣಾ ಗೋಡೆಗಳಂತಿದ್ದರು. ಸಂಗಮ ವಂಶದ ಕಾಲದಿಂದಲೇ ತನ್ನ ಅಸ್ತಿತ್ವವನ್ನು ಗುರುತಿಸಿಕೊಂಡ ಅಮರನಾಯಕ ಪದ್ಧತಿಯು ತುಳುವ ವಂಶದ ಸುಪ್ರಸಿದ್ಧ ಅರಸ ಕೃಷ್ಣದೇವರಾಯನ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದು ವಿಜಯನಗರ ಸಾಮ್ರಾಜ್ಯದ ನಾಲ್ಕು ಮೇರೆಗಳವರೆಗೂ ವ್ಯಾಪಿಸಿತು. ಕೃಷ್ಣದೇವರಾಯನ ನಂತರ ಅಧಿಕಾರಕ್ಕೆ ಬಂದ ಅಚ್ಯುತರಾಯ, ಸದಾಶಿವರಾಯ, ರಾಮರಾಯನ ಕಾಲದವರೆಗೂ ಕರ್ನಾಟಕವನ್ನು

ಒಳಗೊಂಡಂತೆ ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡಿನಲ್ಲಿ ವ್ಯಾಪಕವಾಗಿ ರೂಢಿಯಲ್ಲಿದ್ದು ಈ ಪದ್ಧತಿಯು ಅತ್ಯಂತ ಜನಪ್ರಿಯವಾಗಿತ್ತು.

ಕ್ರಿ.ಶ. ೧೫೬೫ರ ರಕ್ಕಸಗಿ ತಂಗಡಿಗಿ ಯುದ್ಧ ನಂತರ ಈ ನಾಯಕ ಪದ್ಧತಿಯು ಅವನತಿಯ ಪಥದತ್ತ ಸಾಗತೊಡಗಿತು. ಈ ಯುದ್ಧದ ನಂತರ ಬಹುತೇಕ ಸಾಮಂತರು ಸ್ವತಂತ್ರರಾಗಿ ನೂರಾರು ಕಿರು ರಾಜ ಪ್ರಭುತ್ವಗಳು ಸ್ಥಾಪಿತಗೊಂಡವು. ಇದರ ಮಧ್ಯೆ ವಿಜಯನಗರದ ಕೊನೆಯ ಸಂತತಿಯಾದ ಅರವೀಡು ಮನೆತನದವರೆಗೂ ನಾಯಕ ಪದ್ಧತಿ ಮುಂದುವರಿದರೂ ಅದು ನಾಮಮಾತ್ರವಾಗಿತ್ತು. ಅರವೀಡು ಮನೆತನದ ವೆಂಕಟಪತಿರಾಯ ಮತ್ತು ಮೂರನೇ ಶ್ರೀರಂಗರಾಯನ ಕಾಲದವರೆಗೂ ಅಮರನಾಯಕ ಪದ್ಧತಿಯು ಅಸ್ತಿತ್ವದಲ್ಲಿತ್ತು ಎಂಬುದನ್ನು ಸಮಕಾಲೀನ ಶಾಸನಗಳು ದೃಢೀಕರಿಸುತ್ತವೆ. ಕ್ರಿ.ಶ. ೧೬೨೭ರ ಬೇಲೂರು ಕದನದ ನಂತರ ವಿಜಯನಗರವು ಇತಿಹಾಸದ ಪುಟಗಳಿಂದ ನಿರ್ಗಮಿಸಿತು, ಈ ವೇಳೆಗಾಗಲೇ ಬಹುತೇಕ ಸ್ವತಂತ್ರಗೊಂಡಿದ್ದ ನಾಯಕರು ಪಾಳೆಯಗಾರರಾಗಿ ದಕ್ಷಿಣ ಭಾರತದ ಇತಿಹಾಸದಲ್ಲಿ ವಿಜೃಂಭಿಸತೊಡಗಿಸಿದರು. ೧೭೯೯ರವರೆಗೂ ಅಸ್ತಿತ್ವದಲ್ಲಿದ್ದ ಪಾಳೆಯಗಾರರು ಮೈಸೂರಿನ ಸರ್ವಾಧಿಕಾರಿಗಳಾದ ಹೈದರಾಲಿ, ಟಿಪ್ಪು ಸುಲ್ತಾನರ ದಮನಕಾರಿ ನೀತಿಗಳಿಗೆ, ಮರಾಠರ ಮತ್ತು ಮೊಗಲ್ ಸೇನಾನಿಗಳ ರಾಜಕೀಯ ಹಿತಾಸಕ್ತಿಗಳಿಗೆ ಬ್ರಿಟಿಷರ ಒಡೆದು ಆಳುವ ನೀತಿಗಳಿಗೆ ಬಲಿಯಾಗಬೇಕಾಯಿತು. ಒಟ್ಟಿನಲ್ಲಿ ವಿಜಯನಗರ ಸಾಮ್ರಾಜ್ಯದ ಪತನದ ನಂತರ ಅಮರನಾಯಕರು ಪಾಳೆಯಗಾರರಾಗಿ ಮರುಹುಟ್ಟನ್ನು ಪಡೆದರು. ಹಾಗೂ ಪ್ರಾದೇಶಿಕವಾಗಿ ರಾಜನ ಸ್ಥಾನಮಾನಗಳನ್ನು ಗಳಿಸಿ ದೊರೆಗಳಂತೆ ಆಳಿರುವುದು ಇತಿಹಾಸದ ಪುಟಗಳಿಂದ ಸ್ಪಷ್ಟವಾಗುತ್ತದೆ. ಸ್ಥಳೀಯ ದೊರೆಗಳಾಗಿದ್ದ ಪಾಳೆಯಗಾರರು ಜನಗಳೊಂದಿಗೆ ನೇರ ಸಂಪರ್ಕವನ್ನು ಹೊಂದಿದ್ದರು. ಜನಪರವಾಗಿ ಆಡಳಿತ ನಡೆಸಿದರೂ ಪ್ರಭುತ್ವದ ದರ್ಪಿಷ್ಟತೆಯಿಂದ ಹೊರತಾಗಿರಲಿಲ್ಲ. ಆರಂಭದಲ್ಲಿ ವಿಜಯನಗರದ ರಕ್ಷಕರಾಗಿ, ಸೇವಕರಾಗಿ, ಅವರ ಆಡಳಿತಾಧಿಕಾರಿಗಳಾಗಿ ಬೆಳೆದು ಬಂದ ವರ್ಗವೊಂದು ಮುಂದೆ ಸ್ವತಂತ್ರವಾಗಿ ಚಿಕ್ಕಪುಟ್ಟ ಅರಸು ಮನೆತನಗಳಾಗಿ ರೂಪುಗೊಂಡು ದಕ್ಷಿಣ ಭಾರತವನ್ನು ಆಳಿದವು. ದಕ್ಷಿಣ ಭಾರತವನ್ನು ಹೊರತುಪಡಿಸಿ ಕರ್ನಾಟಕ ರಾಜ್ಯವನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರ ಸುಮಾರು ನೂರ ಎಂಬತ್ತಕ್ಕಿಂತಲೂ ಹೆಚ್ಚು ನಾಯಕ ಮನೆತನಗಳು ವಿಜಯನಗರದ ಪತನದ ನಂತರ ಕರ್ನಾಟಕವನ್ನು ಆಳಿದವು. ಈ ಎಲ್ಲ ಕಿರು ರಾಜಪ್ರಭುತ್ವಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಅವುಗಳಲ್ಲಿ ಬಹುತೇಕ ರಾಜಮನೆತನಗಳು ವಿಜಯನಗರ ಕಾಲದಲ್ಲಿ ಅಮರನಾಯಕರಾಗಿ ಅಸ್ತಿತ್ವವನ್ನು ಪಡೆದಂತಹುಗಳೇ. ಹೀಗಾಗಿ ವಿಜಯನಗರ ಕಾಲದ ಪಾಳೆಯಗಾರರಾಗಿ ಪುನರ್ ಅಸ್ತಿತ್ವವನ್ನು ಪಡೆದುಕೊಂಡರು ಎಂದು ಸ್ಪಷ್ಟವಾಗಿ ಹೇಳಬಹುದು.

ವಿಜಯನಗರದಂತಹ ಬೃಹತ್ ಸಾಮ್ರಾಜ್ಯದ ಕುರಿತು ಅನೇಕ ಅಧ್ಯಯನಗಳು ಇದುವರೆಗೂ ನಡೆದಿವೆ; ಹಾಗೂ ನಡೆಯುತ್ತಲೇ ಇವೆ. ದೇಶಿ, ವಿದೇಶಿ ವಿದ್ವಾಂಸರು ವಿಜಯನಗರ ಸಾಮ್ರಾಜ್ಯದ

ಹುಟ್ಟು, ಉಗಮದ ಮೂಲ, ವಂಶಗಳು, ಪ್ರಭುತ್ವದ ಮಾದರಿ, ಆಡಳಿತ ವ್ಯವಸ್ಥೆ, ರಾಜಕೀಯ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಕೊಡುಗೆಗಳು ಮೊದಲಾದ ಅಂಶಗಳ ಕುರಿತು ಅಧ್ಯಯನಗಳನ್ನು ನಡೆಸಿದ್ದಾರೆ. ಹಾಗೆಯೇ ವಿಜಯನಗರ ಕಾಲದ ನಾಯಕರು ಹಾಗೂ ವಿಜಯನಗರೋತ್ತರ ಕಾಲದ ನಾಯಕರ ಕುರಿತು ಸಂಶೋಧನೆಗಳು ನಡೆಯುತ್ತಲೇ ಇವೆ. ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳನ್ನು ಹೊರತುಪಡಿಸಿದರೆ ಕರ್ನಾಟಕದಲ್ಲಿ ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದ ನಾಯಕ ಮನೆತನಗಳ ಕುರಿತು ಸಂಶೋಧನೆಗಳು ತುಂಬಾ ವಿರಳವಾಗಿ ನಡೆದಿವೆ. ಇದಕ್ಕೆ ಕಾರಣ ಕಿರು ರಾಜಪ್ರಭುತ್ವಗಳ ಕುರಿತು ಇರುವ ನಿರ್ಲಕ್ಷ್ಯ, ಆಕರಗಳ ಕೊರತೆ, ಶಾಸನಗಳನ್ನು ತಾಳ್ಮೆಯಿಂದ ಪರೀಕ್ಷಿಸಿ ಮಾಹಿತಿಗಳನ್ನು ಸಂಗ್ರಹಿಸುವ ಕಠಿಣ ಪರಿಶ್ರಮದ ಕೊರತೆ ಇರಬಹುದು. ಕರ್ನಾಟಕದಲ್ಲಿ ಈ ನಾಯಕ ಮನೆತನಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ಲೇಖನಗಳು, ಕೃತಿಗಳು, ಸಂಶೋಧನಾ ಪ್ರಬಂಧಗಳಿಗೆ ಕೊರತೆಯಿಲ್ಲ. ಆದರೆ ಸಮಗ್ರವಾಗಿ ಈ ನಾಯಕ ಮನೆತನಗಳ ಹುಟ್ಟು ಅದು ಬೆಳೆದು ಬಂದ ಬಗೆ ಹಾಗೂ ಅವುಗಳ ಸಾಮಾಜಿಕ ಸಾಂಸ್ಕೃತಿಕ ಚರಿತ್ರೆಯನ್ನು ನಿರ್ಮಿಸಿರುವ ಚಾರಿತ್ರಿಕ ಬರವಣಿಗೆಗಳ ಕೊರತೆಯು ಎದ್ದು ಕಾಣುತ್ತದೆ. ಇದಕ್ಕೆ ಪ್ರಮುಖ ಕಾರಣ ಸಮಕಾಲೀನ ಆಕರಗಳ ಕೊರತೆ ಎಂಬ ವಿಷಯವನ್ನು ಯಾರು ಕಡೆಗಣಿಸುವಂತಿಲ್ಲ.

೧.೧. ಅಧ್ಯಯನದ ಉದ್ದೇಶ

ವಿಜಯನಗರ ಕಾಲದ ಅಮನರನಾಯಕ ಪದ್ಧತಿಯು ಕುರಿತು ಇತ್ತೀಚೆಗೆ ಹಲವಾರು ವಿಶ್ಲೇಷಣಾತ್ಮಕ ಲೇಖನಗಳು, ಪ್ರಬಂಧಗಳು ಪ್ರಕಟಗೊಳ್ಳುತ್ತಿವೆ ಹಾಗೂ ಕೆಲವು ಕಿರು ನಾಯಕ ಪ್ರಭುತ್ವಗಳ ಕುರಿತು ಸಂಶೋಧನಾ ಲೇಖನಗಳ ಕೃತಿಗಳು ಪ್ರಕಟಗೊಂಡಿವೆ. ಉದಾಹರಣೆಗೆ ಕೆಳದಿ, ಚಿತ್ರದುರ್ಗ, ಯಲಹಂಕ, ಹಾಗಲವಾಡಿ, ಸಂತೆಬೆನ್ನೂರು, ಕನಕಗಿರಿ, ಇತ್ಯಾದಿ ವಿಜಯನಗರದ ಕಾಲದ ಅಥವಾ ನಾಯಕರ ಪದ್ಧತಿಯನ್ನು ಕುರಿತು ತಮಿಳುನಾಡು ಮತ್ತು ಆಂಧ್ರಪ್ರದೇಶಗಲ್ಲಿ ಹೆಚ್ಚು ಅಧ್ಯಯನಗಳು ನಡೆದಿದ್ದರೂ ಕರ್ನಾಟಕದ ಮಟ್ಟಿಗೆ ಅಂತಹ ವಿಸ್ಕೃತವಾದ ಅಧ್ಯಯನಗಳು ನಡೆದಿಲ್ಲವೆಂದೇ ಹೇಳಬೇಕಾಗುತ್ತದೆ. ಚಿತ್ರದುರ್ಗ, ಯಲಹಂಕ, ಕೆಳದಿ, ಬಳ್ಳಾರಿ, ಹರಪನಹಳ್ಳಿ, ರತ್ನಗಿರಿ, ಮಿಡಿಗೇಶಿ, ಮಧುಗಿರಿ, ಹಾಗಲವಾಡಿ, ಮತ್ತೋಡು, ಕನಕಗಿರಿ, ಸುರಪುರ, ಆನೆಗೊಂದಿ, ಗುಂತಗೋಳ, ಗುಬ್ಬಿಹೊಸಹಳ್ಳಿ, ಸಂತೆಬೆನ್ನೂರು, ಹರತಿ, ನಾಯಕನಹಟ್ಟಿ, ಚನ್ನಪಟ್ಟಣ, ಬೇಲೂರು, ನಂದ್ಯಾಲ, ಉಮ್ಮತ್ತೂರು, ಗುಮ್ಮನಾಯಕನ ಪಾಳೆಯ, ಅವತಿ, ಸುಗಟೂರು, ನಾಗಮಂಗಲ ಮುಂತಾದ ಕಿರುನಾಯಕ ಪ್ರಭುತ್ವಗಳ ಕುರಿತು ಅಧ್ಯಯನಗಳು ನಡೆದಿದ್ದರೂ ಅವು ಪರಿಪೂರ್ಣ ಅಧ್ಯಯನಗಳಲ್ಲ. ವಿಜಯನಗರ ಕಾಲದಲ್ಲಿ ರಾಜಕೀಯ ಮತ್ತು ಆಡಳಿತ ಚರಿತ್ರೆಯಲ್ಲಿ ಕಾಣಿಸಿಕೊಳ್ಳುವ ಅಮರನಾಯಕರು ರಕ್ಕಸಕ ತಂಗಡಗಿ ಯುದ್ಧದ ತರುವಾಯ ಬದಲಾದ ರಾಜಕೀಯ ಸ್ಥಿತ್ಯಂತರಗಳ ಫಲವಾಗಿ ಉದಯಗೊಂಡ ಪಾಳೆಯಗಾರರನ್ನು ವಿಶ್ಲೇಷಣೆ ಮಾಡುವುದೇ ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ವಿಜಯನಗರ ಸಾಮ್ರಾಜ್ಯದ ಪ್ರಭುತ್ವಕ್ಕೆ ಸಂಬಂಧಿಸಿದಂತೆ ಒಂದೇ ರೀತಿಯ ಅಭಿಪ್ರಾಯಗಳಿಲ್ಲ ಎಂಬುದು ಅಧ್ಯಯನಗಳ ಮೂಲಕ ಸ್ಪಷ್ಟವಾಗುತ್ತದೆ. ಕೆ.ಎ. ನೀಲಕಂಠಶಾಸ್ತ್ರಿ ಮತ್ತು ಕೃಷ್ಣಸ್ವಾಮಿ ಅಯ್ಯರ್‌ರವರು ಕೇಂದ್ರೀಕೃತ ಪ್ರಭುತ್ವ ವ್ಯವಸ್ಥೆಯನ್ನು ವಿಜಯನಗರ ಸಾಮ್ರಾಜ್ಯವು ಅಳವಡಿಸಿಕೊಂಡಿತ್ತು ಎಂದರೆ, ಎ.ವಿ. ವೆಂಕಟರತ್ನಂ, ವೆಂಕಟರಾಮಣ್ಣ, ನೊಬಾರೊ ಕರಾಷಿಮಾ, ಕಾವಲಮ್ಮ, ಯೋಗೀಶ್ವರಪ್ಪ ಮೊದಲಾದವರು ವಿಜಯನಗರದ ಪ್ರಭುತ್ವ ಮಾದರಿಯನ್ನು ಕುರಿತು ಚರ್ಚಿಸುತ್ತ ವಿಜಯನಗರ ಸಾಮ್ರಾಜ್ಯವು ಕೇಂದ್ರೀಕೃತ ಸಂಯುಕ್ತ ಊಳಿಗಮಾನ್ಯ ಮತ್ತು ವಿಕೇಂದ್ರೀಕೃತ ಅಂಶಗಳನ್ನು ಒಳಗೊಂಡಿತ್ತು ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಹಾಗೆಯೇ ಅಮೇರಿಕಾದ ಪ್ರಸಿದ್ಧ ಇತಿಹಾಸಕಾರನಾದ ಬರ್ಟನ್ ಸ್ಟೈನ್ ವಿಜಯನಗರವು ಖಂಡಾಂತರ ರಾಜ್ಯಗಳನ್ನು ಒಳಗೊಂಡಂತಹ ಪ್ರಭುತ್ವ ಮಾದರಿಯನ್ನು ಒಳಗೊಂಡಿತ್ತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಬರ್ಟನ್ ಸ್ಟೈನ್ ಹೇಳುವಂತೆ ರಾಜ್ಯದ ಅಧಿಕಾರವು ಕೇಂದ್ರೀಕೃತವಾಗಿರದೆ ನಾಡುಗಳೆಂಬ ಹಲವಾರು ಚಿಕ್ಕ ಚಿಕ್ಕ ಘಟಕಗಳಲ್ಲಿ ಹಂಚಿ ಹೋಗಿತ್ತು ಎಂದಿದ್ದಾರೆ. ಆಧುನಿಕ ವಿದ್ವಾಂಸರು ಈ ಎಲ್ಲಾ ವಾದ-ವಿವಾದಗಳನ್ನು ಮುಂದಿಟ್ಟುಕೊಂಡು ವಿಜಯನಗರದ ಸರ್ಕಾರದ ಮಾದರಿಗಳನ್ನು ವಿವಿಧ ರೀತಿಯಲ್ಲಿ ಅರ್ಥೈಸುವ ಪ್ರಯತ್ನಗಳನ್ನು ಮಾಡಿರುವರು. ಪ್ರಸ್ತುತ ಅಧ್ಯಯನದಲ್ಲಿ ವಿಜಯನಗರ ಪ್ರಭುತ್ವದ ಸ್ವರೂಪವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಇದಕ್ಕೆ ಪೂರಕವಾಗಿ ವಿಜಯನಗರ ಕಾಲದ ಸಮಕಾಲೀನ ಐತಿಹಾಸಿಕ ದಾಖಲೆಗಳನ್ನು, ಶಾಸನಗಳನ್ನು, ಕೈಫಿಯತ್ತುಗಳನ್ನು ಬಖೈರುಗಳನ್ನು ಚಾರಿತ್ರಿಕ ವಿಶ್ಲೇಷಣೆ ಒಳಪಡಿಸಲಾಗಿದೆ.

ವಿಜಯನಗರ ಸಾಮ್ರಾಜ್ಯವು ಊಳಿಗಮಾನ್ಯ ವ್ಯವಸ್ಥೆಗೆ ಒಳಪಟ್ಟಂತಹ ಸಮ್ರಾಜ್ಯವಾಗಿದ್ದು, ವಿಜಯನಗರ ಪ್ರಭುತ್ವದ ಕೆಳ ಹಂತದ ಅಧಿಕಾರ ವ್ಯವಸ್ಥೆಯಲ್ಲಿಯೂ ಕೂಡ ಊಳಿಗಮಾನ್ಯ ವ್ಯವಸ್ಥೆಯು ಜಾರಿಯಲ್ಲಿತ್ತು. ಈ ಊಳಿಗಮಾನ್ಯ ವ್ಯವಸ್ಥೆಯ ಅಡಿಯಲ್ಲಿ ಅಮರನಾಯಕ ವ್ಯವಸ್ಥೆ ಹೇಗೆ ಕಾರ್ಯನಿರ್ವಹಿಸುತ್ತಿತ್ತು. ಈ ಅಮರನಾಯಕ ವ್ಯವಸ್ಥೆಯ ಲಕ್ಷಣಗಳೇನು, ಅಮರನಾಯಕರನ್ನು ಹೇಗೆ ನೇಮಿಸಲಾಗುತ್ತಿತ್ತು. ವಿಜಯನಗರ ಸಾಮ್ರಾಜ್ಯದ ಅಧಿಕಾರದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಅಮರನಾಯಕರ ಕರ್ತವ್ಯಗಳು ಹಾಗೂ ವಿಜಯನಗರದ ಅರಸರೊಂದಿಗಿನ ಅವರ ಸಂಬಂಧಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಅಮರನಾಯಕತನವನ್ನು ನೀಡುವ ಪದ್ಧತಿಯು ಯಾರಿಂದ ಆರಂಭವಾಯಿತು ಎಂದು ನಿಖರವಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ. ನೊಬಾರೊ ಕರಾಷಿಮಾರವರು Kingship in Indian History ಎಂಬ ಕೃತಿಯಲ್ಲಿ "ಈ ನಾಯಕ ವ್ಯವಸ್ಥೆಯನ್ನು ಸಮಕಾಲೀನ ಇಸ್ಲಾಮಿಕ್ ರಾಜಕೀಯ ಸಂಪ್ರದಾಯದಲ್ಲಿದ್ದ ಇಕ್ತ, ಸೊಯಿರ್ಸಾಲ್ ಅಥವಾ ಜಾಗೀರುಗಳ ಜೊತೆ ಗುರುತಿಸುವ ಪ್ರಯತ್ನ ಮಾಡಿರುವರು. ಮಧ್ಯಯುಗೀನ ಭಾರತವನ್ನು ಆಳಿದ ದೆಹಲಿ ಸುಲ್ತಾನರ ಆಡಳಿತ ವ್ಯವಸ್ಥೆಯಲ್ಲಿ ಕಂಡುಬರುವ ಇಖ್ತಾದಾರಿ ಪದ್ಧತಿಯು ವಿಜಯನಗರದ ಅರಸರು ಜಾರಿಗೆ ತಂದುಕೊಂಡಿದ್ದ

ಅಮರನಾಯಕ ವ್ಯವಸ್ಥೆಯನ್ನು ಹೋಲುತ್ತದೆ. ಕ್ರಿ.ಶ. ೧೨೧೧ರಲ್ಲಿ ದೆಹಲಿ ಸುಲ್ತಾನನಾಗಿ ಅಧಿಕಾರಕ್ಕೆ ಬಂದ ಇಲ್ತಾಮಿಷನು ಇಖ್ತಾದಾರಿ ವ್ಯವಸ್ಥೆಯನ್ನು ಜಾರಿಗೆ ತಂದನು. ಸೈನಿಕರಿಗೆ ಸಂಬಳಕ್ಕೆ ಪ್ರತಿಯಾಗಿ ಜಾಗೀರು ಭೂಮಿಗಳನ್ನು ನೀಡಲಾಗುತ್ತಿತ್ತು. ಈ ಜಾಗೀರು ಭೂಮಿಗಳನ್ನು ಇಖ್ತಾಗಳೆಂದು, ಇವುಗಳ ಮಾಲೀಕರನ್ನು ಇಖ್ತಾದಾರರೆಂದೂ ಕರೆಯುತ್ತಿದ್ದರು. ದೆಹಲಿ ಸುಲ್ತಾನರ ನಂತರ ಉತ್ತರ ಭಾರತದಲ್ಲಿ ಅಧಿಕಾರಕ್ಕೆ ಬಂದ ಮೊಘಲರಲ್ಲಿಯೇ ಮನ್ಸಬ್‌ದಾರಿ ಪದ್ಧತಿ ಮತ್ತು ಜಾಗೀರುದಾರಿ ಪದ್ಧತಿಗಳು ಜಾರಿಯಲ್ಲಿದ್ದವು. ಮನ್ಸಬ್‌ದಾರಿ ಪದ್ಧತಿಯಲ್ಲಿ ಮೂರು ಬಗೆಯ ಶ್ರೇಣಿಗಳಿದ್ದು ಇದು ಭಾಗಶಃ ವಿಜಯನಗರ ಕಾಲದ ಅಮರನಾಯಕರ ವರ್ಗೀಕರಣವನ್ನೇ ಹೋಲುತ್ತದೆ. ಆದರೆ ಪ್ರಸ್ತುತ ಅಧ್ಯಯನದ ವಿಷಯ ವಿಜಯನಗರ ಕಾಲದ ಅಮರನಾಯಕರಾಗಿರುವುದರಿಂದ ಅಧ್ಯಯನದ ವ್ಯಾಪ್ತಿಯ ದೃಷ್ಟಿಯಿಂದ ದಕ್ಷಿಣ ಭಾರತದ ರಾಜಕೀಯ ಪ್ರಭುತ್ವಗಳಲ್ಲಿ ಸಮಕಾಲೀನ ಕಾಲಘಟ್ಟಗಳಲ್ಲಿ ಅಸ್ತಿತ್ವದಲ್ಲಿದ್ದ ನಾಯಕ ವ್ಯವಸ್ಥೆಯ ಸ್ವರೂಪವನ್ನು ವಿಶ್ಲೇಷಣೆ ಮಾಡುವ ಉದ್ದೇಶವನ್ನು ಈ ಅಧ್ಯಯನವು ಒಳಗೊಂಡಿದೆ. ಶಾತವಾಹನರ ಕಾಲದಿಂದ ಹಿಡಿದು ಹೊಯ್ಸಳರ ಕಾಲದವರೆಗಿನ ಪ್ರಾದೇಶಿಕ ಪ್ರಭುತ್ವಗಳ ಸ್ವರೂಪವನ್ನು ಗಮನಿಸಿ ವಿಜಯನಗರ ರಾಜ್ಯಾಡಳಿತದಲ್ಲಿ ಅಮರನಾಯಕ ಪದ್ಧತಿಯು ಜಾರಿಗೆ ಎಡೆ ಮಾಡಿಕೊಟ್ಟ ಸಂದರ್ಭ, ಸನ್ನಿವೇಶಗಳನ್ನು ಚಾರಿತ್ರಿಕವಾಗಿ ವಿಶ್ಲೇಷಣೆ ಮಾಡಲಾಗಿದೆ.

ವಿಜಯನಗರ ಸಾಮ್ರಾಜ್ಯ ಮತ್ತು ಸಾಮಂತ ವ್ಯವಸ್ಥೆಯನ್ನು ಮುಖಾಮುಖಿಯಾಗಿ ನೋಡುವ ಹಿನ್ನೆಲೆಯಿಂದ ಕೆಲವು ಆಯ್ದ ಅಮರನಾಯಕ ಮನೆತನಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದರ ಉದ್ದೇಶವಿಷ್ಟೇ; ಸಾರ್ವಭೌಮ ಮತ್ತು ಸಾಮಂತನ ನಡುವಿನ ಸಂಬಂಧಗಳು ಕೇಂದ್ರ ಹಾಗೂ ರಾಜ್ಯಗಳ ನಡುವೆ ಪರಸ್ಪರ ಕೊಟ್ಟು ತೆಗೆದುಕೊಳ್ಳುವ ಸಂಬಂಧಗಳು ರಾಜ್ಯಗಳ ಮೇಲೆ ಕೇಂದ್ರಕ್ಕೆ ಇದ್ದ ಹಿಡಿತ ಹಾಗೂ ರಾಜ್ಯಗಳು ಕೇಂದ್ರಕ್ಕೆ ತೋರಿಸುತ್ತಿದ್ದ ನಿಷ್ಠೆ ಮೊದಲಾದ ವಿಷಯಗಳನ್ನು ಅಧ್ಯಯನ ಮಾಡಲಾಗುವುದು.

ಒಟ್ಟಾರೆಯಾಗಿ ವಿಜಯನಗರ ಕಾಲದ ಅಮರನಾಯಕ ಪದ್ಧತಿ ಬೆಳೆದುಬಂದ ಹಿನ್ನೆಲೆ, ಅಮರನಾಯಕ ಪದ್ಧತಿಯ ಲೋಪದೋಷಗಳು, ವಿಜಯನಗರದ ಶ್ರೇಣೀಕೃತ ಆಡಳಿತ ವ್ಯವಸ್ಥೆಯಲ್ಲಿ ಅಮರನಾಯಕರಿಗಿದ್ದ ಸ್ಥಾನಮಾನಗಳು, ವಿಜಯನಗರ ಆಡಳಿತ ಪದ್ಧತಿಯ ಕುರಿತು ಇರುವ ಕೆಲವು ಜಿಜ್ಞಾಸೆಗಳನ್ನು ಪರಿಹರಿಸಲು ಪ್ರಯತ್ನಿಸಲಾಗಿದೆ. ವಿಜಯನಗರ ಕಾಲದ ಅಮರನಾಯಕ ಪದ್ಧತಿ, ಬೆಳೆದು ಬಂದ ಬಗೆ, ಆಡಳಿತಕ್ಕೆ ಅಮರನಾಯಕರ ಕೊಡುಗೆಗಳು ಅಮರನಾಯಕರು ಪಾಳೆಯಗಾರರಾಗಿ ಸ್ಥಿತ್ಯಂತರಗೊಂಡ ಸನ್ನಿವೇಶಗಳು, ಅಮರನಾಯಕರ ಅವನತಿ ಇವೇ ಮೊದಲಾದ ಮಹತ್ವಪೂರ್ಣ ಅಂಶಗಳನ್ನು ಅಧ್ಯಯನ ವ್ಯಾಪ್ತಿಗೆ ಒಳಪಡಿಸಲಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ವಿಜಯನಗರ ಕಾಲದ ಅಮರನಾಯಕರು ಚಾರಿತ್ರಿಕ ವಿಶ್ಲೇಷಣೆ ಎಂಬ ಶೀರ್ಷಿಕೆಯನ್ನು ಹೊಂದಿಸಿಕೊಂಡು ಅಧ್ಯಯನದ ವ್ಯಾಪ್ತಿಯನ್ನು ಕ್ರಿ.ಶ. ೧೩೩೬ರಿಂದ ೧೭೭೯ರವರೆಗೂ ತೆಗೆದುಕೊಳ್ಳಲಾಗಿದೆ. ಈ ಕಾಲಮಿತಿಯ ವ್ಯಾಪ್ತಿಯಲ್ಲಿ ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದ ನಾಯಕರನ್ನು ಕುರಿತು ಅಧ್ಯಯನ ಮಾಡಲಾಗಿದೆ. ವಿಜಯನಗರ ಕಾಲದ ಪ್ರಾದೇಶಿಕ ಮಟ್ಟದ ರಾಜಕೀಯ ಘಟಕಗಳಾದ ರಾಜ್ಯಾಡಳಿತ ವೇಂಠೆ, ಛಾವಡಿ, ನಾಡು, ಸೀಮೆಗಳಲ್ಲಿ ಅಮರನಾಯಕರಾಗಿ ಕರ್ತವ್ಯವನ್ನು ನಿಭಾಯಿಸುತ್ತಿದ್ದ ಅಧಿಕಾರ ವರ್ಗವೊಂದು ಬದಲಾದ ರಾಜಕೀಯ ಸನ್ನಿವೇಶಗಳಿಗೆ ಹಲವಾರು ಚಿಕ್ಕಪುಟ್ಟ ರಾಜಮನೆತಗಳಾಗಿ ಹೊರಹೊಮ್ಮಿ ದಕ್ಷಿಣ ಭಾರತದ ಇತಿಹಾಸದಲ್ಲಿ ಹದಿನಾರು, ಹದಿನೇಳು ಶತಮಾನದ ಕಾಲಘಟ್ಟದಲ್ಲಿ ನಿರ್ಣಾಯಕ ಪಾತ್ರವನ್ನು ನಿಭಾಯಿಸಿತು. ವಿಜಯನಗರದಂತಹ ಬಹು ದೊಡ್ಡ ಸಾಮ್ರಾಜ್ಯವನ್ನು ಆಳಿದ ಅರಸರುಗಳಿಗಿಂತ ಪ್ರಾದೇಶಿಕ ಮಟ್ಟದಲ್ಲಿ ಅಧಿಕಾರದಲ್ಲಿದ್ದ ಅಮರನಾಯಕರು ಜನಸಾಮಾನ್ಯರಿಗೆ ನಿಕಟ ಸಂಪರ್ಕದಲ್ಲಿರುತ್ತಿದ್ದರು. ಆ ಮೂಲಕ ರಾಜಕೀಯ ಸಂಘಟನೆಯನ್ನು ಹಾಗೂ ಆರ್ಥಿಕ ಸಂಘಟನೆಯನ್ನು ಮಾಡುವಲ್ಲಿ ಯಶಸ್ವಿಯಾದರು. ವಿಜಯನಗರ ಕಾಲದ ಅಮರನಾಯಕರು ತಮ್ಮ ಅರಸರಿಗೆ ಯುದ್ಧಗಳಲ್ಲಿ ಸೇನಾ ಬಲವನ್ನು ಮತ್ತು ವಾರ್ಷಿಕ ಕಪ್ಪವನ್ನು ಸಲ್ಲಿಸುವ ಮೂಲಕ ಕೋಶ ಮತ್ತು ಸೇನಾ ಬಲ ಸಂವರ್ಧನೆಗೆ ಕಾರಣರಾಗುತ್ತಿದ್ದರು. ಜೊತೆಗೆ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ತಮ್ಮ ಸಂಸ್ಥಾನಗಳ ಆರ್ಥಿಕ ಮಿತಿಯಲ್ಲಿಯೇ ಆಯಕಟ್ಟಿನ ಸ್ಥಳಗಳಲ್ಲಿ ಕೋಟೆಗಳನ್ನು ನಿರ್ಮಿಸಿ ರಕ್ಷಣಾ ಗೋಡೆಗಳಂತಿದ್ದರು.

ಧರ್ಮ ಮತ್ತು ಸಂಸ್ಕೃತಿಯ ಪೋಷಣೆಯ ದೃಷ್ಟಿಯಿಂದ ನೋಡುವುದಾದರೆ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ನಾಯಕರು ನಿರ್ಣಾಯಕ ಪಾತ್ರವನ್ನು ವಹಿಸಿದರು. ಶಿಷ್ಟ ಸಂಸ್ಕೃತಿಯ ಜೊತೆಗೆ ಜನಸಾಮಾನ್ಯರಿಗೆ ಹತ್ತಿರವಾದ ಜಾನಪದ ಸಂಸ್ಕೃತಿಯನ್ನು ಪೋಷಿಸಿ ಬೆಳೆಸಿದರು. ಹೀಗಾಗಿ ನಾಯಕರ ಕಾಲದ ಸಮಾಜ ಧರ್ಮ, ಆಡಳಿತ, ಆರ್ಥಿಕ ವ್ಯವಸ್ಥೆ, ನ್ಯಾಯಾಂಗ ವ್ಯವಸ್ಥೆ, ಕಲೆ ಮತ್ತು ವಾಸ್ತುಶಿಲ್ಪ ಮೊದಲಾದ ವಿಶಿಷ್ಟ ಅಂಶಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಸಮಕಾಲೀನ ದಾಖಲೆಗಳಲ್ಲಿ ನಾಯಕರನ್ನು ಅಮರನಾಯಕರೆಂದು ಅವರ ಹುದ್ದೆಯನ್ನು ನಾಯಕತನವೆಂದು ಸೂಚಿಸುವ ಪದಗಳು ಸಾಕಷ್ಟು ಸಂಖ್ಯೆಯ ಶಾಸನಗಳಲ್ಲಿ ಕಂಡುಬರುತ್ತವೆ. ಅಮರನಾಯಕರಿಗೆ ಉಂಬಳಿಯಾಗಿ ನೀಡಿದ ಪ್ರದೇಶಗಳನ್ನು ಅಮರ ಅಂಬಲಿ, ಅಮರ ಮಹಲೆ, ಅಮರ ಮಾಗಣಿ ಎಂದು ಶಾಸನಗಳಲ್ಲಿ ಉಲ್ಲೇಖಗೊಂಡಿದೆ.

ವಿಜಯನಗರ ಕಾಲದ ಶಾಸನಗಳಲ್ಲಿ ಎಲ್ಲಿಯೂ ಅಮರನಾಯಕರನ್ನು ಪಾಳೆಯಗಾರರೆಂದು ಉಲ್ಲೇಖಿಸಿಲ್ಲ. ವಿಜಯನಗರೋತ್ತರ ಕಾಲದ ನಾಲ್ಕು ಶಾಸನಗಳಲ್ಲಿ ಮಾತ್ರ ಪಾಳೆಯಗಾರ ಪದ

ಉಲ್ಲೇಖ ಕಂಡುಬರುತ್ತದೆ. ಅದರಲ್ಲಿ ಯಲಹಂಕ ನಾಡಪ್ರಭುವಿನ ಕಾಲದ ಶಾಸನವನ್ನು ಕೂಟ ಶಾಸನವೆಂದು ಪರಿಗಣಿಸಲಾಗಿದ್ದು, ಉಳಿದ ಮೂರು ಶಾಸನಗಳನ್ನಷ್ಟೇ ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ವಿಜಯನಗರ ಕಾಲಕ್ಕೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರಾದ ಫಯಾಸ್ ಮತ್ತು ನ್ಯೂನಿಜರ ದಾಖಲೆಗಳು ಅಮರನಾಯಕರನ್ನು ಕ್ಯಾಪ್ಟನ್‌ಗಳೆಂದು ಸರಿ ಸುಮಾರು ವಿವಿಧ ದರ್ಜೆಯ ೨೦೦ ಜನ ಕ್ಯಾಪ್ಟನ್‌ಗಳಿದ್ದರೆಂದು ತಿಳಿಸುತ್ತವೆ. ವಿದೇಶಿ ಪ್ರವಾಸಿಗರ ದಾಖಲೆಗಳನ್ನಾಧರಿಸಿ ನಾಯಂಕರ ವ್ಯವಸ್ಥೆಯನ್ನು ಅಧ್ಯಯನ ಮಾಡಿದ ವೆಂಕಟರಮಣಯ್ಯ, ಕೃಷ್ಣಸ್ವಾಮಿ ಅಯ್ಯರ್, ವೈ. ಸುಬ್ಬರಾಯಲು, ಕೆ.ಎಸ್. ಶಿವಣ್ಣ ಮೊದಲಾದ ವಿದ್ವಾಂಸರು ಸಮಕಾಲೀನ ಶಾಸನಗಳನ್ನಾಧರಿಸಿ ಅಮರನಾಯಕರನ್ನು ವಿದೇಶಿ ವಿದ್ವಾಂಸರು ಕ್ಯಾಪ್ಟನ್‌ಗಳೆಂದು ಪರಿಗಣಿಸಿರುವುದನ್ನು ಸಾಬೀತುಪಡಿಸಿರುವರು.

ವಿಜಯನಗರ ಕಾಲದ ಅಮರನಾಯಕ ಪದ್ಧತಿಯು ಪ್ರಾದೇಶಿಕ ಮಟ್ಟದ ಊಳಿಗಮಾನ್ಯ ಪ್ರಭುತ್ವ ಮತ್ತು ವಿಕೇಂದ್ರೀಕರಣ ಪ್ರಭುತ್ವದ ಲಕ್ಷಣಗಳನ್ನು ಸಂಕೇತಿಸುತ್ತದೆ. ಅಮರ ಎನ್ನುವುದು ಸೈನಿಕ ವಿಭಾಗ ಹುದ್ದೆಯಾಗಿದ್ದು ಈ ಅಮರಂಗಳನ್ನು ವಿಜಯನಗರ ಸಾರ್ವಭೌಮರಿಂದ ಪಡೆದ ಅಮರನಾಯಕರು ತಾವು ಪಡೆದ ಭೂ ಪ್ರದೇಶ ವ್ಯಾಪ್ತಿಯಲ್ಲಿ ತಮ್ಮ ಅಧಿಕಾರವನ್ನು ನಿಭಾಯಿಸುತ್ತಾ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಾದ ಕರ್ತವ್ಯಗಳನ್ನು ಪೂರೈಸುತ್ತಿದ್ದರು. ಅಧಿಕಾರದ ಹಕ್ಕುಗಳನ್ನು ವಿಜಯನಗರದವರಿಂದ ಪಡೆದು, ಕಂದಾಯ ಸಲ್ಲಿಕೆ, ಸೈನ್ಯ ಸೇವೆ, ಗಲಭೆಗಳನ್ನು, ದಂಗೆಗಳನ್ನು ಹತ್ತಿಕ್ಕಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಗುರುತರವಾದ ಜವಾಬ್ದಾರಿಗಳು ಅಮರನಾಯಕರಿಗಿತ್ತು. ಒಟ್ಟಿನಲ್ಲಿ ಅಧಿಕಾರದ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಅಮರನಾಯಕರು ಯಶಸ್ವಿಯಾಗಿ ನಿಭಾಯಿಸುತ್ತಾ ಸ್ಥಳೀಯ ಮಟ್ಟದ ದೊರೆಗಳಾಗಿ ರೂಪುಗೊಂಡರು. ಹೀಗಾಗಿ ಇಡೀ ಅಮರನಾಯಕ ವ್ಯವಸ್ಥೆಯ ಸ್ವರೂಪವನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಒಟ್ಟಿನಲ್ಲಿ ಅಧ್ಯಯನದ ವ್ಯಾಪ್ತಿಗೆ ಸಂಬಂಧಿಸಿದಂತೆ ಕೆಲವು ಮುಖ್ಯಾಂಶಗಳು ಈ ಮುಂದಿನಂತಿವೆ.

೧. ಕ್ರಿ.ಶ. ೧೩೩೬ರಿಂದ ೧೫೬೫ರವರೆಗೆ ವಿಜಯನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದ ಸಂಗಮ, ಸಾಳುವ, ತುಳುವ ವಂಶದ ಅರಸರು ದಕ್ಷಿಣ ಭಾರತದಲ್ಲಿ ಒಂದು ಬೃಹತ್ ಸಾಮ್ರಾಜ್ಯವನ್ನು ಕಟ್ಟಿ ವೈಭವದಿಂದ ಆಳ್ವಿಕೆ ಮಾಡಿದರು. ಈ ಅವಧಿಯಲ್ಲಿ ಅಮರನಾಯಕ ಪದ್ಧತಿಯು ಯಶಸ್ವಿಯಾಗಿ ಜಾರಿಯಲ್ಲಿತ್ತು. ದಕ್ಷಿಣ ಭಾರತದಾದ್ಯಂತ ಪ್ರದೇಶ, ಭಾಷೆ, ಜನಾಂಗಗಳ ಹಂಗಿಲ್ಲದೇ ಸ್ಥಳೀಯ ಮಟ್ಟದ ಆಡಳಿತ ವ್ಯವಸ್ಥೆಯಲ್ಲಿ ಅಮರನಾಯಕರು ಸಂಘಟಿತರಾಗಿ ಕಾರ್ಯನಿರ್ವಹಿಸುತ್ತಿದ್ದರು. ಸಂಗಮ ವಂಶದ ಬುಕ್ಕರಾಯನಿಂದ ಆರಂಭಗೊಂಡ ಈ ಅಮರನಾಯಕ ಪದ್ಧತಿಯು ತುಳುವ ವಂಶದ ಕೃಷ್ಣದೇವರಾಯ, ಅಚ್ಯುತರಾಯ ಮತ್ತು ಸದಾಶಿವರಾಯನ ಕಾಲದವರೆಗೂ ಜನಪ್ರಿಯ ಆಡಳಿತ ಪದ್ಧತಿಯಾಗಿ ಜಾರಿಯಲ್ಲಿತ್ತು. ವಿಜಯನಗರದವರು ಜಾರಿಗೆ ತಂದುಕೊಂಡ ಈ ಆಡಳಿತ ವ್ಯವಸ್ಥೆಯೇ ಮುಂದೆ ವಿಜಯನಗರೋತ್ತರ

ಕಾಲದ ಪಾಳೆಯಗಾರರನ್ನು ಅಥವಾ ನಾಯಕರನ್ನು ರಾಜಕೀಯ ಮುಂಚೂಣಿಯಲ್ಲಿ ನಿಲ್ಲಿಸಿತು. ಕ್ರಿ.ಶ. ೧೫೬೫ರಿಂದ ೧೬೬೬ರವರೆಗೂ ಆಳಿದ ವಿಜಯನಗರದ ಕೊನೆಯ ಮನೆತನವಾದ ಅರವೀಡು ಸಂತತಿಯ ಆಳ್ವಿಕೆಯ ಕಾಲದಲ್ಲಿಯೂ ಈ ಅಮರನಾಯಕ ವ್ಯವಸ್ಥೆ ಭಾಗಶಃ ಮುಂದುವರಿದರೂ ಈ ವೇಳೆಗಾಗಲೇ ಬಹುತೇಕ ನಾಯಕರು ಸ್ವತಂತ್ರರಾಗಿದ್ದರು. ಹಾಗೂ ತಮ್ಮದೇ ಆದ ಸ್ವತಂತ್ರವಾದ ಸಂಸ್ಥಾನಗಳನ್ನು ಸ್ಥಾಪಿಸಿಕೊಂಡಿದ್ದರು. ಒಟ್ಟಾರೆಯಾಗಿ ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದ ನಾಯಕರನ್ನು ಕರ್ನಾಟಕಕ್ಕೆ ಅಷ್ಟೇ ಸೀಮಿತಗೊಳಿಸಿ ಅಧ್ಯಯನದ ವ್ಯಾಪ್ತಿಯನ್ನು ನಿಗದಿಗೊಳಿಸಲಾಗಿದೆ.

೧.೩. ಅಧ್ಯಯನದ ವಿಧಾನ

ಪ್ರಸುತ್ತ ಅಧ್ಯಯನವು ಚಾರಿತ್ರಿಕ ಸಂಶೋಧನಾ ವಿಧಿ ವಿಧಾನಗಳನ್ನು ಅನುಸರಿಸಿದೆ. ಐತಿಹಾಸಿಕ ಮತ್ತು ಸರ್ವೇಕ್ಷಣಾ ಪದ್ಧತಿಗಳನ್ನು ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ವಿಜಯನಗರ ಕಾಲದ ಅಮರನಾಯಕ ಪದ್ಧತಿಯ ವಿವಿಧ ಚಾರಿತ್ರಿಕ ರೂಪುರೇಷೆಗಳನ್ನು ಗುರುತಿಸುವ ಉದ್ದೇಶ ಇಲ್ಲಿಯದು. ವಿಜಯನಗರ ಕಾಲದ ಅಮರನಾಯಕ ಪದ್ಧತಿಯ ಐತಿಹಾಸಿಕ ಹಿನ್ನೆಲೆ, ಅದರ ಮೂಲ, ಅದು ಬೆಳೆದು ಬಂದ ಸಂದರ್ಭ, ಸನ್ನಿವೇಶಗಳು, ವಿಜಯನಗರ ಕಾಲದಲ್ಲಿ ಸೈನಿಕರಾಗಿ, ಅಧಿಕಾರಿಗಳಾಗಿ, ಅಮರನಾಯಕರಾಗಿ, ಪಾಳೆಯಗಾರರಾಗಿ ಗುರುತಿಸಿಕೊಂಡ ಸಂದರ್ಭಗಳು, ನಾಯಕ ಮನೆತನಗಳ ಅವನತಿಯನ್ನು ಆಕರಗಳ ಮೂಲಕ ನಿರೂಪಿಸಲಾಗಿದೆ.

ವಿಜಯನಗರ ಕಾಲದ ಅಮರನಾಯಕ ಮನೆತನಗಳಿಗೆ ಸಂಬಂಧಿಸಿದಂತೆ ಸಮರ್ಪಕ ಆಧಾರಗಳ ಕೊರತೆ ಇದೆ. ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ ನಾಯಕ ಮನೆತನಗಳ ಅಧ್ಯಯನಕ್ಕೆ ಆಧಾರಗಳ ಕೊರತೆ ಸಾಕಷ್ಟಿದೆ. ಶಾಸನಾಧಾರಗಳ ಸಂಖ್ಯೆಯಂತೂ ತೀರಾ ಕಡಿಮೆಯಿದೆ. ಕೇವಲ ಕೈಫಿಯತ್ತುಗಳು, ವಂಶಾವಳಿ ದಾಖಲೆಗಳು, ಕಾಗದ ಪತ್ರಗಳು ಹಾಗೂ ನಾಯಕರ ಕಾಲದಲ್ಲಿ ನಿರ್ಮಾಣಗೊಂಡ ವಾಸ್ತುಶಿಲ್ಪ, ಕಲಾಕೃತಿಗಳು ಚರಿತ್ರೆಯ ನಿರ್ಮಾಣಕ್ಕೆ ಪೂರಕವಾದ ಮಾಹಿತಿಗಳನ್ನು ಒದಗಿಸಬಲ್ಲವು. ಆದರೂ ಚಿತ್ರದುರ್ಗ, ಬಳ್ಳಾರಿ ಮತ್ತು ಶಿವಮೊಗ್ಗ ಬೆಂಗಳೂರು ವ್ಯಾಪ್ತಿಯಲ್ಲಿ ಬರುವ ಅಮರನಾಯಕ ಮನೆತನಗಳಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಪ್ರಕಟಗೊಂಡಿರುವ ಹಾಗೂ ಅಪ್ರಕಟಿತ ಕಾಗದ ಪತ್ರಗಳನ್ನು, ವರದಿಗಳನ್ನು, ಸಂಶೋಧನಾ ಲೇಖನಗಳನ್ನು, ಪ್ರಬಂಧಗಳನ್ನು, ಶಾಸನ ಸಂಪುಟಗಳನ್ನು ವಿಶ್ಲೇಷಿಸಿ ನಾಯಕ ಮನೆತನಗಳಿಗೆ ಸಂಬಂಧಿಸಿದಂತಹ ವಿವರಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ. ಸಂಗ್ರಹಿಸಿದ ಮಾಹಿತಿಗಳನ್ನು ಕ್ಷೇತ್ರಕಾರ್ಯ ಕೈಗೊಂಡು ಅಧ್ಯಯನಕ್ಕೆ ಪೂರಕವಾದಂಥ ಮತ್ತಷ್ಟು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಛಾಯಚಿತ್ರಗಳನ್ನು ಸಂಗ್ರಹಿಸಲಾಗಿದೆ. ಪ್ರಸುತ್ತ ಅಧ್ಯಯನದ ವ್ಯಾಪ್ತಿಗೆ ಬರುವ ಕೆಳದಿ, ಚಿತ್ರದುರ್ಗ, ಯಲಹಂಕ, ಹರತಿ, ಹಂಪೆ, ಗುಡೇಕೋಟೆ, ಗುಮ್ಮನಾಯಕನ ಪಾಳೆಯ ಮುಂತಾದ ಸ್ಥಳಗಳಿಗೆ ಭೇಟಿ ನೀಡಲಾಗಿದೆ. ನಾಯಕ ಅರಸರ ಕುರಿತು ಸಂಶೋಧನೆಯನ್ನು ಕೈಗೊಂಡಿರುವ ವಿದ್ವಾಂಸರನ್ನು

ಭೇಟಿ ಮಾಡಿ ಅಗತ್ಯ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಆಂಧ್ರಪ್ರದೇಶ ಮತ್ತು ತಮಿಳುನಾಡು ನಾಯಕರನ್ನು ಕುರಿತು ಹೊರಬಂದಿರುವ ಕೃತಿಗಳಿಂದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ರಾಜ್ಯ ಪತ್ರಾಗಾರ ಇಲಾಖೆಗೆ ಭೇಟಿ ನೀಡಿ ಬ್ರಿಟಿಷರ ದಾಖಲೆಗಳನ್ನು ಪರಿಶೀಲಿಸಿ ೧೮ನೇ ಶತಮಾನದಲ್ಲಿ ಹೈದರಾಲಿ ಮತ್ತು ಟಿಪ್ಪುನೊಂದಿಗೆ ಸೆಣಸಿ ಅವನತಿಗೀಡಾದ ಅಮರನಾಯಕತನ ಮನೆತನಗಳ ಕುರಿತು ಮಾಹಿತಿಗಳನ್ನು ಸಂಗ್ರಹಿಸಲಾಯಿತು. ಮಹಾಪ್ರಬಂಧದ ರಚನೆಯಲ್ಲಿ ಪ್ರಾಥಮಿಕ ಆಕರಗಳನ್ನು ಹೆಚ್ಚಾಗಿ ಬಳಸಿಕೊಳ್ಳಲಾಗಿದೆ. ಚರಿತ್ರೆಯ ಸಂಶೋಧನಾ ವಿಧಿ ವಿಧಾನಗಳನ್ನು ಅನುಸರಿಸಲಾಗಿದ್ದು ಇದು ಏಕ ಶಿಸ್ತಿನ ಅಧ್ಯಯನವಾಗಿದೆ. ಬ್ರಿಟಿಷರ ಕಾಲದ ದಾಖಲಾತಿಗಳು ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದ ಸಮಕಾಲೀನ ಶಾಸನಗಳು, ಗೆಝೆಟಿಯರ್‌ಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ. ಪ್ರಸುತ್ತ ವಿಷಯಕ್ಕೆ ಸಂಬಂಧಿಸಿದಂತೆ ದತ್ತಾಂಶಗಳನ್ನು ಕಾರ್ಡುಗಳ ಮೂಲಕ ಸಂಗ್ರಹಿಸಿಕೊಂಡು ಆಯಾ ಅಧ್ಯಯನಗಳಿಗೆ ಸಂಬಂಧಿಸಿದಂತೆ ವರ್ಗೀಕರಿಸಲಾಗಿದೆ. ಚರಿತ್ರೆಯ ಸಂಶೋಧನಾ ವಿಧಿ ವಿಧಾನಗಳಿಂದ ವಸ್ತುನಿಷ್ಠತೆ, ಆಂತರಿಕ ವಿಮರ್ಶೆ, ಬಾಹ್ಯ ವಿಮರ್ಶೆ, ಸಾಮಾನ್ಯ ನಿರೂಪಣೆ, ತಾತ್ವಿಕ ರೂಪದ ಮಂಡನೆ ಮೊದಲಾದ ಸಂಗತಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಮಹಾಪ್ರಬಂಧದಲ್ಲಿ ಪ್ರಮುಖ ಸಂಗತಿಗಳನ್ನು ನಿರೂಪಣೆಗೆ ಒಳಪಡಿಸಿದ್ದು ಅಗತ್ಯವಾದ ಮಾಹಿತಿಗಳನ್ನು ಕೊನೆ ಟಿಪ್ಪಣಿಗಳಲ್ಲಿ ಕೊಡಲಾಗಿದೆ. ಪೂರಕವಾದ ಮಾಹಿತಿಗಳನ್ನು ನೀಡಲಾಗಿದೆ. ಗ್ರಂಥಋಣ, ವಿದ್ವಾಂಸರ ಭೇಟಿ ಮಾಹಿತಿದಾರರ ಸಂದರ್ಶನ, ನಕ್ಷೆ, ಛಾಯಾಚಿತ್ರಗಳನ್ನು ಅಗತ್ಯಕ್ಕನುಗುಣವಾಗಿ ಅನುಬಂಧದಲ್ಲಿ ನೀಡಲಾಗಿದೆ.

ಪ್ರಸುತ್ತ ಅಮರನಾಯಕರ ಕುರಿತು ಕೈಗೊಂಡಿರುವ ಅಧ್ಯಯನವು ಇತಿಹಾಸ ಅಧ್ಯಯನವಾಗಿದೆ. ಇದು ರಾಜಕೀಯ ಚರಿತ್ರೆಯ ಅಂಗವಾಗಿರುವ ಮತ್ತು ಗಮನಾರ್ಹ ಬದಲಾವಣೆಗೆ ಪೂರಕವಾದ ವ್ಯವಸ್ಥೆಯಾಗಿತ್ತು. ಈ ಹಿನ್ನೆಲೆಯಲ್ಲಿ ವಿಜಯನಗರದ ರಾಜಕೀಯ ಚರಿತ್ರೆಗೆ ಅಮರನಾಯಕರ ಕೊಡುಗೆಯನ್ನು ಪ್ರಸುತ್ತ ಅಧ್ಯಯನದಲ್ಲಿ ಬೆಳಕಿಗೆ ತರುವ ಪ್ರಯತ್ನವನ್ನು ಮಾಡಲಾಗಿದೆ.

೧.೪. ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ವಿಜಯನಗರದ ಇತಿಹಾಸ ರಚನಾ ಕ್ಷೇತ್ರ ಅಗಾಧವಾದ ವ್ಯಾಪ್ತಿಯನ್ನು ಒಳಗೊಂಡಿದೆ. ಕ್ರಿ.ಶ. ೧೩೩೬ರಲ್ಲಿ ಉದಯವಾಗಿ ಕ್ರಿ.ಶ. ೧೬೪೬ರಲ್ಲಿ ಸಂಪೂರ್ಣ ಅವನತಿಯಾದ ಈ ಸಾಮ್ರಾಜ್ಯದ ಕುರಿತು ಬರೆದಿರುವ ಸಂಶೋಧನಾ ಗ್ರಂಥಗಳು ವಿಪುಲವಾಗಿವೆ. ವಿಜಯನಗರದ ಸಮಕಾಲೀನ ಕೃತಿಗಳನ್ನು ಹೊರತುಪಡಿಸಿದರೆ ಇತ್ತೀಚಿನ ದಶಕಗಳಲ್ಲಿ ಸಾಕಷ್ಟು ಸಂಶೋಧನಕಾರರು, ದೇಶಿ-ವಿದೇಶಿ ವಿದ್ವಾಂಸರು ವಿಜಯನಗರ ಸಾಮ್ರಾಜ್ಯದ ಕುರಿತು ಸಂಶೋಧನಾ ಕೃತಿಗಳನ್ನು ಹೊರತರುತ್ತಿದ್ದಾರೆ. ಅಗೆದಷ್ಟು ಆಳವಾಗಿ ದೊರಕುವ ಅಕ್ಷಯ ನಿಧಿಯಂತಿದೆ ವಿಜಯನಗರದ ಇತಿಹಾಸ. ವಿಜಯನಗರದ ಇತಿಹಾಸದ ಕುರಿತು ಅಧಿಕೃತವಾದ ಮೊದಲ ಕೃತಿ ಪ್ರಕಟವಾಗಿದ್ದು ಕ್ರಿ.ಶ. ೧೯೩೦ರಲ್ಲಿ. ರಾಬರ್ಟ್ ಸಿವೆಲ್‌ನ A forgotten empire ಕೃತಿ ವಿಜಯನಗರ ಸಾಮ್ರಾಜ್ಯದ ಇತಿಹಾಸ ಮೊದಲ ರಚನಾ

ಕೃತಿಯಾಗಿ ಹೊರಬಂದಿತು. ಬ್ರಿಟಿಷರ ಆಡಳಿತಾವಧಿಯಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯ ನಾಗರಿಕ ಸೇವಾ ವಿಭಾಗದಿಂದ ಬಳ್ಳಾರಿಗೆ ಜಿಲ್ಲಾಧಿಕಾರಿಯಾಗಿ ನಿಯುಕ್ತಿಗೊಂಡ ಸಿವೆಲ್‌ನು ತನ್ನ ಮೇಲಾಧಿಕಾರಿಗಳಿಗೆ ವಿಜಯನಗರದ ವರದಿಯನ್ನು ಸಿದ್ಧಪಡಿಸಿಕೊಟ್ಟ, ಈ ವರದಿಯೇ ಕೃತಿಯ ರೂಪದಲ್ಲಿ ಪ್ರಕಟಗೊಂಡು ಇತಿಹಾಸಕಾರರನ್ನು ವಿಜಯನಗರದ ಇತಿಹಾಸ ರಚನೆಯ ಕಡೆಗೆ ಸೆಳೆಯುವಲ್ಲಿ ಯಶಸ್ವಿಯಾಯಿತು. ರಾಬರ್ಟ್ ಸಿವೆಲ್‌ನು ತನ್ನ ಕೃತಿಯ ರಚನೆಯಲ್ಲಿ ವಿಜಯನಗರ ಕಾಲದ ಶಾಸನಗಳನ್ನು, ಪರ್ಶಿಯನ್ ಇತಿಹಾಸಕಾರರ ಬರವಣಿಗೆಗಳನ್ನು ಹಾಗೂ ಪೋರ್ಚುಗೀಸ್ ಪ್ರವಾಸಿಗರಾದ ಡೊಮಿಂಗೊ ಫಯಾಸ್ ಮತ್ತು ನ್ಯೂನಿಜರ ಬರವಣಿಗೆಗಳನ್ನು ಆಧಾರವಾಗಿ ಬಳಸಿಕೊಂಡನು. ಪೋರ್ಚುಗೀಸ್ ಪ್ರವಾಸಿಗರಾದ ಫಯಾಸ್ ಮತ್ತು ನ್ಯೂನಜ್‌ರು ಕೃಷ್ಣದೇವರಾಯ ಮತ್ತು ಅಚ್ಯುತರಾಯನ ಆಸ್ಥಾನಕ್ಕೆ ಬಂದಿದ್ದು, ಸಮಕಾಲೀನ ಘಟನೆಗಳಿಗೆ ಪ್ರತ್ಯಕ್ಷದರ್ಶಿಗಳಾಗಿದ್ದಾರೆ. ಇವರ ಬರಹಗಳು ವಿಜಯನಗರದ ರಾಜಧಾನಿಯ ವೈಭವ, ವಿಜಯನಗರದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಾಹಿತಿಗಳನ್ನು ಒದಗಿಸುವಲ್ಲಿ ಮಹತ್ವದ ದಾಖಲೆಗಳಾಗಿವೆ. ಇಂತಹ ಅಮೂಲ್ಯ ದಾಖಲೆಗಳನ್ನು ಪೋರ್ಚುಗೀಸ್ ಭಾಷೆಯಿಂದ ಆಂಗ್ಲ ಭಾಷೆಗೆ ತರ್ಜುಮೆ ಮಾಡಿಕೊಂಡ ರಾಬರ್ಟ್ ಸಿವೆಲ್‌ನು Forgotten Empire ಕೃತಿಯನ್ನು ಬರೆದನು. ಈ ಕೃತಿಯು ಒಟ್ಟು ಹನ್ನೆರಡು ಅಧ್ಯಯನಗಳನ್ನು ಒಳಗೊಂಡಿದ್ದು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಮೂಲದಿಂದ ಆರಂಭವಾಗಿ ವಿದೇಶಿ ಪ್ರವಾಸಿಗರ ದಿನಚರಿಗಳನ್ನು ಉಲ್ಲೇಖಿಸುವುದರೊಂದಿಗೆ ಮುಕ್ತಾಯವಾಗುತ್ತದೆ. ರಾಬರ್ಟ್ ಸಿವೆಲ್‌ನ ಬರಹವು ವಸಹಾತುಶಾಹಿ ದೃಷ್ಟಿಕೋನದಿಂದ ಕೂಡಿದ್ದು ಬ್ರಿಟಿಷ್ ಪಕ್ಷಪಾತವನ್ನು ಸೂಚಿಸುತ್ತದೆ. ಈ ಕೃತಿಯು ಅನೇಕ ಲೋಪದೋಷಗಳನ್ನು ಒಳಗೊಂಡಿದ್ದರೂ ವಿಜಯನಗರ ಸಾಮ್ರಾಜ್ಯದ ಚಾರಿತ್ರಿಕ ಬರವಣಿಗೆಯಲ್ಲಿ ಮೊದಲ ಮೈಲಿಗಲ್ಲು ಎಂದು ಹೇಳಬಹುದು.

ರಾಬರ್ಟ್ ಸಿವೆಲ್‌ನ ನಂತರ ವಿಜಯನಗರದ ಕಾಲದ ಅಮರನಾಯಕ ವ್ಯವಸ್ಥೆಯನ್ನು ಕುರಿತಂತೆ ರಚನೆಯಾದ ಕೃತಿಗಳಲ್ಲಿ ಎನ್. ವೆಂಕಟರಮಣಯ್ಯನವರ Studies in the History of the Third dynasty of Vijayangar ಎಂಬ ಕೃತಿಯು ಮೊದಲ ಸ್ಥಾನದಲ್ಲಿ ನಿಲ್ಲುತ್ತದೆ. ವೆಂಕಟರಮಣಯ್ಯನವರು ತಮ್ಮ ಕೃತಿಯ ರಚನೆಯಲ್ಲಿ ಪೋರ್ಚುಗೀಸ್ ಪ್ರವಾಸಿಗರ ದಾಖಲೆಗಳನ್ನು ಮತ್ತು ವಿಜಯನಗರ ಕಾಲದ ಸಮಕಾಲೀನ ಸಾಹಿತ್ಯ ಮತ್ತು ಶಾಸನಗಳನ್ನು ಆಕರಗಳನ್ನಾಗಿ ತೆಗೆದುಕೊಂಡು ಈ ಕೃತಿಯನ್ನು ರಚಿಸಿದ್ದಾರೆ. ವಿಜಯನಗರದ ಅರಸರಿಂದ ಭೂಮಿಯನ್ನು ದಾನವಾಗಿ ಪಡೆದು ಸೈನಿಕ ಸೇವೆಯನ್ನು ಸಲ್ಲಿಸುವ ನಾಯಕರನ್ನು ಅಮರನಾಯಕರೆಂದು, ಈ ವ್ಯವಸ್ಥೆಯ ಸ್ವರೂಪವನ್ನು ನಾಯಕರ ಪದ್ಧತಿಯೆಂದು ಗುರುತಿಸಿದರು. ನಾಯಕರ ವ್ಯವಸ್ಥೆಯು ಊಳಿಗಮಾನ್ಯ ವ್ಯವಸ್ಥೆಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರ ಮೇಲೆ ಯಾವುದೇ ಶಂಕೆಯಿಲ್ಲ ಎನ್ನುತ್ತಾರೆ ವೆಂಕಟರಮಣಯ್ಯನವರು. ರಾಜ ಮತ್ತು ಜನಸಾಮಾನ್ಯರ ಮಧ್ಯೆ ಮಧ್ಯವರ್ತಿಗಳಾಗಿ ಅಮರನಾಯಕರು ಕಾರ್ಯ ನಿರ್ವಹಿಸುತ್ತಿದ್ದರೆಂಬುದು ಇವರ ಅಭಿಪ್ರಾಯ. ಒಟ್ಟಿನಲ್ಲಿ ಭೂ ಉಂಬಳಿಗಳು, ತೆರಿಗೆ ಮುಕ್ತ ಗ್ರಾಮಗಳು, ಬ್ರಾಹ್ಮದೇಯ ಗ್ರಾಮಗಳು, ದೇವಾಲಯಗಳಿಗೆ ಮೀಸಲಾದ

ಗ್ರಾಮಗಳು, ದಂಡಿಗೆ ಗ್ರಾಮಗಳು, ಗುತ್ತಿಗೆ ಭೂಮಿಗಳು ಮೊದಲಾದವುಗಳು ತೆರಿಗೆ ರಹಿತವಾಗಿದ್ದು ಊಳಿಗಮಾನ್ಯ ವ್ಯವಸ್ಥೆಯು ಬೇರು ಬಿಡಲು ಸಹಾಯವಾದವು. ವಿಜಯನಗರ ಕಾಲದ ತೆರಿಗೆ ವ್ಯವಸ್ಥೆ ಮತ್ತು ನಾಯಂಕರ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಈ ಗ್ರಂಥವು ಸಹಾಯಕವಾಗುತ್ತದೆ.

ಬಿ.ಎ ಸಾಲೆತ್ತೂರ್ ಅವರು ೧೯೩೪ರಲ್ಲಿ Social and Political life in Vijayanagara Empire ಎಂಬ ಶೀರ್ಷಿಕೆಯ ಅಡಿಯಲ್ಲಿ ವಿಜಯನಗರ ಇತಿಹಾಸವನ್ನು ಕುರಿತು ಎರಡು ಸಂಪುಟಗಳನ್ನು ಹೊರತಂದರು. ಈ ಸಂಪುಟಗಳಲ್ಲಿ ಎರಡನೆಯದು ವಿಜಯನಗರ ಕಾಲದ ನಾಯಂಕರ ವ್ಯವಸ್ಥೆಯ ಕುರಿತು ಮಾಹಿತಿಯನ್ನು ಒಳಗೊಂಡಿದೆ. ವಿಜಯನಗರ ಕಾಲದ ಅರಸರು ನೀಡಿದಂತಹ ಅಪಾರ ಪ್ರಮಾಣದ ಭೂದಾನಗಳು, ನಾಯಕರ ವ್ಯವಸ್ಥೆ ಬೆಳೆದು ಬರಲು ಹೇಗೆ ಕಾರಣವಾದವು ಎಂಬುದರಿಂದ ಹಿಡಿದು ವಿಜಯನಗರದ ಪ್ರಾಂತೀಯ ಮಟ್ಟದಲ್ಲಿ ಜಾರಿಯದ್ದಲ್ಲಿಂತಹ ಸ್ಥಳೀಯ ಆಡಳಿತವನ್ನು ಕುರಿತು ಸಮಗ್ರವಾದ ವಿವರಣೆಗಳನ್ನು ಒಳಗೊಂಡಿದೆ.

ಕೃಷ್ಣಸ್ವಾಮಿ ಅಯ್ಯರ್ ೧೯೬೪ರಲ್ಲಿ ಪ್ರಕಟಿಸಿದ The Tamil Country under the Vijayanagar ಎಂಬ ಪಿಎಚ್.ಡಿ. ಸಂಶೋಧನಾ ಮಹಾಪ್ರಬಂಧವು ವಿಜಯನಗರ ಆಡಳಿತವು ತಮಿಳುನಾಡಿನಲ್ಲಿ ಆರಂಭಗೊಂಡ ಬಗೆ ಹಾಗೂ ನಾಯಂಕರ ವ್ಯವಸ್ಥೆಯು ತಮಿಳುನಾಡಿನಲ್ಲಿ ವ್ಯಾಪಕವಾಗಿ ಹರಡಿದ ಬಗೆಯನ್ನು ಕುರಿತು ವಿವರಿಸುತ್ತದೆ. ವಿಜಯನಗರದ ಪ್ರಭುತ್ವದೊಂದಿಗೆ ನಾಯಕರ ಸಂಬಂಧಗಳು ಹಾಗೂ ವಿಜಯನಗರ ಅರಸರಿಂದ ನಾಯಕತನ ಪಡೆಯುವಲ್ಲಿ ನಾಯಕ ಎಂದು ಗುರುತಿಸುವ ಬಗೆ ಮುಂತಾದ ಗಮನಾರ್ಹ ವಿಷಯಗಳನ್ನು ತಮ್ಮ ಕೃತಿಯಲ್ಲಿ ಚರ್ಚಿಸಿರುವುದು ಕಂಡುಬರುತ್ತದೆ.

ಡಿ.ಸಿ. ಸರ್ಕಾರ್ ಅವರು ಬರೆದಿರುವ Indian Ephigraphical Glossary ಎಂಬ ಕೃತಿಯು ನಾಯಂಕರ ವ್ಯವಸ್ಥೆ, ನಾಯಕ ಎಂದು ಯಾರನ್ನು ಪರಿಗಣಿಸಬೇಕು, ಈ ಹುದ್ದೆಯ ಸ್ವರೂಪವೇನು ಎಂಬ ಮಹತ್ವಪೂರ್ಣ ವಿಷಯಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ.

ಬರ್ಟನ್ ಸ್ಟೇನ್ ೧೯೮೦ರಲ್ಲಿ ಪ್ರಕಟಿಸಿದ Peasant State and Society in Medieval South India ಎಂಬ ಕೃತಿ ವಿಜಯನಗರದ ಚಾರಿತ್ರಿಕ ಬರವಣಿಗೆಯಲ್ಲಿ ಮೈಲುಗಲ್ಲುಗಳಾಗಿವೆ. ಬರ್ಟನ್ ಸ್ಟೇನ್‌ರವರು ವಿಜಯನಗರದ ಪ್ರಭುತ್ವ ಮಾದರಿಯನ್ನು Segmentray state ಎಂಬ ಪರಿಕಲ್ಪನೆಯನ್ನು ಮುಂದಿಟ್ಟುಕೊಂಡು ಚರ್ಚಿಸಿದರು. ಸ್ಟೇನ್‌ರವರ ವಿಜಯನಗರವು ಚೋಳ ಮಾದರಿಯ ಸರಕಾರ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗಿದ್ದರಿಂದ ಕೆಳಹಂತದ ಆಡಳಿತ ವ್ಯವಸ್ಥೆಯಲ್ಲಿ ನಾಡುಗಳು, ಅಗ್ರಹಾರಗಳು ಮುಂತಾದ ಸ್ವಯಂ ಆಡಳಿತ ಘಟಕಗಳಿದ್ದು ಅವುಗಳು ಸ್ವಾಯತ್ತತೆ ಅಧಿಕಾರವನ್ನು ಚಲಾಯಿಸುತ್ತಿದ್ದವು.

ರಾಜ ಮತ್ತು ನಾಯಕರ ನಡುವಿನ ಸಂಬಂಧವು ಕೇವಲ ಧಾರ್ಮಿಕ ಆಚರಣೆಗೆ ಮಾತ್ರ ಸೀಮಿತವಾಗಿತ್ತು ಎಂಬುದನ್ನು ತಮ್ಮ ಕೃತಿಗಳಲ್ಲಿ ಪ್ರತಿಪಾದಿಸಿದ್ದಾರೆ. ಸ್ಟೇನ್ ಅವರು ಪರಿಚಯಿಸಿದ ಸೆಗ್‌ಮೆಂಟರಿ ಅಥವಾ ಖಂಡಾಂತರ ರಾಜ್ಯ ಪದ್ಧತಿಯು ಬಹುತೇಕ ವಿದ್ವಾಂಸರ ಕಟುವಾದ

ಟೀಕೆಗಳಿಗೆ ಗುರಿಯಾಗಬೇಕಾಯಿತು. ಆದರೂ ವಿಜಯನಗರದ ಚರಿತ್ರೆಗೆ ಸಂಬಂಧಿಸಿದಂತೆ ಸ್ಟೇನ್‌ರವರ ಪರಿಕಲ್ಪನೆಗಳು ಹೊಸದಾದ ಚಿಂತನಾ ಮಾರ್ಗವನ್ನು ಹುಟ್ಟುಹಾಕಿದವು. ವಿಜಯನಗರದ ಚರಿತ್ರೆಯ ಬರವಣಿಗೆಯನ್ನು ಹೊಸ ರೀತಿಯಲ್ಲಿ ರಚಿಸಲು ಉಳಿದ ಚರಿತ್ರೆಕಾರರಿಗೆ ಸ್ಟೇನ್‌ರವರ ಕೃತಿಗಳು ಮಾರ್ಗಸೂಚಕವಾದವು.

ಬರ್ಟನ್ ಸ್ಟೇನ್ ನಂತರ ವಿಜಯನಗರದ ನಾಯಕ ವ್ಯವಸ್ಥೆಗೆ ಸಂಬಂಧಿಸಿದಂತೆ ಬರೆದ ಕೃತಿಗಳಲ್ಲಿ ಜಪಾನಿನ ಇತಿಹಾಸಕಾರ ನೊಬಾರು ಕರಾಷಿಯಾ ಅವರ ಹೆಸರು ಪ್ರಮುಖವಾಗಿದೆ. ಈತನ Concordance of Nayakas The Vijayanagara Inscription in South India ಎಂಬ ಕೃತಿಯು ನಾಯಂಕರ ವ್ಯವಸ್ಥೆಯನ್ನು ಸಮಗ್ರವಾಗಿ ಪರಿಚಯ ಮಾಡಿಕೊಡುವ ಕೃತಿಯಾಗಿದೆ. ಬರ್ಟನ್ ಸ್ಟೇನ್‌ರವರ ಸೆಗ್‌ಮೆಂಟರಿ ಪ್ರಭುತ್ವವನ್ನು ಟೀಕಿಸುತ್ತಲೇ ವಿಜಯನಗರದ ನಾಯಕರ ವ್ಯವಸ್ಥೆಯು ವಿಕೇಂದ್ರಿಕರಣ ಆಡಳಿತವನ್ನು ಪ್ರಾಂತೀಯ ಮಟ್ಟದಲ್ಲಿ ಕೆಳಮುಖವಾಗಿ ಅಧಿಕಾರವನ್ನು ಹೇಗೆ ವಿಭಜಿಸಿತು ಎಂಬುದನ್ನು ಸಮಕಾಲೀನಶಾಸನಗಳ ಸಮೇತ ಸಮರ್ಥಿಸಿಕೊಂಡಿದ್ದಾರೆ. ಕೃಷ್ಣದೇವರಾಯನ ಕಾಲದ ನಾಯಕ ವ್ಯವಸ್ಥೆಯ ಮೇಲೆ ಹೆಚ್ಚು ಬೆಳಕನ್ನು ಚೆಲ್ಲುವ ಈ ಕೃತಿಯು ಪ್ರಾಂತೀಯ ಮಟ್ಟದಲ್ಲಿ ನಾಯಂಕರ ವ್ಯವಸ್ಥೆಯು ಹೇಗೆ ಅಳವಡಿಕೆಯಲ್ಲಿತ್ತು ಹಾಗೂ ಮಹಾಮಂಡಲೇಶ್ವರರು, ಪ್ರಧಾನಿಗಳು, ರಾಜ್ಯಕಾರ್ಯಕರ್ತರು, ದಳವಾಯಿಗಳು ಅಮರನಾಯಕರು ಹಾಗೂ ರಾಜನ ಇನ್ನಿತರ ಅಧಿಕಾರ ವರ್ಗಗಳು ನಾಯಂಕರ ವ್ಯವಸ್ಥೆಯ ಅಡಿಯಲ್ಲಿ ಹೇಗೆ ಕಾರ್ಯನಿರ್ವಹಿಸುತ್ತಿದ್ದರು ಎಂಬುದನ್ನು ಈ ಕೃತಿಯು ಸಮಗ್ರವಾಗಿ ವಿವರಿಸುತ್ತದೆ. ವಿಜಯನಗರ ಕಾಲದ ಅಮರನಾಯಕ ವ್ಯವಸ್ಥೆಯಲ್ಲಿ ಅಡಗಿದ್ದ ಊಳಿಗಮಾನ್ಯ ಲಕ್ಷಣಗಳನ್ನು ಯುರೋಪಿನ ಮತ್ತು ಜಪಾನಿನ ಊಳಿಗಮಾನ್ಯ ವ್ಯವಸ್ಥೆಯೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನವನ್ನು ಕರಾಷಿಮಾ ಈ ಕೃತಿಯಲ್ಲಿ ಮಾಡಿರುವುದು ಸ್ಪಷ್ಟವಾಗಿ ತಿಳಿಯುವುದು. ಕರಾಷಿಮಾ ಅವರ Towards a new formation South Indian Society under Vijayanagara rule ಎಂಬ ಕೃತಿಯು ನಾಯಕರ ಇತಿಹಾಸಕ್ಕೆ ಸಂಬಂಧಿಸಿದಿದೆ.

Cynthia Tobot ೨೦೦೧ ರಲ್ಲಿ ಪ್ರಕಟಿಸಿದ A Pre colonial India in Practice Society Region and identity in Medieval Andra ಎಂಬ ಕೃತಿಯು ಆಂಧ್ರಪ್ರದೇಶದ ಅಮರನಾಯಕರನ್ನು ಕುರಿತು ಮಾಹಿತಿಯನ್ನು ನೀಡುತ್ತದೆ. ರಾಜೇಂದ್ರ ಪ್ರಸಾದ್ ಮತ್ತು ಬೋಸ್‌ಬಾಬುರವರು Nayankara system in Andra ಎಂಬ ಸಂಶೋಧನಾ ಲೇಖನದಲ್ಲಿ ವಿಜಯನಗರ ಕಾಲದ ನಾಯಂಕರ ವ್ಯವಸ್ಥೆಯನ್ನು ಕುರಿತು ಮಾಹಿತಿಯನ್ನು ನೀಡಿದ್ದಾರೆ. ಆಂಧ್ರಪ್ರದೇಶದ ರಾಯಲು ಸೀಮೆಯ ವ್ಯಾಪ್ತಿಯಲ್ಲಿ ಬರುವ ಕಡಪ, ಕರ್ನೂಲು, ಅನಂತಪುರ, ನೆಲ್ಲೂರು ಮತ್ತು ಪ್ರಕಾಶಂ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಅಮರನಾಯಕರನ್ನು ಕುರಿತು ಅಧ್ಯಯನಗಳನ್ನು ನಡೆಸಿದ್ದಾರೆ. ಮೊದಲನೆ ಬುಕ್ಕರಾಯನ ಕಾಲದಿಂದಲೇ ಆಂಧ್ರ ಪ್ರದೇಶದಲ್ಲಿ ನಾಯಂಕರ ಪದ್ಧತಿಯು ಜಾರಿಯಲ್ಲಿದ್ದುದನ್ನು

ಗುರುತಿಸಿದ್ದಾರೆ. ಪೆನುಗೊಂಡ, ಗುತ್ತಿ, ಉದಯಗಿರಿ, ಕೊಂಡವೀಡು, ಚಂದ್ರಗಿರಿ, ರಾಯದುರ್ಗ, ನಿಡುಗಲ್ಲು, ಶ್ರಿಶೈಲ ರಾಜ್ಯಗಳಲ್ಲಿ ಮೊದಲ ಬುಕ್ಕರಾಯನ ಕಾಲದಿಂದ ಮೂರನೇ ಶ್ರೀರಂಗರಾಯನ ಕಾಲದವರೆಗೂ ೪೩೩ ಜನ ನಾಯಕರು ವಿಜಯನಗರ ರಾಜ್ಯಾಡಳಿತದಲ್ಲಿ ಕಾರ್ಯನಿರ್ವಹಿಸಿರುವುದನ್ನು ಶಾಸನಗಳ ಮಾಹಿತಿಯನ್ನಾಧರಿಸಿ ಪಟ್ಟಿ ಮಾಡಿದ್ದಾರೆ. ವಿಜಯನಗರ ಕಾಲದ ಆಂಧ್ರಪ್ರದೇಶದ ನಾಯಂಕರ ವ್ಯವಸ್ಥೆಯನ್ನು ಕುರಿತು ಮಹತ್ವಪೂರ್ಣ ಮಾಹಿತಿಯನ್ನು ಈ ಸಂಶೋಧನಾ ಲೇಖನವು ಒಳಗೊಂಡಿದೆ.

ವೈ. ಸುಬ್ಬರಾಯಲು ಅವರ Administrative Divisions of the Vijayanagara ಎಂಬ ಲೇಖನವು ವಿಜಯನಗರ ಕಾಲದ ಸಂಪೂರ್ಣ ಆಡಳಿತ ವಿಭಾಗಗಳನ್ನು ಕುರಿತು ಮಾಹಿತಿಯನ್ನು ಒಳಗೊಂಡಿದೆ. ನಾಡು, ಮಹಾಮಂಡಲ, ರಾಜ್ಯ, ವಲನಾಡು, ಚಾವಡಿ, ವಳಿತ, ವೇಂಠೆ ಮೊದಲಾದ ಆಡಳಿತ ವಿಭಾಗಗಳನ್ನು ಶಾಸನೋಕ್ತವಾಗಿ ಉಲ್ಲೇಖಿಸಿ ಪ್ರಾದೇಶಿಕ ಮಟ್ಟದ ಆಡಳಿತ ವ್ಯವಸ್ಥೆಯ ಬಗ್ಗೆ ಅತ್ಯುತ್ತಮ ವಿವರಗಳನ್ನು ನೀಡಿದ್ದಾರೆ.

ಕೆ.ಜಿ. ಕೃಷ್ಣನ್ ಅವರ Distance administration under Vijayanagara ಎಂಬ ಸಂಶೋಧನಾ ಲೇಖನವು ವಿಜಯನಗರದ ಪ್ರಾದೇಶಿಕ ಮಟ್ಟದ ಆಡಳಿತ ವ್ಯವಸ್ಥೆಯನ್ನು ಹಾಗೂ ಆಡಳಿತಾಧಿಕಾರಿಗಳನ್ನು ಗುರುತಿಸಿದ್ದು, ವಿಜಯನಗರ ಕಾಲದ ವಿಕೇಂದ್ರೀಕೃತ ಪ್ರಭುತ್ವವನ್ನು ಕುರಿತು ಹೆಚ್ಚಿನ ಮಾಹಿತಿಯನ್ನು ತಿಳಿಸುವುದು ಟಿ.ವಿ ಮಹಾಲಿಂಗಂರವರ Administration and Social life under Vijayanagara ದೀಕ್ಷಿತ್ ಅವರ Early Vijayanagara Studies on its History and Culture ಹೆರಾಸ್ ಹೆನ್ರಿಯವರ The Aravidu dynasty of Vijayanagara, ನೀಲಕಂಠ ಶಾಸ್ತ್ರಿಯವರ A History of South india from pre history to the Fall of vijayanagara, Wagoner Philip ಅವರ Tidings of the king A travslation and Ethno historical Analysis of the Rayavachakam ಮೊದಲಾದ ಕೃತಿಗಳು ತಮಿಳುನಾಡಿನ ನಾಯಂಕರ ವ್ಯವಸ್ಥೆಯ ಕುರಿತು ಹೆಚ್ಚಿನ ಮಾಹಿತಿಗಳನ್ನು ಒಳಗೊಂಡಿವೆ.

ಅಮರನಾಯಕ ವ್ಯವಸ್ಥೆಯನ್ನು ಕುರಿತು ಕನ್ನಡದಲ್ಲಿ ರಚನೆಯಾದ ಕೃತಿಗಳು ಕೇವಲ ಬೆರಳಣಿಕೆಯಷ್ಟು ಸಂಖ್ಯೆಯಲ್ಲಿವೆ. ಆದರೆ ವಿಜಯನಗರೋತ್ತರ ಕಾಲದ ಪಾಳೆಯಗಾರರನ್ನು ಕುರಿತು ಸಾಕಷ್ಟು ಸಂಶೋಧನಾ ಕೃತಿಗಳು, ಲೇಖನಗಳು, ಪ್ರಬಂಧಗಳು ಪ್ರಕಟಗೊಂಡಿವೆ. ಕರ್ನಾಟಕದಲ್ಲಿ ಪಾಳೆಯಗಾರರ ಕುರಿತು ಮೊಟ್ಟಮೊದಲು ಅಧ್ಯಯನ ಮಾಡಿದವರೆಂದರೆ ಎಂ.ಎಸ್. ಪುಟ್ಟಣ್ಣನವರು. ವೃತ್ತಿಯಲ್ಲಿ ಅಮಲ್ದಾರರಾಗಿದ್ದು ಪ್ರವೃತ್ತಿಯಲ್ಲಿ ಸಂಶೋಧಕರಾಗಿದ್ದ ಎಂ.ಎಸ್ ಪುಟ್ಟಣ್ಣನವರು ಆಯಾ ಪಾಳೆಯಗಾರರ ವಂಶಸ್ಥರಲ್ಲಿನ ದಾಖಲೆಗಳನ್ನು ಹಾಗೂ ಬಿ.ಎಲ್. ರೈಸ್ ಅವರ ಎಪಿಗ್ರಾಫಿಯಾ ಶಾಸನ ಸಂಪುಟಗಳನ್ನು ಅಧ್ಯಯನ ಮಾಡಿ ೧೯೨೨ರಲ್ಲಿ ಚಿಕ್ಕಮಗಳೂರಿನಲ್ಲಿ ಐದು ಪ್ರಚಾರ ಉಪನ್ಯಾಸಗಳನ್ನು ಮಂಡಿಸಿದರು. ಈ ಉಪನ್ಯಾಸಗಳನ್ನು ಒಟ್ಟುಗೂಡಿಸಿ ೧೯೨೩ರಲ್ಲಿ ಪಾಳೆಯಗಾರರು ಎಂಬ ಕೃತಿಯನ್ನು ಪ್ರಕಟಿಸಿದರು. ಈ ಕೃತಿಯು ತದನಂತರ ಇತಿಹಾಸ

ರಚನೆಕಾರರಿಗೆ ಪಾಳೆಯಗಾರರ ಕುರಿತು ಸಂಶೋಧನಾ ಕೃತಿಗಳನ್ನು ಬರೆಯಲು ಪ್ರೇರಣೆಯಾಯಿತು. ನಂತರ ಪುಟ್ಟಣ್ಣನವರು ೧೯೨೪ರಲ್ಲಿ ಚಿತ್ರದುರ್ಗದ ಪಾಳೆಯಗಾರರು ಎಂಬ ಕೃತಿಯನ್ನು ಪ್ರಕಟಿಸಿದರು. ಈ ಕೃತಿಯು ಚಿತ್ರದುರ್ಗ ನಾಯಕರ ರಾಜಕೀಯ ಏಳಿಗೆ ಮತ್ತು ಪತನವನ್ನು ಕುರಿತು ಸಮಗ್ರ ವಿವರಗಳನ್ನು ಒಳಗೊಂಡ ಐತಿಹಾಸಿಕ ಕೃತಿಯಾಗಿದೆ. ಹುಲ್ಲೂರು ಶ್ರೀನಿವಾಸ್ ಜೋಯಿಸರು ೧೯೬೮ರಲ್ಲಿ ಪ್ರಕಟಿಸಿದ ಚಿತ್ರದುರ್ಗದ ಬಖೈರು ಕೃತಿಯು ಚಿತ್ರದುರ್ಗ ಪಾಳೆಯಗಾರರ ಅವನತಿಯನ್ನು ವಿವರಿಸುತ್ತದೆ. ಹಾಗೆಯೇ ಚಿತ್ರದುರ್ಗದ ಸಮಕಾಲೀನ ಪಾಳೆಯಗಾರರ ರಾಜಕೀಯ ಸ್ಥಿತಿಗಳನ್ನು ಅರ್ಥೈಸಿಕೊಳ್ಳುವಲ್ಲಿ ಈ ಕೃತಿಯು ನೆರವಾಗುತ್ತದೆ. ಪಿ. ಕೃಷ್ಣರಾವ್ ಅವರ ಚಿತ್ರದುರ್ಗದ ಬೆಟ್ಟ ಮತ್ತು ನಾಯಕ ಸಾಮ್ರಾಜ್ಯ ಎಂಬ ಸಂಶೋಧನಾ ಲೇಖನ, ಎಂ.ವಿ.ಶ್ರೀನಿವಾಸ್ ಹಾಗೂ ಲಕ್ಷ್ಮಣ್ ತೆಲಗಾವಿಯವರ ಚಂದ್ರವಳ್ಳಿ ಕೃತಿ(೧೯೭೯), ಕೆ. ವೆಂಕಣ್ಣಚಾರ್ ಪಾಂಡುರಂಗ ಜೋಯಿಸ್ ಮತ್ತು ಲಕ್ಷ್ಮಣ್ ತೆಲಗಾವಿ ಸಂಪಾದಿಸಿದ ಚಿತ್ರದುರ್ಗ ದರ್ಶಿನಿ ಕೃತಿಗಳು ಚಿತ್ರದುರ್ಗ ನಾಯಕರ ರಾಜಕೀಯ ಚರಿತ್ರೆಯನ್ನು ಐತಿಹಾಸಿಕವಾಗಿ ಉಲ್ಲೇಖಿಸುತ್ತವೆ.

ಹುಲ್ಲೂರು ಶ್ರೀನಿವಾಸ ಜೋಯಿಸರು ಸಂಗ್ರಹಿಸಿರುವ ಪಾಳೆಯಗಾರರ ಜನಪದೀಯ ಗೀತೆಗಳು, ಡಾ.ಬಿ. ರಾಜಶೇಖರಪ್ಪ ಅವರ ಇತಿಹಾಸ ಕಥನ, ಪ್ರೊ. ಲಕ್ಷ್ಮಣ್ ತೆಲಗಾವಿಯವರ ಚಿತ್ರದುರ್ಗ ನಾಯಕ ಅರಸರು, ಡಾ.ಬಿ. ರಾಜಶೇಖರಪ್ಪ ಅವರ ಚಿತ್ರದುರ್ಗ ಪಾಳೆಯಗಾರರ ದಾಖಲೆಗಳು ಚಿತ್ರದುರ್ಗ ಪಾಳೆಯಗಾರರ ಕುರಿತು ಹೆಚ್ಚಿನ ಮಾಹಿತಿಗಳನ್ನು ನೀಡುತ್ತವೆ.

ಕರ್ನಲ್ ವಿಲ್ಕ್ಸ್ ಮೈಸೂರಿನ ಇತಿಹಾಸ, ಡಾ. ವೈ.ಎಚ್. ನಾಯಕವಾಡಿಯವರ ಚಿತ್ರದುರ್ಗ ನಾಯಕರು ಸಾಂಸ್ಕೃತಿಕ ಇತಿಹಾಸ, ಬ್ಯಾರಿಸ್ ಲೂಯಿಯವರ ಚಿತ್ರದುರ್ಗ ಪಾಳೆಯಗಾರು, ಪ್ರೊ. ಶ್ರೀಶೈಲ ಆರಾಧ್ಯರವರ ವಿಜಯನಗರದ ಅರಸರು ಮತ್ತು ಚಿತ್ರದುರ್ಗ ನಾಯಕರು ಎಂಬ ಸಂಶೋಧನಾ ಲೇಖನ, ಡಾ.ಟಿ. ಮಂಜಣ್ಣ ಅವರ 'ಚಿತ್ರದುರ್ಗ ನಾಯಕರ ಪತನ' ಎಂಬ ಅಪ್ರಕಟಿತ ಪಿ.ಎಚ್.ಡಿ ಮಹಾಪ್ರಬಂಧ ಡಾ.ಎಚ್.ಟಿ ದೇಶಪಾಂಡೆಯವರು ಬರೆದಿರುವ "ದಿ ಚಿತ್ರದುರ್ಗ ಸ್ಟೇಟ್ ಎಂಬ ಪಿಎಚ್.ಡಿ ಅಪ್ರಕಟಿತ ಮಹಾಪ್ರಬಂಧ" ಇವುಗಳು ಚಿತ್ರದುರ್ಗ ನಾಯಕರ ರಾಜಕೀಯ, ಸಾಂಸ್ಕೃತಿಕ ಇತಿಹಾಸವನ್ನು ಪರಿಚಯ ಮಾಡಿಕೊಡುತ್ತವೆ.

ಕೆಳದಿ ರಾಜ ವಂಶಾವಳಿಯನ್ನು ಕುರಿತಂತೆ ರಾಬರ್ಟ್ ಸಿವೆಲ್ ಎಂಬ ಇತಿಹಾಸಕಾರರು ಮೊದಲ ಬಾರಿಗೆ "ಸ್ಕೆಚ್ ಆಫ್ ದಿ ಡೈನಾಸ್ಟೇನ್ ಆಫ್ ಸದರ್ನ್ ಇಂಡಿಯಾ ಎಂಬ ಕೃತಿಯನ್ನು ಬರೆದರು. ಇವರು ಸಿದ್ಧಪಡಿಸಿದ ಕಾಲಾನುಕ್ರಮಣಿಕೆಯಲ್ಲಿನ ತಿದ್ದುಪಡಿಯನ್ನು ಮತ್ತೊಬ್ಬ ಇತಿಹಾಸಕಾರ ಬಾರ್ನೆಟ್ ಅನುಮೋದಿಸಿದರು. ಎಂ.ಎಸ್. ಪುಟ್ಟಣ್ಣನವರು ಬರೆದಿರುವ "ಇಕ್ಕೇರಿ ಸಂಸ್ಥಾನದ ಚರಿತ್ರೆ" ಎಂಬ ಕೃತಿಯ ೧೯೩೦ರಲ್ಲಿ ಪ್ರಕಟವಾಯಿತು. ಕೆಳದಿ ಗುಂಡಾ ಜೋಯಿಸರು "ಕೆಳದಿಯ ಸಂಕ್ಷಿಪ್ತ ಇತಿಹಾಸ ಎಂಬ ಕೃತಿಯನ್ನು ಬರೆದರು. ಡಾ.ಕೆ.ಜಿ ವೆಂಕಟೇಶ್ ಜೋಯಿಸರು ಕೆಳದಿ ಶಾಸನಗಳನ್ನು ಆಧಾರವಾಗಿಟ್ಟುಕೊಂಡು 'ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ

ಕೃತಿಯನ್ನು ಬರೆದರು. ಡಾ.ಎನ್. ಚಿನ್ನಸ್ವಾಮಿ ಸೋಸಲೆ ಅವರ ಸಾಮ್ರಾಜ್ಯ ಮತ್ತು ಸಂಸ್ಥಾನ ಕೃತಿಯು ಮೌಖಿಕ ಆಕರಗಳ ಆಧಾರದ ಮೇಲೆ ಕೆಳದಿ ನಾಯಕ ಇತಿಹಾಸವನ್ನು ಕಟ್ಟಿಕೊಟ್ಟಿದೆ. ಚಿಟ್ನಿಸ್ ಅವರ The History of Keladi ಕೃತಿಯು ಕೆಳದಿ ನಾಯಕರ ಇತಿಹಾಸವನ್ನು ವಿವರಿಸುತ್ತವೆ. ಯಲಹಂಕ ನಾಡಪ್ರಭುಗಳ ಕುರಿತು ಕರ್ಲಮಂಗಲಂ ಶ್ರೀಕಂಠಯ್ಯನವರ (ಸಂ)ಗೌಡಕುಲ ವಿಭೂಷಣ ಕೆಂಪೇಗೌಡನ ಜಯಪ್ರಶಸ್ತಿ, ಬ.ನ ಸುಂದರರಾವ್ ಅವರ ಬೆಂಗಳೂರಿನ ಇತಿಹಾಸ (ಪ್ರ.ಸಂ.) ಯಲಹಂಕ ಪ್ರಭುಗಳು ಒಂದು ಅಧ್ಯಯನ, ಎಚ್ ಕೃಷ್ಣಯ್ಯ ಮತ್ತು ದೇವರಕೊಂಡಾರೆಡ್ಡಿ (ಸಂ) ಬೆಂಗಳೂರು ಕೆಂಪೇಗೌಡನ ವಂಶಸ್ಥರು, ಕೆ.ಎಸ್ ಶಿವಣ್ಣರವರ (ಸಂ) ಕರ್ನಾಟಕ ಚರಿತ್ರೆ ಸಂಪುಟ ಮೂರು ಎಂಬ ಕೃತಿಗಳು ಯಲಹಂಕ ನಾಡ ಪ್ರಭುಗಳ ಮೂಲ, ರಾಜಕೀಯ ಇತಿಹಾಸ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಇತಿಹಾಸಕ್ಕೆ ಸಂಬಂಧಪಟ್ಟಂತೆ ಸಮಗ್ರ ಮಾಹಿತಿಗಳನ್ನು ಒದಗಿಸುತ್ತವೆ. ಕೆ.ಎಲ್ ರಾಜಶೇಖರ್ ಅವರ ವಿಜಯನಗರ ಕಾಲದ ಯಲಹಂಕನಾಡು ಎಂಬ ಸಂಶೋಧನಾ ಲೇಖನವು ಯಲಹಂಕ ಪ್ರಭುಗಳು ಮತ್ತು ವಿಜಯನಗರ ಅರಸರ ನಡುವಿನ ಸಹ ಸಂಬಂಧಗಳನ್ನು ವಿವರಿಸುತ್ತದೆ.

ಪ್ರೊ. ಲಕ್ಷ್ಮಣ್ ತೆಲಗಾವಿ ಸಂಪಾದನೆಯ "ಹರತಿಸಿರಿ"(೧೯೮೭) ಎಂಬ ಅಭಿನಂದನಾ ಸಂಪುಟದಲ್ಲಿ ಹರತಿಯ ಪಾಳೆಯಗಾರರಿಗೆ ಸಂಬಂಧಿಸಿದಂತೆ ಮೂರು ಸಂಶೋಧನಾ ಲೇಖನಗಳು ಪ್ರಕಟಗೊಂಡಿವೆ. ಹರತಿ ಪಾಳೆಯಗಾರರ ಮೂಲ, ವಂಶಾವಳಿ ಹಾಗೂ ಹರತಿ ಸ್ಮಾರಕಗಳನ್ನು ಕುರಿತು ಮಾಹಿತಿಗಳಿವೆ. ಹರತಿ ಪಾಳೆಯಗಾರರ ರಾಜಕೀಯ ಚರಿತ್ರೆಯನ್ನು ಬಿ.ಎನ್ ಸತ್ಯನ್ (ಸಂ.) ಮೈಸೂರು ಸ್ಟೇಟ್ ಗೆಝೆಟಿಯರ್ ಹಾಗೂ ಕರ್ನಾಟಕ ವಿಷಯ ವಿಶ್ವಕೋಶದಲ್ಲಿ ಹಾಗೂ ಕರ್ನಾಟಕ ಕೈಫಿಯತ್ತುಗಳಲ್ಲಿ ಮಾಹಿತಿಗಳಿವೆ. ದಿವಗಂತ ಹೆಚ್.ವಿ. ವೀರನಾಯಕ ಹರತಿ ಸಂಪಾದಿಸಿರುವ ಆನೆಗೊಂದಿ ಜಯರೇಖೆಯು ಹರತಿ ಪಾಳೆಯಗಾರರ ಮೂಲವನ್ನು ಕುರಿತು ಮಹತ್ವದ ಮಾಹಿತಿಯನ್ನು ಒಳಗೊಂಡಿದೆ. ಡಾ.ಸಿ.ಆರ್ ಶ್ಯಾಮಲ ಅವರ ಪ್ರಕಟಿತ ಪಿ.ಎಚ್.ಡಿ ಮಹಾಪ್ರಬಂಧವಾದ "ಪೂರ್ವ ಕರ್ನಾಟಕದ ಪಾಳೆಯಗಾರರು" ಕೃತಿಯಲ್ಲಿ ಹರತಿ ನಾಯಕರ ಕುರಿತು ಸಂಕ್ಷಿಪ್ತವಾದ ಮಾಹಿತಿಯು ದೊರೆಯುತ್ತದೆ. ಬಿ.ಮಂ ಶ್ಯಾಮಲಾ ಮತ್ತು ರತ್ನಕುಮಾರಿಯವರು ಪ್ರಕಟಿಸಿರುವ ಹರತಿಯ ಪಾಳೆಯಗಾರರು ಎಂಬ ಸಂಶೋಧನಾ ಕೃತಿಯು ಹರತಿ ನಾಯಕರ ರಾಜಕೀಯ ಇತಿಹಾಸವನ್ನು ತಿಳಿಸುತ್ತದೆ.

ಬಳ್ಳಾರಿ ಜಿಲ್ಲೆಯನ್ನು ಕೇಂದ್ರವಾಗಿಟ್ಟುಕೊಂಡು ಆಡಳಿತ ನಡೆಸಿದ ಹಂಡೆಯ ಪಾಳೆಯಗಾರರ ಕುರಿತು ಹಲವಾರು ಸಂಶೋಧನಾ ಕೃತಿಗಳು ಲೇಖನಗಳು ಪ್ರಕಟಗೊಂಡಿವೆ. ವೈ.ಕೆ. ಗುಂಡ ಕರ್ಜಗಿಯವರ "ಹಂಡೆ ಕುರುಬರ ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಅಪ್ರಕಟಿತ ಎಂ.ಫಿಲ್ ಸಂಪ್ರಬಂಧವು ಹಂಡೆ ಕುರುಬರ ಸಾಂಸ್ಕೃತಿಕ ಇತಿಹಾಸವನ್ನು ಅರಿಯುವಲ್ಲಿ ನೆರವಾಗುತ್ತದೆ. ಡಾ.ವಿರೂಪಾಕ್ಷಿ ಪೂಜಾರಹಳ್ಳಿಯವರು ಬರೆದಿರುವ ಬಳ್ಳಾರಿ ಅಥವಾ ಹಂಡೆ ಪಾಳೆಯಗಾರರು ಎಂಬ ಸಂಶೋಧನಾ ಲೇಖನವು ಹಂಡೆ ಪಾಳೆಯಗಾರ ಇತಿಹಾಸವನ್ನು ಕುರಿತು ವಿವರಿಸುತ್ತದೆ.

ಡಾ. ಚೆನ್ನಂಬಿಕೆ ಪಾವಟೆಯವರ "ಹಂಡೆಯ ಪಾಳೆಯಗಾರರ ಮೇಲೆ ಹೊಸ ಬೆಳಕು ಎನ್ನುವ ಲೇಖನ, ಪಿ. ಯಶೋದಾ ರಾಜಶೇಖರಪ್ಪನವರ ಬಳ್ಳಾರಿ ಪಾಳೆಯಗಾರರು, ಡಾ.ಎಸ್.ಸಿ. ಪಾಟೀಲರ ಬಳ್ಳಾರಿ ಹಂಡೆ ಪಾಳೆಯಗಾರರ ಐತಿಹಾಸಿಕ ಹಿನ್ನೆಲೆ ಎಂಬ ಸಂಶೋಧನಾ ಲೇಖನಗಳು ಹಂಡೆ ಪಾಳೆಯಗಾರರ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ವಿವರಗಳನ್ನು ಒಳಗೊಂಡಿವೆ. ಕೃಷ್ಣಸ್ವಾಮಿ ಅಯ್ಯರ್ ಅವರ Sources of Vijayanagara History ಎಂಬ ಕೃತಿಯು ಹಂಡೆ ಪಾಳೆಯಗಾರರ ಆರಂಭಿಕ ಇತಿಹಾಸವನ್ನು ವಿವರಿಸುತ್ತದೆ. ಇವುಗಳಲ್ಲದೆ ಜಗದ್ಗುರು ಕೊಟ್ಟೂರು ಸ್ವಾಮಿ ಗುರು ಪರಂಪರೆ ಮತ್ತು ಮಠದ ದಾಖಲೆಗಳು ಪುಲ್ಲಕವಿ ಬರೆದ ಶ್ರೀಶೈಲ ಪಂಡಿತಾರಾಧ್ಯ ಚರಿತ್ರೆ, ಸಿರಿವ ಆಂಜನೇಯಲು ಬರೆದ ಕರಿಬಸವಸ್ವಾಮಿ ಕಾವ್ಯ, ನಾಗಸಂದ್ರಂ ವಾಸುದೇವರಾವ್ ವಿರಚಿತ ಅನಂತಪುರ ಮಂಡಲ ಚರಿತ್ರೆ ಕಥಲು, ಸಿ.ಪಿ. ಬ್ರೌನ್ ಅವರು ಬರೆದ 'ದಿ ವಾರ್ ಆಫ್ ದಿ ರಾಜಾಸ್', ಹಂಡೆ ಆಸ್ಥಾನ ಕವಿ ಬರೆದ 'ರಸಿಕ ಮನೋರಂಜ ವಿಲಾಸ' ಮುಂತಾದ ಕೃತಿಗಳು ಹಂಡೆ ಪಾಳೆಯಗಾರರ ಕಾಲದ ರಾಜಕೀಯ, ಧಾರ್ಮಿಕ, ಸಾಮಾಜಿಕ ಮತ್ತು ಆಡಳಿತಾತ್ಮಕ ವಿವರಗಳನ್ನು ಒಳಗೊಂಡಿವೆ.

ಗುಡೇಕೋಟೆಯ ಪಾಳೆಯಗಾರರ ಕುರಿತು ಎಚ್.ಎಮ್.ಬಸವರಾಜ ಅವರ "ಗುಡೇಕೋಟೆ ಚಾರಿತ್ರಿಕ ಅಧ್ಯಯನ" ಎಂಬ ಎಂ.ಫಿಲ್ ಸಂಪ್ರಂಬಂಧವು ಗುಡೇಕೋಟೆ ಪಾಳೆಯಗಾರರ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ವಿವರಗಳನ್ನು ಒಳಗೊಂಡ ಕೃತಿಯಾಗಿದೆ. ಡಾ. ವಿರೂಪಾಕ್ಷಿ ಪೂಜಾರಹಳ್ಳಿಯವರ 'ಗುಡೇಕೋಟೆ ಪಾಳೆಯಗಾರರು' ಎಂಬ ಸಂಶೋಧನಾ ಲೇಖನವು ವಿಜಯನಗರದ ಅಮರನಾಯಕರಾಗಿ ಅಸ್ತಿತ್ವವನ್ನು ಪಡೆದುಕೊಂಡು ಬ್ರಿಟಿಷರ ಕಾಲದವರಿಗೂ ರಾಜಕೀಯ ಸಂಘರ್ಷಗಳನ್ನು ಎದುರಿಸುತ್ತಲೇ ಬಂದ ಪಾಳೆಯಗಾರರ ಕುರಿತು ಸಮಗ್ರ ಮಾಹಿತಿಯನ್ನು ಒದಗಿಸುತ್ತದೆ. ಡಾ.ಡಿ.ಎನ್ ಯೋಗಿಶ್ವರಪ್ಪನವರ 'ಗುಡೇಕೋಟೆ ಪಾಳೆಯಗಾರರು' ಎಂಬ ಲೇಖನವು ಹೊಸ ವಿಷಯಗಳನ್ನು ಆವಿಷ್ಕರಿಸಿದ ಸಂಶೋಧನಾ ಲೇಖನವಾಗಿದೆ. ಮೆಕೆಂಝಿ ಅವರ ಅಪ್ರಕಟಿತ ಇಂಗ್ಲೀಷ್ ದಾಖಲೆಯು ಗುಡೇಕೋಟೆ ಪಾಳೆಯಗಾರರ ಮೂಲ ಮತ್ತು ರಾಜಕೀಯ ಇತಿಹಾಸವನ್ನು ವಿವರಿಸುವ ಮಹತ್ವಪೂರ್ಣ ದಾಖಲೆಯಾಗಿದೆ.

ಗುಮ್ಮನಾಯಕ ಪಾಳೆಯಗಾರರಿಗೆ ಸಂಬಂಧಿಸಿದಂತೆ ಕೇಶವರಾವ್ ಮತ್ತು ಕೃಷ್ಣಭಟ್ಟ(ಸಂ.) ಕರ್ನಾಟಕ ಇತಿಹಾಸ ದರ್ಶನ ಎಂಬ ಕೃತಿಯಲ್ಲಿ ಮಾಹಿತಿ ದೊರೆಯುತ್ತದೆ. ಬಿ.ಆರ್ ಕೃಷ್ಣ ಅವರು ಬರೆದಿರುವ ಐತಿಹಾಸಿಕ ಗುಮ್ಮನಾಯಕನ ಪಾಳ್ಯ ಎಂಬ ಕೃತಿಯು ಗುಮ್ಮನಾಯಕ ಪಾಳ್ಯದ ಪಾಳೆಯಗಾರರ ಸಮಗ್ರ ರಾಜಕೀಯ ಇತಿಹಾಸವನ್ನು ತಿಳಿಸುವ ಗ್ರಂಥವಾಗಿದೆ. ಎಂ.ಎಸ್ ಪುಟ್ಟಣ್ಣನವರ ಗುಮ್ಮನಾಯಕನ ಪಾಳೆಯಗಾರರು ಎಂಬುದು ಪ್ರಮುಖ ಸಂಶೋಧನಾ ಲೇಖನವಾಗಿದೆ. ವೆಂಕಟರಾಮಣ್ಣನವರ ವಿಜಯನಗರ ಇತಿಹಾಸಕ್ಕೆ ಕೋಲಾರ ಜಿಲ್ಲೆಯ ಕೊಡುಗೆ ಎಂಬ ಪ್ರಕಟಿತ ಪಿಎಚ್.ಡಿ ಮಹಾಪ್ರಬಂಧವು ಗುಮ್ಮನಾಯಕ ಪಾಳೆಯಗಾರರ ಜೊತೆಗೆ ಕೋಲಾರದಲ್ಲಿ ವಿಜಯನಗರ

ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಇನ್ನಿತರ ಪಾಳೆಯಪಟ್ಟುಗಳ ಇತಿಹಾಸವನ್ನು ತಿಳಿಸುತ್ತದೆ. ಎಂ.ಜಿ ನಾಗರಾಜ್ ಅವರ 'ನಾಯಕರ ಆಡಳಿತ' ಎಂಬ ಸಂಶೋಧನಾ ಲೇಖನವು ಗುಮ್ಮನಾಯಕ ಪಾಳೆಯಗಾರರ ಕುರಿತು ಅವರ ರಾಜಕೀಯ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ.

ಡಾ. ಎ.ವಿ. ವೆಂಕಟರತ್ನಂ ಅವರು "ವಿಜಯನಗರ ಸಾಮ್ರಾಜ್ಯದ ಸ್ಥಳೀಯ ಸರಕಾರ" ಎಂಬ ಕೃತಿಯಲ್ಲಿ ವಿಜಯನಗರದ ಕೇಂದ್ರ ಸರಕಾರ, ಪ್ರಾಂತೀಯ ಸರಕಾರ ಮತ್ತು ಸ್ಥಳೀಯ ಸರಕಾರದ ಸ್ವರೂಪವನ್ನು ವಿವರಿಸಿದ್ದು, ಅದರಲ್ಲಿ ಪ್ರಾಂತೀಯ ಮಟ್ಟದಲ್ಲಿ ಜಾರಿಯಲ್ಲಿದ್ದ ನಾಯಕ ವ್ಯವಸ್ಥೆಯನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಡಾ. ರಾಜಾರಾಮ ಹೆಗಡೆ ಮತ್ತು ಅಶೋಕ್ ಶೆಟ್ಟರ್ ಸಂಪಾದಕತ್ವದ ಮಲೆಕರ್ನಾಟಕದ ಅರಸು ಮನೆತನಗಳು, ಡಾ. ಕೊಟ್ರೇಶ್ (ಸಂ) ಕಲ್ಯಾಣ ಕರ್ನಾಟಕದ ಅರಸು ಮನೆತನಗಳು-ಕೃತಿಗಳು ಕ್ರಮವಾಗಿ ಮಲೆನಾಡು ಪ್ರದೇಶ, ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ನಾಯಕ ಮನೆತನಗಳ ಕುರಿತು ಬಿಡಿ ಬಿಡಿಯಾದ ಲೇಖನಗಳನ್ನು ಒಳಗೊಂಡಿದೆ. ಪಾಳೆಯಗಾರರ ರಾಜಕೀಯ, ಆಡಳಿತ, ಸಾಮಾಜಿಕ, ಆರ್ಥಿಕ, ಕಲೆ ಮತ್ತು ವಾಸ್ತುಶಿಲ್ಪವನ್ನು ಕುರಿತಂತೆ ವಿವಿಧ ವಿಷಯಗಳ ಮೇಲೆ ಮಾಹಿತಿಗಳನ್ನು ಇವು ನೀಡುತ್ತವೆ. ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗದಿಂದ ಪ್ರಕಟವಾದ ಚರಿತ್ರೆ ಅಧ್ಯಯನ ನಿಯತಕಾಲಿಕೆಗಳಲ್ಲಿ ಅಮರನಾಯಕರಿಗೆ ಸಂಬಂಧಿಸಿದಂತೆ ಹಲವಾರು ಲೇಖನಗಳು ಪ್ರಕಟಗೊಂಡಿವೆ. ಕರ್ನಾಟಕ ಸರ್ಕಾರ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ (ಮೈಸೂರು)ವು ಹೊರತಂದಿರುವ ವಿಜಯನಗರ ಅಧ್ಯಯನದ ೧೮ ಸಂಪುಟಗಳಲ್ಲಿ ಇಡೀ ವಿಜಯನಗರ ಸಾಮ್ರಾಜ್ಯ ಹಾಗೂ ಅದರ ಆಡಳಿತ ವ್ಯವಸ್ಥೆ, ಕಲೆ, ವಾಸ್ತುಶಿಲ್ಪ, ಜನಜೀವನ, ಸಂಸ್ಕೃತಿ, ಆಚಾರ-ವಿಚಾರಗಳು ಆರ್ಥಿಕತೆ ಹೀಗೆ ಅನೇಕ ವಿಷಯಗಳ ಕುರಿತು ಅನೇಕ ಲೇಖನಗಳು ಪ್ರಕಟಗೊಂಡಿವೆ. ನಾಯಕರ ಇತಿಹಾಸಕ್ಕೆ ಸಂಬಂಧಿಸಿದಂತೆ ಹೆಚ್ಚು ಮಾಹಿತಿಗಳು ಈ ಸಂಪುಟಗಳಲ್ಲಿ ಪ್ರಕಟಗೊಂಡಿವೆ.

ಡಾ.ಆರ್ ಗೋಪಾಲ್ ಸಂಪಾದಕತ್ವದ 'ಚಿತ್ರದುರ್ಗದ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ' 'ದಾವಣಗೆರೆ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ', ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ , ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಚಿಕ್ಕಮಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಕೃತಿಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ಆಡಳಿತವನ್ನು ನಡೆಸಿದ ಅಮರನಾಯಕರನ್ನು ಕುರಿತು ಹಲವಾರು ಸಂಶೋಧನಾ ಲೇಖನಗಳನ್ನು ಒಳಗೊಂಡಿವೆ.

ಸುಮತೀಂದ್ರ ನಾಡಿಗ್ ಅವರ "ಸಂತೆಬೆನ್ನೂರು ನಾಯಕರು" ಎಂಬ ಕೃತಿಯಲ್ಲಿ ಸಂತೆಬೆನ್ನೂರಿನ ಪಾಳೆಯಗಾರರ ರಾಜಕೀಯ ಇತಿಹಾಸವನ್ನು ವಿಶ್ಲೇಷಿಸಲಾಗಿದೆ. ಕುಂಬಾ ಸದಾಶಿವಪ್ಪ ಅವರ ಹರಪನಹಳ್ಳಿ ನಾಯಕರ ರಾಜಕೀಯ ಇತಿಹಾಸವನ್ನು ಕುರಿತು ಮಾಹಿತಿಯನ್ನು ನೀಡುತ್ತದೆ. ಪ್ರೊ.

ಲಕ್ಷ್ಮಣ್ ತೆಲಗಾವಿಯವರ ಎಪ್ಪತ್ತೇಳು ಪಾಳೆಯಗಾರರು ಎಂಬ ಕೃತಿಯು ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಪಾಳೆಯಪಟ್ಟುಗಳನ್ನು ಹೇಗೆ ನಿರ್ನಾಮಗೊಳಿಸಿದರು ಎಂಬುದರ ಕುರಿತು ವಿವರಿಸುತ್ತದೆ. ಕರ್ನಾಟಕ ಇತಿಹಾಸ ಅಕಾಡಮಿಯು ಹೊರತಂದಿರುವ ಇತಿಹಾಸ ದರ್ಶನ ಸಂಪುಟಗಳಲ್ಲಿ ಪಾಳೆಯಗಾರರಿಗೆ ಸಂಬಂಧಿಸಿದಂತೆ ಅನೇಕ ಲೇಖನಗಳು ಪ್ರಕಟಗೊಂಡಿವೆ. ವಿಜಯನಗರ ಸಾಮ್ರಾಜ್ಯದ ಸಾಫಲ್ಯ-ವೈಫಲ್ಯ ಸಂಪುಟ ೧೨, ಗುಂತಗೋಳ ಸಂಸ್ಥಾನದ ಐತಿಹಾಸಿಕ ಪದರುಗಳು ಸಂಪುಟ ೧೮, ಸುರಪುರ ನಾಯಕ ಅರಸರ ನಾಣ್ಯಗಳು ಸಂಪುಟ ೨೪, ತಗಡೂರ ಪ್ರಭುಗಳು ಸಂಪುಟ ೨೨, ದಾನಿವಾಸ ನಾಯಕರು ಸಂಪುಟ ೨೫, ಯಲಹಂಕ ನಾಡ ಪ್ರಭುಗಳ ರಾಣಿಯರು ಸಂಪುಟ ೨೫, ಸೂರಟೂರ ದೇಸಾಯರು ಸಂಪುಟ ೧೯, ಮಧುಗಿರಿಗೆ ಸಂಬಂಧಿಸಿದ ಮೆಕೆಂಜಿಯ ಕೈಫಿಯತ್ತು ಸಂಪುಟ ೧೫, ಕೆಂಪೇಗೌಡನ ಜಯಪ್ರಶಸ್ತಿ ಒಂದು ಚಾರಿತ್ರಿಕ ಪರಿಶೀಲನೆ ಸಂಪುಟ ೧೪, ಕೆಳದಿ ರಾಜ್ಯಾಡಳಿತದಲ್ಲಿ ಗೌಡ ಸಾರಸ್ವತರು ಸಂಪುಟ ೧೪, ಮದಕರಿ ನಾಯಕನ ಆಯಗಾರರ ಕಾಲ ನಿರ್ಣಯಗ್ರಂಥ ಸಂಪುಟ ೭, ಲಿಂಗಣ್ಣ ಕವಿಯು ಕೆಳದಿ ನೃಪವಿಜಯದಲ್ಲಿ ಹರಪನಹಳ್ಳಿ ಪಾಳೆಯಗಾರರು ಸಂಪುಟ ೧೫, ಚಿತ್ರದುರ್ಗ ಪಾಳೆಯಗಾರರ ಹಿತ್ತಾಳೆ ಚೌಡಿಕೆಯ ಶಾಸನ ಸಂಪುಟ ೨೩, ಚಿತ್ರದುರ್ಗ ಪಾಳೆಯಗಾರರು ಆರ್ಥಿಕ ಅವಲೋಕನ ಸಂಪುಟ ೨೨, ಜಲಸಂವರ್ಧನ ಕಾರ್ಯದಲ್ಲಿ ನಿಡುಗಲ್ಲು ಅರಸರ ಪಾತ್ರ ಸಂಪುಟ ೧೮, ಗುಮ್ಮನಾಯಕ ಪಾಳೆಯದ ಪಾಳೆಯಗಾರರ ಬಾಗೇಪಲ್ಲಿ ತಾಮ್ರ ಶಾಸನ ಸಂ ೧೧ ಕೂಡ್ಲಿಗಿ ತಾಲೂಕು ಗುಡೇಕೋಟೆ ಪರಿಸರದ ಪುರಾತತ್ವ ಸಮೀಕ್ಷೆ ಸಂಪುಟ ೧೮, ಮತ್ತಿ ತಿಮ್ಮಣ್ಣ ನಾಯಕರ ಸಮಾಧಿ ಅವಶೇಷಗಳು ಸಂಪುಟ ೨೪, ಬೆಂಗಳೂರಿನ ಹಿರಿಯ ಕೆಂಪೇಗೌಡ ಹಾಗೂ ವಂಶಿಕರ ಧಾರ್ಮಿಕ ದತ್ತಿಗಳು ಸಂಪುಟ ೨೪, ಆನೇಕಲ್ ಪಾಳೆಯಗಾರರ ಕೈಫಿಯತ್ತು ಸಂಪುಟ ೧೦, ಮೂಗೂರು ಪ್ರಭುಗಳು ಸಂಪುಟ ೧೭, ಹಾಗಲವಾಡಿ ನಾಯಕರು ಸಂಪುಟ ೧೨, ಮಧುಗಿರಿ ಮಹಾನಾಡ ಪ್ರಭುಗಳು ಸಂಪುಟ ೧೪, ಗುಡೇಕೋಟೆ ಪಾಳೆಯಗಾರರು ಸಂಪುಟ ೨೧, ಚಿತ್ರದುರ್ಗ ಪಾಳೆಯಗಾರರು ಮತ್ತು ಗುತ್ತಿ ಅರಸರ ಸಂಬಂಧದ ಶಾಸನ ಸಂಪುಟ ೨೩, ಬೆಳಗುತ್ತ ಅರಸರು ಸಂಪುಟ ೧೪ರಲ್ಲಿ ಪ್ರಕಟಗೊಂಡಿವೆ. ಇವೆಲ್ಲವೂ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಆಳ್ವಿಕೆ ನಡೆಸಿದ ಅಮರನಾಯಕರನ್ನು ಕುರಿತಾದ ಬಿಡಿಯಾದ ಅಧ್ಯಯನಗಳಾಗಿವೆ. ಈ ಸಂಶೋಧನಾ ಲೇಖನಗಳು ಸ್ಥಳೀಯ ಚರಿತ್ರೆಯ ರಚನೆಗೆ ಸಹಕಾರಿಯಾಗಿವೆ.

ಜಿ.ಎಸ್. ದೀಕ್ಷಿತರ "ದಿ ಲೋಕಲ್ ಸೆಲ್ಫ್ ಗವರ್ನಮೆಂಟ್ ಇನ್ ಮೀಡಿವಲ್ ಕರ್ನಾಟಕ, ಸತ್ಯನ್ ಅಯ್ಯರ್ ಅವರ "ಹಿಸ್ಟರಿ ಆಫ್ ದ ನಾಯಕಸ್ ಆಫ್ ಮಧುರೈ", ಸೂರ್ಯನಾಥ ಕಾಮತ್ ಅವರ ವಿಜಯನಗರ ಸಾಮ್ರಾಜ್ಯ, ಸದಾನಂದ ಕನವಳ್ಳಿ (ಅನು) ಮರೆತುಹೋದ ಮಹಾಸಾಮ್ರಾಜ್ಯ, ಸೂರ್ಯನಾರಾಯಣರಾವ್ ಅವರ ಮರೆಯಲಾಗದ ಮಹಾಸಾಮ್ರಾಜ್ಯ (ಬಾಲಕೃಷ್ಣ ಅನುವಾದ), ಎಚ್.ಎಲ್ ನಾಗೇಗೌಡರ ಪ್ರವಾಸಿ ಕಂಡ ಇಂಡಿಯಾ ಸಂಪುಟ (ಎರಡು ಮತ್ತು ಮೂರು) ಮೊದಲಾದ ಕೃತಿಗಳು ಪ್ರಮುಖವಾಗಿವೆ. ಡಾ.ಎಂ.ಕೆ. ದುರುಗಪ್ಪನವರ ವಿಜಯನಗರೋತ್ತರ

ಕಾಲದ ಬೇಡ ಜನಾಂಗದ ಅಧ್ಯಯನ ಎಂಬ ಪ್ರಕಟಿತ ಪಿಎಚ್.ಡಿ. ಕೃತಿಯು ಕ್ರಿ.ಶ. ಹದಿನೆಂಟನೆಯ ಶತಮಾನದ ರಾಜಕೀಯ ಏಳುಬೀಳುಗಳನ್ನು, ಬೇಡ ಜನಾಂಗದ ಸ್ಥಿತ್ಯಂತರಗಳನ್ನು ಕುರಿತು ವಿವರಿಸುತ್ತದೆ. ವಿಜಯನಗರದ ಪತನದ ನಂತರ ಅಮರನಾಯಕರು ಸ್ವತಂತ್ರರಾಗಿ ತಮ್ಮದೇ ಆದ ಸಂಸ್ಥಾನಗಳನ್ನು ಕಟ್ಟಿಕೊಂಡು ಪಾಳೆಯಗಾರರಾಗಿ ರಾಜಕೀಯವಾಗಿ ನೆಲೆನಿಂತ ಬಗೆಯನ್ನು ಈ ಕೃತಿಯು ವಿವರಿಸುತ್ತದೆ.

ಫ್ರಾನ್ಸಿಸ್ ಬುಕಾನನ್ ಅವರ "ಎ ಜರ್ನಿ ಫ್ರಂ ದಿ ಮದ್ರಾಸ್ ಥ್ರೂ ದಿ ಕಂಟ್ರಿಸ್ ಆಫ್ ದಿ ಮೈಸೂರು, ಕೆನರಾ, ಮಲಬಾರ್ ಕೃತಿಯಲ್ಲಿ ಚಿತ್ರದುರ್ಗ, ಮತ್ತೋಡು, ಸಂತೆಬೆನ್ನೂರು, ಹಿರಿಯೂರು ಪಾಳೆಯಗಾರರ ಕುರಿತಾದ ಮಾಹಿತಿಗಳು ಲಭ್ಯವಾಗುತ್ತವೆ.

ಪ್ರೊ ಲಕ್ಷ್ಮಣ್ ತೆಲಗಾವಿ ಸಂಪಾದಕತ್ವದ ಕರ್ನಾಟಕ ಪಾಳೆಯಗಾರರ ನ್ಯಾಯಾಡಳಿತ ಎಂಬ ಅಭಿನಂದನಾ ಸಂಪುಟವು ೪೫ ಲೇಖನಗಳನ್ನು ಒಳಗೊಂಡಿದ್ದು, ಚಿತ್ರದುರ್ಗ, ನಾಯಕನಹಟ್ಟಿ ಮತ್ತೋಡು, ಹರಪನಹಳ್ಳಿ, ಯಲಹಂಕ, ಕನಕಗಿರಿ, ಸುರಪುರ ಮೊದಲಾದ ಪಾಳೆಯಗಾರರ ನ್ಯಾಯಾಡಳಿತವನ್ನು ಕುರಿತು ಹಲವಾರು ವಿದ್ವಾಂಸರು ಮತ್ತು ಸಂಶೋಧಕರು ಲೇಖನಗಳನ್ನು ಪ್ರಕಟಿಸಿದ್ದಾರೆ. ಪಾಳೆಯಗಾರರ ಕಾಲದ ನ್ಯಾಯಾಡಳಿತವನ್ನು ಅರಿಯುವಲ್ಲಿ ಈ ಕೃತಿಯು ನೆರವಾಗುತ್ತದೆ. ಲಿಂಗಣ್ಣ ಕವಿಯು ಬರೆದಿರುವ ಕೆಳದಿ ನೃಪವಿಜಯಂ ಕೃತಿಯು ಕೆಳದಿಯ ಸಮಕಾಲೀನ ಪಾಳೆಯಗಾರರಾದ ಹಂಡೆ, ಚಿತ್ರದುರ್ಗ, ಹರಪನಹಳ್ಳಿ ಮೊದಲಾದ ಪಾಳೆಯಗಾರರ ಕುರಿತು ಮಾಹಿತಿಗಳನ್ನು ನೀಡುತ್ತವೆ. ಡಾ.ಡಿ.ಎನ್ ಯೋಗಿಶ್ವರಪ್ಪನವರು ಬರೆದಿರುವ ಮಧ್ಯಕಾಲೀನ ಕರ್ನಾಟಕದ ಪಾಳೆಯಗಾರರು ಎಂಬ ಕೃತಿಯು ಕ್ರಿ.ಶ. ೧೬ನೆಯ ಶತಮಾನದಲ್ಲಿ ಕರ್ನಾಟಕವನ್ನು ಆಳಿದ ವಿಜಯನಗರ ಹಾಗೂ ವಿಜಯನಗರೋತ್ತರ ನಾಯಕರಾದ ಬೇಲೂರು, ದಾನಿವಾಸ, ಜಿಂಜಿ (ಸೆಣಜಿ) ಜರಿಮಲೆ, ಗುಡೇಕೋಟೆ ಮೊದಲಾದ ಪಾಳೆಯಗಾರರ ಕುರಿತು ಸಂಶೋಧನಾ ಲೇಖನಗಳನ್ನು ಒಳಗೊಂಡಿದೆ.

ಬಿ.ಎಲ್ ರೈಸ್ ಸಂಪಾದಕತ್ವದ ಎಫಿಗ್ರಾಫ್ರಿಯಾ ಕರ್ನಾಟಕ ಶಾಸನ ಸಂಪುಟಗಳು, ಮೈಸೂರು ವಿಶ್ವವಿದ್ಯಾನಿಲಯ ಹೊರತಂದಿರುವ ಪಾಳೆಯಗಾರರ ಶಾಸನ ಸಂಪುಟಗಳು, ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಕಟಿಸಿರುವ ಶಾಸನ ಸಂಪುಟಗಳು, ಎಂ.ಆರ್.ಐ. ವರದಿಗಳು ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್‌ಗಳು, ವಿಜಯನಗರ ಅಧ್ಯಯನ ಸಂಪುಟಗಳಲ್ಲಿ ಪ್ರಕಟಗೊಂಡಿರುವ ಅಪ್ರಕಟಿತ ಶಾಸನಗಳು ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದ ಪಾಳೆಯಗಾರರ ಕಾಲದ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಬಗ್ಗೆ ಮಾಹಿತಿಗಳನ್ನು ನೀಡುತ್ತವೆ. ವಿಜಯನಗರ ಕಾಲದಲ್ಲಿ ವಿವಿಧ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪಾಳೆಯಗಾರರ ಕುರಿತು ಮಾಹಿತಿಗಳನ್ನು ದತ್ತಾಂಶ ರೂಪದಲ್ಲಿ ಸಂಗ್ರಹಿಸಲು ಶಾಸನಗಳು ಅತ್ಯಮೂಲ್ಯವಾದ ಮಾಹಿತಿಗಳನ್ನು ನೀಡುತ್ತವೆ.

ಎಂ.ಎಂ. ಕಲಬುರ್ಗಿ ಸಂಪಾದಕತ್ವದ ಕರ್ನಾಟಕದ ಕೈಫಿಯತ್ತುಗಳು, ಮೆಕೆಂಝಿ ಸಂಗ್ರಹಿಸಿದ ಕೈಫಿಯತ್ತುಗಳು ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದ ನಾಯಕರ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ವಿಷಯಗಳ ಕುರಿತು ಮಾಹಿತಿಯನ್ನು ಒಳಗೊಂಡಿರುವ ಸಮಕಾಲೀನ ದಾಖಲೆಗಳಾಗಿವೆ. ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಅದೆಷ್ಟು ನಾಯಕರ ಕುರಿತ ದಾಖಲೆಗಳು ಕೈಫಿಯತ್ತುಗಳಲ್ಲಿ ದೊರೆಯುತ್ತವೆ.

ಎ.ಕೆ ಶಾಸ್ತ್ರಿ ಸಂಪಾದಿತ "ಶೃಂಗೇರಿ ಮಠದ ಕಡತಗಳಲ್ಲಿ ಆಯ್ದ ಚಾರಿತ್ರಿಕ ದಾಖಲೆಗಳು ಎಂಬ ಕೃತಿಯಲ್ಲಿ ಚಿತ್ರದುರ್ಗ ಪಾಳೆಯಗಾರರು ಮತ್ತು ಶೃಂಗೇರಿ, ಸಂತೆಬೆನ್ನೂರು ಪಾಳೆಯಗಾರರ ಎರಡು ಕಡತಗಳು ಪ್ರಕಟಗೊಂಡಿವೆ. ಸಂತೆಬೆನ್ನೂರು ಮತ್ತು ಹರಪನಹಳ್ಳಿ ಪಾಳೆಯಗಾರರ ಶಾಸನಗಳು ಪ್ರಕಟಗೊಂಡಿವೆ.

ಕೆ.ಎಸ್. ಶಿವಣ್ಣ ಸಂಪಾದಿಸಿದ ಕರ್ನಾಟಕ ಚರಿತ್ರೆ ಸಂಪುಟ ಎರಡರಲ್ಲಿ ವಿಜಯನಗರ ಕಾಲದ ಅಮರನಾಯಕ ವ್ಯವಸ್ಥೆಯನ್ನು ಕುರಿತು ಸಮಗ್ರವಾಗಿ ಚರ್ಚಿಸಲಾಗಿದೆ. ಅಮರನಾಯಕ ಪದ್ಧತಿಯ ಸ್ವರೂಪ, ಅಮರನಾಯಕರ ಆಯ್ಕೆ, ವಿಜಯನಗರ ಕಾಲದ ಕೆಲವು ಅಮರನಾಯಕ ಮನೆತನಗಳನ್ನು ಹಾಗೂ ವಿಜಯನಗರೋತ್ತರ ಕಾಲದ ರಾಜ್ಯಾಡಳಿತವನ್ನು ಮೈಸೂರು ಭಾಗದಲ್ಲಿ ಅಸ್ತಿತ್ವದಲ್ಲಿದ್ದ ಅಮರನಾಯಕರನ್ನು ಕುರಿತಂತೆ ಅನೇಕ ವಿಷಯಗಳನ್ನು ಈ ಕೃತಿಯು ವಿವರಿಸುತ್ತದೆ. ಡಾ.ಬಿ ವೆಂಕಟರಾಮಣ್ಣನವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ 'ವಿಜಯನಗರ ಸಾಮ್ರಾಜ್ಯಕ್ಕೆ ಕೋಲಾರ ಜಿಲ್ಲೆಯ ಕೊಡುಗೆ' ಎಂಬ ಪ್ರಕಟಿತ ಪಿಎಚ್.ಡಿ ಮಹಾಪ್ರಬಂಧವು ಅಮರನಾಯಕ ಪದ್ಧತಿಯನ್ನು ಕುರಿತು ಸಾಕಷ್ಟು ಮಾಹಿತಿಗಳನ್ನು ಒಳಗೊಂಡಿದ್ದು ಮುಳುವಾಯಿ ರಾಜ್ಯದ ಹಲವಾರು ನಾಯಕ ಮನೆತನಗಳ ಮೇಲೆ ಬೆಳಕು ಚೆಲ್ಲುತ್ತದೆ.

ಇತ್ತೀಚೆಗೆ ಪ್ರಕಟವಾದ ಡಿ.ಎನ್. ಯೋಗೀಶ್ವರಪ್ಪನವರ ವಿಜಯನಗರ ಕಾಲದ ನಾಯಕತನ ಎಂಬ ಕೃತಿಯನ್ನು ಹೊರತುಪಡಿಸಿ, ವಿಜಯನಗರ ಸಾಮ್ರಾಜ್ಯದ ಪ್ರಾದೇಶಿಕ ಮಟ್ಟದಲ್ಲಿ ಜಾರಿಯಲ್ಲಿದ್ದ ಅಮರನಾಯಕತನವನ್ನು ಕುರಿತು ಬರೆದಿರುವ ಕೃತಿಗಳು ಸಂಶೋಧನಾ ಲೇಖನಗಳು ವಿರಳವಾಗಿವೆ. ಪಾಳೆಯಗಾರರನ್ನು ಕುರಿತು ರಚನೆಯಾಗಿರುವ ಲೇಖನಗಳನ್ನು ಕೃತಿಗಳಲ್ಲಿ ಅಮರನಾಯಕತನವನ್ನು ಕುರಿತು ಕೇವಲ ಪ್ರಾಸಂಗಿಕವಾಗಿ ಉಲ್ಲೇಖಿಸಿರುವುದನ್ನು ಬಿಟ್ಟರೆ ಸಮಗ್ರ ನಾಯಕತನವನ್ನು ಕುರಿತು ತಳಸ್ಪರ್ಶಿಯಾದ ಅಧ್ಯಯನಗಳು ಇದುವರೆಗೂ ಕರ್ನಾಟಕದಲ್ಲಿ ನಡೆದಿಲ್ಲ. ವಿಜಯನಗರದಂತಹ ಬೃಹತ್ ಸಾಮ್ರಾಜ್ಯದ ಹುಟ್ಟಿಗೆ ಕಾರಣವಾದ, ಕರ್ನಾಟಕದಲ್ಲಿಯೇ ಅದರ ಆಡಳಿತ ವ್ಯವಸ್ಥೆಯ ಕುರಿತಾದ ಸಂಶೋಧನೆಗಳು ನಡೆಯದೇ ಇರುವುದು ಬಹುದೊಡ್ಡ ಕೊರತೆಯಾಗಿದೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ವಿಜಯನಗರ ಆಡಳಿತ ವ್ಯವಸ್ಥೆಯನ್ನು ಕುರಿತು ಮಾಹಿತಿಗಳನ್ನು ಒದಗಿಸುವಂತಹ ಎಲ್ಲ ಆಕರಗಳನ್ನು ಬಳಸಿಕೊಂಡು ವಿಜಯನಗರ ಕಾಲದ ಅಮರನಾಯಕರ ವ್ಯವಸ್ಥೆಯನ್ನು ಕುರಿತು ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

೧.೫. ಅಧ್ಯಯನದ ಸ್ವರೂಪ

"ವಿಜಯನಗರ ಕಾಲದ ಅಮರನಾಯಕರು ಚಾರಿತ್ರಿಕ ವಿಶ್ಲೇಷಣೆ" ಎಂಬ ಶೀರ್ಷಿಕೆಯ ಅಡಿಯಲ್ಲಿ ಒಟ್ಟು ಎಂಟು ಅಧ್ಯಾಯಗಳನ್ನು ರಚಿಸಿಕೊಳ್ಳಲಾಗಿದೆ. ಮೊದಲ ಅಧ್ಯಾಯದಲ್ಲಿ ಪ್ರಸ್ತಾವನೆ, ಅಧ್ಯಯನದ ಉದ್ದೇಶ, ಅಧ್ಯಯನದ ವ್ಯಾಪ್ತಿ ಅಧ್ಯಯನದ ವಿಧಾನ, ಈವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ ಮತ್ತು ಅಧ್ಯಯನದ ಸ್ವರೂಪವನ್ನು ವಿವರಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ವಿಜಯನಗರ ಕಾಲದ ಅಮರನಾಯಕ ಪದ್ಧತಿ, ಅಮರನಾಯಕ ಪದ್ಧತಿಯ ಸ್ವರೂಪ, ಐತಿಹಾಸಿಕ ಹಿನ್ನೆಲೆ, ಅಮರನಾಯಕ ಸ್ವರೂಪ ಹಾಗೂ ಉಪಶೀರ್ಷಿಕೆಗಳಾಗಿ ವಿಜಯನಗರ ಕಾಲದಲ್ಲಿ ಅಮರನಾಯಕತನ, ಅಮರನಾಯಕರ ವರ್ಗೀಕರಣ, ಸಾರ್ವಭೌಮ, ಸಾಮಂತ, ಉಪಸಾಮಂತರ ನಡುವಿನ ಸಂಬಂಧಗಳನ್ನು ವಿಶ್ಲೇಷಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಸಂಗಮ, ಸಾಳುವ, ತುಳುವ, ಅರವೀಡು ಮನೆತನಗಳ ಕಾಲಾವಧಿಯಲ್ಲಿ ಅಮರನಾಯಕ ಪದ್ಧತಿಯ ಬೆಳವಣಿಗೆ, ಅಮರನಾಯಕರ ಕರ್ತವ್ಯಗಳು, ಅಮರನಾಯಕರ ವ್ಯವಸ್ಥೆಯನ್ನು ಕುರಿತು ಅಧ್ಯಯನ ಮಾಡಲಾಗಿದೆ. ಕರ್ನಾಟಕ ರಾಜ್ಯದ ಭೌಗೋಳಿಕ ವ್ಯಾಪ್ತಿಯನ್ನು ನಿಗದಿಗೊಳಿಸಿಕೊಂಡು ವಿಜಯನಗರ ಕಾಲದಲ್ಲಿ ಅಧಿಕಾರದಲ್ಲಿದ್ದ ಅಮರನಾಯಕರನ್ನು ಪಟ್ಟಿ ಮಾಡಲಾಗಿದೆ. ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಎಫಿಗ್ರಾಫಿಯಾ ಕರ್ನಾಟಕ, ಕನ್ನಡ ವಿಶ್ವವಿದ್ಯಾಲಯ ಮತ್ತು ಮೈಸೂರು ವಿಶ್ವವಿದ್ಯಾನಿಲಯ ಹೊರತಂದಿರುವ ಶಾಸನ ಸಂಪುಟಗಳು, ವಿಜಯನಗರ ಅಧ್ಯಯನ ಸಂಪುಟಗಳು, ದಕ್ಷಿಣ ಭಾರತದ ಶಾಸನ ಸಂಪುಟಗಳು ಮತ್ತು ಎಂ.ಆರ್.ಐ ವರದಿಗಳನ್ನು ಸಮಗ್ರವಾಗಿ ಪರಿಶೀಲಿಸಲಾಗಿದೆ. ಮುಖ್ಯವಾಗಿ ವಿಜಯನಗರ ಕಾಲದ ಶಾಸನೋತ್ತರ ಅಮರನಾಯಕರನ್ನು ಗುರುತಿಸುವ ಹೊಸ ಪ್ರಯತ್ನ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯವು ವಿಜಯನಗರ ಕಾಲದ ಕೆಲವು ಅಮರನಾಯಕ ಮನೆತನಗಳ ಅಧ್ಯಯನಗಳನ್ನು ಒಳಗೊಂಡಿದೆ. ಕೆಳದಿ ನಾಯಕರು, ಚಿತ್ರದುರ್ಗ ನಾಯಕರು, ಯಲಹಂಕ ನಾಡಪ್ರಭುಗಳು, ಹರತಿ ಪಾಳೆಯಗಾರರು, ಹಂಡೆ ಪಾಳೆಯಗಾರರು ಮೊದಲಾದ ಕಿರುನಾಯಕ ಪ್ರಭುತ್ವಗಳ ಕುರಿತು ವಿಶ್ಲೇಷಣೆ ಮಾಡಲಾಗಿದೆ. ಈ ನಾಯಕರ ಅರಸರ ರಾಜಕೀಯ ಉನ್ನತಿ, ಬೆಳವಣಿಗೆ ಮತ್ತು ಅವನತಿ, ವಿಜಯನಗರ ಸಾರ್ವಭೌಮರೊಂದಿಗೆ ಇವರಿಗಿದ್ದ ಸಹಸಂಬಂಧಗಳನ್ನು ಕುರಿತು ವಿವರಿಸಲಾಗಿದೆ.

ಐದನೆಯ ಅಧ್ಯಾಯವು ಅಮರನಾಯಕರ ಕಾಲದ ಪೌರಾಡಳಿತ, ಸೇನಾಡಳಿತ, ನ್ಯಾಯಾಡಳಿತ, ಗ್ರಾಮಡಳಿತ, ಸಮಾಜ ಮತ್ತು ಧರ್ಮ, ಅರ್ಥವ್ಯವಸ್ಥೆ ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು ವಿವರಿಸಲಾಗಿದೆ.

ಆರನೆಯ ಅಧ್ಯಾಯವು ಪಾಳೆಯಗಾರರ ವ್ಯವಸ್ಥೆಯ ಬೆಳವಣಿಗೆ, ಅಮರನಾಯಕ ವ್ಯವಸ್ಥೆಯ ಸ್ಥಿತ್ಯಂತರದ ಫಲಿತಗಳು, ಅಧಿಕಾರದ ಸ್ವರೂಪ, ನಾಯಕತನದಿಂದ ಪಾಳೆಯಗಾರತ್ವ ಪಡೆಯುವ

ಲಕ್ಷಣಗಳು, ಅಮರನಾಯಕರು ಪರಿಪಾಲಿಸುತ್ತಿರುವ ಪ್ರದೇಶಗಳೇ ಮುಂದೆ ಪಾಳೆಯಪಟ್ಟುಗಳಾದವೇ ಅಥವಾ ಇಲ್ಲವೇ ಎಂಬ ಹೊಸ ವಿಷಯಗಳ ಮೇಲೆ ಚರ್ಚೆ ಮಾಡಲಾಗಿದೆ.

ಏಳನೇ ಅಧ್ಯಾಯದಲ್ಲಿ ಹೈದರಾಲಿ ಟಿಪ್ಪು ಸುಲ್ತಾನ್ ಬ್ರಿಟಿಷರು, ಮರಾಠರು, ಮೊಗಲರು, ನಿಜಾಮರು, ಅಮರನಾಯಕ ಮನೆತನದ ಪಾಳೆಯಗಾರರ ನಡುವೆ ನಡೆದ ಸಂಘರ್ಷಗಳನ್ನು ಅಮರನಾಯಕ ಮನೆತನದ ಅವನತಿಗೆ ಕಾರಣ ಮತ್ತು ಪರಿಣಾಮಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಎಂಟನೇ ಅಧ್ಯಾಯವೇ ಸಮರೋಪ, ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ನಾಯಕರನ್ನು ಕುರಿತ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಅನುಬಂಧದಲ್ಲಿ ಗ್ರಂಥಋಣ, ನಕ್ಷೆ, ಛಾಯಾಚಿತ್ರಗಳನ್ನು ನೀಡಲಾಗಿದೆ.

❖❖❖

ಅಧ್ಯಾಯ : ಎರಡು

ವಿಜಯನಗರ ಕಾಲದ ಅಮರನಾಯಕ ಪದ್ಧತಿ

೨.೧ ಅಮರನಾಯಕ ಪದದ ಅರ್ಥ ಮತ್ತು ವ್ಯಾಖ್ಯೆಗಳು

೨.೨ ಅಮರನಾಯಕ ಪದ್ಧತಿಯ ಐತಿಹಾಸಿಕ ಹಿನ್ನೆಲೆ

೨.೩ ಅಮರನಾಯಕ ಪದ್ದತಿಯ ಸ್ವರೂಪ

- ಎ. ವಿಜಯನಗರ ಕಾಲದಲ್ಲಿ ನಾಯಕತನ ಪದ್ಧತಿ
- ಬಿ. ಅಮರನಾಯಕರ ವರ್ಗೀಕರಣ
- ಸಿ. ಸಾರ್ವಭೌಮ, ಸಾಮಂತ, ಉಪನಾಯಕರ ನಡುವಿನ ಸಂಬಂಧಗಳು
- ಡಿ. ಅಮರನಾಯಕರ ನೇಮಕಾತಿಯ ವಿಧಾನ

ಅಧ್ಯಾಯ: ಎರಡು

ವಿಜಯನಗರ ಕಾಲದ ಅಮರನಾಯಕ ಪದ್ಧತಿ

ಪೀಠಿಕೆ: ಕ್ರಿ.ಶ. ಹದಿಮೂರನೇ ಶತಮಾನದ ಮಧ್ಯಭಾಗದಲ್ಲಿ ದಕ್ಷಿಣ ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಅನೇಕ ರಾಜಕೀಯ ಪಲ್ಲಟಗಳು ಕಾಣಿಸಿಕೊಂಡವು. ದೇವಗಿರಿಯ ಯಾದವರು, ವಾರಂಗಲ್ಲಿನ ಕಾಕತೀಯರು, ಹೊಯ್ಸಳರು, ಪಾಂಡ್ಯರು, ಕುಮ್ಮಟದುರ್ಗದ ನಾಯಕರು ಮೊದಲಾದ ಸಾಮ್ರಾಜ್ಯ ಮತ್ತು ಸಂಸ್ಥಾನಗಳು ದೆಹಲಿ ಸುಲ್ತಾನರ ದಾಳಿಗಳಿಗೆ ಸಿಲುಕಿ ತಮ್ಮ ಅಸ್ತಿತ್ವವನ್ನು ಕಳೆದುಕೊಂಡವು. ಮಹಮದ್-ಬಿನ್-ತುಘಲಕನ ಸತತ ದಾಳಿಗಳಿಗೆ ಈಡಾದ ಈ ರಾಜ್ಯಗಳು ದೆಹಲಿ ಸುಲ್ತಾನರ ಸಾರ್ವಭೌಮತ್ವಕ್ಕೆ ತಲೆಬಾಗಿದವು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ತುಂಗಭದ್ರ ನದಿ ದಂಡೆಯ ಮೇಲೆ ವಿಶ್ವ ವಿಖ್ಯಾತವಾದ ವಿಜಯನಗರ ಸಾಮ್ರಾಜ್ಯವು ತಲೆ ಎತ್ತಿತ್ತು. ಈ ಸಾಮ್ರಾಜ್ಯವು ತನ್ನ ಶಕ್ತಿ ಸಾಮರ್ಥ್ಯಗಳಿಂದ ಮುಂದೆ ಇಡೀ ದಕ್ಷಿಣ ಭಾರತದ ಬಹುತೇಕ ಪ್ರದೇಶಗಳನ್ನು ತನ್ನ ಆಡಳಿತದ ವ್ಯಾಪ್ತಿಗೆ ಒಳಪಡಿಸಿಕೊಂಡಿತು. ಇಂದಿನ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಹಾಗೂ ಕೇರಳ ಹೀಗೆ ದ್ರಾವಿಡ ಭಾಷಾ ನಾಡುಗಳನ್ನೆಲ್ಲ ಒಂದೇ ಕೇಂದ್ರದ ಆಡಳಿತ ವ್ಯವಸ್ಥೆಗೆ ಒಳಪಟ್ಟಿತ್ತು. ಕೇಂದ್ರದಲ್ಲಿ ಬಲಿಷ್ಠವಾದ ಕೇಂದ್ರ ಸರಕಾರವಿದ್ದರೆ ಪ್ರಾಂತ್ಯಗಳಲ್ಲಿ ರಾಜ್ಯಪಾಲರುಗಳ ಹಾಗೂ ಸ್ಥಳೀಯ ನಾಯಕರುಗಳನ್ನು ಒಳಗೊಂಡ ಪ್ರಾಂತೀಯ ಸರಕಾರ ಅಸ್ತಿತ್ವದಲ್ಲಿತ್ತು. ವಿಜಯನಗರ ಸಾಮ್ರಾಜ್ಯದ ಆಡಳಿತ ಪದ್ಧತಿಯಲ್ಲಿ ಕಂಡುಬರುವ ಈ ಸ್ಥಳೀಯ ನಾಯಕರು ತಮ್ಮದೇ ಆದ ಹುದ್ದೆ ಶ್ರೇಣೀಕೃತ ಅಧಿಕಾರ ವ್ಯವಸ್ಥೆಯನ್ನು ಹೊಂದಿದ್ದು ವಿಜಯನಗರದ ಅರಸರಿಗೆ ಅತ್ಯಂತ ನಿಕಟರಾಗಿದ್ದರು. ಹೊರಗಿನ ಶತ್ರುಗಳ ದಾಳಿಯನ್ನು ಹಿಮ್ಮೆಟ್ಟಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿ ವಿಜಯನಗರಕ್ಕೆ ರಕ್ಷಣಾ ತಡೆಗೋಡೆಗಳಂತೆ ಕಾರ್ಯವನ್ನು ನಿರ್ವಹಿಸುತ್ತಿದ್ದರು. ದಕ್ಷಿಣ ಭಾರತದಾದ್ಯಂತ ಜನಪ್ರಿಯವಾಗಿದ್ದ ಅಮರನಾಯಕ ಪದ್ಧತಿಯನ್ನು ವಿಶ್ಲೇಷಿಸುವ ಮುನ್ನ ಅಮರನಾಯಕ ವ್ಯವಸ್ಥೆಯನ್ನು ಕುರಿತು ಅಧ್ಯಯನಗಳನ್ನು ಕೈಗೊಂಡ ವಿದ್ವಾಂಸರು "ಅಮರನಾಯಕ" ಪದ ಪ್ರಯೋಗ ಮಾಡಿದ ರೀತಿ ಹಾಗೂ ಅರ್ಥೈಸಿಕೊಂಡ ಬಗೆಯನ್ನು ವಿಶ್ಲೇಷಣೆ ಮಾಡುವುದು ಅತ್ಯಂತ ಸೂಕ್ತ.

೨.೧. ಅಮರನಾಯಕ ಪದದ ಅರ್ಥ ಮತ್ತು ವ್ಯಾಖ್ಯೆಗಳು

ವಿಜಯನಗರ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಜಾರಿಯಲ್ಲಿದ್ದ ಅಮರನಾಯಕ ಪದ್ಧತಿಯು ವಿಜಯನಗರೋತ್ತರ ಕಾಲದಲ್ಲಿ ಪಾಳೆಯಗಾರರ ಪದ್ಧತಿಯಾಗಿ ರೂಪುಗೊಂಡಿತು. ವಿಜಯನಗರ ಕಾಲದಲ್ಲಿ ರೂಢಿಯಲ್ಲಿದ್ದ ಅಮರನಾಯಕ, ಅಮರನಾಯಕತನ, ನಾಯಕ, ನಾಯಕತನ ಪದಗಳನ್ನು ವಿಶ್ಲೇಷಿಸುವ ಮುನ್ನ ಅಮರಂ ಎಂಬ ಪದದ ಅರ್ಥವನ್ನು ಗಮನಿಸಬೇಕಾಗುತ್ತದೆ.

ಸಾಮಾನ್ಯವಾಗಿ 'ಅಮರಂ' ಎಂಬ ಪದಕ್ಕೆ ಶಾಶ್ವತ ಎಂಬ ಅರ್ಥವಿದ್ದು ವಿಜಯನಗರ ಕಾಲದ ಶಾಸನಗಳಲ್ಲಿ ಈ ಶಬ್ದವು ವಿಶೇಷವಾಗಿ ಕಾಣಿಸಿಕೊಳ್ಳುತ್ತದೆ. ಇದನ್ನು ನಿರ್ದಿಷ್ಟ ಅರ್ಥದಲ್ಲಿ ಬಳಸಲಾಗಿದೆ.[೧] ವಿಜಯನಗರ ಕಾಲದ ಬಹುತೇಕ ಶಾಸನಗಳು ಅಮರಂ, ಅಮರ ಮಾಗಣಿ[೨], ಅಮರ ಅಂಬಲಿ[೩], ಅಮರ ಪಡೆಯ[೪], ಅಮರ ಮಹಲೆ[೫] ಅಮರ ನಾಯಕತನ ಎಂಬ ವಿವಿಧ ಹೆಸರುಗಳನ್ನು ದಾಖಲಿಸಿವೆ. ಅಮರನಾಯಕ ಪದದ ಪ್ರಾಚೀನತೆಯನ್ನು ಗುರುತಿಸುವುದಾದರೆ ಕಾಳಿದಾಸನು ಬರೆದ ಅಭಿಜ್ಞಾನ ಶಾಕುಂತಲಾ ನಾಟಕದಲ್ಲಿ ದುಷ್ಯಂತನನ್ನು ನಾಯಕನೆಂದು, ಶಕುಂತಲೆಯನ್ನು ನಾಯಕಿ ಎಂದು, ಭರತನನ್ನು ಅಮರನಾಯಕನೆಂದು ಕರೆಯಲಾಗಿದೆ.[೬] ವಿಜಯನಗರ ಕಾಲದ ಸಂಗಮ ವಂಶದ ಬುಕ್ಕರಾಯನ ಕಾಲದ ಶಾಸನಗಳಲ್ಲಿ ಅಮರೆಯ ನಾಯಕರು, ಅಮರನಾಯಕರು, ಅಮರನಾಯಕ ಎಂಬ ಪದಗಳು ಶಾಸನೋಕ್ತವಾಗಿವೆ.[೭] ಅಮರ ಎಂಬ ಪದದ ಅರ್ಥವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ ಪರಿಶೀಲಿಸಿದಾಗ 'ಅಮರ; ಎಂದರೆ ಹಾಲು, ಬೆಣ್ಣೆ, ಮೊಸರು ಮುಂತಾದ ಕ್ಷೀರ ವಸ್ತುಗಳು; ಹಾಲು ಬೆಣ್ಣೆ ಮುಂತಾದ ವಸ್ತುಗಳನ್ನು ಒದಗಿಸುವುದಕ್ಕಾಗಿ ಬಿಟ್ಟ ಗ್ರಾಮ; ರಾಜನು ತನಗೆ ಬೇಕಾದ ಯೋಧರನ್ನು ಸೈನ್ಯ ಸಾಮಗ್ರಿಗಳನ್ನು ಒದಗಿಸಿಕೊಡುವುದಕ್ಕಾಗಿ ತನ್ನ ಪ್ರದೇಶದ ನಾಯಕರಿಗೆ ಇನಾಮಾಗಿ ಕೊಟ್ಟ ಗ್ರಾಮ ಅಥವಾ ಗ್ರಾಮ ಸಮೂಹ ಎನ್ನುತ್ತಾರೆ. ಪ್ರೊ. ಲಕ್ಷ್ಮಣ್ ತೆಲಗಾವಿ[೮] ವಿಜಯನಗರ ಕಾಲದ ಅಮರನಾಯಕ ವ್ಯವಸ್ಥೆಯನ್ನು ಕುರಿತು ಆರಂಭಿಕವಾಗಿ ಅಧ್ಯಯನ ಮಾಡಿದ ವೆಂಕಟರಮಣಯ್ಯನವರಿಂದ ಹಿಡಿದು ಆಧುನಿಕ ವಿದ್ವಾಂಸರಾದ ಸಿಂಥಿಯಾ ಟಾಲ್ಬಾತ್ ಮತ್ತು ಡಿ.ಎನ್ ಯೋಗಿಶ್ವರಪ್ಪನವರೆಗೂ ಅಮರಂ ಎಂಬ ಪದವನ್ನು ಭೂ ಹಿಡುವಳಿ ಎಂಬ ಅರ್ಥದಲ್ಲಿ ಬಳಸಿರುವುದು ಕಂಡುಬರುತ್ತದೆ.

ವೆಂಕಟರಮಣಯ್ಯನವರು Studies in the history of the Third Dynasty of Vijayanagara ಎಂಬ ಕೃತಿಯಲ್ಲಿ ಅಮರನಾಯಕತನ ಶಬ್ದವನ್ನು ಈ ರೀತಿ ಅರ್ಥೈಸಿದ್ದಾರೆ. Amara+nayaka+Thana ಎಂದರೆ ಭೂದತ್ತಿ, ನಾಯಕ ಎಂದರೆ ಮುಖಂಡತನ thana ಎಂದರೆ ಕಛೇರಿ ಎಂದು ಪದಗಳ ಅರ್ಥವನ್ನು ಬಿಡಿಸಿ ಹೇಳಿದ್ದಾರೆ.[೯] ವೆಂಕಟರಮಣಯ್ಯನವರನ್ನೇ ಅನುಸರಿಸುವ ಡಿ.ಎನ್. ಯೋಗಿಶ್ವರಪ್ಪನವರು ತಮ್ಮ ಮಧ್ಯಕಾಲೀನ ಕರ್ನಾಟಕದ ಪಾಳೆಯಗಾರರು ಎಂಬ ಕೃತಿಯಲ್ಲಿ ಅಮರನಾಯಕತನ ಎಂಬ ಪದವು ಅಮರ+ನಾಯಕ+ತನ ಎಂಬ ಪದಗಳ ಮಿಶ್ರಣವಾಗಿದೆ. ಅಮರ ಎಂದರೆ ರಾಜ ಅಥವಾ ಚಕ್ರವರ್ತಿಯು ಕೆಲವು ಷರತ್ತುಗಳ ಮೇಲೆ ಒಬ್ಬ ವ್ಯಕ್ತಿಗೆ

(ದತ್ತಿಯಾಗಿ) ನೀಡಿದ ಭೂಪ್ರದೇಶ ಎನ್ನುವರು. ನಾಯಕ ಎಂದರೆ ಮುಂದಾಳು, ಮುಖಂಡತನ, ತನ ಎಂದರೆ ಕಛೇರಿ? ಇರಬಹುದು ಎಂದಿದ್ದಾರೆ.[೧೦]

ನೊಬರೋ ಕರಾಷಿಮಾ ಅವರು Nayakkattanam and Sirmai on the Vijaynagara inscriptions In Tamilnadu ಎಂಬ ಲೇಖನದಲ್ಲಿ ಅಮರನಾಯಕತನ ಪದವನ್ನು ಈ ರೀತಿ ವಿಶ್ಲೇಷಿಸಿದ್ದಾರೆ. The Term amara meaning 'fighting' is Prefired to nayakkatanam as amara nayakkatanam, indicating the military charater of nayakkattanam ಎಂದಿದ್ದಾರೆ.[೧೧] ಕರಾಷಿಮಾ ಅವರು ಅಮರ ಎಂಬ ಪದವನ್ನು ಯುದ್ಧ ಮಾಡುವ ಅರ್ಥದಲ್ಲಿ ಬಳಸಿದ್ದು ಅಮರನಾಯಕತನ ಎನ್ನುವುದು ಮಿಲಿಟರಿ ಲಕ್ಷಣಗಳನ್ನು ಒಳಗೊಂಡಿದೆ ಎನ್ನುತ್ತಾರೆ" ವೈ. ಸುಬ್ಬರಾಯಲು ಅವರು ಅಮರಂ ಎನ್ನುವುದು ಸಾಮಾನ್ಯವಾಗಿ ಕೆಳಹಂತದ ನಾಯಕನನ್ನು ಮತ್ತು ಅವನ ಕಡಿಮೆ ಭೂಪ್ರದೇಶವನ್ನು ಹೇಳುತ್ತದೆ ಎಂದಿದ್ದಾರೆ[೧೨] ಸಿಂಥಿಯಾ ಟಾಲ್ಬಾತ್ ಅವರು ಸಾಮಾನ್ಯವಾಗಿ ನಾಯಂಕರ ಹಕ್ಕುಗಳು ಸೀಮೆಗೆ ಅನ್ವಯಿಸಿದರೆ, ಅಮರವು ಒಂದು ಗ್ರಾಮದ ಸಂಬಂಧದಲ್ಲಿ ಕಾಣಿಸಿಕೊಳ್ಳುತ್ತದೆ ಎಂದಿದ್ದಾರೆ. ಇವರ ದೃಷ್ಟಿಯಲ್ಲಿ ಅಮರಂ ಎನ್ನುವುದು ನಾಯಕ ತನ್ನ ಅಧೀನದಲ್ಲಿರುವವರಿಗೆ ನೀಡುವ ಉಂಬಳಿಗೆ ಸಂಬಂಧಿಸಿದ್ದರೆ, ನಾಯಂಕರ ಎನ್ನುವುದು ರಾಜನಿಂದ ನೇರವಾಗಿ ಉಂಬಳಿ ಪಡೆದ ನಾಯಕನಿಗೆ ನಿರ್ದೇಶಿಸುತ್ತಾರೆ. ಆದ್ದರಿಂದ ನಾಯಕ ಮತ್ತು ಅಮರನಾಯಕರ ನಡುವೆ ಸ್ವಲ್ಪಮಟ್ಟಿನ ಭಿನ್ನತೆ ಕಂಡುಬರುತ್ತದೆ.[೧೩] ಆದರೆ ವಿಜಯನಗರ ಕಾಲದ ಶಾಸನಗಳನ್ನು ಪರಿಶೀಲಿಸಿದಾಗ ಸುಬ್ಬರಾಯಲು ಮತ್ತು ಸಿಂಥಿಯಾ ಟಾಲ್ಬಾತ್ ಅವರ ಅಭಿಪ್ರಾಯಗಳನ್ನು ಬದಿಗಿರಿಸಬೇಕಾಗುತ್ತದೆ. ಕಾರಣ ವಿಜಯನಗರ ಕಾಲದ ಬಹುತೇಕ ಅಮರ ನಾಯಕರು ನೇರವಾಗಿ ವಿಜಯನಗರದ ಅರಸರಿಂದಲೇ ಅಮರನಾಯಕತನಕ್ಕೆ ಸೀಮೆಗಳನ್ನು ಪಡೆದುಕೊಂಡಿರುವುದು ಶಾಸನೋಕ್ತವಾಗಿದೆ. ಉದಾ: ಹಾಗಲವಾಡಿ ನಾಯಕರ ಚಿಕ್ಕನಾಯಕನಹಳ್ಳಿಯ ಭೈರಪ್ಪ ನಾಯಕನ ಕಾಲದ ತಾಮ್ರ ಶಾಸನವೊಂದು ಕ್ರಿ.ಶ. ೧೬೪೯ಕ್ಕೆ ಸಂಬಂಧಿಸಿದ್ದು, ಶಾಸನದಲ್ಲಿ ಶ್ರೀವೀರ ಪ್ರತಾಪ ವೆಂಕಟಪತಿದೇವಮಹಾರಾಯರು ಪೆನಗೊಂಡೆಯಲ್ಲಿ ಆಳುತ್ತಿರುವಾಗ ಗೋವುಲ ಗೋತ್ರದ ಸಾಲಿನಾಯಕ ಭೈರಪ್ಪ ನಾಯಕರಿಗೆ ಅಮರನಾಯಕತನಕ್ಕೆ ಪಾಲಿಸಿದ ಹೊಯ್ಸಳ ದೇಶದ ಯತಿಕಟ್ಟಿ ಎಂಬ ವಿವರಗಳು ಶಾಸನದಲ್ಲಿ ದಾಖಲುಗೊಂಡಿವೆ.[೧೪] ಸಂತೆಬೆನ್ನೂರು ನಾಯಕರ ಗರಗ ಗ್ರಾಮದ ಶಿಲಾಶಾಸನದಲ್ಲಿ ಶ್ರೀವೀರ ವೆಂಕಟಪತಿ ದೇವ ಮಹರಾಯರು ಸಂತೆಬೆನ್ನೂರ ವೀರಹನುಮಪ್ಪ ನಾಯಕರಿಗೆ ಅಮರನಾಯಕತನಕ್ಕೆ ಪಾಲಿಸಿದ ಮಗರನಾಡ ವೇಂಠೆಯ ವಿವರಗಳು ಶಾಸನೋಕ್ತವಾಗಿದೆ. ಈ ಶಾಸನದ ಕಾಲಮಾನ ಕ್ರಿ.ಶ. ೧೬೩೬.[೧೫]ಆಂಧ್ರಪ್ರದೇಶದ ಮೆಹಬೂಬ್ ನಗರ ಜಿಲ್ಲೆಯ ಆಲಂಪುರ ತಾಲೂಕು ಚೆನ್ನಿಪಾಡುವಿನಲ್ಲಿ ದೊರೆತಿರುವ ಕೃಷ್ಣದೇವರಾಯನ ಕಾಲದ ಶಾಸನವೊಂದು ಅಣ್ಣಾಜಿ ಅಯ್ಯನವರ ಮಗ ಚಂದ್ರಶೇಖರಯ್ಯನ ತಮ್ಮನಾದ ದೀಕ್ಷಿತಯ್ಯನವರಿಗೆ ಶ್ರೀಕೃಷ್ಣದೇವರಾಯನು ಅಲಂಪುರ ಸೀಮೆಯನ್ನು ಅಮರನಾಯಕತನಕ್ಕೆ ಪಾಲಿಸಿದನು. ಈ ಶಾಸನದ ಕಾಲಮಾನ ಕ್ರಿ.ಶ. ೧೫೨೯.[೧೬] ಕ್ರಿ.ಶ. ೧೬೩೮ನೇ ಸಂವತ್ಸರದ ಅರವೀಡು ಮನೆತನದ ರಾಮದೇವ

ಮಹಾರಾಯನ ಕಾಲದ ಶಾಸನವೊಂದು ಮಂಡ್ಯ ಜಿಲ್ಲೆಯಲ್ಲಿ ದೊರೆತಿದ್ದು, ಈ ಶಾಸನದಲ್ಲಿ ವಿಜಯನಗರದ ಅರಸ ರಾಮದೇವ ಮಹಾರಾಯರು ಜಗದೇವರಾಯನಿಗೆ ಅಮರಕ್ಕೆ ನೀಡಿದ ಹೊಯ್ಸಳ ನಾಡಿನ ವಿವರಗಳಿವೆ.[೧೭]

ಅರವೀಡು ಮನೆತನದ ವೆಂಕಟಪತಿದೇವನ ಸಿರುಗುಪ್ಪದ ಶಾಸನವೊಂದು ಹಂಡೆ ಹನುಮನಾಯಕ ಅಂಕುಸರಾಯನು ವೆಂಕಟಪತಿ ದೇವನಿಂದ ಅಮರ ಮಾಗಣಿಯಾಗಿ ಪಡೆದಿದ್ದ ಬಳ್ಳಾರಿ ಸೀಮೆಯ ವಿವರಗಳನ್ನು ಒಳಗೊಂಡಿದೆ.[೧೮]

ಈ ಮೇಲಿನ ಶಾಸನಗಳನ್ನು ಪರಿಶೀಲಿಸಿದಾಗ ಶಾಸನಗಳಲ್ಲಿ ಉಕ್ತವಾಗಿರುವ ನಾಯಕರು ನೇರವಾಗಿ ವಿಜಯನಗರದ ಅರಸರಿಂದಲೇ ಅಮರನಾಯಕತನವನ್ನು ಪಡೆದುಕೊಂಡಿರುವುದು ಸ್ಪಷ್ಟವಾಗುತ್ತದೆ. ಹೀಗಾಗಿ ನಾಯಕತನಕ್ಕೂ ಅಮರನಾಯಕತನಕ್ಕೂ ಯಾವುದೇ ವ್ಯತ್ಯಾಸವಿಲ್ಲವೆಂದು ಖಚಿತವಾಗಿ ಹೇಳಬಹುದು. ಇನ್ನು ಸುಬ್ಬರಾಯಲು ಅವರ ಹೇಳಿಕೆಯನ್ನು ವಿಶ್ಲೇಷಿಸುವುದಾದರೆ ಅಮರಂ ಎನ್ನುವುದು ಸಾಮಾನ್ಯವಾಗಿ ಕೆಳಹಂತದ ನಾಯಕನನ್ನು ಮತ್ತು ಕಡಿಮೆ ಭೂಪ್ರದೇಶವನ್ನು ಸಂಕೇತಿಸುತ್ತದೆ ಎನ್ನುವುದಾದರೆ, ವಿಜಯನಗರದವರಿಂದ ಅಮರನಾಯಕತನವನ್ನು ಪಡೆದುಕೊಂಡಿದ್ದ ಕೆಳದಿ, ಚಿತ್ರದುರ್ಗ, ಯಲಹಂಕ ಮೊದಲಾದ ನಾಯಕರು ಮೊದಲ ದರ್ಜೆಯ ಅಮರನಾಯಕರಾಗಲು ಸಾಧ್ಯವಾಗುತ್ತಿರಲಿಲ್ಲ. ಇಲ್ಲಿ ಭೂಪ್ರದೇಶಗಳ ವಿಸ್ತೀರ್ಣ ನಾಯಕರಿಗಿದ್ದ ಅಧಿಕಾರ ಮತ್ತು ಸ್ಥಾನಮಾನವನ್ನು ಗಮನಿಸಿದಾಗ ಸುಬ್ಬರಾಯಲು ಅವರ ಅಭಿಪ್ರಾಯವನ್ನು ಬದಿಗೊತ್ತಬೇಕಾಗುತ್ತದೆ. ಒಟ್ಟಿನಲ್ಲಿ ಅಮರ, ಅಮರನಾಯಕತನ ಎನ್ನುವುದು ಯಾವುದೇ ರೀತಿಯ ಕೆಳಹಂತದ ನಾಯಕರನ್ನು ಸಂಕೇತಿಸುವುದಿಲ್ಲವೆಂದು ಸ್ಪಷ್ಟವಾಗುತ್ತದೆ. ವಿಜಯನಗರದ ಆರಂಭದ ದೊರೆಗಳಾದ ಸಂಗಮ ವಂಶದ ಬುಕ್ಕರಾಯನ ಕಾಲದಿಂದ ಅರವೀಡು ಮನೆತನದ ರಂಗರಾಯನ ಕಾಲದವರೆಗಿನ ಶಾಸನಗಳಲ್ಲಿ ಅಮರನಾಯಕತನ ಅಮರಂ, ಅಮರ ಮಾಗಣಿ, ಅಮರ, ಅಂಬಲಿ, ಅಮರ ಮಹಲೆ, ಅಮರ ದಣಯಂಕ ಎಂಬ ಪದಗಳು ಶಾಸನೋಕ್ತವಾಗಿವೆ. ವಿಜಯನಗರ ಕಾಲದಲ್ಲಿ ಅಮರನಾಯಕತನ, ನಾಯಕತನಗಳ ನಡುವೆ ಯಾವುದೇ ವ್ಯತ್ಯಾಸಗಳು ಕಂಡು ಬರುವುದಿಲ್ಲ. ಆರಂಭ ಕಾಲದ ಸಂಗಮ, ಸಾಳ್ವ, ತುಳುವ ವಂಶದವರ ಕಾಲದಲ್ಲಿ ಅಮರನಾಯಕತನ, ನಾಯಕತನ ಪದಗಳು ಬಳಸಲ್ಪಟ್ಟಿವೆ. ಅರವೀಡು ಮನೆತನದ ಶಾಸನಗಳಲ್ಲಿ ಅಮರನಾಯಕತನ, ನಾಯಕತನ ಪದಗಳ ಜೊತೆಯಲ್ಲಿಯೇ ಪ್ರಭುತನ, ದೊರೆತನ ಎಂಬ ಪದಗಳು ಬಳಕೆಯಾಗಿವೆ. ಒಟ್ಟಿನಲ್ಲಿ ವಿಜಯನಗರ ಕಾಲದಲ್ಲಿ ನಾಯಕತನ ಪದವು ರೂಢಿತವಾಗಿ ಜನಪ್ರಿಯವಾಗಿರುವುದರಿಂದ ಶಾಸನಗಳಲ್ಲಿ ನಾಯಕತನ ಪದವೇ ಹೆಚ್ಚಾಗಿ ಬಳಕೆಯಾಗಿದೆ. ಅಮರವೆಂದರೆ ಶಾಶ್ವತವಾದ ಉಂಬಳಿ, ಅಮರವೆಂದರೆ ಭೂಹಿಡುವಳಿ, ರಾಜನಿಂದ ಸೈನಿಕ ಸೇವೆಯನ್ನು ಒದಗಿಸುವ ಷರತ್ತಿನ ಮೇಲೆ ಭೂಮಿಯನ್ನು ಪಡೆಯುತ್ತಿದ್ದವನನ್ನು ಅಮರನಾಯಕನೆಂದು ಪರಿಗಣಿಸಿದ್ದಾರೆ. ವಿಜಯನಗರ ಕಾಲದಲ್ಲಿ ಶಾಸನೋಕ್ತವಾಗಿರುವ ಅಮರಂ, ಅಮರ ಮಾಗಣಿ· ಅಮರ ಅಂಬಲಿ, ಅಮರ

ಪಡೆಯ, ಅಮರ ಮಹಲೆ, ಅಮರ ದಂಡನಾಯಕ ಅಮರ ನಾಯಕತನ ಪದಗಳನ್ನು ಪರಿಶೀಲಿಸುವುದಾದರೆ, ಅಮರ ಎಂದರೆ ರಾಜನು ತನಗೆ ಬೇಕಾದ ಯೋಧರನ್ನು, ಸೈನ್ಯ ಸಾಮಾಗ್ರಿಗಳನ್ನು ಒದಗಿಸಿಕೊಡುವುದಕ್ಕಾಗಿ ತನ್ನ ಪ್ರಾದೇಶಿಕ ನಾಯಕರಿಗೆ ಇನಾಮಾಗಿ ಕೊಟ್ಟ ಗ್ರಾಮ ಅಥವಾ ಗ್ರಾಮಗಳ ಸಮೂಹವೆಂದು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಅರ್ಥೈಸುತ್ತದೆ.[೧೯] ಅಮರನಾಯಕ ಎಂದರೆ ಒಂದು ಸಾವಿರ ಕಾಲುಗಳ ಮೇಲಿನ ಒಡೆತನವನ್ನು ಹೊಂದಿರುವವನು ಎಂದರ್ಥ. ಒಟ್ಟಿನಲ್ಲಿ ವಿಜಯನಗರ ಕಾಲದಲ್ಲಿ ಅಮರನಾಯಕನೆಂದರೆ ವಿಜಯನಗರ ಅರಸನಿಂದ ಪ್ರಾದೇಶಿಕ ಮಟ್ಟದಲ್ಲಿ ಸೇನಾ ನಾಯಕತ್ವವನ್ನು ಪಡೆದವನು ಎಂದು ಅರ್ಥೈಸಬಹುದು. ವಿಜಯನಗರ ಕಾಲದ ಶಾಸನಗಳು ವಿಜಯನಗರ ಅರಸರು ಅಮರನಾಯಕರಿಗೆ ನೀಡಿದ ಅಮರಂಗಳ ವಿವರ, ಸೀಮೆಗಳ ವಿವರಗಳನ್ನು ನೀಡುತ್ತವೆ. ಅಮರನಾಯಕ ಎಂಬ ಶಬ್ದವು ಮೂಲತಃ ಪರ್ಶಿಯನ್ ಮತ್ತು ಅರಾಬಿಕ್ ಶಬ್ಧವಾದ 'ಆಮಿರಾ' ನಿಷಾದ್' ಎಂಬ ಪದದಿಂದ ಬಂದಿದೆ. ಆಮಿರನೊಬ್ಬನು ನೂರು ಮಂದಿ ಸೈನಿಕರನ್ನು ಇಟ್ಟುಕೊಂಡು ವ್ಯವಹಾರ ನಡೆಸುವುದಕ್ಕಾಗಿ ಪಡೆಯುವ ಉಂಬಳಿ ಅದುವೇ 'ಅಮರನಾಯಕತನ' ಇದನ್ನು 'ಅಮರ ಮಾಗಣಿ' ಎಂದು ಅಮರಂ ಎಂದು ಕರೆಯುತ್ತಿದ್ದರು. "Amaram" A grant of revenue by the prince or a palegar on condition of service, generally military or police.[20]

ಇಂತಹ ಸೇನಾ ನಾಯಕರಿಗೆ ವಿಜಯನಗರದ ಅರಸರು ಸಂಬಳಕ್ಕೆ ಪ್ರತಿಯಾಗಿ ಭೂ ಹಿಡುವಳಿಗಳನ್ನು ದಾನವಾಗಿ ನೀಡುತ್ತಿದ್ದರು. ರಾಜನಿಂದ ಭೂಮಿಯನ್ನು ದಾನವಾಗಿ ಸ್ವೀಕರಿಸಿದ ನಾಯಕನು ಅದಕ್ಕೆ ಪ್ರತಿಯಾಗಿ ರಾಜನಿಗಾಗಿ, ಸೈನಿಕ ಸೇವೆಯನ್ನು ಸಲ್ಲಿಸಬೇಕಿತ್ತು. ಹಾಗೂ ತಮ್ಮ ಪ್ರದೇಶದ ಕಂದಾಯದ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತು ಕೃಷಿ ಉತ್ಪನ್ನದ ಮೇಲೆ ಕಂದಾಯವನ್ನು ವಿಧಿಸುವ, ವಸೂಲಿ ಮಾಡುವ ಹಾಗೂ ನಿರ್ದಿಷ್ಟ ಮೊತ್ತದ ಹಣವನ್ನು ವಿಜಯನಗರದ ಅರಸನಿಗೆ ಸಲ್ಲಿಸುವ ಜವಾಬ್ದಾರಿಯನ್ನು ಹೊರಬೇಕಿತ್ತು. ಅಮರನಾಯಕ ಪದ್ಧತಿಯ ರಾಜಕೀಯ ಸಾರವು ಭೂಮಿಯ ತಳಹದಿಯ ಮೇಲೆ ಪ್ರಾದೇಶಿಕ ಆಡಳಿತವನ್ನು ರೂಪಿಸಿದರೆ ಆದರ ಆರ್ಥಿಕಾಂಶವು ರೈತರು ಉತ್ಪಾದಿಸುವ ಕೃಷಿ ಸಂಪತ್ತಿನ ಮೇಲೆ ಆಧರಿಸಿ ನಿಂತಿತ್ತು. ಕೃಷಿ ಚಟುವಟಿಕೆಗಳು ವಿಸ್ತರಿಸಿದಂತೆ ಪ್ರಾದೇಶಿಕ ಮಟ್ಟದಲ್ಲಿ ರೈತರಿಂದ ಕಂದಾಯ ವಸೂಲಿ ಮಾಡುವ ಅಮರನಾಯಕರು ಆರ್ಥಿಕವಾಗಿ ಬಲಾಢ್ಯರಾಗುತ್ತಿದ್ದರು. ಹಾಗೂ ವಿಜಯನಗರದ ಅರಸರಿಗೆ ವಾರ್ಷಿಕ ಪೊಗಾದಿಯನ್ನು ಸಲ್ಲಿಸುತ್ತ ವಿಜಯನಗರ ಸಾಮ್ರಾಜ್ಯದ ಸಂಪತ್ತಿನ ಕ್ರೋಢೀಕರಣಕ್ಕೆ ಕಾರಣರಾದರು. ವಿಜಯನಗರ ಕಾಲದ ಅಮರನಾಯಕ, ಅಮರನಾಯಕತನ, ನಾಯಕ, ನಾಯಕತನ ವ್ಯವಸ್ಥೆಯನ್ನು ಕುರಿತು ದೇಶಿ ಮತ್ತು ವಿದೇಶಿ ವಿದ್ವಾಂಸರು ವಿವಿಧ ರೀತಿಯ ವ್ಯಾಖ್ಯೆಗಳನ್ನು ನೀಡಿದ್ದು ಅವುಗಳನ್ನು ಈ ಕೆಳಗಿನಂತೆ ಪರಿಶೀಲಿಸಬಹುದು.

ದೇಶಿ ವಿದ್ವಾಂಸರ ವ್ಯಾಖ್ಯಾನಗಳು

ವೆಂಕಟರಮಣಯ್ಯ: "ಒಂದು ನಿಗದಿಯಾದ ಆದಾಯವನ್ನು ತರುತ್ತಿದ್ದ ಪ್ರದೇಶವನ್ನು ಒಬ್ಬ ಸೈನಿಕ ನಾಯಕನಿಗೆ ವಿಜಯನಗರದ ಅರಸರು ದಾನವಾಗಿ ನೀಡುತ್ತಿದ್ದ ವ್ಯವಸ್ಥೆಯೇ ಅಮರನಾಯಕ ಪದ್ಧತಿ"[೨೧]

ಸಾಲೆತ್ತೂರ್: "ದಂಡನಾಯಕರ ಅಧೀನಕ್ಕೆ ಒಳಪಟ್ಟಿರುವ ಇತರೆ ಅಧಿಕಾರಿ ವರ್ಗವನ್ನು ನಾಯಕ ಎಂದು ಕರೆಯಬಹುದು"[೨೨]

ಎ.ವಿ ವೆಂಕಟರತ್ನಂ "ರಾಜನು ಒಬ್ಬ ನಾಯಕ ಅಥವಾ ಪಾಳೆಯಗಾರರಿಗೆ ಸೈನಿಕ ಷರತ್ತಿನ ಮೇಲೆ ಭೂಮಿಯನ್ನು ಕೊಡುತ್ತಿದ್ದುದೇ ನಾಯಕ ಪದ್ಧತಿ."[೨೩]

ಟಿ.ವಿ ಮಹಾಲಿಂಗಂ "ಸಾಮ್ರಾಜ್ಯದ ಭೂಮಿ ಎಲ್ಲವೂ ರಾಜನಿಗೆ ಸೇರಿದ್ದು; ಅವನು ತನ್ನನ್ನು ಅವಲಂಬಿಸಿದವರಿಗೆ ಅದನ್ನು ಹಂಚುತ್ತಿದ್ದನು. ಹಾಗೇ ಭೂಮಿಯನ್ನು ರಾಜನಿಂದ ಪಡೆದುಕೊಂಡವರನ್ನು ನಾಯಕರೆಂದು ಕರೆಯುತ್ತಿದ್ದರು"[೨೪]

ಕೃಷ್ಣಸ್ವಾಮಿ ಎ: "ನಾಯಕ ಎಂಬುದು ಸೈನ್ಯದ ಮುಖಂಡನ ಹೆಸರು; ಅವನು ಭೂಹಿಡುವಳಿ ಪ್ರದೇಶವನ್ನು ಪಡೆದಿರಬೇಕು. ವೈಯಕ್ತಿಕ ಹೆಸರಿನ ಜೊತೆಗೆ 'ನಾಯಕ' ಎಂಬ ಗೌರವಾನ್ವಿತ ಪದವು ಸೇರಿರಬೇಕು."[೨೫]

ಲಕ್ಷ್ಮಣ್ ತೆಲಗಾವಿ: "ಅಮರವೆಂದರೆ ಅರಸರಿಗೆ ನಿರ್ದಿಷ್ಟ ಸಂಖ್ಯೆಯಲ್ಲಿ ಕಾಲಾಳು, ಆನೆ, ಕುದುರೆಗಳನ್ನು ಪೂರೈಸುವ ಕರಾರಿನ ಮೇಲೆ ಒಂದು ಅಥವಾ ಹಲವು ಗ್ರಾಮಗಳನ್ನು ಉಂಬಳಿ ಹಾಕಿಕೊಡುವ ಪದ್ಧತಿಗೆ ಅಮರವೆಂದು, ಈ ಅಮರವನ್ನು ಪಡೆದವರನ್ನು ಅಮರನಾಯಕರೆಂದು ಕರೆಯುತ್ತಿದ್ದರು"[೨೬]

ಆರ್. ಕಾವಲಮ್ಮ: "ಅಮರನಾಯಕ ಎನ್ನುವುದು ಸೇನಾಧಿಕಾರಿಗಳ ವರ್ಗವಾಗಿದ್ದು, ರಾಜನು ಸೈನಿಕ ಷರತ್ತಿನ ಮೇಲೆ ಭೂಮಿಯನ್ನು ದಾನವಾಗಿ ನೀಡುತ್ತಿದ್ದನು. ಈ ಭೂಮಿಯನ್ನು ದಾನ ಪಡೆದ ನಾಯಕನನ್ನು ಅಮರನಾಯಕನೆಂದು ಕರೆಯುತ್ತಿದ್ದರು."[೨೭]

ಕೆ.ಎಸ್. ಶಿವಣ್ಣ "ನಾಯಕ ಅಥವಾ ಅಮರನಾಯಕರೆಂದರೆ ವಿಜಯನಗರದ ಸಾರ್ವಭೌಮರಿಂದ ಗೇಣಿ ಪಡೆದ ಗೇಣಿದಾರರು. ಈ ಗೇಣಿದಾರರನ್ನು ನಾಯಕರೆಂದು ಕರೆಯಬಹುದು.[೨೮]

ಡಿ.ಎನ್. ಯೋಗೀಶ್ವರಪ್ಪ: "ನಾಯಕತನಕ್ಕಾಗಿ ರಾಜನಿಂದ ಭೂಮಿಯನ್ನು ಪಡೆದು ಅವನ ನಿಯಂತ್ರಣದಲ್ಲಿ ತನಗೆ ವಹಿಸಿದ ಪ್ರದೇಶದಲ್ಲಿ ಸಣ್ಣ ರಾಜರಂತೆ ಆಳ್ವಿಕೆ ಮಾಡುತ್ತಿದ್ದವರನ್ನು ನಾಯಕರು ಎಂದು ಕರೆಯಬಹುದು. ವೈಯಕ್ತಿಕ ಹೆಸರಿನ ಜೊತೆ ನಾಯಕ ಪದ ಸೇರಿದವರೆಲ್ಲ ನಾಯಕರಾಗುವುದಿಲ್ಲ.[೨೯]

ವಿದೇಶಿ ವಿದ್ವಾಂಸರ ವ್ಯಾಖ್ಯಾನಗಳು

ಜೆ.ಡಿ.ಎಂ.ಡೆಕ್ರಿಟ್. "ಹನ್ನೊಂದನೆ ಶತಮಾನದ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ನಾಯಕ ಪದವನ್ನು ಪರಿಗಣಿಸಿ ಅವರನ್ನು ಸೈನಿಕ ಸೇವೆ ನೀಡುವ ಇಂಗ್ಲೀಷರ ಕ್ಯಾಪ್ಟನ್‌ಗಳಿಗೆ ಹೋಲಿಸುತ್ತಾರೆ.[೨೦]

ಬರ್ಟನ್ ಸ್ಟೇನ್: "ನಾಯಕ ಎಂದರೆ ತನ್ನ ಆಳ್ವಿಕೆಯ ಪ್ರದೇಶದಲ್ಲಿ ಸ್ವತಂತ್ರವಾಗಿ ತನ್ನ ಎಲ್ಲ ಹಕ್ಕುಗಳನ್ನು ಚಲಾಯಿಸಬಹುದು"[೨೧]

ನೊಬಾರು ಕರಾಷಿಮಾ "ನಾಯಕ ಎಂದರೆ ಬಿರುದು, ನಾಯಕನಾದವನಿಗೆ ವಿಜಯನಗರದ ಅರಸರಿಂದ ನಾಯಕತನ ಪ್ರಾಪ್ತವಾಗಿರಬೇಕು. ಅಥವಾ ರಾಜ ಮತ್ತು ಪ್ರಜೆಗಳ ಮಧ್ಯೆ ಮಧ್ಯವರ್ತಿಯಾಗಿ ಕೆಲಸ ಮಾಡಿರಬೇಕು. ಈ ಮೂರರಲ್ಲಿ ಯಾವುದಾದೂ ಒಂದು ಅರ್ಹತೆ ಇದ್ದರೆ ಅವನನ್ನು ನಾಯಕ ಎನ್ನಬಹುದು"[೨೨]

ಒತಾ ನೊಬುಹಿರೊ "ವಿಜಯನಗರ ಸಾಮ್ರಾಜ್ಯದಲ್ಲಿ ನಾಯಕತನದ ಮೂಲಕ ಭೂ ಉಂಬಳಿ ಪಡೆದುಕೊಂಡವರಿಗೆ ನಾಯಕರೆನ್ನಬಹುದು. ವೈಯಕ್ತಿಕ ಹೆಸರಿನ ಜೊತೆಗೆ ನಾಯಕ ಪದವಿ ಇದ್ದವರೆಲ್ಲ ನಾಯಕರೆನಿಸಿಕೊಳ್ಳುವುದಿಲ್ಲ.[೨೩]

ಹೆಚ್.ಹೆಚ್. ವಿಲ್ಸನ್: "ಒಂದು ಸಾವಿರ ಕಾಲಾಳುಗಳ ಮೇಲಿನ ಅಧಿಕಾರವೇ ಅಮರವೆಂದು ವ್ಯಾಖ್ಯಾನಿಸಿದ್ದಾರೆ.[೨೪]

ಈ ಮೇಲಿನ ಎಲ್ಲ ವ್ಯಾಖ್ಯಾನಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ದೇಶಿ-ವಿದೇಶಿ ವಿದ್ವಾಂಸರು ಅಮರನಾಯಕರನ್ನು ಸೇನಾ ವಿಭಾಗದ ಮುಖಂಡ ಎಂಬುದಕ್ಕೆ ಸಹಮತವನ್ನು ವ್ಯಕ್ತ ಪಡಿಸುತ್ತಾರೆ. ಒಟ್ಟಿನಲ್ಲಿ ವಿಜಯನಗರ ಕಾಲಕ್ಕೆ ಸಂಬಂಧಿಸಿದಂತೆ ಅಮರನಾಯಕ ಹಾಗೂ ಅಮರನಾಯಕತನ ವ್ಯವಸ್ಥೆಯನ್ನು ಕುರಿತು ಈ ಕೆಳಗಿನ ತೀರ್ಮಾನಕ್ಕೆ ಬರಬಹುದು. ಅಮರನಾಯಕ ಅಥವಾ ಅಮರನಾಯಕತನವೆಂದರೆ " ವಿಜಯನಗರದ ಅರಸರು ತಮ್ಮ ಅಧಿಕಾರ ವರ್ಗ ಮತ್ತು ಊಳಿಗ ವರ್ಗದವರಿಗೆ ಸೇವಾ ಭದ್ರತೆಗಾಗಿ ದಾನವಾಗಿ ನೀಡುತ್ತಿದ್ದ ಭೂ ಹಿಡುವಳಿಗಳ ಮುಖ್ಯಸ್ಥರನ್ನು ಅಮರನಾಯಕರೆಂದು, ಈ ವ್ಯವಸ್ಥೆಯ ಸ್ವರೂಪವನ್ನು ಅಮರನಾಯಕತನವೆಂದು ಕರೆಯಬಹುದು.

೨.೨ ಅಮರನಾಯಕ ಪದ್ಧತಿಯ ಐತಿಹಾಸಿಕ ಹಿನ್ನೆಲೆ

ಅಮರನಾಯಕತನ ನೀಡುವ ಪದ್ಧತಿಯು ಯಾರಿಂದ ಆರಂಭವಾಯಿತು ಎಂಬ ವಿವಾದ ಇಂದಿಗೂ ಜೀವಂತವಾಗಿದೆ. ದಕ್ಷಿಣ ಭಾರತವನ್ನು ಆಳಿದಂತಹ ಮೌರ್ಯರಿಂದ ಹಿಡಿದು ವಿಜಯನಗರದ ಕಾಲದವರೆಗಿನ ರಾಜ್ಯಾಡಳಿತ ವ್ಯವಸ್ಥೆಯನ್ನು ಕೂಲಂಕಶವಾಗಿ ವಿಶ್ಲೇಷಿಸಿದಾಗ ಈ ಸಮಸ್ಯೆಗೆ ಉತ್ತರ ಸಿಗಬಲ್ಲದು. ಭೂಮಿಯನ್ನು ದಾನವಾಗಿ ನೀಡುವ ಪದ್ಧತಿಯು ಮೌರ್ಯರ ಕಾಲದಿಂದ ಪ್ರಚಲಿತದಲ್ಲಿದ್ದರೂ ಅದು ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ ಕಾಲದಲ್ಲಿ ವ್ಯಾಪಕವಾಗಿ ಹರಡಿತ್ತು ಎಂಬುದನ್ನು ಶಾಸನಗಳು ದೃಢೀಕರಿಸುತ್ತವೆ. ಭೂದಾನಗಳು ಹೆಚ್ಚಾದಂತೆಲ್ಲ

ಸಾಮ್ರಾಜ್ಯಗಳ ಆಡಳಿತ ಸ್ವರೂಪಗಳಲ್ಲಿ ಬದಲಾವಣೆಗಳು ಕಾಣಲಾರಂಭಿಸಿದವು. ಕೇಂದ್ರ ಸರ್ಕಾರದಿಂದ ಭೂಮಿಯನ್ನು ದಾನವಾಗಿ ಪಡೆಯುತ್ತಿದ್ದ ವರ್ಗಗಳು ಕೇಂದ್ರಕ್ಕೆ ನಿರ್ದಿಷ್ಟವಾದ ಸೇವೆಯನ್ನು ಒದಗಿಸಬೇಕಾಗಿತ್ತು. ಈ ಪರಸ್ಪರ ಕೊಟ್ಟು ತೆಗೆದುಕೊಳ್ಳುವ ಪ್ರಕ್ರಿಯೆಗಳೇ ಮುಂದೆ ವಿಜಯನಗರ ಕಾಲದಲ್ಲಿ ಪ್ರಾಂತೀಯ ಮಟ್ಟದ ಆಡಳಿತ ವ್ಯವಸ್ಥೆಯಲ್ಲಿ ಅಮರನಾಯಕತನವೆಂಬ ನೂತನ ವ್ಯವಸ್ಥೆಯೊಂದು ಹುಟ್ಟಿಕೊಳ್ಳಲು ಕಾರಣವಾಯಿತು.

ವಿಜಯನಗರ ಸ್ಥಳೀಯ ಆಡಳಿತದ ಸ್ವರೂಪವು ಆಂಧ್ರಪ್ರದೇಶದ ಕಾಕತೀಯ ಸಾಮ್ರಾಟರು ಅನುಸರಿಸಿದ ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಹೋಲುತ್ತಿದ್ದಿತೆಂದು ಇತಿಹಾಸಕಾರರು ಹೇಳುತ್ತಾರೆ.[೩೫] ಇತಿಹಾಸಕಾರರಾದ ವೆಂಕಟರಮಣಯ್ಯ ಜಿ.ಎಸ್. ದೀಕ್ಷಿತ್, ಲಕ್ಷ್ಮಣ್ ತೆಲಗಾವಿ ಮುಂತಾದವರು ವಿಜಯನಗರದ ಆರಂಭ ಅರಸರು ಕಾಕತೀಯ ಅರಸರ ಕೆಳಗೆ ಭಂಡಾರಗಳಾಗಿ ಕಾರ್ಯನಿರ್ವಹಿಸುತ್ತಿದ್ದರ ಹಿನ್ನೆಲೆಯಿಂದ ಕಾಕತೀಯರ ನಾಯಕ ವ್ಯವಸ್ಥೆಯನ್ನು ತಮ್ಮ ಆಡಳಿತ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡರು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇವರ ಅಭಿಪ್ರಾಯಗಳನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ, ಕಾರಣವಿಷ್ಟೇ! ಸಂಗಮ ಮನೆತನದ ಅರಸರು ಹೊರಗಿನವರಾಗಿರದೆ ತುಂಗಾ ಮತ್ತು ಭದ್ರಾ ಸಂಗಮದ ಕೂಡ್ಲಿಯಿಂದ ಹರಿಹರದವರೆಗಿನ ಪ್ರದೇಶದವರಾಗಿದ್ದು ಹೊಯ್ಸಳರ ದುಸ್ಥಿತಿಯಲ್ಲಿ ಹೊಯ್ಸಳ ಮಾಂಡಲೀಕರ ಸಹಮತದೊಂದಿಗೆ ಕರ್ನಾಟಕ ಅಧಿಕಾರ ಸೂತ್ರಗಳನ್ನು ಕೈಗೆತ್ತಿಕೊಂಡರು.[೩೬] ಹೊಯ್ಸಳರ ಮಾಂಡಲೀಕರಾಗಿದ್ದು ಹೊಯ್ಸಳರ ರಾಜ್ಯಾಡಳಿತದಲ್ಲಿ ಅಪಾರ ಅನುಭವಿಗಳಾಗಿದ್ದು ಹೊಯ್ಸಳರ ಕಾಲದ ಪಾಳೆಯಗಾರರ ವ್ಯವಸ್ಥೆಯನ್ನು ತಮ್ಮ ಆಡಳಿತ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡರು. ಹೊಯ್ಸಳರ ಸಮಕಾಲೀನ ಸಾಮ್ರಾಜ್ಯವಾದ ಕಾಕತೀಯರ ರಾಜ್ಯಾಡಳಿತ ವ್ಯವಸ್ಥೆಯಿಂದ ಸ್ವಲ್ಪಮಟ್ಟದಲ್ಲಿ ಪ್ರಭಾವಿತಗೊಂಡಿರಬಹುದೇ ವಿನಃ ಪೂರ್ತಿಯಾಗಿ ಕಾಕತೀಯರ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರಲಿಲ್ಲ. ವಿಜಯನಗರದ ಅರಸರು ತಮ್ಮ ಇಡೀ ಸಾಮ್ರಾಜ್ಯವನ್ನು, ರಾಜ್ಯ, ವಳಿತ, ವೇಂಟೆ, ನಾಡು, ಸೀಮೆ, ಛಾವಡಿ, ಮಾಗಣಿ, ಸಂಮತ್ತು ಎಂಬೆಲ್ಲ ಪ್ರಾದೇಶಿಕ ವಿಭಾಗಗಳನ್ನು ಸ್ಥಾಪಿಸಿಕೊಂಡು ರಾಜ್ಯವನ್ನು ಆಳಿದರು. ಗ್ರಾಮಗಳು ವಿಜಯನಗರ ಆಡಳಿತ ವ್ಯವಸ್ಥೆಯ ಮೂಲ ಘಟಕಗಳಾಗಿದ್ದವು. ಇಂತಹ ಹಲವಾರು ಗ್ರಾಮಗಳ ಸಮೂಹವನ್ನು ಸ್ಥಳವೆಂದು ಕರೆಯುತ್ತಿದ್ದರು. ಹಲವು ಸ್ಥಳಗಳ ಸಮೂಹವನ್ನು ನಾಡುಗಳೆಂದು, ಹಲವು ನಾಡುಗಳನ್ನು ಒಳಗೊಂಡ ಸಮೂಹವನ್ನು ಸೀಮೆಗಳೆಂದು, ಹಲವು ಸೀಮೆಗಳನ್ನು ರಾಜ್ಯವೆಂದು ಕರೆಯಲಾಗುತ್ತಿತ್ತು. ರಾಜ್ಯ ಎಂಬ ಪದವು ಅವರು ಆಳುತ್ತಿದ್ದ ರಾಜ್ಯಗಳಿಗೂ ಸಾಮ್ರಾಜ್ಯದ ಕಾಲದಲ್ಲಿ ಅಂತರ್ಗತವಾಗಿದ್ದ ವಿವಿಧ ದೇಶ ಭಾಗಗಳಿಗೂ ಅನ್ವಯವಾಗುತ್ತಿತ್ತು.[೩೭] ವಿಜಯನಗರ ಕಾಲದಲ್ಲಿ ಒಟ್ಟು ೨೪ ರಾಜ್ಯಗಳಿದ್ದವೆಂದು ವೆಂಕಟರತ್ನಂ ಅವರು ಅಭಿಪ್ರಾಯಪಡುತ್ತಾರೆ.[೩೮]

ವಿಜಯನಗರ ಕಾಲದಲ್ಲಿ ರಾಜ್ಯ ತುಂಬಾ ದೊಡ್ಡದಾಗಿದ್ದಾಗ ಅಥವಾ ವಿಶೇಷವಾದ ಸ್ಥಾನಮಾನಗಳನ್ನು ಹಾಗೂ ಪ್ರಾಮುಖ್ಯತೆಯನ್ನು ಪಡೆದುಕೊಂಡಾಗ ಅಂತಹ ರಾಜ್ಯಗಳನ್ನು

ಮಹಾರಾಜ್ಯಗಳೆಂದು ಕರೆಯುತ್ತಿದ್ದರು. ಚಂದ್ರಗಿರಿ, ಅರಗ, ಪಡೈವೀಡುಗಳು ಮಹಾರಾಜ್ಯಗಳಾಗಿದ್ದವು.[೩೯] ಮಹಾರಾಜ್ಯವು ಒಂದು ದೊಡ್ಡ ಪ್ರಾಂತ್ಯವಾದರೆ ರಾಜ್ಯವು ಗಾತ್ರದಲ್ಲಿ ಅದಕ್ಕಿಂತ ಚಿಕ್ಕದಾದ ಪ್ರಾಂತ್ಯವಾಗಿರುತ್ತಿತ್ತು. ಒಟ್ಟಿನಲ್ಲಿ ವಿಜಯನಗರ ಕಾಲದಲ್ಲಿ ರಾಜ್ಯದ ವಿವಿಧ ಭಾಗಗಳನ್ನು ಸೀಮೆ, ಸ್ಥಳ, ವಳಿತ, ವೆಂಟೆ, ಚಾವಡಿ, ಪೀಠಿಕಾಗಳೆಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.

ನಾಯಕ ಅಮರನಾಯಕ, ನಾಯಕತನ, ಪದಗಳ ಬಳಕೆಯ ಐತಿಹಾಸಿಕ ಹಿನ್ನೆಲೆಯನ್ನು ಗಮನಿಸುವುದಾದರೆ "ನಾಯಕ" ಹುದ್ದೆಯು ಮೌರ್ಯರ ಕಾಲದಿಂದ ಪ್ರಚಲಿತದಲ್ಲಿತ್ತು ಎಂಬುದು ಕೌಟಿಲ್ಯನ ಅರ್ಥಶಾಸ್ತ್ರದಿಂದ ತಿಳಿದು ಬರುತ್ತದೆ. ಮೌರ್ಯರ ಕಾಲದಲ್ಲಿ ನಾಯಕನ ಸ್ಥಾನವು ಸೇನಾಧಿಪತಿ ಸ್ಥಾನಕ್ಕಿಂತ ಕಡಿಮೆ ದರ್ಜೆಯದಾಗಿತ್ತು.[೪೦] ಗುಪ್ತರ ಕಾಲದಲ್ಲಿ ಕಾಳಿದಾಸನಿಂದ ರಚನೆಗೊಂಡಿರುವ ಅಭಿಜ್ಞಾನ ಶಾಕುಂತಲದಲ್ಲಿ ದುಶ್ಯಂತನನ್ನು ನಾಯಕನೆಂದು, ಶಾಕುಂತಲೆಯನ್ನು ನಾಯಕಿ ಎಂದೂ, ಭರತನನ್ನು ಅಮರನಾಯಕನೆಂದು ಉಲ್ಲೇಖಿಸಲಾಗಿದೆ.[೪೧] ಶುಕ್ರನೀತಿ ಸಾರವು (ಕ್ರಿ.ಶ. ೬೦೦-೧೨೦೦) ಆನೆ ಅಥವಾ ೨೦ ಕುದುರೆಗಳನ್ನು ತನ್ನ ಅಧೀನದಲ್ಲಿರಿಸಿಕೊಳ್ಳುವ ಅಧಿಕಾರ ಹೊಂದಿದ್ದವನನ್ನು ನಾಯಕ ಎನ್ನುತ್ತದೆ. ಮೌರ್ಯರು ಮತ್ತು ಗುಪ್ತರ ಕಾಲದಲ್ಲಿ ಹೆಚ್ಚಾದ ಭೂದಾನಗಳು ರಾಜ್ಯಗಳ ಆಡಳಿತ ವ್ಯವಸ್ಥೆಯಲ್ಲಿ ನಾಯಕ ಎಂಬ ಮಧ್ಯವರ್ತಿಗಳ ಹುಟ್ಟಿಗೆ ಕಾರಣವಾಯಿತು. ಮೌರ್ಯರು ತಮ್ಮ ಅಧಿಕಾರಿಗಳ ಸೇವೆಗೆ ಸಂಬಳವನ್ನು ನೀಡುವ ಬದಲಾಗಿ ಭೂಮಿಗಳನ್ನು ದಾನವಾಗಿ ನೀಡಿ ಅದರ ಫಲಾನುಭವಿಗಳು ಅವರೇ ಆಗಿರುವಂತಹ ವ್ಯವಸ್ಥೆಯನ್ನು ಏರ್ಪಾಟು ಮಾಡಿದರು.[೪೨] ಈ ವ್ಯವಸ್ಥೆಯೇ ಅನಂತರದ ದಿನಗಳಲ್ಲಿ ಕರ್ನಾಟಕದಲ್ಲಿಯೂ ಊಳಿಗಮಾನ್ಯ ವ್ಯವಸ್ಥೆಯು ಅಡಿಯಲ್ಲಿ ಪ್ರಾಂತೀಯ ಮಟ್ಟದಲ್ಲಿ ನಾಯಕ ವ್ಯವಸ್ಥೆಯು ರೂಪುಗೊಳ್ಳಲು ಕಾರಣವಾಗಿರಬೇಕು. ಶಾತವಾಹನರ ಕಾಲದಲ್ಲಿ ಮಹಾರಥಿ, ಮಹಾತಲ, ಅಮಾತ್ಯ ಎನ್ನುವ ಅಧಿಕಾರಿ ವರ್ಗಗಳ ಉಲ್ಲೇಖವು ಸನ್ನತಿಯ ಶಾಸನದಲ್ಲಿ ಲಭ್ಯವಾಗುತ್ತದೆ.[೪೩] ಮಹಾರಥಿ ಎಂಬುವನು ಶಾತವಾಹನರ ಕಾಲದ ಸಾಮಂತನಾಗಿದ್ದ; ಇದರ ಜೊತೆಗೆ ಮಹಾತಳವಾರ, ಮಹಾದಂಡನಾಯಕ, ರಜ್ಜುಕ ೧೦ ಎಂಬ ಹುದ್ದೆಗಳು ಶಾತವಾಹನರ ಆಡಳಿತಾವಧಿಯಲ್ಲಿದ್ದವು. ಭೂಮಿಯನ್ನು ಅಳತೆ ಮಾಡಿ ಕಂದಾಯವನ್ನು ನಿಗದಿಗೊಳಿಸುವುದು ರಜ್ಜುಕರ ಕರ್ತವ್ಯವಾಗಿದ್ದವು. ಈ ಅಧಿಕಾರಿ ವರ್ಗದವರನ್ನು ಹೊರತುಪಡಿಸಿದರೆ ನಾಯಕ ಎಂಬ ಅಧಿಕಾರಿ ವರ್ಗ ಶಾತವಾಹನರ ಕಾಲದಲ್ಲಿ ಇರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಶಾತವಾಹನರ ಕಾಲದಲ್ಲಿ ಈ ಬಗೆಯ ಶ್ರೇಣೀಕೃತ ಅಧಿಕಾರಿ ವ್ಯವಸ್ಥೆಯು ರೂಪುಗೊಂಡು ಅಧಿಕಾರವೆಲ್ಲವೂ ರಾಜನಲ್ಲಿ ಕೇಂದ್ರೀಕೃತವಾಗದೇ ಅವನ ಅಧಿಕಾರಿಗಳಲ್ಲಿ ಹಂತ ಹಂತವಾಗಿ ಹಂಚಿಕೆಯಾಗುತ್ತಿತ್ತು. ಕದಂಬರ ಕಾಲದಲ್ಲಿ ಸಾಮ್ರಾಜ್ಯ ಪ್ರಾಂತ್ಯ, ರಾಜ್ಯ, ವಿಷಯ ಎಂಬ ರಾಜಕೀಯ ವಿಭಾಗಗಳಿದ್ದವು. ಮಹಾ ಪ್ರಾಂತ್ಯಗಳಿಗೆ ರಾಜನ ಕುಟುಂಬದವರನ್ನು ರಾಜ್ಯಪಾಲರನ್ನಾಗಿ ಮಾಡಲಾಗುತ್ತಿತ್ತು. ಕದಂಬರ ಕಾಲದಿಂದಲೂ ಮಹಾಮಂಡಲೇಶ್ವರ ಎಂಬ ಅಧಿಕಾರಿ ವರ್ಗದವರು ಕಾಣಿಸಿಕೊಂಡರು. ಕದಂಬರ ಕಾಲದಲ್ಲಿ ವಿಷಯ ಎಂಬ ಆಡಳಿತ ವಿಭಾಗಗಳ ನಿರ್ವಹಣೆಯನ್ನು ಮಹಾ ಮಂಡಲೇಶ್ವರಿಗೆ ವಹಿಸಿಕೊಡಲಾಗುತ್ತಿತ್ತು. ಈ ಮಹಾ

ಮಂಡಲೇಶ್ವರರು ತಮ್ಮ ಅಧೀನಾಧಿಕಾರಿಗಳ ಸಹಾಯದಿಂದ ರಾಜ್ಯಭಾರವನ್ನು ನಿರ್ವಹಿಸುತ್ತಿದ್ದರು.[೪೪] ಕಂಪಣ ಮತ್ತು ಗ್ರಾಮಗಳೆಂಬ ಉಪ ಆಡಳಿತ ಘಟಕಗಳಿದ್ದವು.

ಗಂಗರು ತಮ್ಮ ರಾಜ್ಯಾಡಳಿತದಲ್ಲಿ ನಾಡು, ವಿಷಯ, ವೆಂಟೆ ಮತ್ತು ಕಂಪಣಗಳೆಂಬ ಆಡಳಿತ ವಿಭಾಗಗಳನ್ನು ಪ್ರಾಂತೀಯ ಮಟ್ಟದಲ್ಲಿ ಅಳವಡಿಸಿಕೊಂಡಿದ್ದರು. ಗಂಗರ ಕಾಲದಲ್ಲಿ ಸೇನಾ ಕಟಕ ಅಧಿಕಾರಿಗಳಾದ ಪಟ್ಟಣಗಾರರು, ನಾಯಕರು, ದುರ್ಗಾಧಿಕಾರಿಗಳು, ಮನ್ನೆಯರು, ನಾಡಗೌಡರು (ಗಾವುಂಡ) ಪಾರುಪತ್ಯಗಾರರು, ಗಣಕರು ಎಂಬ ಅಧಿಕಾರಿ ವರ್ಗವಿತ್ತು. ಗಂಗರು ತಮ್ಮ ರಾಜಪ್ರತಿನಿಧಿಗಳನ್ನು ದಂಡನಾಯಕ ಇಲ್ಲವೇ ದಣ್ಣಾಯಕ ಎಂಬ ಹೆಸರಿನಿಂದ ಗುರುತಿಸುತ್ತಿದ್ದರು. ಸಾಮಂತರ ಮೇಲೆ ಪ್ರಭುತ್ವವಿದ್ದವರಿಗೆ ಮಹಾಸಾಮಂತಾಧಿಪತಿ ಎಂದು ಕರೆಯುತ್ತಿದ್ದರು.

ಕದಂಬರು ಮತ್ತು ಗಂಗರ ಕಾಲದಲ್ಲಿ ಭೂದಾನಗಳನ್ನು ನೀಡುವಾಗ ಸಾಮಂತರು ಅಧಿಕಾರಿಗಳ ಸಮ್ಮುಖದಲ್ಲಿ ದಾನ ಮಾಡುತ್ತಿದ್ದರು. ರಾಜನಿಂದ ಭೂಮಿಯನ್ನು ದಾನವಾಗಿ ಪಡೆದ ಪ್ರಜೆಗಳು ಅದಕ್ಕೆ ಪ್ರತಿಯಾಗಿ ರಾಜ್ಯಕ್ಕೆ ಮತ್ತು ಅಧಿಕಾರಿಗಳಿಗೇ ಸೇವೆಯನ್ನು ಸಲ್ಲಿಸಬೇಕಾಗಿತ್ತು. ರಾಜರು ಹಾಗೂ ಅವರ ಅಧಿಕಾರಿಗಳು ಪ್ರವಾಸದಲ್ಲಿದ್ದಾಗ ಆಯಾ ಪ್ರದೇಶದ ಜನರು ಅವರ ವಸತಿಗೆ ಎಲ್ಲ ವ್ಯವಸ್ಥೆಯನ್ನು ಮಾಡಿ ಆತಿಥ್ಯವನ್ನು ನೀಡಬೇಕಾಗಿತ್ತು. ಸಾರ್ವಜನಿಕ ಕೆರೆಗಳನ್ನು ಮತ್ತು ಹೆದ್ದಾರಿಗಳನ್ನು ನಿರ್ಮಿಸುವಾಗ ಆಯಾ ಪ್ರದೇಶದ ಜನರು ಒಟ್ಟಾಗಿ ಸೇವೆಯನ್ನು ಸಲ್ಲಿಸಬೇಕಾಗಿತ್ತು. ಯುದ್ಧದ ಸಮಯದಲ್ಲಿ ಸೈನಿಕರು ತಾವು ಬೆಳೆದ ಉತ್ಪನ್ನಗಳ ಮೇಲೆ ಶೇಕಡ ಹತ್ತರಷ್ಟು ಭಾಗವನ್ನು ಕಂದಾಯವಾಗಿ ಸಲ್ಲಿಸಬೇಕಾಗಿತ್ತು.[೪೫] ಕದಂಬರು ಮತ್ತು ಗಂಗರ ಆಡಳಿತಾವಧಿಯಲ್ಲಿ ಗ್ರಾಮಗಳು ಆಡಳಿತ ವ್ಯವಸ್ಥೆಯ ಕೊನೆಯ ಘಟಕಗಳಾಗಿದ್ದವು. ಕದಂಬರ ಮತ್ತು ಗಂಗರ ರಾಜ್ಯಾಡಳಿತವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಸಾಮಂತ ವ್ಯವಸ್ಥೆ ಎನ್ನುವುದು ಈ ಎರಡು ರಾಜಮನೆತನಗಳ ಅವಧಿಯಲ್ಲಿ ತನ್ನದೇ ಆದ ಸ್ವರೂಪವನ್ನು ಪಡೆದುಕೊಂಡು ಮುಂದುವರೆಯಿತೆಂದು ಹೇಳಬಹುದು. ಬಾದಾಮಿ ಚಾಲುಕ್ಯರು ತಮ್ಮ ಸಾಮ್ರಾಜ್ಯವನ್ನು ನಾಡು, ಮಂಡಲ, ವಿಷಯ, ಭೋಗ, ಅಹರ ಮತ್ತು ಗ್ರಾಮಗಳಾಗಿ ವಿಂಗಡಿಸಿಕೊಂಡು ಪರಿಪಾಲನೆ ಮಾಡಿರುವುದು ಸ್ಪಷ್ಟವಾಗುತ್ತದೆ. ಬಾದಾಮಿ ಚಾಲುಕ್ಯರು ತಮ್ಮ ಪ್ರಾಂತ್ಯಗಳನ್ನು ಗಂಗರಂತೆ ಸಂಖ್ಯಾ ಪ್ರತ್ಯಯದೊಂದಿಗೆ ಅಂದರೆ ಬನವಾಸಿ ೧೨,೦೦೦ ಪುಲಿಗೆರೆ ೩೦೦ ಮುಂತಾಗಿ ಗುರುತಿಸಿಕೊಂಡಿದ್ದರು. ರಾಜನ ರಕ್ತ ಸಂಬಂಧಿಗಳನ್ನು ಪ್ರಾಂತ್ಯಾಧಿಕಾರಿಗಳನ್ನಾಗಿ ನೇಮಿಸಲಾಗುತ್ತಿತ್ತು.[೪೬] ಈ ಮೂಲಕ ರಾಜ್ಯಾಡಳಿತದಲ್ಲಿ ಅನುಭವವನ್ನು ರಾಜನಾಗಬೇಕಾದವನಿಗೆ ಪೂರ್ವಭಾವಿಯಾಗಿ ನೀಡಲಾಗುತ್ತಿತ್ತು.

ಚಾಲುಕ್ಯರ ಕಾಲದಲ್ಲಿ ರಾಜನು ತನ್ನ ಮಗನಿಗೆ ರಾಜ್ಯಪಾಲ ಪಟ್ಟ ಕಟ್ಟುವುದನ್ನು ಕುಮಾರ ವೃತ್ತಿ ಎಂದು ಕರೆಯಲಾಗಿದೆ. ಯುವರಾಜನನ್ನು ಕುಮಾರ ಎಂದು ಶಾಸನಗಳಲ್ಲಿ ಕರೆಯಲಾಗಿದೆ. ರಾಜಕುಮಾರರು ಮುಂದೆ ರಾಜರಾಗಬೇಕಾಗಿದ್ದರಿಂದ ಅವರು ಆಡಳಿತ ವಿಷಯದಲ್ಲಿ ಅನುಭವವನ್ನು ಪಡೆಯಲೆಂಬ ಉದ್ದೇಶದಿಂದ ಅವರನ್ನು ರಾಜ್ಯದ ಬೇರೆ ಬೇರೆ ಭಾಗಗಳಿಗೆ ಅಧಿಪತಿಗಳನ್ನಾಗಿ

ಮಾಡುತ್ತಿದ್ದನು.[೪೭] ಬಾದಾಮಿ ಚಾಲುಕ್ಯರ ಕಾಲದಲ್ಲಿದ್ದ ಪ್ರಾಂತೀಯ ಆಡಳಿತ ವ್ಯವಸ್ಥೆಯ ಬಹುತೇಕ ಮಾದರಿಗಳು ವಿಜಯನಗರ ಪ್ರಾಂತೀಯ ಆಡಳಿತ ವ್ಯವಸ್ಥೆಯಲ್ಲಿ ಅಡಕಗೊಂಡಿರುವುದು ಸ್ಪಷ್ಟವಾಗುತ್ತದೆ. ಉದಾಹರಣೆಗೆ ಬಾದಾಮಿ ಚಾಲುಕ್ಯರು ಪ್ರಾಂತೀಯ ಮಟ್ಟದಲ್ಲಿ ರಾಜ್ಯಪಾಲರುಗಳನ್ನಾಗಿ ತಮ್ಮ ರಕ್ತ ಸಂಬಂಧಿಗಳನ್ನು ಹಾಗೂ ರಾಜಮನೆತನದವನ್ನು ನೇಮಕ ಮಾಡುತ್ತಿದ್ದರು. ಇದರಂತೆ ವಿಜಯನಗರದವರು ಕೂಡ ರಾಜ್ಯಪಾಲರನ್ನಾಗಿ ಆರಿಸುತ್ತಿದ್ದುದು ತಮ್ಮ ರಾಜ ಮನೆತನಕ್ಕೆ ಸಂಬಂಧಿಸಿದ ವ್ಯಕ್ತಿಗಳನ್ನು ಮಾತ್ರ, ಆದರೆ ಪ್ರೌಢದೇವರಾಯನ ಕಾಲಕ್ಕೆ ಈ ನಿಯಮವನ್ನು ಸಡಿಲಗೊಳಿಸಲಾಯಿತು. ಪ್ರೌಢದೇವರಾಯನು ದಕ್ಷತೆ, ಅರ್ಹತೆಯನ್ನು ಹೊಂದಿರುವ ವ್ಯಕ್ತಿಗಳನ್ನು ರಾಜ್ಯಪಾಲರನ್ನಾಗಿ ನೇಮಕ ಮಾಡುತ್ತಿದ್ದನು. ಮುಂದಿನ ಸಾಳ್ವ, ತುಳುವ, ಅರವೀಡು ಮನೆತನಗಳು ಇದೇ ನಿಯಮವನ್ನು ಅನುಸರಿಸಿಕೊಂಡು ಹೋದವು.

ರಾಷ್ಟ್ರಕೂಟರ ಕಾಲದಲ್ಲಿ ಬಲವಾದ ಕೇಂದ್ರ ಸರ್ಕಾರದ ಜೊತೆಗೆ ಬಲಿಷ್ಠವಾದ ಸಾಮಂತ ರಾಜಪ್ರಭುತ್ವ ಪ್ರಾಂತ್ಯಗಳಲ್ಲಿ ಜಾರಿಯಲ್ಲಿರುವುದು ಕಂಡು ಬರುತ್ತದೆ. ಸಾಮ್ರಾಟನಿಗೆ ನಿರ್ದಿಷ್ಟ ಕಾಲದಲ್ಲಿ ಕಪ್ಪ ಕಾಣಿಕೆಗಳನ್ನು ಸಲ್ಲಿಸುವ ಸೈನಿಕ ಸಹಾಯವನ್ನು ಮಾಡುವ, ಆಡಳಿತದಲ್ಲಿ ನೆರವಾಗುವ ಕಾರ್ಯವನ್ನು ಸಾಮಂತ ಅರಸರು ಮಾಡಬೇಕಾಗಿತ್ತು. ಸಾಮ್ರಾಟನು ಆಡಳಿತ ಜವಾಬ್ದಾರಿಯನ್ನು ಸಾಮಂತರಿಗೆ ಒಪ್ಪಿಸುತ್ತಿದ್ದ. ಇದು ಹೆಚ್ಚು ಕಡಿಮೆ ವಂಶ ಪಾರಂಪರ್ಯವಾಗಿತ್ತು. ಇದರಿಂದಾಗಿ ರಾಜ್ಯದಲ್ಲಿ ಎರಡು ರೀತಿಯ ಆಡಳಿತ ಪ್ರದೇಶಗಳು ನಿರ್ಮಾಣಗೊಂಡಿದ್ದವು. ಇದು ವಿಕೇಂದ್ರೀಕೃತ ಊಳಿಗಮಾನ್ಯ ವ್ಯವಸ್ಥೆಯನ್ನು ಸೂಚಿಸುತ್ತದೆ.[೪೮] ರಾಷ್ಟ್ರಕೂಟರಲ್ಲಿಯೂ ಮೂರು ಬಗೆಯ ಸಾಮಂತ ವರ್ಗಗಳಿತ್ತು. ಮೊದಲೆರಡು ವರ್ಗದ ಸಾಮಂತರು ರಾಜನ ನೇರ ಸಂಪರ್ಕದಲ್ಲಿದ್ದರೆ, ಮೂರನೇ ವರ್ಗ ರಾಜನಿಂದ ನಿರ್ಲಕ್ಷ್ಯಕ್ಕೆ ಗುರಿಯಾಗಿತ್ತು. ಇದೇ ಬಗೆಯ ೩ ವರ್ಗಗಳ ನಾಯಕರ ಅಸ್ತಿತ್ವವನ್ನು ವಿಜಯನಗರದ ಪ್ರಾಂತೀಯ ಮಟ್ಟದ್ದಲ್ಲಿದ್ದ ಅಮರನಾಯಕ ವ್ಯವಸ್ಥೆಯಲ್ಲಿ ಗುರುತಿಸಬಹುದು. ವಿಜಯನಗರ ಕಾಲದಲ್ಲಿ ಸಾಮಂತ ರಾಜರ ಶ್ರೇಣೀಕೃತ ಸ್ಥಾನವನ್ನು ಪಡೆದುಕೊಂಡಿದ್ದ ಅಮರನಾಯಕರು ತಮ್ಮ ಪ್ರದೇಶದ ಭೂ ವ್ಯಾಪ್ತಿ ಮತ್ತು ಸಂಪನ್ಮೂಲಗಳಿಗೆ ಅನುಗುಣವಾಗಿ ಮೂರು ವರ್ಗಗಳಾಗಿ ವಿಂಗಡನೆಗೊಂಡಿರುವುದನ್ನು ಗುರುತಿಸಬಹುದು. ಅಧಿಕಾರದ ಹಂಚಿಕೆ, ಸ್ಥಾನಮಾನಗಳನ್ನು ಗಮನಿಸಿದಾಗ ರಾಷ್ಟ್ರಕೂಟರ ಕಾಲದ ಸಾಮಂತ ವ್ಯವಸ್ಥೆಯ ೩ ವರ್ಗಗಳನ್ನು ವಿಜಯನಗರ ಕಾಲದ ಅಮರನಾಯಕರ ಮೂರು ವರ್ಗಗಳೊಂದಿಗೆ ಸಮೀಕರಿಸಬಹುದಾಗಿದೆ.

ರಾಷ್ಟ್ರಕೂಟರ ಗ್ರಾಮಾಡಳಿತದಲ್ಲಿ ಪೆರ್ಗಡೆಗಳು, ಗವುಂಡರು ಮತ್ತು ನಾಡಗವುಂಡರು ಪ್ರಮುಖ ಆಡಳಿತಾಧಿಕಾರಿಗಳಾಗಿದ್ದರು. ವಿಜಯನಗರ ಕಾಲದಲ್ಲಿಯೂ ಇದೇ ಬಗೆಯ ಅಧಿಕಾರಿಗಳು ಗ್ರಾಮೀಣ ಆಡಳಿತದಲ್ಲಿ ಕಂಡು ಬರುತ್ತಾರೆ. ರಾಷ್ಟ್ರಕೂಟರು ತಮ್ಮ ಪ್ರದೇಶಗಳನ್ನು ರಾಷ್ಟ್ರ ಅಥವಾ ಮಂಡಲ, ವಿಷಯ, ಭೋಗ, ಭುಕ್ತಿ, ನಾಡುಗಳಾಗಿ ವಿಂಗಡಿಸಿಕೊಂಡು ಆಡಳಿತವನ್ನು ನಡೆಸುತ್ತಿದ್ದರು.

ರಾಷ್ಟ್ರಕೂಟರು

ರಾಷ್ಟ್ರಕೂಟರು ತಮ್ಮ ಶಾಸನಗಳಲ್ಲಿ ಈ ಸ್ಥಳೀಯ ನಾಯಕರುಗಳನ್ನು ಕುರಿತು ಸಾಕಷ್ಟು ಬಾರಿ ಉಲ್ಲೇಖಿಸಿದ್ದಾರೆ.. ಉದಾ: ಮೂರನೇ ಗೋವಿಂದನ ನೇಸರಿಕಾ ದಾನ ಶಾಸನದ ಪ್ರಕಾರ ನಾಗಹರಿ ಎಂಬ ಸ್ಥಳೀಯ ನಾಯಕನು ಸೂಚಿಸಿದಂತೆ ಒಂದು ಹಳ್ಳಿಯನ್ನು ದಾನವಾಗಿ ನೀಡಿದನು. ರಾಷ್ಟ್ರಕೂಟರ ಕಾಲದಲ್ಲಿ ಸ್ಥಳೀಯ ನಾಯಕರುಗಳೆಂದರೆ "ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಒಂದು ಪ್ರದೇಶದಲ್ಲಿ ಸಣ್ಣದಾದ ಭಾಗದಲ್ಲಿ ಆಡಳಿತ ನಡೆಸುತ್ತಿದ್ದ ಕಡಿಮೆ ದರ್ಜೆಯ ಅಧಿಕಾರವನ್ನು ಹೊಂದಿದಂತಹ ವ್ಯಕ್ತಿಗಳು ಎಂಬುದನ್ನು ಸೂಚಿಸುತ್ತದೆ." ಚೋಳ ಸಾಮ್ರಾಜ್ಯದಲ್ಲಿ ಇದ್ದಂತೆಯೇ ರಾಷ್ಟ್ರಕೂಟ ಅರಸರು ಕೂಡ ಭೂಮಾಲೀಕರನ್ನು ತೆರಿಗೆ ವಸೂಲಿದಾರರನ್ನಾಗಿ ನೇಮಕ ಮಾಡುತ್ತಿದ್ದನ್ನು ಶಾಸನಗಳು ಹೇಳುತ್ತವೆ. ರಾಷ್ಟ್ರಕೂಟರ ಶಾಸನವೊಂದರಲ್ಲಿ ನಾಡಗವುಂಡರಾದ ಅಮ್ಮರ, ಅಂದ, ಗಾವಡಿ ಮತ್ತು ಕಲ್ಲಗಡಿ ಎಂಬುವರು ಸಿರಿಗುಂಡಿ ಗ್ರಾಮವನ್ನು ಆಳುತ್ತಿದ್ದರೆಂದೂ ಉಲ್ಲೇಖಿಸಿದೆ. ಈ ನಾಡಗವುಂಡರು ಭೂಮಾಲೀಕರಾಗಿದ್ದು ಸ್ಥಳೀಯ ಮುಖಂಡರಾಗಿದ್ದು ಕೇಂದ್ರದ ಅಡಿಯಲ್ಲಿ ಉಪ ಆಡಳಿತ ಘಟಕದ ಹೊಣೆಗಾರಿಕೆಯನ್ನು ನಿಭಾಯಿಸುತ್ತಿದ್ದರು. ಈ ವ್ಯವಸ್ಥೆಯೇ ಮುಂದೆ ನಿರ್ದಿಷ್ಟ ರೂಪವನ್ನು ಕಾಕತೀಯರ ಕಾಲದಲ್ಲಿ ಪಡೆದುಕೊಂಡು ಮುಂದೆ ವಿಜಯನಗರ ಕಾಲದ ನಾಯಂಕರ ಅಥವಾ ಅಮರನಾಯಕ ಪದ್ಧತಿಗೆ ಕಾರಣವಾಯಿತು.

ಕಲ್ಯಾಣ ಚಾಲ್ಯುಕರು ಮತ್ತು ಕಲಚೂರಿಗಳು

ಕಲ್ಯಾಣ ಚಾಲ್ಯುಕರು ಮತ್ತು ಕಲಚೂರಿಗಳ ಕಾಲಾವಧಿಯಲ್ಲಿ ಬಲಿಷ್ಠವಾದ ಕೇಂದ್ರ ಪ್ರಭುತ್ವದ ಜೊತೆ ಜೊತೆಯಾಗಿಯೇ ಸಾಮಂತ(ಮಾಂಡಲೀಕ)ರನ್ನು ಒಳಗೊಂಡ ಪ್ರಾಂತೀಯ ಆಡಳಿತ ವ್ಯವಸ್ಥೆಯ ಜಾರಿಯಲ್ಲಿತ್ತು. ಇಲ್ಲಿ ಗಮನಾರ್ಹ ಸಂಗತಿಯೆಂದರೆ ವಿಜಯನಗರಂತಹ ಮಹಾನ್ ಸಾಮ್ರಾಜ್ಯದ ಅಸ್ತಂಗತಕ್ಕೆ ನಾಯಂಕರ ಪದ್ಧತಿ ಹೇಗೆ ಪ್ರಧಾನ ಅಂಶವಾಗಿತ್ತು ಹಾಗೆಯೇ ಕಲ್ಯಾಣ ಚಾಲ್ಯುಕರ ಮತ್ತು ಕಲಚೂರಿಗಳ ಸಾಮ್ರಾಜ್ಯದ ಅವನತಿಗೆ ಅವರು ಪ್ರಾಂತೀಯ ಆಡಳಿತಕ್ಕೆ ನೀಡಿದ ಸ್ವಾಯತ್ತತೆಯೇ ಕಾರಣವಾಯಿತು. ಚಾಲ್ಯುಕರ ಕಾಲದಲ್ಲಿ ಪ್ರಾಂತ್ಯಗಳು ಮಂಡಲ, ದೇಶ, ರಾಷ್ಟ್ರ, ನಾಡು, ಕಂಪಣಗಳಾಗಿ ವಿಭಜನೆಗೊಂಡಿದ್ದವು. ಈ ಆಡಳಿತ ವಿಭಾಗಗಳಲ್ಲಿ ಸಮಾನತೆ ಇರಲಿಲ್ಲ ಎಂಬುದಾಗಿ ದೀಕ್ಷಿತ್ ಅಭಿಪ್ರಾಯಪಡುತ್ತಾರೆ. ಮಂಡಲಗಳಲ್ಲಿ ಮಹಾಮಂಡಲೇಶ್ವರ ಎಂಬ ಅಧಿಕಾರಿಗಳಿದ್ದರೆ, ನಾಡುಗಳಲ್ಲಿ ನಾಡಗಾವುಂಡ (ಗೌಡ) ಅಥವಾ ನಾಡವೆರ್ಗಡೆ (ಹೆಗ್ಗಡೆ) ಎಂಬ ಅಧಿಕಾರಿಗಳಿದ್ದರು. ಈ ನಾಡಗಾವುಂಡರ ಪ್ರಮುಖ ಜವಾಬ್ದಾರಿ ಭೂ ಕಂದಾಯದ ವಸೂಲಿ ಹಾಗೂ ಸ್ಥಳೀಯ ಆಡಳಿತ ಪಾಲನೆಯೇ ಆಗಿತ್ತು.

ಹೊಯ್ಸಳರು

ಹೊಯ್ಸಳರ ರಾಜ್ಯಾಡಳಿತವು ಉಳಿಗಮಾನ್ಯ ಪದ್ಧತಿಯ ಎಲ್ಲ ಅಂಶಗಳನ್ನು ಒಳಗೊಂಡಿತ್ತು. ಹೊಯ್ಸಳ ಕಾಲದಲ್ಲಿ ದಂಡನಾಯಕರು ಮತ್ತು ಮನ್ನೇಯರು ಮತ್ತು ನಾಯಕರುಗಳಿದ್ದರು.

ಹೊಯ್ಸಳರ ಕಾಲದ ಶಾಸನಗಳು ಉಲ್ಲೇಖಿಸುವಂತೆ ದಂಡನಾಯಕ ಮಹಾಪ್ರಧಾನ, ಮನ್ನೇಯ ಮತ್ತು ಗರುಡ ಇವರು ಹೊಯ್ಸಳರ ಆಡಳಿತ ನೀತಿಯನ್ನು ಕಾರ್ಯರೂಪಕ್ಕೆ ತರುವಂತಹ ಹೊಣೆಗಾರಿಕೆಯನ್ನು ಹೊತ್ತಿದ್ದರು. ದಂಡನಾಯಕ ಯುದ್ಧ ಕಾಲದ ಮುಖಂಡನಾಗಿದ್ದರೆ ಮಹಾಪ್ರಧಾನ ಪೌರ ಆಡಳಿತಾಧಿಕಾರಿಯಾಗಿದ್ದ. ಮನ್ನೇಯ ಎಂದರೆ ಸೇನಾಪತಿ. ಈ ಪದವಿಯಲ್ಲಿರುವ ವ್ಯಕ್ತಿಯು ದಂಡನಾಯಕನಿಗಿಂತಲೂ ಕೆಳಮಟ್ಟದ ಯೋಧನಾಗಿದ್ದ. ಇನ್ನು ನಾಯಕನ ಸ್ಥಾನವು ಕನಿಷ್ಠ ಮಟ್ಟದಾಗಿದ್ದು, ಈತ ಪದಾತಿ ಅಥವಾ ಅಶ್ವಪಡೆಯ ಮುಖ್ಯಸ್ಥನಾಗಿದ್ದ. ಪ್ರೊ. ಲಕ್ಷ್ಮಣ್ ತೆಲಗಾವಿಯವರು ಅಭಿಪ್ರಾಯಪಡುವಂತೆ ನಾಯಕ ಎಂಬ ಪದವಿಯು ಹೊಯ್ಸಳರಲ್ಲಿ ಜಹಗೀರುದಾರ ಅಥವಾ ಪಾಳೆಯಗಾರ ಎಂಬ ವಿಶಿಷ್ಟ ಅರ್ಥದಲ್ಲಿ ಬಳಕೆಯಲ್ಲಿತ್ತು. ಹೊಯ್ಸಳರ ಕಾಲದಲ್ಲಿ ಸ್ಥಳೀಯ ಘಟಕಗಳ ಆಡಳಿತ ಪದ್ಧತಿಯು ತಮಗಿಂತಲೂ ಕಡಿಮೆ ಬಲಶಾಲಿಗಳಾದ ಮತ್ತು ತಾವು ಗೆದ್ದ ಅನೇಕ ಅರಸರ ಬೆಂಬಲದಿಂದಲೂ ರೂಪಿಸಿಕೊಂಡ ಪದ್ಧತಿಯಾಗಿತ್ತು ಎಂದು ಹೇಳಬಹುದು. ಹೊಯ್ಸಳರ ಸಮಕಾಲೀನರಾಗಿದ್ದ ಕಾಕತೀಯರು ಈ ಪದ್ಧತಿಗೆ ಒಂದು ಸ್ಪಷ್ಟವಾದ ರೂಪವನ್ನು ನೀಡುವುದರ ಮೂಲಕ ನಾಯಂಕರ ಪದ್ಧತಿಗೆ ಅಸ್ತಿಭಾರವನ್ನು ಹಾಕಿಕೊಟ್ಟರು.

ಕಾಕತೀಯರು

ಕಾಕತೀಯರು ತಮ್ಮ ಸಮಕಾಲೀನರಾಗಿದ್ದ ಹೊಯ್ಸಳರ ಆಡಳಿತ ಪದ್ಧತಿಯನ್ನು ಪ್ರಾಂತೀಯ ಮಟ್ಟದಲ್ಲಿ ಮುನ್ನಡೆಸಿಕೊಂಡು ಬಂದರು. ಆದರೂ ನಾಯಂಕರ ಪದ್ಧತಿಗೆ ಒಂದು ಸ್ಪಷ್ಟರೂಪ ದೊರಕಿದ್ದು ಕಾಕತೀಯರ ಕಾಲದಲ್ಲಿ. ರಾಷ್ಟ್ರಕೂಟರಿಂದ ಹೊಯ್ಸಳ ಕಾಲದವರೆಗಿನ ಆಡಳಿತ ವ್ಯವಸ್ಥೆಯಲ್ಲಿ ಸಾಮಂತ ಮಹಾಮಂಡಲೇಶ್ವರ ನಾಯಕ, ದಂಡನಾಯಕರೆಂಬ ಅಧಿಕಾರಿ ವರ್ಗವಿದ್ದು, ಇದು ಭೂಕಂದಾಯ ವಸೂಲಿ, ಗ್ರಾಮಗಳ ಆಡಳಿತ, ಸೇನೆಯ ಮುಖಂಡತ್ವಕ್ಕೆ ಮಾತ್ರ ಸೀಮಿತವಾಗಿತ್ತು. ಆದರೆ ಕಾಕತೀಯರ ಕಾಲದಲ್ಲಿ "ಹಲವಾರು ಸಾಮಂತ ನಾಯಕರುಗಳನ್ನು ಒಳಗೊಂಡ ನಾಯಕರ ಒಕ್ಕೂಟ ವ್ಯವಸ್ಥೆ ಜಾರಿಗೆ ಬಂದಿತು. ಈ ಬಗೆಯ ಹಲವಾರು ನಾಯಕರುಗಳನ್ನು ಒಳಗೊಂಡ ಒಕ್ಕೂಟ ಆಡಳಿತದ ಪ್ರಧಾನ ಭಾಗವಾಗಿ ಪರಿಣಮಿಸಿತು. ಈ ಪದ್ಧತಿಯನ್ನು ಆರಂಭಿಸಿದ ಕೀರ್ತಿ ಇಮ್ಮಡಿ ಪ್ರತಾಪರುದ್ರನಿಗೆ ಸಲ್ಲುತ್ತದೆ.

ಇವನ ಕಾಲದಲ್ಲಿ ಪದ್ಮನಾಯಕ ಎಂಬ ೭೭ ನಾಯಕರ ಕೂಟ ಜಾರಿಯಲ್ಲಿತ್ತು. ಬಹುತೇಕ ಇತಿಹಾಸಕಾರರು ಇದರ ಮೂಲವನ್ನು ರಾಣಿ ರುದ್ರಾಂಬೆ ಆರಂಭಿಸಿದಳೆಂದು ಸಾಹಿತ್ಯ ಆಧಾರಗಳ ಮೂಲಕ ದೃಢಪಡಿಸಿದ್ದಾರೆ. ಕಾಕತೀಯ ಅರಸ ಗಣಪತಿದೇವನ (೧೯೯–೧೨೬೨) ತರುವಾಯ ಅಧಿಕಾರಕ್ಕೆ ಬಂದ ಆತನ ಮಗಳು ರುದ್ರಾಂಬೆ ದೇವಿಯು ಹೊರಡಿಸಿದಂತಹ ದತ್ತಿ ಶಾಸನವೊಂದು ನಾಯಂಕರ ಪದ್ಧತಿಯನ್ನು ಕುರಿತು ವಿವರಿಸುತ್ತದೆ. ರುದ್ರಾಂಬೆಯ ಮೊಮ್ಮಗನಾದ ಇಮ್ಮಡಿ ಪ್ರತಾಪರುದ್ರನು ತನ್ನ ಸಾಮ್ರಾಜ್ಯವನ್ನು ರಕ್ಷಿಸಲು ೭೭ ಜನ ನಾಯಕ ಅಥವಾ ಪಾಳೆಯಗಾರರ ಕೂಟವೊಂದನ್ನು ಸ್ಥಾಪಿಸಿ ಅವರಿಗೆ ಭೂಮಿಯನ್ನು ಹಂಚಿದ ಎಂಬುದು ಮೆಕೆಂಜಿ ಸಂಗ್ರಹಿಸಿದ

ಹಸ್ತಪ್ರತಿಯ ಮೂಲಕ ತಿಳಿದುಬರುತ್ತದೆ. ಗಣಪತಿದೇವನು ಕೂಡ ೭೨ ಜನ ಪ್ರತ್ಯೇಕ ನಾಯಕರುಗಳನ್ನು ನೇಮಿಸಿದ. ಇವನ ಕಾಲದಲ್ಲಿ ಪದ್ಮನಾಯಕರು ಎಂಬ ನಾಯಕರು ಸಾಮ್ರಾಜ್ಯದ ಆಡಳಿತದಲ್ಲಿ ಪ್ರಧಾನ ಪಾತ್ರವನ್ನು ವಹಿಸಿದರು. ಗಣಪತಿದೇವನ ೭೨ ಪ್ರಾಂತ್ಯಾಧಿಕಾರಿಗಳ ಆಡಳಿತ ವ್ಯವಸ್ಥೆಯನ್ನು ಮುಂದುವರಿಸಿ ಅದರ ಸಂಖ್ಯೆಯನ್ನು ವಿಸ್ತರಿಸುವುದರ ಮೂಲಕ ೭೭ ನಾಯಂಕರ ಕೂಟವನ್ನು ಪ್ರತಾಪರುದ್ರ ಜಾರಿಗೆ ತಂದನು. ಪ್ರತಾಪರುದ್ರನ ನಂತರ ಅಧಿಕಾರಕ್ಕೆ ಬಂದ ಪ್ರೋಲನಾಯಕ, ಕಾಪಯನಾಯಕರು ಕೂಡ ನಾಯಂಕರ ವ್ಯವಸ್ಥೆಯನ್ನು ಯಥಾವತ್ತಾಗಿ ರೂಢಿಸಿಕೊಂಡು ಬಂದರು. ಕಾಪನಾಯಕನ ಮರಣದ ನಂತರ ಕಾಕತೀಯ ಸಾಮ್ರಾಜ್ಯ ಅಂತ್ಯಗೊಂಡಿತು. ಈ ೭೭ ನಾಯಕರು ಸ್ವತಂತ್ರರಾದರು.

ವಿಜಯನಗರ

ವಿಜಯನಗರ ಕಾಲದಲ್ಲಿ ಸಾಮಂತ ವ್ಯವಸ್ಥೆಯು ಪ್ರವರ್ಧಮಾನದಲ್ಲಿತ್ತು. ವಿಜಯನಗರದ ಅರಸರು ತಾವು ಹೊಸದಾಗಿ ಗೆದ್ದಂತಹ ಪ್ರದೇಶಗಳನ್ನು ಸೋತು ಶರಣಗತನಾದ ರಾಜನಿಗೆ ಹಿಂತಿರುಗಿಸಿ ಅವರಿಗೆ ಸಾಮಂತ ಸ್ಥಾನಮಾನ ನೀಡಿ ಗೌರವಿಸುತ್ತಿದ್ದರು. ಹಾಗೆಯೇ ತಮ್ಮ ಹಿಂದಿನ ರಾಜಮನೆತನದ ಸದಸ್ಯರನ್ನು ಅಗೌರವದಿಂದ ಕಾಣುತ್ತಿರಲಿಲ್ಲ. ಅವರಿಗೂ ಸಾಮಂತ ದರ್ಜೆಯ ಸ್ಥಾನಮಾನ ನೀಡುತ್ತಿದ್ದರು. ಉದಾಹರಣೆಗೆ ತುಳುವ ಮನೆತನದ ಕೃಷ್ಣದೇವರಾಯನು ಸಾಳ್ವ ಮನೆತನದ ಗೋವಿಂದರಾಜನಿಗೆ ಸಾಮಂತ ಸ್ಥಾನಮಾನವನ್ನು ನೀಡಿ ಆಧರಿಸಿದ್ದನ್ನು ಶಾಸನಗಳು ದೃಢೀಕರಿಸುತ್ತವೆ.[೪೯] ವಿಜಯನಗರ ಕಾಲದಲ್ಲಿ ಮಂಡಲೇಶ್ವರ ಮತ್ತು ಅಮರನಾಯಕರಿಗೆ ಪ್ರತ್ಯೇಕ ಅಧಿಕಾರ ಮತ್ತು ಸ್ಥಾನಮಾನಗಳಿದ್ದವು. ಮಹಾಮಂಡಲೇಶ್ವರರು ಮತ್ತು ಅಮರನಾಯಕರು ಪ್ರಜಾಮುಖಿಯಾಗಿ ಅಧಿಕಾರವನ್ನು ನಡೆಸುತ್ತಿದ್ದರು. ವಿಜಯನಗರದ ಬಹುತೇಕ ಯುದ್ಧಗಳಲ್ಲಿ ಭಾಗವಹಿಸುತ್ತಿದ್ದ ಅಮರನಾಯಕರು ವಿಜಯನಗರದ ಅರಸರಿಗೆ ಹಲವಾರು ಪ್ರದೇಶಗಳನ್ನು ಗೆದ್ದುಕೊಡುತ್ತಿದ್ದರು. ಆದ್ದರಿಂದಲೇ ಹಲವು ಸಾಮಂತರನ್ನು ಚಕ್ರವರ್ತಿಯು ಕಟ್ಟಿಕೊಂಡ ನೆಚ್ಚಿನ ಅಲಗುಗಳೆಂದು ವರ್ಣಿಸಲಾಗಿದೆ. ವಿಜಯನಗರ ಕಾಲದಲ್ಲಿ ಒಟ್ಟು ೨೪ ರಾಜ್ಯಗಳಿದ್ದು ಪ್ರತಿಯೊಂದು ರಾಜ್ಯವು ರಾಜ್ಯಪಾಲರುಗಳಿಂದ ಆಳಲ್ಪಡುತ್ತಿದ್ದವು. ಈ ೨೪ ರಾಜ್ಯಗಳಲ್ಲಿ ಪ್ರಮುಖವಾದವುಗಳೆಂದರೆ ಅರಗ ರಾಜ್ಯ, ಚಂದ್ರಗುತ್ತಿ, ಬನವಾಸಿ, ಸಾಂತಲಿಗೆ, ಬಾರಕೂರು, ಮಂಗಳೂರು, ಕೋಲಾರ. ಸೇಲಂ, ಉತ್ತರ ಆರ್ಕಾಟ್ ಮತ್ತು ದಕ್ಷಿಣ ಆರ್ಕಾಟ್‌ಗಳನ್ನು ಒಳಗೊಂಡ ಮುಳುವಾಯಿ ರಾಜ್ಯ, ಬಳ್ಳಾರಿ, ಅನಂತಪುರ, ತುಮಕೂರು ಮತ್ತು ಚಿತ್ರದುರ್ಗಗಳನ್ನು ಒಳಗೊಂಡ ಪೆನುಗೊಂಡೆ ರಾಜ್ಯ ಸಾದಲಿ ರಾಜ್ಯ, ಚಂದ್ರಗಿರಿ ರಾಜ್ಯ; ಇವುಗಳ ಜೊತೆಗೆ ಕೆಲವು ಪ್ರಾಂತ್ಯಗಳು ಅಸ್ತಿತ್ವದಲ್ಲಿದ್ದವು. ಕಳಸ ಮೂರು ಸಾವರ ಪ್ರಾಂತ್ಯ, ದುರ್ಗ ಮತ್ತು ದೋರ ಸಮುದ್ರ ಗೋವಾಪುರ ಅಥವಾ ಗೋವೆ ರಾಜ್ಯ, ಬನ್ನೇರುಘಟ್ಟ, ನಿಡುಗಲ್ಲುದುರ್ಗ, ಯಲಹಂಕ ನಾಡು, ಉಮ್ಮತ್ತೂರು ಮತ್ತು ಬೇಲೂರು. ವಿಜಯನಗರದ ಅರಸರು ತಮ್ಮ ಆಡಳಿತವನ್ನು ಸುಗಮವಾಗಿ ನಿರ್ವಹಿಸಲು ಪ್ರತಿಯೊಂದು ಪ್ರಾಂತ್ಯದ ಅಧಿಕಾರವನ್ನು ರಾಜ್ಯಪಾಲರಿಗೆ ವಹಿಸುತ್ತಿದ್ದರು. ಸಾಮಾನ್ಯವಾಗಿ ರಾಜ ಕುಟುಂಬದ

ಸದಸ್ಯರು ಮತ್ತು ರಾಜನ ಸಮೀಪವರ್ತಿಗಳು ರಾಜ್ಯಪಾಲ ಹುದ್ದೆಯನ್ನು ಪಡೆಯುತ್ತಿದ್ದರು. ವಿಜಯನಗರ ಕಾಲದಲ್ಲಿ ಪ್ರಾಂತ್ಯಾಧಿಕಾರಿಗಳಿಗೆ ದಂಡನಾಯಕ, ಮಹಾಮಂಡಲೇಶ್ವರ, ಮಹಾರಾಜ, ಒಡೆಯ ಮತ್ತು ಅರಸರೆಂದು ನಾನಾ ಹೆಸರುಗಳಿಂದ ಕರೆಯುತ್ತಿದ್ದರು.

ಈ ಪ್ರಾಂತ್ಯಾಧಿಕಾರಿಗಳ ಅಧೀನ ಅಧಿಕಾರಿಗಳೇ ಅಮರನಾಯಕರು. ವಿಜಯನಗರದ ಅರಸರು ಹೆಚ್ಚು ಭೂಮಿಯನ್ನು ದಾನ ಮಾಡುವುದರ ಮೂಲಕ ಸೇನಾಧಿಕಾರಿ, ಭೂಮಾಲೀಕ ವರ್ಗವೊಂದನ್ನು ಸೃಷ್ಟಿಸಿಕೊಂಡರು. ಇಂತಹ ಮಿಲಿಟರಿ ಭೂಮಾಲೀಕರನ್ನು ಶಾಸನಗಳಲ್ಲಿ ಅಮರನಾಯಕರೆಂದು, ಅವರಿಗೆ ದಾನವಾಗಿ ನೀಡಲಾಗಿರುವ ಭೂಮಿಯನ್ನು ಅಮರಗಳೆಂದು ಕರೆಯುವುದು ರೂಢಿಗತವಾಯಿತು. ವಿಜಯನಗರದ ಕಾಲದ ನೂರಾರು ಶಾಸನಗಳಲ್ಲಿ ನಾಯಕ, ಅಮರನಾಯಕ, ನಾಯಕತನ, ಅಮರನಾಯಕತನ, ಮಹಾನಾಯಕಚಾರ್ಯ ಎಂಬ ಪದನಾಮಗಳು ಉಲ್ಲೇಖಗೊಂಡಿವೆ. ವಿಜಯನಗರ ಕಾಲದ ನಾಯಕರು ಸೈನಿಕ ಸೇವೆಯನ್ನು ಸಲ್ಲಿಸುವ ಷರತ್ತಿನ ಮೇಲೆ ವಿಜಯನಗರದ ಅರಸನಿಂದ ಭೂಮಿಯನ್ನು ಇನಾಮಾಗಿ ಪಡೆಯುತ್ತಿದ್ದರು. ಅಮರನಾಯಕರು ವಿಜಯನಗರದ ಅರಸರೊಂದಿಗೆ ನೇರವಾದ ಸಂಪರ್ಕವನ್ನು ಹೊಂದಿರುತ್ತಿದ್ದರು. ಇಲ್ಲವೇ ವಿಜಯನಗರದ ಕಾರ್ಯಕರ್ತರ ನೇರ ಸಂಪರ್ಕದಲ್ಲಿರುತ್ತಿದ್ದರು. ಅಮರನಾಯಕರು ವಿಜಯನಗರದ ಸೇವೆಗೆ ಸದಾ ಸಜ್ಜುಗೊಂಡಿರುವ ಸೇನೆಯನ್ನು ಸಿದ್ಧಗೊಳಿಸಿಕೊಂಡಿರಬೇಕಾಗಿತ್ತು. ಹಾಗೂ ವಿಜಯನಗರಕ್ಕೆ ತುರ್ತು ಪರಿಸ್ಥಿತಿ ಬಂದಾಗ ಯುದ್ಧಗಳಲ್ಲಿ ತಮ್ಮ ಸೇನಾಪಡೆಗಳೊಂದಿಗೆ ಭಾಗವಹಿಸಬೇಕಾಗಿತ್ತು. ಯುದ್ಧಗಳಲ್ಲಿ ಕಲಿತನದಿಂದ ಹೋರಾಟ ಮಾಡಿದ ನಾಯಕರನ್ನು ವಿಜಯನಗರಕ್ಕೆ ಕರೆಸಿಕೊಂಡು ಗೌರವಾದರಗಳಿಂದ ಸನ್ಮಾನಿಸಿ ಕಾಣಿಕೆಗಳನ್ನು ನೀಡಿ ಸಾಮಂತ ದರ್ಜೆಯ ಸ್ಥಾನಮಾನ ನೀಡಿ ಸಂತೃಪ್ತಿಗೊಳಿಸಲಾಗುತ್ತಿತ್ತು. ಉದಾಹರಣೆಗೆ ಚಿತ್ರದುರ್ಗದ ಮತ್ತಿ ತಿಮ್ಮಣ್ಣ ನಾಯಕನು ವಿಜಯನಗರದ ಅರಸನಿಗೆ ಕಲಬುರ್ಗಿ ಕೋಟೆಯನ್ನು ಗೆದ್ದುಕೊಟ್ಟಾಗ ತಿಮ್ಮಣ್ಣ ನಾಯಕನನ್ನು ವಿಜಯನಗರದಲ್ಲಿ ಗೌರವದಿಂದ ಸನ್ಮಾನಿಸಲಾಯಿತು. ವೆಂಕಟಪತಿ ದೇವರಾಯನ ಕಾಲದಲ್ಲಿ ಮತ್ತೋಡಿನ ಗಿರಿಯಪ್ಪ ನಾಯಕನು ಜಟ್ಟಿಗಳನ್ನು ಸೋಲಿಸಿದ್ದರಿಂದ ಸಂತೋಷಗೊಂಡ ವೆಂಕಟಪತಿ ದೇವರಾಯನು ಗಿರಿಯಪ್ಪ ನಾಯಕನನ್ನು ಆದರಿಸಿ ಅವನಿಗೆ ಅಮರನಾಯಕತನವನ್ನು ನೀಡಿ ಸನ್ಮಾನಿಸಿದ್ದನ್ನು ಇಲ್ಲಿ ಸ್ಮರಿಸಬಹುದು ಬಳ್ಳಾರಿಯ ಪಾಳೆಯಗಾರ ಬಾಲದ ಹನುಮಪ್ಪನಾಯಕನು ನಿಜಾಂಷಾಹನನ್ನು ಬಂಧಿಸಿ ರಾಮರಾಯನಿಗೆ ಒಪ್ಪಿಸಿದ್ದರಿಂದ ಸಂತೃಪ್ತಿಗೊಂಡ ರಾಮರಾಯನು ಬಳ್ಳಾರಿ ಸೀಮೆಯ ನಾಯಕತನವನ್ನು ಹನುಮಪ್ಪ ನಾಯಕನಿಗೆ ನೀಡಿದನು. ಹೀಗೆ ಸಾಕಷ್ಟು ಉದಾಹರಣೆಗಳನ್ನು ನೀಡಬಹುದಾಗಿದೆ.

ವಿಜಯನಗರ ಕಾಲದ ಅಮರನಾಯಕರು ತಮ್ಮ ಅರಸರಿಗೆ ಕಾರ್ಯಕರ್ತರಾಗಿ ಸೇವೆಯನ್ನು ಸಲ್ಲಿಸುತ್ತಿದ್ದರು. ಇವರು ತಮ್ಮ ಆಡಳಿತ ಪ್ರದೇಶಗಳಲ್ಲಿ ಕಂದಾಯಾಧಿಕಾರಿಗಳಾಗಿಯೂ ಸೈನ್ಯಾಧಿಕಾರಿಗಳಾಗಿಯೂ ಸೇವೆಯನ್ನು ಸಲ್ಲಿಸಬೇಕಾಗಿತ್ತು. ಸಂಗಮ, ಸಾಳ್ವ, ಮತ್ತು ತುಳುವ ಮನೆತನಗಳು ವಿಜಯನಗರವನ್ನು ಪಾಲಿಸುವಾಗ ಅಮರನಾಯಕರನ್ನು ಒಂದು ಪ್ರದೇಶದಿಂದ

ಮತ್ತೊಂದು ಪ್ರದೇಶಕ್ಕೆ ವರ್ಗಾವಣೆ ಮಾಡುತ್ತಿದ್ದವು. ಹಾಗೂ ನಾಯಕತನಕ್ಕಾಗಿ ಪಾಲಿಸಿದ ಸೀಮೆಗಳನ್ನು ಪದೇ ಪದೇ ಬದಲಾಯಿಸಲಾಗುತ್ತಿತ್ತು. ಉದಾ: ಕೃಷ್ಣದೇವರಾಯನ ಕಾಲದಲ್ಲಿ ಅಮರನಾಯಕನಾಗಿದ್ದ ಕೃಷ್ಣಪ್ಪ ನಾಯಕನು ವಿವಿಧ ವರ್ಷಗಳಲ್ಲಿ ಬೇಲೂರು, ಕೊಟ್ಟೂರು, ಹರಿಹರ ಸೀಮೆಗಳನ್ನು ನಾಯಕತನಕ್ಕಾಗಿ ಪಡೆದು ಪಾಲಿಸಿದನು. ಚಿತ್ರದುರ್ಗದ ಮತ್ತಿ ತಿಮ್ಮಣ್ಣ ನಾಯಕನು ಹಿರಿಯೂರು, ಹೊಳಲಕೆರೆ, ಚಿತ್ರದುರ್ಗ ಸೀಮೆಗಳನ್ನು ವಿವಿಧ ವರ್ಷಗಳಲ್ಲಿ ನಾಯಕತನಕ್ಕಾಗಿ ಪಡೆದು ಆಳಿರುವುದನ್ನು ಗಮನಿಸಿದಾಗ ನಾಯಕತನಕ್ಕಾಗಿ ಸೀಮೆಗಳನ್ನು ದಾನವಾಗಿ ನೀಡುವಾಗ ವಿಜಯನಗರದ ಅರಸರು ಮುಂಜಾಗ್ರತೆಯಿಂದ ವ್ಯವಹರಿಸುತ್ತಿದ್ದರು. ಸೀಮೆಗಳ ಒಡೆತನವನ್ನು ದೀರ್ಘಾವಧಿಗೆ ನೀಡಿದರೆ ಪ್ರಾಯಶಃ ಭವಿಷ್ಯದಲ್ಲಿ ಸೇನೆಯ ಬಲದಿಂದ ಬಲಾಢ್ಯವಾಗಿ ಬೆಳೆದು ಸಾಮ್ರಾಜ್ಯದ ಹಿತಕ್ಕೆ ಧಕ್ಕೆಯಾಗುವ ಸಾಧ್ಯತೆಗಳಿದ್ದರಿಂದ ವರ್ಗಾವಣೆಯನ್ನು ಅನಿವಾರ್ಯವಾಗಿ ರೂಢಿಸಿಕೊಂಡಿದ್ದರು. ಆದರೆ ಅರವೀಡು ಮನೆತನವು ಅಧಿಕಾರಕ್ಕೆ ಬಂದಾಗ ನಾಯಕತನ ವಂಶಪಾರಂಪರ್ಯವಾಗಿಬಿಟ್ಟಿತು. ಅರವೀಡು ಮನೆತನದ ರಾಜರು ದುರ್ಬಲರಾಗಿದ್ದರಿಂದ ಅಮರ ನಾಯಕರನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಸಾಧ್ಯವಾಗಲಿಲ್ಲ. ಹೀಗಾಗಿ ನಾಯಕತನಕ್ಕಾಗಿ ಪಡೆದುಕೊಂಡ ಸೀಮೆಗಳಲ್ಲಿ ಆಡಳಿತ ವಂಶಪಾರಂಪರ್ಯವಾಗಿ ರೂಪುಗೊಂಡು ವಿಜಯನಗರದ ಅವನತಿಯ ನಂತರ ಸ್ವತಂತ್ರ ರಾಜಮನೆತನಗಳಾಗಿ ಆಳ್ವಿಕೆ ಮಾಡಲು ಸಾಧ್ಯವಾಯಿತು.

ಒಟ್ಟಿನಲ್ಲಿ ಅಮರನಾಯಕ ಪದ್ಧತಿಯೆಂಬುದು ವಿಜಯನಗರ ಕಾಲದಲ್ಲಿಯೇ ಏಕಾಏಕಿ ಸೃಷ್ಟಿಯಾದ ಆಡಳಿತ ವ್ಯವಸ್ಥೆಯಾಗಿರಲಿಲ್ಲ. ಮೌರ್ಯ, ಶಾತವಾಹನ, ಗಂಗ, ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ ಮತ್ತು ಕಾಕತೀಯರ ಪ್ರಾಂತೀಯ ಆಡಳಿತ ವ್ಯವಸ್ಥೆಯನ್ನು ಹೆಚ್ಚು ಹೆಚ್ಚು ಪರಿಷ್ಕರಿಸಿ ರೂಪಿಸಿಕೊಂಡಂತಹ ವ್ಯವಸ್ಥೆ ಎನ್ನಬಹುದು. ಅಮರನಾಯಕ ಪದ್ಧತಿಯು ಊಳಿಗಮಾನ್ಯ ವ್ಯವಸ್ಥೆಯ ಚೌಕಟ್ಟಿನಲ್ಲಿಯೇ ಬೆಳೆದು ಬಂದ ಪದ್ಧತಿಯಾಗಿರುವುದಿಂದ ರಾಜರು ನೀಡುತ್ತಿದ್ದ ಭೂದಾನಗಳು, ದತ್ತಿಗಳು, ಸೇನಾ ವರ್ಗವೊಂದನ್ನು ಸೃಷ್ಟಿಸಿ ದೊರೆಗಳಿಗೆ ನಿಷ್ಠರಾಗಿರುವುದರಿಂದ ವ್ಯವಸ್ಥೆಯನ್ನು ಹುಟ್ಟಿಹಾಕಿದವು. ಈ ವ್ಯವಸ್ಥೆಯ ಪರಿಪೂರ್ಣ ಫಲವೇ ವಿಜಯನಗರ ಕಾಲದ ನಾಯಕ ವ್ಯವಸ್ಥೆಯೆಂದು ಹೇಳಬಹುದು.

೨.೩ ಅಮರನಾಯಕ ಪದ್ಧತಿಯ ಸ್ವರೂಪ

ವಿಜಯನಗರ ಕಾಲದಲ್ಲಿ ಸೇನಾಧಿಕಾರಿಗಳಾಗಿ ನಾಡಿನ ಸಾಮ್ರಾಜ್ಯದ ದೊರೆಯಿಂದ 'ಅಮರಂ' ಪಡೆದು ನೆರವಾಗುತ್ತಿದ್ದ ನಾಯಕರು ವಿಜಯನಗರ ಕಾಲದಲ್ಲಿ ಅಮರನಾಯಕರೆನಿಸಿದರು.[೩೦] ವಿಜಯನಗರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಅಮರನಾಯಕ ವ್ಯವಸ್ಥೆಯ ಮೂಲವನ್ನು ಇತಿಹಾಸಕಾರರು ಚಾಲ್ಯುಕರ ಕಾಲದಿಂದಲೂ ಹುಡುಕಲು ಪ್ರಯತ್ನಿಸಿದ್ದಾರೆ. ಅಮರ ನಾಯಂಕರ ಪದ್ಧತಿಯು ಹನ್ನೊಂದನೆಯ ಶತಮಾನದಿಂದಲೂ ಅಂದರೆ ಚಾಲುಕ್ಯ ಚೋಳರ ಅವಧಿಯಿಂದಲೂ ಪ್ರಚಲಿತದಲ್ಲಿತ್ತು ಎನ್ನಲಾಗಿದೆ.[೩೧] ಆದರೆ ಈ ಪದ್ಧತಿಯು ಕಾಕತೀಯರ ಕಾಲದಲ್ಲಿ ಅಸ್ತಿತ್ವದಲ್ಲಿತ್ತು ಎಂದು ಇತಿಹಾಸಕಾರರು

ಒತ್ತಿ ಹೇಳುತ್ತಾರೆ. ಇನ್ನು ಕೆಲವು ಇತಿಹಾಸಕಾರರು ಹೊಯ್ಸಳರ ಕಾಲದಲ್ಲಿ ರೂಢಿಯಲ್ಲಿತ್ತು ಎನ್ನುತ್ತಾರೆ. ಕಾಕತೀಯ ಗಣಪತಿದೇವನ (೧೧೭೭–೧೨೬೨) ಮರಿಮೊಮ್ಮಗ (೧೨೮೯–೧೩೨೩) ಇಮ್ಮಡಿ ಪ್ರತಾಪರುದ್ರ ತನ್ನ ಕಾಲದ ಪ್ರಬಲ ಪದ್ಮನಾಯಕ ಕುಲಕ್ಕೆ ಸೇರಿದ ೭೭ ನಾಯಕರ ಸಮೂಹದ ನೆರವಿನಿಂದ ಆಡಳಿತ ನಡೆಸಿದ ಬಗ್ಗೆ ಮೆಕಂಜಿ ಸಂಗ್ರಹ ಹೇಳುತ್ತದೆ.[೫೨] ಸಂಗಮ ಪುತ್ರರಾದ ಹಕ್ಕ ಬುಕ್ಕರು ಕಾಕತೀಯರಲ್ಲಿ ಭಂಡಾರಿಗಳಾಗಿದ್ದ ಬಗ್ಗೆ ಕೊಡಮೂರಿನ ಶಾಸನವನ್ನು ಆಧರಿಸಿ ಡಾ.ಜಿ.ಎಸ್. ದೀಕ್ಷಿತ್ ಅವರು ಸಮರ್ಥಿಸಲು ಯತ್ನಿಸಿದ್ದಾರೆ.[೫೩] ವೆಂಕಟರಮಣಯ್ಯವರು ಸಂಗಮ ವಂಶಜರು ತೆಲುಗು ಮೂಲದವರೆಂದು, ಕಾಕತೀಯರ ರಾಜ್ಯ ಭಂಡಾರಿಗಳಾಗಿ ಕಾರ್ಯವನ್ನು ನಿರ್ವಹಿಸಿದ್ದರಿಂದ ಕಾಕತೀಯ ಆಡಳಿತ ವ್ಯವಸ್ಥೆಯನ್ನು ಸಂಗಮ ಪುತ್ರರರು ತಮ್ಮ ಸಾಮ್ರಾಜ್ಯದಲ್ಲಿ ಅಳವಡಿಸಿಕೊಂಡರು ಎಂದಿದ್ದಾರೆ. ವೆಂಕಟರಮಣಯ್ಯನವರ ವಾದವನ್ನು ಪ್ರೊ. ಲಕ್ಷ್ಮಣ್ ತೆಲಗಾವಿಯವರು ಸಮರ್ಥಿಸುತ್ತ ತಮ್ಮ ೭೭ ಪಾಳೆಯಗಾರರ ಕೃತಿಯಲ್ಲಿ ಈ ರೀತಿ ವಿವರಿಸಿದ್ದಾರೆ. ರುದ್ರಾಂಬೆಯ ಮೊಮ್ಮಗ ಇಮ್ಮಡಿ ಪ್ರತಾಪರುದ್ರನು ತನ್ನ ಸಾಮ್ರಾಜ್ಯವನ್ನು ಸಂರಕ್ಷಿಸಲು ಹಾಗೂ ಉತ್ತಮ ಆಡಳಿತ ರೂಪಿಸಲು ೭೭ ಮಂದಿ ವೇಲಮ ನಾಯಕರನ್ನು ನೇಮಿಸಿದ ಹಾಗೂ ಸಾಮ್ರಾಜ್ಯಕ್ಕೆ ಸೇರಿದ ಭೂ ಪ್ರದೇಶವನ್ನು ೭೭ ಪ್ರದೇಶ ಜಿಲ್ಲೆಗಳಾಗಿ ವಿಂಗಡಿಸಿ ಅವುಗಳನ್ನು ನಾಯಕರಿಗೆ ಹಂಚಿಕೊಟ್ಟ, ಈತ ಕೈಗೊಂಡ ಇಂಥ ಆಡಳಿತ ಸುಧಾರಣಾ ಕ್ರಮವನ್ನು ಕಲುವು ಚೇರು ತಾಮ್ರಪಟ ಶಾಸನವೂ ಸಮರ್ಥಿಸುತ್ತದೆ. ಇಮ್ಮಡಿ ಪ್ರತಾಪರುದ್ರನ ಮರಣದ ನಂತರ ಅಧಿಕಾರಕ್ಕೆ ಬಂದ ಪ್ರೋಲಯನಾಯಕ, ಕಾಪಯನಾಯಕರು ಕಾಕತೀಯ ಸಾಮ್ರಾಜ್ಯವನ್ನು ರಕ್ಷಿಸಿದರು. ರಾಣಿ ರುದ್ರಾಂಬೆಯ ಕಾಲದಲ್ಲಿ ಸಂಘಟಿತರಾದ ೭೭ ನಾಯಕರು ಕಾಪಯನಾಯಕನ ಮರಣದ ನಂತರ ಸ್ವತಂತ್ರರಾದರು.[೫೪] ಕಾಕತೀಯರ ಕಾಲದಲ್ಲಿಯೇ ಮೊಟ್ಟಮೊದಲ ಬಾರಿಗೆ ನಾಯಂಕರ ಅಥವಾ ನಾಯಕ ವ್ಯವಸ್ಥೆಯ ಉಗಮಗೊಂಡಿತು.

ಇದಕ್ಕೆ ಪ್ರತಿಯಾಗಿ ಎಂ.ಜಿ. ನಾಗರಾಜ್ ಅವರು ಅಮರನಾಯಕತನದ ಉಗಮವನ್ನು ಹೊಯ್ಸಳರ ಕಾಲದಲ್ಲಿ ಹುಡುಕುತ್ತಾರೆ. ಕರ್ನಾಟಕದಲ್ಲಿ ಪಾಳೆಯಪಟ್ಟು ಅಥವಾ ನಾಯಕತನವು ಆಯಾ ಕಾಲದ ಅಗತ್ಯಕ್ಕನುಗುಣವಾಗಿ ಬೇರೆ ಬೇರೆ ಹೆಸರುಗಳಲ್ಲಿ ಕಾಣಬರುವುದುಂಟು. ಮುಖ್ಯವಾಗಿ ವಿಜಯನಗರದ ಅರಸರಿಗೆ ಪ್ರೇರಣೆ ದೊರಕಿದ್ದು ಹೊಯ್ಸಳರ ಕಾಲದ ಪಾಳೆಯಪಟ್ಟಿನ ವ್ಯವಸ್ಥೆ ಕಾರಣವಾಗಿದೆ.[೫೫] ಜೊತೆಗೆ ಕಾಕತೀಯರದನ್ನು ಗಮನಿಸಿ ತಮ್ಮ ಸಂದರ್ಭಕ್ಕೆ ಅಳವಡಿಸಿಕೊಂಡರೆನ್ನುದು ಉಚಿತ ಇದಕ್ಕೆ ಸ್ಪಷ್ಟವಾಗಿ ಹೊಯ್ಸಳರ ಕಾಲದ ಗುಮ್ಮನಾಯಕನ ಪಾಳ್ಯ ಸಂಸ್ಥಾನ ೧೨೪೨ರಲ್ಲಿಯೇ ಅಂದರೆ ವಿಜಯನಗರ ಸಂಸ್ಥಾಪನೆಯ ನೂರು ವರ್ಷ ಪೂರ್ವದಲ್ಲಿಯೇ ಆರಂಭವಾಯಿತೆಂದು ಎಂ.ಎಸ್ ಪುಟ್ಟಣನವರ ಪಾಳೆಯಗಾರರ ಚರಿತ್ರೆ ಸರಣಿಯನ್ನು ಅನುಸರಿಸಿ ಡಾ.ಎಂ.ಪಿ ಕೃಷ್ಣರಾವ್ ಹೇಳಿದ್ದಾರೆ.

ಇತಿಹಾಸಕಾರರ ವಾದ ವಿವಾದಗಳೇನೇ ಇರಲಿ ಸಮಕಾಲೀನ ರಾಜ ಮನೆತನಗಳಾದ ಕಾಕತೀಯರು ಮತ್ತು ಹೊಯ್ಸಳರ ಕಾಲದ ದಾಖಲೆಗಳನ್ನು ಪರಿಶೀಲಿಸಿದಾಗ ಈ ಸಮಸ್ಯೆಗೆ

ಉತ್ತರ ಸಿಗಬಲ್ಲದು. ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕು ಲಿಂಗಾಪುರ ಗ್ರಾಮದ ಶಿಲಾಶಾಸನವು "ಶ್ರೀವೀರಹೊಯಿಸಳ ಬಲ್ಲಾಳ ಮಹಾರಾಯರು ನಮಗೆ ವಂಶಾನ್ವಯವಾಗಿ ನಾಯಕತನಕ್ಕೆ ಪಾಲಿಸಿದ ದಾನಿವಾಸ ಸೀಮೆ"[೫೬] ಎಂಬ ವಿವರಗಳನ್ನು ಒಳಗೊಂಡಿದೆ.

ಈ ಶಾಸನದಲ್ಲಿ ಉಕ್ತಗೊಂಡಿರುವ ವೀರ ಬಲ್ಲಾಳನು ಇಮ್ಮಡಿ ಬಲ್ಲಾಳನಿರಬೇಕು. ವಿಷ್ಣುವರ್ಧನನ ನಂತರ ಹೊಯ್ಸಳ ರಾಜವಂಶದಲ್ಲಿ ಕಾಣಿಸಿಕೊಂಡ ಇನ್ನೊಬ್ಬ ಪ್ರಖ್ಯಾತ ಅರಸನೆಂದರೆ ಎರಡನೇ ಬಲ್ಲಾಳ. ಇವನಿಗೆ ವೀರ ಬಲ್ಲಾಳ ಎಂಬ ಹೆಸರಿತ್ತು. ಅವನಿಂದಾಗಿ ಈ ವಂಶಕ್ಕೆ ಬಲ್ಲಾಳ ಎಂಬ ಹೆಸರು ಬಂದಿತ್ತು.[೫೭] ಕಾಕತೀಯ ರಾಣಿ ರುದ್ರಾಂಬೆಯ ಆಡಳಿತಾವಧಿ ಕ್ರಿ.ಶ. ೧೨೬೨ರಿಂದ ೧೨೮೯ ಆಗಿದ್ದು ವೀರ ಹೊಯ್ಸಸಳ ಬಲ್ಲಾಳ (ಇಮ್ಮಡಿ ಬಲ್ಲಾಳನ) ಅಧಿಕಾರಾವಧಿಯು ಕ್ರಿ.ಶ. ೧೧೭೩–೧೨೨೦ ಆಗಿದ್ದು ಕಾಕತೀಯರ ಇಮ್ಮಡಿ ಪ್ರಾತಾಪರುದ್ರದೇವನ ಅಧಿಕಾರಾವಧಿಯು ಕ್ರಿಶ ೧೨೮೯ರಿಂದ ೧೩೨೩ ಆಗಿದ್ದು ಇವರಿಬ್ಬರೂ ಸಮಕಾಲೀನ ಅರಸರಾಗಿದ್ದಾರೆ. ಶಾಸನದಲ್ಲಿ ಉಕ್ತಗೊಂಡಿರುವ ವೀರ ಹೊಯಿಸಳ ಬಲ್ಲಾಳನು ಇಮ್ಮಡಿ ಬಲ್ಲಾಳನಾಗಿದ್ದಾನೆ. ಹೊಯ್ಸಳರ ಅಧೀನವಾದ ಗುಮ್ಮನಾಯಕ ಪಾಳೆಯ ಪಟ್ಟು ಕ್ರಿ.ಶ. ೧೨೪೩ರಲ್ಲಿ ಅಸ್ತಿತ್ವಕ್ಕೆ ಬಂದಿರಬಹುದಾದರೆ, ಹೊಯ್ಸಳರಲ್ಲಿ ಈ ನಾಯಕತನ ಪದ್ಧತಿಯು ಒಂದನೇ ನರಸಿಂಹನ ಕಾಲದಿಂದಲೇ ಜಾರಿಗೆ ಬಂದಿರುವ ಸಾಧ್ಯತೆಗಳಿವೆ. ಕಾಕತೀಯರ ರಾಣಿ ರುದ್ರಾಂಬೆಯು ಒಂದನೇ ನರಸಿಂಹನ ಸಮಕಾಲೀನಳಲ್ಲ; ಹೊಯ್ಸಳರ ಕಾಲದ ಕೆಲವು ಪಾಳೆಯಪಟ್ಟುಗಳ ಪೂರ್ವ ಇತಿಹಾಸವನ್ನು ಗಮನಿಸುವುದಾದರೆ ಈ ಪಾಳೆಯ ಪಟ್ಟುಗಳು ಕಾಕತೀಯ ರಾಣಿ ರುದ್ರಾಂಬೆಯ ಆಡಳಿತಕ್ಕಿಂತ ಮುಂಚಿತವಾಗಿಯೇ ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದಿದ್ದವು. ಹೊಯ್ಸಳರಲ್ಲಿ ನಾಯಕ ಹುದ್ದೆಯ ಪ್ರಸ್ತಾಪ ಕೇವಲ ೪ ಶಾಸನಗಳಲ್ಲಿಯೂ, ದಂಡನಾಯಕರುಗಳ ಉಲ್ಲೇಖ ನೂರಾರು ಶಾಸನಗಳಲ್ಲಿ ಉಲ್ಲೇಖಿತಗೊಂಡಿದೆ. ಹೀಗಾಗಿ ನಾಯಕತನ ವ್ಯವಸ್ಥೆಯು ಹೊಯ್ಸಳರಿಗೆ ಪರಿಚಿತಗೊಂಡ ವ್ಯವಸ್ಥೆಯಾಗಿತ್ತು. ಸಾಗರ ತಾಲ್ಲೂಕಿನ ಶೇಣಿಗೆಯ ಶಾಸನವು ಹೊಯ್ಸಳರ ಕಾಲದ ನಾಯಕತನದ ಸುಳಿವನ್ನು ಸ್ಪಷ್ಟವಾಗಿ ನೀಡುತ್ತದೆ. ಈ ಶಾಸನದಲ್ಲಿ ಬಿಲ್ಲ ಬೊಮ್ಮನೆಂಬುವನು ಕದಂಬ (ಹಾನುಗಲ್ಲು) ಕೀರ್ತಿದೇವನ ಪಡೆವಳನಾಗಿದ್ದು ಆತನ ಮಗ ಕುಪ್ಪನು ಕೀರ್ತಿದೇವನಿಂದ ೫೦೦ ಆಳುಗಳ ಸಾಮಂತವೃತ್ತಿಯನ್ನು ಪಡೆಯುತ್ತಾನೆ. ಅಂದರೆ ಬಹುಶಃ ಅವನು ೫೦೦ ಸೈನಿಕರ ಪಡೆಯನ್ನು ನಿರ್ವಹಿಸಬೇಕಾಗಿತ್ತು. ಅದರ ನಿರ್ವಹಣೆಗಾಗಿ ಅಥವಾ ಆತನ ಸ್ಥಾನಕ್ಕಾಗಿ ಆತನಿಗೆ ಪೆದ್ದೊರದೊಡ್ಡಿ(?) ಎಂಬ ಒಂದು ಹಳ್ಳಿಯ ಮಾನ್ಯವನ್ನು ನೀಡಲಾಗುತ್ತದೆ.[೫೮] ಈ ಶಾಸನದಿಂದ ಸ್ಪಷ್ಟವಾಗುವ ಅಂಶವೇನೆಂದರೆ ಸೈನ್ಯವನ್ನು ಸಂಘಟಿಸಿ ರಾಜನ ಸೇವೆಯನ್ನು ಮಾಡಿದ್ದಕ್ಕೆ ಪ್ರತಿಫಲವಾದ ರಾಜನು ಭೂಮಿಯನ್ನು ಮಾನ್ಯವಾಗಿ ನೀಡುತ್ತಿದ್ದನು. ಈ ರೀತಿ ರಾಜನಿಂದ ಭೂಮಿಯನ್ನು ಮಾನ್ಯವಾಗಿ ಪಡೆಯುತ್ತಿದ್ದ ನಾಯಕರು ರಾಜನಿಗೆ ನಿಷ್ಠರಾಗಿ ಸೇವೆಯನ್ನು ಸಲ್ಲಿಸಬೇಕಾಗಿತ್ತು.

ಹೊಯ್ಸಳ ಕಾಲದ ಶಾಸನಗಳನ್ನು ಪರಿಶೀಲಿಸಿದಾಗ ಕ್ರಿ.ಶ. ೧೩೦೨ರ ಎರಡನೇ ನರಸಿಂಹನ ಕಾಲದ ಹಳೆಬೀಡು ಶಾಸನವು

೧. ಪ್ಲವಾಸಂ ಮಾಘ ಬ ೧೪ (ಪರಿಷ್ಕೃತ ಕಾಲ ಕ್ರಿ.ಶ. ೧೩೦೨) ಸೋದಂದು ಶ್ರೀ ಹೊಯ್ಸಣೇಶ್ವ

೨. ರ ದೇವರ ಮದಳೆಯ ಮಯಿಲಯನ ಮಗಳು ಮಲವೆ ಆ ದೇವರ ನವರಾತ್ರೆಯ ದಮ್ಮಕೆ ಆ ದೇವರ ಮಾಲೆಗಾರ

೩. ದೇವಣ್ಣನ ಮಗ ಗುಡಿಗನು ತಂನ ನಾಯ್ಕತನದ ವೋಲಗದ ಮೇಲೆ ಆ ಮಲವೆ ಧರ್ಮಕೆ ಕೊಟ್ಟ ಗ೧ ಪ೫ ಅ ಮಲವೆ ಮೇಲೆ

೪. ಮುಂನುಳುದು ಹಣ ವಯ್ದು ಅನ್ತು ಗದ್ಯಾಣಂ ಎರಡನೂ ಆ ಮಲವೆಯ ಕೈಯಲು ಆ ಗುಡಿಗನು ಬೀಜ ಒಂನಾಗಿ

೫. ಪ್ರಾಣ ಹಣ ನಾಕನು ತೆರುತ್ತಬಹನು॥[೫೯]

ಎಂದಿದೆ ಈ ಶಾಸನದಲ್ಲಿ ೨ನೇ ನರಸಿಂಹ ಹೆಸರು ಉಲ್ಲೇಖಿತಗೊಂಡಿಲ್ಲ. ಆದರೂ ಶಾಸನದ ಕಾಲಮಾನ ಕ್ರಿ.ಶ. ೧೩೦೨ ಆಗಿರುವುದರಿಂದ ಇದು ೨ನೇ ನರಸಿಂಹನ ಕಾಲಾವಧಿಯ ಶಾಸನವೆಂದೇ ತೀರ್ಮಾನಿಸಬೇಕಾಗುತ್ತದೆ. ಶಾಸನದಲ್ಲಿ ಮಾಹಿತಿಯ ಪ್ರಕಾರ ಹೊಯ್ಸಣೇಶ್ವರ ದೇವರ ಸೇವೆಗೆ ಮಾಲೆಗಾರ ದೇವಣ್ಣನ ಮಗನಾದ ಗುಡಿಗನು ತಂನ ನಾಯ್ಕತನದ ವೋಲಗದ ಮೇಲೆ ಧರ್ಮ ಮಾಡಿರುವ ವಿವರಗಳಿವೆ. ಈ ಶಾಸನವು ಹೊಯ್ಸಳರ ಕಾಲದ ನಾಯಕತನ ವ್ಯವಸ್ಥೆಗೆ ಸಂಬಂಧಿಸಿದಂತೆ ದೊರೆಯುವ ಮೊಟ್ಟ ಮೊದಲ ಶಾಸನೋಕ್ತ ಆಧಾರವಾಗಿದ್ದು ಹೊಯ್ಸಳರ ಇಮ್ಮಡಿ ನರಸಿಂಹನ ಆಡಳಿತಾವಧಿಯಲ್ಲಿ ನಾಯಕ ವ್ಯವಸ್ಥೆ ಇತ್ತು ಎಂಬುದನ್ನು ಸಮರ್ಥಿಸುತ್ತದೆ.

ಕ್ರಿ.ಶ. ೧೩೦೨ರ ಅರಸೀಕೆರೆ ಶಾಸನ (ಶಾ.ಸ. ೨೧೬)ವು ಹೊಯ್ಸಳರ ಇಮ್ಮಡಿ ನರಸಿಂಹನ ಕಾಲಕ್ಕೆ ಸಂಬಂಧಿಸಿದೆ. ಈ ಶಾಸನವು ಇಮ್ಮಡಿ ನರಸಿಂಹನು ದೋರ ಸಮುದ್ರವನ್ನು ಆಳುತ್ತಿರುವಾಗಿ ಆತನ ಪ್ರಧಾನಿ ಮಾವಂತನಪ್ಪ ನಾಯಕ (ಹೆಸರು ತುಟ್ರಿತಗೊಂಡಿದೆ) ಹಾಗೂ ಮುದುವಡಿಯ ಮಹಾಜನಗಳು ತಮ್ಮ ಕುಲದೈವವಾದ ಅಮೃತೇಶ್ವರ ದೇವರಿಗೆ ನಂದಾದೀಪಕ್ಕೆ ದತ್ತಿಯಾಗಿ ನೀಡಿದ ವಿವರಗಳಿವೆ. ಈ ಶಾಸನದ ಕೊನೆಯ ಭಾಗದಲ್ಲಿ "ಪಳೆಯಬೊಂಮ್ಮ ಕಲಿಮಲಬೊಮ್ಮೆಯನ ಅಳಿಯ... ಹುರಿಗಿಲವಾಡಿಯ ಅಮರೆಯ ನಾಯಕನ ಮಾಚಯ ಎಂದು ಉಕ್ತಗೊಂಡಿದೆ.[೬೦]

ಈ ಶಾಸನದಲ್ಲಿ ಮಾಹಿತಿಯ ಪ್ರಕಾರ ಇಮ್ಮಡಿ ನರಸಿಂಹನ ಅಮರೆಯ ನಾಯಕನಾಗಿ ಮಾಚಯ್ಯನು ಕಾರ್ಯ ನಿರ್ವಹಿಸುತ್ತಿದ್ದುದು ಸ್ಪಷ್ಟವಾಗುತ್ತದೆ. ಆದರೆ ಆ ಕಾಲಮಾನದ ದೃಷ್ಟಿಯಿಂದ ಇದು ವೀರಬಲ್ಲಾಳನ ಕಾಲದ ಶಾಸನವಾಗಿದೆ. ಈ ಶಾಸನದಲ್ಲಿ ಕ್ರಿ.ಶ. ೧೩೨೫ರಲ್ಲಿ ತ್ಯಾಗಂಣಗವುಡನು ತನ್ನ ನಾಯಕತನಕ್ಕೆ ಸಲ್ಲುವ ಸವಿತೆಯ ನಾಡಿನ ಭೂಮಿಯನ್ನು ದಾನ ನೀಡಿರುವನು.[೬೧] ಒಟ್ಟಾರೆಯಾಗಿ ಹೊಯ್ಸಳರ ಕಾಲದಲ್ಲಿ ನಾಯಕತನವು ಜಾರಿಯಲ್ಲಿದ್ದುದು ಅವರ ಕಾಲದ

ಶಾಸನಗಳಿಂದ ಸ್ಪಷ್ಟವಾಗುತ್ತದೆ. ಹೊಯ್ಸಳರು ಮತ್ತು ಕಾಕತೀಯರು ಸಮಕಾಲೀನ ರಾಜಮನೆತನಗಳಾಗಿದ್ದು ಈ ಎರಡು ರಾಜಪ್ರಭುತ್ವಗಳಲ್ಲಿ ನಾಯಕ ವ್ಯವಸ್ಥೆ ಜಾರಿಯಲ್ಲಿರುವುದು ಶಾಸನೋಕ್ತ ದಾಖಲೆಗಳಿಂದ ರುಜುವಾತಾಗಿದೆ.

ಹೊಯ್ಸಳರ ರಾಜ್ಯಾಡಳಿತವನ್ನು ಗಮನಿಸಿದಾಗ ಅವರ ರಾಜ್ಯಾಡಳಿತವು ಏಕೀಕೃತ ರಾಜ್ಯಕ್ಕಿಂತ ಊಳಿಗಮಾನ್ಯ ಒಕ್ಕೂಟ ರಚನೆಯನ್ನು ಹೊಂದಿದ್ದು ಮಾಂಡಲೀಕ ವ್ಯವಸ್ಥೆಗೆ ಹೆಚ್ಚು ಒತ್ತನ್ನು ಕೊಟ್ಟಿತ್ತು.[೨] ಇವರ ಕಾಲದಲ್ಲಿ ದಂಡನಾಯಕರು ಮತ್ತು ಮನ್ನೆಯರು ಭೂಮಿ ಕಾಣಿಕೆಗಳನ್ನು ಅನುವಂಶಿಕವಾಗಿ ಪಡೆಯುತ್ತಿದ್ದರು. ಅದಕ್ಕೆ ಪ್ರತಿಯಾಗಿ ಕೇಂದ್ರಾಡಳಿತಕ್ಕೆ ನಿರ್ದಿಷ್ಟವಾದ ಸೇವೆಯನ್ನು ಸಲ್ಲಿಸುತ್ತಿದ್ದರು.[೩] ಹೊಯ್ಸಳರು ಮಾಂಡಲೀಕ ವ್ಯವಸ್ಥೆಯನ್ನು ಹೆಚ್ಚಾಗಿ ಅಳವಡಿಸಿಕೊಂಡಿದ್ದರು. ಸೈನ್ಯ ಮತ್ತು ಶಸ್ತ್ರಾಸ್ತ್ರಗಳ ಬಲದಿಂದ ಅನೇಕ ಪ್ರದೇಶಗಳನ್ನು ಗೆದ್ದುಕೊಂಡಿದ್ದರು. ಕೊಂಗಾಳ್ವರು, ಚೆಂಗಾಳ್ವರು ಸಾಂತರು ಇವರ ಕಾಲದ ಪ್ರಮುಖ ಸಾಮಂತರಾಗಿದ್ದರು. ಹೊಯ್ಸಳರ ಕಾಲದ ಈ ಐದು ಶಾಸನಗಳನ್ನು ಪರಿಶೀಲಿಸಿದಾಗ ನಾಯಕತನವು ಅವರ ಸಾಮಂತ ವ್ಯವಸ್ಥೆಯಲ್ಲಿ ಅಡಕವಾಗಿರುವುದು ಸ್ಪಷ್ಟವಾಗುತ್ತದೆ. ಈ ಐದು ಶಾಸನಗಳನ್ನು ಹೊರೆತುಪಡಿಸಿದರೆ ಹೊಯ್ಸಳರ ದಾಖಲೆಗಳು ನಾಯಕತನದ ಕುರಿತು ಯಾವ ಮಾಹಿತಿ ನೀಡುವುದಿಲ್ಲ. ಆದರೆ ಹೊಯ್ಸಳರ ಕಾಲದಲ್ಲಿ ಕೋಲಾರ ಜಿಲ್ಲೆಯಲ್ಲಿ ಉಗಮಗೊಂಡ ಪಾಳೆಯಪಟ್ಟುಗಳ ಸಂರಚನೆಯನ್ನು ಗಮನಿಸಿದಾಗ ನಾಯಕತನದ ಎಲ್ಲ ಲಕ್ಷಣಗಳನ್ನು ಈ ಪಾಳೆಯಪಟ್ಟುಗಳ ಅಸ್ತಿತ್ವದಲ್ಲಿ ಗುರುತಿಸಬಹುದು. ಗುಮ್ಮನಾಯಕ ಪಾಳೆಯ ಪಟ್ಟು ಕಾಕತೀಯರ ರಾಣಿ ರುದ್ರಾಂಬೆಯ ಅಧಿಕಾರಕ್ಕಿಂತ ಪೂರ್ವದಲ್ಲಿಯೂ ಅಂದರೆ ೨೧ ವರ್ಷಗಳ ಮುಂಚೆಯೇ ಉದಯಗೊಂಡಿದ್ದರಿಂದ ಪಾಳೆಯಗಾರ ಪದ್ಧತಿಯು ಹೊಯ್ಸಳರ ಕಾಲದಲ್ಲಿಯೇ ಉದಯಗೊಂಡಿತು ಎಂದು ಹೇಳಬಹುದು. ಇದಕ್ಕೆ ದಾನಿವಾಸ ಒಡೆಯರ ಶಾಸನವೂ ಸ್ಪಷ್ಟೀಕರಣ ನೀಡುತ್ತದೆ. ದಾನಿವಾಸ ಒಡೆಯರ ಪೂರ್ವಿಕರು ಹೊಯ್ಸಳರ ರಾಜ್ಯಾಡಳಿದಲ್ಲಿ ನಾಯಕರಾಗಿ ಇಲ್ಲವೇ ದಂಡಾಯಕರಾಗಿ ಸೇವೆಯನ್ನು ಸಲ್ಲಿಸಿರಬೇಕು. ತಮ್ಮ ಸೇವೆಗೆ ಪ್ರತಿಯಾಗಿ ಅವರು ವೀರ ಹೊಯಿಸಳ ಬಲ್ಲಾಳನಿಂದ ತಮ್ಮ ನಾಯಕತನಕ್ಕಾಗಿ ದಾನಿವಾಸ ಸೀಮೆಯನ್ನು ಪಡೆದುಕೊಂಡಿರುವ ಸಾಧ್ಯತೆಗಳಿವೆ. ಈ ಅಂಶಗಳನ್ನು ಪರಿಶೀಲಿಸಿದರೆ ನಾಯಕತನ ವ್ಯವಸ್ಥೆಯ ಲಕ್ಷಣಗಳು ಮೊದಲ ಬಾರಿಗೆ ಹೊಯ್ಸಳರ ಕಾಲದಲ್ಲಿಯೇ ಜಾರಿಯಾಗಿರುವ ಸಾಧ್ಯತೆಗಳಿವೆ ಎನ್ನುತ್ತಾರೆ ಡಿ.ಎಂ. ಯೋಗೀಶ್ವರಪ್ಪ ಅವರು. ಆದರೆ ಈ ವ್ಯವಸ್ಥೆ ಹೊಯ್ಸಳರ ಕಾಲದಲ್ಲಿ ಹೆಚ್ಚು ಜನಪ್ರಿಯಗೊಂಡಿರಲಿಲ್ಲ. ಹೊಯ್ಸಳರ ಮೂರನೇ ಬಲ್ಲಾಳನ ಮಹಾ ಮಂಡಲೇಶ್ವರನಾಗಿದ್ದ ಒಂದನೇ ಹರಿಹರನು ಹೊಯ್ಸಳರ ರಾಜಕೀಯ ಅಸಮರ್ಥತತೆಯನ್ನು ಬಳಸಿಕೊಂಡು ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿದನು. ಹೊಯ್ಸಳರ ಪ್ರಾಂತೀಯ ಮಟ್ಟದ ಆಡಳಿತದಲ್ಲಿ ಅಪಾರ ಅನುಭವ ಗಳಿಸಿಕೊಂಡಿದ್ದ ಹಕ್ಕ ಬುಕ್ಕ ಸಹೋದರರು ಮುಂದೆ ತಮ್ಮ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಅಮರನಾಯಕರೆಂಬ ಊಳಿಗಮಾನ್ಯ ದೊರೆಗಳ ಮೂಲಕ ಪ್ರಾಂತೀಯ ಆಡಳಿತ ವ್ಯವಸ್ಥೆಯನ್ನು ಸುಗಮಗೊಳಿಸಿದರು. ಹರಿಹರರಾಯ ಮತ್ತು ಬುಕ್ಕರಾಯರು ಆರಂಭದಲ್ಲಿ ಕಾಕತೀಯ ಆಡಳಿತ

ವ್ಯವಸ್ಥೆಯಲ್ಲಿ ಭಂಡಾರಿಗಳಾಗಿ ಕಾರ್ಯ ನಿರ್ವಹಿಸಿದ ಅನುಭವವನ್ನು ಪಡೆದುಕೊಂಡಿದ್ದರು. ಹೀಗೆ ಹೊಯ್ಸಳ ಮತ್ತು ಕಾಕತೀಯ ಸಾಮ್ರಾಜ್ಯಗಳಲ್ಲಿ ರೂಢಿಯಲ್ಲಿದ್ದ ನಾಯಕ ಪದ್ಧತಿಯನ್ನು ಬದಲಾದ ಕಾಲಕ್ಕೆ ತಕ್ಕಂತೆ ಪರಿಷ್ಕರಿಸಿಕೊಂಡು ತಮ್ಮ ಆಡಳಿತ ವ್ಯವಸ್ಥೆಯಲ್ಲಿ ಜಾರಿಗೆ ತಂದರು. ಮುಂದೆ ಈ ಪದ್ಧತಿಯು ಅತ್ಯಂತ ಜನಪ್ರಿಯ ಪದ್ಧತಿಯಾಗಿ ಹೊರಹೊಮ್ಮಿ ವಿಜಯನಗರ ಸಾಮ್ರಾಜ್ಯದ ಅಭ್ಯುದಯಕ್ಕೆ ಅಮರನಾಯಕರು ಕಾರಣರಾದರು. ವಿಜಯನಗರದ ರಾಜ್ಯಾಡಳಿತ, ಪೌರನೀತಿ, ಸೈನಿಕ, ಕಂದಾಯ ವಿಭಾಗಗಳಲ್ಲಿ ಅಮರನಾಯಕರು ಸಲ್ಲಿಸಿದ ಸೇವೆಗಳಿಂದ ವಿಜಯನಗರ ಸಾಮ್ರಾಜ್ಯವು ದಕ್ಷಿಣ ಭಾರತದಲ್ಲಿಯೇ ಬೃಹತ್ ಸಾಮ್ರಾಜ್ಯವಾಗಿ ಬೆಳೆಯಲು ಕಾರಣವಾಯಿತು.

ಎ. ವಿಜಯನಗರ ಕಾಲದಲ್ಲಿ ನಾಯಕತನ ಪದ್ಧತಿ

ವಿಜಯನಗರ ಕಾಲದ ಪ್ರಾಂತೀಯ ಆಡಳಿತ ವ್ಯವಸ್ಥೆಯಲ್ಲಿ ಊಳಿಗಮಾನ್ಯ ಪದ್ಧತಿಯನ್ನು ಆಧರಿಸಿ ನಿಂತ ನಾಯಕ ಪದ್ಧತಿ ಅಥವಾ ಅಮರನಾಯಕ ಪದ್ಧತಿಯು ಜಾರಿಯಲ್ಲಿತ್ತು. ಅಮರನಾಯಕರು ಕೇಂದ್ರ ಸರಕಾರದ ನೇರ ಹತೋಟಿಯಲ್ಲಿದ್ದು ಭಾಗಶಃ ಸ್ವತಂತ್ರವನ್ನು ಪಡೆದುಕೊಂಡಿದ್ದರು. ಅವರಿಗೆ ಸಾಮಂತ, ನಾಯಕ, ದಂಡನಾಯಕ, ಮಂಡಲೇಶ್ವರ, ಮಹಾರಾಜ, ಒಡೆಯರ್ ಮುಂತಾದ ವಿವಿಧ ಹೆಸರುಗಳಿದ್ದವು. ಅವರಿಗೆ ಸಮದರ್ಜೆ ಮತ್ತು ಅಧಿಕಾರವಿತ್ತು.[೬೪]

ವಿಜಯನಗರ ಕಾಲದ ನಾಯಕ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳುವ ಮುನ್ನ ಅವರ ಪ್ರಭುತ್ವ ಮತ್ತು ಅದರ ಸ್ವರೂಪವನ್ನು ವಿಶ್ಲೇಷಿಸಬೇಕಾಗುತ್ತದೆ. ವಿಜಯನಗರದ ಆಡಳಿತ ವ್ಯವಸ್ಥೆಯನ್ನು ಕುರಿತಾದ ಮೂರು ಮುಖ್ಯ ಪ್ರಶ್ನೆಗಳು ಹೀಗಿವೆ.

ಎ. ವಿಜಯನಗರವು ಕೇಂದ್ರೀಕೃತ ಪ್ರಭುತ್ವವಾಗಿತ್ತೆ?

ಬಿ. ವಿಕೇಂದ್ರೀಕೃತ ಅಥವಾ ಊಳಿಗಮಾನ್ಯ ಪ್ರಭುತ್ವವಾಗಿತ್ತೆ?

ಸಿ. ಕೇಂದ್ರೀಕೃತ ಮತ್ತು ವಿಕೇಂದ್ರೀಕೃತ ಅಂಶಗಳೆರಡನ್ನು ಒಳಗೊಂಡ ಸಾಮ್ರಾಜ್ಯವಾಗಿತ್ತೆ?

ವಿಜಯನಗರ ಸಾಮ್ರಾಜ್ಯವು ಕೇಂದ್ರೀಕೃತ ಅಥವಾ ಏಕೀಕೃತ ಸರ್ಕಾರ ವ್ಯವಸ್ಥೆಯ ಲಕ್ಷಣವನ್ನು ಹೊಂದಿತ್ತೆ ಎಂಬ ಪ್ರಶ್ನೆಗೆ ಸಾಕಷ್ಟು ವಾದ ವಿವಾದಗಳಿವೆ. ನೀಲಕಂಠ ಶಾಸ್ತ್ರಿಯವರು ವಿಜಯನಗರ ಸಾಮ್ರಾಜ್ಯವು ಕೇಂದ್ರೀಕೃತ ಪ್ರಭುತ್ವ ಮಾದರಿಯನ್ನು ಒಳಗೊಂಡ ಸರ್ಕಾರವಾಗಿತ್ತು ಎಂದೂ, ರಾಜ್ಯಾಡಳಿತವೆಲ್ಲವೂ ಸಾಮ್ರಾಜ್ಯದ ರಾಜನ ಕೈಯಲ್ಲಿತ್ತು ಎಂದೂ, ರಾಜನು ಸೂಕ್ತ ಅಧಿಕಾರಿಗಳ ಅಥವಾ ಅಧಿಕಾರಿವರ್ಗದ ಮೂಲಕ ಎಲ್ಲವನ್ನು ನಿಯಂತ್ರಿಸಲಾಗುತ್ತಿತ್ತು. ವಿಜಯನಗರದ ಸಾರ್ವಭೌಮದಲ್ಲಿಯೇ ಎಲ್ಲ ಅಧಿಕಾರಿಗಳು ಅಡಕವಾಗಿದ್ದು ಕೇಂದ್ರದಿಂದಲೇ ಎಲ್ಲವನ್ನು ನಿಯಂತ್ರಿಸಲಾಗುತ್ತಿತ್ತು.[೬೫] ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಆದರೆ ವಿಜಯನಗರ ಕಾಲದ ಶಾಸನಗಳನ್ನು ಕೂಲಂಕಶವಾಗಿ ಪರಿಶೀಲಿಸಿದಾಗ ನೀಲಕಂಠ ಶಾಸ್ತ್ರಿಯವರ ಕೇಂದ್ರೀಕೃತ ಪ್ರಭುತ್ವದ ಮಾದರಿಯನ್ನು ಬದಿಗೆ ತಳ್ಳಬೇಕಾಗುತ್ತದೆ. ಕಾರಣ ಕೇಂದ್ರೀಕೃತ ಪ್ರಭುತ್ವದ ಕಲ್ಪನೆಯೇ ವಿಜಯನಗರ ಸರ್ಕಾರದ ಮಾದರಿಗೆ ತುಂಬಾ ವಿರುದ್ಧವಾದುದು ಎಂದು ಹೇಳಬೇಕಾಗುತ್ತದೆ.

ಬರ್ಟನ್ ಸ್ಟೇನ್ ಅವರು ವಿಜಯನಗರದ ಸಾಮ್ರಾಜ್ಯದ ಸ್ವರೂಪವನ್ನು ಕುರಿತಂತೆ ಸೆಗ್‌ಮೆಂಟರಿ ಸಿದ್ಧಾಂತವನ್ನು ತಮ್ಮ ಪೆಸೆಂಟ್ ಸ್ಟೇಟ್ ಅಂಡ್ ಸೊಸೈಟಿ ಇನ್ ಮಿಡೀವಲ್ ಸೌತ್ ಇಂಡಿಯಾ ಎಂಬ ಕೃತಿಯಲ್ಲಿ ವಿವರಿಸಿದ್ದಾರೆ. ಬರ್ಟನ್ ಸ್ಟೇನ್ ಅವರು ನೀಲಕಂಠ ಶಾಸ್ತ್ರಿಯವರ ಕೇಂದ್ರೀಕೃತ ಪ್ರಭುತ್ವದ ಮಾದರಿಯನ್ನು ಅಲ್ಲಗಳೆಯುತ್ತಾರೆ. ಸ್ಟೇನ್ ಅವರ ಪ್ರಕಾರ ವಿಜಯನಗರ ಸಾಮ್ರಾಜ್ಯವು ಖಂಡಾಂತರ ರಾಜ್ಯವಾಗಿದೆ. ವಿಜಯನಗರ ಸಾಮ್ರಾಜ್ಯವು ಅನೇಕ ತುಂಡುಗಳಿಂದ ಕೂಡಿದ್ದು ಅವುಗಳಿಂದ ಅವೃತವಾಗಿವೆ. ಸಾಮ್ರಾಜ್ಯದ ತುತ್ತತುದಿಯಲ್ಲಿ ಕೇಂದ್ರ ಸರ್ಕಾರದ ಪ್ರಾಬಲ್ಯವಿರುತ್ತದೆ. ಸಾಮ್ರಾಜ್ಯದ ವಿವಿಧ ಪ್ರಾಂತ್ಯಗಳಲ್ಲಿ ಸಾಮಂತ ರಾಜರಿದ್ದು ಅವರು ಸಾಮ್ರಾಟನಿಗೆ ವಿಧೇಯರಾಗಿರುತ್ತಿದ್ದರು. ಅದೇ ಪ್ರಕಾರ ಸ್ಥಾನಿಕ ಆಡಳಿತ ಘಟಕಗಳಾದ ನಾಡು, ಗ್ರಾಮ, ಅಗ್ರಹಾರ, ದೇವಾಲಯ, ಮಠ, ವ್ಯಾಪಾರಿ ಶ್ರೇಣಿ ಮುಂತಾದವುಗಳು ಕೂಡ ತಮ್ಮದೇ ಆದ ಶಾಸನಗಳನ್ನು ರೂಪಿಸಿಕೊಂಡು ಅಧಿಕಾರ ಚಲಾಯಿಸುವ ಸ್ವಾಯತ್ತತೆಯನ್ನು ಪಡೆದುಕೊಂಡಿದ್ದವು. ಈ ವಲಯವನ್ನು ಸಾಮ್ರಾಜ್ಯದ ಅಂಚು ಎಂದು ಸ್ಟೇನ್ ಕಲ್ಪಿಸುತ್ತಾರೆ. ಈ ರೀತಿ ಈ ಎರಡು ಪ್ರಕಾರದ ಸಾರ್ವಭೌಮತ್ವಗಳೇ ಘಟಕ ಪ್ರಭುತ್ವದ ಮೂಲ ಲಕ್ಷಣವಾಗಿದೆ. ಸ್ಟೇನ್‌ರವರು ಹೇಳುವಂತೆ ರಾಜನ ಪರಮಾಧಿಕಾರವು ತಿರುಳು ಭಾಗ ಅಥವಾ ಅಂಚಿನಲ್ಲಿತ್ತೆ ವಿನಃ ಕೆಳಭಾಗದಲ್ಲಿ ಇರಲಿಲ್ಲ. ರಾಜ ಮತ್ತು ಸಾಮಂತ ನಾಯಕನ ನಡುವಿನ ಸಂಬಂಧವು ಕೇವಲ ಧಾರ್ಮಿಕಾಚರಣೆಗೆ ಮಾತ್ರ ಸೀಮಿತವಾಗಿತ್ತೇ ವಿನಃ ರಾಜಕೀಯ ಸಂಬಂಧದಲ್ಲಿ ಇರಲಿಲ್ಲ.[೬೬]

ಸ್ಟೈನ್‌ರವರ ಪ್ರಕಾರ "ತಿರುಳಿನಲ್ಲಿ" ಅಂದರೆ ಕೇಂದ್ರದಲ್ಲಿ ರಾಜನ ಪ್ರತ್ಯಕ್ಷ ಆಡಳಿತವಿದ್ದರೆ, ಘಟಕದಲ್ಲಿ ಅಂದರೆ ತಳಭಾಗದಲ್ಲಿ ಅಪ್ರತ್ಯಕ್ಷವಾದ ಆಡಳಿತವಿತ್ತು ಎನ್ನುತ್ತಾರೆ. ಅಂಚಿನ ಅಥವಾ ತಳಭಾಗದಲ್ಲಿರುವ ಸ್ವಾಯತ್ತತ ಸಂಸ್ಥೆಗಳೆಂದರೆ ನಾಡು, ನಿಗಮ, ಅಗ್ರಹಾರ, ದೇವಾಲಯ, ಶ್ರೇಣಿ, ಹಳ್ಳಿಗಳು ಇವೆಲ್ಲವೂ ಸ್ವಾಯತ್ತತ ಸರ್ಕಾರಗಳಾಗಿದ್ದವು. ನಾಡುಗಳಲ್ಲಿ ಮುಖಂಡನಿದ್ದು ಅಲ್ಲಿನ ಆಡಳಿತವನ್ನು ಅವನೇ ನಡೆಸುತ್ತಿದ್ದನು. ಅಲ್ಲಿನ ಆಡಳಿತ, ನ್ಯಾಯದಾನ, ಕಂದಾಯಗಳ ಸಮಸ್ಯೆಗಳ ನಿವಾರಣೆಯನ್ನು ಅವನೇ ಮಾಡಿಕೊಳ್ಳುತ್ತಿದ್ದನು.[೬೭]

ಸ್ಟೈನ್ ಅವರ ಸೆಗ್ಮಂಟರಿ ಪ್ರಭುತ್ವದ ಬಗ್ಗೆ ಬಹುತೇಕ ವಿದ್ವಾಂಸರು ಟೀಕಿಸಿದ್ದಾರೆ. ಅದರಲ್ಲಿ ಜಪಾನಿನ ವಿದ್ವಾಂಸ ನೊಬಾರೊ ಕರಾಷಿಮಾ ಪ್ರಮುಖರಾಗಿದ್ದಾರೆ. ಕರಾಷಿಮಾರ ಅವರು ಸೆಗ್‌ಮೆಂಟರಿ ಪ್ರಭುತ್ವವನ್ನು ತಳ್ಳಿ ಹಾಕಿ ವಿಜಯನಗರ ಸಾಮ್ರಾಜ್ಯವು ಕೇಂದ್ರೀಕೃತ ಮತ್ತು ವಿಕೇಂದ್ರೀಕೃತ ಅಂಶಗಳೆರಡನ್ನು ಒಳಗೊಂಡಿದ್ದ ಮಿಶ್ರ ಪ್ರಭುತ್ವವಾಗಿತ್ತು ಎನ್ನುವರು.[೬೮] ಇದಕ್ಕೆ ನೂರಾರು ಶಾಸನಗಳನ್ನು ನಿದರ್ಶನವಾಗಿ ನೀಡಿ ತಮ್ಮ ವಾದವನ್ನು ಅವರು ಸಮರ್ಥಿಸಿಕೊಂಡಿದ್ದಾರೆ.

ಎ.ವಿ. ವೆಂಕಟರತ್ನಂ ಅವರು ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರಕಾರಗಳು ಎಂಬ ಕೃತಿಯಲ್ಲಿ ವಿಜಯನಗರ ಸಾಮ್ರಾಜ್ಯವು ಸಂಯುಕ್ತ ಊಳಿಗಮಾನ್ಯ ವಿಕೇಂದ್ರೀಕೃತ ಅಂಶಗಳನ್ನು ಒಳಗೊಂಡ ಸರಕಾರ ಪದ್ಧತಿಯನ್ನು ಒಳಗೊಂಡಿತ್ತು ಎನ್ನುತ್ತಾರೆ. ಅಗ್ರಹಾರಗಳು, ಮಠಗಳು,

ಗ್ರಾಮಸಭೆಗಳು, ನಾಡು ಮತ್ತು ವರ್ತಕ ಸಂಘಗಳು ವಿಜಯನಗರ ಕಾಲದಲ್ಲಿ ಸ್ವಯಂ ಆಡಳಿತ ಘಟಕಗಳಾಗಿದ್ದವು ಎನ್ನುತ್ತಾರೆ.[೧೯]

ಟಿ.ವಿ ಮಹಾಲಿಂಗಂ ಅವರು Administration and Social life under Vijayanagara ಎಂಬ ಕೃತಿಯಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ಅನೇಕ ಬಗೆಯ ಸ್ವಯಂ ಆಡಳಿತ ಘಟಕಗಳಿದ್ದವು. ಅವು ಸ್ಥಳೀಯ ಸರಕಾರದ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದವು ಎಂಬ ವಾದವನ್ನು ಮುಂದಿಟ್ಟು ವಿಜಯನಗರವು ವಿಕೇಂದ್ರೀಕೃತ ಸರಕಾರ ವ್ಯವಸ್ಥೆಯನ್ನು ಒಳಗೊಂಡಿತ್ತು ಎಂಬ ತೀರ್ಮಾನಕ್ಕೆ ಬರುತ್ತಾರೆ.[೨೦]

ಕೆ.ಎಸ್ ಶಿವಣ್ಣನವರು ಕರ್ನಾಟಕ ಚರಿತ್ರೆ ಸಂಪುಟ ಮೂರರಲ್ಲಿ ವಿಜಯನಗರದ ಅರಸರು ಅಧಿಕಾರವನ್ನು ವಿಕೇಂದ್ರೀಕರಿಸಿ ಪ್ರಾಂತ್ಯಗಳಲ್ಲಿ ಮಾನ್ಯತೆ ಪಡೆದ ವಿವಿಧ ನಾಯಕರಿಗೆ ಸ್ವಾಯತ್ತತೆಯನ್ನು ನೀಡಿ ಸೇನೆ ಹಾಗೂ ಕಂದಾಯದ ಅಧಿಕಾರವನ್ನು ನೀಡಿದ್ದರು ಎಂದಿದ್ದಾರೆ.[೨೧] ಇದರಿಂದ ಸ್ಪಷ್ಟವಾಗುವ ಅಂಶವೇನೆಂದರೆ ವಿಜಯನಗರವು ಕೇಂದ್ರೀಕೃತ ಮತ್ತು ವಿಕೇಂದ್ರೀಕೃತ ಅಂಶಗಳೆರಡನ್ನು ಒಳಗೊಂಡ ಸಂಯುಕ್ತ ಸರಕಾರವಾಗಿತ್ತು.

ವಿಜಯನಗರ ಸಾಮ್ರಾಜ್ಯವು ಕೇಂದ್ರೀಕೃತ ಆಧಾರದ ಮೇಲೆ ವ್ಯವಸ್ಥೆಗೊಂಡಿರಲಿಲ್ಲ ಎಂಬ ವಾದಕ್ಕೆ ಬಹುತೇಕ ಆಧುನಿಕ ವಿದ್ವಾಂಸರು ತಮ್ಮ ಸಹಮತವನ್ನು ವ್ಯಕ್ತಪಡಿಸುತ್ತಾರೆ. ಕೃಷ್ಣಸ್ವಾಮಿ ಅಯ್ಯರ್, ಎನ್, ವೆಂಕಟರಮಣಯ್ಯ, ಟಿ.ವಿ ಮಹಾಲಿಂಗಂ, ನೊಬಾರೊ ಕರಾಷಿಮಾ, ಕೆ.ಎಸ್ ಶಿವಣ್ಣ ಮತ್ತು ವೆಂಕಟರತ್ನಂ ಇವರಲ್ಲಿ ಪ್ರಮುಖರಾಗಿದ್ದಾರೆ.

ಕ್ರಿ.ಶ. ೧೬ನೆಯ ಶತಮಾನದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದ ಪೋರ್ಚುಗೀಸ್ ಪ್ರವಾಸಿಗರಾದ ಫಯಾಸ್ ಮತ್ತು ನ್ಯೂನಿಜರ ಬರವಣಿಗೆಗಳು ವಿಜಯನಗರವು ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಹೊಂದಿತ್ತು ಎಂಬುದಕ್ಕೆ ಸಮರ್ಥನೆಯನ್ನು ನೀಡುತ್ತವೆ. ನ್ಯೂನಿಜನ ಪ್ರಕಾರ ವಿಜಯನಗರ ಸಾಮ್ರಾಜ್ಯವು ಅಚ್ಯುತರಾಯನ ಕಾಲದಲ್ಲಿ ಸುಮಾರು ೨೦೦ಕ್ಕೂ ಹೆಚ್ಚು ನಾಯಕರುಗಳಿಂದ ಆಳಲ್ಪಡುತ್ತಿತ್ತು.[೨೨] ಕೃಷ್ಣದೇವರಾಯ ಮತ್ತು ಅಚ್ಯುತದೇವರಾಯನ ಆಡಳಿತದ ಅವಧಿಯಲ್ಲಿ ಕೆಳ ಹಂತದಲ್ಲಿ ಬೇರೆ ಬೇರೆ ದರ್ಜೆಯ ಕ್ಯಾಪ್ಟನ್‌ಗಳಿದ್ದರೆಂದು ದಾಖಲಿಸಿದ್ದಾರೆ. ಈ ಕ್ಯಾಪ್ಟನ್‌ಗಳೇ ಅಮರನಾಯಕರು. ಈ ನಾಯಕರ ವರಮಾನದ ಮೇಲೆ ರಾಜನು ತನಗೆ ಸಲ್ಲಬೇಕಾಗಿದ್ದ ಕಪ್ಪವನ್ನು ನಿಗದಿ ಮಾಡುತ್ತಿದ್ದನೆಂದು ಫಯಾಸ್ ತಿಳಿಸುತ್ತಾನೆ.[೨೩]

ವಿಜಯನಗರ ಕಾಲದ ಸಾವಿರಾರು ಭೂದಾನ ಶಾಸನಗಳು ಮತ್ತು ಸಾಹಿತ್ಯಾಧಾರಗಳು ವಿಜಯನಗರ ಸಾಮ್ರಾಜ್ಯದಲ್ಲಿ ಸೇನಾಧಿಕಾರಿಗಳ ವಿಶಿಷ್ಟ ವರ್ಗವಿತ್ತು ಎಂಬುದನ್ನು ಸಮರ್ಥಿಸುತ್ತವೆ. ವಿಜಯನಗರ ಆಡಳಿತ ವ್ಯವಸ್ಥೆಯಲ್ಲಿ ಊಳಿಗಮಾನ್ಯ ದೊರೆಗಳಿದ್ದರೆಂಬ ಅಂಶವನ್ನು ವಿದೇಶಿ ಪ್ರವಾಸಿಗರ ಬರಹಗಳು ದೃಢೀಕರಿಸುತ್ತವೆ. ಅಮರನಾಯಕ ಎನ್ನುವುದು ಒಂದು ಸೇನಾ ವರ್ಗವಾಗಿದ್ದು ರಾಜನಿಂದ ಸೈನಿಕ ಸೇವೆಯ ಷರತ್ತಿನ ಮೇಲೆ ಭೂಮಿಯನ್ನು ದಾನವಾಗಿ ಪಡೆದ ನಾಯಕನನ್ನು

ಅಮರನಾಯಕನೆಂದು, ಈ ಭೂಮಿಯನ್ನು ಅಮರ ಮಾಗಣಿ, ಅಮರ ಮಹಲೆ, ಅಮರ ಅಂಬಲಿ ಮುಂತಾದ ಹೆಸರುಗಳಿಂದ ಕರೆಯುವುದು ಶಾಸನಾಧಾರಗಳಿಂದ ತಿಳಿದುಬರುತ್ತದೆ.

ನಾಯಕರುಗಳಿಗೆ ನೀಡುತ್ತಿದ್ದ ಭೂಮಿಗೆ ಅನುಗುಣವಾಗಿ ಅವರಿಗೆ ರಾಜಕೀಯ, ಆಡಳಿತ, ಆರ್ಥಿಕ ಮತ್ತು ನ್ಯಾಯಾಧಿಕಾರಿಗಳು ತಮ್ಮ ಅಮರ ಪ್ರದೇಶದ ವ್ಯಾಪ್ತಿಗೆ ಅನ್ವಯಿಸುವಂತೆ ದೊರಕುತ್ತಿದ್ದವು. ಸೈನ್ಯ ಹಾಗೂ ಹಣಕಾಸಿಗೆ ಸಂಬಂಧಿಸಿದಂತೆ ತಮ್ಮ ಕರ್ತವ್ಯಗಳನ್ನು ನಿಭಾಯಿಸುವವರಿಗೆ ಯಾವುದೇ ಬಗೆಯ ಕಷ್ಟಗಳಿರುತ್ತಿರಲಿಲ್ಲ. ಶಾಸನಗಳಲ್ಲಿ ಚಕ್ರವರ್ತಿಯು ಅಮರನಾಯಕರಿಗೆ ಭೂಮಿಯನ್ನು ಮಂಜೂರು ಮಾಡಿದ ವಿಚಾರವನ್ನು ನೋಡುತ್ತೇವೆ.[೨೪] ಉದಾಹರಣೆಗೆ ಎಫಿಗ್ರಾಫಿಯಾ ಕರ್ನಾಟಿಕ ಶಾಸನ ಸಂಪುಟ ೧೨- ಮಧುಗಿರಿ ತಾಲೂಕಿನ ಶಾಸನವು (ಶಾ.ಸ. ೧೦೬) ಇಮ್ಮಡಿ ನರಸಿಂಹನ ಕಾರ್ಯಕರ್ತರಾದ ನರಸನಾಯಕರು ವೊಡೆಯರ ಕಾರ್ಯಕ್ಕೆ ಕರ್ತರಪ್ಪ ಅರಸರಾವುತರು ಎಂಬ ಸ್ಥಳೀಯ ಅಧಿಕಾರಿಯ ಹಿಡಿತದಲ್ಲಿದ್ದು, ತಮ್ಮ ನಾಯಕತನಕ್ಕೆ ಸಲ್ಲುವ ಮಿಡಿಗೇಶಿ ಸೀಮೆಯ ಹೊಸಕೆರೆಯ ಬ್ರಹ್ಮದೇವರ ಅಮೃತಪಡಿಗಾಗಿ ಹೊಸಕೆರೆಯ ಕೆಳಗಿನ ಭೂಮಿಯನ್ನು ದತ್ತಿಯಾಗಿ ಬಿಟ್ಟ ವಿವರಗಳನ್ನು ಒಳಗೊಂಡಿದೆ.[೨೫]

ದಕ್ಷಿಣ ಭಾರತದಲ್ಲಿ ವಿಜಯನಗರದ ಹುಟ್ಟು, ಅದರ ಬೆಳವಣಿಗೆ ಮತ್ತು ಅವನತಿಯು ಅದು ಕೈಗೊಂಡ ಯುದ್ಧಗಳು ಮತ್ತು ಸಂಘಟಿತಗೊಳಿಸಿಕೊಂಡಿದ್ದ ಸೈನಿಕ ಶಕ್ತಿಯ ಮೇಲೆಯೇ ಅವಲಂಬಿಸಿತ್ತು. ವಿಜಯನಗರ ಸಾಮ್ರಾಜ್ಯವು ಮೂಲತಃ ಮಿಲಿಟರಿ ಸಾಮ್ರಾಜ್ಯವಾಗಿತ್ತು. ಸಂಗಮರ ಕಾಲದಿಂದ ತುಳುವ ಕಾಲದವರೆಗೂ ಅದು ತನ್ನ ಸಾಮ್ರಾಜ್ಯವನ್ನು ಕಟ್ಟಿಕೊಳ್ಳಲು ಮತ್ತು ರಾಜಕೀಯ ಶಕ್ತಿಗಳನ್ನು ವೃದ್ಧಿಸಿಕೊಳ್ಳಲು ನೆರೆಹೊರೆಯ ರಾಜ್ಯಗಳೊಂದಿಗೆ ಸದಾ ದಿಗ್ವಿಜಯಗಳನ್ನು ಕೈಗೊಳ್ಳುತ್ತಲೇ ಇತ್ತು. ವಿಜಯನಗರದ ಅರಸರು ಪ್ರತಿಷ್ಠಾಪನ, ಸಮುದ್ದರಣ ಮತ್ತು ನಿರ್ಮೂಲನಾ ತಂತ್ರಗಳನ್ನು ಅಳವಡಿಸಿಕೊಂಡು ಯುದ್ಧಗಳನ್ನು ಮಾಡುತ್ತಿದ್ದರು.

ವಿಜಯನಗರದ ಅರಸರು ಬೇರೆ ರಾಜ್ಯಗಳಲ್ಲಿ ಆಂತರಿಕ ಗಲಭೆ ಮತ್ತು ದಂಗೆಗಳು ಸಂಭವಿಸಿದಾಗ, ಸಿಂಹಾಸನಕ್ಕಾಗಿ ಅಥವಾ ಉತ್ತರಾಧಿಕಾರಕ್ಕಾಗಿ ದಂಗೆಗಳು ನಡೆದ ಸಮಯದಲ್ಲಿ ಮಧ್ಯ ಪ್ರವೇಶಿಸಿ ಸಿಂಹಾಸನಕ್ಕೆ ಸರಿಯಾದ ಉತ್ತರಾಧಿಕಾರಿಯನ್ನು ನೇಮಿಸುತ್ತಿದ್ದರು. ಉದಾ. ತುಳುವ ವಂಶದ ಕೃಷ್ಣದೇವರಾಯನು ಗುಲ್ಬರ್ಗಾ ಕೋಟೆಗೆ ಮುತ್ತಿಗೆ ಹಾಕಿದಾಗ, ಗುಲ್ಬರ್ಗಾದಲ್ಲಿ ಬಂಧಿಯಾಗಿದ್ದ ೨ನೇ ಮಹಮದ್ ಶಾಹನನ್ನು ಸೆರೆಮನೆಯಿಂದ ಬಿಡಿಸಿ ಅವನನ್ನು ಗುಲಬರ್ಗಾ ಸಿಂಹಾಸನದ ಮೇಲೆ ಕುಳ್ಳಿರಿಸಿದನು. ಬಹುಮನಿ ಸುಲ್ತಾನಷಾಹಿಯನ್ನು ಪುನರುಜ್ಜೀವನಗೊಳಿಸಿದ ನೆನಪಿಗಾಗಿ ಯವನರಾಯ ಸ್ಥಾಪನಾಚಾರ್ಯ ಎಂಬ ಬಿರುದನ್ನು ಧರಿಸಿದನು.[೨೬] ಹಾಗೆಯೇ ವಿಜಯನಗರದ ಅರಸರು ತಾವು ಗೆದ್ದುಕೊಂಡ ರಾಜ್ಯಗಳ ಸೋತ ರಾಜರು ಶರಣಾಗತರಾದರೆ ಅವರನ್ನು ಉದ್ಧರಿಸುತ್ತಿದ್ದರು. ಉದಾ. ತುಳುವ ಮನೆತನವು ಹಿಂದಿನ ರಾಜಮನೆತನವಾದ ಸಂಗಮ ಮನೆತನದ ವಂಶಸ್ಥರನ್ನು ಗೌರವಾದರಗಳಿಂದ ನಡೆಸಿಕೊಂಡಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಸಾಳ್ವ

ಗೋವಿಂದರಾಜನು ಕೃಷ್ಣದೇವರಾಯನ ಕಾಲದಲ್ಲಿ ರಾಜ್ಯಪಾಲನಾಗಿದ್ದನು. ಮತ್ತು ಮೊದಲ ವರ್ಗದ ಅಮರನಾಯಕನಾಗಿದ್ದನು.[೭] ಹೀಗೆ ಸಮುದ್ಧರಣ ನೀತಿಯನ್ನು ವಿಜಯನಗರದವರು ಪಾಲಿಸುತ್ತಿದ್ದರು. ಸಾಮಂತರು ದಂಗೆ ಎದ್ದು ವಿಜಯನಗರದ ಸಾರ್ವಭೌಮತ್ವಕ್ಕೆ ಧಕ್ಕೆ ತರಲು ಪ್ರಯತ್ನಿಸಿದರೆ ಅಂತಹವರನ್ನು ನಿರ್ಮೂಲನೆ ಮಾಡಲಾಗುತ್ತಿತ್ತು. ಉದಾ. ಉಮ್ಮತ್ತೂರಿನ ಗಂಗರಾಜನನ್ನು ಹತ್ಯೆ ಮಾಡಲಾಯಿತು. ಅವಿಧೇಯತೆ ತೋರಿದ ಮತ್ತಿ ತಿಮ್ಮಣ್ಣನಾಯಕನನ್ನು ಬಂಧಿಸಿ ಸೆರೆಮನೆಯಲ್ಲಿಡಲಾಯಿತು. ಈ ನಾಯಕ ಸೆರೆಮನೆಯಲ್ಲಿಯೇ ಮರಣ ಹೊಂದಿದನು. ವಿಜಯನಗರದ ಅರಸರು ಈ ಮೇಲಿನ ಮೂರು ಬಗೆಯ ರಾಜಕೀಯ ತಂತ್ರಗಳನ್ನು ಬಳಸಿಕೊಂಡು ತಮ್ಮ ಸಾಮಂತರನ್ನು, ನಾಯಕರನ್ನು ಬಗ್ಗುಬಡಿಯುತ್ತಿದ್ದರು.

ವಿಜಯನಗರದಂತಹ ಬೃಹತ್ ಸಾಮ್ರಾಜ್ಯದಲ್ಲಿ ಏಕೀಕೃತ ಸರ್ಕಾರ ವ್ಯವಸ್ಥೆ ಯಶಸ್ವಿಯಾಗಿ ಜಾರಿಗೆ ತರಲು ಸಾಧ್ಯವೇ ಇರಲಿಲ್ಲ. ಕಾರಣ ದಕ್ಷಿಣ ಭಾರತದ ಬಹುತೇಕ ಭೂಭಾಗವನ್ನು ನಿಯಂತ್ರಣದಲ್ಲಿಟ್ಟುಕೊಂಡಿದ್ದ ವಿಜಯನಗರವು ಏಕರೂಪ ಆಡಳಿತ ವ್ಯವಸ್ಥೆಯನ್ನು ಹೊಂದಿರಲಿಲ್ಲ. ವಿವಿಧ ಭಾಷೆ, ಜನಾಂಗ, ಸಂಸ್ಕೃತಿಯನ್ನು ಅಳವಡಿಸಿಕೊಂಡಿದ್ದ ಜನರನ್ನು ಅಲ್ಲಿಯೇ ಹಂಪಿಯಂತಹ ರಾಜಧಾನಿಯಲ್ಲಿ ವಾಸಿಸುತ್ತಿದ್ದ ಅರಸರಿಗೆ ನಿಯಂತ್ರಿಸುವುದು ಕಠಿಣವಾಗಿತ್ತು. ಹೀಗಾಗಿ ವಿಜಯನಗರದ ಅರಸರು ತಾವು ಗೆದ್ದ ಪ್ರದೇಶಗಳನ್ನು ರಾಜ್ಯಪಾಲರ ಆಡಳಿತಕ್ಕೆ ನೀಡುತ್ತಿದ್ದರು. ಇಲ್ಲವೇ ಸ್ಥಳೀಯ ನಾಯಕರಿಗೆ ನಾಯಕತನವನ್ನು ನೀಡಿ ದೂರದ ಪ್ರದೇಶಗಳನ್ನು ನಿಯಂತ್ರಣದಲ್ಲಿಟ್ಟುಕೊಂಡಿದ್ದರು. ವಿಜಯನಗರ ಕಾಲದಲ್ಲಿ ಪ್ರಾದೇಶಿಕ ಮಟ್ಟದಲ್ಲಿ ಅಮರನಾಯಕರುಗಳ ಆಡಳಿತ ಜಾರಿಯಲ್ಲಿತ್ತು. ಈ ನಾಯಕರು ಪ್ರಾದೇಶಿಕ ಮಟ್ಟದಲ್ಲಿ ಭಾಗಶಃ ಸೈನ್ಯ ಮತ್ತು ಕಂದಾಯಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದರು. ಕೇಂದ್ರದ ಪರವಾಗಿ ಕಪ್ಪವನ್ನು ವಸೂಲಿ ಮಾಡುತ್ತ ಕೇಂದ್ರಕ್ಕೆ ನಿಗದಿ ಪಡಿಸಿದ ಆದಾಯವನ್ನು ಅಥವಾ ಪೊಗಾದಿಯನ್ನು ಸಲ್ಲಿಸುತ್ತಿದ್ದರು. ಕೇಂದ್ರದ ಸೇವೆಗೆ ಸದಾ ಸಜ್ಜುಗೊಂಡಿರುವ ಸೇನೆಯನ್ನು ಇಟ್ಟುಕೊಂಡಿರುತ್ತಿದ್ದರು. ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧವು ಕಂದಾಯ ಮತ್ತು ಮಿಲಿಟರಿ ಸಂಬಂಧಗಳಿಗೆ ಮಾತ್ರ ಸೀಮಿತಗೊಂಡಿರದೆ ತಮ್ಮ ರಾಜ್ಯಗಳ ಆಗುಹೋಗುಗಳನ್ನು ಕೇಂದ್ರಕ್ಕೆ ವರದಿ ಮಾಡಬೇಕಾಗಿತ್ತು. ಹೀಗಾಗಿ ರಾಜ್ಯಗಳು ವಿಜಯನಗರ ಕಾಲದಲ್ಲಿ ಅರೆ ಸ್ವಾಯತ್ತತೆಯನ್ನು ಪಡೆದುಕೊಂಡಿದ್ದವು ಎಂದು ಹೇಳಬಹುದು.

ವಿಜಯನಗರ ಸಾಮ್ರಾಜ್ಯದಲ್ಲಿ ಅಮರನಾಯಕ ವ್ಯವಸ್ಥೆಯಲ್ಲಿ ಮಾತ್ರ ನಾವು ಊಳಿಗಮಾನ್ಯ ಅಂಶಗಳನ್ನು ಗುರುತಿಸುತ್ತೇವೆ. ಒಟ್ಟಿನಲ್ಲಿ ವಿಜಯನಗರ ಸಾಮ್ರಾಜ್ಯವು ಕೇಂದ್ರೀಕೃತ ರಾಜ್ಯವಾಗಿರದೆ, ಒಕ್ಕೂಟ ರಚನೆಯನ್ನು ಹೊಂದಿದ್ದು ಕೇಂದ್ರೀಕೃತ, ವಿಕೇಂದ್ರಿಕೃತ ಲಕ್ಷಣಗಳೆರಡನ್ನು ಹೊಂದಿದ್ದ ಸಂಯುಕ್ತ ಸರಕಾರ ವ್ಯವಸ್ಥೆಯನ್ನು ಒಳಗೊಂಡಿತ್ತು ಎಂದು ಹೇಳಬಹುದು.

ವಿಜಯನಗರದ ಪ್ರಾದೇಶಿಕ ಮಟ್ಟದಲ್ಲಿ ಆಡಳಿತಾಧಿಕಾರಿಯಾಗಿ ಕರ್ತವ್ಯಗಳನ್ನು ನಿಭಾಯಿಸುತ್ತಿದ್ದ ಅಮರನಾಯಕರು ತಮ್ಮ ಅಧಿಕಾರ ಮತ್ತು ಸ್ಥಾನಮಾನಗಳ ಹಂಚಿಕೆಯಲ್ಲಿ ವಿಜಯನಗರದ

ಅರಸರೊಂದಿಗೆ ಯಾವ ಬಗೆಯ ಸಂಪರ್ಕವನ್ನು ಹೊಂದಿದ್ದರು ಮತ್ತು ಅವರ ಅಧಿಕಾರದ ಸ್ವರೂಪವೇನು ಎಂಬುದನ್ನು ಪ್ರಮುಖವಾಗಿ ವಿಶ್ಲೇಷಿಸಬೇಕಾಗುತ್ತದೆ. ಅಮರನಾಯಕ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅಮರನಾಯಕ ವ್ಯವಸ್ಥೆಯಿಂದ ವಿಜಯನಗರ ಸಾಮ್ರಾಜ್ಯದ ಅಧಿಕಾರವು ಕೇಂದ್ರದಲ್ಲಿ ಸಂಚಯಗೊಳ್ಳದೇ ಹಲವಾರು ಮಿಲಿಟರಿ ಆಡಳಿತ ಘಟಕಗಳ ಮೂಲಕ ಅಧೋಮುಖವಾಗಿ ಹಂಚಿಹೋಯಿತೆಂಬುದು ಬಹುತೇಕ ವಿದ್ವಾಂಸರ ಅಭಿಪ್ರಾಯವಾಗಿದೆ. ಅಮರನಾಯಕ ಪದ್ಧತಿಯು ದಕ್ಷಿಣ ಭಾರತದಲ್ಲಿ ಸಾಮಂತೀಕರಣವನ್ನು ಪ್ರಬಲಗೊಳಿಸಿದ್ದು ಅಲ್ಲದೆ ಅದರಲ್ಲಿಯೇ ಉಪ ಸಾಮಂತೀಕರಣವನ್ನು ಸೃಷ್ಟಿಸಿತು. ಉದಾಹರಣೆಗೆ ಚಿತ್ರದುರ್ಗ ನಾಯಕರು ವಿಜಯನಗರದ ಸಾಮಂತರಾಗಿದ್ದರೆ ಅವರ ಕೆಳಗೆ ದೊಡ್ಡೇರಿ, ಹರತಿ, ನಾಯಕನಹಟ್ಟಿ ಮೊದಲಾದ ಉಪ ಸಾಮಂತ ಮನೆತನಗಳು ಅಸ್ತಿತ್ವದಲ್ಲಿದ್ದವು.

ಇನ್ನು ವಿಜಯನಗರ ರಾಜ್ಯಾಡಳಿತದಲ್ಲಿ ಅಮರನಾಯಕರು ಪಡೆದಿದ್ದ ಸ್ಥಾನಮಾನಗಳು, ಅವರ ಪರಾಕ್ರಮ, ವಿಜಯನಗರದ ಅರಸರೊಂದಿಗೆ ಅವರಿಗಿದ್ದ ಸಂಬಂಧಗಳು ಹಾಗೂ ಅವರು ವಿಜಯನಗರ ಅರಸರಿಂದ ಪಡೆದುಕೊಂಡಿದ್ದ ಭೂಮಿಯ ಆಧಾರದ ಮೇಲೆ ಅವಲಂಬಿಸಿದ್ದವು. ಅಮರನಾಯಕರಿಗೆ ನೀಡಲಾಗುತ್ತಿದ್ದ ಭೂದಾನವನ್ನು ಅಮರ ಮಾಗಣಿ, ಅಮರ ಮಹಲೆ, ಅಮರ ಅಂಬಲಿ, ಅಮರ ಪಂದೆ ನಾಯಕ ಎಂಬ ವಿವಿಧ ಹೆಸರುಗಳಿಂದ ಕರೆಯುತ್ತಿದ್ದರು. ರಾಜನಿಗೆ ಅಗತ್ಯ ಬಿದ್ದಾಗಲೆಲ್ಲ ಸೈನ್ಯ ಸೇವೆಯನ್ನು ನೀಡಬೇಕಾಗಿತ್ತು. ಅಮರ ಎನ್ನುವುದು ಒಂದು ಸಾವಿರ ಕಾಲ್ದಳದ ಒಡೆತನವನ್ನು ಸಂಕೇತಿಸುತ್ತದೆ. ಪ್ರತಿಯೊಬ್ಬ ಅಮರನಾಯಕರು ಚಕ್ರವರ್ತಿ ಸೇವೆಗೆ ತಮ್ಮ ಸೈನ್ಯವನ್ನು ಸಜ್ಜಾಗಿರಿಸಿಕೊಳ್ಳಬೇಕಾಗಿತ್ತು. ಅದು ಅವರು ಪಡೆದ ಭೂಭಾಗವನ್ನು ಮತ್ತು ಸಂಪನ್ಮೂಲಗಳ ಆಧಾರದ ಮೇಲೆ ಅವಲಂಬಿತವಾಗುತ್ತಿತ್ತು. ವಿಜಯನಗರದ ಸಮಗ್ರತೆ ಮತ್ತು ಪ್ರಭುತ್ವ ರಕ್ಷಣೆ, ಆರ್ಥಿಕ ಸಂಪನ್ಮೂಲಗಳ ಕ್ರೋಢೀಕರಣವನ್ನು ವಿಜಯನಗರದ ಅರಸರು ನಾಯಕರಿಂದ ಪಡೆದುಕೊಳ್ಳುತ್ತಿದ್ದರು.

ಬಿ. ಅಮರನಾಯಕರ ವರ್ಗೀಕರಣ

ವಿಜಯನಗರ ಕಾಲದ ಅಮರನಾಯಕರಲ್ಲಿ ಪ್ರಧಾನವಾಗಿ ಮೂರು ವರ್ಗಗಳು ಕಂಡುಬರುತ್ತವೆ.

೧. ಮೊದಲ ವರ್ಗದ ಅಮರನಾಯಕರು

ಮೊದಲ ವರ್ಗದ ಅಮರನಾಯಕರು ವಿಜಯನಗರದ ಅರಸರಿಂದ ಪೂರ್ಣ ಪ್ರಮಾಣದ ಅಧಿಕಾರವನ್ನು ಹೊಂದಿರುತ್ತಿದ್ದರು. ಹೆಚ್ಚು ಪ್ರಮಾಣದ ಭೂಮಿಯನ್ನು ರಾಜನಿಂದ ದಾನವಾಗಿ ಪಡೆಯುತ್ತಿದ್ದರು. ಕೆಳದಿಯ ಚೌಡಪ್ಪನಾಯಕ ವಿಜಯನಗರದ ಅರಸರಿಂದ ಎಂಟು ಅಮರ ಮಾಗಣಿಗಳನ್ನು ಪಡೆದುಕೊಂಡಿದ್ದ. ಮೊದಲ ವರ್ಗದ ಅಮರನಾಯಕರು ಶಾಸನಗಳನ್ನು ಹೊರಡಿಸುವ ಅಧಿಕಾರವನ್ನು ಹೊಂದಿದ್ದರು. ಆದರೆ ಶಾಸನಗಳಲ್ಲಿ ತಮ್ಮ ಒಡೆಯರಾದ ವಿಜಯನಗರದ ಅರಸರನ್ನು ಸ್ಮರಿಸುತ್ತ ಅವರ ಹೆಸರಿನಲ್ಲಿ ಶಾಸನಗಳನ್ನು ಹೊರಡಿಸಬೇಕಾಗಿತ್ತು. ತಮ್ಮ ಆಡಳಿತ ಪ್ರದೇಶಗಳಲ್ಲಿ

ಕಾನೂನುಗಳನ್ನು ಹೊರಡಿಸುವ, ನ್ಯಾಯ ತೀರ್ಮಾನ ಮಾಡುವ ಹಾಗೂ ಹಣಕಾಸಿನ ವಿಚಾರದಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಹಕ್ಕನ್ನು ಹೊಂದಿದ್ದರು. ಅದೇ ರೀತಿ ತಮ್ಮ ಆಡಳಿತ ವ್ಯಾಪ್ತಿಯಲ್ಲಿ ಬರುವ ಯಾವುದೇ ಪ್ರದೇಶವನ್ನು ಇಲ್ಲವೇ ಗ್ರಾಮಗಳನ್ನು ದಾನ ಮಾಡುವ ಅಧಿಕಾರವನ್ನು ಹೊಂದಿದ್ದರು. ಇದರ ಜೊತೆಗೆ ಪಂಚವಾದ್ಯಗಳ ಬಳಕೆಯ ಅರ್ಹತೆ, ಸಾಮಂತ, ಸಿಂಹಾಸನ, ಚಾಮರ, ಪಲ್ಲಕ್ಕಿ, ಅಶ್ವಾರೋಹಿ ಪಡೆ, ಆನೆಗಳನ್ನಿಟ್ಟುಕೊಳ್ಳಬಹುದಿತ್ತು.[೭೮] ಕೋಟೆಗಳನ್ನು ಕಟ್ಟಲು ಮತ್ತು ತಮ್ಮ ಸ್ವಂತದ ಸೇನೆಯನ್ನು ಹೊಂದಿರಲು ಅವರಿಗೆ ಅವಕಾಶವಿತ್ತು. ಸ್ವಂತ ನಾಣ್ಯಗಳನ್ನು ಸಹ ಹೊರಡಿಸಬಹುದಿತ್ತು. ಉದಾಹರಣೆಗೆ ಯಲಹಂಕದ ನಾಡ ಪ್ರಭುಗಳು ಟಂಕಸಾಲೆಯನ್ನು ಸ್ಥಾಪಿಸಿ ಪ್ರಾಂತೀಯ ಮಟ್ಟದಲ್ಲಿ ಭೈರವ ಎಂಬ ನಾಣ್ಯಗಳನ್ನು ಚಲಾವಣೆಗೆ ತಂದಿದ್ದರು.[೭೯] ಚಿತ್ರದುರ್ಗ ನಾಯಕರು ಟಂಕಸಾಲೆಯನ್ನು ಹೊಂದಿದ್ದರು ಹಾಗೂ ದುರ್ಗಿ ಎಂಬ ನಾಣ್ಯಗಳನ್ನು ಹೊರಡಿಸಿದ್ದರು.[೮೦] ಗುಮ್ಮನಾಯಕ ಪಾಳೆಯದ ಅಮರನಾಯಕ ಕದಿರಪ್ಪನಾಯಕನು ತನ್ನ ಅಧಿಕಾರಾವಧಿಯಲ್ಲಿ ಟಂಕಸಾಲೆಯನ್ನು ಸ್ಥಾಪಿಸಿ ನಾಣ್ಯಗಳನ್ನು ಹೊರಡಿಸಿದನು.[೮೧] ಜೊತೆಗೆ ಚಿತ್ರದುರ್ಗದ ನಾಯಕರು, ಯಲಹಂಕದ ನಾಡಪ್ರಭುಗಳು, ಗುಮ್ಮನಾಯಕ ಪಾಳೆಯಗಾರರು ವಿಜಯನಗರದ ಅರಸರ ಅನುಮತಿಯನ್ನು ಪಡೆದು ಕೋಟೆಗಳನ್ನು ನಿರ್ಮಿಸಿಕೊಂಡಿದ್ದರು. ಮೊದಲ ವರ್ಗದ ಅಮರನಾಯಕರಿಗೆ ಡೋಲಿ, ಪಲ್ಲಕ್ಕಿ, ರಾತ್ರಿ ಪಂಜುಗಳನ್ನು ನಿಗದಿತವಾಗಿ ಉರಿಸುವ ಅವಕಾಶವಿತ್ತು. ಇಟ್ಟುಕೊಳ್ಳಬೇಕಾದ ಸೈನ್ಯದ ಪ್ರಮಾಣ ಆಯಾ ಸಂಸ್ಥಾನದ ವರಮಾನಕ್ಕೆ ತಕ್ಕಂತೆ ಇರುತ್ತಿತ್ತು. ಮೊದಲ ವರ್ಗದ ಅಮರನಾಯಕರು ತಮ್ಮ ಕೆಳಗೆ ಉಪನಾಯಕರನ್ನು ಹೊಂದಿರಬಹುದಿತ್ತು. ಇಂತಹ ಉಪನಾಯಕರಿಗೂ ವಿಜಯನಗರದ ಅರಸರಿಗೂ ಯಾವುದೇ ನೇರ ಸಂಬಂಧಗಳು ಇರುತ್ತಿರಲಿಲ್ಲ. ಚನ್ನಪಟ್ಟಣ, ಕಳಲೆ, ಚಿತ್ರದುರ್ಗ, ಕೆಳದಿ, ಯಲಹಂಕ ನಾಯಕರು ತಮ್ಮ ಕೆಳಗೆ ಇಂತಹ ಉಪನಾಯಕರನ್ನು ನೇಮಿಸಿಕೊಳ್ಳುತ್ತಿದ್ದರು. ಕರ್ನಾಟಕದಲ್ಲಿ ಕೆಳದಿ, ಯಲಹಂಕ, ಚಿತ್ರದುರ್ಗ, ಬಂಕಾಪುರ, ಕಳಲೆ, ಮಂಗಳೂರಿನ ಪಾಳೆಯಪಟ್ಟುಗಳು, ಚನ್ನಪಟ್ಟಣ, ಗುಮ್ಮನಾಯಕನ ಪಾಳೆಯ ಮುಂತಾದವುಗಳು ಮೊದಲ ವರ್ಗದ ಅಮರ ನಾಯಕತನವನ್ನು ಪಡೆದುಕೊಂಡಿದ್ದವು.

೨. ಎರಡನೆಯ ವರ್ಗದ ಅಮರನಾಯಕರು

ಎರಡನೆಯ ವರ್ಗದ ಅಮರನಾಯಕರು ಮೊದಲ ವರ್ಗದ ಅಮರನಾಯಕರಿಗೆ ಇದ್ದಂತಹ ಅಧಿಕಾರ ಹಾಗೂ ಸವಲತ್ತುಗಳನ್ನು ಹೊಂದಿರುತ್ತಿರಲಿಲ್ಲ. ಇವರು ಹಳ್ಳಿಗಳನ್ನು ಮಾರುವ ಮತ್ತು ದಾನ ನೀಡುವ ಯಾವುದೇ ಹಕ್ಕನ್ನು ಹೊಂದಿರಲಿಲ್ಲ. ಆದರೆ ವಿಜಯನಗರದ ಅರಸರ ಅನುಮತಿಯನ್ನು ಪಡೆದು ಯಾವ ಕೆಲಸವನ್ನಾದರೂ ಮಾಡಬಹುದಿತ್ತು. ಎರಡನೆಯ ವರ್ಗದ ಅಮರನಾಯಕರಿಗೆ ವಿಜಯನಗರದ ಅರಸನ ಹೆಸರನ್ನು ಉಲ್ಲೇಖಿಸದೇ ಭೂಮಿಯನ್ನು ದಾನ ಮಾಡುವ ಅಧಿಕಾರವಿರಲಿಲ್ಲ. ಉದಾಹರಣೆಗೆ ಟಿ. ನರಸೀಪುರದ ಕೃಷ್ಣದೇವರಾಯನ ಕಾಲದ ಶಾಸನವೊಂದು ಕೃಷ್ಣದೇವರಾಯ

ಮಹಾಪ್ರಧಾನರಾದ ಸಾಳುವ ಗೋವಿಂದವೊಡೆಯರು ರಾಯರ ಮನೆಯ ಬೆಹಾರಿಗಳು ಬೆಟ್ಟಪ್ಪಸೆಟ್ಟಿ ಹೊಂಗಾಣಿ ಸೆಟ್ಟಿಯರ ಮಕ್ಕಳಾದ ಶರಣಪ್ಪ ಶೆಟ್ಟಿಯವರಿಗೆ ಉಪ ಅಮರನಾಯಕತನವನ್ನು ನೀಡಿದ ವಿವರಗಳಿವೆ.[೮] ಈ ಶಾಸನದಲ್ಲಿ ಕೃಷ್ಣದೇವರಾಯನ ನಾಮೋಲ್ಲೇಖನ ಮಾಡಿ ಭೂಮಿಯನ್ನು ನಾಯಕತನಕ್ಕಾಗಿ ದಾನ ಮಾಡಲಾಗಿದೆ. ಎರಡನೇ ವರ್ಗಕ್ಕೆ ಸೇರಿದ ಅಮರನಾಯಕರು ಕೆಲವು ಹಳ್ಳಿಗಳನ್ನು ಮಾತ್ರ ತಮ್ಮ ಹತೋಟಿಯಲ್ಲಿಟ್ಟುಕೊಳ್ಳುತ್ತಿದ್ದರು.

೩. ಮೂರನೇ ವರ್ಗದ ಅಮರನಾಯಕರು

ಮೂರನೇ ವರ್ಗದ ಅಮರನಾಯಕರು ಸಂಪೂರ್ಣವಾಗಿ ರಾಜನಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದರು. ಅವರ ಅಧಿಕಾರ ಹಾಗೂ ಹಕ್ಕುಗಳ ಕುರಿತಾಗಿ ಅರಸರು ಯಾವುದೇ ಮಹತ್ವವನ್ನಾಗಲಿ, ರಿಯಾಯಿತಿಯನ್ನಾಗಲಿ ನೀಡುತ್ತಿರಲಿಲ್ಲ. ಈ ವರ್ಗದ ಅಮರನಾಯಕರು ವಿಜಯನಗರದ ಅರಸರ ನೇರ ನಿಯಂತ್ರಣದಲ್ಲಿರುತ್ತಿದ್ದರು. ಇಲ್ಲವೇ ಅಧೀನ ನಾಯಕರ ಅಥವಾ ಮಹಾಮಂಡಲೇಶ್ವರರ ನಿಯಂತ್ರಣದಲ್ಲಿರುತ್ತಿದ್ದರು.

ಸಿ. ಸಾರ್ವಭೌಮ, ಸಾಮಂತ, ಉಪನಾಯಕರ ನಡುವಿನ ಸಂಬಂಧಗಳು

ವಿಜಯನಗರ ಕಾಲದ ನಾಯಕ ವ್ಯವಸ್ಥೆಯ ಸ್ವರೂಪವನ್ನು ವಿಶ್ಲೇಷಿಸಿದಾಗ ಮೂರು ಹಂತದ ನಾಯಕರ ವರ್ಗೀಕರಣವನ್ನು ಗುರುತಿಸುತ್ತೇವೆ. ಈ ಮೂರು ವರ್ಗಗಳ ನಾಯಕರ ವ್ಯವಸ್ಥೆಯು ಸಾಮಂತೀಕರಣ ಮತ್ತು ಉಪಸಾಮಂತೀಕರಣ ವ್ಯವಸ್ಥೆಯ ಅಡಿಯಲ್ಲಿ ರೂಪುಗೊಂಡಿರುವುದು ಸ್ಪಷ್ಟವಾಗುತ್ತದೆ. ಸಾಮಂತ ವ್ಯವಸ್ಥೆಯು ಮಧ್ಯಕಾಲೀನ ರಾಜಕೀಯ ಪದ್ಧತಿಯ ಮುಖ್ಯ ಲಕ್ಷಣವಾಗಿತ್ತು. ದಕ್ಷಿಣ ಭಾರತದಲ್ಲಿ ಶಾತವಾಹನ ಕಾಲಾವಧಿಯಿಂದ ವಿಶೇಷವಾಗಿ ಬೆಳೆದು ಬಂದ ಈ ವ್ಯವಸ್ಥೆಯು ವಿಜಯನಗರ ಕಾಲದಲ್ಲಿ ಪರಾಕಾಷ್ಠೆಯನ್ನು ತಲುಪಿತು. ವಿಜಯನಗರ ಕಾಲದ ರಾಜ್ಯಾಡಳಿತದಲ್ಲಿ ಸಾಮಂತ ಪದವಿ ಎನ್ನುವುದು ಅಧಿಕಾರ ಶ್ರೇಣೀಕರಣದ ಉತ್ತಮ ನಿದರ್ಶನವಾಗಿದೆ. ವಿಜಯನಗರ ಸಾಮ್ರಾಜ್ಯವು ದಕ್ಷಿಣ ಭಾರತದಲ್ಲಿ ಉಜ್ವಲವಾಗಿ ಬೆಳಗಲು ಮತ್ತು ಬಲಾಢ್ಯ ಸಾಮ್ರಾಜ್ಯವಾಗಿ ರೂಪುಗೊಳ್ಳಲು ಕಾರಣ ಸಾಮಂತ ಪದ್ಧತಿ ಇದರ ಮೂಲಕ ಸಾಮ್ರಾಜ್ಯವನ್ನು ಆಳುವ ಕ್ರಮವನ್ನು ರೂಢಿಸಿಕೊಂಡಿದ್ದರಿಂದಲೇ ವಿಜಯನಗರದ ಅರಸರು ಧರಿಸಿದ್ದ ರಾಜಾಧಿರಾಜ, ಮಹಾರಾಜಾಧಿರಾಜ, ರಾಜಪರಮೇಶ್ವರ ಎಂಬ ಬಿರುದುಗಳು ಹಲವಾರು ಅಧೀನ ರಾಜರುಗಳ ಮೇಲೆ ವಿಜಯನಗರದ ಅರಸರು ಸಾಧಿಸಿದ ಸಾರ್ವಭೌಮತ್ವವನ್ನು ಸಂಕೇತಿಸುತ್ತವೆ. ವಿಜಯನಗರದ ಆರಂಭದ ಅರಸರಾದ ಹರಿಹರರಾಯ ಬುಕ್ಕರಾಯರು ರಾಜಾಧಿರಾಜ, ಮಹಾರಾಜಾಧಿರಾಜ ಎಂಬ ಬಿರುದುಗಳನ್ನು ಧರಿಸಿರುವುದು ಅವರು ಹೊರಡಿಸಿರುವ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಶಾಸನವೊಂದು (ಶಾಸನ ಸಂಖ್ಯೆ) ಮಹಾರಾಜಾಧಿರಾಜ ವೀರಹರಿಹರರಾಯ ಬುಕ್ಕರಾಯರಿಂದ ಅರವೀಡು ಮನೆತನದ ಕೊನೆಯ ಅರಸ ೩ನೇ ಶ್ರೀರಂಗರಾಯನವರೆಗೂ ಈ ಬಿರುದುಗಳು ಹಾಗೆಯೇ ಮುಂದುವರಿದಿರುವುದನ್ನು ಗಮನಿಸಬಹುದು. ಹೊಯ್ಸಳ ಪತನದ

ನಂತರ ಹೊಯ್ಸಳರ ಬಹುತೇಕ ಸಾಮಂತ ಮನೆತನಗಳು ವಿಜಯನಗರ ಸಾರ್ವಭೌಮರ ಅಡಿಯಲ್ಲಿ ಮುಂದುವರಿದವು. ಉದಾಹರಣೆಗೆ ಕೊಂಗಾಳ್ವ, ಚೆಂಗಾಳ್ವ, ದಾನಿವಾಸ ಒಡೆಯರು, ಗುಮ್ಮನಾಯಕ ಪಾಳೆಯ ಪಾಳೆಯಗಾರರು ಮುಂತಾದ ಸಾಮಂತರು ವಿಜಯನಗರ ಅರಸರ ಸಾರ್ವಭೌಮತ್ವವನ್ನು ಒಪ್ಪಿಕೊಂಡರು. ವಿಜಯನಗರದ ಅಧೀನದಲ್ಲಿದ್ದ ಮಹಾಪ್ರಧಾನರು, ರಾಜ್ಯಪಾಲರು, ದಂಡನಾಯಕರು, ಅಮರನಾಯಕರು, ಉಪಅಮರನಾಯಕರೆಂಬ ಅಧಿಕಾರಿ ವರ್ಗವು ಸಾಮಂತ ವ್ಯವಸ್ಥೆಯ ಶ್ರೇಣೀಕೃತ ವ್ಯವಸ್ಥೆಯನ್ನು ಸೂಚಿಸುತ್ತದೆ. ವಿಜಯನಗರ ಕಾಲದಲ್ಲಿ ಅಧಿಕಾರಿ ವರ್ಗವಾಗಿದ್ದ ಈ ಸಾಮಂತ ಸಮೂಹವು ವಿಜಯನಗರದ ಅರಸರು ನೀಡಿದ ಚಿಕ್ಕಪುಟ್ಟ ರಾಜ್ಯಗಳನ್ನು, ಸೀಮೆಗಳನ್ನು, ಹಳ್ಳಿಗಳನ್ನು ಆಳುತ್ತಿದ್ದರು. ಅವರವರ ಆಳ್ವಿಕೆಯ ಪ್ರದೇಶದಲ್ಲಿ ವಿಜಯನಗರದ ಅರಸರಿಗಿದ್ದ ಸ್ಥಾನಮಾನಗಳು, ಗೌರವಾದರಗಳು ಸಾಮಂತ ರಾಜರಿಗೂ ಲಭ್ಯವಾಗುತ್ತಿದ್ದವು. ಇವರು ತಮ್ಮ ಆಳ್ವಿಕೆಯ ಪ್ರದೇಶದಲ್ಲಿ ಕೋಟೆಗಳನ್ನು ನಿರ್ಮಿಸಿಕೊಂಡು ಅರಮನೆಗಳನ್ನು ಕಟ್ಟಿಕೊಳ್ಳುತ್ತಿದ್ದರು. ಅಶ್ವಸೇನೆ, ಗಜಸೇನೆ, ಪದಾತಿ ಸೇನೆಗಳನ್ನು ಹೊಂದಿರುತ್ತಿದ್ದರು. ಸ್ವತಂತ್ರವಾಗಿ ನಾಣ್ಯ ಚಲಾವಣೆಯನ್ನು ತಮ್ಮ ಪ್ರದೇಶಕ್ಕೆ ಸೀಮಿತವಾಗಿ ಚಲಾಯಿಸುತ್ತಿದ್ದರು. ಸಾಮಂತರಂತೆ ವಿಜಯನಗರದವರಿಂದ ಕೆಲವು ಪ್ರದೇಶಗಳಿಗೆ ಮಹಾಮಂಡಲೇಶ್ವರರಾಗಿ ನಾಯಕರಾಗಿ ನೇಮಕಗೊಳ್ಳುತ್ತಿದ್ದ ಕೆಲವು ಅಧೀನ ಅಧಿಕಾರಿಗಳು ವಿಜಯನಗರದ ಅರಸರಿಗೆ ಯಾವಾಗಲೂ ನಿಷ್ಠರಾಗುತ್ತಿರುತ್ತಿದ್ದರು. ಸಾಮಂತ ರಾಜರಿಗೂ ಮಹಾಮಂಡಲೇಶ್ವರರಿಗೂ ಅಮರನಾಯಕರಿಗೂ ಅಧಿಕಾರ ಹಂಚಿಕೆ, ಸ್ಥಾನಮಾನಗಳ ಹಂಚಿಕೆಯಲ್ಲಿ ವ್ಯತ್ಯಾಸವಿರುತ್ತಿತ್ತು. ಈ ಸಾಮಂತ ರಾಜರು ತಮ್ಮ ಆಳ್ವಿಕೆಯ ಪ್ರದೇಶದಲ್ಲಿ ಮೊದಲಿನಿಂದಲೂ ಆಳುತ್ತಾ ಬಂದಿರುತ್ತಿದ್ದರು. ಅಧಿರಾಜನು ತಮ್ಮನ್ನು ಗೆದ್ದಿರುವುದರಿಂದ ಅವನಿಗೆ ಅಧೀನರು ಮತ್ತು ಸಮಯ ಸಿಕ್ಕಾಗ ಸ್ವತಂತ್ರರಾಗಲು ಹವಣಿಸುವರು.[೮೩] ಮಹಾಮಂಡಲೇಶ್ವರರನ್ನು ಮತ್ತು ಅಮರನಾಯಕರನ್ನು ವಿಜಯನಗರದ ಅರಸರು ಬೇರೆ ಬೇರೆ ಪ್ರದೇಶಗಳಿಗೆ ಅಥವಾ ಅಮರಂಗಳಿಗೆ ನೇಮಿಸುತ್ತಿದ್ದರು. ಇದಕ್ಕೆ ಸಾಕಷ್ಟು ನಿದರ್ಶನಗಳು ವಿಜಯನಗರ ಕಾಲದ ಶಾಸನಗಳಲ್ಲಿ ದೊರೆಯುತ್ತವೆ. ಹಾಗೂ ಕೆಲವು ಸಾಹಿತ್ಯ ಕೃತಿಗಳು ಕೂಡ ಈ ಕುರಿತು ಮಾಹಿತಿಯನ್ನು ನೀಡುತ್ತವೆ. ಮಧುಗಿರಿ ಮಹಾಪ್ರಭುಗಳ ಚಾರಿತ್ರಿಕ ಕೃತಿಯಾದ 'ಇಮ್ಮಡಿ ಚಿಕ್ಕ ಭೂಪಾಲನ ಸಾಂಗತ್ಯವು' ಶ್ರೀರಂಗರಾಯನ ಅಳಿಯ ಚನ್ನಪಟ್ಟಣದ ಜಗದೇಕರಾಯನೊಡನೆ ಸೇರಿ ಚಿಕ್ಕಭೂಪಾಲನು ವಿಜಯನಗರದ ಅರಸರ ಪರವಾಗಿ ಯುದ್ಧ ಮಾಡಿದ್ದನ್ನು ವರ್ಣಿಸುತ್ತದೆ. ಶ್ರೀರಂಗನಾಯಕ ತರುವಾಯ ವೆಂಕಟಪತಿರಾಯರ ಮೆಚ್ಚುಗೆಗೆ ಪಾತ್ರವಾಗಿದ್ದನ್ನು ಕಾವ್ಯ ಹೀಗೆ ವಿವರಿಸುತ್ತದೆ.

"ಶಂಕೆಯಿಲ್ಲದೆ ಜಗದೇಕ ರಾಯರ ಕೊಡೆ
ತಾ ಕೈಗೊಂಡು ಕಾಳಗವ
ವೆಂಕಟಾಪತಿರಾಯರ ಮೆಚ್ಚಿಸಿದ ನಿ
ಶ್ಯಂಕ ನಿರ್ಮಡಿ ಚಿಕ್ಕೇಂದ್ರ"

ಹೀಗೆ ವಿಜಯನಗರದರಸನಿಂದ ಮೆಚ್ಚುಗೆ ಪಡೆದ ಇಮ್ಮಡಿ ಚಿಕ್ಕ ಭೂಪಾಲ ಶಂಖ, ಚಕ್ರ ಹರಿದ್ರಾ ಧ್ವಜ, ಪಚ್ಚನಾಭಿಘಂಟೆ, ಬಿರುದಾವಳಿಗಳಿಂದ ಸತ್ಕಾರಗೊಳ್ಳುತ್ತಾನೆ.[೮೪]

ವಿಜಯನಗರದ ಅರಸರು ತಮ್ಮ ಸಾಮಂತರ ಮೂಲಕ ಮಹಾಮಂಡಲೇಶ್ವರರು, ಅಮರನಾಯಕರುಗಳನ್ನು ಬಳಸಿಕೊಂಡು ವಿಜಯದ ಯಶಸ್ಸಿನ ಮೆಟ್ಟಿಲುಗಳನ್ನು ಹೇಗೆ ಏರುತ್ತಿದ್ದರೆಂಬುದನ್ನು ಕೆಲವು ದೃಷ್ಟಾಂತಗಳ ಮೂಲಕ ವಿವರಿಸಬಹುದಾಗಿದೆ. ಕ್ರಿ.ಶ. ೧೨ನೆಯ ಶತಮಾನದವರೆಗೆ ಆಳ್ವಿಕೆ ಮಾಡಿದ ಕೊಡಗು ಪ್ರದೇಶದಲ್ಲಿದ್ದ ಚೆಂಗಾಳ್ವರು ಗಂಗರ ಮಾಂಡಲೀಕರಾದ ಅನಂತರ ಚೋಳರ ಆಶ್ರಯವನ್ನು ಪಡೆದು ಮುಂದೆ ವಿಜಯನಗರದ ಮಾಂಡಲೀಕರಾಗಿ ಆಳ್ವಿಕೆ ಮಾಡಿದರು. ಕ್ರಿ.ಶ. ೧೪೫೮ರಿಂದ ೧೬೦೭ರವರೆಗೆ ಆಳಿದ ಚೆಂಗಾಳ್ವರ ರುದ್ರಗಣನಿಂದ ವಿಜಯನಗರದ ಅಧಿಕಾರಿ ತಿರುಮಲ ರಾಜನು ಮಳಲವಾಡಿ ಸೀಮೆಯನ್ನು ಮಲ್ಲಿಕಾರ್ಜುನ ದೇವರಿಗೆ ದಾನ ಮಾಡಿಸಿದ ವಿಚಾರವನ್ನು ಕ್ರಿ.ಶ. ೧೬೦೭ರ ಬೆಟ್ಟದಾಪುರದ ಶಾಸನವು ಉಲ್ಲೇಖಿಸುತ್ತದೆ.[೮೫]

ಅರವೀಡು ಮನೆತನದ ಶ್ರೀವೀರ ರಾಮದೇವನ ಕಾರ್ಯಕರ್ತರಾಗಿದ್ದ ಸಂತೆಬೆನ್ನೂರು ಕೆಂಗಪ್ಪನಾಯಕರು ವಿಜಯನಗರ ಅರಸರ ಅನೇಕ ಯುದ್ಧದಲ್ಲಿ ಭಾಗಿಯಾಗಿದ್ದರು. ಕ್ರಿ.ಶ. ೧೫೬೫ರ ತಾಳಿಕೋಟೆಯ ಯುದ್ಧದಲ್ಲಿ ಭಾಗಿಯಾಗಿ ಅಪ್ರತಿಮವಾಗಿ ಹೋರಾಟವನ್ನು ಮಾಡಿದರು.[೮೬] ಕೆಂಗಪ್ಪನಾಯಕರ ಪರಾಕ್ರಮಗಳಿಗೆ ಮೆಚ್ಚಿಕೊಂಡ ಅಳಿಯ ರಾಮರಾಯನು ಸಂತೆಬೆನ್ನೂರು ಪ್ರದೇಶವನ್ನು ಅಮರಮಾಗಣಿಯಾಗಿ ನೀಡಿದನು.

ಗುಮ್ಮನಾಯಕನ ಪಾಳೆಯಗಾರರಲ್ಲಿಯೇ ಅಪ್ರತಿಮ ಶೂರನೂ ಯೋಧನೂ ಆಗಿದ್ದ ಕದಿರಪ್ಪ ನಾಯಕನು ವಿಜಯನಗರದ ಹಲವಾರು ಯುದ್ಧಗಳಲ್ಲಿ ಅಪ್ರತಿಮ ಕಲಿತನದಿಂದ ಹೋರಾಡಿದನು. ವಿಜಯನಗರದ ಅರಸರು ಕದಿರಪ್ಪ ನಾಯಕ ಪಾತರಪಲ್ಲಿ ಕೃಷ್ಣಪ್ಪನಾಯಕ, ಅಮರಗೊಂಡ ಪಾಳೆಯಗಾರರು ಕೊಕ್ಕುಂಟೆ, ಎಲ್ಲುಂಟ್ಲುವಿನ ಪಾಳೆಯಗಾರರನ್ನು ಹತ್ತಿಕ್ಕುವಲ್ಲಿ ವಿಜಯನಗರದ ಸೇನಾಧಿಪತಿ ಸುಜಾನ ಸಿಂಹನಿಗೆ ಸಹಾಯ ಮಾಡಿದನು. ಕದಿರಪ್ಪ ನಾಯಕನ ಶೌರ್ಯಕ್ಕೆ ಸಂತೋಷಗೊಂಡ ೩ನೇ ಹರಿಹರರಾಯನು ಬಾಗೇಪಲ್ಲಿ, ಚೇಳೂರು ಮತ್ತು ಅದಕ್ಕೆ ಸೇರಿದ ೨೩ ಗ್ರಾಮಗಳನ್ನು ನೀಡಿ ವಿಜಯನಗರದ ೧೬ ಮಂದಿ ಸೇನಾಧಿಪತಿಗಳಲ್ಲಿ ಪ್ರಮುಖ ಸೇನಾಧಿಪತಿಯಾಗಿ ನೇಮಿಸಿದನು. ೨೦೦೦೦ ವರಹಗಳನ್ನು, ಬೆಳ್ಳಿ ಅಂಬಾರಿ, ನಗಾರಿ, ಕುದುರೆಗಳು, ಛತ್ರಿ, ಚಾಮರ, ಪಟ್ಟದ ಕತ್ತಿ, ಮುತ್ತಿನ ಕಂಠಿ ನೀಡಿ ಗೌರವಿಸಿದನು.[೮೭]

ಕೆಳದಿ ಅರಸರು ವಿಜಯನಗರದವರಿಗೆ ಆರಂಭದಿಂದಲೂ ವಿಧೇಯಕರಾಗಿದ್ದು ಮೊದಲ ದರ್ಜೆಯ ಸಾಮಂತ ಸ್ಥಾನಮಾನವನ್ನು ಗಳಿಸಿಕೊಂಡಿದ್ದರು. ವಿಜಯನಗರವು ಕೈಗೊಂಡ ಹಲವಾರು ಯುದ್ಧಗಳಲ್ಲಿ ಭಾಗಿಯಾಗುವುದರ ಮೂಲಕ ಅವರಿಗೆ ಸ್ಮರಣೀಯವಾದ ಗೆಲುವನ್ನು ತಂದುಕೊಟ್ಟಿದ್ದರು. ಕೆಳದಿಯ ಅರಸ ಚಿಕ್ಕ ಸಂಕಣ್ಣನಾಯಕನು ಬಿಜಾಪುರ, ಗೋಲ್ಕಂಡ ಅಹಮ್ಮದ್‌ನಗರದ ಸೈನ್ಯವನ್ನು

ವಿಜಯನಗರದ ಪರವಾಗಿ ನಿಂತು ಸೋಲಿಸಿದನು. ಈತ ೧೫೬೫ರಲ್ಲಿ ನಡೆದ ತಾಳಿಕೋಟೆಯ ಯುದ್ಧದಲ್ಲಿ ಭಾಗವಹಿಸಿದ್ದನು.

ಚಿತ್ರದುರ್ಗದ ಮತ್ತಿ ತಿಮ್ಮಣ್ಣನಾಯಕನು ವಿಜಯನಗರವು ಗೆಲ್ಲಲು ಅಸಾಧ್ಯವಾದ ಕಲಬುರಗಿ ಕೋಟೆಯನ್ನು ಗೆದ್ದುಕೊಟ್ಟನು. ಆಗ ವಿಜಯನಗರದವರು ಅವನಿಗೆ ಸನ್ಮಾನ ಮಾಡಿ ಚಿನ್ನದ ಮುಲಾಮಿನ ಶಂಖ ಚಕ್ರದ ಜೊತೆ ಅಂದಳ, ಮೊಸಳೆ ಬಾಯಿ ಜೋಡು ಫಿರಂಗಿ ಶ್ವೇತಚಕ್ರ ಚಿನ್ನದ ಹಸ್ತ, ಹಗಲ ದೀವಟಿಗೆ, ಚಿನ್ನಾಭರಣಗಳನ್ನು ನೀಡಿ ಚಿತ್ರದುರ್ಗಕ್ಕೆ ಸಾಮಂತಿಕೆಯ ಪೂರ್ವ ಮರ್ಯಾದೆಯನ್ನು ನೀಡಿದರು.[೮೮]

ವಿಜಯನಗರ ಅರಸರು ತಮ್ಮ ಸಾಮಂತರೊಂದಿಗೆ ಸೌಹಾರ್ದಯುತವಾದ ಸಂಬಂಧಗಳನ್ನು ಹೊಂದಿದ್ದರು. ಸಾಮ, ಭೇದ, ದಂಡೋಪಾಯಗಳಿಂದ ಸಾಮಂತರನ್ನು ನಿಯಂತ್ರಿಸುತ್ತಿದ್ದರು. ವಿಜಯನಗರ ಕಾಲದಲ್ಲಿ ಮಹಾಮಂಡಲೇಶ್ವರರ ಕೆಳಗೆ ಹಲವು ಮಂಡಳೇಶ್ವರರು ಇರುತ್ತಿದ್ದರು. ಬಹುತೇಕ ಅಮರನಾಯಕರು ಮಹಾಮಂಡಳೇಶ್ವರರಾಗಿರುವುದನ್ನು ಅವರ ಶಾಸನಗಳಿಂದಲೇ ತಿಳಿಯಬಹುದು. ಉದಾಹರಣೆಗೆ ಸದಾಶಿವರಾಯನ ಮಹಾಮಂಡಳೇಶ್ವರರಾದ ಅಳಿಯ ರಾಮರಾಜಯದೇವರು, ವಿಠಲರಾಜು ತಿರುಮಲೈದೇವ ಮಹಾರಾಜಲುಗಾರು ಮಹಾರಾಜರಿಗೆ ನಾಯಕತನಕ್ಕೆ ಪಾಲಿಸಿದ ರಾಯದುರ್ಗ ಸೀಮೆ ಮುರಡಿ ಗ್ರಾಮದ ವಿವರಗಳನ್ನು ಮೊಳಕಾಲ್ಮೂರು ತಾಲ್ಲೂಕಿನ ಶಾಸನವೊಂದು ದೃಢೀಕರಿಸುತ್ತದೆ.[೮೯]

ಕ್ರಿ.ಶ. ೧೫೪೬ರ ಸದಾಶಿವರಾಯನ ಕಾಲದ ಬಳ್ಳಾರಿ ಜಿಲ್ಲೆಯ ಶಾಸನವೊಂದು ಶ್ರೀಮಾನ್ ಮಹಾಮಂಡಲೇಶ್ವರ ಕೋಟಗಾರ ರಾಮರಾಜ ವೊಡೆಯರ ಮಕ್ಕಳು ಮೊಮ್ಮಕ್ಕಳು ಅಳಿಯ ಲಿಂಗರಾಜದೇವ ಮಹಾ ಅರಸುಗಳ ಅಣ್ಣಂದಿರು ರಾಮರಾಜರುಗಳು ನೀಡಿದ ದಾನದ ವಿವರಗಳನ್ನು ಒಳಗೊಂಡಿದೆ.[೯೦]

ಸದಾಶಿವದೇವರಾಯನ ಕಾಲದ ಮೇಲುಕೋಟೆಯ ಶಾಸನವೊಂದು ನಂದ್ಯಾಲದ ಮಹಾಮಂಡಲೇಶ್ವರ ನರಸಿಂಗಯದೇವ ಮಹಾ ಅರಸುಗಳ ಕುಮಾರ ನಾರದೇವ ಮಹಾಅರಸುಗಳಿಗೆ ನಾಯಕತನಕ್ಕೆ ಪಾಲಿಸಿದ ಶ್ರೀರಂಗಪಟ್ಟಣ ಸೀಮೆಯ ವಿವರಗಳನ್ನು ಒಳಗೊಂಡಿದೆ.[೯೧]

ಅಚ್ಯುತರಾಯನ ಕಾಲದ ಗುಂಡ್ಲುಪೇಟೆಯ ಶಾಸನವೊಂದು ಶ್ರೀಮನ್ಮಹಾಸೇನಾ ಸಮುದ್ರ ಸಾಳ್ವ ಗಜಸಿಂಹ ಅಚ್ಯುತರಾಯ ವೀರಪ್ಪವೊಡೆಯರಿಗೆ ನಾಯಕತನಕ್ಕೆ ಸಲ್ಲುವ ತೆರಕಾಣಾಂಬೆಯ ಸೀಮೆಯ ವಿವರಗಳನ್ನು ಒಳಗೊಂಡಿದೆ.[೯೨]

ಈ ಮೇಲಿನ ಶಾಸನಗಳಿಂದ ಮಹಾಮಂಡಲೇಶ್ವರರಾಗಿದ್ದವರು ಕೂಡ ನಾಯಕತನಕ್ಕೆ ಸೀಮೆಗಳನ್ನು ಪಡೆದಿರುವುದನ್ನು ಗಮನಿಸಬಹುದು. ಮಹಾಮಂಡಲೇಶ್ವರರು ತಮ್ಮ ಆಳ್ವಿಕೆಯ ಪ್ರದೇಶದ ಆದಾಯದ ಒಂದು ಭಾಗವನ್ನು ಚಕ್ರವರ್ತಿಗೆ ಸಲ್ಲಿಸುತ್ತಿದ್ದರು.[೯೩] ವಿಜಯನಗರ ಕಾಲದಲ್ಲಿ ಮಹಾಮಂಡಲೇಶ್ವರರ

ಕೆಳಗೆ ಹಲವಾರು ಮಹಾನಾಯಕಾಚಾರ್ಯರು ಇರುತ್ತಿದ್ದರು. ಮಹಾನಾಯಕಾಚಾರ್ಯರು ಕೂಡ ಅಮರನಾಯಕರೇ ಆಗಿದ್ದು ಶಾಸನಗಳು ಇದಕ್ಕೆ ಸಮರ್ಥನೆಯನ್ನು ನೀಡುತ್ತವೆ.

ಚಿತ್ರದುರ್ಗದ ಓಬಣ್ಣಹಳ್ಳಿಯ ಶಿಲಾಶಾಸನವೊಂದು (ಶಾಸನ ಸಂಖ್ಯೆ ೯, ಪಾ.ಶಾ.ಸಂ.೧) ಶ್ರೀಮನ್ನ ಮಹಾನಾಯಕಾಚಾರ್ಯ ಕಾಮಗೆತ್ತಿ ಓಬಣ್ಣ ನಾಯಕನ ಆಳ್ವಿಕೆಯ ಕಾಲದಲ್ಲಿ ಚಿಕ್ಕಣ್ಣ ಎಂಬುವನು ಅಣ್ಣಗಾರ ಓಬಣ್ಣ ಎಂಬುವನಿಗೆ ಸ್ವರ್ಗಲೋಕ ಪ್ರಾಪ್ತಿಯಾಗಲೆಂದು ಅವನ ಹೆಸರಿನಲ್ಲಿ ಓಬಣ್ಣಹಳ್ಳಿಯನ್ನು ಕಟ್ಟಿಸಿದ ವಿವರಗಳಿವೆ.[೯೪] ಮಹಾನಾಯಕಾಚಾರ್ಯ ಓಬಣ್ಣನಾಯಕನು ವಿಜಯನಗರದ ರಾಮರಾಯನಿಂದ ಅಮರನಾಯಕತನವನ್ನು ಪಡೆದುಕೊಂಡಿದ್ದನು.

ಆನೇಕಲ್ ತಾಲ್ಲೂಕಿನ ಶಾಸನವೊಂದು (ಶಾಸನ ಸಂಖ್ಯೆ.೨೬) ಮಹಾನಾಯಕಾಚಾರ್ಯರಾದ ಲಕ್ಕನಾಯಕ, ಕಾಟಮನಾಯಕರು ರಘುನಾಥ ದೇವರಿಗೂ, ಹನುಮಂತ ದೇವರಿಗೂ ಬಿಗೊಂಡನಹಳ್ಳಿಯ ಸೀಮೆಗೆ ಸಲ್ಲುವ ಕತ್ತರಿಕುಪ್ಪೆ ಗ್ರಾಮವನ್ನು ದಾನ ನೀಡಿರುವ ವಿವರಗಳನ್ನು ತಿಳಿಸುತ್ತದೆ.[೯೫]

ಮಹಾನಾಯಕಾಚಾರ್ಯ ಹರತಿಯ ಚಿಕ್ಕರಂಗಪ್ಪ ನಾಯಕರು ತಮ್ಮ ನಾಯಕತನಕ್ಕೆ ಸಲ್ಲುವ ರಾಯದುರ್ಗ ವೇಂಟೆಯ ಹರತಿ ಸ್ಥಳದ ಗಣಹೆಮ್ಮಡಿ ಮಾಳೆಂಬ ಗ್ರಾಮವನ್ನು ದಾನ ನೀಡಿದ ವಿವರಗಳನ್ನು ಹಿರಿಯೂರು ತಾಲ್ಲೂಕಿನ ಶಾಸನವೊಂದು (ಶಾಸನ ಸಂಖ್ಯೆ ೬ ಎಪಿಗ್ರಾಫಿಯಾ ಕರ್ನಾಟಿಕಾ ಸಂ. ೧೧) ವಿವರಿಸುತ್ತದೆ.[೯೬]

ಈ ಶಾಸನಗಳಿಂದ ಸ್ಪಷ್ಟವಾಗುವ ಅಂಶವೇನೆಂದರೆ ಮಹಾನಾಯಕಾಚಾರ್ಯರು ಕೂಡ ಅಮರನಾಯಕರೇ ಆಗಿದ್ದು ಮಹಾಮಂಡಲೇಶ್ವರರ ಅಧೀನರಾಗಿರುತ್ತಿದ್ದರು. ಮಹಾನಾಯಕಾಚಾರ್ಯರರ ಕೆಳಗೆ ಉಪನಾಯಕರಿರುತ್ತಿದ್ದರು. ಈ ಉಪನಾಯಕರು ಮಹಾನಾಯಕಾಚಾರ್ಯರಿಂದ ಒಂದೆರಡು ಹಳ್ಳಿಗಳನ್ನು ದಾನವಾಗಿ ಪಡೆದುಕೊಂಡು ಮಹಾನಾಯಕಾಚಾರ್ಯರರಿಗೆ ನಿಷ್ಠೆಯನ್ನು ವ್ಯಕ್ತಪಡಿಸುತ್ತಿದ್ದರು. ಇದು ಊಳಿಗಮಾನ್ಯ ವ್ಯವಸ್ಥೆಯಲ್ಲಿ ಉಪ ಊಳಿಗತನವನ್ನು ಸೂಚಿಸುತ್ತದೆ. ಇಂತಹ ಉಪ ಊಳಿಗತನವನ್ನು ಸಮರ್ಥಿಸುವ ನೂರಾರು ಶಾಸನಗಳಿವೆ. ಸದಾಶಿವರಾಯನ ಕಾಲದ ದಾವಣಗೆರೆ ಜಿಲ್ಲೆಯ ಶಾಸನವೊಂದು ಹಡಪದ ಬೈಯ್ಯಪ್ಪನಾಯಕರ ಮಕ್ಕಳು ಕೃಷ್ಣಪ್ಪನಾಯಕರ ಕಾರ್ಯಕರ್ತರಾದ ವೇಲೂರು ಕಾಳಪ್ಪ ನಾಯಕರ ಮಕ್ಕಳು ಹರಿಹರದ ಹರಿಹರ ಲಕ್ಷ್ಮಿ ದೇವರಿಗೆ ದಾನ ನೀಡುವ ವಿವರಗಳನ್ನು ಶಾಸನದಲ್ಲಿ ವಿವರಿಸಲಾಗಿದೆ.[೯೭]

ಸದಾಶಿವರಾಯನು ವಿಜಯನಗರವನ್ನು ಪರಿಪಾಲಿಸುತ್ತಿದ್ದಾಗ ಅರಗದ ರಾಜ್ಯ ಮಾಗಣಿಯನ್ನು ಇಮ್ಮಡಿ ಸದಾಶಿವರಾಯನ ನಾಯಕರು ಆಳುತ್ತಿದ್ದರು. ಇಮ್ಮಡಿ ಸದಾಶಿವರಾಯನ ಅನುಮತದಿಂದ ಬಂಕಿಯರಸರು, ಹೊಂನೆಯ ಕಂಬಳಿವೊಡೆಯರಾದ ಅಂಮಿದೇವಿ ಅಂಮನವರು ಘಟ್ಟದ ಮೇಲಣ ಮುಂಗಿನಾಡು, ಕಬ್ಬುನಾಡು ಮುಂತಾದ ಸೀಮೆಗಳನ್ನು ಪಾಲಿಸುವಾಗ ಉಭಯರ ನಿರೂಪದಿಂದ

ಅರಗದ ವೇಂಠೆಗೆ ಸಲ್ಲುವ ಕೆಲವು ಭೂಮಿಯನ್ನು ಶಂಭುಲಿಂಗ ದೇವರಿಗೆ ದಾನ ನೀಡಿದ ವಿವರಗಳನ್ನು ಶಾಸನದಲ್ಲಿ ದಾಖಲಿಸಲಾಗಿದೆ.[೯೮]

ಈ ಶಾಸನದಲ್ಲಿನ ಮಾಹಿತಿಯನ್ನು ವಿಶ್ಲೇಷಿಸಿದಾಗ ವಿಜಯನಗರದ ಸದಾಶಿವರಾಯನು, ಇಮ್ಮಡಿ ಸದಾಶಿವರಾಯ ನಾಯಕರನ್ನು ತನ್ನ ಅಮರನಾಯಕನನ್ನಾಗಿ ನೇಮಕಗೊಳಿಸಿಕೊಂಡಿದ್ದಾರೆ. ಈ ಸದಾಶಿವ ನಾಯಕನು ಅಂಮಿದೇವಿ ಅಂಮನನ್ನು ಉಪ ನಾಯಕಿಯಾಗಿ ನೇಮಿಸಿಕೊಂಡಿದ್ದನ್ನು ಶಾಸನ ಸ್ಪಷ್ಟಪಡಿಸುತ್ತದೆ. ಶಾಸನದಲ್ಲಿ ಉಲ್ಲೇಖಿತಗೊಂಡಿರುವ 'ಅನುಮತದಿಂದ' 'ನಿರೂಪದಿಂದ' ಎಂಬ ಪದಗಳು ಬಂಕಿಯರಸರ ಅಧೀನತೆಯನ್ನು ಸ್ಪಷ್ಟಪಡಿಸುತ್ತವೆ.

ಮೇಲುಕೋಟೆಯ ಕೃಷ್ಣದೇವರಾಯನ ಕಾಲದ ಶಾಸನವು ದಂಡು ಅವುಭಳ ದೇವಗಳ ಮಕ್ಕಳು ಕೃಷ್ಣರಾಮನಾಯಕರಿಗೆ ನಾಯಕತನಕ್ಕೆ ಪಾಲಿಸಿದ ಶ್ರೀರಂಗಪಟ್ಟಣದ ಸಿಂದಘಟ್ಟ ಸೀಮೆಯ ವಿವರಗಳನ್ನು ಒಳಗೊಂಡಿದೆ.[೯೯]

ಕ್ರಿ.ಶ. ೧೫೩೦ರ ಅಚ್ಯುತರಾಯನ ಕಾಲದ ಚನ್ನರಾಯಪಟ್ಟಣದ ಶಾಸನವು ಸೋಲೂರು ಬಸವಪ್ಪ ವೊಡೆಯರ ಸುಪುತ್ರಿ ಕೃಷ್ಣಪ್ಪನಾಯಕ ಅವರ ಕಾರ್ಯಕರ್ತ ಹರಿಹರದ ಲಿಂಗಣ್ಣವೊಡೆಯ ಸಾತಿ ಗ್ರಾಮ ಸೀಮೆಯ ಮಣಿಹಟ ಮಾಡಿಕೊಂಡು ಸಾತಿ ಗ್ರಾಮವನ್ನು ಆಳುತ್ತಿರುವ ವಿವರಗಳಿವೆ[೧೦೦].

ಇಲ್ಲಿ ಕೃಷ್ಣಪ್ಪನಾಯಕರ ಕಾರ್ಯಕರ್ತ ಲಿಂಗಣ್ಣವೊಡೆಯನು ಉಪ ಅಮರನಾಯಕನಾಗಿದ್ದುದು ಸ್ಪಷ್ಟವಾಗುತ್ತದೆ.

ಕ್ರಿ.ಶ. ೧೪೨೯ರ ಪ್ರತಾಪದೇವ ಮಹಾರಾಯರ ತಿರುಮಕ್ಕಳ ಜಯಪ್ಪನಾಯಕರ ನಿರೂಪದಿಂದ ವಿರುಪಣ್ಣನಾಯಕರ ಪಾಲನೆಯಲ್ಲಿ ನೆರಲಿಗೆಯ ಹಿರಿಯ ಕಟೆಗೆ ಕೆರೆಯ ಬಂಡಿದಳಕ್ಕೆ ದಾನವಾಗಿ ನೀಡಿದ ಗದ್ದೆಯ ವಿವರಗಳನ್ನು ಒಳಗೊಂಡಿದೆ.[೧೦೧] ಇಲ್ಲಿ ನಿರೂಪ ಎಂಬ ಪದವು ಅಧೀನತೆಯನ್ನು ಸಂಕೇತಿಸುತ್ತದೆ. ಇಲ್ಲಿ ಜಯಪ್ಪನಾಯಕರ ಕೆಳಗೆ ವಿರುಪಣ್ಣನಾಯಕರು ಉಪನಾಯಕರಾಗಿದ್ದರೆಂದು ಹೇಳಬಹುದು.

ಹೀಗೆ ವಿಜಯನಗರ ಕಾಲದ ಶಾಸನಗಳು ಉಪ ಊಳಿಗತನವನ್ನು ಸ್ಪಷ್ಟಪಡಿಸುತ್ತವೆ. ವಿಜಯನಗರ ಕಾಲದಲ್ಲಿ ಅಧಿಕಾರವೆನ್ನುವುದು ಹಂತ ಹಂತವಾಗಿ ವರ್ಗೀಕೃತವಾಗಿತ್ತು. ವಿಜಯನಗರ ಕಾಲದ ಶಾಸನಗಳು ಮೂರು ವರ್ಗದ ಅಮರನಾಯಕರನ್ನು ಹಾಗೂ ಅವರಲ್ಲಿ ಹಂಚಿಕೆಯಾಗುತ್ತಿದ್ದ ಅಧಿಕಾರದ ಸ್ವರೂಪವನ್ನು ವಿವರಿಸುತ್ತವೆ. ಮೊದಲ ವರ್ಗದ ಅಮರನಾಯಕರು ಯುದ್ಧಗಳಲ್ಲಿ ಸೇನೆಯನ್ನು ನಡೆಸುತ್ತಿದ್ದರು. ಎರಡನೇ ವರ್ಗದ ನಾಯಕರಲ್ಲಿ ಅನೇಕರು ದಂಡನಾಯಕರಿದ್ದರು. ಮೂರನೇ ವರ್ಗದ ಅಮರನಾಯಕರಲ್ಲಿ ಅನೇಕ ಸಣ್ಣನಾಯಕರುಗಳಿದ್ದು ಯುದ್ಧ, ದಂಡಯಾತ್ರೆ, ಸಾಮ್ರಾಜ್ಯ ಸಂಘಟನೆಯಲ್ಲಿ ವಿಜಯನಗರದ ಅರಸರ ಸೈನ್ಯಗಳಲ್ಲಿ ಸೇರಿ ಕಾರ್ಯಪ್ರವೃತ್ತರಾಗುತ್ತಿದ್ದರು.[೧೦೨]

ಸಾಮಂತ ಮತ್ತು ಉಪಸಾಮಂತಿಕೆಗಳು ವಿಜಯನಗರ ಕಾಲದ ರಾಜಕೀಯ ವ್ಯವಸ್ಥೆಯಲ್ಲಿ ಗಟ್ಟಿಯಾಗಿ ನೆಲೆಗೊಂಡವು. ಈ ಸಾಮಂತ ಮತ್ತು ಉಪಸಾಮಂತ ಮನೆತನಗಳು ವಿಜಯನಗರದ ಪತನದ ನಂತರ ಚಿಕ್ಕಪುಟ್ಟ ಪಾಳೆಯಗಾರ ಮನೆತನಗಳಾಗಿ ರೂಪುಗೊಂಡವು. ಆ ಪಾಳೆಯಗಾರ ಮನೆತನಗಳು ತಮ್ಮ ಉಗಮವನ್ನು ವಿಜಯನಗರದ ಮೂಲದೊಂದಿಗೆ ದಾಖಲಿಸಿಕೊಂಡಿವೆ. ವಿಜಯನಗರದ ಸಾಮ್ರಾಜ್ಯ ಸಂಸ್ಥಾಪನೆಯಲ್ಲಿ ತಳಕು ಹಾಕಿಕೊಂಡಿರುವ ಮೊಲ, ನಾಯಿಗಳನ್ನು ಬೇಟೆಯಾಡಿದ ಕಥೆಯಂತೋ ಕ್ರಿ.ಶ. ೧೬,೧೭ ಮತ್ತು ೧೮ನೇ ಶತಮಾನಗಳಲ್ಲಿ ತಲೆ ಎತ್ತಿ ನಿಂತ ಪಾಳೆಯಪಟ್ಟುಗಳ ಉಗಮದಲ್ಲಿ ತಳಕು ಹಾಕಿಕೊಂಡ ಜನಪ್ರಿಯ ಕಥೆಯಾಗಿದೆ. ಹೀಗೆ ವಿಜಯನಗರದೊಂದಿಗೆ ಸಮೀಕರಿಸಿಕೊಂಡು ನೋಡುವ ಈ ಬಗೆಯ ಕಥೆಗಳು ಕೈಫಿಯತ್ತುಗಳು, ವಂಶಾವಳಿಗಳಲ್ಲಿ ದಾಖಲೆಗೊಂಡಿರುವುದನ್ನು ಗಮನಿಸಬಹುದು.

ಒಟ್ಟಿನಲ್ಲಿ ಪ್ರಾದೇಶಿಕ ಮಟ್ಟದಲ್ಲಿ ಪರಿಣಾಮಕಾರಿಯಾಗಿದ್ದ ನಾಯಕತನ ವ್ಯವಸ್ಥೆಯು ವಿಜಯನಗರ ಆಡಳಿತ ವ್ಯವಸ್ಥೆಯ ಒಂದು ಭಾಗವಾಗಿದ್ದರೂ ಸಹ ಸಾಮಾಜಿಕ, ಧಾರ್ಮಿಕ, ಆಡಳಿತಾತ್ಮಕ ವಲಯದಲ್ಲಿ ಪ್ರಾದೇಶಿಕ ಸೊಗಡನ್ನು ಮೈಗೂಡಿಸಿಕೊಂಡು ಆಡಳಿತ ನಡೆಸಿದ್ದನ್ನು ಕಡೆಗಣಿಸುವಂತಿಲ್ಲ.

ಡಿ. ಅಮರನಾಯಕರ ನೇಮಕಾತಿಯ ವಿಧಾನ

ವಿಜಯನಗರ ಕಾಲದಲ್ಲಿ ಅಮರನಾಯಕತನವನ್ನು ಯಾವ ಅರ್ಹತೆಯ ಮೇಲೆ ನೀಡಲಾಗುತ್ತಿತ್ತು ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ವಿಜಯನಗರ ಕಾಲದ ಸಮಕಾಲೀನ ದಾಖಲೆಗಳನ್ನು ಪರಿಶೀಲಿಸಿದಾಗ ಸಂಗಮ, ಸಾಳ್ವ, ತುಳುವ ಮನೆತನಗಳ ಅವಧಿಯಲ್ಲಿ ನಾಯಕತನವನ್ನು ವ್ಯಕ್ತಿಯ ಹಿನ್ನೆಲೆ, ಅರ್ಹತೆಯ ಮೇಲೆ ನೀಡಲಾಗುತ್ತಿತ್ತು. ಆದರೆ ಅರವೀಡು ಮನೆತನವು ಮಾತ್ರ ಯಾವ ಅರ್ಹತೆಯನ್ನು ಪರಿಗಣಿಸದೆ ಹಿಂದಿನ ನಾಯಕತನ ಪಡೆದುಕೊಂಡಿದ್ದ ಮನೆತನಗಳನ್ನು ಮುಂದಿನ ಹಂತದಲ್ಲಿ ನಾಯಕರಾಗಿ ಮುಂದುವರಿಸಿಕೊಂಡು ಹೋಯಿತು. ಇದು ವಂಶಪಾರಂಪರ್ಯ ನಾಯಕರ ಆಡಳಿತ ರೂಪುಗೊಳ್ಳಲು ಕಾರಣವಾಯಿತು. ಹಾಗೂ ಅರವೀಡು ಮನೆತನವು ನಾಯಕರುಗಳ ವರ್ಗಾವಣಾ ನೀತಿಯನ್ನು ರದ್ದುಗೊಳಿಸಿದ್ದರಿಂದ ನಾಯಕರು ತಮ್ಮ ಆಡಳಿತ ಪ್ರದೇಶಗಳಲ್ಲಿ ರಾಜಕೀಯವಾಗಿ ಬಲಾಢ್ಯವಾಗಿ ರೂಪುಗೊಳ್ಳಲು ಕಾರಣವಾಯಿತು. ಇದು ಮುಂದೆ ಬಹುತೇಕ ಚಿಕ್ಕ ಪುಟ್ಟ ರಾಜಮನೆತನಗಳು ತಲೆ ಎತ್ತಿ ನಿಲ್ಲಲು, ಆ ಮೂಲಕ ಪಾಳೆಯಗಾರಶಾಹಿ ಆಡಳಿತ ವ್ಯವಸ್ಥೆ ಅಸ್ತಿತ್ವಕ್ಕೆ ಬರಲು ದಾರಿ ಮಾಡಿಕೊಟ್ಟಿತು. ಅರವೀಡು ಮನೆತನದ ದುರ್ಬಲ ಆಡಳಿತ ಕರ್ನಾಟಕದಲ್ಲಿ ಬಹುತೇಕ ಪಾಳೆಯ ಪಟ್ಟಣಗಳು ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬರಲು ಕಾರಣವಾಯಿತು.

ಅರವೀಡು ಮನೆತನದವರನ್ನು ಹೊರತುಪಡಿಸಿದರೆ ಉಳಿದ ಮೂರು ರಾಜ ಮನೆತನಗಳು ತಮ್ಮ ಆಡಳಿತಾವಧಿಯಲ್ಲಿ ನಾಯಕತನವನ್ನು ನೀಡುವಾಗ ಹಲವಾರು ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಿರುವುದು ಕಂಡುಬರುತ್ತದೆ. ಕರ್ನಾಟಕದಲ್ಲಿ ಕಂಡುಬರುವ ವಿಜಯನಗರ ಕಾಲದ ಬಹುತೇಕ

ನಾಯಕರು ತೆಲುಗು ಮೂಲದವರು ಹಾಗೂ ತಮಿಳು ಮೂಲದವರು. ಉದಾ. ಗುಡೇಕೋಟೆ (ತೆಲುಗು) ಚನ್ನಪಟ್ಟಣ (ತೆಲುಗು) ಯಲಹಂಕ (ಕನ್ನಡ) ಚಿತ್ರದುರ್ಗ (ತೆಲುಗು) ಹಾಗಲವಾಡಿ (ತೆಲುಗು) ಗುಮ್ಮನಾಯಕ ಪಾಳೆಯ (ತೆಲುಗು) ಬೂದಿಹಾಳು (ತೆಲುಗು) ನಾಯಕನಹಟ್ಟಿ (ತೆಲುಗು) ಅವತಿ (ತಮಿಳುನಾಡು). ಇವುಗಳ ಜೊತೆಯಲ್ಲಿಯೇ ಸ್ಥಳೀಯ ವೀರರನ್ನು ಸಹ ನಾಯಕರಾಗಿ ನೇಮಿಸಿರುವ ನಿದರ್ಶನಗಳು ಶಾಸನಗಳಲ್ಲಿ ದೊರೆಯುತ್ತವೆ. ಹರತಿ (ಕನ್ನಡ) ನಿಡುಗಲ್ಲು (ಕನ್ನಡ) ಬಳ್ಳಾರಿ (ಕನ್ನಡ) ರತ್ನಗಿರಿ (ಕನ್ನಡ) ಮತ್ತೋಡು (ಕನ್ನಡ) ಇತ್ಯಾದಿ ಕರ್ನಾಟಕವನ್ನು ಆಳಿದ ಬಹುತೇಕ ಪಾಳೆಯಪಟ್ಟುಗಳು ಬೇಡ ಪಾಳೆಯಪಟ್ಟುಗಳಾಗಿರುವುದು ವಿಶೇಷವಾಗಿದೆ. ಬೇಡರು ವೀರರು, ಶೂರರು, ಪರಾಕ್ರಮಶಾಲಿಗಳು ಆಗಿರುವುದರಿಂದ ನಾಯಕರ ನೇಮಕಾತಿಯಲ್ಲಿ ಅಗ್ರಸ್ಥಾನವನ್ನು ವಿಜಯನಗರದ ಅರಸರು ನೀಡಿರುವುದನ್ನು ಗಮನಿಸಬಹುದು.

ತುಳುವ ವಂಶದ ಕೃಷ್ಣದೇವರಾಯನು ಬೇಡ ನಾಯಕರಲ್ಲಿ ಅಪಾರ ವಿಶ್ವಾಸವನ್ನು ಹೊಂದಿದ್ದ. ರಾಯವಾಚಿಕಮು ಕೃತಿಯು ಕೃಷ್ಣದೇವರಾಯನು ಬೇಡರಲ್ಲಿ ಹೊಂದಿದ್ದ ವಿಶ್ವಾಸವನ್ನು, ನಂಬಿಕೆಯನ್ನು ವಿವರಿಸುತ್ತದೆ. ಗುಡ್ಡಗಾಡು ಮತ್ತು ಸಾಮ್ರಾಜ್ಯದ ಗಡಿಯನ್ನು ಕಾಯಲು ನಾಡ ತಳವಾರರನ್ನಾಗಿ ಬೇಡರನ್ನು ನಿಯಮಿಸುತ್ತಿದ್ದ. ಕೃಷ್ಣದೇವರಾಯನ ಕಾಲದಲ್ಲಿ ಅಮರನಾಯಕರಾಗಿ ನೇಮಕಗೊಂಡ ಬಹುತೇಕ ಬೇಡನಾಯಕರು ನಾಡ ತಳವಾರ ಹಿನ್ನೆಲೆಯಿಂದಲೇ ಬಂದವರೆ. ಹೀಗೆ ವಿಜಯನಗರದ ಅರಸರು ನಾಯಕರ ನೇಮಕಾತಿಯಲ್ಲಿ ದಕ್ಷತೆ, ವೀರತನಗಳನ್ನು ಮಾನದಂಡವಾಗಿ ಉಪಯೋಗಿಸಿಕೊಳ್ಳುತ್ತಿದ್ದರು.

ವಿಜಯನಗರ ಕಾಲದಲ್ಲಿ ನಾಯಕ ಹುದ್ದೆಯು ಜವಾಬ್ದಾರಿಯುತವಾದ ಹುದ್ದೆಯಾಗಿತ್ತು. ನಾಯಕತನವನ್ನು ನೀಡುವಾಗ ಸ್ಥಳೀಯ ವೀರರನ್ನು ಅವರ ಪ್ರದೇಶಗಳಿಗೆ ನೇಮಕ ಮಾಡದೆ ಅವರನ್ನು ಬೇರೆ ಪ್ರದೇಶಗಳಿಗೆ ನಾಯಕರನ್ನಾಗಿ ಮಾಡಿ ಭೂ ಪ್ರದೇಶಗಳನ್ನು ದಾನವಾಗಿ ನೀಡುತ್ತಿದ್ದರು.[೧೦೩] ಉದಾ. ಚಿತ್ರದುರ್ಗ ನಾಯಕ ಮತ್ತು ತಿಮ್ಮಣ್ಣನಾಯಕನು ಹಿರಿಯೂರು, ಹೊಳಲ್ಕೆರೆ ಮತ್ತು ಚಿತ್ರದುರ್ಗಗಳಲ್ಲಿ ಬೇರೆ ಬೇರೆ ಅವಧಿಯಲ್ಲಿ ನಾಯಕನಾಗಿ ಕಾರ್ಯನಿರ್ವಹಿಸಿದನು. ಬೇಲೂರಿನ ಕೃಷ್ಣಪ್ಪ ನಾಯಕನು ಬೇಲೂರು ಸೀಮ, ಕೊಟ್ಟೂರು ಸೀಮೆ ಹಾಗೂ ಹರಿಹರ ಸೀಮೆಗಳಲ್ಲಿ ನಾಯಕನಾಗಿ ವಿವಿಧ ವರ್ಷಗಳಲ್ಲಿ ಕಾರ್ಯನಿರ್ವಹಿಸಿದನು. ಬಳ್ಳಾರಿಯ ಪಾಳೆಯಗಾರ ವಿಜಾಪುರದವನಾದರೂ ತನ್ನ ನಾಯಕತನಕ್ಕಾಗಿ ಬಳ್ಳಾರಿ ಸೀಮೆಯನ್ನು ಪಡೆದು ನಾಯಕನಾಗಿ ಕರ್ತವ್ಯ ನಿರ್ವಹಿಸಿದನು. ಗುಡೇಕೋಟೆಯ ಪಾಳೆಯಗಾರ ಗಂಡಳನಾಯಕನು ಆಂಧ್ರ ಪ್ರದೇಶದವನಾದರೂ ಗುಡೇಕೋಟೆಯನ್ನು ವಿಜಯನಗರದವರಿಂದ ನಾಯಕತನಕ್ಕೆ ಪಡೆದು ಆಳಿದ್ದನ್ನು ಈ ಸಮಯದಲ್ಲಿ ಸ್ಮರಿಸಿಕೊಳ್ಳಬಹುದು. ನಾಯಕರಿಗೆ ವರ್ಗಾವಣೆಗಳು ಸರ್ವೇ ಸಾಮಾನ್ಯವಾಗಿತ್ತು. ಈ ವರ್ಗಾವಣೆಗಳ ಹಿಂದಿನ ಉದ್ದೇಶ ನಾಯಕರನ್ನು ತಮ್ಮ ಆಳ್ವಿಕೆಯ ಪ್ರದೇಶದಲ್ಲಿ ರಾಜಕೀಯವಾಗಿ ಏಳಿಗೆಯಾಗಲು ಅವಕಾಶ ಮಾಡಿಕೊಡದಿರುವುದೇ ಆಗಿತ್ತು. ವರ್ಗಾವಣೆಗಳ ಮೂಲಕ ನಾಯಕರ ರಾಜಕೀಯ ಶಕ್ತಿಯನ್ನು ವಿಜಯನಗರದ ಅರಸರು ನಿಸ್ಸಾರವಾಗಿ ಮಾಡಿಬಿಡುತ್ತಿದ್ದರು.

ವಿಜಯನಗರ ಕಾಲದಲ್ಲಿ ನಾಯಕತನ ನೀಡುವಿಕೆಯನ್ನು ಅಥವಾ ನೇಮಕಾತಿಯನ್ನು ಶಾಸನಗಳ ಮೂಲಕ ಪರಿಶೀಲಿಸುವುದಾದರೆ ನಾಯಕ ಅಥವಾ ಅಮರನಾಯಕ ಎನ್ನುವುದು ಹುದ್ದೆ ಎಂದು ಪರಿಗಣಿಸಲ್ಪಟ್ಟರೆ ಅಮರನಾಯಕತನವನ್ನು ಕೇವಲ ನಾಯಕರಿಗೆ ಮಾತ್ರವಲ್ಲದೆ ಮಹಾಪ್ರಧಾನರಿಗೆ, ದಂಡನಾಯಕರಿಗೆ, ಮಹಾಮಂಡಲೇಶ್ವರರಿಗೆ, ಮಂಡಲೇಶ್ವರರಿಗೆ, ಊಳಿಗದವರಿಗೆ, ಹಿಂದಿನ ರಾಜಮನೆತನದವರಿಗೆ ಸೈನ್ಯದ ಕುದುರೆಗಳನ್ನು ನೋಡಿಕೊಳ್ಳುವ ವ್ಯಕ್ತಿಗೆ ನೀಡಲ್ಪಟ್ಟಿದೆ. ವಿಜಯನಗರದ ಶಾಸನಗಳು ಇದಕ್ಕೆ ಸಾಕಷ್ಟು ಸಮರ್ಥನೆಯನ್ನು ಒದಗಿಸುತ್ತವೆ.

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ತ್ರಿಯಂಬಕಪುರದ ಶಾಸನವು ಕ್ರಿ.ಶ. ೧೫೧೨ ವರ್ಷವಾಗಿದ್ದು ಕೃಷ್ಣದೇವರಾಯನ ಕಾಲದ ಶಾಸನವಾಗಿದೆ.

"ಶ್ರೀಮತು ಗೋತ್ರದ ಅಪಸ್ತಂಭ

ಸೂತ್ರದ ಯಜುಶ್ಯಾಖ್ಯಾಧ್ಯಾಯರಾದ ರಾಚಿರಾಜಗಳ ಮ

ಕ್ಕಳು ಸಾಳುವ ಗೋವಿಂದರಾಜಗಳು ಕೊಟ್ಟ ಧರ್ಮ

ಶಿಲಾಶಾಸನದ ಕ್ರಮವೆಂದರೆ ನಮಗೆ ಶ್ರೀ

ಮನ್ಮಹಾರಾಜಿಧಿರಾಜ ರಾಜಪರಮೇಶ್ವರ ಶ್ರೀ ವೀರ

ಪ್ರತಾಪ ಶ್ರೀವೀರ ಕೃಷ್ಣರಾಯ ಮಹಾರಾಯರು

ಪೃಥ್ವೀಸಾಂಬ್ರಾಜ್ಯದ ಆಳುತ ಪಾಲಿಸಿದ ನಾಯಕತನ

ಕ್ಕೆ ಸಲುವ ತೆರಕಣಾಂಬೆಯ ಸೀಮೆ"[೧೦೪]

ಹೀಗೆ ಶಾಸನವು ಮುಂದುವರಿಯುತ್ತದೆ. ಶಾಸನದಲ್ಲಿ ಉಲ್ಲೇಖಿಗೊಂಡಿರುವ ಸಾಳ್ವ ಗೋವಿಂದ ರಾಜನು ಕೃಷ್ಣದೇವರಾಯನ ಮಹಾ ಪ್ರಧಾನಿಯಾದ ಸಾಳುವ ತಿಮ್ಮರಸವೊಡೆಯರ ತಮ್ಮನೆಂದು ಶಾಸನಗಳಿಂದ ತಿಳಿದುಬರುತ್ತದೆ. ವಿಜಯನಗರ ಕಾಲದಲ್ಲಿ ನಾಯಕತನವು ಮಹಾಪ್ರಧಾನರಿಗೆ, ಅವರ ಕುಟುಂಬದ ಸದಸ್ಯರಿಗೂ ದೊರೆಯುತ್ತಿತ್ತು ಎಂಬುದು ಇದರಿಂದ ವೇದ್ಯವಾಗುತ್ತದೆ.

ದೇವರಾಯನ ಕಾಲದ ಬೆಂಗಳೂರು ಜಿಲ್ಲೆಯ ಶಾಸನವೊಂದರಲ್ಲಿ ಪ್ರಧಾನ ಮಂಗಪ್ಪ ದಂಣಾನಾಯಕರ ಮಕ್ಕಳು ಪ್ರತಾಪರಾಯರು ತಮ್ಮ ನಾಯಕತನಕ್ಕೆ ಸಲ್ಲುವ ಶಿವನ ಸಮುದ್ರದ ಕೆಳಗೆ ಯಲಹಂಕ ನಾಡು ಎಂಬ ವಿವರಗಳನ್ನು ಒಳಗೊಂಡಿದೆ.[೧೦೫]

ಹೀಗೆ ವಿಜಯನಗರ ಕಾಲದ ದಂಡನಾಯಕರು ನಾಯಕತನ ಪಡೆದಿರುವುದು ಸ್ಪಷ್ಟವಾಗುತ್ತದೆ. ಸಾಳುವ ವೀರನರಸಿಂಹರಾಯನ ಕಾಲದ ದೊಡ್ಡಬಳ್ಳಾಪುರದ ಶಾಸನವೊಂದು ಗಂಡ್ರಗೊಳ್ಳಿ ದಳವಾಯಿ ಸೊಣ್ಣಪ್ಪ ನಾಯಕರ ಮಕ್ಕಳು ಭೈರಪ್ಪ ನಾಯಕರಿಗೆ ನಾಯಕತನಕ್ಕೆ ಪಾಲಿಸಿದ ಹುಲುಕುಡಿ ನಾಡೊಳಗಿನ ಹಣಬೆಯ ಸೀಮೆಯ ವಿವರಗಳನ್ನು ಒಳಗೊಂಡಿದೆ.[೧೦೬]

ವಿಜಯನಗರ ಕಾಲದ ಮಹಾಮಂಡಲೇಶ್ವರರು ಕೂಡ ನಾಯಕತನವನ್ನು ಪಡೆದಿರುವುದಕ್ಕೆ ಕೂಡ ಸಾಕಷ್ಟು ನಿದರ್ಶನಗಳಿವೆ.

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಶಾಸನವೊಂದು ಶ್ರೀಮನ್ಮಹಾಮಂಡಲೇಶ್ವರ ರಾಮರಾಜು ವಿಠಲರಾಜು ತಿರುಮಲೈದೇವ ಮಹಾರಾಜರಿಗೆ ನಾಯಕತನಕ್ಕೆ ಪಾಲಿಸಿದ ರಾಯದುರ್ಗದ ಸೀಮೆಗೆ ಸಲ್ಲುವ ಮುರುಡಿ ಗ್ರಾಮದ ಮಾಹಿತಿಯನ್ನು ನೀಡುತ್ತದೆ.[೧೦೭]

ಸದಾಶಿವರಾಯನ ಕಾಲದ ಕಡೂರು ತಾಲ್ಲೂಕಿನ ಶಾಸನವೊಂದು ಮಹಾಮಂಡಲೇಶ್ವರ ನಿಶ್ಯಂಕ ಪ್ರತಾಪ ಕಲಮಿಲ ಬೊಪ್ಪರಾಜ ಗೋಪರಾಜ ಮಹಾ ಅರಸು ಕುಮಾರರು ಸಿದಪೇಟೆ ಮಹಾ ಅರಸುಗಳ ನಾಯಕತನಕ್ಕೆ ಪಾಲಿಸಿದ ಹಾರಹಳ್ಳಿ ಸೀಮೆಯ ಮಾಹಿತಿಯಿದೆ.[೧೦೮]

ಕ್ರಿ.ಶ. ೧೫೨೪ರ ಕೃಷ್ಣದೇವರಾಯನ ಕಾಲದ ಬೇಲೂರಿನ ಶಾಸನವೊಂದು ಕೃಷ್ಣದೇವರಾಯನ ಊಳಿಗದ ಜಕಣ ನಾಯಕರ ಮಕ್ಕಳು ಬಸವಪ್ಪ ನಾಯಕರು ತಮ್ಮ ನಾಯಕತನಕ್ಕೆ ಪಾಲಿಸಿದ ವಸ್ತಾರೆ ಸೀಮೆಗೆ ಸಲ್ಲುವ ದೇಣಿಗೆಯ ನಾಡಿನ ವಿವರಗಳನ್ನು ಒಳಗೊಂಡಿದೆ.[೧೦೯]

ಕೃಷ್ಣದೇವರಾಯನ ಕಾಲಕ್ಕೆ ಸೇರಿದ ಕ್ರಿ.ಶ. ೧೫೨೮ರ ಬಳ್ಳಾರಿ ಜಿಲ್ಲೆಯ ಸಿಂಧನೂರು ಶಾಸನವೊಂದು ಅಬ್ಬರಾವು ಅಯ್ಯನ ಕುದುರೆಯ ನಾಯಕತನಕ್ಕೆ ಸೇರಿದ ರವುಡಕುಂದೆ ಸೀಮೆಯ ಸಾಲಿಗುಂದ ಗ್ರಾಮದ ಬಗ್ಗೆ ಮಾಹಿತಿಯನ್ನು ತಿಳಿಸುತ್ತದೆ.[೧೧೦]

ಕ್ರಿ.ಶ. ೧೫೩೦ರ ಕೃಷ್ಣದೇವರಾಯನ ಕಾಲದ ಬಳ್ಳಾರಿ ಜಿಲ್ಲೆಯ ಶಾಸನವೊಂದು ಡಣಾಯಕ ತಿಮ್ಮರಸನಿಗೆ ಮುಖಾಸೆ ಕುದುರೆಗೆ ಪಾಲಿಸಿದ ಯಶಪೆಯ ಗ್ರಾಮದ ವಿವರಗಳನ್ನು ಒಳಗೊಂಡಿದೆ.[೧೧೧]

ಒಟ್ಟಿನಲ್ಲಿ ವಿಜಯನಗರ ಕಾಲದಲ್ಲಿ ಮಹಾಪ್ರಧಾನರಿಂದ ಹಿಡಿದು ಕುದುರೆಯನ್ನು ನೋಡಿಕೊಳ್ಳುವ ಸೇವಕನವರೆಗೂ ತಮ್ಮ ಸೇವೆಗೆ ಪ್ರತಿಫಲವಾಗಿ ಅಮರಂಗಳನ್ನು ಪಡೆಯುತ್ತಿದ್ದರು. ಈ ಅಮರಂಗಳನ್ನು ಪಡೆದವರನ್ನು ಅಮರನಾಯಕರೆಂದು ಕರೆಯುತ್ತಿದ್ದರು. ನಾಯಕತನಕ್ಕಾಗಿ ಪಡೆಯುತ್ತಿದ್ದ ಅಮರಂಗಳ ಸಂಖ್ಯೆ ಆಯಾ ಅಧಿಕಾರಿ ವರ್ಗದ ಸ್ಥಾನಮಾನಕ್ಕೆ ಅನುಗುಣವಾಗಿ ಇರುತ್ತಿತ್ತು.

ಕೊನೆ ಟಿಪ್ಪಣಿಗಳು

೧. ಲಕ್ಷ್ಮಣ್ ತೆಲಗಾವಿ, ವಿಜಯನಗರ ಕಾಲದ ಅಮರನಾಯಕರು ಮತ್ತು ಪಾಳೆಯಗಾರರು, ಚರಿತ್ರೆ ಅಧ್ಯಯನ ಸಂಪುಟ–೫, ಪು. ೨೦.

೨. ಎಪಿಗ್ರಾಫಿಯಾ ಕರ್ನಾಟಿಕಾ ಶಾಸನ ಸಂಪುಟ–೧೦, ಮೈಸೂರು ವಿಶ್ವವಿದ್ಯಾನಿಲಯ, ಪು. ೨೨೭

೩. ಕಾವಲಮ್ಮ ಆರ್. ಮಧುಗಿರಿಯ ಮಹಾನಾಡ ಪ್ರಭುಗಳು ಪು. ೬.

೪. ಪರಮಶಿವಮೂರ್ತಿ ಡಿ.ವಿ., (ಸಂ), ಕೃಷ್ಣದೇವರಾಯನ ಶಾಸನಗಳು, ಪು. ೧೬೯.

೫. ರೈಸ್ ಬಿ.ಎಲ್. (ಸಂ), ಎಪಿಗ್ರಾಫಿಯಾ ಕರ್ನಾಟಿಕಾ ಶಾಸನ ಸಂಪುಟ–೮, ಪು. ೧೩೨.

೬. ರಾಜಾರಾಮ್ ಹೆಗಡೆ, ಕೆಳದಿ ನಾಯಕರ ಕಲೆ ಮತ್ತು ವಾಸ್ತುಶಿಲ್ಪ ಪು. ೪.

೭. ರೈಸ್ ಬಿ.ಎಲ್ (ಸಂ), ಎಫಿಗ್ರಾಫಿಯಾ ಕರ್ನಾಟಿಕಾ, ಸಂಪುಟ–೯, ಪು. ೫೩೫.

೮. ಲಕ್ಷ್ಮಣ್ ತೆಲಗಾವಿ, ಪೂರ್ವೋಕ್ತ ಪು. ೨೧.

೯. Venkataramanayya, Studies in the history of the third dynasty of Vijayanagara, p. 178

೧೦. ಯೋಗೀಶ್ವರಪ್ಪ ಡಿ.ಎನ್., ಮಧ್ಯಕಾಲೀನ ಕರ್ನಾಟಕದ ಪಾಳೆಯಗಾರರು, ಪು. viii.

೧೧. Noboro karashima, Nayakakatanam and Sirmai on the Vijayanagara inscriptions in Tamilnadu (A) p. 15

೧೨. Subbarayalu Y. Socio Political formation of South India Vijayanagara Period in KKN Karup (ed) New Dimensions in south indian history p.3

೧೩. Tolbot, Cynthia, A precolnial india in Practice Society region and identity in Medival Andhra, p. 253.

೧೪. ಪಾಳೆಯಗಾರರ ಶಾಸನ ಸಂಪುಟ–೧, ಮೈಸೂರು ವಿಶ್ವವಿದ್ಯಾನಿಲಯ, ಪು. ೨೧೦–೨೧೧.

೧೫. ಅದೇ, ಪೂರ್ವೋಕ್ತ ಪು. ೧೨೯.

೧೬. ಪರಮಶಿವಮೂರ್ತಿ ಡಿ.ವಿ. (ಸಂ), ಕೃಷ್ಣದೇವರಾಯನ ಕಾಲದ ಶಾಸನಗಳು, ಸಂಪುಟ–೧, ಪು. ೧೬.

೧೭. ಎಪಿಗ್ರಾಫಿಯಾ ಕರ್ನಾಟಿಕಾ ಶಾಸನ ಸಂಪುಟ–೭, ಪು. ೨೧೦.

೧೮. ದೇವರಕೊಂಡಾರೆಡ್ಡಿ (ಸಂ), ಬಳ್ಳಾರಿ ಜಿಲ್ಲೆಯ ಶಾಸನಗಳು, ಸಂಪುಟ–೧, ಪು. ೧೩೫.

೧೯. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಂಪುಟ–೧, ಪು. ೩೩೪.

೨೦. ವೆಂಕಟರಾಮಣ್ಣ ಬಿ. ವಿಜಯನಗರ ಇತಿಹಾಸಕ್ಕೆ ಕೋಲಾರ ಜಿಲ್ಲೆಯ ಕೊಡುಗೆ, ಪು. ೫೯

೨೧. Venkataramanayya N. Studies in the history of the third dynasty of Vijayanagara, p. 172.

೨೨. Saletore B.A., Social and Political life in Vijayanagara empire, vol-1, p. 329.

೨೩. ವೆಂಕಟರತ್ನಂ ಎ.ವಿ., ವಿಜಯನಗರ ಕಾಲದ ಸ್ಥಳೀಯ ಸರಕಾರಗಳು. ಪು. ೧೪.

೨೪. Mahalingam T.V. Administration and Social life under Vijayanagara, p. 195.

೨೫. Krishnaswamy A., The tamil country under Vijayanagara, p. 180.

೨೬. ಲಕ್ಷ್ಮಣ್ ತೆಲಗಾವಿ, ಪೂರ್ವೋಕ್ತ, ಪು. ೨೦.

೨೭. ಕಾವಲಮ್ಮ ಆರ್. ಮಧುಗಿರಿ ಮಹಾನಾಡ ಪ್ರಭುಗಳು, ಪು. ೫.

೨೮. ಶಿವಣ್ಣ ಕೆ.ಎಸ್. (ಸಂ), ಕರ್ನಾಟಕ ಚರಿತ್ರೆ ಸಂಪುಟ–೩, ಪು. ೩೯.

೨೯. ಯೋಗೀಶ್ವರಪ್ಪ ಡಿ.ಎನ್., ನಾಯಕರ ಪದ್ಧತಿ ವ್ಯಾಖ್ಯೆಗಳು, (ಲೇ) ಇತಿಹಾಸ ದರ್ಶನ ಸಂಪುಟ–೨೮, ಪು. ೫೦೨.

೩೦. Derret J.D.M, The Hoysalas, A Medieval Royal family, p. 25.

೩೧. Stein Burton, Peasant state and Soceity in Medieval South India, p. 68.

೩೨. Karashima, Noboru. Towards a New Formation: South Indian Soceity under Vijayanagara Rule, p. 15.

೩೩. Ota Nobuhiro, Study of two nayaka families in the Vijayanagara kingdom in the Sixteenth century in memuirs of the research development of the Toyo Bunko, p. 42

೩೪. ಲಕ್ಷ್ಮಣ್ ತೆಲಗಾವಿ, ಪೂರ್ವೋಕ್ತ, ಪು. ೨೪.

೩೫. ಅದೇ ಪೂರ್ವೋಕ್ತ ಪು. ೨೦.

೩೬. ದೇವರಕೊಂಡಾರೆಡ್ಡಿ (ಸಂ), ಹಂಪಿ ಶಾಸನಗಳ ಸಂಪುಟ–೩, ಪು. ೨೮.

೩೭. ಕೃಷ್ಣಮೂರ್ತಿ ಪಿ.ವಿ., ಚಿತ್ರದುರ್ಗ ಜಿಲ್ಲೆಯ ಚಾರಿತ್ರಿಕ ಭೂಗೋಳ, ಹರತಿಸಿರಿ, ಪು. ೩೭೭.

೩೮. ವೆಂಕಟರತ್ನಂ ಎ.ವಿ., ವಿಜಯನಗರದಲ್ಲಿ ಸ್ಥಳೀಯ ಸರಕಾರಗಳು, ಪು. ೧೧.

೩೯. ವೆಂಕಟರಾಮಣ್ಣ, ವಿಜಯನಗರ ಇತಿಹಾಸಕ್ಕೆ ಕೋಲಾರ ಜಿಲ್ಲೆಯ ಕೊಡುಗೆ, ಪು. ೮೩.

೪೦. Ray H.C. Notes on war in Ancient India, p. 63.

೪೧. Rajaram, Art and Artatucture of Nayaka Period, p. iv.

೪೨. ಷೇಕ್‌ಅಲಿ (ಸಂ), ಕರ್ನಾಟಕ ಚರಿತ್ರೆ ಸಂಪುಟ–೩, ಪು. ೨೯೦.

೪೩. ಷೇಕ್‌ಅಲಿ (ಸಂ), ಕರ್ನಾಟಕ ಚರಿತ್ರೆ ಸಂಪುಟ–೨, ಪು. ೬೫

೪೪. ಕೇಶವರಾವ್ (ಸಂ), ಕರ್ನಾಟಕ ಇತಿಹಾಸ ದರ್ಶನ, ಪು. ೮೭೭.

೪೫. ಷೇಕ್‌ಅಲಿ, ಪೂರ್ವೋಕ್ತ ಪು. ೬೨

೪೬. ಶ್ರೀನಿವಾಸಮೂರ್ತಿ ಎಚ್.ವಿ., ಗುಪ್ತರಿಂದ ಮೊಗಲರವರೆಗೆ ಕೆಲವು ಟಿಪ್ಪಣಿಗಳು, ಪು. ೩೨೮.

೪೭. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. ೩೪೦.

೪೮. ಮೋಹನ್‌ಕೃಷ್ಣ ರೈ, ಪ್ರಭುತ್ವ ಮತ್ತು ಜನತೆ, ಪು. ೩೯.

೪೯. ವೆಂಕಟರಾಮಣ್ಣ, ಪೂರ್ವೋಕ್ತ ಪು. ೮೪.

೫೦. ನಾಗರಾಜ್ ಎಂ.ಜಿ., ವಿಜಯನಗರ ಅಧ್ಯಯನ ಸಂಪುಟ–೯, ಪು. ೧೯೬

೫೧. ಲಕ್ಷ್ಮಣ್ ತೆಲಗಾವಿ, 'ಎಪ್ಪತ್ತೇಳು ಪಾಳೆಯಗಾರರು', ಇತಿಹಾಸ ದರ್ಶನ ಸಂಪುಟ–೩, ಸಂಚಿಕೆ–೧, ಪು.

೫೨. Dikshit G.S., Early Vijayangara Studies, in Histoyr and Culture, p. 24.

೫೩. ಲಕ್ಷ್ಮಣ್ ತೆಲಗಾವಿ, ಎಪ್ಪತ್ತೇಳು ಪಾಳೆಯಗಾರರು, ಪು. ೪೦.

೫೪. ನಾಗರಾಜ್ ಎಂ.ಜಿ., ಪೂರ್ವೋಕ್ತ ಪು. ೧೯೭.

೫೫. ಲಕ್ಷ್ಮಣ್ ತೆಲಗಾವಿ, ಪೂರ್ವೋಕ್ತ, ಪು. ೨೪.

೫೬. ನಾಗರಾಜ್ ಎಂ.ಜಿ., ಪೂರ್ವೋಕ್ತ, ಪು. ೧೯೭.

೫೭ ಎಪಿಗ್ರಾಫಿಯಾ ಕರ್ನಾಟಿಕಾ ಶಾಸನ ಸಂಪುಟ–೧೨, ಮೈಸೂರು ವಿಶ್ವವಿದ್ಯಾನಿಲಯ, ಪು. ೩೭೪.

೫೮. ಕರ್ನಾಟಕ ಚರಿತ್ರೆ ಸಂಪುಟ–೨, ಪು. ೧೯೦.

೫೯. ಲಕ್ಷ್ಮಣ್ ತೆಲಗಾವಿ, ಪೂರ್ವೋಕ್ತ, ಪು. ೨೪.

೬೦. ಷೇಕ್ ಅಲಿ (ಸಂ), ಪೂರ್ವೋಕ್ತ, ಕ.ಚ.ಸಂ. ೨, ಪು. ೧೩೯

೬೧. ಎಪಿಗ್ರಾಫಿಯಾ ಕರ್ನಾಟಿಕಾ ಶಾಸನ ಸಂಪುಟ–೯, ಶಾಸನ ಸಂಖ್ಯೆ ೨೯, ಮೈಸೂರು ವಿಶ್ವವಿದ್ಯಾನಿಲಯ, ಪು. ೨೭೮.

೬೨. ಎಪಿಗ್ರಾಫಿಯಾ ಕರ್ನಾಟಿಕಾ ಶಾಸನ ಸಂಪುಟ–೧೦, ಶಾಸನ ಸಂಖ್ಯೆ ೨೧೬, ಮೈಸೂರು ವಿಶ್ವವಿದ್ಯಾನಿಲಯ, ಪು. ೨೬೫, ೨೬೬, ೨೭೭.

೬೩. ಬಿ.ಎಲ್. ರೈಸ್, ಎಪಿಗ್ರಾಫಿಯಾ ಕರ್ನಾಟಿಕಾ ಶಾಸನ ಸಂಪುಟ–೯, ಶಾಸನ ಸಂಖ್ಯೆ ೫೦, ಪು. ೨೮೮.

೬೪. ಎಪಿಗ್ರಾಫಿಯಾ ಕರ್ನಾಟಿಕಾ ಶಾಸನ ಸಂಪುಟ–೫, ಶಾಸನ ಸಂಖ್ಯೆ ೨೬, ಮೈಸೂರು ವಿಶ್ವವಿದ್ಯಾನಿಲಯ, ಪು. ೧೦

೬೫. ಅದೇ, ಪೂರ್ವೋಕ್ತ, ಪು. ೧೩೮.

೬೬. ವೆಂಕಟರತ್ನಂ ಎ.ವಿ, ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರಕಾರ, ಪು. ೧೪.

೬೭. ನೀಲಕಂಠಶಾಸ್ತ್ರಿ, ಪೂರ್ವೋಕ್ತ, ಪು. ೨೦೨

೬೮. ರಾಜಾರಾಮ ಹೆಗಡೆ, ರಾಜ್ಯಪದ್ಧತಿಯ ಬೆಳವಣಿಗೆ, ಪು. ೨೯೧.

೬೯. ಅದೇ, ಪೂರ್ವೋಕ್ತ, ಪು. ೨೯೨.

೭೦. Noboru Karashima, ಅದೇ ಪೂರ್ವೋಕ್ತ, ಪು. ೧೫–೧೫

೭೧. ವೆಂಕಟರತ್ನಂ, ಪೂರ್ವೋಕ್ತ, ಪು. ೭

೭೨. ಮಹಾಲಿಂಗಂ ಟಿ.ವಿ, ಆಡ್ಮಿನಿಸ್ಟ್ರೇಶನ್ ಅಂಡ್ ಸೋಷಿಯಲ್ ಲೈಫ್ ಅಂಡರ್ ವಿಜಯನಗರ

೭೩. ಶಿವಣ್ಣ ಕೆ.ಎಸ್. (ಸಂ), ಕ.ಚ.ಸಂ. ೩, ಪು. ೬೦

೭೪. Sewell, UP. Cit, p. 360-370.

೭೫. ವೆಂಕಟರತ್ನಂ ಎ.ವಿ., ಪೂರ್ವೋಕ್ತ, ಪು. ೧೫

೭೬. ಶಿವಣ್ಣ ಕೆ.ಎಸ್., ಕರ್ನಾಟಕ ಚರಿತ್ರೆ ಸಂಪುಟ–೩, ಪು. ೬೨

೭೭. ಕಾವಲಮ್ಮ ಆರ್., ಪೂರ್ವೋಕ್ತ, ಪು. ೨೧

೭೮. ಷೇಕ್ ಅಲಿ (ಸಂ), ಕರ್ನಾಟಕ ಚರಿತ್ರೆ ಸಂಪುಟ–೩, ಪು. ೬೨.

೭೯. ಎಪಿಗ್ರಾಫಿಯಾ ಕರ್ನಾಟಿಕಾ, ಸಂ. ೫, ಪು. ೬೦೫

೯೦. ಶಿವಣ್ಣ ಕೆ.ಎಸ್. (ಸಂ), ಕರ್ನಾಟಕ ಚರಿತ್ರೆ ಸಂಪುಟ–೩, ಪು. ೪೩.

೯೧. ತುಳಸಿರಾಮನಾಯಕ್, ಬೆಂಗಳೂರಿನ ಸಂಕ್ಷಿಪ್ತ ಇತಿಹಾಸ, ಪು. ೩೧

೯೨. ರಾಜಶೇಖರಪ್ಪ ಬಿ. ಚಿತ್ರದುರ್ಗ ಪಾಳೆಯಗಾರರು ಇತಿಹಾಸ ಕಥನ, ಪು. ೮೬

೯೩. ಶೇಕ್ ಮಸ್ತಾನ್, ಗುಮ್ಮನಾಯಕನಹಳ್ಳಿ ಪಾಳೆಯಗಾರರು (ಲೇ), ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪು. ೩೪೨

೯೪. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೨೨೯.

೯೫. ರವೀಂದ್ರನಾಥ ಕೆ., ಕರ್ನಾಟಕದ ಸಾಮಂತ ಅರಸರು ಮತ್ತು ವಿಜಯನಗರದ ಸಂಬಂಧ (ಲೇ), ವಿಜಯನಗರ ಅಧ್ಯಯನ ಸಂಪುಟ, ಪು. ೨೯೯.

೯೬. ಅದೇ, ಪೂರ್ವೋಕ್ತ, ಪು. ೩೦೦.

೯೭. ಪಾಳೆಯಗಾರರ ಶಾಸನಗಳು ಸಂಪುಟ-೧, ಮೈಸೂರು ವಿಶ್ವವಿದ್ಯಾನಿಲಯ, ಪು. ೧೩.

೯೮. ಕೃಷ್ಣ ಬಿ.ಆರ್., ಪೂರ್ವೋಕ್ತ, ಪು. ೧೯೭

೯೯. ಶ್ರೀಶೈಲ ಆರಾಧ್ಯ, ವಿಜಯನಗರದ ಅರಸರು ಮತ್ತು ಚಿತ್ರದುರ್ಗ ನಾಯಕರ ನಡುವಿನ ಸಂಬಂಧಗಳು ಪು. ೧೨೮

೧೦೦. ರೈಸ್ ಬಿ.ಎಲ್. ಎಪಿಗ್ರಾಫಿಯಾ ಕರ್ನಾಟಿಕಾ ಶಾಸನ ಸಂಪುಟ-೧೧, ಪು. ೨೪೫

೧೦೧. ದೇವರಕೊಂಡಾರೆಡ್ಡಿ (ಸಂ), ಬಳ್ಳಾರಿ ಜಿಲ್ಲೆಯ ಶಾಸನಗಳು, ಸಂಪುಟ-೧, ಪು.೨೧-೨೨

೧೦೨. ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೧೫, ಪು. ೨೨೩

೧೦೩. ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೯, ಮೈಸೂರು ವಿಶ್ವವಿದ್ಯಾನಿಲಯ, ಪು. ೧೫೫

೧೦೪. ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೩, ಮೈಸೂರು ವಿಶ್ವವಿದ್ಯಾನಿಲಯ, ಪು. ೧೫೫

೧೦೫. ಚಿದಾನಂದಮೂರ್ತಿ ಎಂ., ಪೂರ್ವೋಕ್ತ ಪು. ೩೪೦.

೧೦೬. ಪಾಳೆಯಗಾರರ ಶಾಸನ ಸಂಪುಟ-೧, ಮೈಸೂರು ವಿಶ್ವವಿದ್ಯಾನಿಲಯ, ಪು. ೧೫೮.

೧೦೭. ರೈಸ್.ಬಿ.ಎಲ್. (ಸಂ), ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೯, ಪು. ೨೪೮-೨೪೯

೧೦೮. ರೈಸ್ ಬಿ.ಎಲ್. (ಸಂ), ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ-೧೧, ಪು. ೨೮೯-೨೯೦

೧೦೯. ಅದೇ, ಪೂರ್ವೋಕ್ತ, ಪು. ೭೩

೧೧೦. ರೈಸ್ ಬಿ.ಎಲ್. (ಸಂ), ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ-೮, ಪು. ೩೪೦.

❖❖❖

ಅಧ್ಯಾಯ : ಮೂರು

ವಿಜಯನಗರ ಕಾಲದಲ್ಲಿ ಅಮರನಾಯಕ ಪದ್ದತಿಯ ಬೆಳವಣಿಗೆ

ಅಧ್ಯಾಯ: ಮೂರು

ವಿಜಯನಗರ ಕಾಲದಲ್ಲಿ ಅಮರನಾಯಕ ಪದ್ಧತಿಯ ಬೆಳವಣಿಗೆ

೩.೧. ಸಂಗಮ, ಸಾಳುವ, ತುಳುವ ಮತ್ತು ಅರವೀಡು ಮನೆತನಗಳ ಕಾಲದ ಅಮರನಾಯಕರು ಕ್ರಿ.ಶ. ೧೩೪೫-೧೬೬೮

ವಿಜಯನಗರ ಕಾಲದಲ್ಲಿ ಕ್ರಿ.ಶ. ೧೩೪೫ರಿಂದ ಆರಂಭವಾಗುವ ಅಮರನಾಯಕ ಪದ್ಧತಿಯು ಕ್ರಿ.ಶ. ೧೬೬೮ರವರೆಗೂ ಅಸ್ತಿತ್ವದಲ್ಲಿತ್ತು. ಸುಮಾರು ಮೂರು ಶತಮಾನಗಳಷ್ಟು ಸುದೀರ್ಘ ರೂಢಿಯಲ್ಲಿದ್ದ ಈ ವ್ಯವಸ್ಥೆ ೧೭ನೆಯ ಶತಮಾನದಲ್ಲಿ ಅಂತ್ಯಗೊಂಡಿತು. ವಿಜಯನಗರದ ಪ್ರಾಂತೀಯ ಆಡಳಿತ ವ್ಯವಸ್ಥೆ ಊಳಿಗಮಾನ್ಯ ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಅಮರನಾಯಕರೆಂಬ ಅಧಿಕಾರ ವರ್ಗವು ಸ್ಥಳೀಯ ಆಡಳಿತದಲ್ಲಿ ಊಳಿಗಮಾನ್ಯ ವ್ಯವಸ್ಥೆಯನ್ನು ಪೋಷಿಸಿ ಬೆಳೆಸಿತು. ಅಮರನಾಯಕರು ವಿಜಯನಗರ ಸಾಮ್ರಾಜ್ಯದಾದ್ಯಂತ ಪ್ರಾಂತೀಯ ಆಡಳಿತ ವಿಭಾಗಗಳಾದ ನಾಡು, ಸೀಮೆ, ವಳಿತ, ವೇಂಠೆ, ಥಾವಡಿ, ಸ್ಥಳಗಳಲ್ಲಿ ಉಂಬಳಿಗಳ ರೂಪದಲ್ಲಿ ವಿಜಯನಗರದ ಅರಸರಿಂದ ಭೂಮಿಗಳನ್ನು ಪಡೆದುಕೊಂಡು ಅಧಿಕಾರಕ್ಕೆ ಬರುತ್ತಿದ್ದರು. ಅಮರನಾಯಕರಿಗೆ ವಿಜಯನಗರದ ಅರಸರು ನೀಡುತ್ತಿದ್ದ ಭೂ ಹಿಡುವಳಿಗಳನ್ನು ಅಮರಂಗಳೆಂದು ಕರೆಯುತ್ತಿದ್ದರು. ಅಮರನಾಯಕರಿಗೆ ತಮ್ಮ ತಮ್ಮ ಆಡಳಿತ ವ್ಯಾಪ್ತಿಯ ಅಮರಂಗಳ ಮೇಲೆ ರಾಜಕೀಯ ಸೈನಿಕ ಆಡಳಿತ, ಆರ್ಥಿಕ, ನ್ಯಾಯಾಂಗ ಹಕ್ಕುಗಳು ಲಭಿಸುತ್ತಿದ್ದವು. ವಿಜಯನಗರದ ಆರಂಭಿಕ ರಾಜಮನೆತನವಾದ ಸಂಗಮ, ಸಾಳುವ ಮತ್ತು ತುಳುವರ ಕಾಲದಲ್ಲಿ ಅಮರನಾಯಕರು ಭಾಗಶಃ ಸ್ವತಂತ್ರರಾಗಿದ್ದರು. ತುಳುವ ಮನೆತನದ ಸದಾಶಿವರಾಯನ ಕಾಲದಿಂದ ಅಮರನಾಯಕ ವ್ಯವಸ್ಥೆಯಲ್ಲಿ ಅನೇಕ ಸ್ಥಿತ್ಯಂತರಗಳು ಕಂಡುಬಂದವು. ಈ ವೇಳೆಗಾಗಲೇ ನಾಯಕರು ವಿಜಯನಗರ ಒಕ್ಕೂಟದಿಂದ ಹೊರಬರುವಷ್ಟು ಆರ್ಥಿಕವಾಗಿ ಸೈನಿಕವಾಗಿ, ರಾಜಕೀಯವಾಗಿ ಸದೃಢರಾಗಿದ್ದರು. ಸ್ಥಳೀಯ ನಾಯಕರು ಹೆಚ್ಚು ಹೆಚ್ಚು ಸೈನ್ಯವನ್ನು ಕಟ್ಟಿಕೊಂಡಿದ್ದು ಯುದ್ಧ ಸಾಮಾಗ್ರಿಗಳನ್ನು ತಯಾರಿಸಿಕೊಂಡಿದ್ದು ಸ್ವತಂತ್ರವಾದ ವಿದೇಶಾಂಗ ನೀತಿಯನ್ನು ಅನುರಿಸತೊಡಗಿದ್ದು ಈ ಎಲ್ಲಾ ಅಂಶಗಳು ಕ್ರಿ.ಶ. ೧೫೬೫ರ ರಕ್ಕಸ ತಂಗಡಿ ಯುದ್ಧದ ನಂತರ ಸ್ವತಂತ್ರ ಅರಸು ಮನೆತನಗಳಾಗಿ ಮುಂದುವರಿಯುವಲ್ಲಿ ಅಮರನಾಯಕರನ್ನು ಸಶಕ್ತಗೊಳಿಸಿದವು. ಕ್ರಿ.ಶ. ೧೫೬೫ರ ರಕ್ಕಸಗಿ ತಂಗಡಗಿ ಯುದ್ಧದ ನಂತರ

ಬಹುತೇಕ ಅಮರನಾಯಕ ಮನೆತನಗಳು ಸ್ವತಂತ್ರವಾಗಿ ಹೊಸ ರಾಜ ಪ್ರಭುತ್ವಗಳಾಗಿ ತಲೆ ಎತ್ತಿದ್ದರೂ ಅಮರನಾಯಕ ಪದ್ಧತಿಯು ಸಂಪೂರ್ಣವಾಗಿ ಅವನತಿಯಾಗಲಿಲ್ಲ. ವಿಜಯನಗರವನ್ನು ಆಳಿದ ಕೊನೆಯ ರಾಜ ಮನೆತನವಾದ ಅರವೀಡು ವಂಶದವರ ಕಾಲಾವಧಿಯಲ್ಲಿ ಅಮರನಾಯಕ ಪದ್ಧತಿಯು ಜಾರಿಯಲ್ಲಿದ್ದುದನ್ನು ವಿಜಯನಗರ ಕಾಲದ ಶಾಸನಗಳು ಸಾಬೀತುಪಡಿಸುತ್ತವೆ.

ಹೀಗೆ ಅರವೀಡು ಮನೆತನದ ಮೂರನೇ ರಂಗರಾಯನ ಆಡಳಿತಾವಧಿಯವರೆಗೂ ವಿಜಯನಗರದ ಅರಸರು ನಾಯಕರಿಗೆ ಭೂ ಹಿಡುವಳಿಗಳನ್ನು ನೀಡಿ ಅವರಿಂದ ಸೈನಿಕ ಮತ್ತು ಆರ್ಥಿಕ ಸೇವೆಯನ್ನು ಪಡೆಯುವ ವ್ಯವಸ್ಥೆ ಜಾರಿಯಲ್ಲಿತ್ತು. ಅರವೀಡು ಮನೆತನದ ಕೊನೆಯ ಅರಸ ಮೂರನೇ ಶ್ರೀರಂಗರಾಯನ ಮರಣದ ರತುವಾಯ ಈ ಪದ್ಧತಿಯು ಸಂಪೂರ್ಣವಾಗಿ ಅವನತಿಗೊಂಡು ಇತಿಹಾಸದ ಪುಟಗಳನ್ನು ಸೇರಿತು. ಕ್ರಿ.ಶ. ೧೩೪೫ರಿಂದ ೧೬೬೮ರವರೆಗೂ ದೊರಕುವ ಶಾಸನಗಳನ್ನಾಧರಿಸಿ ಸಂಗಮ, ಸಾಳುವ, ತುಳುವ, ಅರವೀಡು ಮನೆತನಗಳ ಆಡಳಿತಾವಧಿಯಲ್ಲಿ ಜಾರಿಯಲ್ಲಿದ್ದ ಅಮರನಾಯಕ ಪದ್ಧತಿಯ ಬೆಳವಣಿಗೆಯ ಮೂರು ಹಂತಗಳನ್ನು ಗುರುತಿಸಬಹುದಾಗಿದ್ದು ಅವುಗಳು ಈ ಕೆಳಗಿನಂತಿವೆ.

೧. ಆರಂಭಿಕ ಹಂತ (ಕ್ರಿ.ಶ. ೧೩೪೫ ರಿಂದ ೧೪೯೧)

೨. ಉನ್ನತಿಯ ಹಂತ (೧೪೯೧ ರಿಂದ ೧೫೬೫)

೩. ಅವನತಿಯ ಹಂತ (೧೫೬೫ ರಿಂದ ೧೬೬೮)

೧. ಆರಂಭಿಕ ಹಂತ (ಕ್ರಿ.ಶ. ೧೩೪೫ರಿಂದ ೧೪೯೧)

ಅಮರನಾಯಕ ಪದ್ಧತಿಯ ಆರಂಭಿಕ ಹಂತವನ್ನು ಕ್ರಿ.ಶ. ೧೩೪೫ರಿಂದ ೧೪೯೧ರವರೆಗೂ ಗುರುತಿಸಬಹುದು. ಈ ಹಂತದಲ್ಲಿ ವಿಜಯವನ್ನು ಆಳಿದ ಸಂಗಮ ಮತ್ತು ಸಾಳುವ ಮನೆತನಗಳು ತಮ್ಮ ಆಡಳಿತ ವ್ಯಾಪ್ತಿಯ ಪ್ರದೇಶಗಳಲ್ಲಿನ ಮುಖಂಡರಿಗೆ ಅಮರಂಗಳನ್ನು ನೀಡುವುದರ ಮೂಲಕ ತಮ್ಮ ಸಾಮ್ರಾಜ್ಯದ ಆರ್ಥಿಕ ಶಕ್ತಿಯನ್ನು ಮತ್ತು ಸೈನಿಕ ಶಕ್ತಿಯನ್ನು ವೃದ್ಧಿಸಿಕೊಂಡವು. ನಾಯಕತನಕ್ಕಾಗಿ ಭೂ ಹಿಡುವಳಿಗಳನ್ನು ನೀಡಿರುವುದು ಸಂಗಮ ವಂಶದ ಒಂದನೇ ಬುಕ್ಕನ ಕಾಲದ ಶಾಸನಗಳಲ್ಲಿ ಕಂಡುಬರುವುದಾದರೂ ಮಹಾನಾಯಕಾಚಾರ್ಯ ಎಂಬ ಅಧಿಕಾರಿ ವರ್ಗದ ಉಲ್ಲೇಖ ಹರಿಹರನ ಕಾಲದ ಶಾಸನಗಳಲ್ಲಿ ಕಂಡುಬರುತ್ತದೆ. ಮಹಾನಾಯಕಾಚಾರ್ಯರು ಅಮರನಾಯಕರಿಗಿಂತ ಮೇಲ್ದರ್ಜೆಯ ನಾಯಕರಾಗಿದ್ದು ವಿಜಯನಗರದ ಅರಸರಿಂದ ಉಂಬಳಿಗಳ ರೂಪದಲ್ಲಿ ಭೂಮಿಯನ್ನು ಪಡೆದು ವಿಜಯನಗರದ ಅರಸರಿಗೆ ಸೈನಿಕ ಮತ್ತು ಆರ್ಥಿಕ ಸೇವೆಯನ್ನು ಪೂರೈಸುತ್ತಿದ್ದರು. ಪೂರ್ವ ಕರ್ನಾಟಕದ ಭಾಗದಲ್ಲಿ ಹಾಗೂ ಬೆಂಗಳೂರು ಮತ್ತು ಕೋಲಾರ ಜಿಲ್ಲೆಯ ಮುಳವಾಯಿ ನಾಡು ಮತ್ತು ಟೇಕಲ್ ನಾಡುಗಳಲ್ಲಿ ಮಹಾನಾಯಕಾಚಾರ್ಯ ಎಂಬ ಅಧಿಕಾರ ವರ್ಗ ಕಾಣಿಸುತ್ತದೆ. ಸಂಗಮ ದೊರೆ ಹರಿಹರನ ಕಾಲದಲ್ಲಿ ಶಾಸನೋಕ್ತವಾಗಿ ಮೂರು ಜನ ಮಹಾನಾಯಕಾಚಾರ್ಯರು ಕಂಡುಬಂದರೆ ಒಂದನೇ ಬುಕ್ಕರಾಯನ ಕಾಲದಲ್ಲಿ ಜನ ನಾಯಕರು

ನಾಯಕತನಕ್ಕಾಗಿ ಭೂಹಿಡುವಳಿಗಳನ್ನು ಪಡೆದುಕೊಂಡಿದ್ದಾರೆ. ಸಂಗಮ ಮತ್ತು ಸಾಳುವರ ಕಾಲದಲ್ಲಿ ಯಲಹಂಕ ನಾಡು, ಟೇಕಲ್‌ನಾಡು, ಹೊಯ್ಸಳನಾಡು, ಅಂಜುಡುನಾಡು (೨) ಅಂಬತ್ತಕ್ಕಿನಾಡು, ಹಿರಿಯೂರು ಸೀಮೆ, ಬೇಲೂರು ಸೀಮೆ, ಬುಕ್ಕರಾಜನಪುರ, ನಿಗರಲಿ ಚೋಳಮಂಡಲ ಮುಂತಾದ ಕಡೆ ೬೪ ಜನ ನಾಯಕರು ನಾಯಕತನಕ್ಕಾಗಿ ಭೂ ಪ್ರದೇಶಗಳನ್ನು ಪಡೆದುಕೊಂಡಿರುವುದು ಶಾಸನೋಕ್ತವಾಗಿದೆ. ಆರಂಭದ ವಿಜಯನಗರ ಸಾಮ್ರಾಜ್ಯದ ಮೇರೆಗಳು ಸೀಮಿತವಾಗಿದ್ದರಿಂದ ನಾಯಕತನಕ್ಕಾಗಿ ನೀಡಿದ ಭೂ ಪ್ರದೇಶಗಳ ಸಂಖ್ಯೆಯು ಸೀಮಿತವಾಗಿದೆ. ಸಂಗಮ ಮತ್ತು ಸಾಳುವ ಕಾಲದ ನಾಯಕತನಗಳನ್ನು ಕೋಷ್ಟಕದ ಮೂಲಕ ದಾಖಲಿಸಬಹುದು.

ಕ್ರಸಂ.	ಸಂವತ್ಸರ	ರಾಜವಂಶ	ನಾಯಕರ ಸಂಖ್ಯೆ	ನಾಯಕತನಕ್ಕಾಗಿ ಪಡೆದ ಸೀಮೆಗಳ ಸಂಖ್ಯೆ
೧.	೧೩೪೫-೧೪೮೫	ಸಂಗಮ	೪೭	೪೮
೨.	೧೪೮೫-೧೫೯೧	ಸಾಳುವ	೨೦	೨೦

ಹೀಗೆ ಆರಂಭ ಹಂತದಲ್ಲಿ ವಿಜಯನಗರದ ಸಾಮ್ರಾಜ್ಯದಲ್ಲಿ ಕರ್ನಾಟಕ ರಾಜ್ಯದಲ್ಲಿ ೬೭ ಅಮರನಾಯಕರು ಅಧಿಕಾರದಲ್ಲಿದ್ದರು.

೨. ಉನ್ನತಿಯ ಹಂತ (೧೫೯೧ ರಿಂದ ೧೫೬೫)

ನಾಯಕ ಪದ್ಧತಿಯ ಬೆಳವಣಿಗೆಯಲ್ಲಿ ಕ್ರಿ.ಶ. ೧೫೯೧ರಿಂದ ೧೫೬೫ರವರೆಗಿನ ಹಂತವನ್ನು ಉನ್ನತಿಯ ಹಂತವೆಂದು ಗುರುತಿಸಲಾಗಿದೆ. ಸಾಳುವ ಮನೆತನದ ಅದಕ್ಷತೆಯನ್ನು ಉಪಯೋಗಿಸಿಕೊಂಡ ತುಳುವ ಸಂತತಿಯ ನರಸನಾಯಕನು ವಿಜಯನಗರ ಸಾಮ್ರಾಜ್ಯದ ಕೀರ್ತಿಯನ್ನು ಉತ್ತುಂಗಕ್ಕೆ ಕೊಂಡೊಯ್ಯುವ ರಾಜವಂಶದ ಸ್ಥಾಪನೆಗೆ ಕಾರಣಕರ್ತನಾದನು. ನರಸನಾಯಕನ ಕಾಲದಿಂದ ಆರಂಭವಾಗುವ ನಾಯಕತನಗಳು ತುಳುವ ಸಂತತಿಯ ಕೊನೆಯ ದೊರೆ ಸದಾಶಿವರಾಯನ ಕಾಲದಲ್ಲಿ ಉಚ್ಚ ಹಂತವನ್ನು ತಲುಪಿತು. ನಾಯಕತನಕ್ಕಾಗಿ ಅಪಾರ ಪ್ರಮಾಣದಲ್ಲಿ ಭೂ ಹಿಡುವಳಿಗಳನ್ನು ನೀಡಿ ಹೆಚ್ಚು ಪ್ರಮಾಣದ ನಾಯಕರನ್ನು ನೇಮಕಗೊಳಿಸಿದ್ದು, ನಾಯಕರಿಗೆ ಹೆಚ್ಚು ಸ್ವಾಯತ್ತತೆಯನ್ನು ನೀಡಿದ್ದು ಕೂಡ ವಿಜಯನಗರದ ಪತನಕ್ಕೆ ಕಾರಣವಾಯಿತು. ತುಳುವ ವಂಶದ ಕೃಷ್ಣದೇವರಾಯ, ಅಚ್ಯುತರಾಯ ಮತ್ತು ಸದಾಶಿವರಾಯರು ತಮ್ಮ ಆಡಳಿತಾವಧಿಯಲ್ಲಿ ಹೆಚ್ಚು ನಾಯಕರನ್ನು ನೇಮಿಸಿ ಅವರ ಮೂಲಕ ಹೆಚ್ಚಿನ ಪ್ರಮಾಣದ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ವಿಜಯನಗರದ ಕೀರ್ತಿಯನ್ನು ವಿಶ್ವವಿಖ್ಯಾತವನ್ನಾಗಿಸುವಲ್ಲಿ ಯಶಸ್ವಿಯಾದರು. ಹೀಗೆ ಸಾಮ್ರಾಜ್ಯವೊಂದರ ಉನ್ನತಿಗೆ ಕಾರಣವಾದ ನಾಯಕ ವ್ಯವಸ್ಥೆಯಯು ಅದರ ವಿಘಟನೆಗೂ ಕಾರಣವಾಗಿ ವಿಜಯನಗರವನ್ನು ವಿನಾಶದತ್ತ ಕೊಂಡೊಯ್ಯುವಲ್ಲಿ ಯಶಸ್ವಿಯಾಯಿತು. ತುಳುವರ ಕಾಲದಲ್ಲಿ ನೀಡಲ್ಪಟ್ಟಂತಹ ನಾಯಕತನಗಳನ್ನು ಕೋಷ್ಟಕದ ಮೂಲಕ ದಾಖಲಿಸಬಹುದು.

ಕ್ರಸಂ.	ರಾಜರ ವಂಶ & ರಾಜರ ಹೆಸರು	ನಾಯಕರ ಸಂಖ್ಯೆ	ನಾಯಕತನಕ್ಕಾಗಿ ಪಾಲಿಸಿದ ಸೀಮೆಗಳ ಸಂಖ್ಯೆ
೧.	ವೀರ ನರಸಿಂಹದೇವ	೧	೧
೨.	ಕೃಷ್ಣದೇವರಾಯ	೪೧	೪೪
೩.	ಅಚ್ಯುತರಾಯ	೪೦	೪೯
೪.	ಸದಾಶಿವರಾಯ	೭೩	೭೯


ತುಳುವರ ಕಾಲದಲ್ಲಿ ಒಟ್ಟು ೧೫೫ ನಾಯಕರು ೧೭೩ ಬಾರಿ ನಾಯಕನವನ್ನು ಪಡೆದುಕೊಂಡಿದ್ದಾರೆ. ತುಳುವರ ಕಾಲದಲ್ಲಿ ಮಹಾಮಂಡಲೇಶ್ವರರಾಗಿ ಬ್ರಾಹ್ಮಣ ವರ್ಗವು ಹೆಚ್ಚು ನಾಯಕತನಗಳನ್ನು ಪಡೆದುಕೊಂಡರೆ ಉಳಿದ ಕೆಳವರ್ಗಗಳು ಅಮರಂಗಳನ್ನು ಪಡೆದು ಮಹಾಮಂಡಲೇಶ್ವರ ಕೆಳಗೆ ಮಹಾ ನಾಯಕಾಚಾರ್ಯರಾಗಿ ಅಮರನಾಯಕರಾಗಿ ಕಾರ್ಯ ನಿರ್ವಹಿಸಿರುವುದು ಸ್ಪಷ್ಟವಾಗುತ್ತದೆ.

ಅವನತಿಯ ಹಂತ (೧೫೬೫ ರಿಂದ ೧೬೬೮)

ಅಮರನಾಯಕ ವ್ಯವಸ್ಥೆಯ ಅವನತಿಯ ಹಾದಿಯನ್ನು ತುಳುವ ಕಾಲದ ಅವನತಿಯೊಂದಿಗೆ ಗುರುತಿಸಬಹುದು. ವಿಜಯನಗರ ಸಾಮ್ರಾಜ್ಯದ ವಿಘಟನೆಗೆ ಕಾರಣವಾದ ಕ್ರಿ.ಶ. ೧೫೬೫ರ ರಕ್ಕಸಗಿ ತಂಗಡಗಿ ಯುದ್ಧವು ಅಮರನಾಯಕ ವ್ಯವಸ್ಥೆಯ ಅವನತಿಗೂ ಕಾರಣವಾಯಿತು. ರಕ್ಕಸಗಿ ತಂಗಡಿಗಿ ಯುದ್ಧದಲ್ಲಿ ಭಾಗಿಯಾಗಿದ್ದ ನಾಯಕರು ವಿಜಯನಗರದ ವಿಘಟನೆಯೊಂದಿಗೆ ಹೊರಬಂದು ಸ್ವತಂತ್ರ ರಾಜ ಪ್ರಭುತ್ವಗಳನ್ನು ರೂಪಿಸಿಕೊಂಡರು. ಈ ಮಹಾನ್ ಯುದ್ಧದ ತರುವಾಯ ರಾಮರಾಯನ ಸೋದರನಾದ ತಿರುಮಲನು ವಿಜಯನಗರದ ರಾಜಧಾನಿ ಹಂಪಿಗೆ ಹಿಂತಿರುಗಿದನು. ಅರಮನೆಯಲ್ಲಿನ ಬಂಗಾರ, ರತ್ನಾಭರಣಗಳನ್ನು, ರತ್ನ ಖಚಿತ ಸಿಂಹಾಸನವನ್ನು ಒಳಗೊಂಡ ಭಂಡಾರವನ್ನು ನೂರಾರು ಆನೆಗಳ ಬೆನ್ನುಗಳ ಮೇಲೆ ಏರಿ ಚಂದ್ರಗಿರಿಗೆ ಧಾವಿಸಿದನು. ಹಾಗೂ ಸದಾಶಿವರಾಯನನ್ನು ತನ್ನೊಂದಿಗೆ ಕರೆದುಕೊಂಡು ಹೋದನು. ರಾಜನೇ ಇಲ್ಲದ ರಾಜಮನೆತನವೇ ಇಲ್ಲದ ಹಂಪಿಯು ಕಳ್ಳರು ದರೋಡೆಕೋರರು ಬಲಿಗೆ ತುತ್ತಾಗಿ ಹಾಳು ಕೊಂಪೆಯಾಯಿತು. ಅರವೀಡು ಶಾಖೆ ಮುಂದೆ ಎರಡು ಕವಲುಗಳಾಗಿ ಒಂದು ಶಾಖೆ ಚಂದ್ರಗಿರಿಯಿಂದಲೂ ಮತ್ತೊಂದು ಶಾಖೆ ಘನಗಿರಿಯೆಂದು ಖ್ಯಾತಗೊಂಡ ಪೆನುಗೊಂಡೆಯಿಂದಲೂ ಆಳಲಾರಂಭಿಸಿತು. ಕ್ರಿ.ಶ. ೧೫೬೫ರಿಂದ ೧೬೬೮ರವರೆಗೂ ಅರವೀಡು ಮನೆತನವು ಅಧಿಕಾರದಲ್ಲಿತ್ತು. ಹಾಗೂ ತುಳುವ ವಂಶದವರಂತೆ ಅರವೀಡು ವಂಶದ ರಾಜರು ನಾಯಕತನ ನೀಡುವುದನ್ನು ಮುಂದುವರಿಸಿದರು. ಅರವೀಡು ಮನೆತನದ ತಿರುಮಲರಾಯ, ಮೊದಲ ಶ್ರೀರಂಗ, ಎರಡನೇ

ವೆಂಕಟ, ರಾಮದೇವರಾಯ, ३ನೇ ವೆಂಕಟ, ३ನೇ ಶ್ರೀರಂಗ ದೇವರಾಯನ ಕಾಲದ ಶಾಸನಗಳು ಅಮರನಾಯಕ ಪದ್ಧತಿಯ ಮುಂದುವರಿಕೆಯನ್ನು ಸೂಚಿಸುತ್ತವೆ. ಅರವೀಡು ಮನೆತನದ ಅವಧಿಯಲ್ಲಿ ಕರ್ನಾಟಕದ ವಿವಿಧ ಭಾಗಗಳಲ್ಲಿ ೪೯ ನಾಯಕರು ೫೦ ಬಾರಿ ನಾಯಕತನವನ್ನು ಪಡೆದುಕೊಂಡಿದ್ದಾರೆ. ಚನ್ನಪಟ್ಟಣದ ನಾಯಕ ಇಮ್ಮಡಿ ಜಗದೇವರಾಯ ವಿಜಯನಗರದ ಅರಸ ವೀರರಾಮ ದೇವನಿಂದ ಎರಡು ಬಾರಿ ನಾಯಕತನಗಳನ್ನು ಪಡೆದುಕೊಂಡಿದ್ದಾನೆ. ಅಮರನಾಯಕರು ತಾವು ದಾನ ನೀಡಿದಂತಹ ಶಾಸನಗಳಲ್ಲಿ ವಿಜಯನಗರದ ಅರಸರೊಂದಿಗೆ ಅವರಿಂದ ತಾವು ಅಮರನಾಯಕತ್ವಕ್ಕಾಗಿ ಪಡೆದ ಸೀಮೆಗಳನ್ನು ಉಲ್ಲೇಖಿಸಿದ್ದಾರೆ. ಹೀಗಾಗಿ ಅಮರನಾಯಕ ವ್ಯವಸ್ಥೆ ಅರವೀಡು ಮನೆತನದಲ್ಲಿ ಇಳಿಮುಖವಾಗುತ್ತಾ ಸಾಗತೊಡಗಿದರೂ ರೂಢಿಯಲ್ಲಿತ್ತು. ಮೂರನೇ ಶ್ರೀರಂಗರಾಯನ ಮರಣದೊಂದಿಗೆ ಈ ಪದ್ಧತಿಯು ಸಂಪೂರ್ಣವಾಗಿ ಅವನತಿಗೊಂಡರು. ಕ್ರಿ.ಶ. ೧೬೭೧ರವರೆಗೂ ನಾಯಕರು ತಮ್ಮ ಶಾಸನಗಳಲ್ಲಿ ತಾವು ವಿಜಯನಗರದ ಅಠಸರಿಂದ ನಾಯಕತನಕ್ಕಾಗಿ ಪಡೆದಿದ್ದ ಸೀಮೆಗಳ ಹೆಸರನ್ನು ಉಲ್ಲೇಖಿಸಿದ್ದಾರೆ.

ವಿಜಯನಗರ ಕಾಲದ ನಾಯಕತನಗಳು



ಈ ಮೇಲಿನ ಕೋಷ್ಟಕದ ಮೂಲಕ ವಿಜಯನಗರ ಕಾಲದ ನಾಯಕರು ಮತ್ತು ನಾಯಕತನಕ್ಕಾಗಿ ಪಾಲಿಸಿದ ಸೀಮೆಗಳನ್ನು ತೋರಿಸಲಾಗಿದೆ. ಸಂಗಮ ಕಾಲದ ಹರಿಹರರಾಯನ ಕಾಲಾವಧಿಯಿಂದ ಆರಂಭವಾಗುವ ನಾಯಕ ವ್ಯವಸ್ಥೆ ಅರವೀಡು ಮನೆತನದ ಮೂರನೇ ಶ್ರೀರಂಗರಾಯನ ಆಡಳಿತಾವಧಿಯ ಅಂತ್ಯದೊಂದಿಗೆ ಮುಕ್ತಾಯವಾಗುತ್ತದೆ. ಮೂರು ಶತಮಾನಗಳಷ್ಟು ಸುದೀರ್ಘವಾದ



ಆಡಳಿತಾವಧಿಯಲ್ಲಿ ೨೯೧ ಬಾರಿ ನಾಯಕತನಕ್ಕಾಗಿ ೨೮೦ ನಾಯಕರು ವಿವಿಧ ಸೀಮೆಗಳನ್ನು ಪಡೆದುಕೊಂಡಿರುವುದು ಶಾಸನೋಕ್ತವಾಗಿದೆ. ಸಂಗಮರ ಕಾಲದಲ್ಲಿ ೪೭ ನಾಯಕತನಗಳು, ಸಾಳುವರ ಕಾಲದಲ್ಲಿ ೨೦, ತುಳುವರ ಕಾಲದಲ್ಲಿ ೧೫೫ ನಾಯಕರು ೧೭೩ ಬಾರಿ ನಾಯಕತನಗಳನ್ನು ಪಡೆದುಕೊಂಡಿದ್ದಾರೆ. ಹಾಗೂ ಅರವೀಡು ಮನೆತನದ ಅವಧಿಯಲ್ಲಿ ೫೦ ನಾಯಕರು ೫೧ ಬಾರಿ ನಾಯಕತನಗಳನ್ನು ಪಡೆದುಕೊಂಡಿದ್ದಾರೆ. ಸಂಗಮ ವಂಶದ ಆಡಳಿತ ೧೩೩೬ರಿಂದ ಆರಂಭವಾದರೂ ಮೊದಲ ಅರಸ ಹರಿಹರನ ಕಾಲದಲ್ಲಿ ನಾಯಕಾಚಾರ್ಯ ಎಂಬ ಅಧಿಕಾರಿಗಳ ಉಲ್ಲೇಖ ೧೩೪೫ರಿಂದ ಶಾಸನಗಳಲ್ಲಿ ದೊರೆಯುವುದರಿಂದ ನಾಯಕತನ ವ್ಯವಸ್ಥೆಯ ಕಾಲಘಟ್ಟವನ್ನು ೧೩೪೫ರಿಂದಲೇ ಗುರುತಿಸಬೇಕಾಗುತ್ತದೆ. ಹಾಗೂ ಈ ವ್ಯವಸ್ಥೆಯು ೧೬೬೮ರಲ್ಲಿ ಅಂತ್ಯವಾಯಿತು.

ವಿಜಯನಗರ ಕಾಲದಲ್ಲಿ ಅಮರನಾಯಕರು ಆಳುತ್ತಿದ್ದ ಆಡಳಿತ ವಿಭಾಗಗಳು

ವಿಜಯನಗರ ಸಾಮ್ರಾಜ್ಯವು ದಕ್ಷಿಣ ಭಾರತದ ಬಹು ಭಾಗ ಭೂ ಪ್ರದೇಶವನ್ನು ಗೆದ್ದುಕೊಂಡು ತನ್ನ ಸಾಮ್ರಾಜ್ಯದ ಮೇರೆಗಳನ್ನು ವಿಸ್ತರಿಸಿಕೊಂಡಿತ್ತು. ವಿಜಯನಗರ ಸಾಮ್ರಾಜ್ಯ ಕೇಂದ್ರೀಕೃತ ಮತ್ತು ವಿಕೇಂದ್ರಿಕೃತ ಅಂಶಗಳೆರಡನ್ನು ಅಳವಡಿಸಿಕೊಂಡು ಸಂಯುಕ್ತ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತಂದುಕೊಂಡಿತು. ವಿಸ್ತಾರವಾದ ಭೂ ಪ್ರದೇಶವನ್ನು ಗುರುತಿಸಲು ಅನುಕೂಲವಾಗುವಂತೆ ಅದು ವಿಭಜಿಸಿಕೊಂಡ ಆಡಳಿತ ವಿಭಾಗಗಳೇ ರಾಜ್ಯ, ವಳಿತ, ವೇಂಠೆ, ನಾಡು, ಸೀಮೆ, ಚಾವಡಿ, ಮಾಗಣಿ, ಸಂಮತು, ಸ್ಥಳ ಮೊದಲಾದ ಪ್ರಾದೇಶಿಕ ವಿಭಾಗಗಳಿದ್ದು ಅವು ವಿಜಯನಗರ ಕಾಲದ ಶಾಸನಗಳಲ್ಲಿ ಉಕ್ತಗೊಂಡಿವೆ. ವಿಜಯನಗರದ ಬಹುತೇಕ ಶಾಸನಗಳಲ್ಲಿ ಸೀಮೆ, ನಾಡು, ಸ್ಥಳ, ವಳಿತ, ವೇಂಠೆ ಎಂಬ ಪದಗಳನ್ನು ಬಳಸಲಾಗಿದ್ದು ಇವುಗಳನ್ನು ಅಮರನಾಯಕರು ತಮ್ಮ ನಾಯಕತನಕ್ಕಾಗಿ ವಿಜಯನಗರದ ಅರಸರಿಂದ ಪಡೆಯುತ್ತಿದ್ದರು. ವಿಜಯನಗರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಪ್ರಾದೇಶಿಕ ಆಡಳಿತ ವಿಭಾಗಗಳು ಈ ಕೆಳಗಿನಂತಿವೆ.

ರಾಜ್ಯ: ವಿಜಯನಗರ ಸಾಮ್ರಾಜ್ಯದ ಪ್ರಾಂತೀಯ ಆಡಳಿತ ವಿಭಾಗದಲ್ಲಿ ರಾಜ್ಯ ಎಂಬ ಹೆಸರು ಸಾಕಷ್ಟು ಪ್ರಸ್ತಾಪಿಸಲ್ಪಟ್ಟಿದೆ. ಕೆಲವು ವೇಳೆ ಅಸ್ಪಷ್ಟವಾಗಿ ಮಂಡಲಗಳೆಂದು ಕರೆಯುತ್ತಿದ್ದುದುಂಟು. ನಾಡು ಎಂದು ಕೂಡ ಅವು ಪ್ರಸಿದ್ಧವಾಗಿದ್ದವು. ವಿಜಯನಗರ ಸಾಮ್ರಾಜ್ಯದಲ್ಲಿ ರಾಜ್ಯ ಎಂಬ ಪದವು ಅವರು ಆಳುತ್ತಿದ್ದ ರಾಜ್ಯಗಳಿಗೂ ಸಾಮ್ರಾಜ್ಯಾಂತರ್ಗತವಾಗಿದ್ದು ವಿವಿಧ ದೇಶ ವಿಭಾಗಗಳಿಗೂ ಅನ್ವಯವಾಗುತ್ತಿತ್ತು. ವಿಜಯನಗರ ಕಾಲದಲ್ಲಿನ ಪ್ರಮುಖ ರಾಜ್ಯಗಳೆಂದರೆ ಕಳಸ ಕಾರ್ಕಳ, ಅರಗ, ಗೋವೆ ಗುತ್ತಿ, ಹೊನ್ನಾಪುರ, ಮಂಗಳೂರು, ತುಳು ರಾಜ್ಯ, ಟೇಕಲ್ ರಾಜ್ಯ, ಮುಳುವಾಯಿ ರಾಜ್ಯ, ತೆರಕಣಾಂಬಿ ರಾಜ್ಯ, ಪಡೈವೀಡು ರಾಜ್ಯ, ಚಂದ್ರಗಿರಿ ರಾಜ್ಯ, ಚನ್ನಪಟ್ಟಣ ರಾಜ್ಯ, ನಲ್ಲೂರು ರಾಜ್ಯ, ರಾಯದುರ್ಗ ರಾಜ್ಯ, ನಿಡುಗಲ್ಲು ರಾಜ್ಯ ಇನ್ನು ಮೊದಲಾದ ರಾಜ್ಯಗಳಿದ್ದವು. ಈ ರಾಜ್ಯಗಳನ್ನು ಕೆಲವೊಮ್ಮೆ ನಾಡುಗಳೆಂದು, ಸೀಮೆಗಳೆಂದು ಗುರುತಿಸಿರುವುದುಂಟು. ರಾಜ್ಯಗಳಲ್ಲಿ ರಾಜನಿಂದ ನೇರವಾಗಿ ನೇಮಕವಾಗುತ್ತಿದ್ದ ರಾಜ್ಯಪಾಲರುಗಳ ಆಡಳಿತವಿರುತ್ತಿದ್ದು. ಈ ರಾಜ್ಯಪಾಲರನ್ನು ಮಹಾಮಂಡಲೇಶ್ವರರು ಎಂದು ಕರೆಯುತ್ತಿದ್ದರು.

ವಳಿತ: ವಳಿತ ಎಂಬುದು ಮಂಡಲ, ರಾಜ್ಯಭಾಗ, ಸಾಮಂತ, ಮಂಡಲ ಎಂಬ ಅರ್ಥವನ್ನು ನೀಡುತ್ತದೆ. ವಳಿತ ಎಂಬ ಆಡಳಿತ ವಿಭಾಗವು ವಿಜಯನಗರ ಶಾಸನಗಳಲ್ಲಿ ಹೆಚ್ಚಾಗಿ ಕಾಣಿಸುತ್ತದೆ. ನಾಡು ಅಥವಾ ಸೀಮೆಯ ನಡುವೆ ವಳಿತವೆಂಬ ವಿಭಾಗವಿದ್ದು, ಈ ಪದಕ್ಕೆ ವೇಂಠೆ ಎಂಬ ಪರ್ಯಾಯ ಪದವನ್ನು ಬಳಸಿದ್ದರೆಂದೂ ಅದು ಸ್ಥಳಕ್ಕಿಂತ ದೊಡ್ಡದು ಮತ್ತು ರಾಜ್ಯಕ್ಕಿಂತ ಚಿಕ್ಕದು ಎಂಬ ಅಭಿಪ್ರಾಯ ನಾಡು ಎಂಬುದು ಒಂದು ಪ್ರಾದೇಶಿಕ ವಿಭಾಗವಾಗಿರುವಂತೆಯೇ ಸ್ಥಳೀಯ ಮುಖಂಡರಿಂದ ಕೂಡಿದ ಸಭೆ ಮತ್ತು ಗ್ರಾಮಕೂಟವು ಆಗಿತ್ತು. ನಾಡು ಎಂಬುದು ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತವಿದ್ದ ಸಮಾನಸ್ತರದ ಪ್ರಾದೇಶಿಕ ಘಟಕವೆಂಬ ಅಭಿಪ್ರಾಯವಿದೆ. ಆದರೆ ಕೆಲವು ಕಡೆ ಸೀಮೆ ಎಂಬುದು ನಾಡಿನ ಒಂದು ಭಾಗವಾಗಿ ಉಕ್ತವಾಗಿರುವುದುಂಟು. ಇಲ್ಲಿ ಗಮನಿಸಬೇಕಾದ ಒಂದು ಮುಖ್ಯ ಸಂಗತಿಯೆಂದರೆ ಸೀಮೆಯೆಂದು ಪ್ರಯೋಗವಾಗಿರುವ ಆಡಳಿತ ಘಟಕವು ಸು. ಕ್ರಿ.ಶ. ೧೪೦೦ರ ಅನಂತರವಾಗಿರುವುದು ಅಂದರೆ ಸುಮಾರು ಕ್ರಿ.ಶ. ೧೪೦೦ ನಂತರದಲ್ಲಿ ವಿಜಯನಗರದ ಅರಸರ ಕಾಲದಲ್ಲಿ ಹೊಸದಾಗಿ ಸೇರ್ಪಡೆಯಾದ ನಾಡಿನ ಸಮಾನಾಂತರದ ಆಡಳಿತ ಘಟಕವೇ ಸೀಮೆ. ಆಡಳಿತ ಸೀಮೆ ಎಂಬುದು ಕೇವಲ ತೆಲುಗು ಪ್ರದೇಶಗಳಿಗೆ ಮಾತ್ರ ಸೀಮಿತವಾದವು ಎಂಬ ಅಭಿಪ್ರಾಯ ತಪ್ಪಾಗುತ್ತದೆ. ವಿಜಯನಗರ ಕಾಲದ ಶಾಸನೋಕ್ತ ನಾಡುಗಳೆಂದರೆ ಹುಲುಕಡಿ ನಾಡು, ಹದಿನಾಡು, ಉಡುವಂಕ ನಾಡು, ಹೊಯ್ಸಳ ನಾಡು, ನಿಡುಗಲ್ಲು ನಾಡು, ಪಡುನಾಡು ಬನವಾಸಿ, ಹುಲಿಗೆರೆ ನಾಡು, ಟೇಕಲ್ ನಾಡು, ಎಂಬ ಅಭಿಪ್ರಾಯವನ್ನು ಪಡಲಾಗಿದೆ ವಿಜಯನಗರ ಕಾಲದಲ್ಲಿ ಶಾಸನಗಳಲ್ಲಿ ಹೊಯ್ಸಳ ನಾಡು ವಳಿತ, ಆದವಾನಿ ವಳಿತ, ಹಸ್ತಿನಾವತಿ ವಳಿತ ಇವುಗಳ ಜೊತೆ ಎಕ್ಕಟಿಯ ವಳಿತ, ಬಾಗೂರು ವಳಿತ, ಗುತ್ತಿ ವಳಿತ, ಕೊಟ್ಟೂರು ವಳಿತ, ಮೊದಲಾದ ವಳಿತಗಳು ಶಾಸನೋಕ್ತಗೊಂಡಿವೆ.

ವೇಂಠೆ: ವೇಂಠೆ ಎಂಬ ಆಡಳಿತ ವಿಭಾಗವು ವಿಜಯನಗರ ಕಾಲದ ಶಾಸನಗಳಲ್ಲಿ ಕಂಡುಬರುತ್ತದೆ. ಉದಾಹರಣೆಯಾಗಿ ಉಚ್ಚಂಗಿ ವೇಂಠೆ, ಚಂದ್ರಗುತ್ತಿ ವೇಂಠೆ, ಕೋಟೆಕೆರೆಯ ವೇಂಠೆ, ರಾಯದುರ್ಗ ವೇಂಠೆ ಮೊದಲಾದ ವೇಂಠೆಗಳು ಶಾಸನೋಕ್ತವಾಗಿವೆ. ಕೆಲವೊಮ್ಮೆ ಸೀಮೆ ಮತ್ತು ನಾಡುಗಳು ವೇಂಠೆಯೊಳಗೆ ಅಂತರ್ಗತವಾಗಿರುತ್ತವೆ.

ನಾಡು: ನಾಡು ಎಂಬುದು ಒಂದು ಪ್ರಾದೇಶಿಕ ಆಡಳಿತ ವಿಭಾಗ. ವಿಜಯನಗರ ಕಾಲದ ಅಮರನಾಯಕರು ಹೆಚ್ಚಾಗಿ ಕಂಡುಬರುವುದು ನಾಡು ಎಂಬ ಪ್ರಾದೇಶಿಕ ಆಡಳಿತ ವಿಭಾಗಗಳಲ್ಲಿ ಅಂಜಡುನಾಡು, ಅಂಬತ್ತಕ್ವೆ ನಾಡು, ಕೊಳಾಲು ನಾಡು, ಹೊರದ ನಾಡು, ಗೋದುಮಲೆ ನಾಡು, ಹಿರಸು ನಾಡು, ಹಿಮ್ಮರ ನಾಡು, ದುಮ್ಮಿ ನಾಡು, ಬೆಹೂರು ನಾಡು, ನುಗ್ಗಿಯ ಹಳ್ಳಿಯ ನಾಡು, ಕುರುನಾಡು, ಮೊದಲಾದ ನಾಡುಗಳು ವಿಜಯನಗರದಾದ್ಯಂತ ಕಂಡುಬರುತ್ತವೆ. ಮೇಲೆ ಉಲ್ಲೇಖಿಸಿರುವ ನಾಡುಗಳಲ್ಲಿ ವಿಜಯನಗರ ಕಾಲದ ಅಮರನಾಯಕರ ಆಡಳಿತವಿತ್ತು.

ಸೀಮೆಗಳು: ನಾಡುಗಳಂತೆ ಸೀಮೆಗಳು ಕೂಡ ರಾಜ್ಯದಲ್ಲಿ ಅಂತರ್ಗತವಾಗಿರುತ್ತವೆ. ಸೀಮೆ ಎಂಬ ಆಡಳಿತ ವಿಭಾಗವು ನಾಡುಗಳಿಗಿಂತ ಹೆಚ್ಚು ಬಾರಿ ವಿಜಯನಗರ ಶಾಸನಗಳಲ್ಲಿ ಕಂಡುಬರುತ್ತದೆ. ವಿಜಯನಗರ ಕಾಲದಲ್ಲಿ ಹಲವಾರು ಸ್ಥಳಗಳನ್ನು ಒಟ್ಟುಗೂಡಿಸಿ ಸೀಮೆಗಳೆಂದು ಕರೆಯಲಾಗುತ್ತಿತ್ತು. ಕೆಲವೊಮ್ಮೆ ನಾಡು ಎಂಬುದಕ್ಕೆ ಪರ್ಯಾಯವಾಗಿ ಸೀಮೆ ಎಂದು ಕರೆಯಲಾಗುತ್ತಿತ್ತು. ವಿಜಯನಗರ ಕಾಲದಲ್ಲಿ ಶಾಸನೋಕ್ತವಾಗಿರುವ ಕೆಲವು ಸೀಮೆಗಳನ್ನು ಉದಾಹರಣೆಯಾಗಿ ನೀಡಬಹುದು. ಬೂದಿಹಾಳ ಸೀಮೆ, ಹಾಸನ ಸೀಮೆ, ಹರಿಹರ ಸೀಮೆ, ಬುರುಡುಕುಂಟೆ ಸೀಮೆ, ಬೆಮತ್ತರ ಸೀಮೆ, ಕೋಡಂಬಳ್ಳಿ ಸೀಮೆ, ಹೊನ್ನಾವಳಿ ಸೀಮೆ.

ಥಾವಡಿ: ಥಾವಡಿಯು ವೇಂಠೆಗಿಂತ ದೊಡ್ಡದಾದ ಆಡಳಿತ ವಿಭಾಗವಾಗಿದ್ದು ವಿಜಯನಗರದ ಬಹುತೇಕ ಶಾಸನಗಳಲ್ಲಿ ಥಾವಡಿಯ ಪ್ರಸ್ತಾಪ ಕಂಡುಬರುತ್ತದೆ. ಬೇಲೂರು ಥಾವಡಿ, ಊರ ಥಾವಡಿ, ಕೊಟ್ಟೂರು ಥಾವಡಿ ಹೀಗೆ ಥಾವಡಿ ಎಂಬ ಉಲ್ಲೇಖಗಳು ಶಾಸನೋಕ್ತವಾಗಿವೆ.

ಮಾಗಣಿ: ಮಾಗಣಿ, ಪುರ ಮಾಗಣಿ ಎಂಬೆಲ್ಲಾ ವಿವಿಧ ಹೆಸರುಗಳಿಂದ ಕರೆಯಲ್ಪಡುವ ಈ ಆಡಳಿತ ವಿಭಾಗವನ್ನು ಅಮರನಾಯಕರು ಆಳುತ್ತಿದ್ದರು. ಈ ವಿಭಾಗವು ರಾಜ್ಯ ಅಥವಾ ನಾಡಿನ ನಂತರದ ಕೆಳಗಿನ ಆಡಳಿತ ವಿಭಾಗವಾಗಿರಬಹುದು. ಇದನ್ನು ಪ್ರಸ್ತುತ ತಾಲ್ಲೂಕು ಅಥವಾ ಜಿಲ್ಲಾ ವಿಭಾಗಗಳೊಂದಿಗೆ ಹೋಲಿಸಬಹುದಾಗಿದೆ. ವಿಜಯನಗರ ಕಾಲದ ಪ್ರಮುಖ ಮಾಗಣಿಗಳೆಂದರೆ ಅಮರಮಾಗಣಿಯಾಗಿ ಸಲ್ಲುವ ಕಾಮದೇವನಹಳ್ಳಿ, ಬೂದಿಹಾಳು ಸೀಮೆಯೊಳಗಿನ ಬಯಕಾರ ರಾಮಪಯನ ಮಾಗಣಿ, ಗುತ್ತಿ ಸೀಮೆಯೊಳಗಿನ ಪುಲಿಯೇರು ಮಾಗಣಿ ಗುತ್ತಿ ರಾಜ್ಯದೊಳಗಿನ ಚೀರ ಮಾಗಣಿ, ಗುತ್ತಿ ರಾಜ್ಯದೊಳಗಿನ ಹಂಪಿ ಮಾಗಣಿ, ಆನೆಗೊಂದಿ ಮಾಗಣಿ ಇತ್ಯಾದಿ ಮಾಗಣಿಗಳು ಶಾಸನೋಕ್ತವಾಗಿವೆ.

ಸ್ಥಳ: ಅನೇಕ ಗ್ರಾಮಗಳ ಸಮೂಹವೇ ಸ್ಥಳವಾಗಿದ್ದು ಈ ಸ್ಥಳದ ಮಾಹಿತಿಯು ವಿಜಯನಗರದ ಶಾಸನಗಳಲ್ಲಿ ಕಂಡುಬರುತ್ತದೆ. ಉಮ್ಮತ್ತೂರು ರಾಜ್ಯದ ಹೊಸವಾಡ ಸ್ಥಳ, ವನಸಮುದ್ರ ಸ್ಥಳ, ಹದಿನಾಡು ಸ್ಥಳ, ಹೊಂಟೆಕೊಪ್ಪ ಸ್ಥಳ, ಸಾಲೆಗ್ರಾಮ ಸ್ಥಳ ವಿಜಯನಗರ ಕಾಲದಲ್ಲಿ ೭ ಅಥವಾ ೨೫ ಗ್ರಾಮಗಳನ್ನು ಒಳಗೊಂಡಿರುವ ಪ್ರದೇಶಗಳನ್ನು ಸ್ಥಳವೆಂದು ಗುರುತಿಸಲಾಗಿದೆ. ಕೆಲವೊಮ್ಮೆ ಈ ಸ್ಥಳ ಎಂಬ ಪದಕ್ಕೆ ಪರ್ಯಾಯವಾಗಿ ಸಂಮತ್ತು ಎಂಬ ಪದವನ್ನು ಕೂಡ ಬಳಸಲಾಗಿದೆ.

ಒಟ್ಟಾರೆಯಾಗಿ ರಾಜ್ಯವೊಂದನ್ನು ಹೊರತುಪಡಿಸಿ ಮಿಕ್ಕುಳಿದ ಎಲ್ಲಾ ಆಡಳಿತ ಪ್ರದೇಶಗಳಲ್ಲಿ ಅಮರನಾಯಕರ ಆಡಳಿತವಿರುವುದು ಶಾಸನೋಕ್ತ ದಾಖಲೆಗಳಿಂದ ಸ್ಪಷ್ಟವಾಗಿರುತ್ತದೆ. ವಿಜಯನಗರ ಸಾಮ್ರಾಜ್ಯವು ಪ್ರಾಂತೀಯ ಮಟ್ಟದಲ್ಲಿ ಊಳಿಗಮಾನ್ಯ ವ್ಯವಸ್ಥೆಯ ಸರ್ಕಾರವನ್ನು ಅಳವಡಿಸಿಕೊಂಡಿತ್ತು ಎಂದು ಹೇಳಬಹುದು.

ಸಂಗಮರ ಕಾಲದ ನಾಯಕರು (೧೩೪೫ರಿಂದ ೧೪೮೫)

ಹರಿಹರನ ಕಾಲದ ನಾಯಕತನಗಳು

ಕ್ರಸಂ.	ವರ್ಷ	ರಾಜ	ನಾಯಕ	ನಾಯಕತನಕ್ಕಾಗಿ ಪಾಲಿಸಿದ ಸೀಮೆ/ನಾಡು
೧.	೧೩೪೫	ಒಂದನೇ ಹರಿಹರ	ಮಹಾನಾಯಕಾ ಚಾರ್ಯ ಎರೆಮಾಚಿ ಹಿರಿಯ ತಿಮ್ಮನಾಯಕ	ಸಲ್ಲುವ ಯಲಹಕ್ಕನಾಡು ಬಿ.ಎಲ್. ರೈಸ್ (ಸಂ) ಎ.ಕ.ಸಂ. ೯, ಶಾ.ಸ. ೩ ಪು. ೫೬, ದೇವನಹಳ್ಳಿ
೨.	೧೩೪೬	ಹರಿಯಪ್ಪ ವೊಡೆಯ	ನಾಯಕಾಚಾರ್ಯ ವಿಯಣ್ಣ ಗುಮ್ಮಪ್ಪ	ಟೇಕಲ್‌ನಾಡು B.R. Gopal (e) Vijayanagara inscription Vol-3, P. 74 ಶಾ.ಸ. ಕೆ.ಎನ್. ೧೪೦೦
೩.	೧೩೫೬	ಹರಿಹರ	ಶ್ರೀಮನ್ಮಮಹಾ ನಾಯಕಾಚಾರ್ಯ ಭಾನು ಪಾಲಕರಾದ ಹಂದಿಗನೂರು ಸಿದೆನಾಯಕರ ಮುತ್ತಾಲಿಕ	SII Vol-XV, 649 P. 412

ಒಂದನೇ ಬುಕ್ಕರಾಯ

೧.	೧೩೫೨	ಒಂದನೇ ಬುಕ್ಕರಾಯ	ಶ್ರೀಮನ್ಮಹಾ ಸಾಮಂತಧಿ ತಿಮೂವರು ರಾಯರ ಗಂಡ ಬಲವಂಕದರಂಗಿ ನಾಯಕನ ಮಗ ತಿಮ್ಮ ನಾಯಕ	ಸಲ್ಲುವ ಅಂಜಡುನಾಡು ಬಿ.ಎಲ್. ರೈಸ್ (ಸಂ) ಎ.ಕ.ಸಂ.೯, ಬೆಂಗಳೂರು
೨.	೧೩೫೯	ಒಂದನೇ ಬುಕ್ಕರಾಯ	ತೆಪ್ಪದ ನಾಗಂಣ ವೊಡೆಯ	ಉಂಬಳಿಯಾಗಿ ಪಾಲಿಸಿದ ಹೊಯ್ಸಳ ನಾಡ ವಳಿತ ಶಾ.ಸಂ. ೫೧೯ ಎ.ಕ.ಸಂ. ೯, ಪು. ४೬೨ ಮೈ.ವಿ.ವಿ.

೩.	೧೩೬೦	ಒಂದನೇ ಬುಕ್ಕರಾಯ	ಸೊನ್ನೆಯ ನಾಯಕನ ಮಗ ಮಹಾ ಸಂಸ್ಥಾನಧಿಪತಿ ಸಿಪತಿ ನಾಯಕ	ಅಂಬತ್ತಕ್ವಿ ನಾಡಿನ ನಾಯಕನತನ ಬಿ.ಎಲ್. ರೈಸ್ (ಸಂ) ಎ.ಕ.ಸಂ.೧೦, ಶಾ.ಸ. ೭೫ ಚಿಂತಾಮಣಿ, ಪು. ೩೨೮

ಎರಡನೇ ಹರಿಹರನ ಕಾಲದ ನಾಯಕತನಗಳು

೧.	೧೩೬೫	೨ನೇ ಹರಿಹರರಾಯ	ಮಹಾನಾಯಕಾ ಚಾರ್ಯ ಕೋಟೆಯ ಅದೆಯ ನಾಯಕರ ಮಗ ಕಾಮೆಯ ನಾಯಕ ಬೊಂಮ್ಮೆಯ ನಾಯಕ	ಬಿ.ಎಲ್. ರೈಸ್ (ಸಂ) ಎ.ಕ.ಸಂ.೧೧, ಹಿರಿಯೂರು, ಶಾ.ಸಂ. ೧೪, ಪು. ೨೯೩
೨.	೧೩೮೨	೨ನೇ ಹರಿಹರರಾಯ	ಶ್ರೀಮನ್ಮಹಾ ಪ್ರಧಾನ ಮುದಯ ದಂಣಾಯಕ ಕಾಲದ ಅಮರನಾಯ ಕರ ಉಲ್ಲೇಖ	ಬೇಲೂರು ಎ.ಕ.ಸಂ.–೯, ಪು. ೧೪೨ ಮೈ.ವಿ.ವಿ.
೩.	೧೩೮೫	೨ನೇ ಹರಿಹರರಾಯ	ಬೊಮ್ಮಣ್ಣ ನಾಯಕಾಚಾರ್ಯ	ಬುಕ್ಕರಾಜನಪುರದ ಆಳ್ವಿಕೆ B.R. Gopal (e) V.I. vol-3, P. 439 KN-2226
೪.	೧೩೯೦	೨ನೇ ಹರಿಹರರಾಯ	ಖಂತಿಕಾರಾಯರ ಗಂಡ ತೆಪ್ಪದ ನಾಗಂಣವೊಡೆಯ	ಸಲ್ಲುವ ನಿಗರಲಿ ಚೋಳಮಂಡಲ ಬಿ.ಎಲ್.ರೈಸ್ (ಸಂ), ಎ.ಕ.ಸಂ. ೧೦ ಶಾ.ಸಂ. ೧೦೫ ಕೋಲಾರ, ಪು. ೨೬
೫.	೧೩೯೨	೨ನೇ ಹರಿಹರರಾಯ	ತೆಪ್ಪದ ನಾಗಂಣ ವೊಡೆಯನ ಮೊಮ್ಮಗ ತಿರುಮಲನಾಥ ದೇವ	ಸಲ್ಲುವ ಗಡಿದ ದೊಳಗಿನ ಗಣ ತಿರುಮಲಾಪುರ ಎ.ಕ.ಸಂ.೧೦, ಶಾ.ಸಂ. ೧೫, ಪು. ೨೭೦

ಒಂದನೇ ದೇವರಾಯನ ಕಾಲದ ನಾಯಕತನಗಳು

೧.	೧೪೦೩	೧ನೇ ದೇವರಾಯನ ಕಾಲದ ಶಾಸನ	ಶ್ರೀಮನ್ಮನಾಯಕಾ ಚಾರ್ಯ ಯೆಡೆದ ಕಾಲ ಚಂದಬೋವನ ಕಾಮ ನಾಯಕರ ಮಗ ಚೆನ್ನಪ್ಪ	ಬಿ.ಎಲ್. ರೈಸ್ ಎ.ಕ.ಸಂ.೧೧, ಶಾ.ಸ. ೪೨, ಪು. ೨೮೧
೨.	೧೪೦೬	೧ನೇ ದೇವರಾಯ	ನಾಥದೇವ	ನಾಯಕತನಕ್ಕೆ ಸಲ್ಲುವ ಕಳೆಯನಾಡು ಬಿ.ಎಲ್. ರೈಸ್ (ಸಂ) ಎ.ಕ.ಸಂ.೭, ಶಾ.೭೫, ಪು. ೨೯೯, ಮೈ.ವಿ.ವಿ.
೩.	೧೪೦೭	೧ನೇ ದೇವರಾಯ	ಮಹಾನಾಯಕಾ ಚಾರ್ಯ ಮಗೋಡೆ ಸಿಂಗನಾಯಕನ ಮಗ ವೋಬಯ್ಯ ನಾಯಕ	ನಾಯಕತನಕ್ಕೆ ಗೊಂಡನಹಳ್ಳಿ ಸಲ್ಲುವ ಬಿ.ಎಲ್.ರೈಸ್ ಎ.ಕ.ಸಂ. ೧೦, ಚಿಂತಾಮಣಿ ಶಾ.ಸ. ೩೯ ಪು. ೩೧೨
೪.	೧೪೦೭	ವೀರಪ್ರತಾಪ ದೇವರಾಯ	ಸಾಮಂತಾಧಿಪತಿ ಗಂಡರಗೂಳಿಯ ತಿಮ್ಮಯ ನಾಯಕ	ತಮಗೆ ಸಲ್ಲುವ ಅಂಜಡುನಾಡು ಬಿ.ಎಲ್. ರೈಸಂ (ಸಂ) ಎ.ಕ.ಸಂ. ೯, ಶಾ.ಸಂ.೩೨ ದೇವನಹಳ್ಳಿ, ಪು. ೧೭೨
೫.	೧೪೦೮	೧ನೇ ದೇವರಾಯ	ಮಹಾನಾಯಕಾ ಚಾರ್ಯ ಮುರಾರಿ ನಾಯ್ಕರ ಮಗ ತಂಮಯ ನಾಯ್ಕ	ತಮಗೆ ಸಲ್ಲುವ ಹೊರದನಾಡು ಎ.ಕ.ಸಂ. ೧೦ ಮುಳಬಾಗಿಲು ಶಾ.ಸ. ೧೭೫ ಪು. ೧೧೫
೬	೧೪೧೦	೧ನೇ ದೇವರಾಯ (ಬುಕ್ಕರಾಯ)	ಸಾಂಬಣ್ಣ ವೊಡೆಯ	ತಮ್ಮ ಆಳ್ವಿಕೆಗೆ ಸಲ್ಲುವ ಗೋಡಗ್ರಾಮ ಎ.ಕ.ಸಂ. ೧೨, ಕೊಪ್ಪ ಪು. ೩೧೨, ಶಾ.ಸ. ೨೦ ಮೈ.ವಿ.ವಿ.

೭	೧೪೧೦	೧ನೇ ದೇವರಾಯ	ಜುಂಜೋಬ ನಾಯಕರ ಮಗ ಹಿರಿಯ ಮುದೆಯ ನಾಯಕ	ನಾಯಕತನಕ್ಕೆ ಪಾಲಿಸಿದ ಹಿರಸು ನಾಡು ಬಿ.ಎಲ್. ರೈಸ್ (ಸಂ) ಎ.ಕ.ಸಂ. ೯, ಶಾ.ಸ. ೪೪ ಪು. ೨೪೫
೮.	೧೪೧೨	೧ನೇ ದೇವರಾಯ	ಹಿರಿಯ ಮುದಿಯ ನಾಯಕನ ಮಗ ಜುಂಜಿ ನಾಯಕ	ನಾಯಕತನಕ್ಕೆ ನೀಡಿದ ಮೊರಸು ನಾಡು ಬಿ.ಆರ್. ಗೋಪಾಲ್ (ಸಂ), ವಿ.ಐ.ಐ. ವ್ಯಾಲ್ಯೂಂ–೧, ಕೆ.ಎನ್. ೨೨, ಪು. ೧೦
೯.	೧೪೧೩	೧ನೇ ದೇವರಾಯ	ತೆಪ್ಪದ ಮಾದಂಣ	ನಾಯಕತನಕ್ಕೆ ಪಾಲಿಸಿದ ಗೋದುಮಲೆ ನಾಡು ಶಾ.ಸ. ೫೪, ಇ.ಸಿ.೯ ಪು. ೫೩೯ ಮೈ.ವಿ.ವಿ. ಸಕಲೇಶಪುರ
೧೦.	೧೪೧೩	ದೇವರಾಯ ಮಹಾರಾಯ	ಅಂಕಿನಾಯಕನ ಮಗ ತಿಮಯ ನಾಯಕ ಎ.ಕ.ಸಂ. ೧೦	ತಮಗೆ ಸಲ್ಲುವ ಅಂಬತ್ತಕ್ವಿ ನಾಡು ಬಿ.ಎಲ್.ರೈಸ್, ಶಾ.ಸಂ. ೮೧, ಪು. ೩೨೪ ಚಿಂತಾಮಣಿ
೧೧.	೧೪೧೫	ದೇವರಾಯನ ಕಾಲದ ಶಾಸನ ವಾದರೂ ೩ನೇ ಹರಿಹರ ರಾಯನ ಉಲ್ಲೇಖ ವಿದೆ	ಮಹಾನಾಯಕಾ ಚಾರ್ಯ ಯರ್ರ ಲಕ್ಕ ನಾಯಕ	ದುಮ್ಮಿ ನಾಡು ಆಳ್ವಿಕೆ ಎ.ಕ.ಸಂ. ೭, ಬಿ.ಎಲ್. ರೈಸ್ ಶಾ.ಸ. ೩೦, ಪು. ೪೧,

೧೨.	೧೪೧೮	ದೇವರಾಯ ಮಹಾರಾಯ	ಶ್ರೀಮನ್‌ಮಹಾನಾಯಚಾರ್ಯ ಲಪ್ಪ ಬೊಮ್ಮನಾಯುಡು ಸಂಗಮ ನಾಯುಡು ಪೆದ್ದ ಚಿಂನಮ ನಾಯುಡು (ಗುಮ್ಮನಾಯಕ ಪಾಳೆಯ ನಾಯಕರು)	ಗುಡಿಚೋಟ ಗಂಗ ಸಮುದ್ರದ ಕೆರೆಯ ನಿರ್ಮಾಣ ಕೋಲಾರ, ಎ.ಕ.ಸಂ. ೧೦ ಬಿ.ಎಲ್.ರೈಸ್, ಬಾಗೇಪಲ್ಲಿ ಶಾ.ಸಂ. ೪೬
೧೩.	೧೪೧೮	೧ನೇ ದೇವರಾಯ	ಜಂಜುಬನಾಯಕನ ಮಗ ಜಕ ಮದ್ದೆ ನಾಯಕ	ನಾಯಕತನಕ್ಕೆ ಸಲ್ಲುವ ಹಿಮ್ಮರನಾಡು ಬಿ.ಎಲ್. ರೈಸ್ (ಸಂ) ಎ.ಕ.ಸಂ. ೯, ಆನೇಕಲ್ ಶಾ.ಸ. ೪, ಪು. ೨೩೬
೧೪.	೧೪೧೯	೧ನೇ ದೇವರಾಯ	ಶ್ರೀಮನುಮಹಾ ನಾಯಕಾಚಾರಿ ಮುತ್ತಿಗೆಯ ಬೊಪ್ಪೆಯ ನಾಯಕ	ಕೋಳಾಲ, ಸೀಮೆಯ ನಾಯಕತನ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೦ ಎಸ್.ಎ.ಐ. ಪು. ೧೧ ಕೋಲಾರ ಶಾ.ಸ. ೨೯೮

ಎರಡನೇ ದೇವರಾಯನ ಕಾಲದ ನಾಯಕತನಗಳು

೧.	೧೪೨೯	೨ನೇ ದೇವರಾಯ	ಮಹಾನಾಯಕಾ ಚಾರ್ಯ ಗೊಡೆಯ ಸಂಗಮ ನಾಯಕ ನ ಮಗ	ನಾಯಕತನಕ್ಕೆ ಸಲ್ಲುವ ಮುಳುವಾಯಿ ಚಾವಡಿ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೦, ಕೋಲಾರ ಶಾ.ಸ. ३೯, ಪು. ३೧೨
೨.	೧೪೩೦	ವೀರಪ್ರತಾಪ ದೇವರಾಯ	ಸಾರಕ್ಕಿಯ ಪೆಮ್ಮೆಯ ನಾಯಕ	ನಾಯಕತನಕ್ಕೆ ಸಲ್ಲುವ ಬೆಹೂರ ನಾಡು ಬಿ.ಎಲ್. ರೈಸ್ (ಸಂ) ಎ.ಕ.ಸಂ. ೯ ಬೆಂಗಳೂರು, ಶಾ.ಸ. ೩೫ ಪು. ೨೪೩

೩.	೧೪೩೧	ಇಮ್ಮಡಿ ದೇವರಾಯ	ಮಂಗಪ್ಪ ದಂಡ ನಾಯಕನ ಮಗ ಪ್ರತಾಪರಾಯ	ನಾಯಕತನಕ್ಕಾಗಿ ಪಾಲಿಸಿದ ಯಲಹಂಕ ನಾಡಿನ ಶಿವನ ಸಮುದ್ರ ಸೀಮೆ, ಶಾ.ಸ.೫೯ B.R. Gopal (e), Vijayanagara inscription Vol-1, P. 27
೪.	೧೪೩೨	ಇಮ್ಮಡಿ ದೇವರಾಯ	ಗುಂಡಪ್ಪ ನಾಯಕ	ಅಮರನಾಯಕತನ ನೀಡಿದ ನುಗ್ಗಿಯ ಹಳ್ಳಿಯ ನಾಡು ಎ.ಕ.ಸಂ.೧೦, ಶಾ.ಸ. ೧೨೦ ಪು. ೫೫೮, ಮೈ.ವಿ.ವಿ.
೫.	೧೪೩೨	ವೀರಪ್ರತಾಪ ದೇವರಾಯ	ದೇವರಾಯ ಮಹಾ ರಾಯನ ಮನೆಯ ಹೆಗ್ಗಡೆ ಅವುಬಳ ನಾಯಕ	ನಾಯಕತನಕ್ಕಾಗಿ ಪಾಲಿಸಿದ ಸೀಮೆಯ ಹೆಸರು ತ್ರುಟಿತಗೊಂಡಿದೆ ಬಿ.ಎಲ್.ರೈಸ್ (ಸಂ) ಎ.ಕ.ಸಂ.೭, ಶಿವಮೊಗ್ಗ ಚನ್ನಗಿರಿ, ಪು. ೪೭೦
೬	೧೪೩೨	ಇಮ್ಮಡಿ ದೇವರಾಯ ವಿರೂಪಾಕ್ಷನ ಶಾಸನದಲ್ಲಿ ಹೆಸರಿದೆ	ಮಾಗಣಿಕಾರ ಗೋಪರಸ	ಸಿಂಗಪು(ರ)ದ ಆಳ್ವಿಕೆ ಎ.ಕ.ಸಂ.೮, ಅರಕಲಗೂಡು ಶಾ.ಸ. ೧೫೨, ಪು. ೧೯೯
೭	೧೪೩೨	ಇಮ್ಮಡಿ ದೇವರಾಯ	ಬನವಾಸಿಯ ಚಿಕ್ಕದೇವ ಒಡೆಯ ರ ಕುಮಾರ ಮಲ್ಲಂಣ ಅಯ್ಯ	ಬನವಾಸಿ ಆಳ್ವಿಕೆ ಎಸ್.ಐ.ಐ. ವ್ಯಾಲ್ಯೂಂ-೨೦ ಶಾ.ಸ. ೨೩೩, ಪು. ೨೮೫
೮.	೧೪೩೬	ವೀರಪ್ರತಾಪ ದೇವರಾಯ	ವರದಣ್ಣ ನಾಯಕ	ನಾಯಕತನಕ್ಕೆ ಪಾಲಿಸಿದ ಮುದಗಲ್ಲು ಸೀಮೆ ಕ.ವಿ.ಹಂ. ಶಾ.ಸಂ.೭, ಲಿಂಗಸ್ಗೂರು, ಶಾ.ಸ. ೫೦ ಪು. ೧೮೬-೧೮೭
೯.	೧೪೩೭	ವೀರಪ್ರತಾಪ ದೇವರಾಯ ಮಹಾರಾಯ	ಯರಕಜಿಯ ಅಮರನಾಯಕರು	ಎ.ಕ.ಸಂ. ೯, ಬಿ.ಎಲ್.ರೈಸ್ ಶಾ.ಸ. ೫೬, ಪು. ೧೮೩

೧೦.	೧೪೪೪	ಇಮ್ಮಡಿ ದೇವರಾಯ	ತೆಪ್ಪದ ಮುದ್ದೆ ನಾಯಕರ ಮಗ ನಾಗೆಯ ನಾಯಕ	ನಾಯಕತನಕ್ಕೆ ಸಲ್ಲುವ ದೇವಲಾಪುರ ಶಾ.ಸ. ೧೬೬, ನಾಗಮಂಗಲ, ಎ.ಕ.ಸಂ.೭ ಪು. ೧೬೪, ಮೈ.ವಿ.ವಿ.
೧೧.		ಮದ್ರಾಜಿರಾಜ ರಾಜಪರಮೇಶ್ವರ ಗಜೆ ಬೇಂಟೆಗಾರ ಮಹಾಮಂಡಲೇಶ್ವರ ವೀರ ಪ್ರತಾಪದೇವರಾಯ	ಸಿಗಿಲನಾಡು ಪ್ರಭು ವಿಘ್ನೇಶ ಒಡೆಯ	ನಾಯಕನತನಕ್ಕೆ ಸಲ್ಲುವ ಮಾರೇನಹಳ್ಳಿ ಗ್ರಾಮ ಎ.ಕ.ಸಂ. ೯, ಬೆಂಗಳೂರು ಶಾ.ಸ. ೩೯, ಪು. ೨೬೯
೧೨.	(?)	ಇಮ್ಮಡಿ ದೇವರಾಯ	ಮೂವರು ರಾಯರ ಗಂಡ ನಾಗಿಯ ನಾಯಕನ ಮಗ ಗೋಪಿ ನಾಯಕ	ನಾಯಕತನಕ್ಕೆ ಸಲ್ಲುವ ಮಾಕಳಿಯ ಕಾಲುವಳಿ ಗೋಪ ಸಮುದ್ರ ಬಿ.ಎಲ್. ರೈಸ್ (ಸಂ) ಶಾ.ಸ. ೧೬೯, ಎ.ಕ.ಸಂ.೯ ಪು. ೩೪೬

ಮಲ್ಲಿಕಾರ್ಜುನರಾಯನ ಕಾಲದ ನಾಯಕತನಗಳು

೧.	೧೪೫೭	ಮಲ್ಲಿಕಾರ್ಜುನರಾಯ	ಬಡಮಾದಯ ನಾಯಕ	ಅಮರಕ್ಕೆ ಸಲ್ಲುವ ದೇವಲಾಪುರ ಎ.ಕ.ಸಂ.೭, ನಾಗಮಂಗಲ ಶಾ.ಸ. ೧೪೧, ಪು. ೧೪೧ ಮೈ.ವಿ.ವಿ.
೨.	೧೪೫೯	ಮಲ್ಲಿಕಾರ್ಜುನರಾಯ	ಚಿಕ್ಕಣನಾಯಕ	ನಾಯಕತನಕ್ಕೆ ಸಲ್ಲುವ ಕುರುನಾಡು, ಬಿ.ಎಲ್. ರೈಸ್ (ಸಂ) ಎ.ಕ.ಸಂ. ೯ ನೆಲಮಂಗಲ, ಶಾ.ಸ. ೩೫ ಪು. ೬೬
೩.	೧೪೬೦ ೧೪೬೧	ಮಲ್ಲಿಕಾರ್ಜುನರಾಯ	ನಾಯಕ ಮತ್ತು ಸೀಮೆಯ ಹೆಸರು ತ್ರುಟಿತಗೊಂಡಿದ್ದು ನಾಯಕತನ ಪದದ ಉಲ್ಲೇಖವಿದೆ	ಎ.ಕ.ಸಂ. ೬ ಮೇಲುಕೋಟೆ ಪು. ೨೪೧, ಶಾ.ಸ. ೧೫೩ ಮೈ.ವಿ.ವಿ.

೪.		ಮಲ್ಲಿಕಾರ್ಜುನರಾಯ	ಜುಂಜನರಾಯ	ನಾಯಕತನಕ್ಕೆ ಸಲ್ಲುವ ನೆಲಮಂಗಲಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೯, ಶಾ.ಸ.೫೧ ದೊಡ್ಡಬಳ್ಳಾಪುರ, ಪು. ೩೯

ಎರಡನೇ ವಿರೂಪಾಕ್ಷನ ಕಾಲದ ನಾಯಕತನಗಳು

೧.	೧೪೬೫	ವಿರೂಪಾಕ್ಷರಾಯ (ವೀರಪ್ರತಾಪ ದೇವರಾಯ)	ಅವಸರ ಪ್ರಧಾನ ಪೆರುಮಾಳೆ ದೇವ ದಂಣನಾಯಕರಮಗ ಚಿಕ್ಕ ಪೆರುಮಾಳ ಒಡೆಯ	ಪಾಲಿಸಿದ ಚನ್ನಪಟ್ಟಣ ರಾಜ್ಯ ಬಿ.ಎಲ್. ರೈಸ್ (ಸಂ) ಎ.ಕ.ಸಂ.೯, ಪು. ೫೩ ಶಾ.ಸ. ೨೨೪, ಚನ್ನಪಟ್ಟಣ
೨.	೧೪೬೭	ದೇವರಾಯ ಮಹಾರಾಯ (೨ನೇ ವಿರೂಪಾಕ್ಷ)	ಅಮರನಾಯಕ ಜಾಲದ ಭೀಮಶೆಟ್ಟಿ	B.R. Gopal (e), Vijayanagara inscription Vol-1, P. 53, KN. 113
೩.	೧೪೭೦	ವಿರುಪಾಕ್ಷರಾಯ (ನರಸಣ್ಣ ನಾಯಕ ನೀಡಿದ ನಾಯಕತನ)	ಶಿಗಿಲನಾಡ ಮಹಾಪ್ರಭು ದೇವಪ್ಪ ನಾಯಕ	ನಾಯಕತನಕ್ಕೆ ಪಾಲಿಸಿದ ಸೀಮೆಯ ಹೆಸರು ತ್ರುಟಿತಗೊಂಡಿದೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೯, ಶಾ.ಸ. ೩೨ ಕಾನಕನಹಳ್ಳಿ, ಪು. ೨೬೬
೪.	೧೪೭೧	ದೇವರಾಯ ಮಹಾರಾಯ (ವಿರೂಪಾಕ್ಷರಾಯ)	ಈಶ್ವರಿ ನಾಯಕ	ನಾಯಕತನಕ್ಕೆ ಸಲ್ಲುವ ಕಸಂಬಳ ಸೀಮೆ ಬಿ.ಎಲ್. ರೈಸ್ ಸಂ) ಎ.ಕ.ಸಂ.೧೦, ಶಾ.ಸ. ೧೯ ಬೌರಿಂಗ್‌ಪೇಟೆ, ಪು. ೧೩೯
೫.	೧೪೭೪	ವಿರೂಪಾಕ್ಷರಾಯ	ಸೋಮಣ್ಣವೊಡೆಯ	ಅಮರದ ನಾಯಕತನಕ್ಕೆ ಪಾಲಿಸಿದ ಸಾಲೆಗ್ರಾಮ ಸ್ಥಳ ಎ.ಕ.ಸಂ. ೮, ಶಾ.ಸ. ೯೬ ಹೊಳೆನರಸೀಪುರ, ಪು. ೬೦ ಮೈ.ವಿ.ವಿ.
೬	೧೪೭೮	ವಿರೂಪಾಕ್ಷರಾಯ	ಬೊಮ್ಮಯನಾಯಕ	ಅಮರದ ನಾಯಕತನ ಚನ್ನರಾಯಪಟ್ಟಣ ಎ.ಕ.ಸಂ. ೧೦, ಶಾ.ಸ.೨, ಪು. ೪೧೧, ಮೈ.ವಿ.ವಿ.

ಸಾಳುವ ವಂಶದ ಕಾಲದ ನಾಯಕತನಗಳು (೧೪೮೫ರಿಂದ ೧೫೦೫)

ಸಾಳುವ ನರಸಿಂಹದೇವ

ಕ್ರಸಂ.	ವರ್ಷ	ರಾಜ	ನಾಯಕ	ನಾಡು/ಸೀಮೆ
೧.	೧೪೬೪	ವೀರನರಸಿಂಹ ದೇವರಾಯ	ಗಂಡ್ರಗೊಳ್ಳಿ ದಳ ವಾಯಿ ಸೊಣ್ಣಪ್ಪ ನಾಯಕನ ಮಗ ಭೈರಪ್ಪ ನಾಯಕ	ನಾಯಕತನಕ್ಕೆ ಪಾಲಿಸಿದ ಗಣ ಹಣಬೆಯ ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ.೯ ದೊಡ್ಡಬಳ್ಳಾಪುರ ಶಾ.ಸ. ೪೧, ಪು. ೧೪೯
೨.	೧೪೬೯	ಸಾಳುವ ನರಸಿಂಗ ದೇವ	ಅವಸರದ ಅಂಣ ಮರಸಯ್ಯನ ಕಾರ್ಯಕರ್ತರಾದ ತಿಮ್ಮಿನಾಯಕರು	ವಳಿದಿಲಂಬರು ಚಾವಿಡಿಯ ಮೊಸಕೊಳ್ತತ್ತೂರುನ ಅಮರ ನಾಯಕತನ ಎಸ್ಐಐ, ವ್ಯಾ. ೯, ಭಾಗ-೨, ಶಾ.ಸ. ೪೬೬, ಪು. ೪೮೦, ಬಾರಕೂರು
೩.	೧೪೭೦	ಸಾಳುವ ನರಸಿಂಹ ನರಸಪ್ಪ ನಾಯಕ	ಶಿಗಿಲ ನಾಡಪ್ರಭು ದೇವಪ್ಪ ನಾಯಕ	ನಾಯಕತನಕ್ಕಾಗಿ ಪಾಲಿಸಿದ ಸೀಮೆಯ ಹೆಸರು ತ್ರುಟಿತ ಗೊಂಡಿದೆ.
೪.	೧೪೭೨	ಸಾಳುವ ೧ನೇ ನರಸಿಂಹ	ಚಿಕ್ಕ ಅಲ್ಲಪ ನಾಯಕ	ನಾಯಕತನಕ್ಕೆ ಪಾಲಿಸಿದ ದೇವಲಾಪುರ ಎ.ಕ.ಸಂ. ೬, ನಾಗಮಂಗಲ, ಶಾ.ಸ. ೧೫೮ ಪು. ೧೫೪, ಮೈ.ವಿ.ವಿ.
೫.	೧೪೭೪	ಸಾಳುವ ನರಸಿಂಹ	ಸೋಮಣ್ಣ ವೊಡೆಯ	ನಾಯಕತನಕ್ಕೆ ಪಾಲಿಸಿದ ಸಾಲೆಗ್ರಾಮ ಸ್ಥಳ ಎ.ಕ.ಸಂ. ೮, ಶಾ.ಸ. ೯೬ ಹೊಳೆನರಸೀಪುರ, ಪು. ೬೦ ಮೈ.ವಿ.ವಿ.
೬	೧೪೭೪	ಸಾಳ್ವ ನರಸಿಂಹ	ಸೋಮಣ್ಣ ವೊಡೆಯ	ನಾಯಕತನಕ್ಕೆ ಪಾಲಿಸಿದ ಸಾಲೆಗ್ರಾಮದ ಸ್ಥಳದ ಎ.ಕ.ಸಂ. ೮, ಶಾ.ಸ. ೯೬ ಹೊಳೆನರಸೀಪುರ, ಪು. ೬೦ ಮೈ.ವಿ.ವಿ.

೭	೧೪೭೮	ಸಾಳುವ ೧ನೇ ನರಸಿಂಹ	ದೊಡ್ಡಯ್ಯ ವೊಡೆಯ	ನಾಯಕತನಕ್ಕೆ ಸಲ್ಲುವ ಸೀಮೆಯ ಹೆಸರು ತ್ರುಟಿತಗೊಂಡಿದೆ. ಬಿ.ಎಲ್. ರೈಸ್ (ಸಂ) ಎ.ಕ.ಸಂ. ೯ ಬೆಂಗಳೂರು, ಶಾ.ಸ.೧೫೮ ಪು. ೩೪೨, ಚನ್ನಪಟ್ಟಣ
೮.	೧೪೮೫	ಸಾಳುವ ನರಸಿಂಗರಾಯ	ಬಯಿರರಾಜದೇವ ಚೋಳ ಮಹಾ ಅರಸ ಮಗ ರಾಮ ರಾಜಪ್ಪ	ನಾಯಕತನಕ್ಕೆ ಸಲ್ಲುವ ರಾಯದುರ್ಗ ಸ್ಥಳದ ಅಗಳಿ ಕೆರೆ ಎಸ್.ಐ.ಐ. ಶಾ.ಸ. ೪೭೨, ವ್ಯಾ-೯ ಪು. ೪೮೭, ಮಡಕಶಿರ
೯.	೧೪೮೭	ಸಾಳುವ ೧ನೇ ನರಸಿಂಹ	ಮುತ್ತುಗದ ಹಾಳ ಮಧುವರಸ ನಾಯಕನ ಮಗ ಲಕ್ಕಂಣನಾಯಕ	ತಗರೆನಾಡ ವೇಂಠೆಯ ನಿಟ್ಟೂರು ಗ್ರಾಮದ ಅಮರ ನಾಯಕತನ ಎ.ಕ.ಸಂ. ೯, ಪು. ೪೭೮ ಮೈ.ವಿ.ವಿ.

ಇಮ್ಮಡಿ ನರಸಿಂಹರಾಯನ ಕಾಲದ ನಾಯಕತನಗಳು

೧.	೧೪೯೨	ಇಮ್ಮಡಿ ನರಸಿಂಹ	ತಿಮ್ಮಯ್ಯದೇವನ ಮಗ ನರಸಯ್ಯ ದೇವ	ನಾಯಕತನಕ್ಕೆ ಸಲ್ಲುವ ಕೊಳಾಲ ಸೀಮೆ ಎ.ಕ.ಸಂ.೧೦, ಶಾ.ಸ. ೩೪ ಪು. ೯, ಮೈ.ವಿ.ವಿ.
೨.	೧೪೯೨	ಇಮ್ಮಡಿ ನರಸಿಂಹ	ಹುಲಕಡಿ ನಾಡ ಪ್ರಭು ಬಯಣ ಗೌಡನ ಮಗ	ತಮಗೆ ಸಲ್ಲುವ ತಿಪ್ಪೂರು ಸ್ಥಳ ಬಿ.ಎಲ್. ರೈಸ್, ಆವೃತ್ತಿ ಎ.ಕ.ಸಂ. ೯, ಶಾ.ಸ., ಪು.
೩.	೧೪೯೨	ಇಮ್ಮಡಿ ನರಸಿಂಹ	ನರಸಯ್ಯದೇವ	ಕೋಳಾಲ ಸೀಮೆ ಇ.ಸಿ. ೧೦, ಶಾ.ಸ. ೩೪ ಪು. ೯, ಬಿ.ಎಲ್.ರೈಸ್

೪.	೧೪೯೫	ಸಾಳುವ ೨ನೇ ನರಸಿಂಹರಾಯ	ಸೇನಾಧಿಪತಿ ನರಸಣ ನಾಯಕರ ಬಂಟ ಶ್ರೀ ಮನ್ಮಹಾಡ ಪ್ರಭು ತಿಂಮಣ ಗೌಡ	ನಾಯಕತನಕ್ಕೆ ಸಲ್ಲುವ ಕೊರದನಾಡು ತುಮಕೂರು ರಾಜಧಾನಿ, ಪು. ೩೧೮ ಬಿ.ಎಲ್.ರೈಸ್ ಎ.ಕ.ಸಂ ೧೨, ಶಾ.ಸ. ೩೩, ಮಧುಗಿರಿ
೫.	೧೪೯೫	ಸಾಳುವ ಇಮ್ಮಡಿ ನರಸಿಂಹ	ಮಲ್ಲಣ್ಣ ನಾಯಕ	ನಾಯಕತನಕ್ಕೆ ಪಾಲಿಸಿದ ಸಾಲಿಗ್ರಾಮದ ಸೀಮೆ ಎ.ಕ.ಸಂ.೧೦, ಶಾ.ಸ. ೪೪, ಕೋಲಾರ, ಪು. ೪೬೮ ಮೈ.ವಿ.ವಿ.
೬	೧೪೯೫	ಇಮ್ಮಡಿ ನರಸಿಂಹ	ಮಹಾಮಂಡ ಲೇಶ್ವರ ಅನಂತಯ್ಯ ದೇವ ಮಹಾರಸ	ನಾಯಕತನಕ್ಕೆ ಪಾಲಿಸಿದ ಕುಕ್ಕಲನಾಡು ಬಿ.ಎಲ್. ರೈಸ್ (ಸಂ) ಎ.ಕ.ಸಂ. ೯, ಶಾ.ಸ. ೧೨೩, ಬೆಂಗಳೂರು, ಪು. ೪೫
೭	೧೪೯೬	ಇಮ್ಮಡಿ ನರಸಿಂಹ	ಅಪ್ಪರಸ	ನಾಯಕತನಕ್ಕೆ ಸಲ್ಲುವ ಹೊಸಕೋಟೆ ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೦, ಶಾ. ೧ ಪು. ೧
೮.	೧೪೯೮	ಇಮ್ಮಡಿ ನರಸಿಂಹ	ವಾನಿಯ ಕಾಚಪ ನಾಯಕನ ಮಗ ಇಮ್ಮಡಿ ಕಾಚಪ್ಪ ನಾಯಕ	ನಾಯಕತನಕ್ಕೆ ಸಲ್ಲುವ ರಾಯದುರ್ಗದ ಥಾವಡಿಗೆ ಸಲ್ಲುವ ಅಗಳಿಯ ಸ್ಥಳ ಎಸ್.ಐ.ಐ. ವ್ಯಾ. ೯ ಭಾಗ-೨, ಶಾ.ಸ. ೪೭೪ ಪು. ೪೮೯
೯.	೧೪೯೯	ಇಮ್ಮಡಿ ನರಸಿಂಹ	ತಿಂಮರಸ ಬಿನ್ ಮುಮ್ಮಡಿ ದೇವ ರಾಯ	ಕೋಡಂಬಳ್ಳಿ ಸೀಮೆಯ ನಾಯಕತನ ಎ.ಕ.ಸಂ. ೯, ಶಾ.ಸ. ೫೨ ಪು. ೩೨೬, ಚನ್ನಪಟ್ಟಣ ರಾಜ್ಯ-೫೨

೫.	೧೫೦೦	ಸಾಳುವ ೨ನೇ ನರಸಿಂಹ	ಪರಸರಾಹುತ	ನಾಯಕತನಕ್ಕೆ ಸಲ್ಲುವ ಮಿಡಿಗೇಸಿ ಸೀಮೆ ಬಿ.ಎಲ್. ರೈಸ್, ಎ.ಕ.ಸಂ. ೧೨, ಶಾ.ಸ. ೧೦೬, ಪು. ೩೪೨

ತುಳುವರ ಕಾಲದ ನಾಯಕತನಗಳು (ಕ್ರಿಶ. ೧೪೯೧ರಿಂದ ೧೫೭೦)

೧.	೧೫೦೩	ನರಸಿಂಹದೇವರಾಯ	ಗೋಪಳದೇವ	ನಾಯಕತನಕ್ಕೆ ಪಾಲಿಸಿದ ಬಾಚಿಹಳ್ಳಿ ಸೀಮೆ ಶಾ.ಸ. ೬೩, ಎ.ಕ.ಸಂ. ೬ ಪು. ೪೫, ಮೈ.ವಿ.ವಿ.

ಕೃಷ್ಣದೇವರಾಯನ ಕಾಲದ ನಾಯಕತನಗಳು

ಕ್ರ.ಸಂ.	ವರ್ಷ	ರಾಜ	ನಾಯಕ	ನಾಡು/ಸೀಮೆ
೧.	೧೫೦೬	ಕೃಷ್ಣದೇವರಾಯ	ಕೃಷ್ಣರಾಯರ ಕುಮಾರ ಸಾಕ್ಷಿ ಚಿಂನಮ ನಾಯಕ	ಪಾಲಿಸಿದ ಮುಲುವಾಗಿಲು ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೯, ಶಾ.ಸ. ೫೭ ಪು. ೨೦೯, ಹೊಸಕೋಟೆ
೨.	೧೫೦೯	ಕೃಷ್ಣದೇವರಾಯ	ಸಿರಿಯಪ್ಪಯ್ಯ	ಮುಳುವಾಗಿಲು ಛಾವಡಿಯ ಡೆಂಕನ ಕೋಟೆ ಎಸ್‌ಐ.ಐ. ವ್ಯಾ-೭ ಶಾ.ಸಂ. ೬, ಪು. ೧೫
೩.	೧೫೧೧	ಕೃಷ್ಣದೇವರಾಯ	ಎಲ್ಲಪ್ಪ ನಾಯಕ	ನಾಯಕತನಕ್ಕೆ ಪಾಲಿಸಿದ ರಾಮನಾಯ್ಕನ ಹಳ್ಳಿ ಸೀಮೆ ಎ.ಕ.ಸಂ. ೧೨, ಬಿ.ಎಲ್. ರೈಸ್ ಆವೃತ್ತಿ ಶಾ.ಸಂ. , ೧೨ ಮಧುಗಿರಿ, ಪು. ೩೨೬
೪.	೧೫೧೨	ಕೃಷ್ಣದೇವರಾಯ	ವೀರಭ್ಯುದಜಕ ನಾಯಕ	ನಿಡುಗಲ್ಲು ಸೀಮೆಯ ನಾಯಕತನ ಬಿ.ಎಲ್. ರೈಸ್ ಆವೃತ್ತಿ, ಎ.ಕ.ಸಂ. ೧೨ ಪುವಗಡ, ಪು. ೮೮೨

೫.	೧೫೧೨	ಕೃಷ್ಣದೇವರಾಯ	ನರನಿನಾಯಕ	ನೆಲವಾಗಿಲು ಸೀಮೆಯ ನಾಯಕತನ ಕೃಷ್ಣದೇವರಾಯನ ಶಾಸನ ಸಂಪುಟ-೧, ಶಾ.ಸಂ. ೨೬, ಕೋಲಾರ
೬	೧೫೧೩	ಕೃಷ್ಣದೇವರಾಯ	ಸಾಳುವ ಗೋವಿಂದರಾಜ	ನಾಯಕತನಕ್ಕೆ ಪಾಲಿಸಿದ ತೆರಕಣಾಂಬಿ ಸೀಮೆ ಎ.ಕ.ಸಂ. ೩, ಪುನರ್ ಮುದ್ರಣ, ಮೈ.ವಿ.ವಿ. ಶಾ.ಸಂ. ೧೩೬ ಪು. ೧೦೦ ಮೈ.ವಿ.ವಿ.
೭	೧೫೧೩	ಕೃಷ್ಣದೇವರಾಯ	ಕೆಂಚ ಸೋಮಣ್ಣ ವೊಡೆಯ	ನಾಯಕತನಕ್ಕೆ ಪಾಲಿಸಿದ ಚನ್ನಪಟ್ಟಣ ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೯, ಶಾ.ಸ. ೧೫೬ ಪು. ೩೪೧
೮.	೧೫೧೫	ಕೃಷ್ಣದೇವರಾಯ	ತ್ರಯಂಬಕರಸ	ನಾಯಕತನಕ್ಕೆ ಪಾಲಿಸಿದ ಮಾಳೇನಹಳ್ಳಿ ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೭, ಶಾ.ಸ. ೨೫ ಪು. ೧೩೭
೯.	೧೫೧೫	ಕೃಷ್ಣದೇವರಾಯ	ವೀರಭದ್ರ ಮಹಾರಾಯ	ನಾಯಕತನಕ್ಕಾಗಿ ನೀಡಿದ ಮಲೆಬೆನ್ನೂರು ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೧, ದಾವಣಗೆರೆ ಶಾ.ಸಂ. ೪೬ ಪು. ೧೪೬
೧೦.	೧೫೧೫	ಕೃಷ್ಣದೇವರಾಯ	ಧನಂಜಯ ರಾಯ ವೊಡೆಯ	ಅಮರದ ಪಡೆಯ ನಾಯಕತನಕ್ಕೆ ಸಲ್ಲುವ ಹಾಸನ ಸ್ಥಳದ ಬಿಟ್ಟುಗೊಂಡನಹಳ್ಳಿ ಎ.ಕ.ಸಂ. ೮, ಹಾಸನ ಶಾ.ಸ. ೨೧೯ ಪು. ೪೩೩

೧೧.	೧೫೧೬	ಕೃಷ್ಣದೇವರಾಯ	ಊಳಿಗದ ಮಾದೆಯ ನಾಯ್ಕ	ನಾಯಕತನಕ್ಕೆ ಸಲ್ಲುವ ಸೋಲೂರು ಸೀಮೆ ಕೃ.ಶಾ.ಸಂ.೧, ಶಾ.ಸಂ.೮೦ ರಾಮನಗರ ಜಿ. ಪು.
೧೨.	೧೫೧೭	ಕೃಷ್ಣದೇವರಾಯ	ಮಹಾನಾಯಾಕಾ ಚಾರ್ಯ ಹರತಿ ವಮುಗಲದ ತಿಪ್ಪಳ ನಾಯಕಾಚಾರ್ಯ	ಇ.ಸಿ.೧೧, ಶಾ.ಸಂ. ೩೬ ಹಿರಿಯೂರು ಪು. ೩೦೦
೧೩.	೧೫೧೭	ಕೃಷ್ಣದೇವರಾಯ	ಪ್ರಧಾನಿ ಮಲ್ಲರಸ	ನಾಯಕನಕ್ಕಾಗಿ ಪಾಲಿಸಿದ ಜಾಜೂರು ಸೀಮೆ ಬಿ.ಎಲ್.ರೈಸ್ (ಸಂ) ಎ.ಕ.ಸಂ. ೧೧, ಶಾ.ಸ. ೭೦, ಹೊಳಲ್‌ಕೆರೆ ಪು. ೩೫೬
೧೪.	೧೫೧೭	ಕೃಷ್ಣದೇವರಾಯ	ಮಹಾನಾಯಾಕಾ ಚಾರ್ಯ ಹರತಿ ಐಮಂಗಲದ ತಿಪ್ಪಳ ನಾಯಕಾಚಾರ್ಯ	ಹರತಿ ಐಮಂಗಲದ ನಾಯಕ, ಬಿ.ಎಲ್.ರೈಸ್ (ಸಂ), ಎ.ಕ.ಸಂ. ೧೧ ಶಾ.ಸ. ೩೬ ಹಿರಿಯೂರು, ಪು. ೩೦೦
೧೫.	೧೫೧೯	ಕೃಷ್ಣದೇವರಾಯ	ಸಾಳುವ ಗೋವಿಂದರಾಜ	ನಾಯಕತನಕ್ಕೆ ಸಲ್ಲುವ ಮೂಗೂರು ಸ್ಥಳ ಎ.ಕ.ಸಂ. ೪, ಶಾ.ಸ. ೨೮೯ ಪು. ೬೫೭, ಪುನರ್‌ಮುದ್ರಣ ಮೈ.ವಿ.ವಿ.
೧೬.	೧೫೨೦	ಕೃಷ್ಣದೇವರಾಯ	ಅಪ್ಪರಸಯ್ಯ	ನಾಯಕತನಕ್ಕೆ ಸಲ್ಲುವ ಸೋಲೂರು ಸೀಮೆ ಕೃ.ಶಾ.ಸಂ.೧, ಶಾ.ಸ. ೧೩೪, ರಾಮನಗರ
೧೭.	೧೫೨೦	ಕೃಷ್ಣದೇವರಾಯ	ಸಾಳುವ ತಿಂಮರಸನ್ ಅಳಿಯ ಅಪ್ಪರಸಯ್ಯ	ನಾಯಕತನಕ್ಕೆ ಪಾಲಿಸಿದ ಸೋಲೂರು ಸೀಮೆಯ ಸೆಟ್ಟಿಹಳ್ಳಿ, ಬಿ.ಎಲ್. ರೈಸ್ (ಸಂ) ಎ.ಕ.ಸಂ. ೯, ಶಾ.ಸಂ. ೬೮ ಪು. ೧೨೬, ಮಾಗಡಿ

೧೮.	೧೫೨೧	ಕೃಷ್ಣದೇವರಾಯ	ಸಾಳುವ ಗೋವಿಂದ ರಾಜು	ನಾಯಕತನಕ್ಕೆ ಪಾಲಿಸಿದ ಕುಡುಗನಾಡು ಎ.ಕ.ಸಂ. ೩, ಶಾ.ಸಂ. ೧೩೪, ಪು. ೯೭ ಮೈ.ವಿ.ವಿ.
೧೯.	೧೫೨೧	ಕೃಷ್ಣದೇವರಾಯ	ಕೃಷ್ಣಪ್ಪ ನಾಯಕ	ನಾಯಕತನಕ್ಕೆ ಪಾಲಿಸಿದ ಕುಕ್ಕಲನಾಡು ಬಿ.ಎಲ್. ರೈಸ್ (ಸಂ) ಎ.ಕ.ಸಂ. ೯, ನೆಲಮಂಗಲ ಶಾ.ಸ. ೨೦, ಪು. ೬೨
೨೦.	೧೫೨೧	ಕೃಷ್ಣದೇವರಾಯ	ಭಂಡಾರದ ತಿಮ್ಮಪ್ಪಯ್ಯ	ನಾಯಕತನಕ್ಕಾಗಿ ಪಾಲಿಸಿದ ಕೊಪ್ಪಳ ಸೀಮೆ ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೨, ಶಾ.ಸಂ.೨೧, ಪು. ೪೩
೨೧.	೧೫೨೨	ಕೃಷ್ಣದೇವರಾಯ	ಹೊಂಸಣ್ಣ ನಾಯಕನ ಮಗ ಕೃಷ್ಣಪ್ಪನಾಯಕ	ನಾಯಕತನಕ್ಕಾಗಿ ಪಾಲಿಸಿದ ನಲ್ಲೂರು ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೦, ಕೋಲಾರ ಶಾ.ಸಂ. ೧೦, ಶಿಡ್ಲಘಟ್ಟ, ಪು. ೧೭೬
೨೨.	೧೫೨೨	ಕೃಷ್ಣದೇವರಾಯ	ಸಾಳುವ ಗೋವಿಂದ ರಾಜ	ನಾಯಕತನಕ್ಕೆ ಪಾಲಿಸಿದ ಉಮ್ಮತ್ತೂರು ರಾಜ್ಯದ ಹೊಸವಾಡ ಸ್ಥಳ ಎ.ಕ.ಸಂ. ೪, ಶಾ.ಸಂ.೫೪ ಕೊಳ್ಳೇಗಾಲ, ಪು. ೪೩೮ ಮೈ.ವಿ.ವಿ.
೨೩.	೧೫೨೨	ಕೃಷ್ಣದೇವರಾಯ	ಪ್ರಧಾನಿ ಬಸವಪ್ಪಯ್ಯ	ನಾಯಕತನಕ್ಕೆ ಪಾಲಿಸಿದ ಕೋಟೆ ಸೀಮೆ, ಎ.ಕ.ಸಂ. ೩ ಹೆಚ್.ಡಿ. ಕೋಟೆ, ಶಾ.ಸಂ. ೧೩೪, ಪು. ೫೧೯-೫೨೦, ಮೈ.ವಿ.ವಿ.

೧೮.	೧೫೨೧	ಕೃಷ್ಣದೇವರಾಯ	ಸಾಳುವ ಗೋವಿಂದ ರಾಜು	ನಾಯಕತನಕ್ಕೆ ಪಾಲಿಸಿದ ಕುಡುಗನಾಡು ಎ.ಕ.ಸಂ. ೩, ಶಾ.ಸಂ. ೧೩೪, ಪು. ೯೭ ಮೈ.ವಿ.ವಿ.
೧೯.	೧೫೨೧	ಕೃಷ್ಣದೇವರಾಯ	ಕೃಷ್ಣಪ್ಪ ನಾಯಕ	ನಾಯಕತನಕ್ಕೆ ಪಾಲಿಸಿದ ಕುಕ್ಕಲನಾಡು ಬಿ.ಎಲ್. ರೈಸ್ (ಸಂ) ಎ.ಕ.ಸಂ. ೯, ನೆಲಮಂಗಲ ಶಾ.ಸ. ೨೦, ಪು. ೬೨
೨೦.	೧೫೨೧	ಕೃಷ್ಣದೇವರಾಯ	ಭಂಡಾರದ ತಿಮ್ಮಪ್ಪಯ್ಯ	ನಾಯಕತನಕ್ಕಾಗಿ ಪಾಲಿಸಿದ ಕೊಪ್ಪಳ ಸೀಮೆ ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೨, ಶಾ.ಸಂ.೨೧, ಪು. ೪೩
೨೧.	೧೫೨೨	ಕೃಷ್ಣದೇವರಾಯ	ಹೊಂಸಣ್ಣ ನಾಯಕನ ಮಗ ಕೃಷ್ಣಪ್ಪನಾಯಕ	ನಾಯಕತನಕ್ಕಾಗಿ ಪಾಲಿಸಿದ ನಲ್ಲೂರು ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೦, ಕೋಲಾರ ಶಾ.ಸಂ. ೧೦, ಶಿಡ್ಲಘಟ್ಟ, ಪು. ೧೭೬
೨೨.	೧೫೨೨	ಕೃಷ್ಣದೇವರಾಯ	ಸಾಳುವ ಗೋವಿಂದ ರಾಜ	ನಾಯಕತನಕ್ಕೆ ಪಾಲಿಸಿದ ಉಮ್ಮತ್ತೂರು ರಾಜ್ಯದ ಹೊಸವಾಡ ಸ್ಥಳ ಎ.ಕ.ಸಂ. ೪, ಶಾ.ಸಂ.೫೪ ಕೊಳ್ಳೇಗಾಲ, ಪು. ೪೩೮ ಮೈ.ವಿ.ವಿ.
೨೩.	೧೫೨೨	ಕೃಷ್ಣದೇವರಾಯ	ಪ್ರಧಾನಿ ಬಸವಪ್ಪಯ್ಯ	ನಾಯಕತನಕ್ಕೆ ಪಾಲಿಸಿದ ಕೋಟೆ ಸೀಮೆ, ಎ.ಕ.ಸಂ. ೩ ಹೆಚ್.ಡಿ. ಕೋಟೆ, ಶಾ.ಸಂ. ೧೩೪, ಪು. ೫೧೯-೫೨೦, ಮೈ.ವಿ.ವಿ.

೨೪.	೧೫೨೨	ಕೃಷ್ಣದೇವರಾಯ	ಮಂಚಪ್ಪ ನಾಯಕರ ಪುತ್ರ ಸಿಂಗಪ ನಾಯಕ	ನಾಯಕತನಕ್ಕೆ ಸಲ್ಲುವ ಗೋಣಿಬೀಡು ಸೀಮೆ ಎ.ಕ.ಸಂ. ೯, ಬೇಲೂರು ಶಾ.ಸ. ೧೧, ಪು. ೮, ಮೈ.ವಿ.ವಿ.
೨೫.	೧೫೨೩	ಕೃಷ್ಣದೇವರಾಯ	ಕಪ್ಪುರಾಜ	ಅಮರಕ್ಕೆ ಪಾಲಿಸಿದ ಚಂದ್ರಗುತ್ತಿ ಗ್ರಾಮ ಬಿ.ಎಲ್.ರೈಸ್ ಆವೃತ್ತಿ ಎ.ಕ.ಸಂ. .೭, ಶಿವಮೊಗ್ಗ ಶಾ.ಸ. ೨೩೪, ಪು. ೩೦೬
೨೬	೧೫೨೩	ಕೃಷ್ಣದೇವರಾಯ ತ್ರಯಂಬಕರಸ ನೀಡಿದ ನಾಯಕರಸ	ಮಲ್ಲಿಸೆಟ್ಟಿಯ ಮಗ ಸೋಮಸೆಟ್ಟಿ	ಪಾಲಿಸಿದ ಕೊಪ್ಪಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೭, ಶಿಕಾರಿಪುರ ಶಾ.ಸ. ೪೩, ಪು. ೧೪೬
೨೭	೧೫೨೩	ಕೃಷ್ಣದೇವರಾಯ	ಕುಮಾರ ನಾಯಕ	ನಾಯಕತನಕ್ಕೆ ಪಾಲಿಸಿದ ಕುಕ್ಕಲನಾಡು ಎ.ಕ.ಸಂ. ೯, ಸಪ್ಲಿಮೆಂಟರಿ ವ್ಯಾ. ಶಾ.ಸಂ. ೧೮೬ ಪು. ೧೩೭
೨೮.	೧೫೨೪	ಕೃಷ್ಣದೇವರಾಯ	ವೀರಣ್ಣ ರಾಹುತ	ನಾಯಕತನಕ್ಕೆ ಪಾಲಿಸಿದ ಟೇಕಲಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೦ ಕೋಲಾರ ಶಾ.ಸ. ೩೫ ಪು. ೧೫೭
೨೯.	೧೫೨೪	ಕೃಷ್ಣದೇವರಾಯ	ನಾರಾಯಣ ಭಟ್ಟ	ನಾಯಕತನಕ್ಕೆ ಪಾಲಿಸಿದ ಉಚ್ಚಂಗಿ ವೇಂಠೆ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಶಾ.ಸಂ.೩, ಹರಪನಹಳ್ಳಿ, ಪು. ೪೧೬
೩೦.	೧೫೨೪	ಕೃಷ್ಣದೇವರಾಯ	ಊಳಿಗದ ಜಕಣ ನಾಯಕರ ಮಗ ಬಸವಪ್ಪ ನಾಯಕ	ನಾಯಕತನಕ್ಕೆ ಪಾಲಿಸಿದ ವಸ್ತಾರೆ ಸೀಮೆ ಎ.ಕ.ಸಂ.೯ ಶಾ.ಸಂ ೧೫೯, ಪು. ೧೧೬-೧೧೭ ಮೈ.ವಿ.ವಿ.

೩೧.	೧೫೨೪	ಕೃಷ್ಣದೇವರಾಯ	ಮುರಾರಿ ರಾವುತನ ಮಗ ವಿಸಣ್ಣರಾವುತ	ನಾಯಕತನಕ್ಕೆ ಪಾಲಿಸಿದ ಉಚ್ಚಂಗಿ ವೇಂಠೆಗೆ ಸಲ್ಲುವ ಕವಿಳಿಚರ್ವಿನ ಸೀಮೆ ಎಸ್.ಐ.ಐ. ವ್ಯಾ್ಞ, ಭಾಗ-೨, ಶಾ.ಸಂ. ೫೧೫, ಪು. ೫೨೯
೩೨.	೧೫೨೪	ಕೃಷ್ಣದೇವರಾಯ	ಕೃಷ್ಣರಾಯನಾಯಕ	ಶ್ರೀರಂಗಪಟ್ಟಣ ಸೀಮೆಯ ನಾಯಕತನ, ಶಾ.ಸ. ೧೩೪ ಎ.ಕ.ಸಂ. ೬, ಪು. ೨೨೭ ಮೈ.ವಿ.ವಿ.
೩೩.	೧೫೨೬	ಕೃಷ್ಣದೇವರಾಯ	ಮಹಾಬಲದೇವರಸ	ನಾಯಕತನಕ್ಕೆ ಪಾಲಿಸಿದ ಮಿಡಜೆ ಗ್ರಾಮ ಗೋಪಾಲ ಬಿ.ಆರ್. ವಿ.ಐ.ಐ. ವ್ಯಾ.೨, ಪು. ೧೧೦
೩೪.	೧೫೨೭	ಕೃಷ್ಣದೇವರಾಯ	ವೀರ ನಂಜಪ್ಪ ವೊಡೆಯ	ನಾಯಕತನಕ್ಕೆ ಸಲ್ಲುವ ಉಮ್ಮತ್ತೂರು ಸೀಮೆ ಶಾ.ಸ. ೨೫೮, ಎ.ಕ.ಸಂ. ೫, ಪು. ೬೪೦ ಮೈ.ವಿ.ವಿ.
೩೫.	೧೫೨೭	ಕೃಷ್ಣದೇವರಾಯ	ಶ್ರೀಮನ್ಮಮಹಾ ನಾಯಕಾರ್ಚಾರಾದ ಯರ್‍ರ ತಿಮ್ಮ ನಾಯಕರ ಕುಮಾರ ಮುತ್ತೋಜಿನಾಗಿ ನಾಯಕ	ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೦ ಬಾಗೇಪಲ್ಲಿ ಶಾ.ಸ. ೨೦೧
೩೬.	೧೫೨೭	ಕೃಷ್ಣದೇವರಾಯ	ಚಿಂನ ಭಂಡಾರದ ತಿಂಮರ್ಸರ ಮಗ ನಾರಾಯಣಪ್ಪ	ಕೊಟ್ಟೂರು ಸೀಮೆಯ ವಳಿತಕ್ಕೆ ಸಲ್ಲುವ ನೊಣಬನರಸಿಕೆಯ ಆಳ್ವಿಕೆ ಎಸ್.ಐ.ಐ. ವ್ಯಾ-೨ ಭಾಗ-೨, ಶಾ.ಸಂ. ೫೨೨ ಪು. ೫೩೮

೩೭.	೧೫೨೮	ಕೃಷ್ಣದೇವರಾಯ	ಅಬ್ಬರಾವು ಅಯ್ಯ	ಕುದುರೆಯ ನಾಯಕತನಕ್ಕೆ ಪಾಲಿಸಿದ ರವುಡಕುಂದಿ ಸೀಮೆ ಕನ್ನಡ ವಿಶ್ವವಿದ್ಯಾಲಯ, ಶಾ.ಸಂ.–೭, ಸಿಂಧನೂರು, ಶಾ.ಸಂ.೩ ಪು. ೩೪೮
೩೮.	೧೫೨೮	ಕೃಷ್ಣದೇವರಾಯ	ಆದಿಯಪ್ಪನಾಯಕ	ನಾಯಕತನಕ್ಕೆ ಪಾಲಿಸಿದ ಮಲೆಬೆನ್ನೂರು ಸೀಮೆ ಬಿ.ಎಲ್.ರೈಸ್ (ಸಂ) ಎ.ಕ.ಸಂ.೧೧, ದಾವಣಗೆರೆ ಪು. ೧೭೫, ಶಾ.ಸಂ.೧೦೬
೩೯.	೧೫೨೮	ಕೃಷ್ಣದೇವರಾಯ	ಭೋಗಯ ದೇವ ಮಹಾ ಅರಸ	ನಾಯಕತನಕ್ಕೆ ಸಲ್ಲುವ ಶ್ರೀರಂಗಪಟ್ಟಣ ಸೀಮೆ ಎ.ಕ.ಸಂ. ೬, ಶಾ.ಸಂ. ೮, ಶ್ರೀರಂಗಪಟ್ಟಣ ಪು. ೩೩೮ ಮೈ.ವಿ.ವಿ.
೪೦.	೧೫೨೯	ಕೃಷ್ಣದೇವರಾಯ	ಮಹಾನಾಯಕಾ ಚಾರ್ಯ ಬಯಲ ಹುಲಿ ಅವರಗೆರೆಯ ಗಿರಿಯಣ್ಣ ನಾಯಕನ ಮಗ ವಿರುಪಣ ನಾಯಕ	ಸೀಮೆಯ ಹೆಸರು ತ್ರುಟಿತಗೊಂಡಿದೆ. ಎ.ಕ.ಸಂ. ೭, ಶಾ.ಸ. ೧೪೩, ನಾಗಮಂಗಲ ಪು. ೧೪೨, ಮೈ.ವಿ.ವಿ.
೪೧.	೧೫೩೦	ಕೃಷ್ಣದೇವರಾಯ	ದಂಡನಾಯಕ ತಿಮ್ಮರಸ	ಮುಖಾಸೆ ಕುದುರೆಗೆ ಪಾಲಿಸಿದ ಯಳಪೆ ಗ್ರಾಮ ಕ.ವಿ.ವಿ. ಶಾ.ಸಂ. ೧ ಬಳ್ಳಾರಿ, ಶಾ.ಸಂ ೬೭, ಪು. ೮೪
೪೨.	೧೫೩೦	ಕೃಷ್ಣದೇವರಾಯ	ಕೃಷ್ಣಪ್ಪ ನಾಯಕ	ಅಮರನಾಯಕತನಕ್ಕೆ ಪಾಲಿಸಿದ ಬೇಲೂರು ಸ್ಥಳಕ್ಕೆ ಸಲ್ಲುವ ಕಿಬ್ಬೆಟ್ಟುನಾಡು ಬಿ.ಎಲ್. ರೈಸ್ (ಸಂ) ಪು. ೫೧೦. ಮೈ.ವಿ.ವಿ.

೪೩.	೧೫೩೧	ಕೃಷ್ಣದೇವರಾಯ	ಗಂಗನಾಯಕರ ಕುಮಾರ ದಳವಾಯಿ ರಂಗನಾಯಕ	ನಾಯಕತನಕ್ಕೆ ಪಾಲಿಸಿದ ಉಮ್ಮತ್ತೂರು ಸೀಮೆ ಚಾಮರಾಜ ನಗರ ಎ.ಕ.ಸಂ. ೪, ಶಾ.ಸ. ೮೯ ಪು. ೫೨ ಮೈ.ವಿ.ವಿ.
೪೪.		ಕೃಷ್ಣದೇವರಾಯ		ನಾಯಕತನಕ್ಕೆ ಪಾಲಿಸಿದ ಶ್ರೀರಂಗಪಟ್ಟಣ ಸೀಮೆಯ ಕುರುವಂಕನಾಡು ಎ.ಕ.ಸಂ. ೧೦, ಪು. ೩೩೩ ಶ್ರೀರಂಗಪಟ್ಟಣ ಶಾ.ಸಂ. ೨ ಮೈ.ವಿ.ವಿ.

ಅಚ್ಯುತರಾಯನ ಕಾಲದ ನಾಯಕತನಗಳು

ಕ್ರ.ಸಂ.	ವರ್ಷ	ರಾಜ	ನಾಯಕ	ನಾಡು/ಸೀಮೆ
೧.	೧೫೨೯	ಅಚ್ಯುತರಾಯ	ಸಾಳುವ ದಣ್ಣಾಯಕ	ನಡೆದು ಬಂದ ಕಮಲಾಪುರ ಸ್ಥಳದ ಕೊಂಡಮರಸಮನವರ ಪಾಳೆಯ ಎಸ್.ಐ.ಐ. ಬಳ್ಳಾರಿ ವ್ಯಾ.೯, ಪು. ೫೪೮, ಶಾ.ಸಂ. ೫೩೩
೨.	೧೫೩೦	ಅಚ್ಯುತರಾಯ	ನಾರಾಯಣದೇವ	ಅಮರನಾಯಕತನಕ್ಕೆ ಪಾಲಿಸಿದ ಉಚ್ಚಂಗಿ ವೇಂಠೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೧, ಶಾ.ಸ. ೧೮, ದಾವಣಗೆರೆ ಪು. ೭೩
೩.	೧೫೩೦	ಅಚ್ಯುತರಾಯ	ಸೋಲೂರು ಬಸವಪ್ಪ ನಾಯಕ	ವನಸಮುದ್ರ ಸ್ಥಳ ಬಿ.ಎಲ್. ರೈಸ್ (ಸಂ) ಎ.ಕ.ಸಂ .೯, ಶಾ.ಸಂ. ೨೮ ಬೆಂಗಳೂರು, ಪು. ೧೫

೪.	೧೫೩೦	ಅಚ್ಯುತರಾಯ	ಸಿಂಗಣ್ಣನಾಯಕ	ಪಾಲಿಸಿದ ಬೂದಿಹಾಳ ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೨, ಶಾ.ಸಂ. ೨೨, ಕಡೂರು, ಪು. ೧೪೨
೫.	೧೫೩೦	ಅಚ್ಯುತರಾಯ	ಸಾಳುವ ಕೆಂಚಂಣ ನಾಯಕರ ಮಗ ವೀರಪ್ಪ ನಾಯಕ ದಾನಪ್ಪ ನಾಯಕ	ಸಲ್ಲುವ ನಲ್ಲೂರು ರಾಜ್ಯ ಇ.ಸಿ.೯, ಬಿ.ಎಲ್.ರೈಸ್ (ಸಂ), ಶಾ.ಸಂ. ೨೮ ಪು. ೨೦೨
೬	೧೫೩೦	ಅಚ್ಯುತರಾಯ	ಸೋಲೂರು ಬಸವಪ್ಪ ವೊಡೆಯರ ಮಗ ಕೃಷ್ಣಪ್ಪ ನಾಯಕನ ಕಾರ್ಯಕರ್ತ ಹರಿಹರದ ಲಿಂಗಣ್ಣ ವೊಡೆಯ	ಸಾಲೆಗ್ರಾಮ ಸೀಮೆಯ ಆಳ್ವಿಕೆ, ಎ.ಕ.ಸಂ. ೧೦ ಶಾ.ಸ. ೪೫ ಚನ್ನರಾಯಪಟ್ಟಣ ಪು. ೪೭೦
೭	೧೫೩೧	ಅಚ್ಯುತರಾಯ	ಯಲ್ಲಪ್ಪ ನಾಯಕನ ಮಗ ಚನ್ನಪಂಣ್ಣ	ಅಮರದ ನಾಯಕತನಕ್ಕೆ ಪಾಲಿಸಿದ ಹಾಸನ ಸೀಮೆ ಎ.ಕ.ಸಂ.೮, ಶಾ.ಸಂ. ೨ ಹಾಸನ, ಪು. ೨೧೫,
೮.	೧೫೩೧	ಅಚ್ಯುತರಾಯ	ಗಂಡ್ರಗೊಳ್ಳಿ ದಳವಾಯಿ ಸೊಂಣಪ್ಪ ನಾಯಕನ ಮಗ ನಾಗಪ್ಪ ನಾಯಕ	ಪಾಲಿಸಿದ ಹುಲುಕಡಿ ನಾಡು, ಬಿ.ಎಲ್. ರೈಸ್ ಎ.ಕ.ಸಂ. ೯, ದೊಡ್ಡ ಬಳ್ಳಾಪುರ, ಶಾ.ಸ.
೯.	೧೫೩೧	ಅಚ್ಯುತರಾಯ	ಅವಸರದ ದೀಕ್ಷಿತ	ಅಮರನಾಯಕತನಕ್ಕೆ ಪಾಲಿಸಿದ ಹರಿಹರ ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೧ ಶಾ.ಸ. ೩೧ ದಾವಣಗೆರೆ ಪು. ೯೫

೧೦.	೧೫೩೧	ಅಚ್ಯುತರಾಯ	ಹಿರಿಯ ಸಿಂಗಣ ನಾಯಕನ ಮಗ ಚಿಕ್ಕ ಸಿಂಗಣ ನಾಯಕ	ಹದಿನಾಡು ಸ್ಥಳದ ನಾಯಕತನ ಎ.ಕ.ಸಂ. ೪, ಮೈ.ವಿ.ವಿ. ಚನ್ನರಾಯಪಟ್ಟಣ ಶಾ.ಸ. ೧೬೯, ಪು. ೩೭೧
೧೧.	೧೫೩೧	ಅಚ್ಯುತರಾಯ	ಮಲ್ಲಪ್ಪ ನಾಯಕ	ಸೀಮೆಯ ಹೆಸರು ತ್ರುಟಿತಗೊಂಡಿದೆ ಶಾ.ಸ. ೩೮೦ ಎ.ಕ.ಸಂ. ೪, ಪು. ೨೫೨, ಮೈ.ವಿ.ವಿ.
೧೨.	೧೫೩೧	ಅಚ್ಯುತರಾಯ	ಉತ್ತರಾಯ ಮಹಾಪಾತ್ರೆ	ಪಾಲಿಸಿದ ನಲ್ಲೂರು ಸೀಮೆ
೧೩.	೧೫೩೨	ಅಚ್ಯುತರಾಯ	ಕೆಂಪದೇವರಸ	ನಾಯಕತನಕ್ಕಾಗಿ ಪಾಲಿಸಿದ ಯಲಹಂಕ ರಾಜ್ಯ B.R. Gopal (e), Vijayananagara inscription, Vol-1, P.19 ಶಾ.ಸ. ೪೩
೧೪.	೧೫೩೨	ಅಚ್ಯುತರಾಯ	ಕೆರೆಯ ತಿಂಮ್ಮರಸ	ಅಮರನಾಯಕತನಕ್ಕೆ ಪಾಲಿಸಿದ ಶಾಂತಿ ಗ್ರಾಮ, ಎ.ಕ.ಸಂ.೮ ಶಾ.ಸಂ. ೧೬೬, ಹಾಸನ, ಪು. ೪೦೦,
೧೫.	೧೫೩೨	ಅಚ್ಯುತರಾಯ	ಗುಮ್ಮನಾಯಕ ಚಿಂನಮ್ಮ ನಾಯಕನ ಮಗ ನಾರಸಿಂಹ ನಾಯಕ (ಅಮರನಾಯಕ)	ಬುರುಡೆಕುಂಟೆ ಸೀಮೆಯ ಆಳ್ವಿಕೆ, ಎ.ಕ.ಸಂ. ೧೦ ಕೋಲಾರ, ಶಾ.ಸ. ೧೦೪ ಶಿಡ್ಲಘಟ್ಟ, ಪು. ೨೦೪
೧೬.	೧೫೩೩	ಅಚ್ಯುತರಾಯ	ಆನೆಗೊಂದಿ ತಿಮ್ಮರಸಯ್ಯ	ಸಲುವ ಮಾಗಣಿ ಇ.ಸಿ.೨, ಗಂಗಾವತಿ ಶಾ.ಸಂ. ೫೪, ಪು. ೩೫೪ ಕನ್ನಡ ವಿ.ವಿ.

೧೭.	೧೫೩೩	ಅಚ್ಯುತರಾಯ	ಅಲ್ಲಪ್ಪ ನಾಯಕ	ಅಮರ ಮಹಲೆಯಾಗಿ ಪಾಲಿಸಿದ ಚಂದ್ರಗುತ್ತಿ ದುರ್ಗ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೮, ಶಾ.ಸ. ೩೭೯ ಸೊರಬ, ಪು. ೧೭೮
೧೮.	೧೫೩೩	ಅಚ್ಯುತರಾಯ	ಮಲ್ಲಪ್ಪ	ನಾಯಕತನಕ್ಕಾಗಿ ಪಾಲಿಸಿದ ಸೊಂಟೆಕೊಪ್ಪ ಸ್ಥಳ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೯, ಶಾ.ಸಂ. ೧೦ ನೆಲಮಂಗಲ, ಪು. ೫೮
೧೯.	೧೫೩೪	ಅಚ್ಯುತರಾಯ	ಗುಮ್ಮನಾಯಕ ಸಂಸ್ಥಾನದ ಕೃಷ್ಣಪ್ಪ ನಾಯಕ (ಅಮರನಾಯಕ)	ಕೋಳಾಲಪುರ ಸೀಮೆ ಮಿಂಡಗಲ್ಲು ಗ್ರಾಮದ ಆಳ್ವಿಕೆ ಬಿ.ಎಲ್. ರೈಸ್ ಆವೃತ್ತಿ ಎ.ಕ.ಸಂ.೧೦, ಶಾ.ಸಂ ೨೮ ಪು. ೩೦೬
೨೦.	೧೫೩೪	ಅಚ್ಯುತರಾಯ	ಮಾದರಸಯ್ಯ	ಅಮರದ ಉಂಬಳಿಗೆ ಪಾಲಿಸಿದ ಹೊರಕೇರಿ ಮಲ್ಲಾಪುರ ಇ.ಸಿ.೯, ಎಸ್.ಎ.ಐ. ಚನ್ನಪಟ್ಟಣ, ಶಾ.ಸಂ. ೧೫೨
೨೧.	೧೫೩೫	ಅಚ್ಯುತರಾಯ	ಭಂಡಾರದ ತಿಂಮ್ಮಪ್ಪಯ್ಯ	ನಾಯಕತನಕ್ಕೆ ಸಲ್ಲುವ ಕೋಡಂಬಳ್ಳಿಯ ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ .೯, ಶಾ.ಸಂ. ೫೩ ಪು. ೩೧೬
೨೨.	೧೫೩೫	ಅಚ್ಯುತರಾಯ	ಬಯಕಾರ ರಾಮಪ್ಪ	ಮಾಗಣಿಗೆ ಸಲ್ಲುವ ಬೂದಿಹಾಳು ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೧ ಶಾ.ಸ. ೧೨೫, ಪು. ೩೮೭

೨೩.	೧೫೩೫	ಅಚ್ಯುತರಾಯ	ರಾಮಪ್ಪಯ್ಯ	ಹದಿನಾಡು ಸೀಮೆಯ ನಾಯಕತನ ಎ.ಕ.ಸಂ. ೪, ಪು. ೪೩೭ ಶಾ.ಸಂ. ೫೮, ಕೊಳ್ಳೇಗಾಲ, ಮೈ.ವಿ.ವಿ.
೨೪.	೧೫೩೫	ಅಚ್ಯುತರಾಯ	ಕೊಂಡಮರಸ	ನಾಯಕತನಕ್ಕೆ ಸಲ್ಲುವ ಚೆಲ್ಲೂರು ಭಾವಡಿಗೆ ಸಲ್ಲುವ ಬುರುಡೆಕುಂಟೆ ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೦, ಶಾ.ಸ. ೨೫, ಬಾಗೇಪಲ್ಲಿ ಪು. ೨೭೪
೨೫.	೧೫೩೫	ಅಚ್ಯುತರಾಯ	ತಿಮ್ಮರಸನ ಮಗ ರಾಮಪ್ಪ	ನಾಯಕತನಕ್ಕೆ ಪಾಲಿಸಿದ ಹೊನ್ನಾವಳಿ ಸೀಮೆ ಎ.ಕ.ಸಂ. ೧೦ ಶಾ.ಸ. ೨೦೬ ಪು. ೨೫೭, ಮೈ.ವಿ.ವಿ.
೨೬.	೧೫೩೫	ಅಚ್ಯುತರಾಯ	ತಿಮ್ಮರಸಯ್ಯ	ನಾಯಕತನಕ್ಕೆ ಸಲ್ಲುವ ಬುರುಡೆ ರಾಜ್ಯದ ಪಲ್ಲೆಕುಂಟೆ ಗ್ರಾಮ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೦, ಶಾ.ಸಂ. ೭೨ ಬಾಗೇಪಲ್ಲಿ, ಪು. ೨೯೪
೨೭.	೧೫೩೫	ಅಚ್ಯುತರಾಯ	ರಾಮಭಟ್ಟಯ್ಯ	ಪಾಲಿಸಿದ ನಾಗಮಂಗಲ ಸೀಮೆ ಎ.ಕ.ಸಂ. ೬, ಪು. ೨೧೭ ಪಾಂಡವಪುರ, ಮೈ.ವಿ.ವಿ.
೨೮.	೧೫೩೫	ಅಚ್ಯುತರಾಯ	ಸಿರಿಯಪ್ಪ ನಾಯಕ	ಪಾಲಿಸಿದ ಹೂವಿನಹಡಗಲಿ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೧, ಶಾ.ಸಂ. ೯೦, ಪು. ೪೨೩

೨೯.	೧೫೩೬	ಅಚ್ಯುತರಾಯ	ಸೋಮಶಿಲಾದೆ ವುರಾವುತ್ತರಾಯ ಮಹಾಪಾತ್ರೆ ಅರಸ	ತೆರಕಣಾಂಬೆ ಸೀಮೆಯ ನಾಯಕತನ, ಎ.ಕ.ಸಂ. ೪ ಶಾ.ಸ. ೩೦೨, ಪು. ೧೯೬ ಮೈ.ವಿ.ವಿ.
೩೦.	೧೫೩೬	ಅಚ್ಯುತರಾಯ	ಮಹಾನಾಯಕಾ ಚಾರ್ಯ ಲಕ್ಕಿ ನಾಯಕ ಕೃಷ್ಣಪ್ಪ ನಾಯಕ	ಶಾಸನ ತುಂಬಾ ತ್ರುಟಿತ ಗೊಂಡಿದ್ದು ಮಾಹಿತಿಯು ಅಸ್ಪಷ್ಟವಾಗಿದೆ. ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೦, ಶಾ.ಸಂ. ೪೧ ಬಾಗೇಪಲ್ಲಿ, ಪು. ೨೮೧
೩೧.	೧೫೩೬	ಅಚ್ಯುತರಾಯ	ಪೆನುಗೊಂಡೆಯ ವಿರುಪಣ್ಣ	ಸಲ್ಲುವ ವಿರುಪನಾಯಕ ಕುಳ ಎ.ಕ.ಸಂ. ೩, ಕನ್ನಡ ವಿ.ವಿ. ಶಾ.ಸಂ. ೨, ಪು. ೨,
೩೨.	೧೫೩೭	ಅಚ್ಯುತರಾಯ	ಗುಜಲ ಇಮ್ಮಡಿ ಹನುಮಂತ ನಾಯಕ	ಅಮರ ನಾಯಕತನಕ್ಕೆ ಪಾಲಿಸಿದ ಯಲಬುರ್ಗಿ ಸೀಮೆ ಕ.ವಿ.ವಿ. ಶಾ.ಸಂಪುಟ-೨, ಶಾ.ಸಂ. ೧೪, ಪು. ೧೭೦
೩೩.	೧೫೩೭	ಅಚ್ಯುತರಾಯ	ವೆಂಕಟಾದ್ರಿ ನಾಯಕ	ಪುರದ ಮಾಗಣಿಗೆ ಸಲ್ಲುವ ದೇವಲಾಪುರ ಎ.ಕ.ಸಂ. ೭, ಶಾ.ಸಂ. ೧೫೭, ನಾಗಮಂಗಲ, ಪು. ೧೫೪ ಮೈ.ವಿ.ವಿ.
೩೪.	೧೫೩೭	ಅಚ್ಯುತರಾಯ	ಸಾಳ್ವ ಗಜಸಿಂಹ	ನಾಯಕತನಕ್ಕೆ ನೀಡಿದ ತೆರಕಣಾಂಬಿ ಸೀಮೆ ಎ.ಕ.ಸಂ. ೩, ಶಾ.ಸ. ೨೧೩, ಪು. ೧೫೪ ಮೈ.ವಿ.ವಿ.

೩೫.	೧೫೩೭	ಅಚ್ಯುತರಾಯ	ಗುಜಲ ಇಮ್ಮಡಿ ಮೇದನಿರಾಯ	ಅಮರನಾಯಕತನಕ್ಕೆ ಪಾಲಿಸಿದ ಮೊಸಗೆ ಸೀಮೆ ಕನ್ನಡ ವಿಶ್ವವಿದ್ಯಾಲಯ ಶಾ.ಸಂ. ೭, ಶಾ.ಸಂ. ೩೭, ಪು. ೧೭೦
೩೬.	೧೫೩೭	ಅಚ್ಯುತರಾಯ	ಹಡಪದ ಪೊತ್ತಿನಾಯಕ ಮಗ ವಿಠಲ ನಾಯಕ ಅಯ್ಯ	ನಾಯಕತನಕ್ಕೆ ಪಾಲಿಸಿದ ಬೆಮ್ಮತ್ತರ ಕಲ್ಲು ಸೀಮೆ ಬಿ.ಎಲ್. ರೈಸ್ (ಸಂ) ಶಾ.ಸ. ೪೫,ಎ.ಕ.ಸಂ. ೧೧ ಚಿತ್ರದುರ್ಗ, ಪು. ೨೯
೩೭.	೧೫೩೮	ಅಚ್ಯುತರಾಯ	ಯಲ್ಲಪ್ಪಯ್ಯ	ಹದಿನಾಡೊಳಗಿನ ಉಡುವಂಕ ನಾಡಿನ ನಾಯಕತನ ಎ.ಕ.ಸಂ ೪, ಚಾಮರಾಜನಗರ ಶಾ.ಸಂ. ೨೬೯, ಪು. ೧೬೫
೩೮.	೧೫೩೮	ಅಚ್ಯುತರಾಯ	ರಾಮಭಟ್ಟಯ್ಯ	ನಾಯಕತನಕ್ಕೆ ಪಾಲಿಸಿದ ಬೇಲೂರು ಛಾವಡಿ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೦, ಪು. ೧೭೯
೩೯.	೧೫೩೯	ಅಚ್ಯುತರಾಯ	ಕೊಂಡಪ್ಪಯ್ಯ	ನಾಯಕತನಕ್ಕೆ ಸಲ್ಲುವ ಗುಯ್ಯಲೂರು ಸೀಮೆ ಎ.ಕ.ಸಂ. ೧೦, ಬಿಎಲ್ ರೈಸ್ (ಸಂ) ಬಾಗೇಪಲ್ಲಿ, ಶಾ.ಸಂ. ೩೭ ಪು. ೨೭೯

೪೦.	೧೫೩೯	ಅಚ್ಯುತರಾಯ	ರಘುಪತಿ ರಾಜವೊಡೆಯ	ಅಮರ ಮಾಗಣಿಗೆ ಪಾಲಿಸಿದ ವಸುಧಾರೆ ಸೀಮೆ ಶಾ.ಸ. ೧೮೪, ಎ.ಕ.ಸಂ. ೧೧, ಚಿಕ್ಕಮಗಳೂರು, ಪು. ೧೧೭, ಮೈ.ವಿ.ವಿ.
೪೧.	೧೫೩೯	ಅಚ್ಯುತರಾಯ	ತಿರುಮಲರಾಜ ವೊಡೆಯ	ನಾಯಕತನಕ್ಕೆ ಪಾಲಿಸಿದ ವಸುಧಾರೆ ಸೀಮೆ ಶಾ.ಸಂ. ೧೮೪, ಪು. ೧೧೭, ಚಿಕ್ಕ ಮಗಳೂರು ಎ.ಕ.ಸಂ. ೧೧, ಮೈ.ವಿ.ವಿ.
೪೨.	೧೫೪೧	ಅಚ್ಯುತರಾಯ	ಕೆಂಪಣ್ಣನಾಯಕ ನಂದಪ್ಪ ನಾಯಕ	ಅಮರ ಮಾಗಣಿಯಾಗಿ ಪಾಲಿಸಿದ ಕೋಳಾಲ ಸೀಮೆ ಬಿ.ಎಲ್.ರೈಸ್, ಎ.ಕ.ಸಂ. ೧೨, ಶಾ.ಸಂ. ೫೯, ಪು. ೫೨
೪೩.	೧೫೪೧	ಸದಾಶಿವರಾಯ	ಶ್ರೀಮನ್ ಮಹಾ ಮಂಡಲೇಶ್ವರ ಅಹೋಬಳ ನಾಯಕಾಚಾರ್ಯ	ನಾಯಕತನಕ್ಕಾಗಿ ಪಾಲಿಸಿದ ಗೂಳೂರು ಸೀಮೆ ಎ.ಕ.ಸಂ. ೯, ನೆಲಮಂಗಲ ಶಾ.ಸ. ೭, ಪು. ೮೬
೪೪.	೧೫೪೨	ಅಚ್ಯುತರಾಯ	ಮಟ್ಟಿ ಅವುಬಳರಾಜ	ನಾಯಕತನಕ್ಕೆ ಪಾಲಿಸಿದ ಯಕ್ಕಟಿ ಸೀಮೆ ಎ.ಕ.ಸಂ. ೧೨, ಪು. ೨೨ ಶಾ.ಸಂ. ೨೨, ಕಡೂರು ಮೈ.ವಿ.ವಿ.
೪೫.	೧೫೪೫	ಅಚ್ಯುತರಾಯ	ದಳವಾಯಿ ಕೃಷ್ಣಪ್ಪ ನಾಯಕ	ನಾಯಕತನಕ್ಕೆ ಪಾಲಿಸಿದ ತಗಡೂರ ಸ್ಥಳ ಎ.ಕ.ಸಂ. ೩, ಶಾ.ಸಂ. ೫೩ ಪು. ೪೪, ಮೈ.ವಿ.ವಿ.

೪೬		ಅಚ್ಯುತರಾಯ		ಯಳಪೆ ಗ್ರಾಮದ ನಾಯಕತನ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೧ ಶಾ.ಸ. ೬೭, ಪು. ೮೭
೪೭	೧೫೫೩	ಅಚ್ಯುತರಾಯ	ರಘುಪತಿರಾಜ ಮಹಾ ಅರಸ	ನಾಯಕತನಕ್ಕೆ ಪಾಲಿಸಿದ ಹಾಸನ ಸೀಮೆ ಮೈ.ವಿ.ವಿ. ಎ.ಕ.ಸಂ. ೯, ಪು. ೪೪೦–೪೧, ಶಾ.ಸಂ. ३೮, ಬೇಲೂರು
೪೮.	೧೫೬೪	ಅಚ್ಯುತರಾಯ	ರಾಮಭಟ್ಟಯ್ಯ	ಅಮರ ಮಾಗಣಿಗೆ ಪಾಲಿಸಿದ ಶ್ರೀರಂಗಪಟ್ಟಣ ಸೀಮೆ ಎ.ಕ.ಸಂ. ೬, ಶಾ.ಸಂ. ೫ ಪು. ३३೫
೧.	೧೫೬೪	ಅಚ್ಯುತರಾಯ (ರಾಮಭಟ್ಟಯ್ಯ ನವರು ನೀಡಿದ ಅಮರ ಮಾಗಣಿ)	ಪೆದ್ದಿರಾಜು	ಅಮರ ಮಾಗಣಿಯಾಗಿ ಪಾಲಿಸಿದ ಶ್ರೀರಂಗಪಟ್ಟಣ ಸೀಮೆ ಶಾ.ಸ. ೫, ಎ.ಕ.ಸಂ. ೬ ಪು. ३३೫, ३३೬, ಮೈ.ವಿ.ವಿ.

ಸದಾಶಿವರಾಯನ ಕಾಲದ ನಾಯಕತನಗಳು

ಕ್ರ.ಸಂ.	ವರ್ಷ	ರಾಜ	ನಾಯಕ	ನಾಡು/ಸೀಮೆ
೧.	೧೫೪೪	ಸದಾಶಿವರಾಯ	ಭಂಡಿಯ ಬಸವಣ್ಣ ನಾಯಕರ ಮಗ ಚಲುವಣ್ಣ ನಾಯಕ	ಮುಣಿಯ ಸೀಮೆ ನಾಯಕತನ ಎ.ಕ.ಸಂ. ೧೦, ಬಿ.ಎಲ್. ರೈಸ್ ನೆಲಮಂಗಲ, ಶಾ.ಸ. ೮೧ ಪು. ೮೯
೨.	೧೫೪೪	ಸದಾಶಿವರಾಯ ರಾಮರಾಯ	ಮಹಾಮಂಡಲೇಶ್ವರ ವಿಠಲೈಯ್ಯ ದೇವ ಮಹಾರಾಜ	ಕಂದವರಂ ಸೀಮೆಯ ನಾಯಕತನ ಎ.ಕ.ಸಂ.೧೦, ಸಪ್ಲಿಮೆಂಟರಿ ಇನ್ಸ್‌ಸ್ಕ್ರಿಪ್ಷನ್ಸ್, ಪು. ೮೩, ಶಾ.ಸ. ೧೨೫ ಚಿಕ್ಕಬಳ್ಳಾಪುರ
೩.	೧೫೪೪	ಸದಾಶಿವರಾಯ	ಹಡಪದ ಎರ್ರ ಕೃಷ್ಣಪ್ಪ ನಾಯಕ	ಪಾಲಿಸಿದ ಬಾದಾಮಿ ಸೀಮೆ ಎ.ಕ.ಸಂ. ೯, ಕ.ವಿ.ವಿ. ಶಾ.ಸ. ೩೮೮, ಪು. ೩೩೯
೪.	೧೫೪೪	ಸದಾಶಿವರಾಯ	ನಂದ್ಯಾಲದ ನಾರಯ್ಯ ದೇವ	ಹದಿನಾಡು ಸೀಮೆಯ ನಾಯಕತನ ಎಸ್.ಐ.ಐ. ವ್ಯಾಲ್ಯೂಂ-೯ ಪಾರ್ಟ್-೨, ಶಾ.ಸ. ೬೧೦ ಪು. ೬೧೮
೫.	೧೫೪೫	ಸದಾಶಿವರಾಯ	ನಾರಾಯದೇವ	ಶ್ರೀರಂಗಪಟ್ಟಣ ಸೀಮೆಯ ನಾಯಕತನ ಎ.ಕ.ಸಂ.೬, ಮೇಲುಕೋಟೆ ಶಾ.ಸ. ೧೨೯, ಪು. ೨೨೧
೬	೧೫೪೫	ಸದಾಶಿವರಾಯ	ಮಹಾಮಂಡಲೇಶ್ವರ ಅವುಬಳ ದೇವ ಮಹಾ ಅರಸು	ಉಮ್ಮತ್ತೂರು ಸೀಮೆಯ ನಾಯಕತನ, ಎ.ಕ.ಸಂ. ೪ ಚಾಮರಾಜನಗರ ಶಾ.ಸ. ೯೫, ಪು. ೫೪ ಮೈ.ವಿ.ವಿ.

೭	೧೫೪೫	ಸದಾಶಿವರಾಯ	ಮಹಾನಾಯಕಾ ಚಾರ್ಯ ರಾಜಯ ದೇವ ತಿಂಮ ಮಹಾರಾಜ	ಎಸ್.ಐ.ಐ. ವ್ಯಾ-೯, ಭಾಗ-೨, ಶಾ.ಸ. ೬೧೭ ಪು. ೬೨೨
೮.	೧೫೪೭	ಸದಾಶಿವರಾಯ	ಕೃಷ್ಣಪ್ಪ ನಾಯಕ	ಅಮರ ಮಾಗಣೆಗೆ ಪಾಲಿಸಿದ ತಾವರಗೆರೆ ಸೀಮೆ ಕನ್ನಡ ವಿಶ್ವವಿದ್ಯಾಲಯ ಶಾ.ಸಂ. ೨, ಕುಷ್ಟಗಿ ಪು. ೨೯೪
೯.	೧೫೪೭	ಸದಾಶಿವರಾಯ	ರಂಗರಾಜ	ನಾಯಕತನಕ್ಕೆ ಪಾಲಿಸಿದ ಮುಳುವಾಗಿಲು ರಾಜ್ಯ ಸಪ್ಲಿಮೆಂಟರಿ ಇನ್ಸ್‌ಸ್ಕ್ರಿಪ್ಷನ್ಸ್ ಎ.ಕ.ಸಂ. ೧೦, ಮುಳಬಾಗಿಲು ಶಾ.ಸ. ೨೮೩, ಪು. ೨೨
೧೦.	೧೫೪೭	ಸದಾಶಿವರಾಯ	ಮನ್ಮ ಮಹಾಮಂ ಡಲೇಶ್ವರ ನಂದ್ಯಾಲದ ವರದ ರಾಜನ ಮಗ ತಿಂಮರಾಜ	ನಾಯಕತನಕ್ಕೆ ಸಲ್ಲುವ ಮುಳುವಾಗಿಲು ರಾಜ್ಯ ಎ.ಕ.ಸಂ. ೧೭ ಸಪ್ಲಿಮೆಂಟರಿ ಇನ್ಸ್‌ಸ್ಕ್ರಿಪ್ಷನ್, ಶಾ.ಸ. ೨೮೩, ಪು. ೨೨
೧೧.	೧೫೪೭	ಸದಾಶಿವರಾಯ	ಗುಂಮದಂಣ ನಾಯಕ	ಅಮರನಾಯಕ ತನಕ್ಕೆ ಪಾಲಿಸಿದ ಸೀಮೆಯ ಹೆಸರು ಸವೆದು ಹೋಗಿದೆ. ಎ.ಕ.ಸಂ. ೧೨, ತರೀಕೆರೆ ಪು. ೩೪೦, ಮೈ.ವಿ.ವಿ.
೧೨.	೧೫೪೭	ಸದಾಶಿವರಾಯ	ಹಡಪದ ಬಯಪ ನಾಯಕರ ಮಗ ಕೃಷ್ಣಪ್ಪ ನಾಯಕ	ಅಮರ ಮಾಗಣೆಗೆ ಸಲ್ಲುವ ಮೊರಬದ ಸೀಮೆ ಬಿ.ಆರ್. ಗೋಪಾಲ್ (ಸಂ), ವಿಜಯನಗರ ಇನ್ಸ್‌ಸ್ಕ್ರಿಪ್ಷನ್, ವ್ಯಾ. ೧, ಪು. ೧೯೩, ಕೆ.ಎನ್. ೪೦೧

೧೩.	೧೫೪೭	ಸದಾಶಿವರಾಯ	ಕೃಷ್ಣಪ್ಪ ನಾಯಕ	ಕೊಟ್ಟೂರು ಸೀಮೆಯ ಅಮರ ನಾಯಕತನ ಶಾ.ಸ. ೬೪, ಹೂವಿನ ಹಡಗಲಿ, ಕ.ವಿ.ಹಂ. ಶಾ.ಸಂ.-೧, ಪು. ೩೮೪
೧೪.	೧೫೪೭	ಸದಾಶಿವರಾಯ	ಹುಲಿಗೆರೆಯ ನಾಡ ಅಗ್ರಹಾರ ದೇವಸ್ಥಾನದ ಪುರ ವರ್ಗವು ಅಮರ ಗ್ರಾಮ ಭಂಡಾರ ಗ್ರಾಮಗಳ ಮದುವೆ ಸುಂಕವನ್ನು ಮಾನ್ಯ ಮಾಡಿಸಲಾಯಿತು.	ಶಾ.ಸ. ೨೩೮ ಎಸ್.ಐ.ಐ. ವ್ಯಾ-೨೦ ಪು. ೨೮೯
೧೫.	೧೫೪೭	ಸದಾಶಿವರಾಯ	ಮಹಾನಾಯಕಾ ಚಾರ್ಯ .... ಖಾನನ (ಹೆಸರು ತ್ರುಟಿತಗೊಂಡಿದೆ)	ಹುಲಿಗೆರೆ ಲಕ್ಷ್ಮೇಶ್ವರ ಸೀಮೆ, ಎಸ್ಐಐ, ವ್ಯಾ-೨೦, ಬಾಂಬೆ ಕರ್ನಾಟಕ ಇನ್ಸ್ಕ್ರಿಪ್ಷನ್ ಪು. ೨೩೯, ಶಾ.ಸ. ೨೩೯
೧೬.	೧೫೪೭	ಸದಾಶಿವರಾಯ	ಮಹಾಮಂಡ ಲೇಶ್ವರ ನಂದ್ಯಾಲ ದ ವೀರ ರಾಜಶ್ರೀ ರಂಗರಾಜನ ಮಕ್ಕಳು	ನಾಯಕತನಕ್ಕೆ ಸಲ್ಲುವ ಮುಳುವಾಗಿಲು ರಾಜ್ಯ ಶಾ.ಸ. ೪, ಮುಳವಾಗಿಲು ಬಿ.ಎಲ್. ರೈಸ್ ಆವೃತ್ತಿ ಎ.ಕ.ಸಂ. ೧೦, ಪು. ೬೭
೧೭.	೧೫೪೮	ಸದಾಶಿವರಾಯ	ಸೂರಪ್ಪ ಆರಿಚನಿ ತೆರಕಣಾಂಬಿ ಸೀಮೆ	ನಾಯಕತನಕ್ಕೆ ಪಾಲಿಸಿದ ಎ.ಕ.ಸಂ. ೩, ಪು. ೪೨, ಶಾ.ಸ. ೪೯, ಮೈ.ವಿ.ವಿ.

೧೮.	೧೫೪೪	ಸದಾಶಿವರಾಯ	ಮಹಾಮಂಡಲೇಶ್ವರ ರಾಮರಾಜಯ್ಯ ಮಹಾ ಅರಸ	ನಾಯಕತನಕ್ಕೆ ಪಾಲಿಸಿದ ಹೊಯ್ಸಳ ನಾಡೊಳಗಿನ ಹೊನ್ನಾವಳಿ ಸೀಮೆ ಬಿ.ಎಲ್. ರೈಸ್, ಆವೃತ್ತಿ ಶಾ.ಸ. ೧೨೯, ಎ.ಕ.ಸಂ. ೧೨ ತಿಪಟೂರು, ಪು. ೧೮೯
೧೯.	೧೫೪೪	ಸದಾಶಿವರಾಯ	ಚಾರಸು-ಜು ಭಂಡಿಯ ಅಯ್ಯನವರು ಚಲವಣನಾಯ್ಕರಿಗೆ ನೀಡಿದ ನಾಯಕತನ	ನಾಯಕತನಕ್ಕೆ ಪಾಲಿಸಿದ ಜಾವುಗಲ್ಲು ಸೀಮೆ ಎ.ಕ.ಸಂ. ೯, ಶಾ.ಸ. ೪೪೧, ಪು. ೪೧೬ ಮೈ.ವಿ.ವಿ.
೨೦.	೧೫೪೪	ಸದಾಶಿವರಾಯ	ಕೃಷ್ಣಪ್ಪ ನಾಯಕ	ಸಲ್ಲುವ ಕೊಂಟೆನೂರು ಸೀಮೆ ಶಾ.ಸ. ೧೧೨, ಹೂವಿನ ಹಡಗಲಿ, ಕ.ವಿ.ಹಂ. ಶಾ.ಸಂ.೧, ಪು. ೪೫೨
೨೧.	೧೫೪೯	ಸದಾಶಿವರಾಯ	ಕೂಟಗಾರರಾಮರಾಜ ಒಡೆಯರ ಮಗ ರಾಜ ಒಡೆಯ	ನೆಲವಾಗಿಲು ಸೀಮೆಯ ನಾಯಕತನ, ಎ.ಕ.ಸಂ. ೯ ಹೊಸಕೋಟೆ ಶಾ.ಸ. ೩೯, ಪು. ೨೦೫
೨೨.	೧೫೪೯	ಸದಾಶಿವರಾಯ	ಗೋವಿಂದರಾಜ ದೇವ	ವಿಜಯಪುರ ಸೀಮೆಯ ಅಮರನಾಯಕತನ ಎ.ಕ.ಸಂ. ೩, ಶಾ.ಸ. ೪೬ ಪು. ೪೦, ಮೈ.ವಿ.ವಿ.
೨೩.	೧೫೫೦	ಸದಾಶಿವರಾಯ	ಚನ್ನದೇವ ಜೋಡ ಮಹಾ ಅರಸ	ಅಮರ ಮಾಗಣೆಯಾಗಿ ಪಾಲಿಸಿದ ಸಿಂದಘಟ್ಟದ ಸ್ಥಳ, ಎ.ಕ.ಸಂ. ೬ ಪು. ೨೨೭, ಶಾ.ಸ. ೧೩೪ ಪಾಂಡವಪುರ
೨೪.	೧೫೫೦	ಸದಾಶಿವರಾಯ	ಲಕ್ಷ್ಮೀಪತಿ ಅಯ್ಯ	ನಾಯಕತನಕ್ಕೆ ಪಾಲಿಸಿದ ತೆರಕಣಾಂಬಿ ಸೀಮೆ ಎ.ಕ.ಸಂ. ೩, ಪು. ೬೬ ಶಾ.ಸ. ೮೫, ಗುಂಡ್ಲುಪೇಟೆ ಮೈ.ವಿ.ವಿ.

೨೫.	೧೫೫೦	ಸದಾಶಿವರಾಯ	ಸಿದ್ಧದೇವ ಮಹಾ ಅರಸ	ಹಾರನಹಳ್ಳಿ ಸೀಮೆಯ ನಾಯಕತನ ಬಿ.ಎಲ್. ರೈಸ್ ಆವೃತ್ತಿ, ಎ.ಕ.ಸಂ. ೧೨ ಪು. ೮೨, ಶಾ.ಸ. ೬೫, ಕಡೂರು
೨೬.	೧೫೫೧	ಸದಾಶಿವರಾಯ ರಾಮರಾಜಯ ದೇವ ಮಹಾರಾಯ	ನಂದ್ಯಾಲದ ತಿಮ್ಮರಾಜ ಅರಸ	ಹದಿನಾಡು ಸೀಮೆಯ ನಾಯಕತನ ಎ.ಕ.ಸಂ. ೪, ಮೈ.ವಿ.ವಿ. ಪು. ೩೭೮, ಶಾ.ಸ. ೧೭೯ ಯಳಂದೂರು
೨೭.	೧೫೫೧	ಸದಾಶಿವರಾಯ	ರಾಜದೇವ ಮಹಾ ಅರಸ	ನಾಯಕತನಕ್ಕೆ ನೀಡಿದ ಸೀಮೆಯ ಹೆಸರು ಸವೆದು ಹೋಗದೆ, ಶಾ.ಸ. ೮೯ ಎ.ಕ.ಸಂ. ೪, ಪು. ೪೫೮-೪೫೯ ಮೈ.ವಿ.ವಿ.
೨೮.	೧೫೫೧	ಸದಾಶಿವರಾಯ	ಗೋಪಎರಗೆ	ಮುಡಿಗೊಂಡ ಪರಿಸರದ ನಾಯಕತನ, ಶಾ.ಸ. ೮೯ ಕೊಳ್ಳೆಗಾಲ, ಎ.ಕ.ಸಂ. ೪ ಪು. ೪೫೮-೪೫೯
೨೯.	೧೫೫೧	ಸದಾಶಿವರಾಯ	ತಿರುಮಲದೇವ ಅರಸ	ಅಮರಕ್ಕೆ ಪಾಲಿಸಿದ ನಿಡುಗಲ್ಲು ನಾಡು ಎಸ್.ಐ.ಐ. ವ್ಯಾ. ೯, ಭಾಗ-೨, ಶಾ.ಸ. ೬೪೩ ಪು. ೬೪೧
೩೦.	೧೫೫೧	ಸದಾಶಿವರಾಯ	ಶ್ರೀ...ರಾಮ ರಾಜಯ್ಯ ದೇವ ಮಹಾ ಅರಸ	ಅಮರನಾಯಕತನಕ್ಕೆ ಪಾಲಿಸಿದ ಕಂದಿ... ಮವೊಳಗಣ ಬಜಗೂರ ಸ್ಥಳ ಬಿ.ಎಲ್. ರೈಸ್. ಎ.ಕ.ಸಂ.೧೨, ಶಾ.ಸ. ೫೩ ತಿಪಟೂರು, ಪು. ೧೪೬

೩೧.	೧೫೫೨	ಸದಾಶಿವರಾಯ	ನಂದಾಲ್ಯದ ಹಿರಿಯ ಅವುಬಳ ರಾಜನ ಮಗ ಅವುಬಳೇಶ್ವರ ಯ್ಯ ದೇವ ಮಹಾ ಅರಸ	ಮುಳುವಾಗಿಲು ಸೀಮೆಯ ನಾಯಕತನ ಎ.ಕ.ಸಂ. ೧೦ ಸಪ್ಲಿಮೆಂಟರಿ ಇನ್ಸ್ಕ್ರಿಪ್ಷನ್ ಶಾ.ಸ. ೧೧೪, ಮಾಲೂರು ಪು. ೪೭
೩೨.	೧೫೫೩	ಸದಾಶಿವರಾಯ	ಮಹಾಮಂಡಲೇಶ್ವರ ಮನುಪತಿ ಚಂದ್ರಿಯ ರಾಜೇಂದ್ರ	ಸೀಮೆಯ ಹೆಸರು ತ್ರುಟಿತಗೊಂಡಿದೆ. ಎ.ಕ.ಸಂ ೧೦, ಶಾ.ಸ. ೧೨ ಚಿಕ್ಕಬಳ್ಳಾಪುರ, ಪು. ೨೧೧
೩೩.	೧೫೫೩	ಸದಾಶಿವರಾಯ	ದಾನಿವಾಸ ವೊಡೆಯ	ದಾನಿವಾಸ ಸೀಮೆಯ ನಾಯಕತನ ಎ.ಕ.ಸಂ. ೧೨ ಚಿಕ್ಕಮಗಳೂರು, ಶಾ.ಸ. ೩೬, ಪು. ೪೭೩ ಮೈ.ವಿ.ವಿ.
೩೪.	೧೫೫೩	ಸದಾಶಿವರಾಯ	ಮಹಾ ಮಂಡ ಲೇಶ್ವರ ರಾ ರಾ.. ಶ್ರೀ ಮನು ಮಹಾ ರಾಜೇಂದ್ರ	ಅಮರನಾಯಕ ಸೀಮೆಯ ಹೆಸರು ತ್ರುಟಿತಗೊಂಡಿದೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೦, ಚಿಕ್ಕಬಳ್ಳಾಪು, ಶಾ.ಸ. ೧೨
೩೫.	೧೫೫೩	ಸದಾಶಿವರಾಯ	ಅವುಬಳ ರಾಜದೇವ	ತೆರಕಣಾಂಬಿ ಸೀಮೆಯ ನಾಯಕತನ, ಎ.ಕ.ಸಂ.೩ ಗುಂಡ್ಲುಪೇಟೆ, ಪು. ೭೧ ಪು. ೨೧೧, ಮೈ.ವಿ.ವಿ.
೩೬.	೧೫೫೪	ಸದಾಶಿವರಾಯ	ಮುಸಲಿ ಮಡುವಿನ ರಾಮರಾಜ	ಅಮರ ಮಾಗಣಿಗೆ ಪಾಲಿಸಿದ ಅನಂತಾಪುರ ಗ್ರಾಮ ಎಸ್.ಐ.ಐ. ವ್ಯಾ-೯, ಭಾಗ-೨, ಶಾ.ಸ. ೬೫೪ ಪು. ೬೪೯
೩೭.	೧೫೫೪	ಸದಾಶಿವರಾಯ	ಆಯನಮಲುಕ ವೊಡೆಯ	ಕುಂದೂರ ಸ್ಥಳದ ನಾಯಕತನ ಎ.ಕ.ಸಂ. ೭, ಶಿವಮೊಗ್ಗ ಪು. ೩೯೬

೩೮.	೧೫೫೪	ಸದಾಶಿವರಾಯ ರಾಮರಾಜ ವಿಠಲಯ್ಯದೇವ ನೀಡಿದ ನಾಯಕತನ	ಪತ್ತಿಕೊಂಡ ಕೃಷ್ಣಯ್ಯ ದೇವ ಮಹಾ ಅರಸ	ಅಮರ ಮಾಗಣಿಗೆ ನೀಡಿದ ನಿಡುಗಲ್ಲು ನಾಡು ತೈಲಗೆರೆ ಸ್ಥಳ, ಎ.ಕ.ಸಂ. ೧೨ ಪಾವಗಡ, ಪು. ೩೬೩, ಶಾ.ಸ. ೩೯
೩೯.	೧೫೫೪	ಸದಾಶಿವರಾಯ	ಮಹಾಮಂಡಲೇಶ್ವರ ಶ್ರೀಪತಿ ರಂಗದೇವ	ಬೂದಿಹಾಳು ಸೀಮೆಯ ಅಮರನಾಯಕತನ ಬಿ.ಆರ್. ಗೋಪಾಲ್ ವಿಜಯನಗರ ಇನ್ಸ್ಕ್ರಿಪ್ಷನ್ ವ್ಯಾ. ೩, ಕೆ.ಎನ್. ೨೧೪೭ ಪು. ೪೦೪
೪೦.	೧೫೫೪	ಸದಾಶಿವರಾಯ	ರುಸ್ತುಂಖಾನ ವೊಡೆಯ	ನಾಯಕತನಕ್ಕೆ ಸಲ್ಲುವ ವಿಜಯಪುರ ಸೀಮೆ ಎ.ಕ.ಸಂ. ೫, ಗುಂಡ್ಲುಪೇಟೆ ಶಾ.ಸ. ೬, ಪು. ೧೩ ಮೈ.ವಿ.ವಿ.
೪೧.	೧೫೫೪	ಸದಾಶಿವರಾಯ	ನಂದಿಯಾಲದ ಅವುಬಳ ದೇವ ಮಹಾ ಅರಸು	ಹದಿನಾಡು ಸೀಮೆಯ ನಾಯಕತನ ಎ.ಕ.ಸಂ.೪, ಕೆ.ಎನ್. ೧೬೫ ಚಾಮರಾಜನಗರ, ಶಾ.ಸ. ೨೬೮ ಪು. ೨೬೮ ಮೈ.ವಿ.ವಿ.
೪೨.	೧೫೫೪	ಸದಾಶಿವರಾಯ ರಾಮರಾಜಯ್ಯ ನವರು	ಆಯನಮಲುಕ ವೊಡೆಯರಿಗೆ	ಪಾಲಿಸಿದ ತಲಕಾಡು ಸೀಮೆ ಶಾ.ಸ. ೮೯ ಮಳವಳ್ಳಿ, ಎ.ಕ.ಸಂ. ೭ ಪು. ೩೯೭, ಮೈ.ವಿ.ವಿ.
೪೩.	೧೫೫೫	ಸದಾಶಿವರಾಯ	ಮಹಾಮಂಡಲೇಶ್ವರ ಗೂಬೂರು ತಿಂಮ ಯ ದೇವನ ಮಗ ರಂಗರಾಜಯ್ಯ ದೇವ ಮಹಾ ಅರಸ	ತೆರಕಣಾಂಬಿ ಸೀಮೆಯ ಅಮರನಾಯಕತನ ಇ.ಸಿ.೪, ಚಾಮರಾಜನಗರ ಪು. ೧೯೪-೧೯೫ ಮೈ.ವಿ.ವಿ.

೪೪.	೧೫೫೬	ಸದಾಶಿವರಾಯ	ಯಲಹಂಕ ನಾಡ ಪ್ರಭು, ಮುಮ್ಮಡಿ ಕೆಂಪೇಗೌಡ	ಮಾಗಡಿಯ ನಾಯಕತನ ಬಿ.ಎಲ್. ರೈಸ್ ಆವೃತ್ತಿ ಎ.ಕ.ಸಂ. ೯, ಶಾ.ಸ. ೨೯ ಪು. ೧೧೦
೪೫.	೧೫೫೬	ಸದಾಶಿವರಾಯ	ಮಹಾಮಂಡಲೇಶ್ವರ ರಾಮರಾಜ ವಿಠಲ ರಾಜು ತಿರುಮಲೈ ರಾಜ	ನಾಯಕತನಕ್ಕೆ ಪಾಲಿಸಿದ ರಾಯದುರ್ಗ ಸೀಮೆಯ ಮುರುಡಿ ಗ್ರಾಮ ಎ.ಕ.ಸಂ. ೧೧, ಶಾ.ಸ. ೪ ಮೊಣಕಾಲ್ಮೂರು, ಪು. ೨೪೫
೪೬	೧೫೫೬	ಸದಾಶಿವ ದೇವರಾಯ	ರಘುನಾಥ ರಾಜದೇವ	ಕಳಸಾಪುರದ ನಾಯಕತನ ಕ.ವಿ.ಹಂ, ಶಾ.ಸಂ. ೧ ಹೊಸಪೇಟೆ, ಪು. ೧೬
೪೭	೧೫೫೬	ಸದಾಶಿವರಾಯ	ರಘುನಾಥ ರಾಜಯ್ಯ	ಸಲ್ಲುವ ರಾಯದುರ್ಗ ಸೀಮೆ ಕ.ವಿ.ಹಂ, ಶಾ.ಸಂ. ೧ ಶಾ.ಸ. ೬೯, ಬಳ್ಳಾರಿ ಪು. ೮೬
೪೮.	೧೫೫೬	ಸದಾಶಿವರಾಯ	ಮಹಾನಾಯಕಾ ಚಾರ್ಯ ತಿಮ್ಮಣ್ಣ ನಾಯಕ	ನಿಡುಗಲ್ಲು ರಾಜ್ಯದ ನಾಯಕತನ ಎ.ಕ.ಸ. ೧೨, ತುಮಕೂರು
೪೯.	೧೫೫೬	ಸದಾಶಿವರಾಯ	ಶ್ರೀಮನ್ಮಹಾ ನಾಯಕಾಚಾರ್ಯ ಗಡಿಯಾಂಕ ಭೀಮ (ಮಾ)ರನ ಚಿಕ ಎಲ್ಲಪ್ಪ ನಾಯಕ	ಬಂಕಾಪುರ ಸೀಮೆಯೊ ಯೊಳಗಿನ ಗುತ್ತಳ ವೇಂಠೆಯ ನಾಯಕತನ ಎಸ್.ಐ.ಐ. ವ್ಯಾ. ೧೮ ಶಾ.ಸ.೦ ೪೨೫ ಪು. ೪೮೭, ಧಾರವಾಡ
೫೦.	೧೫೫೭	ಸದಾಶಿವರಾಯ	ಕೆಳದಿಯ ಸದಾಶಿವ ನಾಯಕ	ಅಮರ ಮಾಗಣಿಯಾಗಿ ಪಾಲಿಸಿದ ಹೊನ್ನಾವಳಿ ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೭, ಹೊನ್ನಾವಳಿ ಶಾ.ಸ. ೯, ಪು. ३२೦

೫೧.	೧೫೫೮	ಸದಾಶಿವರಾಯ	ಹಡಪದ ಕೃಷ್ಣಪ್ಪ ನಾಯಕರ ಮಗ ವೆಂಕಟಾದ್ರಿ ನಾಯಕರ ಮಗ ಲಕ್ಷ್ಮಪ್ಪ ನಾಯಕ (ಅಮರನಾಯಕ)	ನರಸಿಂಹಪುರದ ಸೀಮೆ ಎ.ಕ.ಸಂ. ೮, ಶಾ.ಸ. ೧೨ ಹೊಳೆನರಸೀಪುರ ಪು. ೮
೫೨.	೧೫೫೯	ಸದಾಶಿವರಾಯ	ಯರದಿಮ್ಮ ರಾಯನ ಕಾರ್ಯಕರ್ತ ಸುಗಟೂರು ಮುಮ್ಮಡಿ ಚಿಕರಾಯ ತಂಮ್ಮೆಗೌಡ	ಹೊಸಕೋಟೆ ಸೀಮೆಯ ಅಮರನಾಯಕ
೫೩.	೧೫೫೯	ಸದಾಶಿವರಾಯ	ಹಡಪದ ಯರ್ರ ಕೃಷ್ಣಪ್ಪ ನಾಯಕರ ಮಗ ವೆಂಕಟಾದ್ರಿ ನಾಯಕ	ಅಮರ ಮಾಗಣಿಯಾಗಿ ಪಾಲಿಸಿದ ಬಿ.ಎಲ್.ರೈಸ್ (ಸಂ) ಬಾಗೂರು ಸೀಮೆ ಎ.ಕ.ಸಂ. ೧೧, ಹೊಳಲ್ಕೆರೆ, ಶಾ.ಸ. ೨೧ ಪು. ೩೩೫
೫೪.	೧೫೫೯	ಸದಾಶಿವರಾಯ	ಮಹಾನಾಯಕಾಚಾರ್ಯ ಕೋಟೆಕೆರೆಯ ಹೊಂಟ್ಟಣ್ಣ ನಾಯಕ	ಅಮರ ಮಾಗಣಿಗೆ ಪಾಲಿಸಿದ ದೊಡ್ಡೇರಿ ಸೀಮೆ, ಬಿ.ಎಲ್. ರೈಸ್ (ಸಂ), ಎ.ಕ.ಸಂ. ೧೧ ಶಾ.ಸ. ೫೪, ಪು. ೨೮೫
೫೫.	೧೫೬೦	ಸದಾಶಿವರಾಯ	ನಾಯಕಾಚಾರ್ಯ ಹರತಿಯ ವಿಠಣ ನಾಯಕ ಅಯ್ಯ	ದೊಡ್ಡೇರಿ ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೧, ಶಾ.ಸ. ೩ ಪು. ೨೬೫, ಚಳ್ಳಕೆರೆ
೫೬	೧೫೬೦	ಸದಾಶಿವರಾಯ	ವೆಂಕಟಾದ್ರಿ ರಾಜಯ್ಯ	ಕೋ... ಸೀಮೆ ಸೀಮೆಯ ಹೆಸರು ತ್ರುಟಿತಗೊಂಡಿದೆ. ಎಸ್.ಐ.ಐ. ವ್ಯಾ-೨೦, ಬಾಂಬೆ ಕರ್ನಾಟಕ ಇನ್ಸ್‌ಸ್ಕ್ರಿಪ್ಷನ್, ಪು. ೨೯೧, ಶಾ.ಸ. ೨೯೧, ಸವದತ್ತಿ

೫೭	೧೫೬೧	ಸದಾಶಿವರಾಯ (ವೀರ ರಾಮಕೃಷ್ಣ ದೇವರಾಯ ಪೆನುಗೊಂಡೆ)	ಶ್ರೀ ಮನುಮಹಾ ನಾಡ ಪ್ರಭು ಬಿಡ್ಡುವರದ ಮುಮ್ಮಡಿ ಚಿಕ್ಕಪ್ಪ ಗೌಡ	ನಾಯಕತನಕ್ಕೆ ಪಾಲಿಸಿದ ಕೋರೆಯ ಮಾಗಣಿ ಬಿ.ಎಲ್. ರೈಸ್, ಎ.ಕ.ಸಂ. ೧೨ ಶಾ.ಸ. ೬೬, ಪು. ೫೫
೫೮.	೧೫೬೧	ಸದಾಶಿವರಾಯ	ಮಹಾಮಂಡಲೇಶ್ವರ ರಾಮರಾಜಯ್ಯ ಶ್ರೀ ರಂಗರಾಜಯ್ಯ ಮಹಾ ಅರಸ	ಅಮರನಾಯಕತನಕ್ಕೆ ಪಾಲಿಸಿದ ಬಿ.ಆರ್. ಗೋಪಾಲ್ (ಸಂ), ವಿಜಯನಗರ ಇನ್ಸ್‌ಸ್ಕ್ರಿಪ್ಷನ್, ವ್ಯಾ-೧, ಶಾ.ಸ. ಕೆ.ಎನ್. ೨೫೨ ದೇವರಹೊಸಹಳ್ಳಿ ಪು. ೧೨೦
೫೯.	೧೫೬೨	ಸದಾಶಿವರಾಯ	ಕೆಳದಿಯ ಚವುಡ ಗೊಂಡರ ಮಕ್ಕಳು ಸದಾಶಿವನಾಯಕ	ಅರಗ, ಗುತ್ತಿ, ಮುವತ್ತಾರು ಕಂಪಣ ತುಳುರಾಜ್ಯ, ಬಾರಕೂರು, ಮಂಗಲೂರು ಆಯಿಮತ್ತೂರು ಗ್ರಾಮ ಗಳನ್ನು ಅಮರ ಮಾಗಣಿ ಯಾಗಿ ಪಾಲಿಸಿದರು. ಎಸ್.ಐ.ಐ. ವ್ಯಾ-೯, ಭಾಗ-೨, ಶಾ.ಸ. ೬೭೪ ಪು. ೬೬೬
೬೦.	೧೫೬೩	ಸದಾಶಿವರಾಯ	ಅಯ್ಯನ-ಮಲುಕ ವೊಡೆಯ	ಅಮರಕ್ಕೆ ಪಾಲಿಸಿದ ದುಮ್ಮಿ ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೮, ಚನ್ನಗಿರಿ ಶಾ.ಸ. ೬೯
೬೧.	೧೫೬೩	ಸದಾಶಿವರಾಯ	ತಿಮ್ಮಪ್ಪ ನಾಯಕ	ನಾಯಕತನಕ್ಕೆ ಸಲ್ಲುವ ಘಲೆಯೆದ ಸ್ಥಳ ಎ.ಕ.ಸಂ. ೪, ಶಾ.ಸ. ೨೨೯ ಪು. ೧೪೦, ಮೈ.ಎ.ಎ.

೬೨.	೧೫೬೩	ಸದಾಶಿವರಾಯ	ಕೃಷ್ಣಪ್ಪ ನಾಯಕ	ಅಮರ ನಾಯಕತನಕ್ಕೆ ಪಾಲಿಸಿದ ಹಾಸನ ಸೀಮೆ ಎ.ಕ.ಸಂ. ೮ ಶಾ.ಸ. ೬೨, ಪು. ೨೧೫ ಮೈ.ವಿ.ವಿ.
೬೩.	೧೫೬೩	ಸದಾಶಿವರಾಯ (ಆಯನ ಮಲುಕ) ವೊಡೆಯ)	ಸಂತೆ ಬೆನ್ನೂರಿನ ಪಿಲ್ಲ ನಾಯಕ	ಅಮರಕ್ಕೆ ಪಾಲಿಸಿದ ದುಮ್ಮಿ ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೭ ಚನ್ನಗಿರಿ, ಶಾ.ಸ. ೬೯ ಪು. ೬೫
೬೪.	೧೫೬೪	ಸದಾಶಿವರಾಯ	ಮಲಪನಾಯಕ (ಅಮರ ನಾಯಕ)	ಬೌರಿಂಗ್‌ಪೇಟೆ ಮಿಟ್ಟಹಳ್ಳಿಯ ಶಾಸನ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೦ ಶಾ.ಸ. ೮೮, ಪು. ೧೫೨
೬೫.	೧೫೬೪	ಸದಾಶಿವರಾಯ	ಜಗದೇಕರಾಯ ವೊಡೆಯ	ಹದಿನಾಡು ಸೀಮೆಯ ನಾಯಕತನ ಎ.ಕ.ಸಂ.೪, ಯಳಂದೂರು ಶಾ.ಸ. ೧೭೯, ಪು. ೩೭೮ ಮೈ.ವಿ.ವಿ.
೬೬	೧೫೬೪	ಸದಾಶಿವರಾಯ	ಕೊಂಡರಾಜಯ ದೇವ ಮಹಾ ಅರಸ	ಚನ್ನಪಟ್ಟಣ ಸ್ಥಳದ ಮರನಾಯಕತನ ಎ.ಕ.ಸಂ. ೬, ಪಾಂಡವಪುರ ಶಾ.ಸ. ೧೨೮, ಪು. ೨೨೦ ಮೈ.ವಿ.ವಿ.
೬೭	೧೬೬೫	ಸದಾಶಿವರಾಯ	ಕಂದಾಚಾರದ ನಂಜಯ ತಿಂಮಪ್ಪ	ಅಮರ ಮಾಗಣಿಗೆ ಸಲ್ಲುವ ಶ್ರೀರಂಗಪಟ್ಟಣ ಸೀಮೆ ಎ.ಕ.ಸಂ.೬, ಶಾ.ಸ. ೧೧೫ ಪು. ೪೩೦, ಮೈ.ವಿ.ವಿ.
೬೮.	೧೫೬೫	ಸದಾಶಿವರಾಯ	ಅವತಿಯ ನಾಡ ಪ್ರಭು ಸೊಣಪಗೌಡ ಅಮರ ನಾಯಕ	ಎ.ಕ.ಸಂ. ೧೦, ಗೌರಿಬಿದ ನೂರು, ಶಾ.ಸ. ೫೨ ಪು. ೨೪೯

೧೯.	೧೫೬೫	ಸದಾಶಿವರಾಯ	ಸುಗಟೂರು ಮುಮ್ಮಡಿ ಚಿಕರಾಯ ತಮ್ಮಪ್ಪ ಗೌಡರ ಮಗ ಚಿಕರಾಯ ತಂಮ್ಮೆಗೌಡ	ಹೊಸಕೋಟೆ ಸೀಮೆಯ ನಾಯಕತನ ಎ.ಕ.ಸಂ. ೯, ಹೊಸಕೋಟೆ ಶಾ.ಸ. ೧೦೫, ಪು. ೨೨೧-೨೨೨
೨೦.	೧೫೬೬	ಸದಾಶಿವರಾಯ	ಮುಮ್ಮಡಿ ಕೆಂಪೇಗೌಡ (ಅಮರ ನಾಯಕ)	ತಮಗೆ ಸಲ್ಲುವಂತಹ ಮಾಗಡಿ ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೯ ಮಾಗಡಿ ಶಾ.ಸ. ೨೯ ಪು. ೧೧೦
೨೧.	೧೫೬೮	ಸದಾಶಿವರಾಯ	ತಿರುಮಲ ರಾಜ್ಯಯ ದೇವ ಮಹಾ ಅರಸರು ಕಾಮಗೇತಿ ಕಸ್ತೂರಿ ಮೇದಕೇರಿ ನಾಯಕರಿಗೆ ನೀಡಿದ ನಾಯಕತನ	ಅರಮ ಮಾಗಣಿಗೆ ಪಾಲಿಸಿದ ಹೊಳಲ್ಕೆರೆ ಸೀಮೆ, ಎ.ಕ.ಸಂ. ೧೧ ಹೊಳಲ್ಕೆರೆ, ಶಾ.ಸ.
೨೨.	೧೫೭೯	ಸದಾಶಿವರಾಯ (ಮಹಾ ಮಂಡ ಲೇಶ್ವರ ರಾಮರಾಜು ತಿರುಮಲ ರಾಜರು ನೀಡಿದ ನಾಯಕತನ)	ಹರತಿಯ ಅಬ್ಬಣ ನಾಯಕರ ಮಗ ಕೆಂಚಪ್ಪ ನಾಯಕ	ಅಮರ ಮಾಗಣಿಗೆ ಪಾಲಿಸಿದ ಹಿರಿಯೂರು ಸೀಮೆ, ಬಿ.ಎಲ್. ರೈಸ್ (ಸಂ), ಎ.ಕ.ಸಂ. ೧೧ ಹಿರಿಯೂರು, ಶಾ.ಸ. ೭೯ ಪು. ೩೧೭
೨೩.	೧೫೭೯	ಸದಾಶಿವರಾಯ	ರಾಮರಾಜ ನಾಯಕ	ಹದಿನಾಡು ಸೀಮೆಯ ನಾಯಕತನ, ಶಾ.ಸ.೧ ಎ.ಕ.ಸಂ. ೪, ಪು. ೩೯೮ ಮೈ.ವಿ.ವಿ.
೨೪.	(?)	ಸದಾಶಿವರಾಯ	ಕಾಮಗೇತಿ ತಿಮ್ಮಣ್ಣ ನಾಯಕ	ನಾಯಕತನಕ್ಕೆ ಪಾಲಿಸಿದ ಕುಂತಣ ದೇಶ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೧, ಶಾ.ಸ. ೭೬ ಹಿರಿಯೂರು, ಪು. ೩೧೬

೭೫.	೧೫೭೧	ಸದಾಶಿವರಾಯ	ಶ್ರೀ ಮನ್ಮಹಾನಾಯ ಕಾಚಾರ್ಯ ಯಿನಗಬಿ ನಾಯಕನ ಪುತ್ರ ಬಸವ ನಾಯಕ	ಅಮರ ನಾಯಕತನಕ್ಕೆ ಪಾಲಿಸಿದ ಸೀಮೆಯ ಹೆಸರು ತ್ರುಟಿತಗೊಂಡಿದೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೦, ಶಾ.ಸ ೧೨ ಚಿಕ್ಕಬಳ್ಳಾಪುರ, ಪು. ೨೧೧
೭೬		ಸದಾಶಿವರಾಯ	ಶ್ರೀ ಮಹಾನಾಯಕಾ ಚಾರ್ಯ ಕೊಂಡಣ ನಾಯಕನ ಮಗ ತಿರುಮಲ ನಾಯಕ	ಬಿ.ಎಲ್. ರೈಸ್. ಆವೃತ್ತಿ ಇ.ಸಿ.೧೧, ಚಳ್ಳಕೆರೆ ಶಾ.ಸ. ೪೭, ಪು. ೨೮೩
೭೭	೧೫೭೨	ಸದಾಶಿವರಾಯ (ರಾಮರಾಜಯ್ಯ)	ಸೋದೆ ಯಿಂಮ್ಮಡಿ ಅರಸಪ್ಪ	ಹಸ್ತಿನಾವತಿ ಏಳಿತಕ್ಕೆ ಸಲ್ಲುವ ಪಡುನಾಡು ಬನವಾಸಿ ಯ ನಾಯಕತನ ಎಸ್.ಐ.ಐ. ವ್ಯಾ. ೨೦ ಶಾ.ಸ. ೨೪೧, ಪು. ೨೯೨
೭೮.	೧೫೭೩	ಸದಾಶಿವರಾಯ	ಮಹಾನಾಯಕಾ ಚಾರ್ಯ ಚಿನ್ನ ಭಂಡಾರದ ನಾರಾಯಣಪ್ಪನ ಮಗ ರಾಮಕೃಷ್ಣಪ್ಪಯ್ಯ	ಪಾಲಿಸಿದ ಆರಗ, ಗುತ್ತಿ ಗ್ರಾಮಗಳು ಎ.ಕ.ಸಂ. ೮, ತೀರ್ಥಹಳ್ಳಿ ಶಾ.ಸ. ೧೯, ಪು. ೪೫೨
೭೯.		ಸದಾಶಿವರಾಯ	ಮೂರ್ತಿರಾಜರಾಯ	ಬಲ್ಲದ ಸ್ಥಳದ ನಾಯಕತನ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೦, ಶಾ.ಸ. ೨ ಶಿಡ್ಲಘಟ್ಟ, ಪು. ೧೭೫
೮೦.	೧೫೮೦	ರಾಮರಾಜನ ಮಗ ತಿಂಮ್ಮರಾಜನು ಆನೆಗೊಂದಿ ಆಳುತ್ತಿದ್ದ	ಮಹಾನಾಯಕಾಚಾ ರ್ಯ ಬಾಗುಳಿ ಶ್ರೀಮತ್ ನಾಯಕರ ಮಕ್ಕಳು	ಕೊಟ್ಟೂರು ಸೀಮೆ ಶಾ.ಸ. ಕೂಡ್ಲಿಗಿ ಶಾ.ಸ. ೧೦, ಕೂಡ್ಲಿಗಿ ಕ.ವಿ.ಹಂ. ಶಾ.ಸಂ. ೧ ಪು. ೨೩೧

ಅರವೀಡು ವಂಶದ ಕಾಲದ ನಾಯಕತನಗಳು (೧೫೪೨ರಿಂದ ೧೬೬೮)

ಒಂದನೇ ತಿರುಮಲನ ಕಾಲದ ನಾಯಕತನಗಳು

ಕ್ರ.ಸಂ.	ವರ್ಷ	ರಾಜ	ನಾಯಕ	ನಾಡು/ಸೀಮೆ
೧.	೧೫೭೦	ತಿರುಮಲ ರಾಜದೇವ (ಪೆನುಗೊಂಡೆ)	ಜೈವಪ್ಪ ನಾಯಕ	ಮಾಗಣಿಗೆ ಪಾಲಿಸಿದ ದೊಡ್ಡೇರಿ ಸೀಮೆ ಶಾ.ಸ. ೧೦, ಇ.ಸಿ.೧೨ ತುಮಕೂರು, ಪು. ೩೧೦
೨.	೧೫೭೭	ತಿರುಮಲ ರಾಜದೇವ ಪೆನುಗೊಂಡೆ	ಹಿರಿಯ ಕೆಂಪೇಗೌಡ ಅಮರನಾಯಕ	ಬೆಂಗಳೂರು ಸೀಮೆ ಬಿ.ಎಲ್. ರೈಸ್ (ಸಂ) ಶಾ.ಸ. ೫೭, ಎ.ಕ.ಸಂ. ೧೦ ಮಾಲೂರು ತಾ. ಪು. ೧೬೧
೩.	೧೫೭೧	ತಿರುಮಲರಾಯ ಮಹಾರಾಯ ಪೆನುಗೊಂಡೆ	ಸದಾಶಿವಪ್ಪ ನಾಯಕನ ಮಗ ರಾಮರಾಜ	ಸಲ್ಲುವ ಚಂದ್ರಗುತ್ತಿ ವೇಂಠೆ

ಮೊದಲ ಶ್ರೀರಂಗನ ಕಾಲದ ನಾಯಕತನಗಳು

ಕ್ರ.ಸಂ.	ವರ್ಷ	ರಾಜ	ನಾಯಕ	ನಾಡು/ಸೀಮೆ
೧.	೧೫೭೪	ಶ್ರೀರಂಗ ದೇವ ಮಹಾರಾಯ	ಮಹಾಮಂಡಲೇಶ್ವರ ಶ್ರೀಪತಿ ರಾಜ ವಲ್ಲಭ ರಾಜಯ್ಯ ದೇವ ಮಹಾ ಅರಸು	ಅಮರ ನಾಯಕತನಕ್ಕೆ ಸಲ್ಲುವ ಬೂದಿಹಾಳು ಬಿ.ಎಲ್. ರೈಸ್ (ಸಂ) ಸೀಮೆ ಎ.ಕ.ಸಂ. ೧೨, ಶಾ.ಸ.೮, ತಿಪಟೂರು ಪು. ೨೦೦-೨೦೧
೨.	೧೫೮೦	ಶ್ರೀರಂಗ ದೇವ ಮಹಾರಾಯ	ಮಹಾಮಂಡಲೇಶ್ವರ ರಾಮರಾಜಯ ತಿಂಮರಾಜಯ್ಯನ ಮಗ ಚಿನ್ನ ತಿಮ್ಮ ರಾಜಯ್ಯ	ಅಮರ ಮಾಗಣಿಯಾಗಿ ಸಲ್ಲುವ ಕಾಮದೇವನ ಹಳ್ಳಿ, ಬಿ.ಎಲ್. ರೈಸ್ (ಸಂ) ಎ.ಕ.ಸಂ. ೧೦ ಶಾ.ಸ. ೧೫೩, ಪು. ೩೨ ಕೋಲಾರ

೩.	೧೫೮೩	ಶ್ರೀರಂಗ ದೇವ ಮಹಾರಾಯ	ಯರ ಕೃಷ್ಣಪ್ಪ ನಾಯಕ ಮಗ ವೆಂಕಟಾದ್ರಿ ನಾಯಕ	ನಾಯಕತನಕ್ಕೆ ಪಾಲಿಸಿದ ಬೇಲೂರು ಸೀಮೆ ಎ.ಕ.ಸಂ. ೯, ಶಾ.ಸ.೨೧೯ ಪು. ೨೦೪, ಬೇಲೂರು ಮೈ.ವಿ.ವಿ.
೪.	(?)	ವೀರ ವೆಂಕಟಪತಿ ದೇವ	ಹರತಿಯ ಚಿಕ್ಕರಂಗಪ್ಪ	ನಾಯಕತನಕ್ಕೆ ಸಲ್ಲುವ ರಾಯದುರ್ಗ ವೇಂಠೆಯ ಗಣ ಹೆಂಮತಿ ಗ್ರಾಮ ಶಾ.ಸ. ೬, ಎ.ಕ.ಸಂ. ೧೧ ಹಿರಿಯೂರು, ಪು. ೨೯೦

ಎರಡನೇ ವೆಂಕಟನ ಕಾಲದ ನಾಯಕತನಗಳು

೧.	೧೫೮೬	ವೀರವೆಂಕಟ ಪತಿರಾಯ	ಹರತಿ ರಂಗಪ್ಪ ನಾಯಕ	ಅಮರ ನಾಯಕತನಕ್ಕೆ ಸಲ್ಲುವ ಅಗುಳಿ ಸೀಮೆ ಎಸ್.ಐ.ಐ. ವ್ಯಾ. ೯ ಶಾ.ಸ. ೬೯೦, ಭಾಗ-೨ ಪು. ೬೮೧
೨.	೧೫೮೭	ವೀರವೆಂಕಟ ಪತಿ ದೇವ	ಕೃಷ್ಣಪ್ಪ ನಾಯಕ	ಅಮರ ಮಾಗಣಿಗೆ ಸಲ್ಲುವ ವಸ್ತಾರೆ ಸೀಮೆ, ಚಿಕ್ಕಮಗಳೂರು, ಶಾ.ಸ. ೧೮೩, ಎ.ಕ.ಸಂ. ೧೧, ಪು. ೧೧೬-೧೧೭ ಮೈ.ವಿ.ವಿ.
೩.	೧೫೯೧	೨ನೇ ವೆಂಕಟ ಪತಿರಾಯ	ಮುದಿಯಪ್ಪ ನಾಯಕ	ಹೊಯ್ಸಳ ಸೀಮೆಯ ಅಮರನಾಯಕತನ ಕೆ.ಎನ್. ೨೦೫೬ ಬಿ.ಆರ್. ಗೋಪಾಲ್ ವಿ.ಐ. ವ್ಯಾ. ೩, ಪು. ೪೦೮

೪.	೧೫೯೨	ವೆಂಕಟಪತಿರಾಯ	ನರಸರಾಜ ಅಯ್ಯ	ದೊರೆತನಕ್ಕೆ ಪಾಲಿಸಿದ ತೆರಕಣಾಂಬಿ ಸ್ಥಳ ಗುಂಡ್ಲುಪೇಟೆ-೧೫೭ ಎ.ಕ.ಸಂ.೩, ಪು. ೧೨೮
೫.	೧೬೦೯	ವೆಂಕಟಪತಿರಾಯ	ಚಿಕ್ಕಬಸವಣ್ಣ	ಅಮರ ಮಾಗಣೆಯಾಗಿ ಪಾಲಿಸಿದ ಹಿರಿಯೂರು ಸೀಮೆ ಶಾ.ಸ. ಕೆ.ಎನ್. ೨೨೩೪ ವಿ.ಐ. ವ್ಯಾ. ೩, ಬಿ.ಆರ್. ಗೋಪಾಲ್ ಪು. ೪೪೩
೬	೧೬೦೫	ವೆಂಕಟಪತಿರಾಯ	ಯಿಮ್ಮಡಿ ಕದಿರಪ್ಪ ನಾಯಕನ ಮಗ ಮುಂಮಡಿ ಕದಿರಪ್ಪ ನಾಯಕ	ಗುಮ್ಮನಾಯಕ ಪಾಳೆಯ ಎ.ಕ.ಸಂ. ೧೦, ಬಾಗೇಪಲ್ಲಿ ಶಾ.ಸ. ೨೦, ಪು. ೨೭೨
೭	೧೬೦೬	ವೆಂಕಟಪತಿರಾಯ	ಶ್ರೀ ಮಹಾನಾಯಕಾ ಚಾರ್ಯ ಕಾಮಗೇತಿ ಯ ಚಿಕ್ಕಣ್ಣ ನಾಯಕ	ಎ.ಕ.ಸಂ.೧೧, ಶಾ.ಸ. ೮೦ ಚಿತ್ರದುರ್ಗ, ಪು. ೫೦
೮.	೧೬೦೮	ವೆಂಕಟಪತಿರಾಯ	ಮುಮ್ಮಡಿ ತಿಮ್ಮಯ್ಯ ಗೌಡ	ಅಮರ ನಾಯಕತನಕ್ಕೆ ಸಲ್ಲುವ ಕೊಳಾಲ ಸೀಮೆ ಎ.ಕ.ಸಂ.೧೦, ಶಾ.ಸ. ೨೪೧, ಪು. ೫೮
೯.	೧೬೧೦	ವೆಂಕಟಪತಿರಾಯ	ಹರತಿ ಇಮ್ಮಡಿ ಕೆಂಚಪ್ಪ ನಾಯಕ	ಅಮರ ಮಾಗಣೆಯಾಗಿ ಪಾಲಿಸಿದ ಹಿರಿಯೂರು ಸೀಮೆ ಎ.ಕ.ಸಂ. ೧೧

ವೀರ ರಾಮದೇವರಾಯನ ಕಾಲದ ನಾಯಕತನಗಳು

ಕ್ರ.ಸಂ.	ವರ್ಷ	ರಾಜ	ನಾಯಕ	ಸೀಮೆ/ನಾಡು
೧.	೧೬೧೪	ವೀರ ರಾಮದೇವ ರಾಯ	ಮುಮ್ಮಡಿ ತಂಮ್ಮೇಗೌಡ	ಆಳ್ವಿಕೆಗೆ ಸಲ್ಲುವ ಹೊಸಕೋಟೆ ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. ೯, ಶಾ.ಸ. ೪೭ ಪು. ೨೪೬
೨.	೧೬೧೬	ವೀರ ರಾಮದೇವ ರಾಯ	ಶ್ರೀ ಮನ್ಮಹಾನಾಯಕಾ ಚಾರ್ಯ ರಾದ ಗುಮ್ಮಿನಿ ನಾಯಕ ಕದಿರಪ್ಪ ನಾಯಕ	ಬಿ.ಎಲ್.ರೈಸ್ ಎ.ಕ.ಸಂ. ೧೦ ಶಾ.ಸ. ೭೫, ಬಾಗೇಪಲ್ಲಿ ಪು. ೨೯೬
೩.	೧೬೨೩	ವೀರ ರಾಮದೇವ ಮಹಾರಾಯ	ಚಾಮರಾಜ ವೊಡೆಯ	ಮದ್ದೂರ ಸ್ಥಳ ಶಾ.ಸ. ೬೪, ಎ.ಕ.ಸಂ. ೭ ಪು. ೨೮೮
೪.	೧೬೨೩	ವೀರರಾಮ ದೇವರಾಯ ಮಹಾರಾಯ	ಇಮ್ಮಡಿ ಜಗದೇವ ರಾಯ	ಅಮರ ನಾಯಕತನಕ್ಕೆ ಸಲ್ಲುವ ಚನ್ನಪಟ್ಟಣ ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸಂ. .೯, ಪು. ೩೫೦ ಶಾ.ಸ. ೧೮೨
೫.	೧೬೩೩	ವೀರರಾಮ ದೇವರಾಯ	ಜಗದೇವರಾಯ	ಅಮರಕ್ಕೆ ಪಾಲಿಸಿದ ನಾಗಮಂಗಲ ಸೀಮೆ
೬	೧೬೩೩	ವೀರರಾಮ ದೇವರಾಯ (ಜಗದೇವರಾಯನು ಅಮರಕ್ಕೆ ಪಾಲಿ ಸಿದನು)	ಹುಚ್ಚಮಾರ	ಅಮರ ನಾಯಕತನಕ್ಕೆ ಪಾಲಿಸಿದ ಹೊಯ್ಸಳ ನಾಡು ಮಂಡ್ಯ, ಶಾ.ಸ. ೨೮ ಎ.ಕ.ಸಂ. ೭, ಪು. ೨೧೦ ಮೈ.ವಿ.ವಿ.
೭	೧೬೪೧	ವೀರರಾಮ ದೇವರಾಯ	ಚಿಕರಾಯ ತಂಮಪ್ಪ ಗೌಡ	ಅಮರ ನಾಯಕತನಕ್ಕೆ ಪಾಲಿಸದ ಊರ ಛಾವಡಿಗೆ ಸಲ್ಲುವ ಯೇಳುನಾಡು ಸೀಮೆ, ಎ.ಕ.ಸಂ. ೧೦, ಶಾ.ಸ. ೨೦೪ ಪು. ೪೭, ಕೋಲಾರ

೮.		ವೀರರಾಮ ದೇವರಾಯ	ಕೆಂಪನಾಚಯರ ಮಗ, ಕೆಂಪೇಗೌಡನ ಮಗ ಇಮ್ಮತಿ ಕೆಂಪೇಗೌಡ	ಬಿ.ಎಲ್. ರೈಸ್ (ಸಂ) ಎ.ಕ.ಸಂ. ೯, ಶಾ.ಸ. ೧ ಪು. ೨, ಬೆಂಗಳೂರು
೯.	೧೬೪೧	ವೀರರಾಮದೇವ	ಹೊಳವನಹಳ್ಳಿ ಇಮ್ಮಡಿ ಭೈರೇಗೌಡ	ಕೊರಟಗೆರೆ ಸೀಮೆ ಪು. ೩೧೭, ಎ.ಕ.ಸ. ೧೨ ಬಿ.ಎಲ್. ರೈಸ್, ಶಾ.ಸ.೩೨

ಪೆದ್ದ ವೆಂಕಟ (೧೧೧)ನ ಕಾಲದ ನಾಯಕತನಗಳು

೧.	೧೬೩೬	ವೆಂಕಟಪತಿ ದೇವರಾಯ	ಸಂತೆಬೆನ್ನೂರು ನಿಚ್ಚ ಮದುವಣಿಗ ವೀರ ಹನುಮಪ್ಪ ನಾಯಕ	ಅಮರನಾಯಕತನಕ್ಕೆ ಪಾಲಿಸಿದ ವಿಭೂತಿಪುರ ಸೀಮೆ, ಶಾ.ಸ. ೨೩ ತುಮಕೂರು, ಪಾಳೆಯಗಾರ ಶಾಸನ ಸಂಪುಟ-೧, ಪು. ೧೨೯
೨.	೧೬೪೦	ವೀರವೆಂಕಟಪತಿ ದೇವ	ನರಸರಾಜು ಅಯ್ಯ	ತೆರಕಣಾಂಬಿ ಸೀಮೆ ಎ.ಕ.ಸಂ. ೩, ಪು. ೯೦ ಗು.ಪೇಟೆ-೧೨೧
೩.	೧೬೪೧	ವೆಂಕಟಪತಿದೇವ	ವರ್ಗಪಾಲಕರಾದ ಅವತಿನಾಡ ಪ್ರಭು ಯಿಮ್ಮಡಿ ಭೈರೇಗೌಡ	ಸಲ್ಲುವ ವಡಿಗೆ ಹಳ್ಳಿ ಸ್ಥಳ ಎ.ಕ.ಸಂ. ೧೦, ಕೋಲಾರ ಶಾ.ಸ. ೩೧, ಶಿಡ್ಲಘಟ್ಟ ಪು. ೧೮೮
೪.	೧೬೪೪	ವೀರ ವೆಂಕಟಪತಿ ದೇವ	ಮಹಾನಾಯಕಾ ಚಾರ್ಯ ಬಾಗುಳಿ ಯ ವೋಬಯ್ಯ ನಾಯಕರ ಮಗ ಬಸವಯ್ಯ ನಾಯಕ	ಹಸ್ತಿನವತಿ ವಳಿತದ ಆಳ್ವಿಕೆ ಶಾ.ಸ. ೬೯೫, ಎಸ್ಐಐ ಪು. ೬೮೬, ವ್ಯಾ. ೯ ಭಾಗ-೨

ಒಂದನೇ ಶ್ರೀರಂಗದೇವರಾಯನ ಕಾಲದ ನಾಯಕತನಗಳು

ಕ್ರ.ಸಂ.	ವರ್ಷ	ರಾಜ	ನಾಯಕ	ಸೀಮೆ/ನಾಡು
೧.	೧೫೭೨	೧ನೇ ರಂಗದೇವ ರಾಯ ಮಹಾರಾಯ	ಮಹಾಮಂಡಲೇಶ್ವರ ಶ್ರೀಪತಿ ರಾಜವಲ್ಲಭ ರಾಜಯ್ಯ ದೇವ	ಅಮರನಾಯಕತನಕ್ಕೆ ಸಲ್ಲುವ ಬೂದಿಹಾಳು ಸೀಮೆ, ಬಿ.ಎಲ್. ರೈಸ್ (ಸಂ). ಎ.ಕ.ಸಂ. ೧೨ ಶಾ.ಸ. ೮, ತಿಪಟೂರು, ಪು. ೨೦೦-೨೦೧
೨.	೧೫೮೦	೧ನೇ ಶ್ರೀರಂಗ	ಮಹಾಮಂಡಲೇಶ್ವರ ರಾಮರಾಜಯ್ಯ ತಿಂಮರಾಜಯ್ಯನ ಮಗ ಚಿನ್ನ ತಿಮ್ಮ ರಾಜು	ಅಮರ ಮಾಗಣಿಯಾಗಿ ಸಲ್ಲುವ ಕಾಮದೇವನ ಹಳ್ಳಿ, ಬಿ.ಎಲ್. ರೈಸ್ (ಸಂ), ಎ.ಕ.ಸಂ. ೧೦ ಶಾ.ಸ. ೧೫೩, ಪು. ೩೨
೩.	೧೫೮೩	ಶ್ರೀರಂಗ ದೇವ	ಯರಕೃಷ್ಣ ನಾಯಕ	ನಾಯಕತನಕ್ಕೆ ಪಾಲಿಸಿದ ವಸುಧಾರೆ ಸೀಮೆ ಎ.ಕ.ಸಂ. ೯, ಬೇಲೂರು ೨೧೯, ಪು. ೨೦೪

ಮೂರನೇ ಶ್ರೀರಂಗದೇವರಾಯನ ಕಾಲದ ನಾಯಕತನಗಳು

೧.	೧೬೪೦	೩ನೇ ಶ್ರೀರಂಗರಾಯ	ದೇವಪ್ಪನಾಯಕ	ದೇವಲಾಪುರ ಸೀಮೆ ಎ.ಕ.ಸಂ. ೭, ಪು. ೧೫೪ ಮೈ.ಎ.ಎ.
೨.	೧೬೪೪	೩ನೇ ಶ್ರೀರಂಗರಾಯ	ಓಬಿರಾಜ ರಮಣ ರಾಜಯ್ಯ ದೇವ	ಅಮರ ಉಂಬಳಿಯಾಗಿ ಪಾಲಿಸಿದ ಕೋಳಾಲ ಸೀಮೆ ಬಿ.ಎಲ್. ರೈಸ್ (ಸಂ) ಎ.ಕ.ಸ.೧೦, ಶಾ.ಸ. ೧೬೩ ಪು. ೧೩೫
೩.	೧೬೪೭	೩ನೇ ಶ್ರೀರಂಗನಾಯಕ	ಹದಿನಾಡ ಸೀಮೆಯ ಪ್ರಭು ತಿರುಮಲ ರಾಯನ ಕುಮಾರ ಲಿಂಗರಂಜೆಯ್ಯ	ಯಳಂದೂರು ನಾಯಕತನ ಶಾ.ಸ. ೧೭೦, ಎ.ಕ.ಸಂ. ೪, ಪು. ೩೭೨
೪.	೧೬೫೧	೩ನೇ ಶ್ರೀರಂಗರಾಯ	ವೆಂಕಟಾದ್ರಿ ನಾಯಕ	ವಸುಧಾರೆ ಸೀಮೆಯ ನಾಯಕತನದ ಎ.ಕ.ಸಂ. ೯, ಶಾ.ಸ. ೨೧೯ ಪು. ೨೦೪, ಮೈ.ಎ.ಎ.

೫.	೧೬೫೫	೩ನೇ ಶ್ರೀರಂಗರಾಯ	ಹಂಡೆ ಹನುಮ ನಾಯಕ ಅಯ್ಯ	ಆದವಾನಿ ದುರ್ಗ ಎಸ್ಐಐ ನಂ. ೬೮೪ ಪು. ೬೭೬, ವ್ಯಾ-೯ ಭಾಗ-೨
೬	೧೬೫೬	೩ನೇ ಶ್ರೀರಂಗರಾಯ	ದೇವರಾಜ ಪೊಡೆಯ	ಸಲ್ಲುವ ಗುಂಡ್ಲುಪೇಟೆ ಶಾ.ಸ. ೨೦೨, ಪು. ೧೫೦
೭	೧೬೬೨	೩ನೇ ಶ್ರೀರಂಗರಾಯ	ವೆಂಕಟಾದ್ರಿ ನಾಯಕ	ಅಮರ ಮಾಗಣಿಯಾಗಿ ಪಡೆದ ಬೇಲೂರು ಸೀಮೆ ಶಾ.ಸ. ೮, ಅರಕಲಗೂಡು ಎ.ಕ.ಸಂ. ೮, ಪು. ೧೦೬ ಮೈ.ವಿ.ವಿ.
೮.	೧೬೬೫	೩ನೇ ಶ್ರೀರಂಗರಾಯ	ಮಹಾನಾಯಕಾಚಾರ್ಯ ವಿಯಾಂಕ ಭೀಮ ಚೌಡೇರ ಚೌಡಿಕೆಯ ಚವಡಪ್ಪ ಒಡೆಯರ ಪುತ್ರ ತಿಮ್ಮನಾಯಕನ ಮಗ ನರಸಪ್ಪ ನಾಯಕ	ಎ.ಕ.ಸಂ. ೧೦, ಶಾ.ಸ.೩ ಗೌರಿಬಿದನೂರು ಪು. ೨೨೬
೯.	೧೬ನೇ ಶತಮಾನ	೩ನೇ ಶ್ರೀರಂಗರಾಯ ಜಯಪನಾಯಕ ಕೃಷ್ಣಪ್ಪನಾಯಕ ನೀಡಿದ ಅಮರ ಮಾಗಣಿ	ರಾಜಯದೇವ ಮಹಾ ಅರಸ	ಅಮರ ಮಾಗಣಿಯಾಗಿ ಪಾಲಿಸಿದ ಸಾಲಿಗ್ರಾಮದ ಸ್ಥಳ ಬಿ.ಎಲ್. ರೈಸ್ (ಸಂ) ಹಾಸನ-೭೭, ಎ.ಕ.ಸಂ. ೮ ಪು. ೨೮೮, ಮೈ.ವಿ.ವಿ. ಪುನರ್ಮುದ್ರಣ
೧೦.	೧೬೯೩	ರಂಗರಾಯ ಮಹಾರಾಯ	ಸುಗಟೂರು ಮುಮ್ಮಡಿ ಚಿಕ್ಕರಾಯ ತಮ್ಮ ಗೌಡರ ಪುತ್ರ ಮುಮ್ಮಡಿ ಚಿಕ್ಕರಾಯ ತಮ್ಮಗೌಡ	ಆನೇಕಲ್ಲು, ಎ.ಕ.ಸಂ. ೯ ಹೊಸಕೋಟೆ ಶಾ.ಸ. ೧೦೫, ಪು. ೨೨೧-೨೨೨
೧೧.	೧೭೦೦	ಶ್ರೀರಂಗರಾಯ	ಮಹಾನಾಯಕಾಚಾರ್ಯ ತಿಂಮ್ಮಣ್ಣ ನಾಯಕ	ಎ.ಕ.ಸಂ.೧೨, ತುಮಕೂರು ಪು. ೪೬

೧೨.	೧೭೧೨	೩ನೇ ಶ್ರೀರಂಗರಾಯ	ಮುಮ್ಮಡಿ ಕೆಂಪೇಗೌಡ ಪುತ್ರ ಮುಮ್ಮಡಿ ವೀರಪ್ಪ ಗೌಡ	ಎ.ಕ.ಸಂ. ೯, ಶಾ.ಸ. ೪೨ ಪು. ೧೧೬
೧೩.		೩ನೇ ಶ್ರೀರಂಗರಾಯ	ಮುಮ್ಮಡಿ ಕೆಂಪೇಗೌಡ ಅಮರ ನಾಯಕ	ಮಾಗಡಿ ಎ.ಕ.ಸಂ. ೯, ಶಾ.ಸ. ೩೦ ಪು. ೧೧೧
೧೪.	೧೬ನೇ ಶತಮಾನ	೩ನೇ ಶ್ರೀರಂಗ	ಕೃಷ್ಣಪ್ಪ ನಾಯಕ	ಮಾಗಣಿಯಾಗಿ ಸಲ್ಲುವ ಹೊಳೆನರಸೀಪುರ ಸೀಮೆ ಎ.ಕ.ಸಂ.೮, ಶಾ.ಸ. ೧೨೭ ಪು. ೯೩
೧೫.	೧೬೭೧	ಮೂರನೇ ವೆಂಕಟಪತಿದೇವ	ಹರತಿ ವೀರ ಹೊಟ್ಟೆಂಣ ನಾಯಕ	ದೊಡ್ಡೇರಿ, ಸಿರೆ, ತಾವರೆಗೆರೆ ಹಿರಿಯೂರು, ಆಯಿಮಂಗಲ, ನಿಡುಗಲ್ಲು ದುರ್ಗಗಳ ನಾಯಕತನ ಎ.ಕ.ಸಂ.೧೨, ತುಮಕೂರು ಬಿ.ಎಲ್.ರೈಸ್ ಆವೃತ್ತಿ ಪು. ಶಾ.ಸ.
೧೬.	೧೬೭೧	ಮೂರನೇ ವೆಂಕಟಪತಿ	ಮಹಾನಾಯಕಾ ಚಾರ್ಯ ಮತ್ತಿ ನಡುವಿನ ದೊಡ್ಡಣ್ಣ ನಾಯಕ ಅಮರ ನಾಯಕ	ಬಿ.ಎಲ್. ರೈಸ್ (ಸಂ) ಎ.ಕ.ಸ.೧೧, ಹೊಳಲ್‌ಕೆರೆ ಶಾ.ಸ. ೮೮, ಪು. ೩೭೨
೧೬.	೧೭ನೇ ಶತಮಾನ	(?)	ಲಕ್ಷ್ಮಪ್ಪ ನಾಯಕನ ಪುತ್ರ ನಾರಸಿಂಹ ನಾಯಕ	ನಾಯಕತನಕ್ಕೆ ಸಲ್ಲುವ ಕಡೇಮಲ್ಲನಹಳ್ಳಿ ಎ.ಕ.ಸಂ.೮, ಶಾ.ಸಂ. ೧೧೭ ಹೊಳೆನರಸೀಪುರ, ಮೈ.ವಿ.ವಿ.

ಮೇಲಿನ ಕೋಷ್ಟಕದಲ್ಲಿ ಕೊಡಲಾಗಿರುವ ಸಂಗಮ, ಸಾಳುವ, ತುಳುವ ಮತ್ತು ಅರವೀಡು ಕಾಲದ ನಾಯಕರು ಮತ್ತು ಅವರಿಗೆ ಪಾಲಿಸಿದ ನಾಯಕತನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ವಿಜಯನಗರ ಕಾಲದಲ್ಲಿ ಸಂಗಮರ ಕಾಲದಿಂದ ನಾಯಕತನ ನೀಡುವುದು ವಂಶಪಾರಂಪರ್ಯವಾಗಿತ್ತು ಎಂಬ ಅಂಶ ಮನದಟ್ಟಾಗುತ್ತದೆ. ಉದಾಹರಣೆಯಾಗಿ ಸಂಗಮ ವಂಶದ ಒಂದನೇ ಬುಕ್ಕರಾಯನ ಕಾಲದಲ್ಲಿ ತೆಪ್ಪದ ನಾಗಂಣವೊಡೆಯನು ಹೊಯ್ಸಳನಾಡ ವಳಿತವನ್ನು ಉಂಬಳಿಯಾಗಿ ಪಡೆಯುತ್ತಾನೆ.

ಹಾಗೂ ಇವನು ಕ್ರಿ.ಶ. ೧೩೯೦ರಲ್ಲಿ ೨ನೇ ಹರಿಹರರಾಯನಿಂದ ನಿಗರಲಿ ಚೋಳಮಂಡಲವನ್ನು ನಾಯಕತನಕ್ಕಾಗಿ ಪಡೆದುಕೊಂಡನು. ಕ್ರಿ.ಶ. ೧೩೯೨ರಲ್ಲಿ ೨ನೇ ಹರಿಹರರಾಯನಿಂದ ತೆಪ್ಪದ ನಾಗಂಣ ವೊಡೆಯನ ಮೊಮ್ಮಗ ತಿರುಮಲನಾಥ ದೇವನು ನಾಯಕತನಕ್ಕಾಗಿ ಗಣ ತಿರುಮಲಾಪುರವನ್ನು ಪಡೆದುಕೊಂಡನು. ಒಂದನೇ ದೇವರಾಯನ ಕಾಲದಲ್ಲಿ ತೆಪ್ಪದ ಮಾದಂಣ ವೊಡೆಯನು ಕ್ರಿ.ಶ. ೧೪೧೩ರಲ್ಲಿ ನಾಯಕತನಕ್ಕಾಗಿ ಗೋದುಮಲೆ ನಾಡನ್ನು ಪಡೆದುಕೊಂಡನು. ಕ್ರಿ.ಶ. ೧೪೪೪ರಲ್ಲಿ ತೆಪ್ಪದ ಮುದ್ದೆ ನಾಯಕನ ಮಗ ನಾಗೆಯ ನಾಯಕ ಇಮ್ಮಡಿ ದೇವರಾಯನಿಂದ ದೇವಲಾಪುರವನ್ನು ನಾಯಕತನಕ್ಕೆ ಪಡೆದುಕೊಂಡನು. ಸಂಗಮರ ಕಾಲದಲ್ಲಿ ತೆಪ್ಪದ ನಾಗಂಣ ವೊಡೆಯನ ಕುಟುಂಬದ ನಾಯಕರು ಪ್ರಭಾವಶಾಲಿ ಪ್ರಮುಖ ನಾಯಕರಾಗಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಅದರಂತೆ ಸಂಗಮರ ಕಾಲದಲ್ಲಿ ಜುಂಜೋಬ ನಾಯಕನ ಮಗ ಹಿರಿಯ ಮುದಿಯ ನಾಯಕ ೧೪೧೦ರಲ್ಲಿ ಒಂದನೇ ದೇವರಾಯನಿಂದ ಹಿರಸು ನಾಡನ್ನು ನಾಯಕತನಕ್ಕಾಗಿ ಪಡೆದರೆ ಮುದಿಯ ನಾಯಕನ ಮಗ ಜುಂಜಿ ನಾಯಕನು ಮೊರಸು ನಾಡನ್ನು ಕ್ರಿ.ಶ. ೧೪೧೨ರಲ್ಲಿ ನಾಯಕತನಕ್ಕಾಗಿ ಪಡೆದುಕೊಂಡನು. ತುಳುವರ ಕಾಲದಲ್ಲಿ ಬೇಲೂರು ನಾಯಕರು ಪ್ರಭಾವಶಾಲಿ ನಾಯಕರಾಗಿದ್ದು ವಿಜಯನಗರದ ಅರಸರಿಂದ ವಿವಿಧ ಕಾಲಘಟ್ಟಗಳಲ್ಲಿ ನಾಯಕತನಗಳನ್ನು ಪಡೆದಿರುವುದು ಇದಕ್ಕೆ ನಿದರ್ಶನವಾಗಿ ಹಾಗೂ ತುಳುವ ಮತ್ತು ಅರವೀಡು ಮನೆತನದ ಕೊನೆಯ ದೊರೆ ರಂಗರಾಯನ ಕಾಲದವರೆಗೂ ಅಮರನಾಯಕರಾಗಿ ಬೇಲೂರು ನಾಯಕರು ಮುಂದುವರಿದು ನಾಯಕತನಕ್ಕಾಗಿ ಸೀಮೆಗಳನ್ನು ಪಡೆದು ಸಾಮಂತಿಕೆಯನ್ನು ಮುಂದುವರಿಸಿಕೊಂಡು ಹೋದರು. ತುಳುವರ ಕಾಲದಲ್ಲಿ ಯಲಹಂಕ ನಾಡಪ್ರಭುಗಳು, ನಂದ್ಯಾಲದ ಮಹಾಮಂಡಲೇಶ್ವರರಾದ ಅವುಬಳದೇವನ ವಂಶಿಕರು ಹಾಗೂ ಸಾಳುವ ಗೋವಿಂದರಾಜನ ವಂಶಿಕರು ವಿವಿಧ ಕಾಲಘಟ್ಟದಲ್ಲಿ ನಾಯಕತನಕ್ಕಾಗಿ ಸೀಮೆಗಳನ್ನು ಪಡೆದಿರುವುದು ಈ ಮೇಲಿನ ಕೋಷ್ಟಕದಿಂದ ಸ್ಪಷ್ಟವಾಗುತ್ತದೆ. ಅದರಂತೆ ಅರವೀಡು ಮನೆತನದಲ್ಲಿ ಸುಗಟೂರು ನಾಡಪ್ರಭುಗಳು ಪ್ರಭಾವಶಾಲಿಗಳಾಗಿದ್ದು ನಾಯಕತನಕ್ಕಾಗಿ ವಂಶಪಾರಂಪರ್ಯವಾಗಿ ಸೀಮೆಗಳನ್ನು ಪಡೆಯುತ್ತಾ ಹೋದರು. ಒಟ್ಟಿನಲ್ಲಿ ಸಂಗಮರ ಕಾಲದಿಂದ ಅರವೀಡು ಕಾಲದವರೆಗೆ ನಾಯಕತನಗಳನ್ನು ನೀಡುವುದು ವಂಶಪಾರಂಪರ್ಯವಾಗಿ ಕಾಣಿಸಿಕೊಂಡರೂ ಅದು ಕೇವಲ ದಕ್ಷ, ಪ್ರಬಲ ನಾಯಕರ ಮನೆತನಗಳಿಗೆ ಮಾತ್ರ ಸೀಮಿತವಾಗಿತ್ತು ಎಂಬ ಅಂಶವನ್ನು ಗಮನಿಸಬೇಕಾಗುತ್ತದೆ.

ಈ ಮೇಲಿನ ಕೋಷ್ಟಕವನ್ನು ಅವಲೋಕಿಸಿದಾಗ ವಿಜಯನಗರದ ಅರಸರು ನಾಯಕತನಕ್ಕಾಗಿ ಸೀಮೆಗಳನ್ನು ನೀಡುವಾಗ ದಕ್ಷತೆಯನ್ನು ಗಮನಿಸಿ ನೀಡಿದರೂ ನಾಯಕರಿಗೆ ತಮ್ಮ ಆಳ್ವಿಕೆ ಸೀಮೆಗಳಲ್ಲಿ ಬಲವಾಗಿ ನೆಲೆಯೂರಲು ಅವಕಾಶಗಳನ್ನು ನೀಡದೆ ಪದೇ ಪದೇ ವರ್ಗಾವಣೆಗಳನ್ನು ಶಿಕ್ಷೆಯ ಅಥವಾ ಬಹುಮಾನಗಳ ರೂಪದಲ್ಲಿ ನೀಡಿದ್ದಾರೆ. ನಾಯಕರನ್ನು ಸೀಮೆಗಳಿಂದ ಸೀಮೆಗೆ ಪದೇ ಪದೇ ವರ್ಗಾಯಿಸುತ್ತಿದ್ದರ ಉದ್ದೇಶ ನಾಯಕರು ತಮ್ಮ ಆಡಳಿತ ಪ್ರದೇಶಗಳಲ್ಲಿ ರಾಜಕೀಯವಾಗಿ ಭದ್ರವಾದ ಅಸ್ತಿತ್ವವನ್ನು ಪಡೆಯಬಾರದೆಂಬ ಮುಂದಾಲೋಚನೆಯಿಂದ ಪ್ರಬಲ ನಾಯಕರಿಗೆ

ನಾಯಕತನಕ್ಕಾಗಿ ನೀಡಿದ ಸೀಮೆಗಳಿಂದ ಪದೇ ಪದೇ ವರ್ಗಾವಣೆ ಮಾಡಲಾಗುತಿತ್ತು. ಉದಾಹರಣೆಗೆ ಸಂಗಮರ ಕಾಲದಲ್ಲಿ ತೆಪ್ಪದ ನಾಗಂಣವೊಡೆಯನು ಹೊಯ್ಸಳ ನಾಡ ವಳಿತದಿಂದ ಕ್ರಿ.ಶ. ೧೩೯೦ರಲ್ಲಿ ನಿಗಿರಲಿ ಚೋಳಮಂಡಲಕ್ಕೆ ನಾಯಕನಾಗಿ ವರ್ಗಾವಣೆಯಾಗುತ್ತಾನೆ. ಅದರಂತೆ ತುಳುವರ ಕಾಲದಲ್ಲಿ ಸಾಳುವ ಗೋವಿಂದರಾಜನು ೧೫೧೩ರಲ್ಲಿ ಕೃಷ್ಣದೇವರಾಯನಿಂದ ತೆರಕಣಾಂಬಿ ಸೀಮೆಗೆ ನಾಯಕನಾಗಿ ನಿಯುಕ್ತಿಗೊಂಡು ೧೫೧೭ರಲ್ಲಿ ಮೂಗೂರು ಸ್ಥಳಕ್ಕೆ ನಾಯಕನಾಗಿ ವರ್ಗಾವಣೆಗೊಂಡನು. ಕ್ರಿ.ಶ. ೧೫೨೧ರಲ್ಲಿ ಕುಡುಗನಾಡಿಗೆ ನಾಯಕನಾಗಿ ಸ್ಥಳಾಂತರಗೊಂಡನು. ಕ್ರಿ.ಶ. ೧೫೨೨ರಲ್ಲಿ ಉಮ್ಮತ್ತೂರು ರಾಜ್ಯಕ್ಕೆ ನಾಯಕನಾಗಿ ವರ್ಗಾವಣೆಗೊಂಡಿರುವುದು ಶಾಸನೋಕ್ತ ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಹಾಗೆಯೇ ಕೃಷ್ಣದೇವರಾಯನ ಕಾಲದಲ್ಲಿ ಬೇಲೂರನ್ನು ಅಮರ ಮಾಗಣಿಯನ್ನಾಗಿ ಪಡೆದು ಕ್ರಿ.ಶ. ೧೫೩೦ರಲ್ಲಿ ನಾಯಕನಾಗಿ ನಿಯುಕ್ತಿಗೊಂಡ ಕೃಷ್ಣಪ್ಪನಾಯಕನು ಕ್ರಿ.ಶ. ೧೫೪೪ರಲ್ಲಿ ಬಾದಾಮಿ ಸೀಮೆಯನ್ನು, ೧೫೪೭ರಲ್ಲಿ ತಾವರೆಗೆರೆ ಸೀಮೆಯನ್ನು, ೧೫೪೭ರಲ್ಲಿ ಮೊರಬದ ಸೀಮೆಯನ್ನು, ೧೫೪೭ರಲ್ಲಿ ಕೊಟ್ಟೂರು ಸೀಮೆಯನ್ನು ನಾಯಕತನಕ್ಕಾಗಿ ಪಡೆದನು. ಹಾಗೂ ೧೫೪೮ರಲ್ಲಿ ಕೊಂಟೆನೂರು ಸೀಮೆಯನ್ನು ನಾಯಕತನಕ್ಕಾಗಿ ಪಡೆದನು. ಸದಾಶಿವರಾಯನ ಕಾಲದಲ್ಲಿ ಮಹಾಮಂಡಲೇಶ್ವರನಾದ ಅವುಬಳದೇವನು ಕ್ರಿ.ಶ. ೧೫೪೫ರಲ್ಲಿ ಉಮ್ಮತ್ತೂರು ಸೀಮೆಯ ನಾಯಕತನವನ್ನು ಪಡೆದುಕೊಂಡನು. ಕ್ರಿ.ಶ. ೧೫೫೪ರಲ್ಲಿ ಹದಿನಾಡು ಸೀಮೆಗೆ ನಾಯಕನಾಗಿ ವರ್ಗಾವಣೆಗೊಂಡನು. ಅಚ್ಯುತರಾಯನ ಕಾಲದಲ್ಲಿ ಕೊಂಡಮರಸನು ಕ್ರಿ.ಶ. ೧೫೨೫ರಲ್ಲಿ ಬುರುಡೆಕುಂಟೆ ಸೀಮೆಗೆ ನಾಯಕನಾಗಿ ನಿಯುಕ್ತಗೊಂಡು ೧೫೩೯ರಲ್ಲಿ ಗುಯ್ಯಲೂರು ಸೀಮೆಗೆ ನಾಯಕನಾಗಿ ವರ್ಗಾವಣೆಗೊಂಡನು. ಕ್ರಿ.ಶ. ೧೫೩೯ರಲ್ಲಿ ರಘುಪತಿ ರಾಜವೊಡೆಯನು ವಸುಧಾರೆ ಸೀಮೆಗೆ ನಾಯಕನಾಗಿ ನೇಮಕಗೊಂಡನು. ಕ್ರಿ.ಶ. ೧೫೫೩ರ ವೇಳೆಗೆ ಹಾಸನ ಸೀಮೆಗೆ ನಾಯಕನಾಗಿ ವರ್ಗಾವಣೆಗೊಂಡನು.

ಸದಾಶಿವರಾಯನ ಕಾಲದಲ್ಲಿ ೧೫೪೪ರಲ್ಲಿ ನಂದ್ಯಾಲದ ನಾರಯ್ಯದೇವನು ಹದಿನಾಡು ಸೀಮೆಯ ನಾಯಕನಾಗಿ ನೇಮಕಗೊಂಡು ಮರು ವರ್ಷವೇ ಅಂದರೆ ೧೫೪೫ರಲ್ಲಿ ಶ್ರೀರಂಗಪಟ್ಟಣ ಸೀಮೆಯ ನಾಯಕನಾಗಿ ನಿಯುಕ್ತಿಗೊಂಡನು. ಸದಾಶಿವರಾಯನ ಕಾಲದಲ್ಲಿ ಆಯನಮಲುಕ ವೊಡೆಯನು ತಲಕಾಡು ಸೀಮೆಯ ನಾಯಕತ್ವವನ್ನು ಕ್ರಿ.ಶ. ೧೫೫೫ರಲ್ಲಿ ಪಡೆದುಕೊಂಡನು. ೧೫೬೩ರಲ್ಲಿ ದುಮ್ಮಿ ಸೀಮೆಗೆ ನಾಯಕನಾಗಿ ವರ್ಗಾವಣೆಗೊಂಡನು. ಕೆಳದಿಯ ಸದಾಶಿವ ನಾಯಕನು ೧೫೫೭ರಲ್ಲಿ ಹೊನ್ನಾವಳಿ ಸೀಮೆಯನ್ನು ಅಮರ ಮಾಗಣಿಯಾಗಿ ಪಡೆದುಕೊಂಡು ನಾಯಕನಾಗಿ ನೇಮಕಗೊಂಡರೆ ಕ್ರಿ.ಶ. ೧೫೬೯ರ ವೇಳೆಗೆ ಅರಗ, ಗುತ್ತಿ, ಮೂವತ್ತಾರು ಕಂಪಣ, ತುಳುರಾಜ್ಯ, ಬಾರಕೂರು, ಮಂಗಳೂರು, ಐಯಿವತ್ತಾರು ಗ್ರಾಮಗಳನ್ನು ಬಹುಮಾನದ ರೂಪದಲ್ಲಿ ಅಮರಮಾಗಣಿಯಾಗಿ ಪಡೆದುಕೊಂಡನು. ಕ್ರಿ.ಶ. ೧೫೬೮ರಲ್ಲಿ ಕಾಮಗೇತಿ ಕಸ್ತೂರಿ ಮೇದಕೇರಿ ತಿಮ್ಮಣ್ಣ ನಾಯಕನು ಹೊಳಲ್ಕೆರೆಯನ್ನು ಅಮರ ಮಾಗಣಿಯನ್ನಾಗಿ ಪಡೆದನು. ನಂತರ ಹಿರಿಯೂರು, ಚಿತ್ರದುರ್ಗಗಳಿಗೆ ನಾಯಕನಾಗಿ ನಿಯುಕ್ತಿಗೊಂಡನು.

ಕ್ರಿ.ಶ. ೧೬೩೩ರಲ್ಲಿ ವೀರರಾಮದೇವರಾಯನಿಂದ ಇಮ್ಮಡಿ ಜಗದೇವರಾಯ ವೊಡೆಯನು ಚನ್ನಪಟ್ಟಣ ಸೀಮೆಯ ನಾಯಕತನವನ್ನು ಪಡೆದುಕೊಂಡನು. ಕ್ರಿ.ಶ. ೧೬೮೩ರಲ್ಲಿ ಹೊಯ್ಸಳ ನಾಡನ್ನು ಅಮರಕ್ಕೆ ಪಡೆದನು.

ಒಟ್ಟಿನಲ್ಲಿ ವಿಜಯನಗರ ಕಾಲದಲ್ಲಿ ಅಮರನಾಯಕರಿಗೆ ವರ್ಗಾವಣೆಗಳಿತ್ತು ಎಂಬುದು ಅಂಕಿ ಅಂಶಗಳಿಂದ ಸ್ಪಷ್ಟವಾಗುತ್ತದೆ. ವಿಜಯನಗರ ಕಾಲದಲ್ಲಿ ನಾಯಕ ವ್ಯವಸ್ಥೆಯು ಜನಪ್ರಿಯ ಆಡಳಿತ ವ್ಯವಸ್ಥೆಯಾಗಿ ಜಾರಿಗೆ ಬರಲು ಅದು ಅಳವಡಿಸಿಕೊಂಡ ನೀತಿಗಳಿಂದಲೇ. ಸ್ಥಳೀಯ ಆಡಳಿತದಲ್ಲಿ ಊಳಿಗಮಾನ್ಯ ದೊರೆಗಳನ್ನಾಗಿ ನಾಯಕರನ್ನು ರೂಪಿಸುವಲ್ಲಿ ಈ ವ್ಯವಸ್ಥೆ ಯಶಸ್ವಿಯಾಯಿತು. ಕೆಲವು ನಾಯಕರು ಸೀಮೆಗಳಿಂದ ಸೀಮೆಗೆ ಪದೇ ಪದೇ ವರ್ಗಾವಣೆಯಾದರೂ ಅತ್ಯಂತ ಪ್ರಭಾವಶಾಲಿಗಳಾದರು. ಅರವೀಡು ಮನೆತನದಲ್ಲಿ ನಾಯಕ ಪದ್ಧತಿಯಲ್ಲಿ ವರ್ಗಾವಣೆ ತೀರಾ ಕಡಿಮೆಯಾಗಿದ್ದರಿಂದ ನಾಯಕರು ತಾವು ನಾಯಕತನಕ್ಕಾಗಿ ಪಡೆದ ಸೀಮೆಗಳಲ್ಲಿ ಅತ್ಯಂತ ಪ್ರಭಾವಶಾಲಿಗಳಾಗಿ ರೂಪಗೊಳ್ಳಲು ಹಾಗೂ ರಾಜಕೀಯವಾಗಿ ಸ್ವತಂತ್ರ ರಾಜ ಪ್ರಭುತ್ವಗಳಾಗಿ ರೂಪಾಂತರಗೊಳ್ಳುವಲ್ಲಿ ಪ್ರಮುಖ ಕಾರಣವಾಯಿತು. ತುಳುವ ಮತ್ತು ಅರವೀಡು ಮನೆತನದ ಅವಧಿಯಲ್ಲಿ ನಾಯಕತನವನ್ನು ಪಡೆದ ಚಿತ್ರದುರ್ಗ, ಮತ್ತೋಡು, ನಾಯಕನಹಟ್ಟಿ, ಯಲಹಂಕ, ಚನ್ನಪಟ್ಟಣ, ಮಿಡಿಗೇಸಿ, ಹಂಡೆ, ಗುಡೇಕೋಟೆ, ಬಸವಪಟ್ಟಣ, ಬೇಲೂರು, ಕೆಳದಿ ಮೊದಲಾದ ನಾಯಕರು ವಿಜಯನಗರೋತ್ತರ ಕಾಲದಲ್ಲಿ ಪಾಳೆಯಗಾರರಾಗಿ ರಾಜಕೀಯ ಮುಂಚೂಣಿಗೆ ಬರಲು ವಿಜಯನಗರ ಕಾಲದ ನಾಯಕ ಪದ್ಧತಿಯೇ ಕಾರಣವೆಂದೂ ಹೇಳಬಹುದು.

೩.೨ ಅಮರನಾಯಕರ ಕರ್ತವ್ಯಗಳು

ದೆಹಲಿ ಸುಲ್ತಾನರ ಕಾಲದ ಇಖ್ತಾದಾರರು, ಪಶ್ಚಿಮ ಭಾರತದಲ್ಲಿನ ಜಾಗೀರುದಾರರು, ಮೊಗಲರ ಕಾಲದ ಜಾಮೀನುದಾರರು ಮಧ್ಯಯುಗೀನ ಯುರೋಪಿನ ಊಳಿಗಮಾನ್ಯ ದೊರೆಗಳು ಅಧಿಕಾರದ ಸ್ಥಾನಮಾನ ಮತ್ತು ಕರ್ತವ್ಯಗಳ ನಿರ್ವಹಣೆಯಲ್ಲಿ ವಿಜಯನಗರ ಕಾಲದ ಅಮರನಾಯಕರನ್ನು ಹೋಲುತ್ತಾರೆ. ವಿಜಯನಗರ ಕಾಲದ ಅಮರನಾಯಕರು ಭಾಗಶಃ ಸೈನ್ಯ ಹಾಗೂ ಕಂದಾಯ ಕರ್ತವ್ಯಗಳನ್ನು ಹೊಂದಿದ್ದು ತಮ್ಮ ಆಳ್ವಿಕೆಯ ಪ್ರದೇಶದಲ್ಲಿ ಆಸ್ತಿಯ ಹಕ್ಕುಗಳಿಗೆ ವಾರಸುದಾರಿಕೆಯನ್ನು ಅರವೀಡು ಮನೆತನದ ಅಧಿಕಾರವಧಿಯಲ್ಲಿ ಪಡೆದುಕೊಂಡರು. ವಿಜಯನಗರ ಕಾಲದ ಅಮರನಾಯಕ ಕರ್ತವ್ಯಗಳನ್ನು ಈ ಕೆಳಗಿನಂತೆ ವಿವರಿಸಬಹುದು.

೧. ಸೇನಾ ಮತ್ತು ಹಣಕಾಸಿನ ಕರ್ತವ್ಯಗಳು

ಅಮರನಾಯಕರು ಕೇಂದ್ರ ಸರಕಾರದ ನಿರಂತರ ಸಂಪರ್ಕದಲ್ಲಿರುತ್ತಿದ್ದರು. ವಿಜಯನಗರದ ಅರಸರು ತಮ್ಮ ಪ್ರತಿನಿಧಿಗಳನ್ನು ಅಮರನಾಯಕರ ಆಸ್ಥಾನದಲ್ಲಿಟ್ಟಿರುತ್ತಿದ್ದರು. ಈ ಕಾರ್ಯಕರ್ತರು ಕೇಂದ್ರ ಹಾಗೂ ಪ್ರಾಂತ್ಯಗಳ ನಡುವೆ ಸಮನ್ವಯ ಅಧಿಕಾರಿಗಳಾಗಿ ಸೇವೆಯನ್ನು ಸಲ್ಲಿಸುತ್ತಿದ್ದರು.

ಉದಾ. ಚಿತ್ರದುರ್ಗ ಸಂಸ್ಥಾನದ ಕಾರ್ಯಕರ್ತರಾಗಿ ರಾಮರಾಜಯ್ಯ ಮತ್ತು ತಿರುಮಲರಾಜಯ್ಯನವರು ವಿಜಯನಗರದೊಂದಿಗೆ ಸಂಪರ್ಕದಲ್ಲಿದ್ದರು. ಕೇಂದ್ರವು ಯುದ್ಧಗಳನ್ನು ಕೈಗೊಂಡಾಗ ಅಮರನಾಯಕರು ಕೇಂದ್ರಕ್ಕೆ ಮೀಸಲಿಟ್ಟ ಸೈನಿಕ ನೆರವನ್ನು ನೀಡುತ್ತಿದ್ದಲ್ಲದೇ ಹಲವಾರು ಯುದ್ಧಗಳಲ್ಲಿ ಭಾಗಿಯಾಗಿ ಸೇನಾ ದಂಡನಾಯಕರಾಗಿ ಯುದ್ಧಗಳನ್ನು ಗೆಲ್ಲಿಸಿಕೊಡುತ್ತಿದ್ದರು. ಕೇಂದ್ರಕ್ಕೆ ಅತ್ಯವಶ್ಯಕವಾದ ಯುದ್ಧದಲ್ಲಿ ಹೋರಾಡುವ ಯೋಧರ ಜೊತೆಗೆ ಅಶ್ವದಳ, ಗಜದಳವನ್ನು ಒದಗಿಸುತ್ತಿದ್ದರು. ಈ ಬಗೆಯ ಸೇನಾ ಕರ್ತವ್ಯಗಳನ್ನು ಅಮರನಾಯಕರು ಕಡ್ಡಾಯವಾಗಿ ನಿಭಾಯಿಸಲೇಬೇಕಿತ್ತು.

ಅಮರನಾಯಕರು ಒದಗಿಸುವಂತಹ ಸೇನಾ ಬಲವು ಅವರ ಅಮರಂಗಳ ಆದಾಯಕ್ಕೆ ಅನುಗುಣವಾಗಿ ಇರುತ್ತಿತ್ತು. ವಿದೇಶಿ ಪ್ರವಾಸಿಗರಾದ ನ್ಯೂನಿಜ್ ಮತ್ತು ಪಯಾಸ್ ಅವರ ದಿನಚರಿಗಳು ಇದಕ್ಕೆ ಸಮರ್ಥನೆಯನ್ನು ನೀಡುತ್ತವೆ. ಫಯಾಸನು ಹೇಳುವಂತೆ ರಾಜ್ಯದಲ್ಲಿ ಅನೇಕ ಸರದಾರರಿದ್ದಾರೆ. ಅವರು ರಾಜ್ಯದ ನಾನಾ ಭಾಗಗಳ ಅಧಿಪತಿಗಳಾಗಿ ರಾಜನು ಹೇಳಿದಷ್ಟು ಸೈನ್ಯವನ್ನು ಇಟ್ಟುಕೊಂಡಿರುತ್ತಾರೆ. ರಾಜನು ಹೇಳಿದಾಗ ಸೈನ್ಯವನ್ನು ಕಳುಹಿಸುತ್ತಾರೆ. ಸೈನ್ಯವನ್ನು ಇಟ್ಟುಕೊಳ್ಳುವುದಲ್ಲದೆ ನಾನಾ ಅಧಿಪತಿಗಳು ರಾಜನಿಗೆ ಪ್ರತಿವರ್ಷ ಕಪ್ಪ ಕಾಣಿಕೆಗಳನ್ನು ಕೊಡುತ್ತಾರೆ. ಈ ಹಣದಿಂದ ರಾಜನು ತನ್ನದೇ ಆದ ಸೈನ್ಯವನ್ನು ಇಟ್ಟುಕೊಂಡಿದ್ದಾನೆ. ಅಲ್ಲದೇ ರಾಜನ ಬಳಿ ಎಂಟುನೂರು ಆನೆಗಳು, ಐನೂರು ಕುದುರೆಗಳು ಇವೆ. ಬಿಸನಗರದಿಂದ ಬರುವ ಉತ್ಪತ್ತಿಯಿಂದ ಈ ಆನೆ ಕುದುರೆಗಳ ಖರ್ಚು ತೂಗುತ್ತದೆ.

ಅಮರನಾಯಕರು ಸೈನಿಕ ಸೇವೆಯನ್ನು ಒದಗಿಸುವುದರ ಜೊತೆಗೆ ರಾಜನಿಗೆ ಪ್ರತಿ ವರ್ಷವೂ ಕಪ್ಪವನ್ನು ಕೊಡಬೇಕಾಗಿತ್ತು. ಪ್ರತಿವರ್ಷ ಸೆಪ್ಟಂಬರ್ ತಿಂಗಳಿಗೆ ಮೊದಲ ಒಂಬತ್ತು ದಿನಗಳಲ್ಲಿ ಅವರು ರಾಜನಿಗೆ ಎಷ್ಟು ಹಣ ಕೊಡಬೇಕು ಎಂಬುದನ್ನು ರಾಜನೇ ನಿರ್ಧರಿಸುತ್ತಾನೆ. "ಇಷ್ಟೆ ಅಲ್ಲದೆ ಈ ರಾಜನಿಗೆ ಪುತ್ರ ಅಥವಾ ಪುತ್ರಿ ಜನಿಸಿದಾಗಲೆಲ್ಲ ರಾಜ್ಯದ ಅವನ ಎಲ್ಲ ಮನೆಯವರು ಹಣ ಮತ್ತು ಬೆಲೆಯುಳ್ಳ ರತ್ನಗಳ ಕಾಣಿಕೆಯನ್ನು ಸಲ್ಲಿಸುವರು. ಮತ್ತು ಪ್ರತಿವರ್ಷವೂ ಅವನ ಜನ್ಮದಿನದಂದು ಹಾಗೆಯೇ ಮಾಡುವರು ಎಂದು ಫಯಾಸನ ಬರವಣಿಗೆಯಿಂದ ತಿಳಿದುಬರುತ್ತದೆ. ಈ ಕರ್ತವ್ಯಗಳ ಜೊತೆಗೆ ಹೊಸ ವರ್ಷದ ಆರಂಭ ದಿನ ರಾಜನಿಗೆ ದೊಡ್ಡ ದೊಡ್ಡ ಹಣದ ರೂಪದ ಕಾಣಿಕೆಗಳನ್ನು ಅರ್ಪಿಸಲಾಗುತ್ತಿತ್ತು. ಆ ದಿನ ರಾಜನಿಗೆ ಐನೂರು ಸಾವಿರ ಸುವರ್ಣ ಪದಕಗಳನ್ನು ಕೊಡುತ್ತಾರೆಂದು ಹೇಳಲಾಗಿದೆ.

ಒಟ್ಟಿನಲ್ಲಿ ಅಮರನಾಯಕರು ತಮ್ಮ ಆಡಳಿತ ಪ್ರದೇಶದಲ್ಲಿ ಕಾಡುಗಳನ್ನು ಕಡಿಸಿ ಕೃಷಿ ಭೂಮಿಯನ್ನಾಗಿ ಪರಿವರ್ತಿಸಿ ಕೃಷಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತಿದ್ದರು. ಕೆರೆ, ಕಾಲುವೆ, ಬಾವಿಗಳ ನಿರ್ಮಾಣದ ಹಿಂದಿನ ಉದ್ದೇಶ ಕೃಷಿ ಚಟುವಟಿಕೆಗಳನ್ನು ವಿಸ್ತರಿಸುವುದೇ ಆಗಿತ್ತು. ಉದಾ. ಯಲಹಂಕದ ನಾಡಪ್ರಭು ಕೆಂಪೇಗೌಡನು ಬೆಂಗಳೂರಿನಲ್ಲಿ ಕೆರೆಗಳನ್ನು ನಿರ್ಮಿಸಿ ಕೃಷಿ ಚಟುವಟಿಕೆಗಳಿಗೆ ಉತ್ತೇಜನ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು. ಅದರಂತೆ ಚಿತ್ರದುರ್ಗ, ಮಿಡಿಗೇಶಿ,

ಮಧುಗಿರಿ, ಗುಮ್ಮನಾಯಕ ಪಾಳೆಯ, ಜರಿಮಲೆ, ಗುಡೇಕೋಟೆ, ಪಾವಗಡ, ರತ್ನಗಿರಿ, ನಾಯಕನಹಟ್ಟಿ ಪಾಳೆಯಗಾರರ ಕಾಲದಲ್ಲಿ ಅಸಂಖ್ಯಾತ ಕೆರೆ ಕಾಲುವೆಗಳು ನಿರ್ಮಾಣಗೊಂಡಿದ್ದು ಈ ಕೆರೆಗಳ ಅಸ್ತಿತ್ವ ಇಂದಿಗೂ ಇರುವುದನ್ನು ಗಮನಿಸಬಹುದು.

ಅಮರನಾಯಕರು ಕೃಷಿ ಚಟುವಟಿಕೆಗಳ ವಿಸ್ತರಣೆಯ ಜೊತೆಗೆ ವ್ಯಾಪಾರ ವಾಣಿಜ್ಯಾಭಿವೃದ್ಧಿಗೂ ಅಪಾರ ಪ್ರೋತ್ಸಾಹವನ್ನು ನೀಡುತ್ತಿದ್ದರು. ಯಲಹಂಕದ ನಾಡಪ್ರಭು ಹಿರಿಯ ಕೆಂಪೇಗೌಡ ಬೆಂಗಳೂರಿನಲ್ಲಿ ಅನೇಕ ಪೇಟೆಗಳನ್ನು ನಿರ್ಮಿಸಿ ದೇಶದ ವಿವಿಧ ಭಾಗಗಳಿಂದ ವರ್ತಕರು ಬಂದು ಬೆಂಗಳೂರಿಗೆ ನೆಲೆಸುವಂತೆ ಮಾಡಿದನು. ಗುಡೇಕೋಟೆಯ ಪಾಳೆಯಗಾರರು ಸಹ ತಮ್ಮ ಆಡಳಿತಾವಧಿಯಲ್ಲಿ ವ್ಯಾಪಾರ ವಾಣಿಜ್ಯ ಚಟುವಟಿಕೆಗಳಿಗೆ ವಿಶೇಷ ಪ್ರೋತ್ಸಾಹ ನೀಡಿದರು. ಗುಮ್ಮನಾಯಕ ಪಾಳೆಯಗಾರ ಚಿನ್ನಗುಮ್ಮನಾಯಕ ಗುಮ್ಮನಾಯಕ ಪಾಳೆಯದಲ್ಲಿ ವರ್ತಕರು ನೆಲೆಸುವಂತೆ ಮಾಡಿ ಅವರಿಗೆ ವಿಶೇಷ ರಿಯಾಯಿತಿಗಳನ್ನು ನೀಡಿದ್ದ.

ಹೀಗೆ ವಿಜಯನಗರ ಕಾಲದ ಅಮರನಾಯಕರು ತಮ್ಮ ತಮ್ಮ ಸಂಸ್ಥಾನಗಳಲ್ಲಿ ಕೃಷಿ, ವಾಣಿಜ್ಯ, ವ್ಯಾಪಾರ ವಹಿವಾಟುಗಳನ್ನು ಅಭಿವೃದ್ಧಿಗೊಳಿಸಿ ಆ ಮೂಲಕ ವಿಜಯನಗರ ಸಾಮ್ರಾಜ್ಯದ ಆರ್ಥಿಕ ಬಲಾಢ್ಯತೆಗೆ ಕಾರಣರಾಗಿದ್ದರು. ಅಮರನಾಯಕರು ಸಲ್ಲಿಸುತ್ತಿದ್ದ ವಾರ್ಷಿಕ ಪೊಗಾದಿಯಿಂದಲೇ ವಿಜಯನಗರ ಸಾಮ್ರಾಜ್ಯವು ತನ್ನ ಶಕ್ತಿಯನ್ನು ವೃದ್ಧಿಸಿಕೊಂಡಿದೆ ಎಂದರೂ ತಪ್ಪಾಗಲಾರದು.

೨. ಪ್ರಾಂತ್ಯಗಳಲ್ಲಿ ಶಾಂತಿ ಮತ್ತು ಶಿಸ್ತು ಪಾಲನೆ ಕಾಯುವುದು ಅಮರನಾಯಕರ ಕರ್ತವ್ಯವಾಗಿತ್ತು.

ಅಮರನಾಯಕರು ಪ್ರಾಂತ್ಯಗಳಲ್ಲಿ ಸ್ವಾಯತ್ತತೆಯನ್ನು ಪಡೆದಿದ್ದರೂ ಕೆಲವು ಸಂದರ್ಭಗಳಲ್ಲಿ ಕೇಂದ್ರ ಸರ್ಕಾರದ ನಿರ್ದೇಶನಗಳನ್ನು ಚಾಚುತಪ್ಪದೇ ಪರಿಪಾಲಿಸಬೇಕಿತ್ತು. ಕೇಂದ್ರದ ಆದೇಶ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿದವರನ್ನು ಕಠಿಣವಾಗಿ ಶಿಕ್ಷೆಗೆ ಗುರಿ ಮಾಡಲಾಗುತ್ತಿತ್ತು. ಅವಿಧೇಯತೆ ತೋರಿದ ನಾಯಕರನ್ನು ಹುದ್ದೆಯಿಂದ ತೆಗೆಯಲಾಗುತ್ತಿತ್ತು. ಇಲ್ಲವೇ ಬಹುದೂರದ ಪ್ರದೇಶಗಳಿಗೆ ವರ್ಗಾವಣೆ ಮಾಡಲಾಗುತ್ತಿತ್ತು. ಕೆಲವೊಮ್ಮೆ ಕೇಂದ್ರ ಪ್ರಭುತ್ವದ ಸಾಮರ್ಥ್ಯವನ್ನು ಅವಲಂಬಿಸಿ ಅಮರನಾಯಕರ ಸ್ಥಾನಮಾನಗಳು ನಿರ್ಧರಿಸಲ್ಪಡುತ್ತಿದ್ದವು. ಕೇಂದ್ರದಲ್ಲಿ ರಾಜರು ದುರ್ಬಲರಾಗಿದ್ದಾಗ ನಾಯಕರು ಸ್ವತಂತ್ರವಾಗಿ ಅಧಿಕಾರವನ್ನು ಅನುಭವಿಸುತ್ತಿದ್ದರು. ಹಾಗೂ ವಿಜಯನಗರದ ರಾಜಕೀಯ ಅಂತಃಕಲಹಗಳಲ್ಲಿ ಅಮರನಾಯಕರು ಹಸ್ತಕ್ಷೇಪವನ್ನು ಮಾಡುತ್ತಿದ್ದರು. ಉದಾ. ಅಳಿಯ ರಾಮರಾಯನು ವಿಜಯನಗರದ ಹಲವಾರು ನಾಯಕರ ಬೆಂಬಲದಿಂದ ಸರ್ವಾಧಿಕಾರಿಯಾಗಿ ತಲೆಎತ್ತಿದ. ಹೀಗಾಗಿ ಪ್ರಬಲರಾಗಿದ್ದ ನಾಯಕರೊಂದಿಗೆ ಉತ್ತಮ ಸಂಬಂಧಗಳನ್ನು ಹೊಂದಿರುವುದು ವಿಜಯನಗರದ ಅರಸರಿಗೆ ಅನಿವಾರ್ಯವೂ ಆಗಿತ್ತು. ಈ ಅನಿವಾರ್ಯತೆಯೇ ಮುಂದೆ ವಿಜಯನಗರದ ಪತನಕ್ಕೂ ಕಾರಣವಾಯಿತು.

೩. ವಿಜಯನಗರದ ಕಾರ್ಯಕರ್ತರಾಗಿ ಅಮರನಾಯಕರ ಕರ್ತವ್ಯಗಳು

ಅಮರನಾಯಕ ಪದ್ಧತಿಯಲ್ಲಿ ನಾಯಕರೇ ಮಧ್ಯವರ್ತಿಗಳಾಗಿ (ಶಾಸನಗಳಲ್ಲಿ ಇವರನ್ನು ಕಾರ್ಯಕರ್ತರು ಎಂದು ಉಲ್ಲೇಖಿಸಲಾಗಿದೆ) ರಾಜ ಮತ್ತು ಜನರ ಮಧ್ಯೆ ನಿರ್ಣಾಯಕ ಪಾತ್ರವನ್ನು ವಹಿಸುತ್ತಿದ್ದರು. ರಾಜ ಮತ್ತು ಜನತೆಯ ನಡುವೆ ಸಂಪರ್ಕ ಸೇತುವೆಗಳಂತಿದ್ದರು. ವಿಜಯನಗರದ ಅರಸನಿಂದ ಉಂಬಳಿಯಾಗಿ ಭೂಮಿಯನ್ನು ಪಡೆದು ಆ ಭೂಮಿಯ ಎಲ್ಲ ವ್ಯವಹಾರಗಳನ್ನು ಅಮರನಾಯಕರೇ ನೋಡಿಕೊಳ್ಳುತ್ತಿದ್ದರು. ಜನತೆಯಿಂದ ಕಂದಾಯವನ್ನು ಸಂಗ್ರಹಿಸುವುದು, ತಮ್ಮ ಅಧೀನ ನಾಯಕರನ್ನು ನೇಮಿಸಿಕೊಳ್ಳುವುದು, ಅಧೀನ ನಾಯಕರಿಗೆ ಬ್ರಾಹ್ಮಣರಿಗೆ ದೇವಾಲಯಗಳಿಗೆ ಭೂಮಿಯನ್ನು ದಾನವಾಗಿ ನೀಡುತ್ತಿದ್ದರು. ಅಮರನಾಯಕರು ತಮ್ಮ ಆಡಳಿತ ವ್ಯಾಪ್ತಿಯ ಅಮರಂ ಪ್ರದೇಶಗಳಲ್ಲಿ ಧಾರ್ಮಿಕ ಮತ್ತು ಶೈಕ್ಷಣಿಕ ಕೆಲಸ ಕಾರ್ಯಗಳನ್ನು ಮಾಡುವುದು, ಕೆರೆ ಕಾಲುವೆಗಳನ್ನು ನಿರ್ಮಿಸುವುದು, ಅಗ್ರಹಾರಗಳನ್ನು ನಿರ್ಮಿಸುವುದು ಅಮರ ನಾಯಕರ ಕರ್ತವ್ಯವಾಗಿತ್ತು. ಅಮರನಾಯಕರು ತಾವು ಯಾರಿಂದ ನಾಯಕತ್ವವನ್ನು ಪಡೆದುಕೊಂಡಿರುತ್ತಾರೆಯೋ ಅವರಿಗೆ ನಿಷ್ಠೆಯನ್ನು ವ್ಯಕ್ತಪಡಿಸುತ್ತಿದ್ದರು. ಉದಾ. ವಿಜಯನಗರ ಅರಸ ಸದಾಶಿವರಾಯನ ಕಾರ್ಯಕರ್ತರಾಗಿದ್ದ (ಮಹಾಮಂಡಲೇಶ್ವರರು) ರಾಮರಾಜಯ್ಯ ತಿರುಮಲರಾಜಯ್ಯ ಮಹಾ ಅರಸರುಗಳಿಂದ ಚಿತ್ರದುರ್ಗದ ಮತ್ತಿ ತಿಮ್ಮಣ್ಣನಾಯಕ ನಾಯಕತ್ವವನ್ನು ಪಡೆದುಕೊಂಡಿದ್ದನ್ನು ಹೊಳಲ್ಕೆರೆಯ ಗೋಪಾಲಕೃಷ್ಣ ಸ್ವಾಮಿ ದೇವಾಲಯದ ಶಾಸನವು ಸ್ಪಷ್ಟಪಡಿಸುತ್ತದೆ. ನಂತರ ಇವನ ಮಗ ಓಬಣ್ಣನಾಯಕ (ಒಂದನೇ ಮೆದಕೇರಿ ನಾಯಕ) ವಿಜಯನಗರದ ಅಳಿಯ ರಾಮರಾಯನಿಂದ ನೇರವಾಗಿ ನಾಯಕತನವನ್ನು ಪಡೆದುಕೊಂಡಿದ್ದ. ಹಾಗೆಯೇ ಅರವೀಡು ಮನೆತನದ ವೆಂಕಟಪತಿರಾಯರ ಕಾಲದಲ್ಲಿ ಚಿತ್ರದುರ್ಗದ ಕಾಮಗೇತಿ ಚಿಕ್ಕಣ್ಣನಾಯಕ ವೆಂಕಟಪತಿಯ ಕಾರ್ಯಕರ್ತನಾಗಿದ್ದನ್ನು ಕೋಗುಂಡಿಯ ಶಿಲಾಶಾಸನವು ಸ್ಪಷ್ಟಪಡಿಸುತ್ತದೆ. ಸದಾಶಿವರಾಯನ ಮಹಾಮಂಡಲೇಶ್ವರ ರಾಮರಾಜ ರಾಜಯ್ಯನವರ ಕಾರ್ಯಕರ್ತ ರಾಜಯ್ಯದೇವ ಮಹಾದೇವ ಅರಸುಗಳ ಹದಿನಾಡು ಸೀಮೆಯ ರಾಜಯ್ಯನಾಯಕನಿಗೆ ಉಂಬಳಿಯಾಗಿ ನೀಡಿದ ಗ್ರಾಮದ ವಿವರಗಳನ್ನು ಚಾಮರಾಜನಗರ ಜಿಲ್ಲೆಯ ಶಾಸನವು ಸ್ಪಷ್ಟಪಡಿಸುತ್ತದೆ.

ಒಟ್ಟಿನಲ್ಲಿ ವಿಜಯನಗರಕ್ಕೆ ಕಾಯಕರ್ತರಾಗಿ ಮಹಾಮಂಡಲೇಶ್ವರರು, ಮಹಾಮಂಡಲೇಶ್ವರರಿಗೆ ಕಾರ್ಯಕರ್ತರಾಗಿ ಉಪನಾಯಕರು ಕಾರ್ಯನಿರ್ವಹಿಸುತ್ತಿದ್ದರು. ಕೆಲವೊಮ್ಮೆ ಅಮರನಾಯಕರೇ ವಿಜಯನಗರ ಅರಸರಿಗೆ ನೇರವಾಗಿ ಕಾರ್ಯಕರ್ತರಾಗಿ ಕಾರ್ಯನಿರ್ವಹಿಸುತ್ತಿದ್ದರು. ವಿಜಯನಗರದ ಸಾರ್ವಭೌಮರಂತೆ ಅಮರನಾಯಕರು ಕೂಡ ತಮ್ಮ ಅಮರಂಗಳಲ್ಲಿ ದೊರೆಗಳಂತೆ ವರ್ತಿಸುತ್ತಿದ್ದರು. ಆದ್ದರಿಂದಲೇ ನಿಕೋಲಸ್ ಡರ್ಕ್ಸ್ ಅವರು ಅವರನ್ನು ತುಂಡರಸರು (ಸಣ್ಣ ಅರಸರು) ಎಂದು ಕರೆದಿದ್ದಾರೆ.

೩.೩ ಅಮರನಾಯಕ ಪದ್ಧತಿ ಸೈದ್ಧಾಂತಿಕ ವಿಶ್ಲೇಷಣೆ

ಕ್ರಿ.ಶ. ೧೩೩೬ರಲ್ಲಿ ಅಸ್ತಿತ್ವಕ್ಕೆ ಬಂದ ವಿಜಯನಗರ ಸಾಮ್ರಾಜ್ಯ ದಕ್ಷಿಣ ಭಾರತದ ಬಹುಪಾಲು ಭೂ ಪ್ರದೇಶವನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿತ್ತು. ಸಾಮ್ರಾಜ್ಯದ ವಿಸ್ತರಣೆ, ಆರ್ಥಿಕ ಸಂಪನ್ಮೂಲಗಳ ಕ್ರೋಢೀಕರಣ ಸಾಮ್ರಾಜ್ಯದ ಬಲವರ್ಧನೆಗೆ ಅಗತ್ಯವಾದ ಯುದ್ಧಗಳಿಂದಾಗಿ ವಿಜಯನಗರವು ಅಳವಡಿಸಿಕೊಂಡ ಆಡಳಿತ ವ್ಯವಸ್ಥೆಯೇ ಅಮರನಾಯಕ ಪದ್ಧತಿ. ಈ ಪದ್ಧತಿಯಿಂದಾಗಿ ವಿಜಯನಗರವು ತನ್ನ ಸಾಮ್ರಾಜ್ಯದೆಲ್ಲಡೆ ಆಂತರಿಕವಾದ ಶಾಂತಿ ಸಮೃದ್ದಿಯನ್ನು ಹೆಚ್ಚಿಸಿಕೊಳ್ಳಲು ಕಾರಣವಾಯಿತು. ಅಮರನಾಯಕ ಪದ್ಧತಿಯು ಪ್ರಾದೇಶಿಕ ಮಟ್ಟದಲ್ಲಿ ಜಾರಿಯಲ್ಲಿದುದರಿಂದ ಸಾಮ್ರಾಜ್ಯದೆಲ್ಲಡೆ ಆಂತರಿಕವಾದ ಶಾಂತಿ ಸಮೃದ್ದಿಯನ್ನು ಹೆಚ್ಚಿಸಿಕೊಳ್ಳಲು ಕಾರಣವಾಯಿತು. ಇದರ ಜೊತೆಗೆ ಸಾಮ್ರಾಜ್ಯದೆಲ್ಲಡೆ ಸಾಮಾಜಿಕ ಸೌಹಾರ್ದ ಕೃಷಿ ಸಂಪತ್ತು, ಒಳನಾಡು ಮತ್ತು ಹೊರನಾಡು ವಾಣಿಜ್ಯಗಳು ಪುರೋಗತಿಯನ್ನು ಸಾಧಿಸಿದವು. ಹೀಗಾಗಿ ವಿಜಯನಗರ ಸಾಮ್ರಾಜ್ಯವು ಆರ್ಥಿಕವಾಗಿ ಪ್ರಬಲತೆಯನ್ನು ಸಾಧಿಸುತ್ತ ದೇಶ ವಿದೇಶಗಳಲ್ಲಿ ತನ್ನ ಖ್ಯಾತಿಯನ್ನು ಹೆಚ್ಚಿಸಿಕೊಂಡಿತು. ಇದಕ್ಕೆಲ್ಲ ಕಾರಣವಾಗಿದ್ದು ವಿಜಯನಗರದ ರಕ್ಷಣಾ ಗೋಡೆಗಳಂತೆ ಸಾಮ್ರಾಜ್ಯವನ್ನು ಸಂರಕ್ಷಿಸಿ ಆರ್ಥಿಕವಾಗಿ ಸಬಲವಾಗುವಂತೆ ಮಾಡಿದ ಅಮರನಾಯಕ ಪದ್ಧತಿಯಿಂದಾಗಲೇ. ಆದುದರಿಂದಲೇ ವಿಜಯನಗರದ ಸಾರ್ವಭೌಮರು ಅಮರನಾಯಕ ಪದ್ಧತಿಯನ್ನು ಪೋಷಿಸಿದರು ಹಾಗೂ ಈ ವ್ಯವಸ್ಥೆಗೆ ಬೆನ್ನುಲುಬಾಗಿ ನಿಂತುಕೊಂಡರು. ಆದುದರಿಂದ ವಿಜಯನಗರ ಸಾಮ್ರಾಜ್ಯದ ಸ್ವರೂಪವನ್ನು ವಿಶ್ಲೇಷಿಸಿದಾಗ ಮಾತ್ರ ಅಮರನಾಯಕ ವ್ಯವಸ್ಥೆಯನ್ನು ಸೈದ್ಧಾಂತಿಕವಾಗಿ ವಿಶ್ಲೇಷಣೆಗೆ ಒಳಪಡಿಸಲು ಸಾಧ್ಯ.

ವಿಜಯನಗರದ ರಾಜಕೀಯ ಆಡಳಿತ ರಚನೆಯಲ್ಲಿ ಸರ್ಕಾರದ ಸ್ವರೂಪ ಹೇಗಿತ್ತು ಎಂಬುದನ್ನು ಬಹುತೇಕ ವಿದ್ವಾಂಸರು ವಿಶ್ಲೇಶಿಸಿದ್ದಾರೆ. ಅವರುಗಳಲ್ಲಿ ಪ್ರಮುಖರಾದವರೆಂದರೆ ಕೆ.ಎ. ನೀಲಕಂಠಶಾಸ್ತ್ರಿ ಮತ್ತು ಕೃಷ್ಣಸ್ವಾಮಿ ಅಯ್ಯರ್. ನೀಲಕಂಠ ಶಾಸ್ತ್ರಿಯವರು A History of South india from Historic time to the fall of the Vijyanagara ಎಂಬ ಕೃತಿಯಲ್ಲಿ ವಿಜಯನಗರ ಸಾಮ್ರಾಜ್ಯವು ಬಲಯುತವಾದ ಕೇಂದ್ರ ಸರಕಾರದಲ್ಲಿಯೇ ಕ್ರೋಢೀಕರಣಗೊಂಡಿತ್ತು ಎಂದಿದ್ದಾರೆ. ಕೇಂದ್ರದ ನಿರ್ದೇಶನಗಳನ್ನು ಪ್ರಾಂತ್ಯಗಳು ಚಾಚುತಪ್ಪದೇ ಪರಿಪಾಲಿಸಬೇಕಾಗಿತ್ತು. ವಿಜಯನಗರದ ಅರಸರು ನಿಜವಾದ ಸಾರ್ವಭೌಮರಾಗಿದ್ದು ಅಧಿಕಾರವನ್ನು ತಮ್ಮಲ್ಲಿಯೇ ಕೇಂದ್ರೀಕರಿಸಿಕೊಂಡಿದ್ದರು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.[೨೩]

ನೀಲಕಂಠ ಶಾಸ್ತ್ರಿಯವರ ಅಭಿಪ್ರಾಯವನ್ನು ಕೃಷ್ಣಸ್ವಾಮಿ ಅಯ್ಯರ್ ತಮ್ಮ ಕೃತಿಯಾದ some contribution of south india to Indian culture ಎಂಬ ಕೃತಿಯಲ್ಲಿ ಸಹಮತ ವ್ಯಕ್ತಪಡಿಸಿದ್ದಾರೆ.

ಇದಕ್ಕೆ ತದ್ವಿರುದ್ಧವಾಗಿ ವೆಂಕಟರಮಣಯ್ಯನವರು ತಮ್ಮ ಕೃತಿಯಾದ Further sources of Vijayanagara Dynasty ಎಂಬುದರಲ್ಲಿ ವಿಜಯನಗರ ಸಾಮ್ರಾಜ್ಯವು ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಒಳಗೊಂಡಿತ್ತು ಎಂದಿದ್ದಾರೆ. ಇವರು ವಿಜಯನಗರ ಸಾಮ್ರಾಜ್ಯದಲ್ಲಿ ಪ್ರಾದೇಶಿಕ

ಮಟ್ಟದಲ್ಲಿ ಜಾರಿಯಲ್ಲಿದ್ದ ಅಮರನಾಯಂಕರ ವ್ಯವಸ್ಥೆಯನ್ನು ವಿಶ್ಲೇಷಿಸಿ ಈ ಅಭಿಪ್ರಾಯಕ್ಕೆ ಬರುತ್ತಾರೆ. ವೆಂಕಟರಮಣಯ್ಯನವರು ವಿಜಯನಗರದ ಮೂಲ ಸಂಸ್ಥಾಪಕರಾದ ಸಂಗಮ ಸಹೋದರರು ಮೂಲತಃ ಆಂಧ್ರ ಪ್ರದೇಶದ ಕರಾವಳಿಯಿಂದ ಬಂದ ತೆಲುಗರು ಎಂದು ವಾದಿಸುತ್ತ ತೆಲುಗು ಪ್ರಾಂತ್ಯದ ಕಾಕತೀಯ ರಾಜ್ಯದ ಆಡಳಿತ ಮಾದರಿಯನ್ನು ಕರ್ನಾಟಕವನ್ನು ವಶಪಡಿಸಿಕೊಂಡ ತೆಲುಗರು ಅನುಷ್ಠಾನಗೊಳಿಸುತ್ತಾರೆ. ಕಾಕತೀಯ ರಾಜ್ಯದಲ್ಲಿದ್ದ ಪ್ರಮುಖ ಭೂ ಹಿಡುವಳಿ ಪದ್ಧತಿಯಾದ ನಾಯಕರ ಹಾಗೂ ಹಳ್ಳಿಯ ನೌಕರರು ವೇತನ ಪಡೆಯುತ್ತಿದ್ದ ಆಯಾಗಾರ ಪದ್ಧತಿಯನ್ನು ಕಾಕತೀಯ ಆಡಳಿತ ಮಾದರಿಗೆ ಮತ್ತು ವಿಜಯನಗರದ ಆಡಳಿತ ಮಾದರಿಗೆ ತಾಳೆಹೊಂದುವ ಕಾರಣವನ್ನಾಗಿ ನೀಡುತ್ತಾರೆ.[೨೪]

ಪ್ರೊ. ಲಕ್ಷ್ಮಣ್ ತೆಲಗಾವಿಯವರು ೭೭ ಪಾಳೆಯಗಾರರು ಎಂಬ ತಮ್ಮ ಕೃತಿಯಲ್ಲಿ ಕಾಕತೀಯ ಅರಸ ಪ್ರತಾಪರುದ್ರನು ಕಾಕತೀಯ ಸಾಮ್ರಾಜ್ಯವನ್ನು ತನ್ನ ೭೭ ನಾಯಕರಿಗೆ ವಿಭಾಗಿಸಿಕೊಟ್ಟು ಆಡಳಿತ ಸುಧಾರಣೆಗೆ ಶ್ರಮಿಸಿದ ನಂತರ ಈ ನಾಯಂಕರ ವ್ಯವಸ್ಥೆಯನ್ನು ವಿಜಯನಗರದವರು ಅನುಸರಿಸಿದರೆಂದು ಹೇಳಿದ್ದಾರೆ. ಹೀಗಾಗಿ ತೆಲಗಾವಿಯವರು ಸಹ ವೆಂಕಟರಮಣಯ್ಯನವರಂತೆ ವಿಜಯನಗರವು ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಒಳಗೊಂಡಿತ್ತು ಎಂಬುದಕ್ಕೆ ಸಹಮತವನ್ನು ವ್ಯಕ್ತಪಡಿಸುತ್ತಾರೆ.[೨೫]

ಡಾ.ಎ.ವಿ ವೆಂಕಟರತ್ನಂ ಅವರು ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರಕಾರಗಳು ಎಂಬ ಕೃತಿಯಲ್ಲಿ ಕೇಂದ್ರದಲ್ಲಿ ಕೇಂದ್ರ ಸರ್ಕಾರದ ಜೊತೆಗೆ ಪ್ರಾಂತ್ಯಗಳಲ್ಲಿ ಭಾಗಶಃ ಸ್ವಾತಂತ್ರ್ಯವನ್ನು ಹೊಂದಿದ್ದ ಸಾಮಂತರಿದ್ದರಿಂದ ವಿಜಯನಗರ ಸಾಮ್ರಾಜ್ಯವು ಸಂಯುಕ್ತ ಊಳಿಗಮಾನ್ಯ ವ್ಯವಸ್ಥೆಯನ್ನು ಹೊಂದಿತ್ತು ಎಂಬುದನ್ನು ಸಮರ್ಥಿಸಿಕೊಂಡಿದ್ದಾರೆ.[೨೬]

ಎ. ಕೃಷ್ಣಸ್ವಾಮಿ ಅವರು ತಮ್ಮ Tamil Country under the Vijaynagara ಎನ್ನುವ ಕೃತಿಯಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಮಟ್ಟದಲ್ಲಿ ಊಳಿಗಮಾನ್ಯ ವ್ಯವಸ್ಥೆ ಇತು. ಹೀಗಾಗಿ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆ ಜಾರಿಯಲ್ಲಿತ್ತು ಎನ್ನುತ್ತಾರೆ.[೨೭]

ಬರ್ಟನ್ ಸ್ಪೈನ್‌ರವರು ತಮ್ಮ Peasant state and society in medival south india The Vijayanagara ಎಂಬ ಕೃತಿಯಲ್ಲಿ ವಿಜಯನಗರವು ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಅಳವಡಿಸಿಕೊಂಡಿತ್ತು ಎಂಬ ನೀಲಕಂಠ ಶಾಸ್ತ್ರಿಯವರ ಅಭಿಪ್ರಾಯವನ್ನು ತಳ್ಳಿ ಹಾಕುತ್ತಾರೆ. ಅದಕ್ಕೆ ಬದಲಾಗಿ ವಿಜಯನಗರ ಆಡಳಿತ ಸ್ವರೂಪಕ್ಕೆ ಸೆಗ್‌ಮೆಂಟರಿ ಸ್ಟೇಟ್ ಎಂಬ ಪರಿಕಲ್ಪನೆಯನ್ನು ನೀಡಿ ವ್ಯಾಖ್ಯಾನಿಸಲು ಪ್ರಯತ್ನಪಟ್ಟರು. ಸೆಗ್‌ಮೆಂಟರಿ ಸ್ಟೇಟ್ ಎಂದರೆ ಖಂಡಾಂತರ ರಾಜ್ಯ. ಬರ್ಟನ್ ಸ್ಪೈನ್‌ರವರ ಸೆಗ್‌ಮೆಂಟರಿ ಸ್ಟೇಟ್ ಎಂಬ ಪರಿಕಲ್ಪನೆಯು ಚೋಳ ಕೇಂದ್ರಿತವಾಗಿದ್ದು ವಿಜಯನಗರಕ್ಕೂ ಆ ಮಾದರಿಯನ್ನೇ ನೀಡಿ ಅರ್ಥೈಸುವ ಪ್ರಯತ್ನ ಮಾಡಲಾಯಿತು. ಸ್ಪೈನ್ ಅವರ ಪ್ರಕಾರ ರೈತರು ಸ್ವಾಯತ್ತತೆಯನ್ನು ಹೊಂದಿದ್ದರು ಹಾಗೂ ಹಳ್ಳಿಗಳು ಸ್ವತಂತ್ರ ಜೀವನವನ್ನು

ನಡೆಸುತ್ತಿದ್ದವು. ಕೇಂದ್ರ ಪ್ರಭುತ್ವವು ಇವುಗಳ ಮೇಲೆ ನಿಯಂತ್ರಣವನ್ನು ಹೊಂದಿರಲಿಲ್ಲ; ಇಲ್ಲವೇ ನಿಯಂತ್ರಣವನ್ನು ಹೊಂದುವಷ್ಟು ಅದು ಸಮರ್ಥವಾಗಿರಲಿಲ್ಲ. ನಾಡು ಎನ್ನುವ ಸ್ಥಳೀಯ ಆಡಳಿತ ಘಟಕಗಳು ಆಡಳಿತವನ್ನು ನೋಡಿಕೊಳ್ಳುತ್ತಿದ್ದವು.[೨೮]

ಆದರೆ ಸ್ಟೈನ್ ಅವರ ಈ ವಾದವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ; ಕಾರಣವಿಷ್ಟೆ ವಿಜಯನಗರದ ಸುಪ್ರಸಿದ್ಧ ಅರಸ ಕೃಷ್ಣದೇವರಾಯನ ಕಾಲದಲ್ಲಿ ಅಮರನಾಯಕ ಪದ್ಧತಿಯು ಪ್ರವರ್ಧಮಾನಕ್ಕೆ ಬಂದು ಸರಿಸುಮಾರು ಇನ್ನೂರಕ್ಕಿಂತ ಹೆಚ್ಚು ನಾಯಕರು ಪ್ರಾಂತ್ಯಗಳಲ್ಲಿ ಸ್ವಾಯತ್ತತೆಯ ಅಧಿಕಾರವನ್ನು ಹೊಂದಿದ್ದರು. ಸಾರ್ವಭೌಮನಾದ ಕೃಷ್ಣದೇವರಾಯನ ಅಧೀನಕ್ಕೆ ಒಳಪಟ್ಟಿದ್ದರು. ಸಮಕಾಲೀನ ಸಾಹಿತ್ಯ ದಾಖಲೆಗಳು ಹಾಗು ಶಾಸನಗಳು ಈ ಮಾತಿಗೆ ಪುಷ್ಟಿಯನ್ನು ನೀಡುತ್ತವೆ. ಕೃಷ್ಣದೇವರಾಯನ ಕಾಲದಲ್ಲಿ ಕೇಂದ್ರದಲ್ಲಿ ಬಲಿಷ್ಠ ಸರಕಾರವಿದ್ದರೆ ಪ್ರಾಂತೀಯ ಮಟ್ಟದಲ್ಲಿ ಅಮರನಾಯಕರೆಂಬ ಸ್ವಾಯತ್ತತ ಊಳಿಗಮಾನ್ಯ ದೊರೆಗಳ ಆಡಳಿತವಿತ್ತು. ಹೀಗಾಗಿ ಸಾರ್ವಭೌಮ ಮತ್ತು ಸಾಮಂತನ ನಡುವಿನ ಸಂಬಂಧಗಳು ಗಟ್ಟಿಗೊಂಡಿದ್ದು ಇದೇ ಅವಧಿಯಲ್ಲಿ ಪ್ರಾಂತ್ಯಗಳ ಅಮರನಾಯಕರ ಕೆಳಗಡೆ ಉಪನಾಯಕರಿರುತ್ತಿದ್ದರು. ಇದು ಸಾಮಂತೀಕರಣ ವ್ಯವಸ್ಥೆಯ ಅಡಿಯಲ್ಲಿ ಉಪ ಸಾಮಂತೀಕರಣ ಉಗಮ ಹೊಂದಲು ಈ ಪದ್ಧತಿಯು ದಾರಿ ಮಾಡಿಕೊಟ್ಟಿತು. ಹೀಗಾಗಿ ಬರ್ಟನ್ ಸ್ಟೈನ್ ಅವರ ವಾದಕ್ಕೆ ಯಾವುದೇ ರೀತಿಯ ಅರ್ಥವಿಲ್ಲವೆಂದೇ ಹೇಳಬೇಕಾಗುತ್ತದೆ. ಜಪಾನಿನ ವಿದ್ವಾಂಸನಾದ ನೊಬಾರೊ ಕರಾಷಿಮಾ ಅವರು ತಮಿಳನಾಡು ಪ್ರದೇಶದ ನಾಯಂಕರ ವ್ಯವಸ್ಥೆಯನ್ನು ಕುರಿತು ವಿಸ್ತೃತವಾಗಿ ಅಧ್ಯಯನಗಳನ್ನು ನಡೆಸಿದ್ದಾರೆ. ಇವರು ತಮ್ಮ ಪಿಎಚ್.ಡಿ., ಸಂಶೋಧನಾ ಕೃತಿಯಾದ ಕನ್‌ಕಾರಡಸ್ ಆಫ್ ನಾಯಕಸ್ ಎಂಬುದರಲ್ಲಿ ವಿಜಯನಗರವು ಕೇಂದ್ರೀಕೃತ ಮತ್ತು ವಿಕೇಂದ್ರೀಕೃತ ಅಂಶಗಳೆರಡನ್ನು ಸಮನ್ವಯ ಮಾಡಿಕೊಂಡ ಸರಕಾರ ವ್ಯವಸ್ಥೆಯನ್ನು ಹೊಂದಿತ್ತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.[೨೯]

ಕರಾಶಿಮಾ ಅವರ ವಾದಕ್ಕೆ ಸಮರ್ಥನೆಯನ್ನು ನೀಡಿದ ಸಿಂಥಿಯಾ ಟಾಲ್ಬಾಟ್ ರಾಜೇಂದ್ರ ಪ್ರಸಾದ್ ಬೋಸ್ ಬಾಬುರವರು ಆಂಧ್ರಪ್ರದೇಶದ ಕರ್ನೂಲ್, ಕಡಪ, ನೆಲ್ಲೂರು, ಪ್ರಕಾಶಂ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ನೂರಾರು ಶಾಸನಗಳನ್ನು ಅಧ್ಯಯನ ನಡೆಸಿ ಆಂಧ್ರ ಪ್ರದೇಶದ ನಾಯಕರ ಬಗ್ಗೆ ಸಂಶೋಧಿತ ಕೃತಿಗಳನ್ನು ಬರೆದಿದ್ದಾರೆ. ಈ ವಿದ್ವಾಂಸರು ಕೂಡ ವಿಜಯನಗರ ಸಾಮ್ರಾಜ್ಯವು ಕೇಂದ್ರೀಕೃತ ಮತ್ತು ವಿಕೇಂದ್ರೀಕೃತ ಮಾದರಿಯನ್ನು ಒಳಗೊಂಡ ಸಂಯುಕ್ತ ಮಾದರಿಯ ಸರಕಾರ ವ್ಯವಸ್ಥೆಯನ್ನು ಒಳಗೊಂಡಿತ್ತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.[೩೦] ವೈ. ಸುಬ್ಬರಾಯಲು, ಶಾಲಿನಿ ಸಿಂಗ್ ಸೇರಿದಂತೆ ಬಹುತೇಕ ಆಧುನಿಕ ವಿದ್ವಾಂಸರು ಸಂಯುಕ್ತ ಮಾದರಿಯ ಸರಕಾರ ವ್ಯವಸ್ಥೆಯನ್ನು ವಿಜಯನಗರ ಸಾಮ್ರಾಜ್ಯವು ಒಳಗೊಂಡಿತ್ತು ಎಂಬುದಕ್ಕೆ ಸಹಮತವನ್ನು ವ್ಯಕ್ತ ಪಡಿಸುತ್ತಾರೆ.

ಒಟ್ಟಿನಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ಕೇಂದ್ರೀಕೃತ ಸರಕಾರದ ಜೊತೆಯಲ್ಲಿಯೇ ವಿಕೇಂದ್ರೀಕೃತ ಸರಕಾರವು ಪ್ರಾಂತೀಯ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿತ್ತು ಎಂಬುದನ್ನು ಒಪ್ಪಲೇಬೇಕಾಗುತ್ತದೆ. ಕೇಂದ್ರದಲ್ಲಿ ಸಾರ್ವಭೌಮನ ಅಧಿಕಾರವಿದ್ದರೆ ಪ್ರಾಂತೀಯ ಮಟ್ಟದಲ್ಲಿ ಊಳಿಗಮಾನ್ಯ ಪ್ರಭುಗಳ ಅಧಿಕಾರವಿತ್ತು. ಹೀಗಾಗಿ ಕೇಂದ್ರೀಕೃತ ಮತ್ತು ವಿಕೇಂದ್ರೀಕೃತ ಆಡಳಿತ ಪದ್ಧತಿಗಳೆರಡೂ ವ್ಯವಸ್ಥಿತವಾಗಿ ಜಾರಿಯಲ್ಲಿದ್ದವು ಎಂಬುದನ್ನು ಹೇಳಬೇಕಾಗುತ್ತದೆ. ನೀಲಕಂಠ ಶಾಸ್ತ್ರಿಯವರಾಗಲಿ, ಕೃಷ್ಣಸ್ವಾಮಿ ಅಯ್ಯರ್ ಮತ್ತು ಬರ್ಟನ್ ಸ್ಟೈನ್ ಅವರು ತಮ್ಮ ಸಿದ್ಧಾಂತಗಳನ್ನು ಅಥವಾ ವಾದಗಳನ್ನು ಮಂಡಿಸುವಾಗ ಸಮಕಾಲೀನ ಶಾಸನಗಳನ್ನು ಸಾಹಿತ್ಯ ಆಧಾರಗಳನ್ನು ಮತ್ತು ವಿದೇಶಿ ಪ್ರವಾಸಿಗರ ದಿನಚರಿಗಳನ್ನು ಪರಿಶೀಲಿಸಿಲ್ಲವೆಂದು ಸ್ಪಷ್ಟವಾಗುತ್ತದೆ. ವಿಜಯನಗರ ಕಾಲದ ನೂರಾರು ಭೂದಾನ ಶಾಸನಗಳು ಸಾರ್ವಭೌಮ ಮತ್ತು ಸಾಮಂತನ ಸಂಬಂಧಗಳನ್ನು ಅರ್ಥೈಸಿಕೊಳ್ಳುವಲ್ಲಿ ನೆರವಾಗುತ್ತದೆ. ಸಾರ್ವಭೌಮ ಮತ್ತು ಸಾಮಂತನ ನಡುವಿನ ಕೊಡು–ಕೊಳ್ಳುವಿಕೆಯ ಸಂಬಂಧಗಳನ್ನು ಫಯಾಸ್ ಮತ್ತು ನ್ಯೂನಿಜ್‌ನ ವರದಿಗಳು ತಿಳಿಸುತ್ತವೆ. ಫಯಾಸ್ ಹೇಳುವಂತೆ ವಿಜಯನಗರ ರಾಜ್ಯದಲ್ಲಿ ಅನೇಕ ದೊಡ್ಡ ನಾಯಕರಿದ್ದಾರೆ. ಅವರು ಬಾರೀ ಐಶ್ವರ್ಯವನ್ನು ಹೊಂದಿದ್ದಾರೆ. ಈ ಸೇನಾ ನಾಯಕರು ಸೈನ್ಯಗಳ ಮೇಲೆ ಒಡೆತನವನ್ನು ಹೊಂದಿದ್ದಾರೆ. ಅವರು ರಾಜರಿದ್ದ ಹಾಗೆ; ಅವರೇ ನಗರವನ್ನು ಆಳುತ್ತಾರೆ. ಒಂದು ಮಿಲಿಯನ್ ಅಥವಾ ಒಂದೂವರೆ ಮಿಲಿಯನ್ ಪರ್ಡಾವೊಗಳ ವರಮಾನವುಳ್ಳ ನಾಯಕರಿದ್ದಾರೆ. ಇತರರು ನೂರು ಸಾವಿರ ಪರ್ಡಾವೊಗಳು, ಇನ್ನೂರು, ಮುನ್ನೂರು, ಐನೂರು ಸಾವಿರ ಪರ್ಡಾವೋಗಳ ವರಮಾನ ಪಡೆದಿದ್ದಾರೆ. ಪ್ರತಿಯೊಬ್ಬನಿಗೂ ಹೀಗೆ ವರಮಾನವಿರುವುದರಿಂದ ಅವನು ಕಾಪಾಡಬೇಕಾದ ಸೈನ್ಯದ ಸಂಖ್ಯೆಯನ್ನು ರಾಜನು ನಿಗದಿಪಡಿಸಿದ್ದಾನೆ. ಇಂತಿಷ್ಟು ಪದಾತಿ ಪಡೆ, ಕುದುರೆ, ಆನೆಗಳು ಇತ್ಯಾದಿ ಈ ಸೇನಾ ಪಡೆಗಳೂ ಯಾವಗಲೂ ಯುದ್ಧಕ್ಕೆ ಸಿದ್ಧವಾಗಿರುತ್ತವೆ. ಯಾವಾಗ ಕರೆದರೂ ಎಲ್ಲಿಗೆ ಹೋಗಬೇಕಾದರೂ ಸಿದ್ಧವಾಗಿರುತ್ತವೆ. ಹೀಗೆ ರಾಜನು ಮಿಲಿಯಗಟ್ಟಲೆ ಯೋಧರ ಪಡೆಯನ್ನು ಸದಾಕಾಲವೂ ಸಿದ್ಧವಾಗಿಟ್ಟುಕೊಂಡಿರುತ್ತಾನೆ. ಪ್ರತಿಯೊಬ್ಬ ನಾಯಕನು ಅತ್ಯುತ್ತಮ ಸೇನೆಯನ್ನು ಸಜ್ಜುಗೊಳಿಸಲು ಕಷ್ಟ ಪಡುತ್ತಾನೆ. ಏಕೆಂದರೆ ಅವರಿಗೆ ಅವನು ವೇತನವನ್ನು ಕೊಡುತ್ತಾನೆ. ಹೀಗೆ ಸೈನ್ಯವನ್ನು ಸಾಕುವುದರ ಜೊತೆಗೆ ಪ್ರತಿಯೊಬ್ಬ ನಾಯಕನು ರಾಜನಿಗೆ ವಾರ್ಷಿಕವಾಗಿ ಹಣವನ್ನು ಪಾವತಿ ಮಾಡಬೇಕು.[೨೧] ಫಯಾಸನ ಈ ಮಾಹಿತಿಯನ್ನು ಗಮನಿಸಿದಾಗ ವಿಜಯನಗರ ಸಾಮ್ರಾಜ್ಯವು ಸ್ಪಷ್ಟವಾಗಿ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಒಳಗೊಂಡಿತು ಹಾಗೂ ಅಧಿಕಾರವು ರಾಜ ಅಥವಾ ಸಾರ್ವಭೌಮನಲ್ಲಿ ಕೇಂದ್ರೀಕೃತವಾಗಿರದೆ ಸಾಮಂತರಿಗೂ ಅಮರನಾಯಕರಿಗೂ ಹಂಚಿಕೆಯಾಗುತ್ತಿತ್ತೆಂದು ಸ್ಪಷ್ಟವಾಗುತ್ತದೆ.

ನ್ಯೂನಿಜ್‌ನ ಪ್ರಕಾರ ಎಲ್ಲ ಭೂಮಿಯ ರಾಜನಿಗೆ ಸೇರಿದೆ. ಅವನಿಂದ ಭೂಮಿಯನ್ನು ಪಡೆದ ಸೇನಾ ನಾಯಕರು ಅದನ್ನು ಆಳುತ್ತಾರೆ. ಈ ರೀತಿಯಲ್ಲಿ ಬಿಸ್ನಾಗರ್ ರಾಜ್ಯವು ಇನ್ನೂರಕ್ಕೂ ಹೆಚ್ಚು ನಾಯಕರಲ್ಲಿ ವಿಭಾಗಗೊಂಡಿದೆ. ಅವರೆಲ್ಲರೂ ವಿಧರ್ಮಿಯರು ಹೊಂದಿರುವ ಭೂ

ಪ್ರದೇಶ ಮತ್ತು ಅವರಿಗಿರುವ ವರಮಾನಗಳ ಆಧಾರದಿಂದ ರಾಜನು ಅವರು ಕಾಪಾಡಲೇಬೇಕಾದ ಸೈನ್ಯದ ಪ್ರಮಾಣ ಪ್ರತಿವರ್ಷ ತನಗೆ ಕೊಡಬೇಕಾದ ವರಮಾನವನ್ನು ನಿಗದಿಪಡಿಸುತ್ತಾನೆ. ಅದನ್ನು ಅವರು ಸೆಪ್ಟೆಂಬರ್ ತಿಂಗಳ ಮೊದಲ ಒಂಬತ್ತು ದಿನಗಳವೊಳಗಾಗಿ ಪಾವತಿ ಮಾಡಬೇಕಾಗುತ್ತದೆ. ಅವರಲ್ಲಿ ನ್ಯೂನಿಜ್‌ನು ಕರ್ನಾಟಕದ ಬಂಕಾಪುರ, ಕಳಲೆ, ಮಂಗಳೂರು ಮತ್ತು ಬೂದಿಹಾಳುಗಳನ್ನು ಉಲ್ಲೇಖಿಸುತ್ತಾನೆ. ಈ ರಾಜ್ಯದ ನಾಯಕರು ಡೋಲಿಗಳನ್ನು ಬಳಸುತ್ತಾರೆ. ಪಲ್ಲಕ್ಕಿಗಳನ್ನು ಉಪಯೋಗಿಸುತ್ತಾರೆ. ಆದರೆ ಜನರು ಉತ್ತಮ ಅಶ್ವಾರೋಹಿಗಳಾಗಿದ್ದ ಹೊರತು ಡೋಲಿಗಳನ್ನು ಬಳಸುವುದಕ್ಕೆ ಅವಕಾಶವಿರುವುದಿಲ್ಲ. ನಾಯಕರು ಮತ್ತು ಗಣ್ಯ ಜನರು ರಾತ್ರಿ ವೇಳೆ ಎಣ್ಣೆಯಿಂದ ಉರಿಯುವ ಪಂಜುಗಳನ್ನು ಉಪಯೋಗಿಸುತ್ತಾರೆ. ಅವರವರ ಸ್ಥಾನಕ್ಕೆ ತಕ್ಕಂತೆ ೪ರಿಂದ ೧೨ ಪಂಜುಗಳು ಉರಿಯುತ್ತವೆ. ಅತ್ಯಂತ ಉನ್ನತ ಸ್ಥಾನದಲ್ಲಿರುವವರಿಗೆ ಹೆಚ್ಚೆಂದರೆ ೧೨ ಪಂಜುಗಳು ಉರಿಯುತ್ತವೆ.[೨] ನ್ಯೂನಿಜ್‌ನ ವರದಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ವಿಜಯನಗರ ಸಾಮ್ರಾಜ್ಯದಲ್ಲಿ ಬೇರೆ ಬೇರೆ ವರ್ಗದ ನಾಯಕರಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಆ ನಾಯಕರ ಸ್ಥಾನಮಾನಗಳಿಗೆ ತಕ್ಕಂತೆ ಆತಿಥ್ಯಾದಾರವು ದೊರೆಯುತ್ತಿತ್ತು ಎಂಬುದಾಗಿ ಇದರಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಸಾರ್ವಭೌಮ, ಸಾಮಂತ, ಉಪಸಾಮಂತ ವರ್ಗಗಳಿದ್ದಾಗ ಅಧಿಕಾರವು ವಿವಿಧ ಸ್ತರದಲ್ಲಿ ಹಂಚಿಕೆಯಾಗಿದ್ದು ವಿಕೇಂದ್ರೀಕರಣ ವ್ಯವಸ್ಥೆ ವಿಜಯನಗರ ಸಾಮ್ರಾಜ್ಯದಲ್ಲಿ ಇತ್ತು ಎಂಬುದನ್ನು ಸಮರ್ಥಿಸಬಹುದು.

ವಿಜಯನಗರ ಸಾಮ್ರಾಜ್ಯವು ಮೂಲತಃ ಮಿಲಿಟರಿ ರಾಜ್ಯವಾಗಿದ್ದು ಸದಾ ಕಾಲವು ನೆರೆಹೊರೆಯ ರಾಜ್ಯಗಳೊಂದಿಗೆ ಯುದ್ಧಗಳಲ್ಲಿ ನಿರತವಾಗಿರುತ್ತಿತ್ತು. ಯುದ್ಧಗಳಿಗೆ ಬೇಕಾದ ಸೈನ್ಯವನ್ನು ಹಾಗು ಹಣವನ್ನು ಕಂದಾಯ ರೂಪದಲ್ಲಿ ಪಾವತಿ ಮಾಡುವ ಜವಾಬ್ದಾರಿ ಅಮರನಾಯಕರದಾಗಿತ್ತು. ಹೀಗೆ ರಕ್ಷಣೆ ಮತ್ತು ಆರ್ಥಿಕ ಸದೃಢತೆ ನಾಯಕರಿಂದ ಸಿಗುತ್ತಿದ್ದರಿಂದ ವಿಜಯನಗರ ಸಾಮ್ರಾಜ್ಯವು ಈ ವ್ಯವಸ್ಥೆಯನ್ನು ಪೋಷಿಸಿತು. ಹೀಗಾಗಿ ಅಮರನಾಯಕ ಪದ್ಧತಿಯು ವ್ಯವಸ್ಥಿತವಾಗಿ ಜಾರಿಯಲ್ಲಿತ್ತು. ಈ ರೀತಿಯಲ್ಲಿ ಅಮರನಾಯಕರು ಮೂಲತಃ ಸೈನ್ಯಾಧಿಕಾರಿಗಳಾಗಿದ್ದರು. ಸೇನಾ ಸೇವೆಯನ್ನು ಸಲ್ಲಿಸುವ ಷರತ್ತಿನ ಮೇಲೆ ಅವರು ರಾಜನಿಂದ ಭೂಮಿಯನ್ನು ಪಡೆಯುತ್ತಿದ್ದರು. ಟಿ.ವಿ. ಮಹಾಲಿಂಗಂ ಅವರ ಪ್ರಕಾರ ಭೂಮಿಯೆಲ್ಲವೂ ರಾಜನಿಗೆ ಸೇರಿದ್ದು; ಅವನು ತನ್ನನ್ನು ಅವಲಂಬಿಸಿದವರಿಗೆ ಅದನ್ನು ಹಂಚುತ್ತಿದ್ದನು. ಹಾಗೇ ಭೂಮಿಯನ್ನು ರಾಜನಿಂದ ಪಡೆದುಕೊಂಡವರನ್ನು ನಾಯಕರೆಂದು ಕರೆಯುತ್ತಿದ್ದರು. ಅಮರನಾಯಕರಿಗೆ ನೀಡಲಾಗುತ್ತಿದ್ದ ಭೂಮಿಯನ್ನು ಅಮರಂಗಳೆಂದು ಕರೆಯುತ್ತಿದ್ದರು. ಈ ವ್ಯವಸ್ಥೆಯು ಸಂಪೂರ್ಣವಾಗಿ ಊಳಿಗಮಾನ್ಯ ವ್ಯವಸ್ಥೆಯ ಮೇಲೆ ಆಧರಿಸಿ ನಿಂತಿತ್ತು.

೩.೪ ವಿಜಯನಗರ ಕಾಲದ ಅಮರನಾಯಕ ಪದ್ಧತಿಯಲ್ಲಿ ಕಂಡು ಬರುವ ಊಳಿಗಮಾನ್ಯ ಅಂಶಗಳು

ಭಾರತದಲ್ಲಿ ಊಳಿಗಮಾನ್ಯ ವ್ಯವಸ್ಥೆ ಅಸ್ತಿತ್ವದಲ್ಲಿ ಇತ್ತು ಅಥವಾ ಇರಲಿಲ್ಲ. ಇದ್ದರೆ ಅದು ಯಾವ ಬಗೆಯ ಊಳಿಗಮಾನ್ಯ ವ್ಯವಸ್ಥೆಯನ್ನು ಒಳಗೊಂಡಿತ್ತು. ಎಂಬುದರ ಬಗ್ಗೆ ಬಹುದೊಡ್ಡ ಚರ್ಚೆಗಳು ನಡೆಯುತ್ತಲೇ ಇವೇ ಮಧ್ಯಕಾಲೀನ ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ರೂಢಿಯಲ್ಲಿದ್ದ ಊಳಿಗಮಾನ್ಯ ವ್ಯವಸ್ಥೆಯನ್ನು ಕುರಿತು ಬಹುತೇಕ ವಿದ್ವಾಂಸರು ಅಧ್ಯಯನಗಳನ್ನು ನಡೆಸಿದ್ದಾರೆ. ಅವರಲ್ಲಿ ಡಿ.ಡಿ. ಕೊಸಾಂಬಿ, ರಾಮ್ ಶರಣ್ ಶರ್ಮ, ವಿಜಯ್ ಕುಮಾರ್ ಠಾಕೂರ್, ಹರ್ಬನ್ಸ್ ಇರ್ಫಾನ್ ಹಬೀಬ್, ಹರ್ಮನ್ ಕುಲ್ಕೆ, ನೂರುಲ್ ಹಸಿನ್ ಡಿ.ಎನ್, ಝೂ ಬಿ.ಎಸ್.ಎಸ್ ಯಾದವ, ಬರ್ಟನ್ ಸ್ಟೈನ್, ಸುಬ್ಬರಾಯಲು ಮುಂತಾದವರು ಪ್ರಮುಖರಾಗಿದ್ದಾರೆ.[೩೩]

ಭಾರತದಲ್ಲಿ ಊಳಿಗಮಾನ್ಯ ವ್ಯವಸ್ಥೆಯ ಕುರಿತು ಅಧ್ಯಯನಗಳು ಆರಂಭವಾಗಿದ್ದು ೨೦ನೇ ಶತಮಾನದ ಮೊದಲಾರ್ಧದಲ್ಲಿ ೧೯೨೦ರಲ್ಲಿ ಜೇಮ್ಸ್ ಟಾಡ್ ಎಂಬ ಬ್ರಿಟನ್ ಇತಿಹಾಸಕಾರ ಮಧ್ಯಕಾಲೀನ ರಾಜಸ್ಥಾನದ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಯುರೋಪಿನ ಊಳಿಗಮಾನ್ಯ ವ್ಯವಸ್ಥೆಯ ಲಕ್ಷಣಗಳನ್ನು ಗುರುತಿಸಿದ ನಂತರ ಇದೇ ಮಾರ್ಗವನ್ನು ಅನುಸರಿಸಿದ ಬಿ.ಎನ್. ದತ್ತ, ಕಾರ್ಲ್‌ಮಾರ್ಕ್ಸ್ ಸಿದ್ಧಾಂತದ ಚೌಕಟ್ಟಿನಲ್ಲಿ ಭಾರತೀಯ ಊಳಿಗಮಾನ್ಯ ವ್ಯವಸ್ಥೆಯನ್ನು ವಿಶ್ಲೇಷಿಸಿದ ಈತನ ನಂತರ ಎಸ್ ಡಂಗೆ (೧೯೪೯) India from Primitive Communism to Slavery ಎಂಬ ಕೃತಿಯಲ್ಲಿ ಮಾರ್ಕ್ಸ್ ಮತ್ತು ಏಂಗಲ್ಸ್ ಅವರ ಮಾರ್ಕ್ಸಿಸ್ಟ್ ಚಿಂತನೆಗಳ ಮುಂದಿಟ್ಟುಕೊಂಡು ಭಾರತೀಯ ಊಳಿಗಮಾನ್ಯ ವ್ಯವಸ್ಥೆಯನ್ನು ಕುರಿತು ವಿವರಿಸಲು ಯತ್ನಿಸಿದರು.[೩೪]

ಊಳಿಗಮಾನ್ಯ ವ್ಯವಸ್ಥೆಯನ್ನು ಕುರಿತು ಡಿ.ಡಿ. ಕೊಸಾಂಬಿಯವರು ಆ್ಯನ್ ಇನ್ಟ್ರಡಕ್ಷನ್ ಟು ದಿ ಸ್ಟಡಿ ಆಫ್ ಇಂಡಿಯನ್ ಹಿಸ್ಟರಿ ಎಂಬ ಕೃತಿಯಲ್ಲಿ ಮಾರ್ಕ್ಸ್‌ವಾದಿ ಚೌಕಟ್ಟನ್ನು ಬಳಸಿಕೊಂಡು ಭಾರತೀಯ ಊಳಿಗಮಾನ್ಯ ವ್ಯವಸ್ಥೆಯನ್ನು ಚರ್ಚಿಸಿದರು. ಕೊಸಾಂಬಿಯವರು ಭಾರತೀಯ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಎರಡು ಲಕ್ಷಣಗಳನ್ನು ಗುರುತಿಸುತ್ತಾರೆ. ಅವುಗಳೆಂದರೆ ಅರಸ ಪ್ರಜೆಗಳೊಂದಿಗೆ ನೇರವಾಗಿ ವ್ಯವಹರಿಸುವುದು ಮತ್ತು ತೆರಿಗೆಗಳನ್ನು ಸಂಗ್ರಹಿಸುವುದು ಹಾಗೂ ಭೂಮಾಲೀಕ ಮಧ್ಯವರ್ತಿಗಳ ಹುಟ್ಟು, ಇದು ಅರಸ ಮತ್ತು ಭೂಮಾಲೀಕ ಮಧ್ಯವರ್ತಿಗಳೆಂಬ ಎರಡು ರೀತಿಯ ನಿಯಂತ್ರಣ ವ್ಯವಸ್ಥೆಗಳನ್ನು ಸೂಚಿಸುತ್ತದೆ.[೩೫] ಆರ್.ಎಸ್ ಶರ್ಮರವರು ತಮ್ಮ Indian feudlism ಎಂಬ ಕೃತಿಯಲ್ಲಿ ರಾಷ್ಟ್ರಕೂಟರ ಕಾಲದ ಊಳಿಗಮಾನ್ಯ ವ್ಯವಸ್ಥೆಯನ್ನು ಕುರಿತು ಚರ್ಚಿಸಿದ್ದಾರೆ. ಈ ಕೃತಿಯು ಊಳಿಗಮಾನ್ಯ ವ್ಯವಸ್ಥೆಯಲ್ಲಿನ ಆರ್ಥಿಕ ಮತ್ತು ರಾಜಕೀಯ ಅಂಶಗಳ ವಿವಿಧ ಮುಖಗಳನ್ನು ಅನಾವರಣಗೊಳಿಸಿದೆ. ಆರ್.ಎನ್. ನಂದಿಯವರು Agrariam Growth and Social conflicts in Early india ಎಂಬ ಲೇಖನದಲ್ಲಿ ಭಾರತದಲ್ಲಿ ಫ್ಯೂಡಲ್ ಬೆಳವಣಿಗೆಯ ಸ್ವರೂಪ ಮತ್ತು ವ್ಯಾಪ್ತಿಯನ್ನು ನಿರ್ಣಯಿಸಿದ ಶಕ್ತಿಗಳನ್ನು ಕರ್ನಾಟಕಕ್ಕೆ ಸಂಬಂಧಿಸಿದಂತೆ

ಅರ್ಥ ಮಾಡಿಕೊಳ್ಳುವುದು ತಮ್ಮ ಉದ್ದೇಶವೆನ್ನುತ್ತಾರೆ. ಬರ್ಟನ್ ಸ್ಟೇನ್ ಅವರು ದಕ್ಷಿಣ ಭಾರತದಲ್ಲಿದ್ದ ಸಮಾಜವನ್ನು ಸೆಗ್‌ಮೆಂಟರಿ ಸ್ಟೇಟ್ ಎನ್ನುವ ರಾಜ್ಯ ವ್ಯವಸ್ಥೆಯ ಮಾದರಿಯೊಂದಿಗೆ ಚರ್ಚಿಸಿದ್ದಾರೆ. ಸಾಕಿಯವರು ಮೇಕಿಂಗ್ ಹಿಸ್ಟರಿ ಕರ್ನಾಟಕಾಸ್ ಪೀಪಲ್ ಅಂಡ್ ದೇರ್ ಫಾಸ್ಟ್ ಎಂಬ ಕೃತಿಯಲ್ಲಿ ರಾಷ್ಟ್ರಕೂಟರು ಕಲ್ಯಾಣ ಚಾಲ್ಯುಕರು ಕಲಚೂರಿಗಳು ಮತ್ತು ಹೊಯ್ಸಳರ ಕಾಲದ ಊಳಿಗಮಾನ್ಯ ವ್ಯವಸ್ಥೆಯನ್ನು ಕುರಿತು ಸುದೀರ್ಘವಾದ ಚರ್ಚೆಗಳನ್ನು ನಡೆಸಿದ್ದಾರೆ. ಇನ್ನು ಕರ್ನಾಟಕದ ಅರ್ಥ ವ್ಯವಸ್ಥೆ ಮತ್ತು ಭೂದಾನಗಳ ಕುರಿತಾಗಿ ಬಿ.ಆರ್. ಗೋಪಾಲ್ ಕೆ.ವಿ ರಮೇಶ್, ಬಿ. ಷೇಕ್ ಅಲಿ, ಕೆ.ಎಸ್. ಶಿವಣ್ಣ ಮೊದಲಾದ ವಿದ್ವಾಂಸರು, ಸಾಕಷ್ಟು ಅಧ್ಯಯನಗಳನ್ನು ನಡೆಸಿದ್ದಾರೆ. ಈ ವಿದ್ವಾಂಸರಲ್ಲಿ ಬಹುತೇಕರು ಇಲ್ಲಿ ಸಿಗುವ ಊಳಿಗಮಾನ್ಯ ಲಕ್ಷಣಗಳನ್ನು ಯುರೋಪಿನ ಊಳಿಗಮಾನ್ಯ ಲಕ್ಷಣಗಳೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನಗಳನ್ನು ಮಾಡಿದ್ದಾರೆ. ಮಧ್ಯಕಾಲೀನ ಕರ್ನಾಟಕದಲ್ಲಿ ಕಂಡುಬಂದ ಅಪಾರ ಪ್ರಮಾಣದ ಭೂದತ್ತಿಗಳು ಖಾಸಗಿ ಆಸ್ತಿಯನ್ನು ಬೆಳೆಸಿದವು. ಹೀಗಾಗಿ ದೇವಾಲಯಗಳು ಅಗ್ರಹಾರಗಳು ಖಾಸಗಿ ಮಾಲೀಕರಾಗಿ ತಲೆ ಎತ್ತಿದವು. ಇದರಿಂದ ಜೀತದ ಬೆಳವಣಿಗೆ ಹಾಗೂ ಶೋಷಣೆಗಳು ಹೆಚ್ಚಾಗತೊಡಗಿದವು. ಕೃಷಿ ಚಟುವಟಿಕೆಗಳ ವಿಸ್ತರಣೆ, ವ್ಯಾಪಾರ ವಾಣಿಜ್ಯದ ಬೆಳವಣಿಗೆಗಳು, ರಾಜಕೀಯ, ಸಾಮಾಜಿಕ, ಆರ್ಥಿಕ ಸ್ಥಿತ್ಯಂತರಗಳಿಗೆ ಕಾರಣವಾದವು. ಇನ್ನು ವಿಜಯನಗರಕ್ಕೆ ಸಂಬಂಧಿಸಿದಂತೆ ವಿಜಯನಗರದ ಅರಸರು ತಮ್ಮ ಆಡಳಿತದ ಅನುಕೂಲಕ್ಕಾಗಿ ರೂಢಿಸಿಕೊಂಡ ಅಮರನಾಯಕ ವ್ಯವಸ್ಥೆಯನ್ನು ಬಹುತೇಕ ವಿದ್ವಾಂಸರು ಮಧ್ಯಯುಗದಲ್ಲಿ ಯುರೋಪಿನಲ್ಲಿದ್ದ ಊಳಿಗಮಾನ್ಯ ವ್ಯವಸ್ಥೆಯೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನಗಳನ್ನು ಮಾಡಿದ್ದಾರೆ. ಇದರಲ್ಲಿ ಬರ್ಟನ್ ಸ್ಟೈನ್, ನೊಬಾರೊ ಕರಾಷಿಮಾ, ಆರ್.ಎನ್. ನಂದಿ, ವೈ. ಸುಬ್ಬರಾಯಲು ಪ್ರಮುಖರಾಗಿದ್ದಾರೆ. ಇವರು ವಿಜಯನಗರದ ರಾಜ್ಯ ವ್ಯವಸ್ಥೆಯ ಸ್ವರೂಪದ ಕುರಿತಾಗಿ ಸಂಶೋಧನೆಗಳನ್ನು ನಡೆಸಿದ್ದಾರೆ. ವಿಜಯನಗರ ಸಾಮ್ರಾಜ್ಯ ಮತ್ತು ಅದರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಮರನಾಯಕ ವ್ಯವಸ್ಥೆಯನ್ನು ಊಳಿಗಮಾನ್ಯ ರಾಜಕೀಯ ವ್ಯವಸ್ಥೆಯಾಗಿ ನೋಡುವಂತಹ ಪ್ರಯತ್ನಗಳು ಇಂದಿಗೂ ನಡೆಯುತ್ತಲೇ ಇವೆ. ವಿಜಯನಗರದ ಸರಕಾರದ ಸ್ವರೂಪವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಯುರೋಪಿನ ಪ್ಯೂಡಲ್ ಲಕ್ಷಣಗಳು ವಿಜಯನಗರ ಕಾಲದ ಅಮರನಾಯಕ ಪದ್ಧತಿಯಲ್ಲಿ ಕಾಣಿಸಿಕೊಂಡರೂ ಅದು ಯುರೋಪಿನ ಪ್ಯೂಡಲ್ ವ್ಯವಸ್ಥೆಗಿಂತಲೂ ಭಿನ್ನವಾಗಿತ್ತೆಂದು ಹೇಳಬಹುದು. ವಿಜಯನಗರ ಕಾಲದಲ್ಲಿ ಊಳಿಗಮಾನ್ಯ ಪ್ರಭುಗಳಾದ ಅಮರನಾಯಕರ ಕೆಳಗೆ ಉಪ ಅಮರನಾಯಕರಿರುತ್ತಿದ್ದರು. ಆದರೂ ಈ ವ್ಯವಸ್ಥೆ ಯುರೋಪಿನಲ್ಲಿದ್ದಂತೆ ಆಳವಾಗಿ ಬೇರುಬಿಟ್ಟಿರಲಿಲ್ಲ. ಕಾರಣ ಉಪ ಅಮರನಾಯಕರು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಂಡು ವಿಜಯನಗರ ಅರಸರ ದೃಷ್ಟಿಗೆ ಪಾತ್ರರಾಗಿ ಮೊದಲ ದರ್ಜೆಯ ನಾಯಕರಾಗಿ ಬಡ್ತಿಯನ್ನು ಪಡೆಯಬಹುದಿತ್ತು. ಇದು ಆಯಾ ಪ್ರದೇಶದ ನಾಯಕರ ಶಕ್ತಿ ಸಾಮಾರ್ಥ್ಯಗಳನ್ನು ಅವಲಂಬಿಸಿತ್ತು. ಆದರೆ ಯುರೋಪಿನ ಪ್ಯೂಡಲ್ ವ್ಯವಸ್ಥೆಯಲ್ಲಿ ಇದಕ್ಕೆ ಆಸ್ಪದವಿರಲಿಲ್ಲ.[೩೬] ವಿಜಯನಗರ ಸಾಮ್ರಾಜ್ಯದಲ್ಲಿ ಚಕ್ರವರ್ತಿಯು ಭೂಮಿಯನ್ನು ನೀಡುತ್ತಿದ್ದ

ಅಮರನಾಯಕರ ಸೈನ್ಯದ ಸೇವೆಗೋಸ್ಕರ ಆದರೆ ಮಧ್ಯಯುಗದ ಯುರೋಪಿನಲ್ಲಿ ಕ್ಷೇಮ ಮತ್ತು ಭದ್ರತೆಗೋಸ್ಕರವಾಗಿ ಜಮೀನುಗಳನ್ನು ಹಿಡುವಳಿದಾರರು ಒಬ್ಬ ರಾಜನಿಗೆ ವಹಿಸಿಕೊಟ್ಟು ಆಮೇಲೆ ಅವನಿಂದ ಉಂಬಳಿಗಳನ್ನು ಪಡೆಯುತ್ತಿದ್ದರು. ಆದರೆ ವಿಜಯನಗರದಲ್ಲಿ ಈ ವ್ಯವಸ್ಥೆ ಕಂಡು ಬರುವುದಿಲ್ಲ.[೩೭] ಇಡೀ ಯುರೋಪಿನಲ್ಲಿ ಯುರೋಪ್ ಸಮಾಜವೇ ಊಳಿಗಮಾನ್ಯತೆಯ ಪ್ರಭಾವಕ್ಕೆ ಒಳಗಾಗಿತ್ತು. ಆದರೆ ವಿಜಯನಗರದ ಅಮರನಾಯಕ ವ್ಯವಸ್ಥೆಯಲ್ಲಿ ಮಾತ್ರ ಇದರ ಪ್ರಭಾವವನ್ನು ಗುರುತಿಸಬಹುದು.

ಯುರೋಪಿನ ಫ್ಯೂಡಲ್ ವ್ಯವಸ್ಥೆಯು ಸಮಾಜದ ಎಲ್ಲ ವರ್ಗಗಳ ಸಂಪರ್ಕ ಮಾಧ್ಯಮವಾಯಿತು. ರಾಜನಿಂದ ಭೂಮಿಯಲ್ಲಿ ಉಳುವ ರೈತನವರೆಗೂ ಅನೇಕ ವರ್ಗಗಳು ಭೂ ಹಿಡುವಳಿಗಳ ಮೇಲೆ ತಮ್ಮ ಹಕ್ಕನ್ನು ಪಡೆದುಕೊಂಡಿದ್ದವು. ಪರಸ್ಪರ ರಕ್ಷಣೆ ಊಳಿಗಮಾನ್ಯ ರಾಜಕೀಯ ವ್ಯವಸ್ಥೆಯ ಗುರಿಯಾಗಿತ್ತು. ಆದರೆ ವಿಜಯನಗರ ಸಾಮ್ರಾಜ್ಯದಲ್ಲಿ ಫ್ಯೂಡಲ್ ವ್ಯವಸ್ಥೆಯು ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ವಲಯಗಳ ಮೇಲೆ ಅಷ್ಟೇನು ಗುರುತರವಾದ ಪಾತ್ರವನ್ನು ವಹಿಸಲಿಲ್ಲ; ಜೊತೆಗೆ ಯುರೋಪಿನ ಫ್ಯೂಡಲ್ ವ್ಯವಸ್ಥೆಯಲ್ಲಿ ಕಂಡು ಬರುವಂತಹ ಪರಸ್ಪರ ರಕ್ಷಣಾ ವ್ಯವಸ್ಥೆ ಕೇವಲ ವಿಜಯನಗರದ ಅರಸ ಮತ್ತು ಅಮರನಾಯಕರಿಗಷ್ಟೆ ಸೀಮಿತವಾಗಿತ್ತು. ಕಾರಣ ವಿಜಯನಗರದ ಅರಸರಿಗೆ ಸೇನೆಯನ್ನು ಒದಗಿಸಿ ಆ ಮೂಲಕ ಪರಕೀಯ ರಾಜರ ದಾಳಿಗಳು ತಮ್ಮ ಸಂಸ್ಥಾನಗಳ ಮೇಲೆ ನಡೆಯದಂತೆ ನೋಡಿಕೊಳ್ಳುತ್ತಿದ್ದರು. ಪ್ರದೇಶಗಳ ರಕ್ಷಣಾ ಜವಾಬ್ದಾರಿ ವಿಜಯನಗರದ್ದಾಗಿತ್ತು. ಹೀಗೆ ಪರಸ್ಪರ ಕೊಟ್ಟು-ತೆಗೆದುಕೊಳ್ಳುವ ಪಕ್ರಿಯೆಗಳ ಮೂಲಕ ನಾಯಕ ಮತ್ತು ಸಾರ್ವಭೌಮರ ನಡುವಿನ ಸಂಬಂಧಗಳು ಗಟ್ಟಿಗೊಳ್ಳುತ್ತಿದ್ದವು. ಯುರೋಪಿನ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಲಾರ್ಡ್‌ಕೌಂಟ್, ನೈಟ್ ವಿತ್ ಕೌಂಟ್ ನೋಬೆಲ್ ವರ್ಗಗಳು ಅಸ್ತಿತ್ವದಲ್ಲಿದ್ದವು. ಇಂತಹ ವರ್ಗಗಳು ವಿಜಯನಗರ ಕಾಲದ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಕಂಡು ಬರುವುದಿಲ್ಲ; ಇಲ್ಲಿ ಕೇವಲ ಅಮರನಾಯಕರ ಕೆಳಗೆ ಉಪ ಅಮರನಾಯಕರನ್ನು ಮಾತ್ರ ಗುರುತಿಸಬಹುದು.

೭. ಯುರೋಪಿನ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಮ್ಯಾನೋರಿಯಲ್ ಸಿಸ್ಟಮ್ ಕಂಡು ಬರುತ್ತದೆ. Manor system ಎಂದರೆ ಇದು ಒಂದು ಅಥವಾ ಕೆಲವು ಗ್ರಾಮಗಳನ್ನು ಒಡೆತನವಾಗಿ ಪಡೆದುಕೊಂಡಿದ್ದ ವ್ಯವಸ್ಥೆ. ಇದರ ಯಜಮಾನನನ್ನು ಲಾರ್ಡ್‌ಗಳೆಂದು ಕರೆಯುತ್ತಿದ್ದರು. ಈತನ ವಶದಲ್ಲಿ ಸುಮಾರು ನಾಲ್ಕುನೂರು ಅಥವಾ ಐನೂರು ಎಕರೆ ಕೃಷಿ ಭೂಮಿ ಇರುತ್ತಿತ್ತು. ಇವನ ಕೆಳಗಡೆ ಸ್ವತಂತ್ರ ರೈತರು ಮತ್ತು ಜೀತದಾಳುಗಳು ಕೆಲಸ ಮಾಡುತ್ತಿದ್ದರು. ಲಾರ್ಡ್ ಎಂಬುವನು ಎತ್ತರವಾದ ಕ್ಯಾಸಲ್ ಎಂಬ ಅರಮನೆಯಲ್ಲಿ ವಾಸ ಮಾಡುತ್ತಿದ್ದನು. ಅವನು ತನ್ನ ರಕ್ಷಣೆಗಾಗಿ ಸೈನ್ಯದಲ್ಲಿ ಇಟ್ಟುಕೊಂಡಿದ್ದನು. ಉತ್ಪಾದನೆಯ ಒಂದು ಭಾಗವನ್ನು ಅವನು ರಾಜನಿಗೆ ಕೊಡಬೇಕಾಗಿತ್ತು.[೩೮]

ವಿಜಯನಗರದ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಬೆಳೆದು ಬಂದ ಅಮರನಾಯಕ ಪದ್ಧತಿಯಲ್ಲಿ ಈ ಮೇಲಿನ ಕೆಲವು ಲಕ್ಷಣಗಳನ್ನು ಗುರುತಿಸಬಹುದು. ಅವುಗಳೆಂದರೆ ಅಮರನಾಯಕರು

ವಿಜಯನಗರದ ಅರಸರ ಅನುಮತಿಯನ್ನು ಪಡೆದು ಕೋಟೆಗಳನ್ನು, ಅರಮನೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ತಮ್ಮ ರಕ್ಷಣೆಗಾಗಿ ಖಾಸಗಿ ಸೈನಿಕ ಪಡೆಯನ್ನು ಹೊಂದಿರುತ್ತಿದ್ದರು. ಕೇಂದ್ರದ ಸೇವೆಗಾಗಿ ಮೀಸಲು ಸೈನ್ಯವನ್ನು ಸದಾ ಸಜ್ಜಾಗಿರಿಸಿಕೊಳ್ಳುತ್ತಿದ್ದರು. ಹಾಗೂ ತಮ್ಮ ಪ್ರಾಂತ್ಯಗಳ ಉತ್ಪಾದನೆಯ ಒಂದು ಭಾಗವನ್ನು ಕಂದಾಯದ ರೂಪದಲ್ಲಿ ಪ್ರತಿವರ್ಷವೂ ನಿಗದಿಪಡಿಸಿದ ಮೊತ್ತವನ್ನು ನೀಡುತ್ತಿದ್ದರು. ಆದರೆ ಇಲ್ಲಿ ಗಮನಿಸಬೇಕಾದ ಮಹತ್ವದ ಅಂಶವೆಂದರೆ ಯುರೋಪಿನಲ್ಲಿದ್ದಂತಹ ಶೋಷಣೆ ಮತ್ತು ಗುಲಾಮಗಿರಿತನಗಳು ವಿಜಯನಗರ ಕಾಲದ ಅಮರನಾಯಕ ಪದ್ಧತಿಯಲ್ಲಿ ಕಂಡು ಬರುವುದಿಲ್ಲ. ರೈತರು ಮತ್ತು ಜೀತದಾಳುಗಳು ನಾಯಕರ ಅಧೀನತೆಯಲ್ಲಿದ್ದರೂ ಅವರಿಂದ ಸಾರ್ವಜನಿಕ ಕಾಮಗಾರಿಗಳಾದ ಕೆರೆ–ಕಟ್ಟೆಗಳ ನಿರ್ಮಾಣ, ಕಾಲುವೆಗಳ ನಿರ್ಮಾಣಗಳಂತಹ ಸಂದರ್ಭಗಳಲ್ಲಿ ಮಾತ್ರ ಬಿಟ್ಟಿ ದುಡಿಮೆ ಮಾಡಿಸಿಕೊಂಡಿರುವುದು ಕಂಡು ಬರುತ್ತದೆ. ಉಳಿದಂತೆ ಅವರಿಗೆ ಸ್ವತಂತ್ರವಿತ್ತು.

ಯುರೋಪಿನಲ್ಲಿ ನ್ಯಾಯಾಂಗ ವ್ಯವಸ್ಥೆಯಲ್ಲಿಯೂ ಫ್ಯೂಡಲ್ ಪದ್ಧತಿಯು ಕೆಲಸ ಮಾಡುತ್ತಿತ್ತು. ಆದರೆ ವಿಜಯನಗರ ಕಾಲದಲ್ಲಿ ಅದು ನ್ಯಾಯಾಂಗದವರೆಗೂ ವಿಸ್ತರಿಸಿರಲಿಲ್ಲ.[೩೯] ಮಧ್ಯಯುಗದ ಯುರೋಪಿನಲ್ಲಿ ಇಡೀ ಸಮಾಜವೇ ಫ್ಯೂಡಲ್ ಸಮಾಜವಾಗಿ ಪರಿವರ್ತನೆಗೊಂಡಿತ್ತು. ಆದರೆ ವಿಜಯನಗರ ಸಾಮ್ರಾಜ್ಯದಲ್ಲಿ ಅದು ಒಂದು ಐತಿಹಾಸಿಕ ಅಗತ್ಯವಾಗಿ ಮತ್ತು ೧೪–೧೫ನೇ ಶತಮಾನದ ವಿಜಯನಗರದ ಅರಸರ ಆಡಳಿತ ನೀತಿಗಳಿಂದ ಜಾರಿಗೆ ಬಂದಿತು.[೪೦]

ಒಟ್ಟಿನಲ್ಲಿ ಯುರೋಪಿನ ಫ್ಯೂಡಲ್ ಲಕ್ಷಣಗಳೆಲ್ಲವೂ ವಿಜಯನಗರ ರಾಜ್ಯಾಡಳಿತದ ಒಂದು ಭಾಗವಾಗಿದ್ದ ಅಮರನಾಯಕ ವ್ಯವಸ್ಥೆಯಲ್ಲಿ ಕಂಡು ಬರುವುದಿಲ್ಲ. ಏಕೆಂದರೆ ವಿಜಯನಗರವು ತನ್ನದೇ ಆದ ರಾಜಕೀಯ ವ್ಯವಸ್ಥೆ, ಆರ್ಥಿಕತೆ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಒಳಗೊಂಡಿತ್ತು. ಅದಕ್ಕೆ ಅನುಗುಣವಾದಂತಹ ಆಡಳಿತ ವ್ಯವಸ್ಥೆಯನ್ನು ಅದು ರೂಪಿಸಿಕೊಂಡಿತ್ತು. ವಿಜಯನಗರದಂತಹ ಬೃಹತ್ ಸಾಮ್ರಾಜ್ಯವು ತನ್ನ ರಾಜಧಾನಿಗೆ ಹತ್ತಿರವಿರುವ ಭೂಪ್ರದೇಶಗಳ ಮೇಲೆ ನೇರ ನಿಯಂತ್ರಣವನ್ನು ಹೊಂದಿತ್ತು. ದೂರದ ಪ್ರದೇಶಗಳಿಗೆ ದಂಡನಾಯಕರನ್ನು ಇಲ್ಲವೇ ಅಮರನಾಯಕರನ್ನು ನೇಮಿಸಿ ಆಡಳಿತ ನಡೆಸುತ್ತಿತ್ತು. ಕಾರಣ ಕರ್ನಾಟಕವನ್ನು ಒಳಗೊಂಡಂತೆ ತಮಿಳುನಾಡು, ಆಂಧ್ರಪ್ರದೇಶಗಳು ಬಹುತೇಕ ಭೂಭಾಗವನ್ನು ತನ್ನ ನಿಯಂತ್ರಣದಲ್ಲಿಟ್ಟು ಕೊಂಡಿದ್ದರಿಂದ ಏಕರೂಪದ ನೇರ ಆಡಳಿತವನ್ನು ಜಾರಿಗೆ ತರುವುದು ಸಾಧ್ಯವಿರಲಿಲ್ಲ. ಹೀಗಾಗಿ ರಾಜಕೀಯ ಅನಿವಾರ್ಯತೆಗಳಿಂದಾಗಿ ಪ್ರಾದೇಶಿಕ ಮಟ್ಟದಲ್ಲಿ ಊಳಿಗಮಾನ್ಯ ವ್ಯವಸ್ಥೆಯನ್ನು ಅನುಸರಿಸಿ ಅಮರನಾಯಕ ಪದ್ಧತಿಯನ್ನು ಅಳವಡಿಸಿಕೊಂಡಿತು. ಹೀಗಾಗಿ ಸ್ಥಳೀಯ ರಾಜಕೀಯ ಅನಿವಾರ್ಯತೆಗಳಿಂದ ಹುಟ್ಟಿಕೊಂಡ ಈ ವ್ಯವಸ್ಥೆಯನ್ನು ಮಧ್ಯಯುಗೀನ ಯುರೋಪಿನ ಫ್ಯೂಡಲ್ ವ್ಯವಸ್ಥೆಗೆ ಸಮೀಕರಿಸಿ ನೋಡುವುದು ತಪ್ಪಾಗುತ್ತದೆ. ಯುರೋಪಿನ ಫ್ಯೂಡಲ್ ವ್ಯವಸ್ಥೆಯ ಕೆಲವು ಲಕ್ಷಣಗಳು ಅಮರನಾಯಕ ವ್ಯವಸ್ಥೆಯಲ್ಲಿ ಕಂಡುಬಂದರೂ ಕೂಡ ಇದು ಸ್ಥಳೀಯ ಮಟ್ಟದ ಸ್ಥಳೀಯ ಸೊಗಡನ್ನು ಮೈಗೂಡಿಸಿಕೊಂಡಂತಹ ಆಡಳಿತ ವ್ಯವಸ್ಥೆಯಾಗಿತ್ತು ಎಂಬ ತೀರ್ಮಾನಕ್ಕೆ ಬರಬಹುದಾಗಿದೆ.

೩.೫. ವಿಜಯನಗರ ಕಾಲದ ಊಳಿಗಮಾನ್ಯ ವ್ಯವಸ್ಥೆ (ಕ್ರಿ.ಶ. ೧೩೩೬ರಿಂದ ೧೬೭೨)

ವಿಜಯನಗರ ಕಾಲದಲ್ಲಿ ಉಳಿಗಮಾನ್ಯ ಪದ್ಧತಿಯು ಅಮರನಾಯಕ ವ್ಯವಸ್ಥೆಯಲ್ಲಿ ಕಂಡು ಬರುತ್ತದೆ. ಊಳಿಗಮಾನ್ಯ ಪದ್ಧತಿಯ ಹಲವಾರು ಅಂಶಗಳನ್ನು ಅಮರನಾಯಕ ಪದ್ಧತಿಯಲ್ಲಿ ಗುರುತಿಸಬಹುದು. ಕನ್ನಡದಲ್ಲಿ ಊಳಿಗಮಾನ್ಯ ಎಂದರೆ ಸೇವೆಗಾಗಿ ಬಿಟ್ಟ ಉಂಬಳಿ ಎಂದು ಕನ್ನಡ ಶಬ್ದಕೋಶಗಳು ಅರ್ಥೈಸುತ್ತವೆ. ಇಂತಹ ಉಂಬಳಿಗಳನ್ನು ದಾನವಾಗಿ ನೀಡಿರುವುದನ್ನು ವಿಜಯನಗರದ ಆರಂಭ ಮನೆತನವಾದ ಸಂಗಮರ ಕಾಲದಿಂದಲೂ ಗುರುತಿಸಬಹುದು. ವಿಜಯನಗರ ಕಾಲದಲ್ಲಿ ನಾಯಕತನಕ್ಕಾಗಿ ರಾಜರಿಂದ ಭೂಮಿಯನ್ನು ದಾನವಾಗಿ ಪಡೆಯುತ್ತಿದ್ದ ಅಮರನಾಯಕರು ಆ ಭೂ ಪ್ರದೇಶದ ಆಡಳಿತದ ಹಕ್ಕುಗಳನ್ನು ವಿಜಯನಗರದ ಅರಸರಿಂದ ಪಡೆಯುತ್ತಿದ್ದರು. ಕ್ರಿ.ಶ. ೧೩೩೬ರಿಂದ ೧೬೭೨ರ ಸುದೀರ್ಘ ಅವಧಿಯಲ್ಲಿ ಹೆಚ್ಚಿನ ಪ್ರಮಾಣದ ಭೂದತ್ತಿಗಳು ವಿಜಯನಗರದ ಅರಸರಿಂದ ಕೊಡಲ್ಪಟ್ಟವು. ವಿಜಯನಗರ ಕಾಲದಲ್ಲಿ ಭೂದಾನಗಳು ಎರಡು ರೀತಿಯಲ್ಲಿ ಕೊಡಲ್ಪಟ್ಟವು. (ಎ) ರಾಜನಿಂದ ನೇರವಾಗಿ ಕೊಡಲಾಗುತ್ತಿದ್ದ ಭೂದಾನಗಳು (ಬಿ) ರಾಜನ ಅಧಿಕಾರಿ ವರ್ಗ, ಸಾಮಂತ ವರ್ಗ, ನಾಯಕ ವರ್ಗಗಳಿಂದ ಕೊಡಲಾಗುತ್ತಿದ್ದ ಭೂದಾನಗಳು. ವಿಜಯನಗರ ಅರಸರು ಮತ್ತು ಸಾಮಂತರು ಹಾಗೂ ಅಧಿಕಾರಿ ವರ್ಗಗಳು ನೀಡುತ್ತಿದ್ದ ಭೂದಾನಗಳನ್ನು ಕುರಿತು ಶಾಸನೋಕ್ತವಾಗಿ ಉಲ್ಲೇಖಿಸುವುದಾದರೆ ಸಂಗಮ ಮನೆತನದ ಸುಪ್ರಸಿದ್ಧ ಅರಸನಾದ ಪ್ರೌಢದೇವರಾಯನ ಕಾಲದ ತಿಪಟೂರು ಶಾಸನವು ಹೊನ್ನಾವಳಿಯ ಪುರಾವರಾಧೀಶ್ವರನು (ಹೆಸರು ಅಳಿಸಿದೆ) ತನ್ನ ಅಮರನಾಯಕತನಕ್ಕೆ ನೀಡಿದ ಹೊನ್ನಾವಳಿ ಸೀಮೆಯ ಚವುಡನ ಹಳ್ಳಿಯನ್ನು ಶ್ರೀ ಲಕ್ಷ್ಮಿಕಾಂತ ದೇವರ ಸೇವೆಗಾಗಿ ಕೂಡ ತಿರುನಾಳೆಂಬ ಮಹೋತ್ಸವದ ನಿಮಿತ್ತವಾಗಿ ದಾನ ನೀಡಿರುವ ಮಾಹಿತಿಯನ್ನು ತಿಳಿಸುತ್ತದೆ. ಸಂಗಮರ ಕಾಲದ ಅರಸರು ಭೂ ಉಂಬಳಿಗಳನ್ನು ನೀಡುವುದರ ಮೂಲಕ ಅಮರನಾಯಕ ಪದ್ಧತಿಯನ್ನು ಅಳವಡಿಸಿಕೊಂಡಿದ್ದರು.

ವಿಜಯನಗರ ಕಾಲದ ಅಧಿಕಾರಿ ವರ್ಗವು ನೀಡಿರುವ ಭೂದಾನಗಳನ್ನು ಪರಿಶಿಲೀಸುವುದಾದರೆ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕು ತ್ಯಾಗದಹಳ್ಳಿಯ ಶಾಸನವು ಕೃಷ್ಣದೇವರಾಯನ ಕಾಲಕ್ಕೆ ಸಂಬಂಧಿಸಿದ್ದು, ಈತನ ಪ್ರಧಾನಿ ಮಲ್ಲರಸ ತಮ್ಮ ನಾಯಕತನಕ್ಕೆ ಸೇರಿದ್ದ ಜಾಜೂರು ಸೀಮೆಯ ತೇಗದಹಳ್ಳಿ ಗ್ರಾಮವನ್ನು ಹಂಪೆಯ ವಿರೂಪಾಕ್ಷ, ವಿಠಲ ಕೃಷ್ಣದೇವರ ಸನ್ನಿಧಿಗೆ ದಾನವಾಗಿ ನೀಡಿರುವನು.

ವಿಜಯನಗರ ಕಾಲದಲ್ಲಿ ಗಣನೀಯ ಪ್ರಮಾಣದಲ್ಲಿ ಭೂ ದಾನಗಳು ಹೆಚ್ಚಾದಂತೆಲ್ಲ ಆರ್ಥಿಕ ಮತ್ತು ರಾಜಕೀಯ ಅಧಿಕಾರವನ್ನು ನಡೆಸುವ ಶಕ್ತಿಯುತವಾದ ಮಧ್ಯವರ್ತಿಗಳನ್ನು ಸೃಷ್ಟಿಸುವಲ್ಲಿ ಸಹಾಯ ಮಾಡಿದವು.[೧೧] (ಆರ್.ಎಸ್. ಶರ್ಮ) ಭಾರತೀಯ ಊಳಿಗಮಾನ್ಯ ಪದ್ಧತಿಯಲ್ಲಿ ರಾಜರುಗಳಾಗಿ ರೂಪುಗೊಂಡು ನಾಯಕರೆನಿಸಿಕೊಂಡವರು. ತಮ್ಮ ಅಧೀನದಲ್ಲಿ ಕೆಲವು

ಉಪನಾಯಕರನ್ನು ನೇಮಿಸಿಕೊಳ್ಳುವುದರ ಮೂಲಕ ಉಪ ಊಳಿಗತನವನ್ನು ಸೃಷ್ಟಿಸಿಕೊಂಡರು. ವಿಜಯನಗರ ಕಾಲದಲ್ಲಿ ಅರಸರಿಂದ ರಾಜಕೀಯ ಉದ್ದೇಶಗಳಿಗಾಗಿ ಭೂದಾನವನ್ನು ಪಡೆದವರಲ್ಲಿ ಬ್ರಾಹ್ಮಣರೇ ಅಗ್ರಸ್ಥಾನದಲ್ಲಿದ್ದಾರೆ. ವಿಜಯನಗರ ಅರಸರಿಂದ ಹೆಚ್ಚಿನ ಪ್ರಮಾಣದಲ್ಲಿ ಭೂಮಿಯನ್ನು ದಾನ ಪಡೆದಂತೆಲ್ಲ ಬ್ರಾಹ್ಮಣ ವರ್ಗವು ಭೂಮಿಯ ನಿರ್ವಹಣೆ ಹಾಗೂ ರಾಜ್ಯಾಡಳಿತದಲ್ಲಿ ವಿಶೇಷ ಪಾತ್ರವನ್ನು ವಹಿಸಿತು. ಬ್ರಾಹ್ಮಣರು ಅಮರನಾಯಕತನದ ಅಡಿಯಲ್ಲಿ ವಿಜಯನಗರದ ಅರಸರಿಂದ ತಮ್ಮ ನಾಯಕತನಕ್ಕಾಗಿ ಸೀಮೆಗಳನ್ನು ಪಡೆಯುತ್ತಿದ್ದರು. ಹಾಗೂ ಮಹಾಮಂಡಲೇಶ್ವರರಾಗಿ ನಿಯುಕ್ತಿಗೊಳ್ಳುತ್ತಿದ್ದರು. ತುಳುವ ವಂಶದ ಕೃಷ್ಣದೇವರಾಯನು ತನ್ನ ಆಡಳಿತ ವ್ಯವಸ್ಥೆಯಲ್ಲಿ ಬ್ರಾಹ್ಮಣರಿಗೆ ಹೆಚ್ಚು ಜವಾಬ್ದಾರಿಯುತವಾದ ಪದವಿಗಳನ್ನು ನೀಡಿರುವುದು ಕಂಡು ಬರುತ್ತದೆ. ಕೃಷ್ಣದೇವರಾಯನು ಬರೆದಿರುವ 'ಆಮುಕ್ತಮೌಲ್ಯದ' ಸಹ ಬ್ರಾಹ್ಮಣರು ಹೆಚ್ಚು ನಂಬಿಕೆಗೆ ಅರ್ಹರು ಎಂಬ ಮಾಹಿತಿಯನ್ನು ಉಲ್ಲೇಖಿಸುತ್ತದೆ. ಕೃಷ್ಣದೇವರಾಯನ ಕಾಲದಲ್ಲಿ ನಾಯಕತನವನ್ನು ಪಡೆದುಕೊಂಡ ಬ್ರಾಹ್ಮಣರಲ್ಲಿ ಮಹಾಮಂಡಲೇಶ್ವರ ರಾಜೆಯರಾಜು ಸಾಳುವ ಗೋವಿಂದ ರಾಜು ತ್ರಿಯಂಬಕರಸ, ಧನಂಜರಾಜ ಒಡೆಯ, ಪೆದಸಿಂಗಮ ನಾಯಕ, ಅಪ್ಪರಸಯ್ಯ, ಭಂಡಾರದ ತಿಮ್ಮಪ್ಪಯ್ಯ, ನಾದೆಂಡ್ಲ ಗೋಪಯ್ಯ, ಮಹಾಮಂಡಲೇಶ್ವರ ಸರ್ವಯ್ಯದೇವ, ಕೊಂಡಮರಸ, ವಿಸಣ್ಣರಾವತ, ದೇಮರಸಯ್ಯ, ರಂಗನಾಥ ರಾವುತ, ರಾಯಸದ ಅಯ್ಯಪ್ಪರಸು ಕೃಷ್ಣರಾಯನಾಯಕ ಬೋಗಯ್ಯದೇವ ಮಹಾ ಅರಸು, ರಾಯಸಂ ಅಯ್ಯಪ್ಪರಸು, ಅವಸರಂ ಚಂದ್ರಶೇಖರಯ್ಯ, ಗೌರೆದಣ್ಣಾಯಕರ ಬಸಪಯ್ಯ, ದೀಕ್ಷಿತಯ್ಯ ಸಿದ್ದವಾಟರ ಯಲ್ಲಮ್ಮರಸುವಯ್ಯ, ಪೆದ್ದರಾಜು ಮುಂತಾದ ಬ್ರಾಹ್ಮಣ ನಾಯಕರು ಪ್ರಮುಖರಾಗಿದ್ದಾರೆ. ಇವರ ಜೊತೆಗೆ ವಿವಿಧ ಸಮುದಾಯದಗಳು, ಜಾತಿಗಳು ನಾಯಕತನವನ್ನು ಪಡೆದುಕೊಂಡಿರುವುದು ಶಾಸನೋಕ್ತವಾಗಿದೆ. ಕಂದಾಯ ವಸೂಲಿ ಮಾಡುವ, ಒತ್ತಾಯದಿಂದ ಕೆಲಸವನ್ನು ಪಡೆಯುವ ಪ್ರಾದೇಶಿಕ ಮಟ್ಟದಲ್ಲಿ ಕೃಷಿ ಚಟುವಟಿಕೆಗಳ ಮೇಲೆ ನಿಯಂತ್ರಣ ಹೊಂದುವ ಕಾನೂನು ಮತ್ತು ಶಿಸ್ತನ್ನು ಪಾಲನೆ ಮಾಡುವಂತಹ ಕರ್ತವ್ಯಗಳನ್ನು ಅಮರನಾಯಕ ವರ್ಗವೂ ಪಡೆದುಕೊಂಡಿತು. ಹೀಗಾಗಿ ಈ ಬಗೆಯ ಊಳಿಗಮಾನ್ಯ ವ್ಯವಸ್ಥೆಯಿಂದಾಗಿ ವಿಜಯನಗರದ ಆಡಳಿತವು ಹೆಚ್ಚು ವಿಕೇಂದ್ರೀಕರಣಗೊಳ್ಳುತ್ತಾ ಹೋಯಿತು.

ವಿಜಯನಗರ ಕಾಲದಲ್ಲಿ ಊಳಿಗ ಮಾನ್ಯ ವ್ಯವಸ್ಥೆಯ ಜೊತೆಯಲ್ಲಿಯೇ ಉಪ ಊಳಿಗತನವು ರೂಢಿಯಲ್ಲಿತ್ತು ಎಂಬುದನ್ನು ಶಾಸನಗಳು ಸಮರ್ಥಿಸುತ್ತವೆ. ಈ ಬಗೆಯ ಉಪ ಸಾಮತೀಂಕರಣ ಅಥವಾ ಉಪ ಊಳಿಗತನವು ರಾಷ್ಟ್ರಕೂಟರು ಮತ್ತು ಹೊಯ್ಸಳರ ಕಾಲದಲ್ಲಿ ಜಾರಿಯಲ್ಲಿತ್ತು. ಊಳಿಗಮಾನ್ಯ ವ್ಯವಸ್ಥೆಯಲ್ಲಿ ಊಳಿಗ ಪ್ರಭುಗಳಾಗಿದ್ದ ಅಮರನಾಯಕರು ತಮ್ಮ ಅಮರಂ ಪ್ರದೇಶಗಳ ವ್ಯಾಪ್ತಿಯಲ್ಲಿರುವ ಭೂಮಿಯನ್ನು ದೇವಾಲಯಗಳ ನಿರ್ಮಾಣ, ದೇವಾಲಯಗಳ ಜೀರ್ಣೋದ್ಧಾರ, ದೇವರುಗಳ ಅಮೃತಪಡಿ ಸೇವೆಗೆ ಇಲ್ಲವೇ ಕೆರೆ, ಕಾಲುವೆ, ಬಾವಿಗಳ ನಿರ್ಮಾಣ ಅಗ್ರಹಾರಗಳ ನಿರ್ಮಾಣ ಇಲ್ಲವೇ ಅಗ್ರಹಾರಗಳ ಜೀರ್ಣೋದ್ಧಾರ ಕಾರ್ಯಗಳಿಗೆ ಭೂಮಿಯನ್ನು ದಾನವಾಗಿ ನೀಡುತ್ತಿದ್ದರು. ಅಮರನಾಯಕರು ತಾವು ಭೂ ದತ್ತಿಗಳನ್ನು ನೀಡುವಾಗ ಶಾಸನಗಳಲ್ಲಿ

ತಮ್ಮ ಸಾರ್ವಭೌಮರನ್ನು ಕೃತಜ್ಞತೆಗಾಗಿ ಸ್ಮರಿಸಿಕೊಳ್ಳಬೇಕಾಗಿತ್ತು. ಉದಾ: ಕೃಷ್ಣರಾಯನ ಕಾಲದ ಶಿವಮೊಗ್ಗದ ಅರಶಿನಗೆರೆ ಶಾಸನವೊಂದು ಕೃಷ್ಣರಾಯ ಮಹಾರಾಯರು ವಿಜಯನಗರವನ್ನು ಪಾಲಿಸುತ್ತಿದ್ದಾಗ ಶಿವನಸಮುದ್ರದ ತಿಪ್ಪರಸನ ಮಗನಾದ ತ್ರಯಂಬಕರಸರು ತಮ್ಮ ನಾಯಕತನದ ಮಾಳೇನಹಳ್ಳಿ ಸೀಮೆಗೆ ಸೇರಿದ ಮಾದರಹಳ್ಳಿ ಗ್ರಾಮದೊಳಿಗಣ ಬಯಿರಾಪುರವೆಂಬ ಗ್ರಾಮವನ್ನು ಹರಿಹರಪುರವೆಂದು ಮರುನಾಮಕರಣ ಮಾಡಿ ಅಗ್ರಹಾರವನ್ನಾಗಿ ಮಾರ್ಪಡಿಸಿ ಹರಿಹರ ದೇವರ ಸೇವೆಗಾಗಿ ಮಾಧವರಾದ್ಯರ ಮಗನಾದ ಹರಿಹರಾದ್ಯರಿಗೆ ದಾನವಾಗಿ ನೀಡಿರುವನು. ಈ ಶಾಸನದ ಆರಂಭದಲ್ಲಿ ಕೃಷ್ಣದೇವರಾಯನನ್ನು ಉಲ್ಲೇಖಿಸಲಾಗಿದೆ. ಆದರೆ ಈ ನಿಯಮ ಕೇವಲ ಎರಡು ಮೂರು ದರ್ಜೆಯ ಅಮರನಾಯಕರಿಗೆ ಮಾತ್ರ ಅನ್ವಯವಾಗುತ್ತಿತ್ತು. ಮೊದಲ ವರ್ಗದ ಅಮರನಾಯಕರು ವಿಜಯನಗರದ ಅರಸರ ಅನುಮತಿಯನ್ನು ಪಡೆಯದೇ ಭೂದಾನಗಳನ್ನು ನೀಡಬಹುದಿತ್ತು. ಉದಾಹರಣೆಗೆ ವಿಜಯನಗರ ಕಾಲದ ಮೊದಲ ದರ್ಜೆಯ ಅಮರನಾಯಕನಾಗಿದ್ದ ಹಿರಿಯ ಕೆಂಪೇಗೌಡನ ಕಾಲದ ಶಾಸನವೊಂದು ಚತುರ್ಥ ಗೋತ್ರದ ಯಲಹಂಕ ನಾಡಪ್ರಭುಗಳಾದ ನಂಜೇಗೌಡರ ಪುತ್ರರಾದ ಹಿರಿಯ ಕಂಪೇಗೌಡರು ಶ್ರೀವತ್ಸ ಗೋತ್ರದ ಅಪಸ್ತಂಭ ಸೂತ್ರದ ಯಜು ಶಾಖಾಧ್ಯಾಯಿಗಳಾದ ವರದ ಅಯ್ಯಂಗಾರರ ಪುತ್ರರಾದ ತಿಮ್ಮಪ್ಪಯ್ಯನವರ ಪುತ್ರರಾದ ತಿರುಮಲಯ್ಯನವರಿಗೆ ಬೆಂಗಳೂರು ಸೀಮೆಯ ವೊರತೂರು ಹೋಬಳಿಗೆ ಸೇರಿದ ವೊರತೂರು, ಸೋರು ಹುಣಸೆ, ಹಾರುವಹಳ್ಳಿ ಈ ಮೂರು ಗ್ರಾಮಗಳನ್ನು ಶಿವಗಂಗೆಯ ಶ್ರೀಗಂಗಾಧರೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ಪರಮೇಶ್ವರರ್ಪಣ ಬುದ್ಧಿಯಿಂದ ಸರ್ವಮಾನ್ಯವಾಗಿ ಅಗ್ರಹಾರದ ಗ್ರಾಮಗಳನ್ನಾಗಿಸಿ ದಾನ ಮಾಡಿದನು.

ಆದರೆ ಈ ಬಗೆಯ ಅಧಿಕಾರ ಎರಡು ಮತ್ತು ಮೂರನೇ ದರ್ಜೆಯ ಅಮರನಾಯಕರಿಗೆ ಇರಲಿಲ್ಲ. ಈ ಸಂಪ್ರದಾಯ ಊಳಿಗತನವನ್ನು ಪ್ರಧಾನವಾಗಿ ಬಿಂಬಿಸುತ್ತದೆ. ಎರಡು ಮತ್ತು ಮೂರನೇ ದರ್ಜೆಯ ಅಮರನಾಯಕರು ಶಾಸನಗಳಲ್ಲಿ ವಿಜಯನಗರದ ಅರಸರ ಹೆಸರನ್ನು ಉಲ್ಲೇಖಿಸುವುದರ ಮೂಲಕ ಸ್ವಾಮಿ ನಿಷ್ಠೆಯನ್ನು ಪ್ರಕಟಿಸುತ್ತಿದ್ದರು.

ವಿಜಯನಗರ ಕಾಲದಲ್ಲಿ ರಾಜನ ಆಳ್ವಿಕೆಗೆ ಸೇರಿದ ಭೂ ಪ್ರದೇಶದ ಸಾಮಂತರಿಗೆ ಸೇರಿದ ಪ್ರದೇಶ, ಅಮರನಾಯಕರಿಗೆ ಸೇರಿದ ಭೂ ಪ್ರದೇಶ ಅಧಿಕಾರದ ವಿಕೇಂದ್ರೀಕರಣ, ಕೃಷಿ ಆಧಾರಿತ ಅರ್ಥವ್ಯವಸ್ಥೆ ಖಾಸಗಿ ಭೂಮಾಲೀಕತ್ವ, ಭೂಮಾಲೀಕ ಮಧ್ಯವರ್ತಿಗಳು ದಾನ ನೀಡುವ ಪದ್ಧತಿ ಮುಂತಾದ ಲಕ್ಷಣಗಳು ಶ್ರೇಣೀಕೃತ ಸಾಮಾಜಿಕ ಆರ್ಥಿಕ ವ್ಯವಸ್ಥೆಯನ್ನು ಸೂಚಿಸುವುದರ ಮೂಲಕ ಊಳಿಗಮಾನ್ಯ ವ್ಯವಸ್ಥೆಯನ್ನು ದೃಢೀಕರಿಸುತ್ತವೆ.[೪೨]

ಬರ್ಟನ್ ಸ್ಟೈನ್ ಅವರು ವಿಜಯನಗರ ಎಂಬ ಗ್ರಂಥದಲ್ಲಿ ಸೆಗ್‌ಮೆಂಟರಿ ಸ್ಟೇಟ್ ಎಂಬ ಸಿದ್ಧಾಂತವನ್ನು ವಿಜಯನಗರ ಆಡಳಿತ ವ್ಯವಸ್ಥೆಯೊಂದಿಗೆ ಸಾಮಾನ್ಯೀಕರಿಸುತ್ತಾರೆ. ಕ್ರಿ.ಶ. ೯ರಿಂದ ೧೩ನೆಯ ಶತಮಾನಗಳ ನಡುವಣ ಅವಧಿಯ ಸಾಮಾಜಿಕ ಆರ್ಥಿಕ ಜೀವನದಲ್ಲಿ ಕೃಷಿ ಭೂಮಿ

ಮತ್ತು ಕೃಷಿ ಉತ್ಪಾದನೆಯು ಪ್ರಮುಖವಾಗಿತ್ತು ಎನ್ನುವುದು ಸ್ಟೇನ್ ಅವರ ಅಭಿಪ್ರಾಯ ಈ ಕಾರಣದಿಂದಾಗಿ ಊಳಿಗಮಾನ್ಯ ವ್ಯವಸ್ಥೆಯ ಕುರಿತಾದ ವ್ಯಾಖ್ಯಾನಗಳನ್ನು ಸ್ಟೈನ್ ಒಪ್ಪುವುದಿಲ್ಲ. ಸೆಗ್‌ಮೆಂಟರಿ ಸ್ಟೇಟ್ ವಾದದಲ್ಲಿ ಸ್ಟೈನ್ ಅವರು ರೈತರ ಅಧಿಕಾರದ ಕುರಿತು ಹೆಚ್ಚಿನ ಚರ್ಚೆ ನಡೆಸುತ್ತಾರೆ. ರೈತ ಮತ್ತು ಸಮಾಜ ಎನ್ನುವ ಕಲ್ಪನೆಯೇ ಊಳಿಗಮಾನ್ಯ ವ್ಯವಸ್ಥೆಗೆ ವಿರುದ್ಧವಾದುದು. ಏಕೆಂದರೆ ಊಳಿಗಮಾನ್ಯ ವ್ಯವಸ್ಥೆಯಲ್ಲಿ ರೈತರದ್ದು ಅತ್ಯಂತ ಕೆಳಗಿನ ಸ್ಥಾನ. ವಿಜಯನಗರವು ಚೋಳ ರಾಜ್ಯ ಪದ್ಧತಿಯ ಮುಂದುವರಿಕೆಯಾಗಿದ್ದುದರಿಂದ ಸೆಗ್‌ಮೆಂಟರಿ ರಾಜ್ಯವಾಗಿದೆ ಎಂದು ಸ್ಟೈನ್‌ರವರ ಆರಂಭದ ನಿಲುವಾಗಿತ್ತು. ಆದರೆ ವಿಜಯನಗರ ಕುರಿತಾದ ಅವರ ಅಧ್ಯಯನದ ವಿಸ್ತಾರ ಹೆಚ್ಚಾದಂತೆಲ್ಲ ಅವರು ತಮ್ಮ ನಿಲುವನ್ನು ಹಿಂದಕ್ಕೆ ಪಡೆಯಬೇಕಾಯಿತು. ವಿಜಯನಗರ ಕಾಲದಲ್ಲಿ ವ್ಯಾಪಾರ, ವಾಣಿಜ್ಯ, ಯುದ್ಧ ತಂತ್ರ ಮುಂತಾದವುಗಳಲ್ಲಿ ನಡೆದ ಅಗಾಧ ಬದಲಾವಣೆಗಳನ್ನು ಗಮನಿಸಿದ ಸ್ಟೈನ್‌ರವರು ವಿಜಯನಗರವು ಆರಂಭದಲ್ಲಿ ಸೆಗ್ಮಂಟರಿ ಪ್ರಭುತ್ವವಾಗಿದ್ದು ಕ್ರಮೇಣ ಪೆಟ್ರೋಮೋನಿಯಲ್ ಪ್ರಭುತ್ವವಾಗಿ ಮಾರ್ಪಟ್ಟಿತು ಎನ್ನುತ್ತಾರೆ. ವಿಜಯನಗರವು ಕೃಷ್ಣದೇವರಾಯನ ಕಾಲಾವಧಿಯವರಿಗೆ ಸೆಗ್ಮಂಟರಿ ವ್ಯಸ್ಥೆಯಲ್ಲಿ ಇತ್ತು. ಅಂದರೆ ಸ್ಥಾನಿಕ ಸಂಸ್ಥೆಗಳು ಪ್ರಬಲವಾಗಿದ್ದು ವಿಜಯನಗರದ ಸಾರ್ವಭೌಮತ್ವವು ಸೀಮಿತವಾಗಿತ್ತು ಹಾಗೂ ಪ್ರಭುತ್ವಕ್ಕೆ ಸೆಗ್ಮಂಟರಿ ಸ್ಟೇಟ್‌ನ ಸ್ವರೂಪವಿತ್ತು. ಆದರೆ ಬದಲಾದ ಸನ್ನಿವೇಶದಲ್ಲಿ ರಾಜರು ತಮ್ಮ ಸೈನ್ಯವು ಹಾಗೂ ಪ್ರಭುತ್ವವನ್ನು ಕೇಂದ್ರೀಕರಿಸಿಕೊಳ್ಳುವ ಅಗತ್ಯವು ಬಿದ್ದಿತು. ಈ ಮಿತಿಯಿಂದ ಹೊರಬರಲಿಕ್ಕೆ ೧೧ಳನೇ ಶತಮಾನದ ಅಂತ್ಯಾವಧಿಯಿಂದ ಅಮರನಾಯಕ ಪದ್ಧತಿಯನ್ನು ಆಶ್ರಯಿಸಲಾಯಿತು. ಕೃಷ್ಣದೇವರಾಯನು ಈ ನಾಯಕರನ್ನಾಧರಿಸಿ ತನ್ನ ರಾಜ್ಯಭಾರವನ್ನು ನಡೆಸಲು ತೊಡಗಿ ಸ್ವಾಯತ್ತ ಸಂಸ್ಥೆಗಳನ್ನು ದುರ್ಬಲಗೊಳಿಸಿದನು. ಸೈನ್ಯ ಸುಧಾರಣೆ ಕೂಡ ಈ ಪ್ರಯೋಗದ ಮತ್ತೊಂದು ಉದ್ದೇಶವಾಗಿತ್ತು. ಹಾಗೂ ಆತನು ಪ್ರಭುತ್ವವನ್ನು ಗಟ್ಟಿಗೊಳಿಸಲು ಸೆಗ್ಮಂಟರಿ ಪ್ರಭುತ್ವದ ಕಾರ್ಯ ವಿಧಾನಗಳಾದ ಸಾಂಪ್ರದಾಯಿಕ ವಿಧಿಗಳನ್ನು ಬಳಸಿದನು. ಅವನ ಕಾಲದಲ್ಲಿ ಈ ರಾಜ್ಯವು ದುರ್ಗಗಳ ನಿರ್ಮಾಣ, ದಂಡನಾಯಕರು ಹಾಗೂ ನಾಯಕರನ್ನು ಆಶ್ರಯಿಸಿ ಹಿಂದಿಗಿಂತಲೂ ಹೆಚ್ಚು ಕೇಂದ್ರ ನಿರ್ದೇಶಿತ ರಾಜ್ಯವಾಗಿ ಬದಲಾಗಿತ್ತು. ಇದು ವಿಜಯನಗರ ರಾಜ್ಯ ರಚನೆಯಲ್ಲಿ ಬದಲಾವಣೆಯನ್ನು ತಂದರೂ ಸ್ಥಾನಿಕ ಸಂಸ್ಥೆಗಳ ಬದಲಾಗಿ ನಾಯಕರು ರಾಜ್ಯಕ್ಕೆ ತೊಡಕಾದರು. ನಾಯಕರು ಸೈನ್ಯ ಸಂಘಟನೆಯನ್ನು ಮಾಡಿಕೊಂಡು ತಮ್ಮ ಪ್ರದೇಶದಲ್ಲಿ ಅಧಿಕಾರವನ್ನು ಕೇಂದ್ರೀಕರಿಸಿಕೊಂಡು ರಾಮರಾಯನ ಕಾಲಕ್ಕೆ ಬದಲಾಯಿಸಿಕೊಂಡರು. ಇಂಥ ಸನ್ನಿವೇಶದಲ್ಲಿ ರಾಮರಾಯನು ರಾಜ್ಯವನ್ನು ಪಿತೃಕೇಂದ್ರಿತವನ್ನಾಗಿ ಬದಲಾಯಿಸಿಕೊಂಡನು. ಈ ರೀತಿ ತಾಳಿಕೋಟೆ ಯುದ್ಧಕ್ಕೂ ಮೊದಲೇ ನಾಯಕ ಪ್ರಭುತ್ವಗಳು ಅಸ್ತಿತ್ವಕ್ಕೆ ಬಂದಿದ್ದವು. ಆದರೆ ತಾಳಿಕೋಟೆ ಕದನದ ನಂತರ ವಿಜಯನಗರ ವಿಘಟನೆಯು ಕಣ್ಣಿಗೆ ಕಾಣುವಂತಾಯಿತು. ನಾಯಕ ಪ್ರಭುತ್ವದಲ್ಲಿ ಮದ್ದುಗುಂಡುಗಳ ಬಳಕೆ, ಗಾಢವಾದ ಪಶ್ಚಿಮದ ವ್ಯಾಪಾರ ಹಾಗೂ ಅದರ ಮೇಲೆ ನಾಯಕರ ಹಿಡಿತ ಮುಂತಾದವು ಪ್ರಾರಂಭಿಕ ವಸಾಹತು ಕಾಲದ ಅರೆಅಧಿಕಾರಿಶಾಹಿ ರಾಜ್ಯ ವ್ಯವಸ್ಥೆಯನ್ನು ನಿರ್ಮಿಸಿದವು ಎನ್ನುತ್ತಾರೆ ಬರ್ಟನ್ ಸ್ಟೈನ್.[೪೩]

ಆದರೆ ಸ್ಪೈನ್‌ರವರ ಈ ತತ್ವ ಸಿದ್ಧಾಂತಗಳನ್ನು ಒಪ್ಪಲು ಸಾಧ್ಯವಿಲ್ಲ. ವಿಜಯನಗರ ಸಾಮ್ರಾಜ್ಯವೂ ಆರಂಭದಲ್ಲಿ ಸೆಗ್ಮೆಂಟರಿ ಪ್ರಭುತ್ವವೇ ಆಗಿರಲಿಲ್ಲ. ಅದು ಸಂಗಮ ಮನೆತನದ ಕಾಲದಿಂದಲೂ ಉಳಿಗಮಾನ್ಯ ವ್ಯವಸ್ಥೆಯ ಪ್ರಭುತ್ವವೇ ಆಗಿತ್ತು. ಸಂಗಮ ವಂಶದ ಆರಂಭದ ದೊರೆಗಳಾದ ಹರಿಹರರಾಯ ಮತ್ತು ಬುಕ್ಕರಾಯರು ಬ್ರಾಹ್ಮಣರಿಗೆ ಮತ್ತು ದೇವಾಲಯಗಳಿಗೆ ಅಪಾರ ಪ್ರಮಾಣದಲ್ಲಿ ನೀಡಿದ ಬ್ರಹ್ಮದೇಯ ಮತ್ತು ದೇವಾದೇಯಗಳೂ ಹಾಗೂ ಅಧಿಕಾರಿ ವರ್ಗಗಳಿಗೆ ದಾನದ ರೂಪದಲ್ಲಿ ನೀಡಿದ ಉಂಬಳಿಗಳು ವಿಜಯನಗರವು ಸಂಗಮರ ಕಾಲದಿಂದಲೂ ಉಳಿಗಮಾನ್ಯ ವ್ಯವಸ್ಥೆಯ ಅಡಿಯಲ್ಲಿ ನಿಂತ ಪ್ರಭುತ್ವವಾಗಿತ್ತು ಎಂಬುದನ್ನು ಸಮರ್ಥಿಸುತ್ತವೆ. ಸಂಗಮರ ಕಾಲದಲ್ಲಿಯೇ ಪ್ರಾದೇಶಿಕ ಮಟ್ಟದಲ್ಲಿ ಅಳವಡಿಕೆಯಲ್ಲಿದ್ದ ಅಮರನಾಯಕ ಪದ್ಧತಿಯು ಸಂಪೂರ್ಣವಾಗಿ ಉಳಿಗಮಾನ್ಯ ವ್ಯವಸ್ಥೆಯ ತತ್ವಗಳ ಅಡಿಯಲ್ಲಿಯೇ ಕಾರ್ಯವನ್ನು ನಿರ್ವಹಿಸುತಿತ್ತು. ಈ ವ್ಯವಸ್ಥೆಯು ಅರವೀಡು ಮನೆತನದ ಕೊನೆಯ ಅರಸ ಮೂರನೇ ಶ್ರೀರಂಗರಾಯನ ಕಾಲದವರೆಗೂ ಮುಂದುವರಿದುಕೊಂಡು ಹೋಗಿದ್ದರಿಂದ ವಿಜಯನಗರದಲ್ಲಿ ಪಿತೃಪ್ರಧಾನ ರಾಜ ಪ್ರಭುತ್ವ ಜಾರಿಗೆ ಬರಲಿಲ್ಲ. ವಿಜಯನಗರದ ವಿಘಟನೆಯ ನಂತರವೂ ಅರವೀಡು ಮನೆತನ ಅವಧಿಯಲ್ಲಿ ಅಮರನಾಯಕ ಪದ್ಧತಿಯು ಜೀವಂತವಾಗಿತ್ತು ಎಂಬುದಕ್ಕೆ ಸಮಕಾಲೀನ ಶಾಸನಗಳು ಸಮರ್ಥನೆಯನ್ನು ಒದಗಿಸುತ್ತವೆ. ಅರವೀಡು ಮನೆತನದವರು ನಾಯಕರಿಗೆ ನೀಡುತ್ತಿದ್ದ ಭೂ ದಾನಗಳು ಶಾಸನೋಕ್ತವಾಗಿದ್ದು ವಿಜಯನಗರವು ಸಂಗಮರ ಕಾಲದಿಂದ ಅರವೀಡು ಮನೆತನದ ಕಾಲಾವಧಿಯವರೆಗೂ ಪ್ರಾದೇಶಿಕ ಮಟ್ಟದಲ್ಲಿ ಉಳಿಗಮಾನ್ಯ ಪ್ರಭುತ್ವವನ್ನು ಹೊಂದಿತ್ತು ಎಂದು ನಿಸ್ಸಂದೇಹವಾಗಿ ಹೇಳಬಹುದು.

ವಿಜಯನಗರ ಕಾಲದಲ್ಲಿ ಉಪಉಳಿಗತನವನ್ನು ಸೂಚಿಸುವ ಸ್ಮಾರಕಗಳಲ್ಲಿ ಮರಣ ಸ್ಮಾರಕಗಳು ಬಹುಮುಖ್ಯವಾಗಿವೆ. ಈ ಮರಣ ಸ್ಮಾರಕಗಳನ್ನು ಮಾಸ್ತಿಕಲ್ಲು, ವೀರಗಲ್ಲು, ಬಲಿದಾನ ಕಲ್ಲು, ನಿಷದಿ ಕಲ್ಲು ಎಂಬ ಹೆಸರುಗಳಿಂದ ಕರೆಯಲಾಗಿದೆ.[೪೪] ಈ ಮರಣ ಸ್ಮಾರಕಗಳನ್ನು ಬಲಿದಾನದ ದೇಶ ಪ್ರೇಮದ, ಗಂಡನ ಮೇಲೆ ಹೆಂಡತಿಯ ಪ್ರೀತಿಯ, ಮೋಕ್ಷ ಪ್ರಾಪ್ತಿಯ ಹಿನ್ನೆಲೆಯಿಂದಷ್ಟೆ ಅಧ್ಯಯನ ನಡೆಸಿರುರುವುದು ತಿಳಿದು ಬರುತ್ತದೆ. ಇದು ಮರಣ ಸ್ಮಾರಕಗಳ ಒಂದು ಮುಖ ಮಾತ್ರ; ಅವುಗಳ ಇನ್ನೊಂದು ಮುಖ ಒತ್ತಡ–ಒತ್ತಾಯಗಳ, ನೋವಿನ ಶೋಷಣೆಯ ಹಾಗೂ ಲೌಕಿಕ–ಅಲೌಕಿಕ ಜಗತ್ತಿನ ಆಮಿಷ ಒಡ್ಡುವ ರೀತಿಯನ್ನು ಅನಾವರಣಗೊಳಿಸುತ್ತದೆ. ವಿಜಯನಗರ ಕಾಲದಲ್ಲಿ ಗೋವಿಗಾಗಿ, ಗ್ರಾಮಕ್ಕಾಗಿ ಹೋರಾಡಿದವರ ಜೊತೆಗೆ ಹುಲಿಯನ್ನು ಕೊಂದವರಿಗೂ ಮರಣ ಸ್ಮಾರಕಗಳಾದ ವೀರಗಲ್ಲುಗಳನ್ನು ಹಾಕಿಸಲಾಗಿದೆ. ಈ ವೀರಗಲ್ಲುಗಳನ್ನು ಹಾಕಿಸಿದಾಗ ಆ ಕುಟುಂಬಗಳಿಗೆ ವಿಜಯನಗರದ ಅರಸರು ಹಾಗೂ ಅಧಿಕಾರಿ ವರ್ಗವೂ ಭೂಮಿಯನ್ನು ದಾನವಾಗಿ ನೀಡುತ್ತಿದ್ದು, ಶಾಸನಗಳಲ್ಲಿ ಅದನ್ನು ನೆತ್ತರು ಕೊಡುಗೆ ಎಂದೇ ಉಲ್ಲೇಖಿಸಲಾಗಿದೆ.

ವಿಜಯನಗರ ಕಾಲದಲ್ಲಿ ಅರಸ ಮತ್ತು ಆತನ ಅಧಿಕಾರಿ ವರ್ಗವು ದೇವಾಲಯಗಳಿಗೆ ಕೆರೆ ಕಾಲುವೆಗಳ ನಿರ್ಮಾಣಕ್ಕಾಗಿ ಅಗ್ರಹಾರಗಳ ಜೀರ್ಣೋದ್ಧಾರ ಹಾಗೂ ಹೊಸ ಅಗ್ರಹಾರಗಳ

ನಿರ್ಮಾಣಕ್ಕಾಗಿ ಹಳ್ಳಿಯ ಮುಖಂಡರಿಗೆ ಹಾಗೂ ತಮ್ಮ ಸೇವೆಗಾಗಿ ನಿಯುಕ್ತಿಗೊಂಡು ಬಲಿದಾನ ನೀಡಿದ ವೀರರ ಸೇವೆಗಾಗಿ ಭೂಮಿಯನ್ನು ದಾನವಾಗಿ ನೀಡಲಾಗುತ್ತಿತ್ತು. ಈ ಪ್ರಕ್ರಿಯೆಗಳು ರಾಜ್ಯದೊಳಗೆ ಹೊಸ ಭೂ ಮಾಲೀಕ ವರ್ಗಗಳು ಉದಯವಾಗಲು ಕಾರಣವಾದವು.

ವಿಜಯನಗರದ ಅರಸರು ಭೂ ದಾನಗಳನ್ನು ಹೆಚ್ಚಾಗಿ ನೀಡುವುದರ ಮೂಲಕ ತಮ್ಮ ಸಾಮಂತರ ಮತ್ತು ಅಧೀನ ನಾಯಕರುಗಳ ಮೇಲೆ ಹೆಚ್ಚು ಹತೋಟಿಗಳನ್ನು ಸಾಧಿಸಿದರು. ವಿಜಯನಗರದ ಶ್ರೇಣೀಕೃತ ಅಧಿಕಾರ ವ್ಯವಸ್ಥೆಯಲ್ಲಿ ಮಧ್ಯವರ್ತಿಗಳಾಗಿ ಹುಟ್ಟಿಕೊಂಡ ಅಮರನಾಯಕರು ಪ್ರಭುತ್ವ ಮತ್ತು ಜನತೆಯ ನಡುವೆ ನಿರ್ಣಾಯಕ ಪಾತ್ರವನ್ನು ವಹಿಸಿದರು. ಅಮರನಾಯಕರು ಕೃಷಿಕರು ಹಾಗೂ ಇತರ ಉತ್ಪಾದಕ ವರ್ಗಗಳ ಮೇಲೆ ನೇರ ನಿಯಂತ್ರಣವನ್ನು ಹೊಂದಿದ್ದರು. ಮಧ್ಯವರ್ತಿಗಳಾದ ಅಮರನಾಯಕರು ರೈತರು ಮತ್ತು ಕೃಷಿ ಕಾರ್ಮಿಕರ ಪಾಲಿಗೆ ಅರಸರಂತೆಯೇ ಕಾಣಿಸಿಕೊಂಡರು. ಈ ವ್ಯವಸ್ಥೆಯು ಊಳಿಗಮಾನ್ಯ ಉತ್ಪಾದನಾ ವ್ಯವಸ್ಥೆಯ ಎಲ್ಲ ಲಕ್ಷಣಗಳನ್ನು ಹೊಂದಿದ್ದು, ಕೃಷಿಕರು ಮತ್ತು ಉತ್ಪಾದಕ ವರ್ಗದವರನ್ನು ಎಲ್ಲ ಹಂತಗಳಲ್ಲಿಯೂ ಶೋಷಣೆಗೆ ಈಡು ಮಾಡಿತು. ವಿಜಯನಗರದ ಅರಸರಿಂದ ಭೂಮಿಯನ್ನು ದಾನವಾಗಿ ಪಡೆದ ಅಮರನಾಯಕರು ಅಗ್ರಹಾರಗಳು, ದೇವಾಲಯಗಳು ಮೊದಲಾದ ಖಾಸಗಿ ಒಡೆತನದ ಸಂಸ್ಥೆಗಳು ತೆರಿಗೆಗಳಿಂದ ಮುಕ್ತರಾಗಿದ್ದರು. ಇಂತಹ ಭೂದಾನಗಳು ಹೆಚ್ಚಾದಂತೆಲ್ಲ ಗ್ರಾಮಗಳ ಮೇಲೆ ತೆರಿಗೆಯ ಭಾರವೂ ಹೆಚ್ಚಾಗುತ್ತ ಹೋಯಿತು. ಮಧ್ಯಯುಗದ ಭಾರತದ ಊಳಿಗಮಾನ್ಯ ವ್ಯವಸ್ಥೆಯಲ್ಲಿ ರಾಷ್ಟ್ರಕೂಟರು ಮತ್ತು ಹೊಯ್ಸಳರ ಕಾಲದ ಜಹಗೀರುದಾರರು ಪ್ರಭುವಿಗೆ ಅಧೀನರಾಗಿದ್ದರು. ಅದು ಬಹುತೇಕ ಸೇನಾ ಅಧೀನತೆಯ ರೂಪದ್ದಾಗಿತ್ತು. ಹಾಗೆಯೇ ಸಾಮಂತನೊಬ್ಬನ ಕೆಳಗೆ ಅನೇಕ ಉಪ ಸಾಮಂತರಿರುತ್ತಿದ್ದರು. ರಾಷ್ಟ್ರಕೂಟರ ಕಾಲದಲ್ಲಿ ಈ ಉಪ ಸಾಮಂತಕೀರಣವನ್ನು ಸ್ಪಷ್ಟವಾಗಿ ಗುರುತಿಸಬಹುದು. ಹೀಗೆ ಉಪಸಾಮಂತರು ತಮ್ಮ ಸಾಮಂತರಿಗೆ, ಸಾಮಂತರು, ಮಹಾ ಸಾಮಂತಾಧಿಪತಿಗಳಿಗೆ, ಮಹಾ ಸಾಮಂತಾಧಿಪತಿಗಳು ಮಹಾರಾಜರಿಗೆ ಸೇವೆಯನ್ನು ಸಲ್ಲಿಸುತ್ತಿದ್ದರು. ವಿಜಯನಗರ ಕಾಲದಲ್ಲಿ ನಾಯಕರು ಸೈನಿಕ ಸೇವೆಯ ಷರತ್ತಿನ ಮೇಲೆ ರಾಜನಿಂದ ಭೂಮಿಯನ್ನು ಪಡೆದುಕೊಂಡು ತಾವೇ ಆ ಭೂಮಿಯ ನಿಜವಾದ ಒಡೆಯರಂತೆ ವರ್ತಿಸುತ್ತಿದ್ದರು. ಹಾಗೂ ತಮ್ಮ ಒಡೆತನದ ಭೂಮಿಯನ್ನು ಅಧೀನ ನಾಯಕರುಗಳಾಗಿ ಹಂಚುವುದರ ಮೂಲಕ ಉಪ ಊಳಿಗತನವನ್ನು ಸೃಷ್ಟಿಸಿಕೊಂಡಿದ್ದರು. ತಮ್ಮ ಅಧೀನ ನಾಯಕರಿಗೆ ಒಂದೆರಡು ಹಳ್ಳಿಗಳನ್ನು ನೀಡುವುದರ ತಮಗೆ ಅಧೀನರಾಗುವಂತೆ ನೋಡಿಕೊಳ್ಳುತ್ತಿದ್ದರು.

ಮಿಲಿಟರಿ ಮತ್ತು ಭೂ ಹಿಡುವಳಿಗಳ ಸಮ್ಮಿಶ್ರಣವೇ ಫ್ಯೂಡಲ್ ವ್ಯವಸ್ಥೆಯ ಉಸಿರು. ಇವು ಒಂದನ್ನು ಹೊರತುಪಡಿಸಿ ಮತ್ತೊಂದು ಇರಲು ಸಾಧ್ಯವೇ ಇಲ್ಲ. ವಿಜಯನಗರದ ರಾಜ್ಯಾಡಳಿತದಲ್ಲಿ ಮಿಲಿಟರಿ ಮತ್ತು ಭೂ ಹಿಡುವಳಿಗಳು ಒಂದಕ್ಕೊಂದು ಹೇಗೆ ಬೆಸೆದುಕೊಂಡಿದ್ದವು ಎಂಬುದನ್ನು ಹಾಗೂ ಅಧಿಕಾರದ ವಿಭಜನೆ ಮತ್ತು ನಿಷ್ಠೆಯ ವಿಭಜನೆಗಳು ಹೇಗೆ ಹೊಂದಿಕೊಂಡಿದ್ದವು ಎಂಬುದನ್ನು ರೇಖಾಚಿತ್ರದ ಮೂಲಕ ತಿಳಿಸಬಹುದು.

ವಿಜಯನಗರದ ಅರಸ　　　↓ಅಧಿಕಾರ ವಿಭಜನೆ
↓↑
ಮಹಾ ಪ್ರಧಾನ　　　↑ ನಿಷ್ಠೆಯ ಸಂಕೇತ
↓↑
ಮಹಾಮಂಡಲೇಶ್ವರ
↓↑
ದಂಡನಾಯಕ
↓↑
ಮಹಾ ನಾಯಕಾಚಾರ್ಯ
↓↑
ಅಮರನಾಯಕ
↓↑
ಉಪ ನಾಯಕ
↓↑
ರೈತ–ಕೃಷಿ ಕಾರ್ಮಿಕ

ರಾಜ : ವಿಜಯನಗರ ಕಾಲದಲ್ಲಿ ಕೇಂದ್ರದಲ್ಲಿ ಬಲಯುತವಾದ ಕೇಂದ್ರ ಸರಕಾರವಿರುತ್ತಿತ್ತು. ಸಂಗಮ ವಂಶದ ಹರಿಹರರಾಯನಿಂದ ಹಿಡಿದು ತುಳುವ ವಂಶದ ಕೃಷ್ಣದೇವರಾಯನವರೆಗೂ (ಕೆಲವರನ್ನು ಹೊರತುಪಡಿಸಿ) ಎಲ್ಲರೂ ಯುದ್ಧ ಕಲಿಗಳಾಗಿದ್ದು ಯುದ್ಧಗಳಲ್ಲಿ ದಂಡನಾಯಕರು ಮತ್ತು ಸೈನಿಕ ಸಿಬ್ಬಂದಿಯನ್ನು ಸಂಘಟಿಸುವ ಚಾಣಾಕ್ಷರಾಗಿದ್ದರು. ಸಂಗಮ ವಂಶದ ಹರಿಹರನ ಶೌರ್ಯ ಪರಾಕ್ರಮವನ್ನು ಕುರಿತು ವಿವರಿಸುವ ಹಂಪಿಯ ಕನಕಗಿರಿ ಗೋಪುರದ ಶಿಲಾ ಶಾಸನವು ಇಡೀ ಭೂ ಮಂಡಲದಲ್ಲಿರುವ ರಾಜನ ಶಿರಸ್ಸುಗಳು ಹರಿಹರನಿಗೆ ಬಾಗುತ್ತಿದ್ದವು ಎಂದು ವರ್ಣಿಸಿದೆ.[೪೫] ಅಂದರೆ ಹರಿಹರನ ಕ್ಷಾತ್ರ ತೇಜಸ್ಸು ಅವನ ಶಕ್ತಿ ಸಾಮರ್ಥ್ಯಗಳಿಗೆ ಬಹುತೇಕ ರಾಜರು ಅವನ ಸಾರ್ವಭೌಮತ್ವವನ್ನು ಒಪ್ಪಿಕೊಂಡಿರುವುದು ಇದರಿಂದ ಸ್ಪಷ್ಟವಾಗುತ್ತದೆ. ವಿಜಯನಗರದ ರಾಜ್ಯಾಡಳಿತದಲ್ಲಿ ರಾಜ್ಯ ಮತ್ತು ಕೇಂದ್ರಾಡಳಿತದ ಮೇಲ್ವಿಚಾರಕನಾಗಿದ್ದ ರಾಜನು ಧರ್ಮ ಮತ್ತು ನ್ಯಾಯದ ಮಾರ್ಗದಲ್ಲಿ ಆಡಳಿತವನ್ನು ನಡೆಸುತ್ತಿದ್ದ. ವಿಜಯನಗರ ರಾಜನು ತನ್ನ ಕೆಳಗಿನ ಮಹಾ ಪ್ರಧಾನ, ಮಹಾಮಂಡಲೇಶ್ವರ, ದಂಡನಾಯಕ, ಅಮರನಾಯಕರಿಂದ ನಿಷ್ಠೆಯನ್ನು ಅಪೇಕ್ಷಿಸುತ್ತಿದ್ದ. ಈ ಬಗೆಯ ನಿಷ್ಠೆಯನ್ನು ಅಪೇಕ್ಷಿಸುವುದು ಊಳಿಗಮಾನ್ಯ ವ್ಯವಸ್ಥೆಯ ಪ್ರಧಾನ ಲಕ್ಷಣವಾಗಿತ್ತು.

ಇಲ್ಲಿ ವಿಜಯನಗರದ ಅರಸ ಅಧಿಕಾರದ ಶ್ರೇಣಿಯಲ್ಲಿ ತುತ್ತ ತುದಿಯಲ್ಲಿದ್ದರೆ ತನ್ನ ಕೆಳಗಿನ ಮಹಾಪ್ರಧಾನ, ದಂಡನಾಯಕ, ಅಮರನಾಯಕರಿಂದ ನಿಷ್ಠೆಯನ್ನು ಬಯಸುತ್ತಿದ್ದ. ಉದಾ: ಅಮರನಾಯಕರು, ದಂಡನಾಯಕರು ಮಹಾಮಂಡಲೇಶ್ವರರು, ಮಹಾ ಪ್ರಧಾನರು ರಾಜನಿಂದ ಭೂಮಿಯನ್ನು ಉಂಬಳಿಗಳ ರೂಪದಲ್ಲಿ ದಾನವಾಗಿ ಸ್ವೀಕರಿಸಿ ನಿಷ್ಠೆಯಿಂದಿರುತ್ತಿದ್ದರು. ಸಾಮ್ರಾಜ್ಯದ ಭೂಮಿಯೆಲ್ಲವೂ ರಾಜನಿಗೆ ಸೇರಿದ್ದರೂ ನಾಯಕರು ಭೂಮಿಯನ್ನು ದಾನವಾಗಿ ರಾಜನಿಂದ ಪಡೆದು ಭೂಮಿಯ ನಿಜವಾದ ಒಡೆಯನಾಗಿರುತ್ತಿದ್ದರು.

ಅಧಿಕಾರದ ಶ್ರೇಣಿ ಮತ್ತು ಸ್ಥಾನಮಾನಗಳಲ್ಲಿ ೨ನೇ ಸ್ಥಾನದಲ್ಲಿದ್ದ ವರ್ಗವೆಂದರೆ ಮಹಾ ಪ್ರಧಾನ ಹಾಗೂ ಮಹಾಮಂಡಲೇಶ್ವರ ವರ್ಗ.

(ಬಿ) ಮಹಾಪ್ರಧಾನ, ಮಹಾಮಂಡಲೇಶ್ವರ: ಮಹಾಪ್ರಧಾನರು ಮತ್ತು ಮಹಾಮಂಡಲೇಶ್ವರರು ಅಧಿಕಾರ ಶ್ರೇಣಿ ಮತ್ತು ಸ್ಥಾನಮಾನಗಳ ಹಂಚಿಕೆಯ ದೃಷ್ಟಿಯಿಂದ ಎರಡನೇ ಸ್ಥಾನದಲ್ಲಿದ್ದರು. ಮಹಾಪ್ರಧಾನರು ವಿಜಯನಗರದ ಅರಸರಿಂದ ಕೆಲವು ಪ್ರದೇಶಗಳನ್ನು ನಾಯಕತನಕ್ಕಾಗಿ ಪಡೆದುಕೊಳ್ಳುತ್ತಿದ್ದರು. ಅದರಂತೆ ಮಹಾಮಂಡಲೇಶ್ವರರು ೪೦ಕ್ಕಿಂತ ಹೆಚ್ಚು ಗ್ರಾಮಗಳನ್ನು ಉಂಬಳಿಯಾಗಿ ಪಡೆದುಕೊಂಡು ರಾಜನ ಕಾರ್ಯಕರ್ತರಾಗಿ ಸೇವೆಯನ್ನು ಸಲ್ಲಿಸುತ್ತಿದ್ದರು. ಇವರು ವಿಜಯನಗರ ರಾಜನ ನೇರ ಸಂಪರ್ಕದಲ್ಲಿರುತ್ತಿದ್ದರು.

(ಸಿ) ದಂಡನಾಯಕ: ವಿಜಯನಗರ ಕಾಲದಲ್ಲಿ ದಂಡನಾಯಕನಿಗೆ ದಣ್ಣಾಯಕ, ದಳವಾಯಿ, ದಳನಾಯಕ, ಸೇನಾಧಿಪತಿ, ಸರ್ವ ಸೈನ್ಯಾಧಿಕಾರಿ ಇನ್ನು ಮುಂತಾದ ಹೆಸರುಗಳಿಂದ ಕರೆಯಲಾಗುತಿತ್ತು. ಎರಡನೆ ದೇವರಾಯನ ಕಾಲಕ್ಕೆ ಭೇಟಿ ನೀಡಿದ್ದ ಪರ್ಶಿಯನ್ ಪ್ರವಾಸಿ ಅಬ್ದುಲ್ ರಜಾಕ್ ಹೇಳುವಂತೆ ರಾಜನ ಅರಮನೆಯ ಮಂದೆ ಎತ್ತರವಾದ ವೇದಿಕೆಯ ಮೇಲೆ ದೈಯ್ಯಾಂಗ್ (ಡಣನಾಯಕ ಅಥವಾ ದಿವಾನ)ಎಂದು ಕರೆಯಲ್ಪಡುವ ಒಬ್ಬ ಖೋಜಾ ಕುಳಿತುಕೊಂಡಿದ್ದಾನೆ. ಹಜಾರದ ಕೊನೆಯಲ್ಲಿ ಸಾಲಾಗಿ ಚೋಪ್‌ದಾರರು ನಿಂತಿರುತ್ತಾರೆ. ಯಾವ ಕಾರ್ಯ ನಿಮಿತ್ತವಾಗಿ ಯಾರು ಬಂದರೂ ಚೋಪದಾರರ ಎರಡು ಸಾಲುಗಳ ಮಧ್ಯೆ ನಡೆದು ಬಂದ ದೈಯ್ಯಾಂಗನಿಗೆ ಕಾಣಿಕೆಯನ್ನು ಅರ್ಪಿಸಿ ದೀರ್ಘದಂಡ ನಮಸ್ಕಾರ ಮಾಡಿ ಎದ್ದು ನಿಂತು ಆಮೇಲೆ ತಮ್ಮ ಅಹವಾಲನ್ನು ಹೇಳಿಕೊಳ್ಳಬೇಕು. ದೈಯ್ಯಾಂಗನು ಅಹವಾಲನ್ನು ಕೇಳಿ ರಾಜ್ಯದಲ್ಲಿರುವ ನಿಯಮಾನುಸಾರ ತೀರ್ಪು ಕೊಡುತ್ತಾನೆ. ಈ ತೀರ್ಪಿನ ಮೇಲೆ ಅಫೀಲೇ ಇಲ್ಲ.[೪೬]

ದಿವಾನಖಾನೆಯಿಂದ ದೈಯಾಂಗ್ ಹೊರಟಾಗು ಅವನ ಮುಂದೆ ವಿವಿಧ ಬಣ್ಣದ ಛತ್ರಿಗಳನ್ನು ಹಿಡಿದುಕೊಂಡು ಹೋಗುತ್ತಾರೆ. ವಾದ್ಯಗಳು ಮೊಳಗುತ್ತವೆ. ಅವನ ಅಕ್ಕಪಕ್ಕದಲ್ಲಿ ಹೋಗುವ ಹೊಗಳುಭಟ್ಟರು ಬಹು ಪರಾಕು ಹೊಗಳುತ್ತಿರುತ್ತಾರೆ. ರಾಜನಿರುವ ಅರಮನೆಯನ್ನು ಮುಟ್ಟುವ ಮುನ್ನ ೭ ಬಾಗಿಲುಗಳನ್ನು ದಾಟಿ ಹೋಗಬೇಕು. ಪ್ರತಿಯೊಂದು ಬಾಗಿಲನ್ನು ಒಬ್ಬೊಬ್ಬ ದ್ವಾರಪಾಲಕನು ಕಾಯುತ್ತಿರುತ್ತಾನೆ. ದೈಯ್ಯಾಂಗನು ಪ್ರತಿ ಬಾಗಿಲಿಗೆ ಬಂದಾಗ ಛತ್ರಗಳನ್ನು (?) ಬಿಚ್ಚುತ್ತಾರೆ. ಏಳನೆಯ ಬಾಗಿಲನ್ನು ದೈಯ್ಯಾಂಗನೊಬ್ಬನೇ ಪ್ರವೇಶಿಸಿ ರಾಜನಿಗೆ ಕೇವಲ ಐದು ನಿಮಿಷಗಳಲ್ಲಿ ರಾಜ್ಯದ ಆಡಳಿತದ ವರದಿಯನ್ನು ಒಪ್ಪಿಸಿ ಹಿಂತಿರುಗುತ್ತಾನೆ. ರಾಜನ ಅರಮನೆಯ ಹಿಂಭಾಗದಲ್ಲಿ ದೈಯ್ಯಾಂಗನ ವಾಸದ ಮನೆಯಿದೆ.[೪೭]

ಅಬ್ದುಲ್ ರಜಾಕ್ ನೀಡಿರುವ ವರದಿಯನ್ನು ಗಮನಿಸಿದರೆ ದಂಡನಾಯಕರಿಗೂ ರಾಜನಿಷ್ಠೆ ಗೌರವವಿರುವುದು ಸ್ಪಷ್ಟವಾಗುತ್ತದೆ. ದಂಡನಾಯಕರ ಕೆಳಗಿನವರು, ಅಧಿಕಾರಿಗಳು, ನಾಯಕರು ದಂಡನಾಯಕರಿಗೆ ಗೌರವ ಮರ್ಯಾದೆಗಳನ್ನು ಮತ್ತು ನಿಷ್ಠೆಯನ್ನು ತೋರಿಸುತ್ತಿದ್ದರು.

ಕೃಷ್ಣದೇವರಾಯನು ಕೊಂಡವೀಡು ಪ್ರದೇಶವನ್ನು ಗೆದ್ದಾಗ ಅದರ ಆಡಳಿತವನ್ನು ನೋಡಿಕೊಳ್ಳಲು ಸಾಳುವ ತಿಮ್ಮನನ್ನು ನೇಮಿಸಿದನೆಂದು ನ್ಯೂನಿಜ್ ಹೇಳುತ್ತಾನೆ.

ಹೀಗೆ ರಾಜನ ನಂತರದ ಸ್ಥಾನ ಮಹಾ ದಂಡನಾಯಕರದ್ದಾಗಿದ್ದು ಇವರ ಕೆಳಗಡೆ ದಂಡನಾಯಕರುಗಳು ಹಾಗೂ ಹಲವಾರು ದಳವಾಯಿಗಳು ಕಾರ್ಯವನ್ನು ನಿರ್ವಹಿಸುತ್ತಿದ್ದರು.

(ಡಿ) ದಳವಾಯಿಗಳು: ದಂಡನಾಯಕರುಗಳ ಅಧೀನದಲ್ಲಿರುತ್ತಿದ್ದವರೇ ದಳವಾಯಿಗಳು; ಇವರು ಮಹಾ ದಂಡನಾಯಕರಿಗೆ ಸಹಾಯಕರಾಗಿ ಪ್ರಾಂತೀಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು.

(ಇ) ಅಮರನಾಯಕರು: ದಂಡನಾಯಕರ ಅಧೀನ ಅಧಿಕಾರಿಗಳೇ ಅಮರನಾಯಕರು. ಈ ನಾಯಕರು ತಮ್ಮ ನಿಷ್ಠೆಯನ್ನು ದಂಡನಾಯಕರಿಗೂ, ಮಹಾದಂಡನಾಯಕರಿಗೂ, ಮಹಾ ಮಂಡಲೇಶ್ವರರಿಗೂ ಹಾಗೂ ವಿಜಯನಗರದ ಅರಸನಿಗೂ ತೋರಿಸಬೇಕಿತ್ತು. ವಿಜಯನಗರದ ಸಂಗಮ ದೊರೆಗಳಿಂದ ಆರಂಭವಾದ ಅಮರನಾಯಕ ಪದ್ಧತಿಯು ತುಳುವ ವಂಶದ ಸದಾಶಿವರಾಯನ ಕಾಲದವರೆಗೂ ಪ್ರಾಂತೀಯ ಮಟ್ಟದಲ್ಲಿ ಅತ್ಯಂತ ಯಶಸ್ವಿಯಾಗಿ ಜಾರಿಯಲ್ಲಿತ್ತು. ಈ ಪದ್ಧತಿಯೇ ಮುಂದೆ ರಾಮರಾಯನ ಕಾಲದಲ್ಲಿ ತಾಳಿಕೋಟೆ ಕದನದ ನಂತರ ವಿಜಯನಗರ ಪತನವಾಗಲು ಕಾರಣವಾಯಿತು. ಈ ಅಮರನಾಯಕ ವ್ಯವಸ್ಥೆಯಲ್ಲಿ ಮೂರು ವರ್ಗದ ನಾಯಕರಿದ್ದು ವರ್ಗಗಳಲ್ಲಿಯೂ ನಿಷ್ಠೆ ಎನ್ನುವುದು ಕೆಳಗಿನಿಂದ ಮೇಲಕ್ಕೆ ಹಂಚಿಕೆಯಾಗುತ್ತಿದ್ದನ್ನು ಗುರುತಿಸಬಹುದು.

(ಎಫ್) ರೈತಾಪಿ ವರ್ಗ: ಈ ವರ್ಗ ಸಂಪೂರ್ಣವಾಗಿ ಅಮರನಾಯಕರಿಗೆ ವಿಧೇಯಕರಾಗಿರುತ್ತಿದ್ದ ವರ್ಗ. ಈ ವರ್ಗವೇ ಸಾಮ್ರಾಜ್ಯದ ಆರ್ಥಿಕ ಸದೃಢತೆಗೆ ಅವಶ್ಯಕವೆನಿಸಿದ ತೆರಿಗೆಯನ್ನು ಸಂದಾಯ ಮಾಡುತ್ತಿತ್ತು. ರೈತರು ತಾವು ಬೆಳೆದ ಬೆಳೆಯಲ್ಲಿ ಅಥವಾ ತಮ್ಮ ಉತ್ಪನ್ನದ ಒಂದು ಭಾಗವನ್ನು ನಾಯಕರಿಗೆ ಸಲ್ಲಿಸುತ್ತಿದ್ದರು. ಹೀಗೆ ನಾಯಕರು ತಮ್ಮ ಪ್ರದೇಶದಲ್ಲಿ ವಸೂಲಿಯಾಗಿದ್ದ ಕಂದಾಯವನ್ನು ವಿಜಯನಗರದ ರಾಜನಿಗೆ ಸಲ್ಲಿಸುತ್ತಿದ್ದರು. ರೈತರು ಮತ್ತು ಸರಕಾರದ ಮಧ್ಯೆ ಭೂಮಾಲೀಕರಾಗಿದ್ದ ನಾಯಕರು ಮಧ್ಯವರ್ತಿಗಳಾಗಿ ಕೆಲಸ ಮಾಡುತ್ತಿದ್ದರು. ರೈತರು ಮತ್ತು ಜನ ಸಾಮಾನ್ಯರು, ಕೃಷಿ ಕಾರ್ಮಿಕ ವರ್ಗವು ಅಮರನಾಯಕರನ್ನು ದೊರೆಗಳಂತೆ ಗೌರವಿಸಿ ನಿಷ್ಠೆಯನ್ನು ವ್ಯಕ್ತಪಡಿಸುತ್ತಿದ್ದರು.

ಒಟ್ಟಿನಲ್ಲಿ ಕೃಷಿ ಕಾರ್ಮಿಕ ವರ್ಗ ರೈತಾಪಿ ವರ್ಗವು ಅಮರನಾಯಕರನ್ನು ದೊರೆಗಳಂತೆ ಗೌರವಿಸಿ ನಿಷ್ಠೆಯನ್ನು ವ್ಯಕ್ತಪಡಿಸಿದರೆ, ಅಮರನಾಯಕರು ದಳವಾಯಿಗಳಿಗೆ, ದಳವಾಯಿಗಳು ಮಹಾದಂಡನಾಯಕರಿಗೆ ಮಹಾದಂಡನಾಯಕರು ವಿಜಯನಗರದ ಅರಸನಿಗೆ ನಿಷ್ಠೆಯನ್ನು ವ್ಯಕ್ತ ಪಡಿಸುತ್ತಿದ್ದರು. ಇದು ವಿಜಯನಗರ ಕಾಲದ ಫ್ಯೂಡಲ್ ವ್ಯವಸ್ಥೆಯ ಪ್ರಧಾನ ಲಕ್ಷಣವಾಗಿತ್ತು.

ಕೊನೆ ಟಿಪ್ಪಣಿಗಳು

೧. ಎಪಿಗ್ರಾಫಿಯಾ ಕರ್ನಾಟಿಕಾ ಶಾಸನ ಸಂಪುಟ–೯, ಮೈಸೂರು ವಿಶ್ವವಿದ್ಯಾನಿಲಯ, ಪು. ೫೩೫.

೨. ಅದೇ, ಪೂರ್ವೋಕ್ತ, ಪು. ೫೧೯.

೩. ಅದೇ, ಪೂರ್ವೋಕ್ತ, ಪು. ೧೪೨.

೪. ಅದೇ, ಪೂರ್ವೋಕ್ತ, ಪು. ೪೭೮.

೫. ಅದೇ, ಪೂರ್ವೋಕ್ತ, ಪು. ೫೧೦.

೬. ಅದೇ, ಪೂರ್ವೋಕ್ತ, ಪು. ೨೦೪.

೭. ಅದೇ, ಪೂರ್ವೋಕ್ತ, ಪು. ೪೧೬.

೮. ಅದೇ, ಪೂರ್ವೋಕ್ತ, ಪು. ೪೩೬.

೯. ಅದೇ, ಪೂರ್ವೋಕ್ತ, ಪು. ೪೩೬.

೧೦. ಎಪಿಗ್ರಾಫಿಯಾ ಕರ್ನಾಟಿಕಾ, ಶಾಸನ ಸಂಪುಟ–೮, ಮೈಸೂರು ವಿಶ್ವವಿದ್ಯಾನಿಲಯ, ಪು. ೪೦೦.

೧೧. ಅದೇ, ಪೂರ್ವೋಕ್ತ, ಪು. ೬೦.

೧೨. ಅದೇ, ಪೂರ್ವೋಕ್ತ, ಪು. ೮೨.

೧೩. ಅದೇ, ಪೂರ್ವೋಕ್ತ, ಪು. ೧೦೬.

೧೪. ಅದೇ, ಪೂರ್ವೋಕ್ತ, ಪು. ೧೫೬.

೧೫. ಅದೇ, ಪೂರ್ವೋಕ್ತ, ಪು. ೨೮೮.

೧೬. ಅದೇ, ಪೂರ್ವೋಕ್ತ, ಪು. ೨೮೯.

೧೭. ಅದೇ, ಪೂರ್ವೋಕ್ತ, ಪು. ೨೧೪.

೧೮. ಅದೇ, ಪೂರ್ವೋಕ್ತ, ಪು. ೧೧೬.

೧೯. ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ–೧೧, ಮೈಸೂರು ವಿಶ್ವವಿದ್ಯಾನಿಲಯ, ಪು. ೧೧೬, ೧೧೭.

೨೦. ಎಪಿಗ್ರಾಫಿಯಾ ಕರ್ನಾಟಿಕಾ ಶಾಸನ ಸಂಪುಟ–೪, ಮೈಸೂರು ವಿಶ್ವವಿದ್ಯಾನಿಲಯ, ಪು. ೫೨.

೨೧. ಅದೇ, ಪೂರ್ವೋಕ್ತ, ಪು. ೨೨೯.

೨೨. ಅದೇ, ಪೂರ್ವೋಕ್ತ, ಪು. ೧೫.

೨೩. ನೀಲಕಂಠಶಾಸ್ತ್ರಿ, ಎ ಹಿಸ್ಟರಿ ಆಫ್ ಸೌತ್ ಇಂಡಿಯಾ ಫ್ರಮ್ ಹಿಸ್ಟಾರಿಕ್ ಟೈಮ್ ಟು ಫಾಲ್ ಆಫ್ ವಿಜಯನಗರ ಪು. ೨೦೧.

೨೪. ಯೋಗೀಶ್ವರಪ್ಪ ಡಿ.ಎನ್., ವಿಜಯನಗರ ಕಾಲದ ಅಮರನಾಯಕ ಪದ್ಧತಿ ಸೈದ್ಧಾಂತಿಕ ವಿಶ್ಲೇಷಣೆ, ಚರಿತ್ರೆ ಅಧ್ಯಯನ ಸಂಪುಟ–೫, ಪು. ೯೪.

೨೫. ಲಕ್ಷ್ಮಣ್ ತೆಲಗಾವಿ ಎಪ್ಪತ್ತೇಳು ಪಾಳೆಯಗಾರರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೬೦.

೨೬. ವೆಂಕಟರತ್ನಂ ಎ.ಬಿ. ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರಕಾರಗಳು, ಪು. ೨೧.

೨೭. ಕೃಷ್ಣಸ್ವಾಮಿ ಪಿಳ್ಳೆ, ತಮಿಳ್ ಕಂಟ್ರಿ ಅಂಡರ್ ವಿಜಯನಗರ, ಪು. ೧೮೧

೨೮. ಮೋಹನ್‌ಕೃಷ್ಣ ರೈ, ಚರಿತ್ರೆ ಅಧ್ಯಯನ ಸಂಪುಟ–೫, ಪು. ೭.

೨೯. Karrshima Noboru, A concordance of Nayakas the Vijayanagara P. 25.

೩೦. Subbarayalu Y. An Overview of Vijayanagara Historiography, p. 3.

೩೧. ಷೇಕ್ ಅಲಿ (ಸಂ), ಕರ್ನಾಟಕ ಚರಿತ್ರೆ ಸಂಪುಟ–೩, ಪು. ೬೫.

೩೨. ಅದೇ, ಪೂರ್ವೋಕ್ತ, ಪು. ೬೬.

೩೩. ಮೋಹನ್‌ಕೃಷ್ಣ ರೈ, ಪ್ರಭುತ್ವ ಮತ್ತು ಜನತೆ, ಪು. ೩೮.

೩೪. Simha, Fedalism in Indian Context the myth of Indian Edudalism, P. 20.

೩೫. ಮೋಹನ್‌ಕೃಷ್ಣ ರೈ, ಪೂರ್ವೋಕ್ತ ಪು. ೮೮.

೩೬. ಯೋಗೀಶ್ವರಪ್ಪ ಡಿ.ಎನ್., ಪೂರ್ವೋಕ್ತ, ಪು. ೯೫.

೩೭. ವೆಂಕಟರಾಮಣ್ಣ, ವಿಜಯನಗರ ಇತಿಹಾಸಕ್ಕೆ ಕೋಲಾರ ಜಿಲ್ಲೆಯ ಕೊಡುಗೆ, ಪು. ೧೦೫.

೩೮. ಅದೇ, ಪೂರ್ವೋಕ್ತ, ಪು. ೧೦೬.

೩೯. ಷೇಕ್ ಅಲಿ (ಸಂ), ಪೂರ್ವೋಕ್ತ, ಪು. ೭೧

೪೦. ಅದೇ, ಪೂರ್ವೋಕ್ತ, ಪು. ೭೧

೪೧. ಶರ್ಮ ಆರ್.ಎಸ್., ಇಂಡಿಯನ್ ಫ್ಯೂಡಲಿಸಮ್ ಪು. ೧೦೫.

೪೨. ಮೋಹನ್‌ಕೃಷ್ಣ ರೈ, ಪೂರ್ವೋಕ್ತ, ಪು. ೪೨.

೪೩. ರಾಜಾರಾಮ ಹೆಗಡೆ, ವಸಾಹತುಪೂರ್ವ ಕರ್ನಾಟಕದ ರಾಜ್ಯವ್ಯವಸ್ಥೆ, ಪು. ೨೨.

೪೪. ಮೋಹನ್‌ಕೃಷ್ಣ ರೈ, ಪೂರ್ವೋಕ್ತ, ಪು. ೨೦೧.

೪೫. ದೇವರಕೊಂಡಾರೆಡ್ಡಿ (ಸಂ), ಹಂಪಿಯ ಶಾಸನಗಳು, ಪು. ೩೩.

೪೬. ಸೋಮಶೇಖರ್ ಎಸ್. ವೈ., ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ, ಪು. ೭೪.

೪೭. ನಾಗೇಗೌಡ ಎಚ್.ಎಲ್. ಪ್ರವಾಸಿ ಕಂಡ ಇಂಡಿಯಾ, ಪು. ೧೫೭.

❖❖❖

ಅಧ್ಯಾಯ : ನಾಲ್ಕು

ವಿಜಯನಗರ ಕಾಲದ ಕೆಲವು ಆಯ್ದ ಅಮರನಾಯಕರ ಅಧ್ಯಯನ

೪.೧ ಕೆಳದಿಯ ನಾಯಕರು

೪.೨ ಯಲಹಂಕ ನಾಡಪ್ರಭುಗಳು

೪.೩ ಗುಮ್ಮನಾಯಕ ಪಾಳೆಯದ ಪಾಳೆಯಗಾರರು

೪.೪ ಚಿತ್ರದುರ್ಗ ನಾಯಕರು

೪.೫ ಹರತಿ ಪಾಳೆಯಗಾರರು

೪.೬ ಹಂಡೆ ವಜೀರರು/ಪಾಳೆಯಗಾರರು

೪.೭ ಗುಡೇಕೋಟೆ ಪಾಳೆಯಗಾರರು

ಅಧ್ಯಾಯ: ನಾಲ್ಕು

ವಿಜಯನಗರ ಕಾಲದ ಕೆಲವು ಆಯ್ದ ಅಮರನಾಯಕರ ಅಧ್ಯಯನ

೪.೧. ಕೆಳದಿಯ ನಾಯಕರು

ದಕ್ಷಿಣ ಭಾರತವನ್ನು ಆಳಿದಂತಹ ಪ್ರಖ್ಯಾತ ಸಾಮ್ರಾಜ್ಯವಾದ ವಿಜಯನಗರವು ತನ್ನ ಅನೇಕ ಸಾಮಂತರ ಮನೆತನಗಳ ಸಹಾಯ ಮತ್ತು ಸಹಕಾರದಿಂದ ಸುಪ್ರಸಿದ್ಧ ಸಾಮ್ರಾಜ್ಯವಾಗಿ ತಲೆ ಎತ್ತಿತು. ವಿಜಯನಗರದ ಉಜ್ವಲ ಇತಿಹಾಸವು ಅನೇಕ ಸಾಮಂತ ರಾಜರ ಇತಿಹಾಸದೊಂದಿಗೆ ತಳಕು ಹಾಕಿಕೊಂಡಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ಅಂತರ್ಗತವಾಗಿದ್ದ ಅದೆಷ್ಟೋ ಸಾಮಂತರ ಸಂಸ್ಥಾನಗಳು ವಿಜಯನಗರದ ಅರಸರ ಆದರ್ಶ, ಆಡಳಿತ ವಿಧಾನ, ಜನೋಪಕಾರಿ ಕೆಲಸ ಕಾರ್ಯಗಳನ್ನು ತಮ್ಮ ಹೆಗಲಿಗೇರಿಸಿಕೊಂಡು ಸಾಮ್ರಾಜ್ಯದ ಅಭ್ಯುದಯಕ್ಕಾಗಿ ಅವಿರತವಾಗಿ ದುಡಿದವು. ಇಂತಹ ಸಾಮಂತ ಮನೆತನಗಳಲ್ಲಿ ದಕ್ಷತೆ, ಅಧೀನತೆ, ನಿಷ್ಠೆಗೆ ಖ್ಯಾತರಾದವರೇ ಕೆಳದಿಯ ನಾಯಕರು. ಆರಂಭದಿಂದಲೂ ಕೆಳದಿ ನಾಯಕರ ವಿಧೇಯತೆ ಮತ್ತು ನಿಷ್ಠೆಗೆ ತಲೆಬಾಗಿದ ವಿಜಯನಗರದ ಅರಸರು ಈ ಮನೆತನದ ಮೂಲ ಅರಸ ಚೌಡಪ್ಪ ನಾಯಕನಿಗೆ ಅಮರನಾಯಕತನವನ್ನು ನೀಡಿ ಸಾಮಂತನ ಸ್ಥಾನಮಾನಗಳಿಂದ ಗೌರವಿಸಿ ಸನ್ಮಾನಿಸಿದರು. ಕೆಳದಿ ನಾಯಕರು ವಿಜಯನಗರಕ್ಕೆ ತೋರಿದ ಗೌರವ, ಅಮೋಘ ಸೇವೆ ಗಮನಿಸುವಂತಹುದು. ವಿಜಯನಗರವು ಅವನತಿಯ ಹಂತದಲ್ಲಿದ್ದಾಗ ಕೆಳದಿಯ ಪ್ರಸಿದ್ಧ ದೊರೆ ಶಿವಪ್ಪ ನಾಯಕ ಅದನ್ನು ಪುನರುಜ್ಜೀವನಗೊಳಿಸಲು ನಡೆಸಿದಂತಹ ಪ್ರಯತ್ನ ಶ್ಲಾಘನೀಯವಾದುದು.[೧] ಕ್ರಿ.ಶ. ೧೩೩೬ರಲ್ಲಿ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯ ಪ್ರಾರಂಭದಲ್ಲಿ ಕೆಲವು ಪ್ರದೇಶಗಳಿಗೆ ಮಾತ್ರ ಸೀಮಿತವಾಗಿತ್ತು. ನಂತರದ ದಿನಗಳಲ್ಲಿ ಸೇನಾ ಸಾಮ್ರಾಜ್ಯವಾಗಿ ರೂಪುಗೊಂಡ ವಿಜಯನಗರವು ದಕ್ಷಿಣ ಭಾರತದ ಬಹುತೇಕ ಭೂ ಭಾಗಗಳನ್ನು ಯುದ್ಧಗಳ ಮೂಲಕ ಗೆಲ್ಲುತ್ತ ಹೋಯಿತು. ಹೀಗೆ ಗೆದ್ದ ಹೊಸ ಭೂ ಭಾಗಗಳಲ್ಲಿ ತಮ್ಮ ಸಾಮ್ರಾಜ್ಯಕ್ಕೆ ನಿಷ್ಠರಾಗಿದ್ದಂತಹ ಸ್ಥಳೀಯ ನಾಯಕರನ್ನು ನೇಮಕ ಮಾಡಿ ಅವರಿಗೆ ತಮ್ಮ ಸಾಮ್ರಾಜ್ಯದ ವತಿಯಿಂದ ಅಮರನಾಯಕತನವೆಂಬ ಹುದ್ದೆಯನ್ನು ನೀಡಿ ಪ್ರಾಂತೀಯ ಮಟ್ಟದಲ್ಲಿ ನಾಯಕರನ್ನಾಗಿ ನೇಮಿಸಲಾಗುತ್ತಿತ್ತು. ವಿಜಯನಗರದವರಿಂದ ನಾಯಕತನವನ್ನು ಪಡೆದುಕೊಂಡ ಸ್ಥಳೀಯ ನಾಯಕರು ಸಾಮಂತರಾಗಿ ಸ್ಥಳೀಯ ಜನರಿಂದ ರಾಜರೆಂಬ ಗೌರವಕ್ಕೆ ಭಾಜನರಾಗುತ್ತಿದ್ದರು.

ಹೀಗೆ ವಿಜಯನಗರದ ಸಾಮಂತರಲ್ಲಿ ಕೆಳದಿ ನಾಯಕರರದು ಮೊದಲ ಸ್ಥಾನವಾಗಿತ್ತು. ಇದಕ್ಕೆ ಅವರ ದಕ್ಷತೆ ಮತ್ತು ನಿಷ್ಠೆಯೇ ಕಾರಣವಾಗಿತ್ತು. ಈ ಹಿನ್ನೆಲೆಯಲ್ಲಿ ವಿಜಯನಗರದ ಅರಸರು ಮತ್ತು ಕೆಳದಿ ನಾಯಕರ ನಡುವಿನ ಸಂಬಂಧಗಳನ್ನು ಸಾರ್ವಭೌಮ ಮತ್ತು ಸಾಮಂತನ ಸಂಬಂಧಗಳ ಅಡಿಯಲ್ಲಿ ವಿಶ್ಲೇಷಿಸಲಾಗಿದೆ.

ಆಕರಗಳು

ಕೆಳದಿ ನಾಯಕರ ಇತಿಹಾಸವನ್ನು ತಿಳಿಯಲು ಸಾಕಷ್ಟು ಆಕರಗಳು ಲಭ್ಯವಾಗುತ್ತವೆ. ಅವುಗಳಲ್ಲಿ ಕೆಳದಿ ಅರಸರ ಸಮಕಾಲೀನ ಆಸ್ಥಾನ ಕವಿಯಯಾದ ಲಿಂಗಣ್ಣ ಕವಿಯ ಕೆಳದಿ ನೃಪವಿಜಯಂ, ಕೆಳದಿಯ ಬಸಪ್ಪನಾಯಕನ ಶಿವತತ್ವ ರತ್ನಾಕರ, ಎಂ.ಎಸ್. ಪುಟ್ಟಣ್ಣನವರ ಇಕ್ಕೇರಿ ಸಂಸ್ಥಾನದ ಚರಿತ್ರೆ, ರೈಸ್ ಅವರ ಎಪಿಗ್ರಾಫಿಯಾ ಕರ್ನಾಟಿಕ ಶಾಸನ ಸಂಪುಟ ೮, ರಾಬರ್ಟ್ ಸಿವೆಲನ ಫಾರ್ಗಟನ್ ಎಂಪಾಯರ್, ರಾಯವಾಚಕಮು, ಕೃಷ್ಣರಾಯ ವಿಜಯಮು, ಹೆರಾಸ್‌ರವರ ಅರವೀಡು ಡೈನಾಸ್ಟಿ, ಎಸ್. ಕೃಷ್ಣಸ್ವಾಮಿ ಅಯ್ಯರ್ ಅವರ ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ, ನರಸಭೂಪತಿಯಮು, ಟ್ರಾವೆಲ್ಸ್ ಆಫ್ ಫೆಟ್ರೋಡೆಲ್ಲಾವಲ್ಲೆ, ಚಿನ್ನಸ್ವಾಮಿ ಸೋಸಲೆಯವರ ಸಾಮ್ರಾಜ್ಯ ಮತ್ತು ಸಂಸ್ಥಾನ, ಕೆಳದಿ ಗುಂಡಾ ಜೋಯಿಸರ ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕೆಳದಿ ವೆಂಕಟೇಶ ಜೋಯಿಸರ ವಿಜಯನಗರ ಚರಿತ್ರೆಯಲ್ಲಿ ಕೆಳದಿಯ ಅರಸರು, ಕೆ.ಎನ್. ಚಿಟ್ನಿಸ್‌ರವರ ಹಿಸ್ಟರಿ ಆಫ್ ಕೆಳದಿ, ಕೆ.ಎಸ್. ಶಿವಣ್ಣರವರ ಕರ್ನಾಟಕ ಚರಿತ್ರೆ ಸಂಪುಟ–೩ ರಲ್ಲಿ ಪ್ರಕಟಗೊಂಡಿರುವ ಕೆಳದಿಯ ನಾಯಕರು ಎಂಬ ಸಂಶೋಧನಾ ಲೇಖನಗಳು ಕೆಳದಿಯ ಇತಿಹಾಸ ತಿಳಿಯಲು ನೆರವಾಗುತ್ತವೆ.

ಮೂಲ

ಕೆಳದಿ ನಾಯಕರ ಮೂಲವನ್ನು ಕುರಿತು ಅನೇಕ ಐತಿಹ್ಯಗಳಿವೆ. ಶಿವತತ್ವ ರತ್ನಾಕರ ಹಾಗೂ ಕೆಳದಿ ನೃಪವಿಜಯಂಗಳ ಆಧಾರಗಳಂತೆ ಹಳ್ಳಿಬಯಲು ಎಂಬಲ್ಲಿ ವಾಸಿಸುತ್ತಿದ್ದ ಚೌಡಪ್ಪ ಭದ್ರಪ್ಪ ಎಂಬುವವರಿಗೆ ಸುದೈವದಿಂದ ದೊರೆತ ನಿಕ್ಷೇಪವೇ ಕೆಳದಿ ಸಂಸ್ಥಾನದ ಉಗಮಕ್ಕೆ ಕಾರಣವಾಯಿತು. ಚೌಡಪ್ಪ ಮತ್ತು ಭದ್ರಪ್ಪ ನಾಯಕರನ್ನು ವಿಜಯನಗರದ ಅರಸನಾದ ಸಾಳ್ವ ನರಸಿಂಗರಾಯನು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡನು. 'ನೀವೆಮ್ಮ ಕಜ್ಜಂಗಳಿಗನುಕೂಲಿಳಾಗಿ ಸಮೀಪದೊಳಿರಲ್ವೆಕ್ಕೆಂದು' ಕೇಳಿಕೊಂಡನೆಂದೂ ಲಿಂಗಣ್ಣ ಕವಿಯು ತನ್ನ ಕೆಳದಿ ನೃಪವಿಜಯಂನಲ್ಲಿ ಉಲ್ಲೇಖಿಸಿದ್ದಾನೆ.[೨] ಕೆಲವು ಇತಿಹಾಸಕಾರರು ಚೌಡಪ್ಪ ಮತ್ತು ಭದ್ರಪ್ಪ ಸಹೋದರರು ಕೃಷ್ಣದೇವರಾಯನ ಸಮಕಾಲೀನರೆಂದು ಚರ್ಚಿಸಿದ್ದಾರೆ. ಮತ್ತೆ ಕೆಲವು ಇತಿಹಾಸಕಾರರು ಈ ಸಹೋದರರು ಸಾಳ್ವ ಇಮ್ಮಡಿ ನರಸಿಂಹನ ಸಮಕಾಲೀನರೆಂದು ಪ್ರತಿಪಾದಿಸುತ್ತಾರೆ. ಕ್ರಿ.ಶ. ೧೫೦೦ರಲ್ಲಿ ಕೆಳದಿ ಸಂಸ್ಥಾನವು ಉದಯವಾಗಿರುವುದರಿಂದ ಆರಂಭಿಕ ನಾಯಕರು ಸಾಳ್ವ ನರಸಿಂಹನಿಂದ ನಾಯಕತನವನ್ನು ಪಡೆದಿದ್ದರು.

ಚೌಡಪ್ಪ ಮತ್ತು ಭದ್ರಪ್ಪ ಸಹೋದರರು ವಿಜಯನಗರದ ಕೃಪೆಗೆ ಪಾತ್ರರಾದರು. ಇವರು ಅಹಮದ್ ನಗರದ ಸುಲ್ತಾನರು, ಬೈರೆ ನಿಜಾಮಪಾತುಶಾಹ (ಹುಸೇನ್ ನಿಜಾಮಷಾನಾ) ಕಲ್ಯಾಣಿದುರ್ಗ ಕಲ್ಬುರ್ಗ, ಫಿರೋಜ್ ಖಾನ್, ತಾಲಿಕ್‌ಖಾನ್, ಸಂಜರ್ ಖಾನ್, ನಾತೇಖಾನ್, ಮುನಿಲಾಖಾನ್, ವಜ್ರಖಾನ್, ರಾವಿತ್‌ಖಾನ್ ಮತ್ತು ಬೊಕ್ಕೆಸಿಂಗ್ ಮುಂತಾದ ಮುಸ್ಲಿಂ ಸೈನ್ಯಾಧಿಕಾರಿಗಳನ್ನು ಸೆರೆಹಿಡಿದು ವಿಜಯನಗರದ ರಾಯನಿಗೆ ಒಪ್ಪಿಸಿದರು. ಸದಾಶಿವ ನಾಯಕನು ಮತ್ತು ಬಹುಮನಿ ಸುಲ್ತಾನರನ್ನು ರಣರಂಗದಲ್ಲಿ ಸೋಲಿಸಿದ್ದರಿಂದ ಕೃಷ್ಣದೇವರಾಯನು ಸದಾಶಿವನಿಗೆ ಕೋಟೆ ಕೋಲಾಹಲ ಮತ್ತು ರಾಮನಾಯಕ ಎಂಬ ಬಿರುದನ್ನು ನೀಡಿ ಗೌರವಿಸಿದನು.[೩] ಸದಾಶಿವನಾಯಕನ ಸೇವೆಗೆ ತೃಪ್ತನಾದ ಕೃಷ್ಣದೇವರಾಯನು ನಾಯಕನಿಗೆ ಗುತ್ತಿ, ಬಾರ್ಕೂರು ಮತ್ತು ಮಂಗಳೂರು ಪ್ರಾಂತ್ಯಗಳನ್ನು ನೀಡಿದನು.[೪] ಇದರಿಂದ ಕೆಳದಿ ನಾಯಕರು ರಾಜಕೀಯವಾಗಿ ಮುಂಚೂಣಿಗೆ ಬರಲು ಸಾಧ್ಯವಾಯಿತು. ಬಿಜಾಪುರದ ಇಬ್ರಾಹಿಂ ಆದಿಲ್‌ಷಾಹ, ಮಹಮ್ಮದ್ ನಗರದ ಬರ್ಹಾಂ ಷಾ ಮುಂತಾದವರನ್ನು ಸದಾಶಿವನಾಯಕನು ಸೋಲಿಸಿ ಅವರ ಮೇಲೆ ವಿಜಯನಗರದ ಅಧಿಪತ್ಯವನ್ನು ಹೇರಲು ಸಹಾಯ ಮಾಡಿದನು. ಬಿದರೆಯ ಬಾರೀದ್‌ಷಾನನ್ನು ಸದಾಶಿವನಾಯಕನು ಸೋಲಿಸಿದ್ದನ್ನು ಕೆಳದಿ ನೃಪವಿಜಯಂ ಹಾಗೂ ಶಿವತತ್ವ ರತ್ನಾಕರಗಳು ಸಮರ್ಥಿಸುತ್ತವೆ. ಬಾರೀದ್ ಷಾಹನನ್ನು ಸೆರೆಹಿಡಿದು ವಜ್ರದ ಉಂಗುರ, ಛತ್ರ ಚಾಮರ, ಆನೆಗಳನ್ನು ವಶಪಡಿಸಿಕೊಂಡು ರಾಮರಾಯನಿಗೆ ಒಪ್ಪಿಸಿದನು. ಇದರಿಂದ ಸಂತೃಪ್ತಗೊಂಡ ರಾಮರಾಯನು ಇವನಿಗೆ 'ಮೇಘಡಂಬರ ದಿವಾ ಪ್ರದೀಪ ಶತ್ತು ಸಪ್ತಾಂಗ ಹರಣ' ಎಂಬ ಬಿರುದನ್ನು ನೀಡಿ ಸನ್ಮಾನಿಸಿದನು. ಹೀಗೆಯೇ ಅರುಣ ಧ್ವಜ, ವಾದ್ಯಪಂಚಕ ಮುಂತಾದ ಸನ್ಮಾನಗಳು ಹಾಗೂ ಅಪಾರವಾದ ಸಂಪತ್ತು ಕೆಳದಿಯವರ ಕೈವಶವಾಯಿತು ಚೌಡಪ್ಪ ನಾಯಕನ ಕಾಲದಲ್ಲಿ ವಿಜಯನಗರದವರಿಂದ ಕೇವಲ ಎಂಟು ಮಾಗಣಿಗಳನ್ನು ತಮ್ಮ ಅಮರ ನಾಯಕತನಕ್ಕಾಗಿ ಪಡೆದುಕೊಂಡಿದ್ದ ಕೆಳದಿನಾಯಕರು ಸದಾಶಿವರಾಯನ ಕಾಲದಲ್ಲಿ ಹೆಚ್ಚು ಪ್ರವರ್ಧಮಾನಕ್ಕೆ ಬಂದರು. ವಿಜಯನಗರದ ಅರಸರೊಂದಿಗೆ ಬೆಳೆಸಿಕೊಂಡ ಸೌಹಾರ್ದಯುತವಾದ ಸಂಬಂಧಗಳು ಸದಾಶಿವರಾಯನು ಹಾಗೂ ವಿಜಯನಗರದ ಪರವಾಗಿ ಮಾಡಿದಂತಹ ಯುದ್ಧಗಳಿಂದಾಗಿ ಮೊದಲ ವರ್ಗದ ಸಾಮಂತರಾಗಿ ಗುರುತಿಸಿಕೊಳ್ಳಲು ಸಾಧ್ಯವಾಯಿತು. ಹೆಚ್ಚು ಪ್ರದೇಶಗಳನ್ನು ವಿಜಯನಗರದವರಿಂದ ಪಡೆದುಕೊಂಡು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಬಲಾಢ್ಯರಾಗಲು ಸಾಧ್ಯವಾಯಿತು. ಹಾಗೂ ವಿಜಯನಗರವು ಸಹ ಕೆಳದಿ ನಾಯಕರ ನೆರವಿನಿಂದ, ಬಿಜಾಪುರ, ಬಹುಮನಿ ಸುಲ್ತಾನರನ್ನು ಸದೆಬಡಿಯಲು ಸಹಾಯಕವಾಗಿ ಬಾಹ್ಯ ಶತ್ರುಗಳ ದಮನ ಮಾಡುವುದರಲ್ಲಿ ಮೇಲುಗೈ ಸಾಧಿಸಿತು.

ಇಮ್ಮಡಿ ಸದಾಶಿವರಾಯನ ನಂತರ ದೊಡ್ಡ ಸಂಕಣ ನಾಯಕನು ಅಧಿಕಾರಕ್ಕೆ ಬಂದನು. ಈತನ ಸಮಕಾಲೀನನಾದ ರಾಮರಾಯನ ಕಾಲದಲ್ಲಿ ವಿಜಯನಗರಕ್ಕೆ ಆಪತ್ಕಾಲ ಬಂದೊದಗಿತು. ವಿಜಯನಗರದ ಅರಸ ದೊಡ್ಡ ಸಂಕಣನಾಯಕನ ಮೇಲೆ ವಿಶ್ವಾಸ ಹೊಂದಿದ್ದನು. ದೊಡ್ಡ ಸಂಕಣ

ನಾಯಕನು ರಾಮರಾಯನ ಅನುಮತಿಯಿಲ್ಲದೆ ಜಂಬೂರು ಮತ್ತು ಉಡುಗಣಿ ಕೋಟೆಯನ್ನು ಗೆದ್ದುಕೊಂಡಿದ್ದರಿಂದ ವಿಷಯ ತಿಳಿದ ರಾಮರಾಯನು ತನ್ನ ಆಸ್ಥಾನಕ್ಕೆ ಸಂಕಣ ನಾಯಕನನ್ನು ಬರಮಾಡಿಕೊಂಡನು. ಹಾಗೂ ತನ್ನ ಆಸ್ಥಾನದಲ್ಲಿಯೇ ಕೆಲವು ಕಾಲ ಇರಿಸಿಕೊಂಡನು.[೫] ರಾಮರಾಯನ ಆದೇಶದ ಮೇರೆಗೆ ಗೋವೆಗೆ ಮುತ್ತಿಗೆ ಹಾಕಿ ಪೋರ್ಚುಗೀಸ್ ಗವರ್ನರ್‌ನನ್ನು ಸೆರೆಹಿಡಿದು ರಾಯನಿಗೆ ಒಪ್ಪಿಸಿದನು. ಸಂಕಣ ನಾಯಕನಿಗೆ ಈ ಕಾರ್ಯಕ್ಕೆ ಪ್ರತಿಫಲವಾಗಿ ರಾಮರಾಯನು ಮಾಲೇಸಿಹಳ್ಳಿ ಮತ್ತು ಮಹಾದೇವಪುರಗಳನ್ನು ಬಳುವಳಿಯಾಗಿ ನೀಡಿ ಸನ್ಮಾನಿಸಿದನು.

ದೊಡ್ಡ ಸಂಕಣನಾಯಕನು ಪೋರ್ಚುಗೀಸರೊಡನೆ ಹೋರಾಟ ಮಾಡಿದ್ದರಿಂದ ಭುಜಕೀರ್ತಿಯೆಂಬ ಬಿರುದು ವಿಜಯನಗರದವರಿಂದ ಲಭ್ಯವಾಯಿತು.[೬] ದೊಡ್ಡ ಸಂಕಣ ನಾಯಕನು ವಿಜಯನಗರದವರ ಕೀರ್ತಿಯನ್ನು ಹೆಚ್ಚಿಸಿದನು. ದೊಡ್ಡ ಸಂಕಣನಾಯಕನ ನಂತರ ಅಧಿಕಾರಕ್ಕೆ ಬಂದು ಚಿಕ್ಕ ಸಂಕಣನಾಯಕನು ವಿಜಯನಗರದ ಅರಸರೊಂದಿಗೆ ಉತ್ತಮ ಬಾಂಧವ್ಯಗಳನ್ನು ಹೊಂದಿದ್ದನು. ಇವನ ಅಧಿಕಾರವಧಿಯಲ್ಲಿಯೇ ಕ್ರಿ.ಶ. ೧೫೬೫ರಲ್ಲಿ ರಕ್ಕಸಕ ತಂಗಡಿ ಯುದ್ಧ ನಡೆದಿದ್ದು ಚಿಕ್ಕ ಸಂಕಣ ನಾಯಕನ ಕಾಲದಲ್ಲಿ ನಡೆದ ರಕ್ಕಸ ತಂಗಡಿ ಯುದ್ದದಲ್ಲಿ ಕೆಳದಿಯ ಸೇನೆಯು ಭಾಗವಹಿಸಿತು. ಆದರೆ ಈ ಯುದ್ಧದಲ್ಲಿ ಕೆಳದಿ ಸೇನೆಯ ನಿರ್ವಹಿಸಿದ ಪಾತ್ರದ ಬಗ್ಗೆ ಯಾವುದೇ ರೀತಿಯ ಮಾಹಿತಿಗಳಿಲ್ಲ. ರಕ್ಕಸಕ ತಂಗಡಿ ಯುದ್ಧದಲ್ಲಿ ವಿಜಯನಗರವು ಸೋಲನ್ನು ಒಪ್ಪಿಕೊಂಡಿದ್ದರಿಂದ ಅದರ ಬಹುತೇಕ ಸಾಮಂತ ಮನೆತನಗಳು ಸ್ವತಂತ್ರಗೊಂಡವು. ಅದರಂತೆ ಈ ವೇಳೆಗೆ ಪ್ರಾದೇಶಿಕ ಮಟ್ಟದಲ್ಲಿ ರಾಜಕೀಯವಾಗಿ, ಆರ್ಥಿಕವಾಗಿ ಬಲಾಢ್ಯವಾಗಿ ರೂಪುಗೊಂಡಿದ್ದ ಕೆಳದಿ ಸಂಸ್ಥಾನವು ಸ್ವತಂತ್ರವಾದ ಅಸ್ತಿತ್ವವನ್ನು ಪಡೆದುಕೊಂಡಿತು.

ಮುಂದೆ ಅಧಿಕಾರಕ್ಕೆ ಬಂದ ವೆಂಕಟಪ್ಪನ ನಾಯಕನ ಕಾಲದಲ್ಲಿ ವಿಜಯನಗರದ ಪ್ರಸ್ತಾಪಗಳು ಅಷ್ಟಾಗಿ ಕಂಡು ಬರುವುದಿಲ್ಲ. ಕ್ರಿ.ಶ. ೧೬೨೩ರಲ್ಲಿ ಕೆಳದಿ ರಾಜ್ಯಕ್ಕೆ ಪ್ರವಾಸಿಯಾಗಿ ಬಂದಿದ್ದ ಪೆಟ್ರೊಡೆಲ್ಲಾವಿಲ್ಲೆಯ ದಾಖಲೆಗಳಲ್ಲಿ ವಿಜಯನಗರದ ಉಲ್ಲೇಖವಿದೆ.

ನಂತರ ನಮಗೆ ವಿಜಯನಗರದ ನೇರವಾದ ಉಲ್ಲೇಖಗಳು ಸಿಗುವುದು ಶಿವಪ್ಪನಾಯಕನ ಕಾಲಾವಧಿಯಲ್ಲಿ ಇಲ್ಲಿ ಗಮನಿಸಬೇಕಾದ ಮಹತ್ವವಾದ ಅಂಶವೇನೆಂದರೆ ಸಾರ್ವಭೌಮ ಮತ್ತು ಸಾಮಂತಧಿಪತ್ಯದೊಳಗಿನ ರಾಜಕೀಯ ಸಂಬಂಧಗಳ ಏರಿಳಿತಗಳು. ವಿಜಯನಗರದ ೩ನೇ ರಂಗರಾಯನಿಗೆ ರಾಜಕೀಯವಾಗಿ ನೆಲೆಯಿಲ್ಲದಿದ್ದಾಗ ಕೆಳದಿಯ ಶಿವಪ್ಪನಾಯಕನು ರಾಜಕೀಯ ನೆಲೆಯನ್ನು ಒದಗಿಸಿಕೊಡಬೇಕಾಯಿತು. ವೆಂಕಟಪ್ಪ ನಾಯಕನು ಶ್ರೀರಂಗರಾಯನಿಗೆ ಅಭಯ ನೀಡಿ, ಬೇಲೂರು ಪಾಳೆಯಗಾರರನ್ನು ಸೋಲಿಸಿ, ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಮೈಸೂರು ಅರಸರನ್ನು ಸೋಲಿಸಿದನು. ಆ ಪ್ರಾಂತ್ಯದ ಆನೇಕ ಪ್ರದೇಶಗಳನ್ನು ಮುತ್ತಿಗೆ ಹಾಕಿ ಗೆದ್ದುಕೊಂಡನು. ಎರಡು ರಾಜ್ಯಗಳ ಸಂಬಂಧದಲ್ಲಿ ಈ ಘಟನೆಯು ಸುಮಾರು ಶತಮಾನದ ಹಿಂದೆ ಪ್ರಾರಂಭವಾದ ಅವರೋಹಣ ಪ್ರಕ್ರಿಯೆಯ ಕೊನೆಯ ಹಂತವನ್ನು ಸೂಚಿಸುತ್ತದೆ.[೭]

ಕ್ರಿ.ಶ. ೧೬೪೯ರಲ್ಲಿ ಪೆನುಗೊಂಡೆಯಲ್ಲಿ ವಿಜಯನಗರದ ರಾಜ್ಯಭಾರ ಮಾಡಿದ ಶ್ರೀರಂಗರಾಯನ ಕಾಲದಲ್ಲಿ ಜಿಂಜಿ ತಂಜಾವೂರು ಹಾಗೂ ವಿಜಾಪುರದವರು ಶ್ರೀರಂಗರರಾಯನಿಗೆ ಕಿರುಕುಳ ನೀಡತೊಡಗಿದರು. ಬಿಜಾಪುರದ ಸೇನೆಯು ಬೆಂಗಳೂರು, ತುಮಕೂರು ಹಾಗೂ ಇವುಗಳ ವಿಶಾಲ ಪ್ರದೇಶಗಳು ವಿಜಯನಗರದವರಿಗೆ ದಕ್ಕದಂತೆ ಹುನ್ನಾರ ನಡೆಸಿದವು. ಕ್ರಿ.ಶ. ೧೬೪೬-೪೭ರಲ್ಲಿ ಬಿಜಾಪುರದ ಸೇನಾಧಿಪತಿ ಮುಸ್ತಾಫಾಖಾನನೊಂದಿಗೆ ಸೇರಿ ಪ್ರತಿಭಟಿಸಿದ್ದರಿಂದ ಶ್ರೀರಂಗರಾಯನಿಗೆ ದಿಕ್ಕೇ ತೋಚದಂತಾಯಿತು. ವಿಜಯನಗರಕ್ಕೆ ಸೇರಿದ್ದ ಕೃಷ್ಣಗಿರಿ, ವೀರಭದ್ರನದುರ್ಗ ಮತ್ತು ದೇವದುರ್ಗ ಶತ್ರುಗಳ ಪಾಲಾಗಿದ್ದರಿಂದ ೧೬೨೭ ಫೆಬ್ರವರಿಯಲ್ಲಿ ಶ್ರೀರಂಗನು ವೆಲ್ಲೂರಿಗೆ ಬಂದನು. ಇದೇ ಸಂದರ್ಭದಲ್ಲಿ ವೆಲ್ಲೂರಿಗೂ ಬೆನ್ನಟ್ಟಿದ್ದ ಗೋಲ್ಕೊಂಡದ ಮಿರ್‌ಜಾನ್ ಮತ್ತು ಬಿಜಾಪುರವನ್ನು ಎದುರಿಸಲು ವೆಲ್ಲೂರಿನ ಸ್ತ್ರೀಯರ ಆಭರಣ ಹಾಗೂ ತಿರುಪತಿಯ ಹಣವನ್ನು ಖರ್ಚು ಮಾಡಬೇಕಾಯಿತು. ೧೬೬೭ರಲ್ಲಿ ಮುಸ್ತಾಫಾಖಾನನು ಶ್ರೀರಂಗನಿಗೆ ಸೇರಿದ್ದ ಅಂಬೂರು, ತಿರುಪತ್ತೂರು, ಕಾವೇರಿ ಪಟ್ಟಣಂ, ಹಾಸನ, ರಾಯದುರ್ಗ, ಕನಕಗಿರಿ, ಮೇಳಗಿರಿ, ಅರ್ಜುನಕೋಟೆ, ಧೂಳಿಕೋಟೆಗಳನ್ನು ಕೈವಶ ಮಾಡಿಕೊಂಡನು. ಈ ಮಧ್ಯೆ ಸುಖಲೋಲುಪತೆಯಲ್ಲಿ ಕಳೆಯುತ್ತಿದ್ದ ಶ್ರೀರಂಗನಿಗೆ ರಾಜ್ಯವಿಲ್ಲದೆ ನಾಮಮಾತ್ರ ದೊರೆಯಾದನು. ಇಂತಹ ವಿಷಮ ಸ್ಥಿತಿಯಲ್ಲಿ ಶ್ರೀರಂಗನು ಕ್ರಿ.ಶ. ೧೬೪೬ರಿಂದ ೧೬೬೭ರ ಮಧ್ಯೆ ಕೆಳದಿ ಶಿವಪ್ಪ ನಾಯಕನ ಮೊರೆಹೊಕ್ಕನು. ತಾಳಿಕೋಟೆಯ ಕದನದ ನಂತರ ವಿಜಯನಗರದ ಒಕ್ಕೂಟದಿಂದ ಹೊರನಡೆದಿದ್ದ ಕೆಳದಿಯ ನಾಯಕರೇ ವಿಜಯನಗರನ್ನು ರಕ್ಷಿಸಲು ಮುಂದಾದರು. ತನ್ನ ತಮ್ಮ ಪರಿಪಾಲಿಸುತ್ತಿದ್ದ ಸಕ್ಕರೆ ಪಟ್ಟಣದ ಆಡಳಿತವನ್ನು ಶ್ರೀರಂಗನಿಗೆ ವಹಿಸಿಕೊಟ್ಟು ವೇಲೂರಿಗೆ ಮುತ್ತಿಗೆ ಹಾಕಿ ಅದನ್ನು ಸ್ವಾಧೀನ ಪಡಿಸಿಕೊಂಡನು. ಶ್ರೀರಂಗನು ಶಿವಪ್ಪ ನಾಯಕನಿಗೆ ಹಲವಾರು ಕಾಣಿಕೆಗಳನ್ನು ನೀಡಿ ಸನ್ಮಾನಿಸಿದನು.

ಹೀಗೆ ವಿವಿಧ ಹಂತಗಳನ್ನು ಹಾದುಹೋದ ವಿಜಯನಗರ ಮತ್ತು ಕೆಳದಿ ರಾಜ್ಯಗಳ ಸಂಬಂಧಗಳು ಉತ್ಕರ್ಷ ಕಾಲದಿಂದ ಅವನತಿಯ ಕಾಲದವರೆಗೂ ಮುಂದುವರಿದವು. ಸಾಳ್ವ ನರಸಿಂಗರಾಯನ ಕಾಲದಿಂದ ಆರಂಭಗೊಂಡ ಸಾರ್ವಭೌಮ ಮತ್ತು ಸಾಮಂತನ ನಡುವಿನ ಸಹ ಸಂಬಂಧಗಳು ಅರವೀಡು ಮನೆತನದ ಶ್ರೀರಂಗರಾಯನ ಕಾಲದವರೆಗೂ ಮುಂದುವರಿದುಕೊಂಡು ಹೋಗಿರುವುದುನ್ನು ಗಮನಿಸಬಹುದು.

ಈ ಮೇಲಿನ ಎಲ್ಲ ಅಂಶಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ವಿಜಯನಗರದ ಸಾರ್ವಭೌಮರಿಗೂ ಮತ್ತು ಸಾಮಂತರಾದ ಕೆಳದಿ ನಾಯಕರ ನಡುವಿನ ಸಂಬಂಧಗಳನ್ನು ಕುರಿತು ಮಹತ್ವವಾದ ಅಂಶಗಳನ್ನು ಕೆಳಗಿನಂತೆ ಪಟ್ಟಿ ಮಾಡಬಹುದು.

೧. ರೈತ ವರ್ಗದವರಿಂದ ಬಂದ ಕೆಳದಿ ವಂಶಸ್ಥರು ಮೂಲತಃ ಕೃಷಿಕರಾಗಿದ್ದು ತಮಗೆ ದೊರೆತ ನಿಧಿಯಿಂದ ಆರ್ಥಿಕವಾಗಿ ಸಬಲರಾದರು. ವಿಜಯನಗರದವರ ಕೃಪಾದೃಷ್ಟಿಗೆ ಪಾತ್ರವಾಗಿ ಸಾಮಂತ ಸ್ಥಾನಮಾನವನ್ನು ಪಡೆದುಕೊಂಡಿದ್ದರು.

೨. ಕೆಳದಿಯು ಭೌಗೋಳಿಕವಾಗಿ ಆಯಕಟ್ಟಿನ ಪ್ರದೇಶದಲ್ಲಿದ್ದು ಸಂಪನ್ಮೂಲಗಳ ದೃಷ್ಟಿಯಿಂದ ಶ್ರೀಮಂತವಾಗಿತ್ತು. ವ್ಯಾಪಾರ ಮತ್ತು ವಾಣಿಜ್ಯೋದ್ಯಮಗಳ ಪ್ರಗತಿಯಿಂದಾಗಿ ವಿಜಯನಗರದ ಪ್ರಬಲ ಸಾಮಂತ ಮನೆತನವಾಗಿ ರೂಪುಗೊಂಡು ವಿಜಯನಗರದ ಏಳಿಗೆಯಲ್ಲಿ ಪ್ರಧಾನ ಪಾತ್ರವನ್ನು ವಹಿಸಿತು.

೩. ಕೆಳದಿಯ ಸದಾಶಿವನಾಯಕನು, ಕೃಷ್ಣದೇವರಾಯ, ರಾಮರಾಯದೇವರಾಯನಿಗೆ ಸಾಮ್ರಾಜ್ಯ ನಿರ್ಮಾಣದಲ್ಲಿ ನೆರವಾದನು. ಬಿಜಾಪುರದ ಆದಿಲ್‌ಷಾಹಿಗಳು ಮತ್ತು ಬಹಮನಿ ಸುಲ್ತಾನರ ವಿರುದ್ಧ ಕೃಷ್ಣದೇವರಾಯನು ಜಯ ಗಳಿಸುವಲ್ಲಿ ಸದಾಶಿವನಾಯಕನ ಪಾತ್ರ ಪ್ರಮುಖವಾಗಿತ್ತು. ಈ ಕಾರಣಕ್ಕಾಗಿ ಸದಾಶಿವರಾಯನು ಹಲವಾರು ಬಿರುದುಗಳನ್ನು, ಪ್ರದೇಶಗಳನ್ನು ಪಡೆದುಕೊಂಡು ತನ್ನ ಸಂಪನ್ಮೂಲಗಳನ್ನು ವೃದ್ಧಿಸಿಕೊಂಡು ಮೊದಲ ವರ್ಗದ ಸಾಮಂತ ಸ್ಥಾನಮಾನಗಳನ್ನು ಪಡೆದುಕೊಂಡನು.

೪. ಕೆಳದಿಯ ನಾಯಕರು ವಿಜಯನಗರದವರಂತೆ ಊಳಿಗಮಾನ್ಯ ನಾಯಕರನ್ನು ತಮ್ಮ ಅಧೀನದಲ್ಲಿ ಸೃಷ್ಟಿಸಿಕೊಂಡರು. ಕೆಳದಿ ನಾಯಕರ ಕಾಲದಲ್ಲಿ ಬಸವಾಪಟ್ಟಣ ಅರಸರು, ಕೊಂಡರು, ಗೇರುಸೊಪ್ಪೆ ಅರಸರು, ಸೋದೆ ಅರಸರು, ಉಳ್ಳಾಲದ ಚೌಟರು, ನಿಡಂಬೂರಿನ ಬಲ್ಲಾಳರು, ಪೆನಂದೂರಿನ ಬಲ್ಲಾಳರು, ಸೇರಂತಿ ಚಾವಡಿ ಹೆಗ್ಗಡೆಯವರು, ಕಾಪು ಪ್ರದೇಶದ ಮುದ್ದ ಹೆಗ್ಗಡೆಗಳು, ಅಜಿಲರು ಎಂಬ ಜೈನ ದೊರೆಗಳು, ಬಂಡಿ ಅರಸರ ಜೊತೆ ಹೊನ್ನಯ್ಯ ಕಂಬಳಿ ಒಡೆಯರು, ಬೈಲ ವಂಗಟಿ ಮೂಲರು ಹೀಗೆ ಕೆಳದಿ ಅರಸರ ಕಾಲದಲ್ಲಿ ಸಾಮಂತರು ಅವರ ಅಧೀನದಲ್ಲಿದ್ದು ತಮ್ಮ ಸಾಮ್ರಾಜ್ಯವನ್ನು ರಕ್ಷಿಸಿ ಉಳಿಸಿ ಬೆಳೆಸಿಕೊಂಡಿರುವುದು ಕಂಡು ಬರುತ್ತದೆ.[೮]

೫. ವಿಜಯನಗರ ಕಾಲದ ನಾಣ್ಯಗಳಂತಯೇ ವಿಜಯನಗರದ ಅವನತಿಯ ನಂತರ ಇವರು ನಾಣ್ಯಗಳನ್ನು ಅಚ್ಚುಹಾಕಲಾರಂಭಿಸಿದರು. ವರಹ ಇವರ ಕಾಲದ ಹೆಚ್ಚು ಮೌಲ್ಯವನ್ನು ಹೊಂದಿದ ಚಿನ್ನದ ನಾಣ್ಯ. ಇವು ಗದ್ಯಾಣಕ್ಕೆ ಸಮವಾಗಿತ್ತು. ಶಾಸನದಲ್ಲಿ ಗದ್ಯಾಣಕ್ಕಿಂತ ವರಹ ಎಂಬ ನಾಣ್ಯದ ಉಲ್ಲೇಖ ಹೆಚ್ಚು ಬಾರಿ ಸಿಗುವುದರಿಂದ ಇವು ಇಕ್ಕೇರಿ ವರಹಗಳೆಂದು ಪ್ರಸಿದ್ಧವಾಗಿದ್ದವು. ಈ ವರಹದ ಜೊತಗೆ ಹೊನ್ನು ಎಂಬ ನಾಣ್ಯ ಜಾರಿಯಲ್ಲಿತ್ತು. ಹಾಗೆಯೇ ತಾರ ಎಂಬ ಬೆಳ್ಳಿಯ ನಾಣ್ಯ, ಕಾಸು ಎಂಬ ತಾಮ್ರದ ನಾಣ್ಯಗಳು ಚಲಾವಣೆಯಾಗಿದ್ದವು. ಕೆಳದಿ ನಾಯಕರ ನಾಣ್ಯ ವ್ಯವಸ್ಥೆಯು ಬಹುತೇಕ ವಿಜಯನಗರದ ಕಾಲದ ನಾಣ್ಯ ವ್ಯವಸ್ಥೆಯನ್ನು ಹೋಲುತ್ತಿತ್ತೆಂದು ಹೇಳಬಹುದು.

೬. ಕೆಳದಿಯ ನಾಯಕರು ವಿಜಯನಗರದ ಅರಸರಂತೆಯೇ ಉದಾರವಾದ ಧಾರ್ಮಿಕ ಪರಂಪರೆಯನ್ನು ಮುಂದುವರಿಸಿದರು. ಪರಧರ್ಮ ಸಹಿಷ್ಣುತೆಯೇ ಇವರ ಧಾರ್ಮಿಕ ತತ್ವಗಳ ಮೂಲ ತಳಹದಿಯಾಗಿತ್ತು. ಇವರು ವೀರಶೈವ ಧರ್ಮದ ಅನುಯಾಯಿಗಳಾಗಿದ್ದರೂ ತಮ್ಮ ಸಂಸ್ಥಾನದಲ್ಲಿ ಕ್ರೈಸ್ತ, ಮುಸ್ಲಿಂ, ಜೈನ ಧರ್ಮಗಳಿಗೆ ಪ್ರೋತ್ಸಾಹ ನೀಡಿದರು. ತಮ್ಮ ಸಂಸ್ಥಾನದಲ್ಲಿ ಎಲ್ಲ ಮತ ಧರ್ಮಗಳಿಗೂ ಸಮಾನ ಗೌರವ ತೋರಿಸಿ ಚರ್ಚು, ಮಸೀದಿ, ಬಸದಿಗಳನ್ನು

ನಿರ್ಮಿಸಲು ಉದಾರವಾದ ಧಾನ ದತ್ತಿಗಳನ್ನು ನೀಡಿದರು. ಅದ್ವೈತ ಶ್ರೇಷ್ಠ ಪೀಠವಾದ ಶೃಂಗೇರಿ ಮಠದೊಂದಿಗೆ ಯೋಗ್ಯ ಸಂಪರ್ಕವನ್ನು ಹೊಂದಿದ್ದರು.[೯]

೭. ಕೆಳದಿ ನಾಯಕರ ರಾಜ್ಯ ಉದಯವಾಗಿದ್ದು ವಿಜಯನಗರದ ಫ್ಯೂಡಲ್ ವ್ಯವಸ್ಥೆಯ ಗರ್ಭದಿಂದ ಎಂದು ಹೇಳಬಹುದು.[೧೦] ಕೆಳದಿಯ ಆರಂಭದ ನಾಯಕರು ವಿಜಯನಗರಕ್ಕೆ ಅತ್ಯಂತ ವಿಧೇಯತೆ ಮತ್ತು ನಿಷ್ಠೆಯಿಂದ ಸೇವೆಯನ್ನು ಸಲ್ಲಿಸುತ್ತಿದ್ದರು. ಕೆಳದಿ ಸದಾಶಿವನಾಯಕನು ವಿಜಯನಗರದ ಸಾಮ್ರಾಜ್ಯದ ವಿಸ್ತರಣೆಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿದನು. ವಿಜಯನಗರವು ಕೈಗೊಂಡ ಹಲವಾರು ಯುದ್ಧಗಳಲ್ಲಿ ಭಾಗವಹಿಸಿ ಕಲ್ಯಾಣ, ಕಲುಬುರ್ಗಿ, ಬಿಜಾಪುರ ಅಹಮದ್ ನಗರಗಳನ್ನು ಗೆದ್ದುಕೊಟ್ಟಿದ್ದು ಅವನ ಶಕ್ತಿ ಸಾಮರ್ಥ್ಯವನ್ನು ಸೂಚಿಸುತ್ತದೆ. ವಿಜಯನಗರವು ಸದಾಶಿವನಾಯಕನಂತಹ ಹಲವಾರು ಸಮರ್ಥ ಅಮರನಾಯಕರಿಂದಲೇ ತನ್ನ ಸಾಮ್ರಾಜ್ಯದ ಮೇರೆಗಳನ್ನು ದಕ್ಷಿಣ ಭಾರತದಾದ್ಯಂತ ವಿಸ್ತರಿಸಿಕೊಂಡಿತ್ತು. ಈ ಯುದ್ಧಗಳ ಜಯದ ಪ್ರತಿಫಲವಾಗಿ ಹಲವಾರು ಪ್ರದೇಶಗಳನ್ನು ಉಂಬಳಿಯಾಗಿ ವಿಜಯನಗರದ ಅರಸನಿಂದ ಪಡೆದುಕೊಂಡನು. ಇದು ಸ್ಪಷ್ಟವಾಗಿ ಊಳಿಗಮಾನ್ಯ ವ್ಯವಸ್ಥೆಯ ಸಾರ್ವಭೌಮ ಮತ್ತು ಸಾಮಂತ/ನಾಯಕ ನಡುವಿನ ರಾಜಕೀಯ, ಆರ್ಥಿಕ, ಭೌಗೋಳಿಕ ಸಂಬಂಧಗಳಲ್ಲಿನ ಊಳಿಗಮಾನ್ಯ ಅಂಶಗಳನ್ನು ದೃಢೀಕರಿಸುತ್ತದೆ.

೮. ವಿಜಯನಗರದ ಅರಸರಿಂದ ಹಲವಾರು ಬಿರುದು, ಬಹುಮಾನ, ಇನಾಮುಗಳನ್ನು ಸ್ವೀಕರಿಸಿದಂತಹ ಕೆಳದಿ ನಾಯಕರು ವಿಜಯನಗರದ ಪತನದ ನಂತರ ಸ್ವತಂತ್ರಗೊಂಡರು. ಪುನಃ ಅರವೀಡು ಮನೆತನದ ಶ್ರೀರಂಗರಾಯನನ್ನು ಪುನರ್‌ಅಧಿಕಾರಕ್ಕೆ ತರಲು ಪ್ರಯತ್ನಿಸಿದ ಇವರ ಹೋರಾಟಗಳು ಅನನ್ಯವಾದುದು.

೯. ಕೆಳದಿಯ ಅರಸರು ಬಂದೂಕು, ಸಿಡಿಮದ್ದನ್ನು ಮತ್ತು ಸಣ್ಣ ಫಿರಂಗಿಗಳನ್ನು ವಿಜಯನಗರದ ಅರಸರಂತೆಯೇ ವಿದೇಶಿ ವ್ಯಾಪಾರಿ ಕಂಪನಿಗಳಿಂದ ಕೊಂಡುಕೊಳ್ಳುತ್ತಿದ್ದರು. ವಿಜಯನಗರದ ಅರಸರು ಪೋರ್ಚುಗೀಸರೊಂದಿಗೆ ಅತ್ಯುತ್ತಮ ವ್ಯಾಪಾರ ಸಂಬಂಧಿಗಳನ್ನು ಹೊಂದಿದ್ದು ಉತ್ತಮ ತಳಿಯ ಕುದುರೆಗಳನ್ನು, ಉತ್ತಮ ದರ್ಜೆಯ ಉಡುಪುಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ಕೆಳದಿಯ ನಾಯಕರು ಕೂಡ ಐರೋಪ್ಯ ರಾಷ್ಟ್ರಗಳಾದ ಪೋರ್ಚುಗಲ್ ಮತ್ತು ಬ್ರಿಟನ್ ದೇಶಗಳಿಂದ ಕ್ರಮವಾಗಿ ಕುದುರೆಗಳು ಹಾಗೂ ಉತ್ತಮ ದರ್ಜೆಯ ಸಿದ್ಧ ಉಡುಪುಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ವಿಜಯನಗರದವರಂತೆ ಐರೋಪ್ಯ ದೇಶಗಳೊಂದಿಗೆ ಉತ್ತಮವಾದ ವ್ಯಾಪಾರ ವಾಣಿಜ್ಯ ಸಂಬಂಧಗಳನ್ನು ವೃದ್ಧಿಸಿಕೊಂಡಿದ್ದರು.

೧೦. ೧೬ನೇ ಶತಮಾನದ ಉತ್ತರಾರ್ಧದಲ್ಲಿ ಜನ್ಮತಾಳಿದ ಕೆಳದಿಯು ಆರಂಭದಲ್ಲಿ ಕೇವಲ ಎಂಟು ಮಾಗಣೆಗಳಿಷ್ಟೇ ತನ್ನ ಆಡಳಿತವನ್ನು ಸೀಮಿತಗೊಳಿಸಿಕೊಂಡಿತ್ತು. ಆದರೆ ಸದಾಶಿವನಾಯಕರಂತಹ ದಕ್ಷ ನಾಯಕದಿಂದ ಅದರ ಮೇರೆ ವಿಸ್ತಾರಗೊಂಡಿದ್ದು ಅಲ್ಲದೇ

ವಿಜಯನಗರದ ಪತನದ ನಂತರ ಕೆಳದಿ ರಾಜ್ಯದ ವಿಸ್ತಾರವು ಉತ್ತರದಲ್ಲಿ ಅಂಕೋಲ, ಈಶಾನ್ಯದಲ್ಲಿ ಮೈಸೂರು, ಪೂರ್ವದಲ್ಲಿ ಹೊಳಲ್ಕೆರೆ, ದಕ್ಷಿಣಕ್ಕೆ ನೀಲೇಶ್ವರ-ಬಿಲ್ಲಿಯಾಪಟಂ ತನಕ ಚಾಚಿದ್ದು ಇದೆಲ್ಲ ಪ್ರದೇಶ ಪಶ್ಚಿಮ ಕರಾವಳಿಯನ್ನು ಒಳಗೊಂಡಿತ್ತು. ಮಂಗಳೂರು, ಬಾರಕೂರು, ಭಟ್ಕಳ, ಹೊನ್ನಾವರ, ಮಿರ್ಜಾನ ಮತ್ತು ಆರಗ-ಗುತ್ತಿ ರಾಜ್ಯ ಎಂಬ ಆರು ಪ್ರಾಂತ್ಯಗಳಲ್ಲಿ ವಿಭಾಗಿಸಲ್ಪಟ್ಟಿತು.[೧೧] ವಿಜಯನಗರದಂತೆ ಆರಂಭದಲ್ಲಿ ಸಣ್ಣ ಪ್ರದೇಶಕ್ಕೆ ಸೀಮಿತವಾಗಿದ್ದ ಕೆಳದಿಯ ರಾಜ್ಯ ನಂತರದ ದಿನಗಳಲ್ಲಿ ತನ್ನ ಗಡಿಗಳನ್ನು ವಿಸ್ತರಿಸಿಕೊಂಡು ಪ್ರಬಲ ರಾಜ್ಯವಾಗಿ ತಲೆ ಎತ್ತಿತು.

೧೧. ಒಟ್ಟಿನಲ್ಲಿ ಕೆಳದಿ ನಾಯಕರ ಇತಿಹಾಸದಲ್ಲಿನ ಬಹುತೇಕ ಅಂಶಗಳು ಅದರ ಸಾರ್ವಭೌಮರಾಗಿದ್ದ ವಿಜಯನಗರದ ಇತಿಹಾಸಕ್ಕೆ ಹೋಲುತ್ತದೆ. ವಿಜಯನಗರದಂತಹ ಬಲಿಷ್ಠ ಸಾಮ್ರಾಜ್ಯದ ನೆರಳಿನಲ್ಲಿ ಹುಟ್ಟಿದ ಕೆಳದಿಯು ವಿಜಯನಗರದ ಪತನದ ನಂತರ ಬಲಿಷ್ಠ ರಾಜ್ಯವಾಗಿ ರೂಪುಗೊಂಡಿದ್ದು ಅಲ್ಲದೆ ವಿಜಯನಗರದ ಅರಸರ ಬಹುತೇಕ ಆದರ್ಶ ಪಾಲನೆಗಳನ್ನು ಮುಂದುವರಿಸಿಕೊಂಡು ಹೋಯಿತು. ಹಿಂದೂ ಧರ್ಮದ ರಕ್ಷಣೆ, ಶಾಂತಿ ಅಭಿವೃದ್ಧಿಗಳಿಂದ ಕೂಡಿದ ಆಡಳಿತ, ಸಾಹಿತ್ಯ, ಕಲೆ, ಕೈಗಾರಿಕೆಗಳ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಯಶಸ್ವಿಯಾಯಿತು.

೪.೨ ಯಲಹಂಕ ನಾಡಪ್ರಭುಗಳು

ಪೀಠಿಕೆ : ಯಲಹಂಕ ನಾಡಪ್ರಭುಗಳು ವಿಜಯನಗರದ ಸಾಮಂತರಲ್ಲಿ ಮೊದಲ ವರ್ಗದ ಅಮರನಾಯಕರಾಗಿದ್ದರು. ವಿಜಯನಗರದ ಒಕ್ಕೂಟ ವ್ಯವಸ್ಥೆಯಲ್ಲಿ ಪ್ರಧಾನ ಪಾತ್ರವನ್ನು ಪೋಷಿಸಿದಂತಹ ಯಲಹಂಕ ನಾಡಪ್ರಭುಗಳು ಕೆಂಪೇಗೌಡರ ವಂಶಸ್ಥರ ಕಾಲದಲ್ಲಿ ವಿಜಯನಗರದ ಆಳ್ವಿಕೆಗೆ ಒಳಪಟ್ಟು ಪ್ರಸಿದ್ಧಿಗೆ ಬಂದರು. ಆರಂಭದಲ್ಲಿ ವಿಜಯನಗರದ ಸಾಮಾನ್ಯ ದಂಡಾಧಿಕಾರಿಗಳಾಗಿದ್ದು ವಿಜಯನಗರ ಸಾಮ್ರಾಜ್ಯ ಸಂಘಟನೆಯಲ್ಲಿ ಪ್ರಧಾನವಾಗಿ ಗುರುತಿಸಿಕೊಂಡರು. ಮುಂದೆ ಒಂದನೇ ಕೆಂಪೇಗೌಡನ ಕಾಲದಲ್ಲಿ ಯಲಹಂಕನಾಡಿಗೆ ಸಾಮಂತ ರಾಜ್ಯದ ಸ್ಥಾನಮಾನಗಳು ಲಭಿಸಿ ಮೊದಲ ವರ್ಗದ ಅಮರನಾಯಕತನವನ್ನು ಪಡೆದುಕೊಂಡರು. ಸಾರ್ವಭೌಮ ಮತ್ತು ಸಾಮಂತ ವರ್ಗದ ಸ್ಥಾನಮಾನಗಳನ್ನು ಅರ್ಥೈಸಿಕೊಳ್ಳುವಲ್ಲಿ ಯಲಹಂಕನಾಡಿನ ಪ್ರಭುಗಳು ವಿಜಯನಗರದ ಅರಸರೊಂದಿಗೆ ಹೊಂದಿದ್ದಂತಹ ಸಂಬಂಧಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ವಿಜಯನಗರದ ರಾಜಕೀಯ ಮತ್ತು ಆರ್ಥಿಕ ಬಲವನ್ನು ವೃದ್ಧಿಸುವುದರಲ್ಲಿ ಹಾಗೂ ಸಾಮ್ರಾಜ್ಯದ ಮೇರೆಗಳನ್ನು ವಿಸ್ತರಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ವಿಜಯನಗರಕ್ಕೆ ಈ ನಾಡಪ್ರಭುಗಳು ಮಾಡಿದ ಸಹಾಯ ಮತ್ತು ಸಹಕಾರಗಳು ಅನನ್ಯವಾದವು. ಊಳಿಗಮಾನ್ಯ ವ್ಯವಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಯಲಹಂಕ ನಾಡಪ್ರಭುಗಳು ತಮ್ಮ ಶಕ್ತಿ ಮತ್ತು ಸಾಮರ್ಥ್ಯಗಳಿಂದ ವಿಶಾಲವಾದ ಭೂಪ್ರದೇಶವನ್ನು ತಮ್ಮ ಅಧಿಕಾರ ವ್ಯಾಪ್ತಿಗೆ ಒಳಪಡಿಸಿಕೊಂಡರು ಆ ಮೂಲಕ ಬಲಿಷ್ಠ ಅಮರನಾಯಕರಾಗಿ ರೂಪುಗೊಂಡರು. ಈ ಹಿನ್ನೆಲೆಯಲ್ಲಿ ಯಲಹಂಕ ನಾಡಪ್ರಭುಗಳು ಮತ್ತು ವಿಜಯನಗರ ಸಾರ್ವಭೌಮರ ಸಹ ಸಂಬಂಧಗಳನ್ನು ವಿಶ್ಲೇಷಿಸಬೇಕಾಗುತ್ತದೆ.

ಆಕರಗಳು

ಮೂಲ: ಯಲಹಂಕ ನಾಡಪ್ರಭುಗಳ ಮೂಲವನ್ನು ಕುರಿತು ಇತಿಹಾಸಕಾರರಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಕೆಂಪೇಗೌಡ ಪ್ರಭುಗಳ ಮೂಲ ವಂಶಿಕರು ಕಂಚಿಯ ಬಳಿಯ ಯಣಮಂಜಿ ಪುತ್ತೂರಿನಿಂದ ವಲಸೆ ಬಂದವರೆಂಬ ಐತಿಹ್ಯಗಳಿವೆ. ಹಾಗೂ ಇವರು ಅವತಿ ನಾಡ ಪ್ರಭುಗಳ ವಂಶಸ್ಥರೆಂದೂ ಈ ಐತಿಹ್ಯಗಳು ಹೇಳುತ್ತವೆ. ಈ ವಂಶದ ಏಳು ಸೋದರರು ತಮಿಳುನಾಡಿನಿಂದ ಬಂದು ಏಳು ರಾಜ್ಯಗಳನ್ನು ಕಟ್ಟಿದವರೆಂಬ ಕಥೆಗಳಿವೆ.[೧೨] ಈ ವಂಶಸ್ಥರು ಏಳು ಬಂಡಿಗಳಲ್ಲಿ ಬಂದಿದ್ದರಿಂದ ಬಂಡಿಕಾಪುಲು ವಂಶಸ್ಥರೆಂದು ಖ್ಯಾತಿಯಾಗಿದ್ದಾರೆ.[೧೩] ಕೆಂಪೇಗೌಡನ ವಂಶಸ್ಥರು ತೆಲುಗು ಮೂಲದವರೆಂದು ಆಂಧ್ರ ಪ್ರದೇಶದ ಕಡಪ ಜಿಲ್ಲೆಯ ಕಡೆಯಿಂದ ಕರ್ನಾಟಕಕ್ಕೆ ಆಗಮಿಸಿದರು. ಇವರು ಕೋಲಾರದ ಮುಳಬಾಗಿಲು ಮೂಲಕ ಆಗಮಿಸಿ ಆನಂತರ ಅವತಿ, ಯಲಹಂಕ, ಬೆಂಗಳೂರು ಮತ್ತು ಮಾಗಡಿಗಳಲ್ಲಿ ನೆಲೆಸಿ ರಾಜ್ಯವನ್ನು ಆಳಿದರು. ಇದಕ್ಕೆ ಕೆಂಪೇಗೌಡರ ಕಾಲದ ಒಂದೆರಡು ತೆಲುಗು ಶಾಸನಗಳನ್ನು ಹಾಗೂ ಹಿರಿಯ ಕೆಂಪೇಗೌಡರು ಬರೆದ ಗಂಗಾ-ಗೌರಿ ವಿಲಾಸಮು ಎಂಬ ತೆಲುಗು ಕಾವ್ಯವನ್ನು ಮೂಲವಾಗಿಟ್ಟುಕೊಂಡು ಕರ್ಲಮಂಗಲ ಸುಬ್ಬರಾಮಪ್ಪ ಎಂಬುವರು ತೆಲುಗು ಮೂಲವನ್ನು ಸಮರ್ಥಿಸಿಕೊಂಡಿದ್ದಾರೆ.

ಕೆಂಪೇಗೌಡರ ಮೂಲ ವಂಶಸ್ಥರನ್ನು ಕೇವಲ ಐತಿಹ್ಯಗಳು ಮತ್ತು ಒಂದೆರಡು ಶಾಸನಗಳು, ಕೃತಿಗಳನ್ನು ಆಧರಿಸಿ ಅವರನ್ನು ತಮಿಳರೆಂದು, ತೆಲುಗಿನವರೆಂದು ಸಮರ್ಥಿಸುವುದು ತಪ್ಪಾಗುತ್ತದೆ. ಕಾರಣ ಇತ್ತೀಚಿನ ದಿನಗಳಲ್ಲಿ ನಡೆದಿರುವ ಸಂಶೋಧನೆಗಳು ಕೆಂಪೇಗೌಡನ ವಂಶಸ್ಥರು ಅಪ್ಪಟ ಕನ್ನಡಿಗರೆಂದು ಸಮರ್ಥಿಸುತ್ತವೆ. ಎಂ.ಬಿ. ಶ್ರೀನಿವಾಸ್, ದೇವರಕೊಂಡಾರೆಡ್ಡಿ, ಎಂ.ಜಿ. ಮಂಜುನಾಥ್, ಪಿ.ವಿ.ಕೃಷ್ಣಮೂರ್ತಿಯವರು ಸಮಕಾಲೀನ ಶಾಸನಗಳನ್ನು ಆಧರಿಸಿ ಕೆಂಪೇಗೌಡನ ವಂಶಸ್ಥರು ಕೋಲಾರದ ಆಸುವಾಸಿನ ಪ್ರದೇಶವರೆಂದು ನಿರೂಪಿಸಿದ್ದಾರೆ. ಕೆಂಪೇಗೌಡರು ಮೊರಸು ಒಕ್ಕಲು ಜಾತಿಯವರಾಗಿದ್ದು ಶಾಸನಗಳಲ್ಲಿ ತಮ್ಮನ್ನು ಚತುರ್ಥ ಗೋತ್ರದವರೆಂದು ಕರೆದುಕೊಂಡಿದ್ದಾರೆ. ಮೊರಸುನಾಡು ಎಂಬುದು ಕೋಲಾರ, ಬೆಂಗಳೂರು, ಧರ್ಮಪುರಿ ಜಿಲ್ಲೆಗಳ ಪರಿಸರದ ಒಂದು ಭಾಗವಾಗಿದೆ. ಹೀಗಾಗಿ ಇವರ ಮೂಲ ತಮಿಳು ಮತ್ತು ತೆಲುಗು ಎಂಬುದನ್ನು ಬದಿಗೊತ್ತಿ ಕನ್ನಡದವರೆಂಬುದು ಖಚಿತವಾಗುತ್ತದೆ.

ವಿಜಯನಗರದೊಂದಿಗಿನ ಸಂಬಂಧಗಳು

ಕ್ರಿ.ಶ. ಹದಿನಾರನೆಯ ಶತಮಾನದಲ್ಲಿ ವಿಜಯನಗರದ ಕೃಷ್ಣದೇವರಾಯ ಮತ್ತು ಆತನ ಸಹೋದರ ಅಚ್ಯುತರಾಯರು ನಾಡಗೌಡರಾಗಿದ್ದ ಅನೇಕರಿಗೆ ಅಮರನಾಯಕತ್ವವನ್ನು ನೀಡಿದರು.[೧೪] ಹೀಗೆ ನಾಡಗೌಡರಾಗಿದ್ದು ಅಮರನಾಯಕತ್ವವನ್ನು ಪಡೆದವರಲ್ಲಿ ಯಲಹಂಕನಾಡ ಪ್ರಭುಗಳು ಒಬ್ಬರಾಗಿದ್ದಾರೆ. ಕೆಂಪನಂಜೇಗೌಡರ ಕಲ್ಯಾ ಶಿಲಾಶಾಸವು ಉಲ್ಲೇಖಿಸುವಂತೆ. ೧. ಅಂಗೀರಸ ಸಂವತ್ಸರದ ಜೇಷ್ಠ ಶುದ್ಧ ೧೫ರಲ್ಲಿ ಶ್ರೀಮನ್ಮಹಾಕೃಷ್ಣರಾಯರ ಕಾಲದಲ್ಲಿ ಯಲಹಂಕ ನಾಡಪ್ರಭು

ಅಮರನಾಯಕ ಕೆಂಪ್ಪನಂಜೇಗವಡರು ಕಲಿನಾಥ ದೇವರ ಅಂಗಭೋಗರಂಗ ಭೋಗಕೆ ದೇವರಿಗೆ ಕೊಟ್ಟ ಮಾನ್ಯ ಎಂಬ ವಿವರಗಳಿವೆ.[೧೫] ಈ ಶಾಸನದಿಂದ ಯಲಹಂಕನಾಡಿನ ಸುಪ್ರಿಸಿದ್ದ ದೊರೆ ಕೆಂಪೇಗೌಡನ ತಂದೆ ಕೆಂಪನಂಜೇಗೌಡನು ಕೃಷ್ಣದೇವರಾಯನ ಕೈಕೆಳಗೆ ಅಮರನಾಯಕನಾಗಿ ಯಲಹಂಕ ನಾಡನ್ನು ಆಳುತ್ತಿದ್ದನೆಂಬ ಐತಿಹಾಸಿಕ ಮಹತ್ವದ ಸಂಗತಿಯನ್ನು ಈ ಶಾಸನ್ನು ಒಳಗೊಂಡಿದೆ. ಹೀಗಾಗಿ ಕೃಷ್ಣದೇವರಾಯನ ಕಾಲದಿಂದಲೇ ಈ ನಾಡಪ್ರಭುಗಳು ವಿಜಯನಗರದ ಅಮರನಾಯಕರಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ನಂತರ ವಿಜಯನಗರದ ಉಲ್ಲೇಖ ಸಿಗುವುದು ಕೆಂಪೇಗೌಡರ ದಾಸರಹಳ್ಳಿ ಶಿಲಾಶಾಸನದಲ್ಲಿ. ವಿಜಯನಗರ ಸಾಮ್ರಾಜ್ಯವನ್ನು ಅಚ್ಯುತರಾಯನು ಆಳ್ವಿಕೆ ಮಾಡುತ್ತಿದ್ದಾಗ ಕೆಂಪೇಗೌಡರಿಗೆ ಯಲಹಂಕ ರಾಜ್ಯವನ್ನು ನಾಯಕತನಕ್ಕೆ ಪಾಲಿಸಿದ ವಿವರಗಳನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಯಲಹಂಕ ನಾಡನ್ನು, ರಾಜ್ಯವೆಂದು ಕರೆದಿರುವುದು ಮತ್ತು ಕೆಂಪೇಗೌಡರನ್ನು ಕೆಂಪದೇವರಸ ಗೌಡನೆಂದು ಕರೆದಿರುವುದು ಮಹತ್ವದ ಸಂಗತಿಯಾಗಿದೆ. ಈ ಶಾಸನದ ಕಾಲಘಟ್ಟದ ವೇಳೆಗೆ ಕೆಂಪೇಗೌಡರಿಗೆ ಸಾಮಂತ ಅರಸನ ಸ್ಥಾನ ಪ್ರಾಪ್ತಿಯಾಗಿದ್ದ ಐತಿಹಾಸಿಕ ಮಹತ್ವದ ಅಂಶವನ್ನು ಈ ಶಾಸನ ದಾಖಲಿಸಿದೆ.[೧೬] ಈ ಹಿನ್ನೆಲೆಯಲ್ಲಿ ಯಲಹಂಕ ನಾಡು ರಾಜ್ಯವಾಗಿ ಪರಿವರ್ತನೆಗೊಂಡ ಬಗೆಯನ್ನು ಹಾಗೂ ಕೆಂಪೇಗೌಡರು ನಾಡ ಪ್ರಭುವಿನಿಂದ ಅರಸನ ಸ್ಥಾನಮಾನವನ್ನು ಪಡೆದುಕೊಂಡಿದ್ದರೆಂಬ ಅಂಶವು ಇದರಿಂದ ಸ್ಪಷ್ಟವಾಗುತ್ತದೆ. ಕೆಂಪೇಗೌಡರ ಕಾಲದ ಬಿಸ್ಸನಹಳ್ಳಿಯ ಶಿಲಾಶಾಸನವೊಂದು "ಶ್ರೀಮತು ರಾಜಮಾನ್ಯ ಕೆಂಪೇಗೌಡರು ಮಠದ ವೀರಪ ದೇವರಿಗೆ ದಯಪಾಲಿಸಿದ ಮಾನ್ಯರ ಹೊಲ ಎಂಬ ವಿವರಗಳನ್ನು ಒಳಗೊಂಡಿದೆ.[೧೭] ಇಲ್ಲಿ ರಾಜಮಾನ್ಯ ಎಂದರೆ ವಿಜಯನಗರದ ಚಕ್ರವರ್ತಿಗಳಿಂದ ಮಾನ್ಯತೆ ಪಡೆದಿದ್ದರು ಎಂಬುದಾಗಿ ಅರ್ಥವಾಗುತ್ತದೆ.

ಹಿರಿಯ ಕೆಂಪೇಗೌಡನ ಕಾಲದಲ್ಲಿ ಯಲಹಂಕನಾಡು ತನ್ನ ಸುತ್ತಮುತ್ತಲಿನ ಬೆಂಗಳೂರು, ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ತಾಲ್ಲೂಕುಗಳ ಭೂಭಾಗಗಳನ್ನು ತನ್ನ ಆಡಳಿತ ವ್ಯಾಪ್ತಿಗೆ ಸೇರಿಸಿಕೊಂಡಿತು.[೧೮] ಹಿರಿಯ ಕೆಂಪೇಗೌಡನು ವಿಜಯನಗರದ ಅರಸರ ಅನುಮತಿಯನ್ನು ಪಡೆದು ಕ್ರಿ.ಶ. ೧೫೩೭ರಲ್ಲಿ ಬೆಂಗಳೂರು ನಗರವನ್ನು ನಿರ್ಮಿಸಿದನು. ಆರ್ಥಿಕಾಭಿವೃದ್ಧಿಗಾಗಿ ಹಲವು ಪೇಟೆಗಳನ್ನು ನಿರ್ಮಿಸಿದನು. ವಿವಿಧ ವೃತ್ತಿಯ ಜನರನ್ನು, ವ್ಯಾಪಾರಿಗಳನ್ನು ಆಹ್ವಾನಿಸಿ, ವಾಸ್ತವ್ಯಕ್ಕೆ ಅವಕಾಶವನ್ನು ಕಲ್ಪಿಸಿದನು. ಸುತ್ತಲು ಭದ್ರವಾದ ಮಣ್ಣಿನ ಕೋಟೆಯನ್ನು ನಿರ್ಮಿಸಿದನು. ವಿಜಯನಗರದ ಅರಸರ ನೆನಪಿಗಾಗಿ ದೇವರಾಯ ಪಟ್ಟಣ ಎಂದು ನಾಮಕರಣ ಮಾಡಿದನು. ಆದರೆ ಇದು ಮುಂದೆ ಬೆಂಗಳೂರು ಎಂಬ ಹೆಸರೇ ಊರ್ಜಿತವಾಯಿತು. ರಾಜಧಾನಿ ನಿರ್ಮಾಣವಾದ ಮೇಲೆ ಯಲಹಂಕದಿಂದ ಬೆಂಗಳೂರಿಗೆ ರಾಜಧಾನಿಯನ್ನು ಸ್ಥಳಾಂತರಿಸಿದನು. ಕೆಂಪೇಗೌಡನು ಬೆಂಗಳೂರು ರಾಜಧಾನಿಯನ್ನಾಗಿ ರೂಪಿಸಿದ ಸಂಗತಿಯನ್ನು ತಿಳಿದುಕೊಂಡ ವಿಜಯನಗರದ ಅರಸ ಅಚ್ಯುತರಾಯನು ೩೦,೦೦೦ ಪಗೋಡ (ವರಹ)ಗಳ ಆದಾಯ ಬರುವ ಬೇವೂರು, ಹಳೆ ಬೆಂಗಳೂರು, ಕೆಂಗೇರಿ, ಹೆಸರಘಟ್ಟ, ಜಿಗಣಿ ಮೊದಲಾದ

ಹನ್ನೆರಡು ಹೋಬಳಿಗಳನ್ನು ಕೆಂಪೇಗೌಡನಿಗೆ ನೀಡಿದನು. ಅಚ್ಯುತರಾಯನು ಮಹಾನವಮಿ ದಸರೆಯ ಕಾಲದಲ್ಲಿ ಕೆಂಪೇಗೌಡನನ್ನು ವಿಜಯನಗರಕ್ಕೆ ಆಹ್ವಾನಿಸಿ ಸನ್ಮಾನಿಸಿದನು. ಅಚ್ಯುತರಾಯನ ನಂತರ ಅಧಿಕಾರಕ್ಕೆ ಬಂದಂತಹ ಸದಾಶಿವರಾಯ ಮತ್ತು ಅಳಿಯ ರಾಮರಾಯನ ಕಾಲದವರೆಗೂ ಕೆಂಪೇಗೌಡನು ಉತ್ತಮ ಸಂಬಂಧಗಳನ್ನು ಹೊಂದಿದ್ದನು. ಈತನು ವಿಜಯನಗರದ ಅರಸರ ಒಪ್ಪಿಗೆಯನ್ನು ಪಡೆದುಕೊಂಡು ಬೆಂಗಳೂರು ಕೋಟೆಯ ದಕ್ಷಿಣದಲ್ಲಿ ಕಾನಕಾನಹಳ್ಳಿ ದ್ವಾರದ ಹತ್ತಿರ ಟಂಕಶಾಲೆಯನ್ನು ಪ್ರಾರಂಭಿಸಿದನು. ತನ್ನ ಮನೆದೇವರ ಹೆಸರಿನಲ್ಲಿ ಭೈರವ ನಾಣ್ಯಗಳನ್ನು ಟಂಕಿಸಿ ಚಲಾವಣೆಗೆ ತಂದನು. ಭೈರವ ನಾಣ್ಯ ಅಥವಾ ಪಗೋಡಾ, ಜನಸಾಮಾನ್ಯರ ಭಾಷೆಯಲ್ಲಿ ವಿಜಯ ನಾಣ್ಯವೆಂದು ಕರೆಸಿಕೊಳ್ಳುತ್ತಿತ್ತು. 'ವೀರಭದ್ರ' ಎಂಬ ವರಹಗಳನ್ನು ಮುದ್ರಿಸಿ ಚಲಾವಣೆಗೆ ತಂದಿದ್ದ ಎಂದು ಹೇಳಲಾಗಿದೆ. ಇವು ಕೆಂಪೇಗೌಡನು ಟಂಕಿಸಿದ ಸ್ವಂತ ನಾಣ್ಯಗಳಾಗಿದ್ದವು. ಶಿವಗಂಗೆಯಲ್ಲಿ ಕೆಂಪೇಗೌಡನ ಖಜಾನೆಯಿತ್ತು. ಕೆಂಪೇಗೌಡ ಅಪಾರ ಸಂಪತ್ತಿಗೆ ಒಡೆಯನಾಗಿದ್ದ. ಆರ್ಥಿಕ ಬಲದಿಂದಾಗಿ ಹಲವಾರು ಕೋಟೆಗಳ ನಿರ್ಮಾಣಕ್ಕೆ ಮುಂದಾದನು. ರಾಮದುರ್ಗದಲ್ಲಿ ಮದ್ದುಗುಂಡುಗಳ ತಯಾರಿಕೆ ಮತ್ತು ಸಂಗ್ರಹಕ್ಕೆ ವ್ಯವಸ್ಥೆ ಮಾಡಿಕೊಂಡನು. ಹಾಗೂ ಭದ್ರವಾದ ಕೋಟೆಯನ್ನು ನಿರ್ಮಿಸಿದನು. ಹುತ್ತರಿದುರ್ಗದಲ್ಲಿ ಕೋಟೆಯ ನಿರ್ಮಾಣ ಕಾರ್ಯವನ್ನು ಕೈಗೊಂಡನು.

ಕೆಂಪೇಗೌಡನು ನಿರ್ಮಾಣ ಮಾಡಿದ ಕೋಟೆಗಳು, ಟಂಕಸಾಲೆ, ಮದ್ದುಗುಂಡುಗಳ ಸಂಗ್ರಹಣಾ ಕಾರ್ಯ ಮೊದಲಾದ ಅಂಶಗಳನ್ನು ಮುಂದಿಟ್ಟುಕೊಂಡು ಸುತ್ತಮುತ್ತಲಿನ ಪಾಳೆಯಗಾರರು ದೊರೆ ಅಳಿಯ ರಾಮರಾಯರಿಗೆ ದೂರು ನೀಡಿದರು.[೯೮] ವಿಜಯದಶಮಿಯ ಆಚರಣೆಗೆಂದು ಕೆಂಪೇಗೌಡನನ್ನು ಆಹ್ವಾನಿಸಿದ ರಾಮರಾಯನು ಕೆಂಪೇಗೌಡನನ್ನು ಬಂಧಿಸಿ ೫ ವರ್ಷಗಳ ಕಾಲ ಆನೆಗೊಂದಿಯ ಸೆರೆಮನೆಯಲ್ಲಿಟ್ಟನು. ಕೆಂಪೇಗೌಡನು ಸೆರೆಮನೆಯಲ್ಲಿದ್ದಾಗ ಯಲಹಂಕನಾಡನ್ನು ಚನ್ನಪಟ್ಟಣದ ಅಮರನಾಯಕ, ಜಗದೇವರಾಯನಿಗೆ ವಹಿಸಿಕೊಡಲಾಯಿತು. ಸೆರೆಮನೆಯಲ್ಲಿದ್ದ ಕೆಂಪೇಗೌಡನ ಸನ್ನಡತೆಯನ್ನು ಗುರುತಿಸಿದ ರಾಮರಾಯನು ಕೆಲವೇ ದಿನಗಳಲ್ಲಿ ಗೌಡನನ್ನು ಸೆರೆಮನೆಯಿಂದ ವಿಮುಕ್ತಿಗೊಳಿಸಿದನು.

ಕೆಂಪೇಗೌಡನು ಸೆರೆಮನೆಯಿಂದ ಬಿಡುಗಡೆಯಾದ ವರ್ಷವೇ ಅಂದರೆ ೧೫೬೫ರಲ್ಲಿ ರಕ್ಕಸ ತಂಗಡಿ ಯುದ್ಧ ಆರಂಭಗೊಂಡಿತು. ವಿಜಯನಗರಕ್ಕೆ ಬಂದೊದಗಿದ ಆಪತ್ಕಾಲವನ್ನು ಮನಗಂಡ ಕೆಂಪೇಗೌಡನು ರಾಮರಾಯನ ಮೇಲೆ ದ್ವೇಷ ರಾಜಕಾರಣ ಮಾಡದೇ ಸ್ವಾಮಿನಿಷ್ಠೆಯಿಂದ ತನ್ನ ಮಗ ಸೋಮಯ್ಯನ ನೇತೃತ್ವದಲ್ಲಿ ೩,೦೦೦ ಸೈನಿಕರನ್ನು ವಿಜಯನಗರಕ್ಕೆ ಕಳುಹಿಸಿದನು. ಆದರೆ ಈ ಯುದ್ಧದಲ್ಲಿ ವಿಜಯನಗರವು ಸೋತು, ಅಳಿಯ ರಾಮರಾಯನು ಮರಣ ಹೊಂದಿದನು. ಆದರೂ ಕೆಂಪೇಗೌಡನು ತಾನು ಸ್ವತಂತ್ರನೆಂದು ಘೋಷಿಸಿಕೊಳ್ಳದೆ ವಿಜಯನಗರದ ಸಾಮಂತನಾಗಿಯೇ ಮುಂದುವರಿದನು. ಕ್ರಿ.ಶ. ೧೫೬೯ರಲ್ಲಿ ಮರಣ ಹೊಂದಿದನು. ಹಿರಿಯ ಕೆಂಪೇಗೌಡನ ನಂತರ ಆತನ ಮಗ ಗಿಡ್ಡೆಗೌಡನು ೧೫೭೦ರಿಂದ ೧೫೮೭ರವರೆಗೂ ಅಧಿಕಾರ ನಡೆಸಿದನೆಂದು ಅವನ

ಆಳ್ವಿಕೆಯ ಕುರಿತು ಸ್ಪಷ್ಟವಾದ ಐತಿಹಾಸಿಕ ದಾಖಲೆಗಳು ಲಭ್ಯವಾಗದೇ ಇರುವುದರಿಂದ ಇಮ್ಮಡಿ ಕೆಂಪೇಗೌಡನೇ ಹಿರಿಯ ಕೆಂಪೇಗೌಡನ ಉತ್ತಾರಾಧಿಕಾರಿಯಾದನೆಂದು ಹೇಳಬಹುದು.

ಇಮ್ಮಡಿ ಕೆಂಪೇಗೌಡನಿಗೆ ಎರಡನೇ ಕೆಂಪೇಗೌಡ, ಇಮ್ಮಡಿ ಕೆಂಪಭೂಪ, ಮಾಗಡಿ ಕೆಂಪೇಗೌಡ ಎಂಬ ಹೆಸರುಗಳಿದ್ದವು. ಇಮ್ಮಡಿ ಕೆಂಪೇಗೌಡನು ವಿಜಯನಗರ ಸಾಮ್ರಾಜ್ಯಕ್ಕೆ ಅಧೀನನಾಗಿದ್ದು ಪೆನುಗೊಂಡಯ ವೆಂಕಟಪತಿರಾಯನ ಸಾಮಂತನಾಗಿದ್ದನು. ಇಮ್ಮಡಿ ಕೆಂಪೇಗೌಡನು ಅಧಿಕಾರರೂಢನಾದಾಗ ವಿಜಯನಗರ ಸಾಮ್ರಾಜ್ಯ ಅವನತಿಯ ಹಾದಿಯಲ್ಲಿ ನಡೆಯುತ್ತಿತ್ತು. ವಿಜಯನಗರವನ್ನು ಆಳುತ್ತಿದ್ದ ಕೊನೆಯ ಸಂತತಿಯಾದ ಅರವೀಡು ಮನೆತನದ ಒಂದು ಶಾಖೆಯು ವೆಂಕಟಪತಿರಾಯನ ನೇತೃತ್ವದಲ್ಲಿ ಪೆನುಗೊಂಡೆಯಲ್ಲಿ ಆಳುತ್ತಿತ್ತು. ಈ ಸಮಯದಲ್ಲಿ ವಿಜಯನಗರ ಸಾಮ್ರಾಜ್ಯದ ವ್ಯಾಪ್ತಿಯು ಭಾರೀ ಪ್ರಮಾಣದಲ್ಲಿ ಕ್ಷೀಣಿಸಿ ಅದು ಕೇವಲ ಕೆಲವು ಪ್ರದೇಶಗಳಿಗಷ್ಟೇ ಸೀಮಿತವಾಗಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಮಧುರೆಯ ವೀರಪ್ಪ ನಾಯಕ ಮತ್ತು ಮೈಸೂರಿನ ರಾಜ ಒಡೆಯರು ವಿಜಯನಗರದ ಅಧಿಪತ್ಯದ ವಿರುದ್ಧ ದಂಗೆ ಎದ್ದು ಸ್ವತಂತ್ರಗೊಂಡರು. ಇಂತಹ ಸಮಯಾವಕಾಶಕ್ಕಾಗಿ ಕಾದು ಕುಳಿತಿದ್ದ ಇಕ್ಕೇರಿಯ ನಾಯಕರು ಜಿಂಜಿ ನಾಯಕರು, ತಂಜಾವೂರು ನಾಯಕರು ವಿಜಯನಗರದ ಸಾರ್ವಭೌಮತ್ವದ ನೆರಳಿನಿಂದ ಹೊರಬಂದು ಸ್ವತಂತ್ರ ಸಂಸ್ಥಾನಗಳನ್ನು ಸ್ಥಾಪಿಸಿಕೊಂಡರು. ಒಂದು ಕಾಲಕ್ಕೆ ವಿಜಯನಗರದ ಉತ್ಕೃಷ್ಟ ಸಾಮ್ರಾಜ್ಯ ಸಂಘಟನೆಗೆ ಕಾರಣವಾಗಿದ್ದ ಅಮರನಾಯಕ ಪದ್ಧತಿಯು ರಕ್ಕಸ ತಂಗಡಿ ಯುದ್ಧದ ತರುವಾಯ ಸಾಮ್ರಾಜ್ಯದ ವಿಘಟನೆಗೆ ಕಾರಣವಾಯಿತು. ಈ ಪದ್ಧತಿಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬಹುತೇಕ ಅಮರನಾಯಕರು ವಿಜಯನಗರದ ಸಾಮ್ರಾಜ್ಯಶಾಹಿ ವ್ಯವಸ್ಥೆಗೆ ತಾವು ಸ್ವತಂತ್ರರಾಗುವ ಮೂಲಕ ಬಲವಾದ ಪೆಟ್ಟನ್ನು ನೀಡಿದರು. ಇಂತಹ ರಾಜಕೀಯ ವಿಘಟನೆಗೆ ಸಿಲುಕಿ ತತ್ತರಿಸಿದ್ದ ವಿಜಯನಗರದ ಮೇಲೆ ಪುನಃ ವಿಜಾಪುರದ ಸುಲ್ತಾನರು ದಾಳಿ ಮಾಡಿದರು. ಈ ಸಂದರ್ಭದಲ್ಲಿ ಪೆನಗೊಂಡೆಯ ವೆಂಕಟಪತಿರಾಯನ ನೆರವಿಗೆ ಭಾವಿಸಿದಂತಹ ಇಮ್ಮಡಿ ಕೆಂಪೇಗೌಡನು ಬೆಂಗಳೂರಿನ ಸುತ್ತಮುತ್ತಲಿನ ಪಾಳೆಯಗಾರರನ್ನು ಸಂಘಟಿಸಿ ವಿಜಯನಗರದ ಪರವಾಗಿ ಬಿಜಾಪುರ ಸೇನೆಯ ವಿರುದ್ಧ ಹೋರಾಡಿದನು.

ಇಮ್ಮಡಿ ಕೆಂಪೇಗೌಡನ ಹೋರಾಟವನ್ನು ಅವನ ಆಸ್ಥಾನದ ಕವಿ ಹೊನ್ನನು ಜಯಪ್ರಶಸ್ತಿಯಲ್ಲಿ ವಿವರಿಸಿದ್ದಾನೆ. ಕವಿ ಹೊನ್ನ ಬರೆದ ಕೆಂಪೇಗೌಡನ ಜಯಪ್ರಶಸ್ತಿಯಲ್ಲಿ ಕೆಂಪೇಗೌಡನ ಸಾಹಸವನ್ನು "ಜಿಂಜಿ", ಮಧುರೆ, ತಂಜಾವೂರು ಬೇಲೂರು, ಚಂದ್ರಗಿರಿ, ಚನ್ನಪಟ್ಟಣ, ಶ್ರೀರಂಗಪುರ, ನಂಜರಾಯನ ಪಟ್ಟಣ, ಪಿರಿಯಾಪಟ್ಟಣ, ಸೋದೆ-ಸೊನ್ನಾಲಾಪುರ, ಜಡೆಯಯಿಕ್ಕೆ (?) ಮೇಳಿಗೆ (?) ಬಂಕಾಪುರ ಹಾನಗಲ್ಲು, ರಾಯಚೂರು, ವಿಜಯಪುರ, ಡಿಳ್ಳಿ, ಕಾಶಿ, ರಾಮೇಶ್ವರ ಇವೆಲ್ಲಾ ಹಾಡಿ ಹೊಗಳಿದರೆಂದು ಜಯ ಪ್ರಶಸ್ತಿಯಲ್ಲಿ ಹೇಳಲಾಗಿದೆ.[೨೦] ಇಮ್ಮಡಿ ಕೆಂಪೇಗೌಡನು ಹದ್ದು ಮೀರಿದ ಹಲವಾರು ಪಾಳೆಯಗಾರರನ್ನು ಮಟ್ಟ ಹಾಕಿ ವಿಜಯನಗರಕ್ಕೆ ಕಪ್ಪ ಕಾಣಿಕೆಗಳನ್ನು ಸಲ್ಲಿಸುವಂತೆ ಮಾಡುತ್ತಾನೆ.

ವಿಜಯನಗರದ ಅರಸನಾಗಿ ವೆಂಕಟಪತಿರಾಯನು ಪಟ್ಟಾಭಿಷಿಕ್ತನಾದ ಸಮಯದಲ್ಲಿ ಅವನ ಆಪ್ತ ಸಾಮಂತನಾಗಿ ಭಾಗವಹಿಸಿ ವಿಜಯನಗರದವರಿಂದ ಸನ್ಮಾನವನ್ನು ಪಡೆಯುತ್ತಾನೆ. ಇಮ್ಮಡಿ ಕೆಂಪೇಗೌಡನು ಪೆನುಗೊಂಡೆಯ ವೆಂಕಟಪತಿರಾಯನ ಸಾಮಂತನಾಗಿ ಆತನ ಪರ ಯುದ್ಧಗಳನ್ನು ಮಾಡಿ ಹೆಸರು ಪ್ರತಿಷ್ಠೆ ಗಳಿಸಿದ್ದು ಮೈಸೂರು ಒಡೆಯರಿಗೂ ಹಾಗೂ ಅರವೀಡು ಮನೆತನದ ಮತ್ತೊಂದು ಶಾಖೆಯ ಶ್ರೀರಂಗಪಟ್ಟಣದಲ್ಲಿ ಅಧಿಕಾರರೂಢನಾಗಿದ್ದ ಶ್ರೀರಂಗರಾಯನಿಗೂ ಸಹಿಸಲಾಗಲಿಲ್ಲ. ಶ್ರೀರಂಗರಾಯನು ಕೆಂಪೇಗೌಡನ ವಿರುದ್ಧ ದಂಡೆತ್ತಿ ಬಂದು ಸೋತು ಹೋದನು. ಇಮ್ಮಡಿ ಕೆಂಪೇಗೌಡನು ಶ್ರೀರಂಗರಾಯನ ವಿರುದ್ಧ ಗೆದ್ದು ಆನೆ, ಕುದುರೆಗಳನ್ನು ವಶಪಡಿಸಿಕೊಂಡ ವೃತ್ತಾಂತವನ್ನು ಏಕಾಂಬರ ಶಾಸ್ತ್ರಿಯು ತನ್ನ ವೀರಭದ್ರ ವಿಜಯದಲ್ಲಿ ವಿವರಿಸಿದ್ದಾರೆ. ಇಮ್ಮಡಿ ಕೆಂಪೇಗೌಡನ ನಂತರ ಅಧಿಕಾರಕ್ಕೆ ಬಂದ ಮುಮ್ಮಡಿ ಕೆಂಪೇಗೌಡನ ಕಾಲದಲ್ಲಿಯೂ ವಿಜಯನಗರದ ಅರಸರೊಂದಿಗೆ ಸಾಮಂತಿಕೆಯ ಸಂಬಂಧಗಳು ಹಿಂದಿನಂತೆಯೇ ಮುಂದುವರಿದವು. ಇದಕ್ಕೆ ಮುಮ್ಮಡಿ ಕೆಂಪೇಗೌಡನ ಕಾಲದ ಬಹುತೇಕ ಶಾಸನಗಳು ಸಮರ್ಥನೆಯನ್ನು ನೀಡುತ್ತವೆ. ಕ್ರಿ.ಶ. ೧೬೫೬ನೇ ವರ್ಷಕ್ಕೆ ಸಲ್ಲುವ ಶಾಸನವೊಂದು ವಿಜಯನಗರದ ಅರಸ ಶ್ರೀರಂಗರಾಯನು ಪೆನುಗೊಂಡೆಯಿಂದ ರಾಜ್ಯಭಾರ ಮಾಡುತ್ತಿದ್ದಾಗ ಯಲಹಂಕ ನಾಡಪ್ರಭು ಕೆಂಪೇಗೌಡರ ಮೊಮ್ಮಗ ಇಮ್ಮಡಿ ಕೆಂಪೇಗೌಡರ ಪುತ್ರ ಮುಮ್ಮಡಿ ಕೆಂಪೇಗೌಡರು ಶೇಷಯ್ಯಂಗಾರ್ ಎಂಬುವವರಿಗೆ ಸಾವನದುರ್ಗದ ಶ್ರೀ ವೀರಭದ್ರ ಸ್ವಾಮಿಯ ಸನ್ನಿಧಿಯಲ್ಲಿ ಕೂಟಗಾರ ಸಿದ್ದಪ್ಪನಹಳ್ಳಿಯನ್ನು ಶ್ರೀನಿವಾಸಪುರವೆಂದು ಹೆಸರಿಟ್ಟು ಶಿವಾರ್ಪಿತವಾಗಿ ದಾನ ನೀಡಿದ ವಿವರಗಳಿವೆ.[೨೧] ಅರವೀಡು ಮನೆತನದ ಮತ್ತೊಂದು ಶಾಖೆಯು ಚಂದ್ರಗಿರಿಯಿಂದ ಆಳುತ್ತಿತ್ತು. ಚಂದ್ರಗಿರಿಯಲ್ಲಿ ವಿಜಯನಗರದ ರಾಜನಾಗಿ ಮೂರನೇ ವೆಂಕಟನು ಅಧಿಕಾರದಲ್ಲಿದ್ದು, ಈ ಸಮಯದಲ್ಲಿ ಮೂರನೇ ವೆಂಕಟನ ವಿರುದ್ಧ ದಂಡೆದ್ದು ಬಂದ ಆನೇಕ ಮಾಂಡಲೀಕರನ್ನು ಇಮ್ಮಡಿ ಕೆಂಪೇಗೌಡನ ಪುತ್ರನಾದ ಮುಮ್ಮಡಿ ಕೆಂಪೇಗೌಡನು ಸದೆಬಡಿದು ಸ್ವಾಮಿ ದ್ರೋಹರ ಗಂಡ ಎಂಬ ಬಿರುದನ್ನು ಧರಿಸಿದ.[೨೨] ವಿಜಯನಗರ ಸಾಮ್ರಾಜ್ಯ ಸಂಪೂರ್ಣವಾಗಿ ಅವನತಿಯಾಗಿತ್ತು. ಇಡೀ ದಕ್ಷಿಣ ಭಾರತದಾದ್ಯಂತ ವಿಜಯನಗರದ ಅಮರನಾಯಕ ಮನೆತನಗಳ ವಂಶಸ್ಥರು ವಿಜಯನಗರೋತ್ತರ ಪಾಳೆಯಗಾರರಾಗಿ ಸ್ವತಂತ್ರ ಪಾಳೆಯಪಟ್ಟುಗಳನ್ನು ಸ್ಥಾಪಿಸಿಕೊಂಡಿದ್ದರು. ಇಂತಹ ವಿಷಯ ರಾಜಕೀಯ ವಾತಾವರಣದಲ್ಲಿ ಯಲಹಂಕ ನಾಡಪ್ರಭುಗಳ ಕೊನೆಯ ವಂಶಿಕನಾದ ಮುಮ್ಮಡಿ ಕೆಂಪವೀರಪ್ಪನ ಆಡಳಿತವು ಮಾಗಡಿ ಸೀಮೆಗಷ್ಟೇ ಸೀಮಿತವಾಗಿತ್ತು. ಹಾಗೂ ಬಲಾಢ್ಯ ಸಂಸ್ಥಾನವಾಗಿ ತಲೆ ಎತ್ತಿದ ಮೈಸೂರಿನ ಅಡಿಯಲ್ಲಿ ಸಾಮಂತ ಮನೆತನವಾಗಿ ಮುಂದುವರಿದು ತನ್ನ ಅಸಮರ್ಥತೆ ಮತ್ತು ದಾಯಾದಿ ಕಲಹಗಳಿಂದಾಗಿ ಸಂಪೂರ್ಣವಾಗಿ ವಿನಾಶಗೊಂಡಿತು.

ಈ ಮೇಲಿನ ಎಲ್ಲ ಪ್ರಮುಖ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಯಲಹಂಕ ನಾಡ ಪ್ರಭುಗಳು ವಿಜಯನಗರದೊಂದಿಗೆ ಹೊಂದಿದ್ದ ಸಂಬಂಧಗಳನ್ನು ಕುರಿತು ಮಹತ್ವವಾದ ಕೆಲವು ಅಂಶಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದಾಗಿದೆ.

೧. ಮೂಲತ ಕೃಷಿ ವರ್ಗದಿಂದ ಬಂದ ಕೆಂಪೇಗೌಡನ ವಂಶಸ್ಥರು ಆರಂಭದಲ್ಲಿ ನಾಡಗೌಡರಾಗಿದ್ದು, ನಂತರ ಯಲಹಂಕನಾಡಿನ ಸಾಮಂತರ ಸ್ಥಾನಮಾನವನ್ನು ಸ್ಥಾಪಿಸಿದರು.[೨೩]

೨. ವಿಜಯನಗರ ಕಾಲದ ಸುಪ್ರಸಿದ್ಧ ಅರಸ ಕೃಷ್ಣದೇವರಾಯನ ಕಾಲದಲ್ಲಿ ಹಿರಿಯ ಕೆಂಪೇಗೌಡರ ತಂದೆ ಕೆಂಪೇನಂಜೇಗೌಡರು ಅಮರನಾಯಕತವನ್ನು ಪಡೆದರು. ನಂತರ ಅಚ್ಯುತರಾಯನ ಕಾಲದಲ್ಲಿ ಕೆಂಪೇಗೌಡರು ನಾಯಕತನಕ್ಕಾಗಿ ೩೦ ಸಾವಿರ ವರಮಾನಗಳನ್ನು ಪಡೆದು ಮೊದಲ ವರ್ಗದ ಅಮರನಾಯಕರಾಗಿ ಬಡ್ತಿಯನ್ನು ಪಡೆದುಕೊಂಡರು. ಕೋಟೆಗಳನ್ನು, ಮದ್ದು ಗುಂಡುಗಳ ಶಸ್ತ್ರಾಗಾರಗಳನ್ನು, ಟಂಕಸಾಲೆಗಳನ್ನು ನಿರ್ಮಿಸಿಕೊಂಡು ಸಂಸ್ಥಾನವಾಗಿದ್ದ ಯಲಹಂಕನಾಡನ್ನು, ಯಲಹಂಕ ರಾಜ್ಯವಾಗಿ, ವಿಜಯನಗರದ ಅರಸರ ಪ್ರೋತ್ಸಾಹದಿಂದ ರೂಪಿಸಿಕೊಂಡರು.

೩. ಮೂಲತಃ ಉದ್ಯಮಶೀಲ ಕೃಷಿಕನಾಗಿದ್ದ ಹಿರಿಯ ಕೆಂಪೇಗೌಡನು ಬೆಂಗಳೂರನ್ನು ವ್ಯಾಪಾರ ವಾಣಿಜ್ಯ ಕೇಂದ್ರವಾಗಿ ರೂಪಿಸಲು ಅವಿರತವಾಗಿ ಶ್ರಮಿಸಿದನು. ವಿದೇಶಿ ವರ್ತಕರು ಮತ್ತು ಕುಶಲಕರ್ಮಿಗಳು, ದೇಶಿ ವ್ಯಾಪಾರಿಗಳು ಬೆಂಗಳೂರಿನಲ್ಲಿ ನೆಲೆಯೂರುವಂತೆ ಮಾಡಿದ ಹೆಗ್ಗಳಿಕೆ ಈತನದು. ವಿಜಯನಗರದ ರಾಜಧಾನಿ ಹಂಪಿಗೆ ತನ್ನ ತಂದೆಯ ಕಾಲದಿಂದಲೂ ಹಲವಾರು ಬಾರಿ ಭೇಟಿ ನೀಡಿದ್ದ ಹಿರಿಯ ಕೆಂಪೇಗೌಡನು ಹಂಪಿಯಂತೆ ಬೆಂಗಳೂರನ್ನು ವ್ಯಾಪಾರ ವಾಣಿಜ್ಯ ಕೇಂದ್ರವಾಗಿ ನಿರ್ಮಿಸಲು ಪ್ರೇರಣೆ ಪಡೆದು ತಾನು ನೂತನವಾಗಿ ನಿರ್ಮಿಸಿದ ನಗರಕ್ಕೆ ದೇವರಾಯಪುರವೆಂದು ನಾಮಕರಣ ಮಾಡಿದನು. ಆದರೆ ಈ ಹೆಸರು ರೂಢಿಗತವಾಗದೇ ಹಳೆಯ ಬೆಂಗಳೂರು ಎಂಬ ಹೆಸರೇ ಜನಪ್ರಿಯವಾಗಿ ಆಚರಣೆಗೆ ಬಂದಿತು. ಯಲಹಂಕ ನಾಡಪ್ರಭುಗಳ ಬಹುತೇಕ ಶಾಸನಗಳಲ್ಲಿ ಬೆಂಗಳೂರನ್ನು ದೇವರಾಯಪುರವೆಂದೇ ಉಲ್ಲೇಖಿಸಲಾಗಿದೆ. ಇದು ಸಾಮಂತನೊಬ್ಬನು ತನ್ನ ಸಾರ್ವಭೌಮರ ಬಗೆಗೆ ಹೊಂದಿದ್ದ ನಿಷ್ಠೆ ಪ್ರೀತಿ ಮತ್ತು ಭಕ್ತಿಯ ಸಂಕೇತವಾಗಿದೆ.

೪. ಯಲಹಂಕದ ನಾಡಪ್ರಭುಗಳು ವಿಜಯನಗರದ ಅರಸರ ಆಡಳಿತ ಪದ್ಧತಿಯನ್ನು ಅಳವಡಿಸಿಕೊಂಡಿದ್ದರು. ಸುಮಾರು ೧೫೦ ವರ್ಷಗಳ ಕಾಲ ವಿಜಯನಗರದ ನೇರ ಅಧೀನದಲ್ಲಿ ಆಡಳಿತ ನಡೆಸಿದ ಯಲಹಂಕ ನಾಡಪ್ರಭುಗಳು ವಿಜಯನಗರದಂತೆ ಊಳಿಗಮಾನ್ಯ ವ್ಯವಸ್ಥೆಯ ತಳಹದಿಯಲ್ಲಿ ಶ್ರೇಣೀಕೃತ ಆಡಳಿತ ವ್ಯವಸ್ಥೆಯನ್ನು ರೂಪಿಸಿಕೊಂಡರು. ನಾಡಪ್ರಭುಗಳ ನಂತರ ಮಂತ್ರಿಗಳು, ಸೇನಾಧಿಪತಿಗಳು, ಪ್ರಧಾನ ಗುರಿಕಾರರು, ಪ್ರಧಾನ ದಳಪತಿಗಳು, ಗುರಿಕಾರರು, ಉಪದಳಪತಿಗಳು, ಆಯಗಾರರು ಇವರ ಆಡಳಿತ ವ್ಯವಸ್ಥೆಯಲ್ಲಿ ಪ್ರಧಾನ ಪಾತ್ರವನ್ನು ಪೋಷಿಸುತ್ತಿದ್ದರು.

೫. ಯಲಹಂಕದ ನಾಡಪ್ರಭುಗಳು ವಿಜಯನಗರದ ಅರಸರಂತೆ ಭೂಮಿಯಲ್ಲಿ ಖಾಸಗಿ ಆಸ್ತಿಯ ಹಕ್ಕುಗಳನ್ನು ಮನ್ನಿಸಿದ್ದರು. ನಾಡಪ್ರಭುಗಳು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿನ ಭೂಮಿಯನ್ನು ಕೆಲವೊಮ್ಮೆ ಜಮೀನುಗಳು ಮತ್ತು ಹಳ್ಳಿಗಳನ್ನು ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ, ಬ್ರಾಹ್ಮಣರಿಗೆ, ಅಗ್ರಹಾರಗಳ ಸಂರಕ್ಷಣೆಗೆ ಕೆರೆ-ಕಾಲುವೆಗಳ ನಿರ್ಮಾಣಕ್ಕಾಗಿ ಹೆಚ್ಚು ಭೂಮಿಯನ್ನು

ದಾನ ಮಾಡುತ್ತಿದ್ದರು. ಇವರ ಕಾಲದಲ್ಲಿ ಹೆಚ್ಚಾದಂತಹ ಭೂದಾನಗಳು ಉಪ ಊಳಿಗವನ್ನು ಸೃಷ್ಟಿಸಿದವು.

೬. ನಾಡಪ್ರಭು ಹಿರಿಯ ಕೆಂಪೇಗೌಡನು ವಿಜಯನಗರದ ಅರಸರ ಅನುಮತಿ ಪಡೆಯದೇ ಭೈರವೇಶ್ವರ, ವೀರಭದ್ರ ಎಂಬ ನಾಣ್ಯಗಳನ್ನು ಟಂಕಿಸಿದ್ದ; ಹಾಗೂ ತನ್ನ ನಾಡಿನಲ್ಲಿ ಟಂಕಸಾಲೆಗಳನ್ನು ನಿರ್ಮಿಸಿದ್ದನು. ನಾಡಿನ ಸಂರಕ್ಷಣೆಗಾಗಿ ಮದ್ದು ಗುಂಡುಗಳ ತಯಾರಿಕಾ ಕೇಂದ್ರಗಳನ್ನು ಸ್ಥಾಪಿಸಿದ್ದು ರಕ್ಷಣೆಗಾಗಿ ಕೋಟೆಗಳನ್ನು ನಿರ್ಮಿಸಿದ್ದು ಸಾರ್ವಭೌಮರಾದ ವಿಜಯನಗರದ ಅರಸ ರಾಯರಾಯನ ಕೆಂಗಣ್ಣಿಗೆ ಗುರಿಯಾಯಿತು. ತಮ್ಮ ಅಧೀನದಲ್ಲಿದ್ದ ಸಾಮಂತನೊಬ್ಬನು ರಾಜಕೀಯವಾಗಿ ಶಕ್ತಿ ಸಾಮರ್ಥ್ಯಗಳನ್ನು ವೃದ್ಧಿಸಿಕೊಳ್ಳುವುದು ವಿಜಯನಗರದ ಅರಸರಿಗೆ ಬೇಡವಾಗಿತ್ತು. ಹಾಗೂ ಹಿರಿಯ ಕೆಂಪೇಗೌಡನು ಸಾರ್ವಭೌಮನಾದ ರಾಮರಾಯನ ಪರಮಾಧಿಕಾರವನ್ನು ಉಲ್ಲಂಘಿಸಿದ್ದರಿಂದ ರಾಮರಾಯನು ಕೆಂಪೇಗೌಡನನ್ನು ಕ್ರಿ.ಶ. ೧೫೬೦ರಲ್ಲಿ ಬಂಧಿಸಿ ಆನೆಗೊಂದಿಯ ಸೆರೆಮನೆಯಲ್ಲಿ ಇಟ್ಟನು. ವಿಜಯನಗರದ ಸಾರ್ವಭೌಮಾಧಿಕಾರವನ್ನು ಧಿಕ್ಕರಿಸಿದ ಸಾಮಂತನಿಗೆ ನೀಡಿದಂತಹ ಶಿಕ್ಷೆ ಇದಾಗಿತ್ತು. ಆದರೆ ಸೆರೆಮನೆಯಲ್ಲಿದ್ದ ಹಿರಿಯ ಕೆಂಪೇಗೌಡನ ಸದ್ವರ್ತನೆ, ಸನ್ನಡತೆಯನ್ನು ಗುರುತಿಸಿದ ರಾಮರಾಯನು ಕ್ರಿ.ಶ. ೧೫೬೫ರಲ್ಲಿ ಬಿಡುಗಡೆಗೊಳಿಸಿ ಪುನಃ ಯಲಹಂಕ ನಾಡಪ್ರಭುವಾಗಿ ನಿಯುಕ್ತಿಗೊಳಿಸಿದನು. ಈ ಪ್ರಕರಣದಲ್ಲಿ ಸಾರ್ವಭೌಮ ಮತ್ತು ಸಾಮಂತನ ನಡುವಿನ ಸೂಕ್ಷ್ಮವಾದ ರಾಜಕೀಯ ಸಂಬಂಧಗಳ ನೆಲೆಯನ್ನು ಗುರುತಿಸಬಹುದು.

೭. ಯಲಹಂಕ ನಾಡಿನ ನೂತನ ರಾಜಧಾನಿಯಾಗಿ ಬೆಂಗಳೂರು ನಗರದ ನಿರ್ಮಾಣವು ಕ್ರಿ.ಶ. ೧೫೩೭ರಲ್ಲಿ ಆಯಿತು. ಈ ನಗರದ ನಿರ್ಮಾಣಕ್ಕೆ ಕೆಂಪೇಗೌಡನಷ್ಟೇ ವಿಜಯನಗರದ ಅರಸ ಅಚ್ಯುತರಾಯನು ಪರೋಕ್ಷವಾಗಿ ಕಾರಣಕರ್ತನಾಗಿದ್ದನು.[೫] ಕಾರಣ ಅಚ್ಯುತರಾಯನ ಅನುಮತಿಯನ್ನು ಪಡೆದುಕೊಂಡೇ ಕೆಂಪೇಗೌಡನು ಬೆಂಗಳೂರು ನಗರ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಿದನು.

೮. ಹಿರಿಯ ಕೆಂಪೇಗೌಡನ ಪುತ್ರನಾದ ಇಮ್ಮಡಿ ಕೆಂಪೇಗೌಡನು ತನ್ನ ಸಾರ್ವಭೌಮನಾದ ಅರವೀಡು ಮನೆತನದ ಪೆನುಗೊಂಡೆಯ ರಾಜ ವೆಂಕಟಪತಿರಾಯನ ಅಧೀನನಾಗಿದ್ದನು. ಈ ಸಮಯದಲ್ಲಿ ವಿಜಯನಗರವು ಅತ್ಯಂತ ಸಂದಿಗ್ಧ ಸ್ಥಿತಿಯಲ್ಲಿದ್ದು ವೆಂಕಟಪತಿರಾಯನ ಅಧಿಕಾರದ ವಿರುದ್ಧ ಪಾಳೆಯಗಾರರು ದಂಗೆ ಎದ್ದಾಗ ಇದನ್ನು ಅಡಗಿಸುವಲ್ಲಿ ಇಮ್ಮಡಿ ಕೆಂಪೇಗೌಡನು ಪ್ರಮುಖ ಪಾತ್ರವನ್ನು ವಹಿಸಿದನು. ಇದರಿಂದ ಮೈಸೂರು ಒಡೆಯರ ವಿರೋಧವನ್ನು ಕಟ್ಟಿಕೊಳ್ಳಬೇಕಾಯಿತು. ಪರಸ್ಪರ ರಕ್ಷಣೆ, ಊಳಿಗಮಾನ್ಯ ರಾಜಕೀಯ ವ್ಯವಸ್ಥೆಯ ಅಡಿಗಲ್ಲಾಗಿದ್ದು ಇಲ್ಲಿ ಸಾಮಂತನೊಬ್ಬ ತನ್ನ ಸಾರ್ವಭೌಮನನ್ನು ಶತ್ರುಗಳಿಂದ ಪಾರುಮಾಡಿದ್ದು ಆ ಕಾಲದ ವಿಷಮ ರಾಜಕೀಯ ಪರಿಸ್ಥಿತಿಗಳನ್ನು ಅರ್ಥೈಸಿಕೊಳ್ಳುವಲ್ಲಿ ನೆರವಾಗುತ್ತದೆ.

೯. ಇಮ್ಮಡಿ ಕೆಂಪೇಗೌಡನ ಪುತ್ರನಾದ ಮುಮ್ಮಡಿ ಕೆಂಪೇಗೌಡನು ವಿಜಯನಗರದ ಸಾಮಂತನಾಗಿಯೇ ಮುಂದುವರಿದನು. ಈತ ಚಂದ್ರಗಿರಿಯಲ್ಲಿ ಆಳುತ್ತಿದ್ದ ಮೂರನೇ ವೆಂಕಟನ ಕಾಲದಲ್ಲಿ ಎದ್ದ ದಂಗೆಯನ್ನು ಅಡಗಿಸುವಲ್ಲಿ ಯಶಸ್ವಿಯಾದನು. ಹಾಗೂ ತನ್ನ ಸಾರ್ವಭೌಮರನ್ನು ಪಾಳೆಯಗಾರರಿಂದ ಸಂರಕ್ಷಿಸಿದನು. ಹೀಗೆ ವಿಜಯನಗರವು ತನ್ನ ಆಡಳಿತದ ಕೊನೆಯವರೆಗೂ ನಾಡಪ್ರಭುಗಳ ಜೊತೆ ರಾಜಕೀಯವಾಗಿ ಸೌಹಾರ್ದಯುತವಾದ ಸಂಬಂಧಗಳನ್ನು ಹೊಂದಿತ್ತು. ವಿಜಯನಗರೋತ್ತರ ಕಾಲದಲ್ಲಿ ಬದಲಾದ ರಾಜಕೀಯ ಸನ್ನಿವೇಶಗಳಿಗೆ ನಾಡಪ್ರಭುಗಳು ತಲೆಬಾಗಲೇ ಇಲ್ಲ. ಹಾಗೂ ವಿಜಯನಗರದವರ ಅಧೀನತೆಯಿಂದ ಹೊರಬಂದ ಸ್ವತಂತ್ರರೆಂದು ಘೋಷಿಸಿಕೊಳ್ಳಲಿಲ್ಲ. ದ್ವೇಷ ಅಸೂಯೆಭರಿತ ರಾಜಕೀಯವು ನಾಡಪ್ರಭುಗಳ ಇತಿಹಾಸದಲ್ಲಿ ಕಂಡು ಬರುವುದೇ ಇಲ್ಲ. ಬದಲಾಗಿ ಅವರ ನಿಷ್ಠೆ, ಪ್ರಾಮಾಣಿಕತೆ, ಶುದ್ಧ ರಾಜಕಾರಣಗಳು ವಿಜಯನಗರದ ಪತನದವರೆಗೂ ಮುಂದುವರಿದುಕೊಂಡು ಬಂದಿರುವುದನ್ನು ಗುರುತಿಸಬಹುದು.

೧೦. ಬೆಂಗಳೂರು ನಗರವು ಭೌಗೋಳಿಕವಾಗಿ ಆಯಕಟ್ಟಿನ ಪ್ರದೇಶದಲ್ಲಿದ್ದುದರಿಂದ ನಾಡಪ್ರಭುಗಳು ಸಂಪತ್ತನ್ನು ವೃದ್ಧಿಸಿಕೊಳ್ಳುವಲ್ಲಿ ಸಾಧ್ಯವಾಯಿತು. ಮೂಲತಃ ಉದ್ಯಮಶೀಲರಾದ ನಾಡಪ್ರಭುಗಳು ವ್ಯಾಪಾರ ವಾಣಿಜ್ಯಾಭಿವೃದ್ಧಿಯಲ್ಲಿ ಅಪಾರ ಅಸಕ್ತಿಯನ್ನು ಹೊಂದಿದಂತೆ ಕೃಷಿ ಚಟುವಟಿಕೆಗಳಿಗೆ ಹೆಚ್ಚು ಪ್ರೋತ್ಸಾಹವನ್ನು ನೀಡಿದರು. ಇವರ ಕಾಲದಲ್ಲಿ ನಿರ್ಮಾಣವಾದ ಕೆರೆ-ಕಾಲುವೆಗಳೇ ಇದಕ್ಕೆ ಸಮರ್ಥನೆಯನ್ನು ನೀಡುತ್ತವೆ. ಹೀಗೆ ಕೃಷಿ ವಾಣಿಜ್ಯ ವ್ಯಾಪಾರ ಕ್ಷೇತ್ರದಲ್ಲುಂಟಾದ ಪ್ರಗತಿ ಹಾಗೂ ಇವುಗಳ ರಕ್ಷಕರಾಗಿ ನಾಡಪ್ರಭುಗಳು ನೆಲೆಯಾಗಿ ನಿಂತಿದ್ದು ಬೆಂಗಳೂರು ದಕ್ಷಿಣ ಭಾರತದಲ್ಲಿಯೇ ವಾಣಿಜ್ಯ ಕೇಂದ್ರವಾಗಿ ರೂಪುಗೊಂಡಿತು. ಆ ಮೂಲಕ ವಿಜಯನಗರದ ಸಂಪತ್ತಾಭಿವೃದ್ಧಿಗೂ ಕಾರಣವಾಯಿತು.

೧೧. ಯಲಹಂಕ ನಾಡಪ್ರಭುಗಳು ಸ್ವಧರ್ಮ ರಕ್ಷಣೆ ಶಾಂತಿ-ಅಭಿವೃದ್ಧಿಗಳ ಪಾಲನೆ, ಸಾಹಿತ್ಯ, ಕಲೆ, ಕೈಗಾರಿಕೆಗಳ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಅವಿರತವಾಗಿ ಶ್ರಮಿಸಿದರು. ಸರ್ಪಭೂಷಣ ಮಠ, ಕಲ್ಯಾಣ ಒಡೆಯರ ಮಠ, ಕಲಾಸಿಪಾಳ್ಯದ ಬಂಗಿದೇವರ ಮಠ ಮುಂತಾದ ಮಠಗಳನ್ನು ನಿರ್ಮಿಸಿ ಅಪಾರ ಪ್ರಮಾಣದ ಭೂದತ್ತಿಗಳನ್ನು ನೀಡಿದರು.

೧೨. ಯಲಹಂಕ ನಾಡಪ್ರಭುಗಳ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳು, ಅನ್ನಛತ್ರಗಳು, ಮಠ-ಮಾನ್ಯಗಳು, ಅಗ್ರಹಾರಗಳು, ಕೆರೆ ಕಾಲುವೆಗಳು ಮುಂತಾದ ಸಾರ್ವಜನಿಕ ಉಪಯೋಗ ಕಾರ್ಯಕ್ರಮಗಳು ಧಾರ್ಮಿಕ ತಳಹದಿಯ ಮೇಲೆ ನಿಂತಿದ್ದು ವಿಜಯನಗರದವರ ಧಾರ್ಮಿಕ ಪರಂಪರೆಯನ್ನು ನಾಡಪ್ರಭುಗಳು ಮುಂದುವರಿಸಿದರು.

೪.೩ ಗುಮ್ಮನಾಯಕನ ಪಾಳೆಯದ ಪಾಳೆಯಗಾರರು

ಗುಮ್ಮನಾಯಕನ ಪಾಳೆಯವು ವಿಜಯನಗರಕ್ಕಿಂತ ಪೂರ್ವದಲ್ಲಿಯೇ ಸ್ಥಾಪನೆಗೊಂಡ ಪಾಳೆಯಪಟ್ಟು, ವಿಜಯನಗರ ಸಾಮ್ರಾಜ್ಯದ ಬಲಿಷ್ಠತೆಗೆ ಮತ್ತು ಉಳಿವಿಕೆಗೆ ಕಾರಣವಾಗಿದ್ದ

ಅಮರನಾಯಕ ಪದ್ಧತಿಯು ವಿಜಯನಗರಕ್ಕಿಂತ ಪೂರ್ವದಲ್ಲಿಯೇ ಅಂದರೆ ಸರಿ ಸುಮಾರು ನೂರಾರು ವರ್ಷಗಳಿಂದಲೇ ಅಸ್ತಿತ್ವದಲ್ಲಿತ್ತು ಎಂಬುದು ಗುಮ್ಮನಾಯಕ ಪಾಳೆಯಗಾರರ ಇತಿಹಾಸದಿಂದ ಸ್ಪಷ್ಟವಾಗುತ್ತದೆ. ಗುಮ್ಮನಾಯಕ ಪಾಳೆಯವನ್ನು ರಾಜಧಾನಿಯಾಗಿಸಿಕೊಂಡು ಸುಮಾರು ೫೬೦ ವರ್ಷಗಳ ಕಾಲ ಸುಧೀರ್ಘವಾಗಿ ಆಡಳಿತ ನಡೆಸಿದ ಈ ಪಾಳೆಯಗಾರರ ಇತಿಹಾಸವು ಭವ್ಯ ಮತ್ತು ರೋಚಕವಾಗಿದೆ. ದಕ್ಷಿಣ ಭಾರತದ ಇತಿಹಾಸದ ಪುಟಗಳಲ್ಲಿ ಬಹುದೊಡ್ಡ ಸ್ಥಾನವನ್ನು ಗಳಿಸಿರುವ "ವಿಜಯನಗರ ಸಾಮ್ರಾಜ್ಯದ ಯಶಸ್ಸಿನ ಮೆಟ್ಟಿಲುಗಳಲ್ಲಿ ಗುಮ್ಮನಾಯಕನ ಪಾಳೆಯವು ಪ್ರಮುಖ ಮೆಟ್ಟಿಲಾಗಿತ್ತು." ವಿಜಯನಗರ ಸಾಮ್ರಾಜ್ಯದ ಮೊದಲನೇ ವರ್ಗದ ಅಮರನಾಯಕರೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದರು. ಕ್ರಿ.ಶ. ೧೨೪೩ರಿಂದ ೧೮೦೩ರವರೆಗೆ ಆಡಳಿತವನ್ನು ನಡೆಸಿದ ಗುಮ್ಮನಾಯಕನ ಪಾಳೆಯದ ಪಾಳೆಯಗಾರರು ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದ ನಂತರ ದಿನಗಳಲ್ಲಿ ಸಂಪೂರ್ಣ ಅವನತಿಯತ್ತ ಸಾಗಿ ಇತಿಹಾಸದ ಪುಟಗಳಿಂದ ಕಣ್ಮರೆಯಾದರು. ಆದರೂ ಈ ಪಾಳೆಯಗಾರರ ಜನಪರ ಕಲ್ಯಾಣ ಕಾರ್ಯಗಳಿಗಾಗಿ ನಿರ್ಮಿಸಿದ ನೂರಾರು ಕೆರೆ ಕಾಲುವೆಗಳು, ದೇವಾಲಯಗಳು ಭಗ್ನವಾಗಿರುವ ಕೋಟೆಗಳು, ಸ್ಮಾರಕಗಳು ಮೂಕಸಾಕ್ಷಿಯಾಗಿದ್ದು ಇತಿಹಾಸಕಾರರ ಗಮನ ಸೆಳೆಯುತ್ತವೆ.

ಗುಮ್ಮನಾಯಕನ ಪಾಳೆಯ ಹೆಸರಿನ ಹಿನ್ನೆಲೆ

ಗುಮ್ಮನಾಯಕನ ಪಾಳೆಯಗಾರರ ಮೂಲ ಸಂಸ್ಥಾಪಕರಾದ ಖಾದ್ರಿಪತಿನಾಯಕ ಮತ್ತು ನರಸಿಂಹನಾಯಕರು ಪಾತಪಾಳ್ಯದ ಬಳಿ ಇರುವ ಕಾಂಸಾನಪಲ್ಲಿ ಗುಮ್ಮರೆಡ್ಡಿ ಮತ್ತು ಲಕ್ಕರೆಡ್ಡಿ ಎಂಬುವವರ ಮನೆಯಲ್ಲಿ ಕೆಲವು ದಿನಗಳ ಕಾಲ ಆಶ್ರಯ ಪಡೆದಿದ್ದು, ಅವರ ಜ್ಞಾಪಕಾರ್ಥವಾಗಿ ತಾವು ಸ್ಥಾಪಿಸಿದ ಕೋಟೆಗೆ ಗುಮ್ಮನಾಯಕನ ಪಾಳೆಯವೆಂದೂ ನಾಮಕರಣ ಮಾಡಿದರು. ಈ ವಂಶದ ಎರಡನೆಯ ನಾಯಕನಾದ ಚೆನ್ನಮನಾಯಕ ಈ ಕೋಟೆಗೆ ಕಲ್ಯಾಣ ನಗರವೆಂದೂ ಮರುನಾಮಕರಣ ಮಾಡಿದರೂ ಈ ಗಿರಿದುರ್ಗವು ಇಂದಿಗೂ ಗುಮ್ಮನಾಯಕನ ಪಾಳೆಯವೆಂದೇ ಖ್ಯಾತಿಯಾಗಿದೆ.

ಗುಮ್ಮನಾಯಕನ ಪಾಳೆಯಗಾರರ ಮೂಲ

ಗುಮ್ಮನಾಯಕನ ಪಾಳೆಯಗಾರರು ಮೂಲತಃ ಆಂಧ್ರಪ್ರದೇಶದ ಶ್ರೀಶೈಲಂ ಪ್ರಾಂತ್ಯದವರು. ಈ ವಂಶದ ಸಂಸ್ಥಾಪಕನಾದ ಖಾದ್ರಿಪತಿನಾಯಕನು ಶ್ರೀ ಶೈಲಂನಿಂದ ಮದನಪಲ್ಲಿ ಪೆದ್ದಪಾಳ್ಯಂ ಮೂಲಕ ಚಿಂತಾಮಣಿ ತಾಲ್ಲೂಕಿನ ಎಗವಕೋಟೆಗೆ ಬಂದು ನೆಲೆನಿಂತರು. ಕಾಲಾನಂತರದಲ್ಲಿ ಖಾದ್ರಿಪತಿನಾಯಕನು ಕ್ರಿ.ಶ. ೧೨೪೩ರಲ್ಲಿ ಬಾಗೇಪಲ್ಲಿ ತಾಲ್ಲೂಕಿನ ಪಾತಪಾಳ್ಯಕ್ಕೆ ಬಂದು ಅಲ್ಲಿನ ಶ್ರೀಮಂತ ಕೃಷಿಕರಾದ ಗುಮ್ಮರೆಡ್ಡಿ ಮತ್ತು ಲಕ್ಕರೆಡ್ಡಿ ಎಂಬ ಸಹೋದರ ಸಹಕಾರದಿಂದ ಪಾಳೆಯಪಟ್ಟನ್ನು ಸ್ಥಾಪಿಸಿದನು. ಗುಮ್ಮನಾಯಕನ ಪಾಳೆಯಗಾರರು ಬೇಡ ಜನಾಂಗದ ಪಾಲವೇಕರಿ ಚುಂಚು ಮನೆತನಕ್ಕೆ ಸೇರಿದವರು. ಇವರ ಮನೆಮಾತು ತೆಲುಗು. ಕರ್ನೂಲ್ ಜಿಲ್ಲೆಯ ನಂದ್ಯಾಲ ತಾಲ್ಲೂಕಿನ

ಆಹೋಬಲನಾರಸಿಂಹ ದೇವರನ್ನು ಈ ಜನಾಂಗ ತಮ್ಮ ಅಳಿಯನೆಂದು ಭಾವಿಸಿ ಆರಾಧಿಸುತ್ತಿದ್ದರು. ಈ ಕುರಿತಂತೆ ತೆಲುಗು ಭಾಷೆಯಲ್ಲಿ "ಚೆಂಚು ಲಕ್ಷ್ಮಿ" ಎಂಬ ಚಲನಚಿತ್ರವೂ ನಿರ್ಮಾಣವಾಗಿದೆ.

ಹೀಗೆ ಖಾದ್ರಿಪತಿನಾಯಕನಿಂದ ಆರಂಭಗೊಂಡ ಗುಮ್ಮನಾಯಕನ ಪಾಳೆಯಗಾರರ ಆಡಳಿತವು ಕೊನೆಯ ದೊರೆಯ ಆರ್ಮುಡಿ ನಾರಸಿಂಹನಾಯಕನ ಕಾಲಕ್ಕೆ ಅಂತ್ಯಗೊಂಡಿತು. ಒಟ್ಟು ೨೫ ನಾಯಕರುಗಳು ೫೬೦ ವರ್ಷಗಳ ರಾಜ್ಯಭಾರ ಮಾಡಿ ಕರ್ನಾಟಕ ಪಾಳೆಯಗಾರ ಇತಿಹಾಸದಲ್ಲಿ ತಮ್ಮದೇ ಆದ ಹೆಗ್ಗುರುತನ್ನು ಶಾಶ್ವತವಾಗಿ ಮೂಡಿಸಿದ್ದಾರೆ.

* ಆಧಾರಗಳು

ಗುಮ್ಮನಾಯಕನ ಪಾಳೆಯಗಾರರ ಇತಿಹಾಸವನ್ನು ರಚಿಸಲು ಇರುವ ಪ್ರಮುಖ ಆಧಾರಗಳೆಂದರೆ ಎಪಿಗ್ರಾಫಿಯ ಶಾಸನ ಸಂಪುಟಗಳು, ಆಂಧ್ರಪ್ರದೇಶದ ಕನ್ನಡ ಶಾಸನಗಳು, ಶ್ರೀ ಮತ್ತುಪಲ್ಲ ಕವಿಯ ಶ್ರೀಶೈಲ ಪಂಡಿತಾರಾಧ್ಯ ಚಿರತ್ರಮು, ಡಾ. ವೆಂಕಟರಾಮಣ್ಣನವರ ವಿಜಯನಗರ ಇತಿಹಾಸಕ್ಕೆ ಕೋಲಾರ ಜಿಲ್ಲೆಯ ಕೊಡುಗೆ, ಎಂ.ಜಿ. ನಾಗರಾಜರವರ ನಾಯಕರ ಆಡಳಿತವೆಂಬ ಸಂಶೋಧನಾ ಲೇಖನಗಳು ಪ್ರಮುಖ ಆಧಾರಗಳಾಗಿವೆ. ಜೊತೆಗೆ ಗುಮ್ಮನಾಯಕನ ಪಾಳೆಯಗಾರರ ವಂಶಸ್ಥರಾದ ಶ್ರೀ ನಗರ್ಲೆ ರಾಜಣ್ಣನಾಯಕ ದೊರೆಗ್ರಾರರು ಬಳಿ ಇರುವ ದಾಖಲೆಗಳು ಕೂಡ ಗುಮ್ಮನಾಯಕನ ಪಾಳೆಯಗಾರರ ಇತಿಹಾಸ ರಚನೆಗೆ ಪ್ರಮುಖವಾದ ಮಾಹಿತಿಯನ್ನು ನೀಡುವಲ್ಲಿ ಸಹಾಯಕವಾಗುತ್ತದೆ.

ಇದಲ್ಲದೆ ಸ್ಥಳೀಯ ಜನತೆಯು ಸಹಾ ತಮ್ಮ ಪಾಳೆಯಗಾರರ ಕುರಿತು ಕೇಳುವ ಕಥೆಗಳು ಬಹು ರಂಜನೀಯ ಹಾಗೂ ಸ್ವಾರಸ್ಯಕರವೂ ಆಗಿದೆ. ಈ ಮೇಲಿನ ಎಲ್ಲ ಮಾಹಿತಿಗಳನ್ನು ವಿಶ್ಲೇಷಿಸಿ ಗುಮ್ಮನಾಯಕನ ಪಾಳೆಯಗಾರರ ರಾಜಕೀಯ ಇತಿಹಾಸ ಮತ್ತು ವಿಜಯನಗರದೊಂದಿಗಿನ ಅವರ ಸಂಬಂಧವನ್ನು ಕುರಿತು ಈ ಕೆಳಗಿನಂತೆ ವಿಶ್ಲೇಷಿಸಬಹುದು.

ಗುಮ್ಮನಾಯಕನ ಪಾಳೆಯಪಟ್ಟಿನ ವ್ಯಾಪ್ತಿ

ಕ್ರಿ.ಶ. ೧೨೪೩ರಿಂದ ೧೮೦೩ರವರೆಗೆ ಗುಮ್ಮನಾಯಕನ ಪಾಳೆಯವನ್ನು ಕೇಂದ್ರವಾಗಿಟ್ಟುಕೊಂಡು ಆಡಳಿತ ನಡೆಸಿದ ಈ ಪಾಳೆಯಗಾರ ಆಡಳಿತ ವ್ಯಾಪ್ತಿಯು ಕೋಲಾರದ ಪೂರ್ವ ಭಾಗದಿಂದ ಹಿಡಿದು ಬಾಗೇಪಲ್ಲಿ ಉತ್ತರದ ಬಹುಭಾಗವನ್ನು ಒಳಗೊಂಡಿತ್ತು. ಇಂದಿನ ಆಂಧ್ರಪ್ರದೇಶಕ್ಕೆ ಸೇರಿರುವ ಕೂಡಿಕೊಂಡ ಗೋರಂಟ್ಲ, ಕಂದಕೂರು ಪ್ರದೇಶಗಳು ಗುಮ್ಮನಾಯಕನ ಪಾಳೆಯಗಾರರಿಗೆ ಸೇರಿದ್ದವು.

ರಾಜಕೀಯ ಇತಿಹಾಸ

೧. ಖಾದ್ರಿಪತಿನಾಯಕ (ಕ್ರಿ.ಶ. ೧೨೪೩-೧೨೭೨)

ಗುಮ್ಮನಾಯಕನ ಪಾಳೆಯದ ಸಂಸ್ಥಾಪಕನಾದ ಖಾದ್ರಿಪತಿನಾಯಕ ಮತ್ತು ಆತನ ಸಹೋದರನಾದ ನರಸಿಂಗನಾಯಕರು ಕ್ರಿ.ಶ. ೧೨೪೩ರಲ್ಲಿ ದೊಡ್ಡಪಾಳ್ಯದಿಂದ ತಮ್ಮ ಕೆಲವು ಅನುಯಾಯಿಗಳೊಂದಿಗೆ

ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಯಗವಕೋಟೆಗೆ ಬಂದು ನೆಲೆಸಿದ್ದರು. ರಾಜಮನೆತನವೊಂದರಲ್ಲಿ ಜನ್ಮತಾಳಿದ್ದ ಈ ಸಹೋದರರಿಗೆ ತಮ್ಮದೇ ಆದ ಸ್ವತಂತ್ರ ಪಾಳೆಯಪಟ್ಟಿನ ನಿರ್ಮಾಣದ ಕನಸಿತ್ತು. ಪಾಳೆಯ ಪಟ್ಟಿನ ಸ್ಥಾಪನೆಯ ಕನಸನ್ನು ನನಸಾಗಿಸಿಕೊಳ್ಳಲು ಇವರಿಗೆ ಪಾತಪಾಳ್ಯದ ಗುಮ್ಮರೆಡ್ಡಿ ಮತ್ತು ಲಕ್ಕರೆಡ್ಡಿ ಎಂಬ ಶ್ರೀಮಂತರ ನೆರವು ದೊರೆತಿದ್ದರಿಂದ ಆರ್ಥಿಕವಾಗಿ ಪ್ರಬಲಗೊಂಡು ಈ ನಾಯಕರು ಸ್ವತಂತ್ರವಾದ ಪಾಳೆಯಪಟ್ಟನ್ನು ಸ್ಥಾಪಿಸಿದರು. ಖಾದ್ರಿಪತಿನಾಯಕನು ತಮಗೆ ಆಶ್ರಯ ನೀಡಿದ ಗುಮ್ಮರೆಡ್ಡಿ ಕೊಟ್ಟ ನಾಲ್ಕು ಬಿಂದಿಗೆ ತುಂಬಿದ ವರಹಗಳ ಸಹಾಯದಿಂದ ಸುತ್ತಮುತ್ತಲಿನ ಅರಣ್ಯವನ್ನು ಕಡಿಸಿ, ಕ್ರೂರ ಮೃಗಗಳನ್ನು ಬೇಟೆಯಾಡಿದ. ಜನರ ಪ್ರೀತಿ ವಿಶ್ವಾಸ ಗಳಿಸಿದ. ಹಳೆಯ ಕೆರೆಗಳನ್ನು ದುರಸ್ಥಿ ಮಾಡಿಸಿ ಸಾಗುವಳಿಗೆ ಅನುಕೂಲ ಮಾಡಿಸಿದ. ಪಾತಪಾಳ್ಯದ ಬಳಿಯ ಶಿಥಿಲವಾಗಿದ್ದ ಶಿವಾಲಯವನ್ನು ಜೀರ್ಣೋದ್ಧಾರ ಮಾಡಿಸಿ, ಶಿವಲಿಂಗವನ್ನು ಪುನರ್ ಪ್ರತಿಷ್ಠಾಪಿಸಿದನು. ದೇವರಾಜಪಲ್ಲಿ, ಬಾಲಿರೆಡ್ಡಿಪಲ್ಲಿ, ಪೆನುಮಲೆ ಮುಂತಾದ ಗ್ರಾಮಗಳನ್ನು ಕಟ್ಟಿ ಜನರ ವಸತಿಗೆ ಅನುಕೂಲ ಮಾಡಿಕೊಟ್ಟನು. ಕ್ಷಾಮ, ಬರಗಾಲದಿಂದ ನರಳುತ್ತಿದ್ದ ಜನತೆಗೆ ನೀರಾವರಿ ಸೌಲಭ್ಯ ಒದಗಿಸಿ ಜನರ ಪ್ರೀತಿಗೆ ಪಾತ್ರನಾದನು. ಹೀಗೆ ಜನಪದ ಆಡಳಿತವನ್ನು ನೀಡಿ ೨೯ ವರ್ಷಗಳು ರಾಜ್ಯಭಾರ ಮಾಡಿದ. ಖಾದ್ರಿಪತಿನಾಯಕನು ಕ್ರಿ.ಶ. ೧೨೭೨ರಲ್ಲಿ ಮರಣ ಹೊಂದಿದನು. ಇವರ ಮರಣದ ನಂತರ ಇವನ ಮಗನಾದ ಚಿನ್ನಮನಾಯಕ ಅಧಿಕಾರಕ್ಕೆ ಬಂದನು.

ಚಿನ್ನಮನಾಯಕ (ಕ್ರಿ.ಶ. ೧೨೭೨-೧೨೯೩)

ಗುಮ್ಮನಾಯಕನ ಪಾಳೆಯದ ಆರಂಭಿಕ ಪಾಳೆಯಗಾರರಲ್ಲಿ ಹೆಚ್ಚು ಖ್ಯಾತಿಯನ್ನು ಪಡೆದವನೇ ಚಿನ್ನಮನಾಯಕ. ಇನ್ನು ಶೈಶವಾವಸ್ಥೆಯಲ್ಲಿದ್ದ ಗುಮ್ಮನಾಯಕನ ಪಾಳೆಯವು ಚಿನ್ನಮನಾಯಕನ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದಿತು. ಚಿನ್ನಮನಾಯಕನಿಗೆ ಬೆಟ್ಟದ ಬಳಿ ಗುಪ್ತ ನಿಧಿಯೊಂದು ಸಿಕ್ಕಿತು. ಈ ನಿಧಿಯಿಂದಾಗಿ ಚಿನ್ನಮನಾಯಕ ಆರ್ಥಿಕವಾಗಿ ಬಲಾಢ್ಯನಾದನು. ಚಿನ್ನಮನಾಯಕನು ಕೋಟೆ ಕೊತ್ತಲಗಳನ್ನು ನಿರ್ಮಿಸಿದನು. ಉತ್ತಮ ಆಡಳಿತಗಾರನಾಗಿದ್ದ ಚಿನ್ನಮನಾಯಕನು ಗುಮ್ಮನಾಯಕನ ಪಾಳೆಯವನ್ನು ಅಭಿವೃದ್ಧಿಪಡಿಸಲು ಎಲ್ಲ ಕಸುಬುಗಳ ಜನರನ್ನು ವ್ಯಾಪಾರ ಹಾಗೂ ಕುಶಲ ಕೆಲಸಗಾರರನ್ನು ಪಾಳ್ಯಕ್ಕೆ ಆಹ್ವಾನಿಸಿ, ಅವರವರ ವೃತ್ತಿಗಳನ್ನು ನಡೆಸಿಕೊಂಡು ಹೋಗಲು ಅನುಕೂಲ ಮಾಡಿಕೊಟ್ಟನು. ಪ್ರಜೆಗಳ ಪ್ರೀತಿಗೆ ಪಾತ್ರನಾಗಿ ದೊರೆ ಎನಿಸಿದ ಕಾರಣ ಮಹಾನಾಯಕನಾದ. ಪ್ರಜೆಗಳ ಜಾತಿವಾರು ಆಚರಣೆ ಗೊತ್ತು ಮಾಡಿದ್ದರಿಂದ ಆಚಾರ್ಯನೆನಿಸಿದ. ಉಭಯ ಬಿರುದುಗಳು ಸಂಯುಕ್ತವಾಗಿ 'ಮಹಾನಾಯಕಾಚಾರ್ಯ' ಎಂಬ ಬಿರುದನ್ನು ತಳೆದ. ತಮ್ಮ ವೇಕರಿ ಎಂಬ ಮನೆತನದ ಸಂತತಿಯನ್ನು ಉದ್ಧಾರ ಮಾಡಿದ ಗುಮ್ಮರೆಡ್ಡಿ ಮತ್ತು ಲಕ್ಕರೆಡ್ಡಿ ಅವರ ಸ್ಮರಣೆಗಾಗಿ ಗುಮ್ಮಯ್ಯಲಕ್ಕ ಎಂಬ ಬಿರುದನ್ನು ಧರಿಸಿದ. ಮೊಟ್ಟಮೊದಲ ಬಾರಿಗೆ ರಾಜ್ಯಭಾರ ಕ್ರಮವನ್ನು ವ್ಯವಸ್ಥೆಗೊಳಿಸಿದ. ಈತನ ಬಗ್ಗೆ ತೆಲುಗು ಸೀಸಪದ್ಯವೊಂದು ಹೀಗಿದೆ:

"ಪರಡೆಬ್ಬದಿಯೇನು ಪಾಳ್ಯಲ ಲೋಪಲ/ಪೆದ್ದಯ್ಯ ಚಿನ್ನೊಂದೆಪೇರ್ಮಿ ಪುಡಮಿ ವೇಕರಿ ವಂಶಾಬ್ಧಿ ಚಂದ್ರಡಗುಚು ಪೇರ್ಮಿ ಮರಸಿ/ನಿಲಿಚೆ ಬೋ ಪೆದ್ದ ಪಾಳೆನ ನೆರ್ಪುಮೆರೆಯ... ಚಿನ್ನಯಗುಮ್ಮ ಭೂಪ.

ಅಂದರೆ ೭೭ ಪಾಳೆಯಗಾರರಲ್ಲಿ ಪ್ರಮುಖನೆನಿಸಿಕೊಂಡ 'ವೇಕರಿ' ಎಂಬ ವಂಶಸಾಗರಕ್ಕೆ ಚಂದ್ರನ ಹಾಗೆ ಅಭಿವೃದ್ಧಿಕರನಾಗಿದ್ದಾನೆ, ಬಂಧುವಾಗಿದ್ದಾನೆ. ಭೃತ್ಯಪೋಷಕನೆನಸಿದ್ದಾನೆ. ಪಾಳೆಯಗಾರರಲ್ಲಿ ಈ ಚಿನ್ನಮಗುಮ್ಮರಾಜ ದೊಡ್ಡವೆನಿಸಿಕೊಂಡಿದ್ದಾನೆ."[39]

ಚಿನ್ನಮನಾಯಕನು ತನ್ನ ರಾಜಧಾನಿಗೆ "ಕಲ್ಯಾಣ ನಗರ" ಎಂದು ಹೆಸರಿಟ್ಟನು. ಅವನಿಗೆ ಚಿನ್ನಮಗುಮ್ಮರಾಜ, ಗುಮ್ಮಯ್ಯಲಕ್ಕ ಎಂಬ ಬಿರುದುಗಳಿದ್ದವು. ಈ ಗುಮ್ಮಯ್ಯಲಕ್ಕ ಎಂಬ ಬಿರುದಿನಿಂದ ಅವನ ರಾಜಧಾನಿಗೆ ಗುಮ್ಮನಾಯಕನ ಪಾಳೆಯ ಎಂಬ ಹೆಸರು ಬಂದಿತು. ಈತ ತನ್ನ ರಾಜಧಾನಿಯಾದ ಗುಮ್ಮನಾಯಕನ ಪಾಳೆಯದಲ್ಲಿ ಅಶ್ವಶಾಲೆ. ಗಜಶಾಲೆ, ಬೊಕ್ಕಸ, ಉಗ್ರಾಣ, ಆಸ್ಥಾನ, ಮಂಟಪ ಇತ್ಯಾದಿ ಇಲಾಖೆಗಳನ್ನು ಸ್ಥಾಪನೆ ಮಾಡಿದ. ರಾಯಸದವರು, ಠಾಣ್ಯದ ಗುರಿಕಾರರು. ಸೇರುವೆಗಾರರು, ಸಾವಿರಗಟ್ಟಲೆ ಓಲೆಕಾರರು, ಹೊಗಳು ಭಟ್ಟಂಗಿಗಳಾದ ಭಟರಾಜರು, ಓಲಗ, ತಾಳ, ಮೇಳ ಮುಂತಾದ ರಾಜ್ಯಾಡಳಿತಕ್ಕೆ ಬೇಕಾದವರನ್ನೆಲ್ಲ ನೇಮಿಸಿದ. ನಿರ್ಮಿಸಿದ ಹೊಸ ಗ್ರಾಮಗಳಿಗೆ, ಆಳ್ವಿಕೆಗೆ ಬಂದ ಇತರ ಗ್ರಾಮಗಳಿಗೆ ಶಾನುಭೋಗ, ರೆಡ್ಡಿ, ತೋಟಿ, ತಳವಾರರನ್ನು ನೇಮಿಸಿದ. ಕೆಲವರಿಗೆ ನಗದು ಸಂಬಳ, ಕೆಲವರಿಗೆ ಇನಾಮತಿ ಭೂಮಿ, ಕೆಲವರಿಗೆ ಗ್ರಾಮದ ಜನರಿಂದ ರುಸುವಲು ಸಲ್ಲುವಂತೆ ವ್ಯವಸ್ಥೆ ಮಾಡಿದ. ಪ್ರಜೆಗಳಿಂದ ೧೨ ಸಾವಿರ ವರಹ ಸುವರ್ಣಾದಾಯ ಪಡೆದು ದೇಗುಲಗಳನ್ನು ನಿರ್ಮಿಸಿದ. ಕೆರೆಗಳನ್ನು ಕಟ್ಟಿಸಿದ. ಬ್ರಾಹ್ಮಣರಿಗೆ, ವಿದ್ವಾಂಸರಿಗೆ ಗೃಹದಾನ, ಭೂದಾನಗಳನ್ನು ನೀಡಿದನು. "ಕಲ್ಯಾಣ ದುರ್ಗ" ವೆಂಬ ಹೆಸರಿನಲ್ಲಿ ಗುಮ್ಮನಾಯಕನ ಪಾಳೆಯದ ಬೆಟ್ಟದ ಮೇಲೆ ಕೋಟೆಯನ್ನು ಕಟ್ಟಿಸಿದ. ದೊಣೆಯ ಸನಿಹದ "ಅಕ್ಕಗಾರು" ಎಂಬ ದೇವತೆಗೆ ಗುಡಿಯನ್ನು ನಿರ್ಮಿಸಿದ. ದೊಣೆಗೆ ಕರ್ನಿಕಲದೊಣೆ ಎಂಬ ಹೆಸರಿಟ್ಟ, ದಿನಾಂಕ ೧೭-೧೨-೨೦೧೬ರಂದು ಕ್ಷೇತ್ರಕಾರ್ಯಕ್ಕೆ ತೆರಳಿದಾಗ ಬೆಟ್ಟದ ಮೇಲಿನ ಈ ದೊಣೆಯಲ್ಲಿ ನೀರಿದೆ. ಸ್ಥಳೀಯರು ಹೇಳುವ ಪ್ರಕಾರ ಈ ದೊಣೆಯಲ್ಲಿ ನೀರು ಸದಾಕಾಲ ತುಂಬಿದ್ದು ಎಂದಿಗೂ ಬತ್ತುವುದಿಲ್ಲ ಎಂಬ ಸಂಗತಿ ನಿಜಕ್ಕೂ ಆಶ್ಚರ್ಯಕರವಾಗಿದೆ.

ಈ ಚಿನ್ನಮನಾಯಕನು ಗುಟ್ಟು ಪಾಳೆಯಗಾರ ಯರಮಾಚಿ ಪೆಮ್ಮನಾಯಕನನ್ನು ಸೋಲಿಸಿ ಗುಟ್ಟಪಾಳ್ಯ, ಮುದ್ದೆಪಲ್ಲಿ ಮುಂತಾದ ಗ್ರಾಮಗಳನ್ನು ತನ್ನ ವಶಕ್ಕೆ ತೆಗೆದುಕೊಂಡ. ತನ್ನ ತಾಯಿಯ ಸ್ಮರಣಾರ್ಥ ತೋಳ್ಳಪಲ್ಲಿ ಬಳಿ ದೊಡ್ಡ ಕೆರೆಯನ್ನು ಕಟ್ಟಿಸಿದನು. ಅತ್ಯಂತ ದಕ್ಷನೂ, ಪ್ರಬಲನೂ ಆಗಿದ್ದ ಚಿನ್ನಮನಾಯಕನ ಆಡಳಿತಾವಧಿಯಲ್ಲಿ ಗುಮ್ಮನಾಯಕನ ಪಾಳೆಯವು ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಿತು. ಇವನ ಮರಣದ ತರುವಾಯ ಇವನ ಮಗನಾದ ಗುಮ್ಮನಾಯಕನು ಅಧಿಕಾರಕ್ಕೆ ಬಂದ.

ಗುಮ್ಮನಾಯಕ (ಕ್ರಿ.ಶ. ೧೨೯೬–೧೩೧೪)

ಕ್ರಿ.ಶ. ೧೨೮೩ರಲ್ಲಿ ಜನಿಸಿದ ಗುಮ್ಮನಾಯಕನಿಗೆ ೧೩ ವರ್ಷ ಬಾಲಕನಾಗಿರುವಾಗಲೇ ಯುವರಾಜನಾಗಿ ಪಟ್ಟಾಭಿಷೇಕವಾಯಿತು. ತಂದೆಯಿಂದ ದಕ್ಕಿದ ಅಧಿಕಾರದ ಗದ್ದುಗೆ ಸುರಕ್ಷಿತವಾಗಿರಲಿಲ್ಲ. ಇವನ ಅಧಿಕಾರದ ಅವಧಿಯಲ್ಲಿ ಬಾಹ್ಯ ಶತ್ರುಗಳ ಉಪಟಳ ಅಧಿಕವಾಯಿತು. ಆನೆಗೊಂದಿಯ ಸೇನೆಯು ಗುಮ್ಮನಾಯಕನ ಪಾಳೆಯಕ್ಕೆ ಮುತ್ತಿಗೆ ಹಾಕಿದಾಗ ಗುಮ್ಮನಾಯಕನು ಯುದ್ಧ ಮಾಡದೆ ಆನೆಗೊಂದಿಯ ಪ್ರಧಾನಿ ತಿರುಮಲರಾಯನನ್ನು ಒಪ್ಪಿಸಿ ಸಂಧಾನ ಮಾಡಿಕೊಂಡ. ಸಂಧಾನದ ಪ್ರಕಾರ ಗುಮ್ಮನಾಯಕನು ಅಗತ್ಯ ಬಂದಾಗ ಆನೆಗೊಂದಿಯ ರಕ್ಷಣೆಗಾಗಿ ಸೈನ್ಯವನ್ನು ಕಳುಹಿಸಲು ಸಮ್ಮತಿಸಿದನು. ವಾರ್ಷಿಕ ಪೊಗಾದಿಯನ್ನು ಸಲ್ಲಿಸಲು ಒಪ್ಪಿಕೊಂಡನು. ಆಡಳಿತದಲ್ಲಿ ದಕ್ಷತೆ ಮತ್ತು ಅಭಿವೃದ್ಧಿ ಸಾಧಿಸಲು ವೆಂಕಟರಾಯಪ್ಪ ಎಂಬಾತನನ್ನು ಪ್ರಧಾನಿಯಾಗಿ ನೇಮಿಸಿಕೊಂಡನು. ನಾಲ್ವರು ಸಂಪ್ರತಿಗಳನ್ನು ಮತ್ತು ಇಬ್ಬರು ಗುರಿಕಾರರನ್ನು ನೇಮಿಸಿ, ಅವರಿಗೆ ನಗದು ಸಂಬಳವನ್ನು ಜಹಗೀರುಗಳನ್ನು ನೀಡಿದನು. ಅದ್ವೈತ ಧರ್ಮದ ಗುರುವಾದ ಪುಷ್ಪಗಿರಿ ಸ್ವಾಮಿಯನ್ನು ಆದರದಿಂದ ಬರಮಾಡಿಕೊಂಡು ಅವರನ್ನು ಗೌರವಿಸಿದನು. ಹದಿನೆಂಟು ವರ್ಷಗಳ ಕಾಲ ರಾಜ್ಯವನ್ನಾಳಿದ ಈ ಪಾಳೆಯಗಾರನು ಕ್ರಿ.ಶ. ೧೩೧೪ರಲ್ಲಿ ನಿಧನ ಹೊಂದಿದನು.[೨೬]

ಲಕ್ಕನಾಯಕ (ಕ್ರಿ.ಶ. ೧೩೧೪–೧೩೪೬)

ಗುಮ್ಮನಾಯಕನ ಪುತ್ರನಾದ ಲಕ್ಕನಾಯಕನು ಕ್ರಿ.ಶ. ೧೩೧೪ರಲ್ಲಿ ಅಧಿಕಾರಕ್ಕೆ ಬಂದನು. ಗ್ರಾಮಗಳ ನಿರ್ಮಾಣ, ಬೇಸಾಯಕ್ಕೆ ಬೇಕಾದ ನೀರಾವರಿ ಸೌಲಭ್ಯಗಳು, ದೇವಾಲಯಗಳ ನಿರ್ಮಾಣ, ಯಾತ್ರಿಕರಿಗೆ ವಸತಿ ಸೌಕರ್ಯ, ದುರ್ಗಗಳ ನಿರ್ಮಾಣ ಮಾಡಿದನು. ಅನುಭವಶಾಲಿಗಳಾದ ಹೊರಗಿನ ಬೇಸಾಯಗಾರರಿಗೆ ತನ್ನ ರಾಜ್ಯಕ್ಕೆ ಬರಲು ಆಹ್ವಾನಿಸಿದನು. ಇವೆಲ್ಲವೂ ಲಕ್ಕನಾಯಕನ ಆಡಳಿತ ವೈಶಿಷ್ಟ್ಯಗಳಾಗಿದ್ದವು. ವಡಿಗೆರೆ, ಪೂಲನಾಯಕನಪಲ್ಲಿ, ಮಿಟ್ಟೆಮಿರ್ರೆ, ತಿಮ್ಮಸಂದ್ರ ಹಾಗೂ ಯಲ್ಲಂಪಲ್ಲಿಗಳು ಈ ನಾಯಕನ ಪ್ರೋತ್ಸಾಹದಿಂದ ಅಭಿವೃದ್ಧಿಗೊಂಡವು. ೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗಿ ಅಲ್ಲಿ ನೆಲೆಸಿದ ಆನೆಗೊಂದಿ ಅರಸರು, ಲಕ್ಕನಾಯಕನ ವಿಧೇಯತೆಯನ್ನು ಮೆಚ್ಚಿ ಗುಮ್ಮನಾಯಕನೊಂದಿಗೆ ಮಾಡಿಕೊಂಡ ಕರಾರಿನಲ್ಲಿ ಕೆಲವು ರಿಯಾಯತಿ ತೋರಿಸಿ ಕರಾರುಗಳನ್ನು ಮುಂದುವರಿಸಿದನು. ಲಕ್ಕನಾಯಕನು ತನ್ನ ಸಂಸ್ಥಾನದ ಆದಾಯವು ಹೆಚ್ಚಾಗಿದ್ದರಿಂದ ವಿಜಯನಗರದ ಅರಸರಿಗೆ ಏಳು ಸಹಸ್ರ ವರಹಗಳಷ್ಟು ಪೊಗಾದಿಯನ್ನು ಸಲ್ಲಿಸುತ್ತಿದ್ದನು.

ಕೃಷ್ಣಪ್ಪನಾಯಕ (ಕ್ರಿ.ಶ. ೧೩೪೬–೧೩೬೩)

ಲಕ್ಕಪ್ಪನಾಯಕನ ಹಿರಿಯ ಮಗ ಕೃಷ್ಣಪ್ಪ ನಾಯಕನೂ ಸಹ ವಿಜಯನಗರದ ಅರಸರಿಗೆ ವಿಧೇಯಕನಾಗಿದ್ದ. ತನ್ನ ಪೂರ್ವಜರು ರೂಪಿಸಿದ್ದ ಆಡಳಿತ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋದನು. ಹೆಚ್ಚಿನದಾದ ಎಡರು–ತೊಡರುಗಳು, ವಿಶೇಷ ಘಟನೆಗಳು ಇಲ್ಲದ ಈತನ ಆಡಳಿತಾವಧಿಯಲ್ಲಿ ನೆಮ್ಮದಿ ನೆಲೆಸಿತ್ತು.

ಕದಿರಪ್ಪ ನಾಯಕ (ಕ್ರಿ.ಶ. ೧೩೬೩-೧೩೮೮)

ಕ್ರಿ.ಶ. ೧೩೬೩ರಲ್ಲಿ ಅಧಿಕಾರಕ್ಕೆ ಬಂದ ಕದಿರಪ್ಪ ನಾಯಕನು ಗುಮ್ಮನಾಯಕ ಪಾಳೆಯಗಾರರಲ್ಲಿ ಅತಿ ಹೆಚ್ಚು ಪ್ರಸಿದ್ಧಿಯನ್ನು ಪಡೆದುಕೊಂಡಿದ್ದಾನೆ. ಕಾರಣ ಅದುವರೆಗೂ ಸಣ್ಣ ಪಾಳೆಯಪಟ್ಟಾಗಿದ್ದ ಗುಮ್ಮನಾಯಕ ಪಾಳೆಯವು ಸಂಸ್ಥಾನ ದರ್ಜೆಗೇರಿದ್ದು, ವಿಜಯನಗರದ ಸಾಮ್ರಾಜ್ಯದ ಮೊದಲನೆಯ ಅಮರನಾಯಕತನ ಪಡೆದಿದ್ದು ಕದಿರಪ್ಪ ನಾಯಕನ ಕಾಲದಲ್ಲಿಯೇ. ಶೂರನು, ಧೀರನೂ, ಅಪ್ರತಿಮ ಧೈರ್ಯಶಾಲಿಯೂ ಆಗಿದ್ದ ಕದಿರಪ್ಪ ನಾಯಕನು ವಿಜಯನಗರದ ಹಲವಾರು ಯುದ್ಧಗಳಲ್ಲಿ ಅಪ್ರತಿಮ ಕಲಿತನದಿಂದ ಹೋರಾಡಿದನು. ವಿಜಯನಗರದ ಅರಸರು ಕದಿರಪ್ಪ ನಾಯಕನ ನೆರವಿನಿಂದ ಆಂಧ್ರಪ್ರದೇಶದ ಅನೇಕ ಪಾಳೆಯಗಾರರನ್ನು ತಮ್ಮ ಸಾಮಂತರನ್ನಾಗಿ ಮಾಡಿಕೊಂಡರು. ವಿಜಯನಗರದ ಸೇನಾಧಿಪತಿ ಸುಜಾನಸಿಂಹನೊಡನೆ ಸೇರಿ ಗುಡ್ಡಗಾಡು ಪ್ರದೇಶದ ಪಾಳೆಯಗಾರರ ಮೇಲೆ ವಿರೋಚಿತ ಗೆಲುವು ಸಾಧಿಸುವಲ್ಲಿ ಸಹಾಯ ಮಾಡಿದನು. ಈ ಕದಿರಪ್ಪ ನಾಯಕನು ಅನೇಕ ಸೈನಿಕರು ಮತ್ತು ಸಹೋದರರನ್ನು ಯುದ್ಧಭೂಮಿಯಲ್ಲಿ ಕಳೆದುಕೊಂಡರೂ ಕೃಷ್ಣಪ್ಪ ನಾಯಕನ ಶಿರಚ್ಛೇದ ಮಾಡಿ ಅವಿಧೇಯ ಪಾಳೆಯಗಾರರನ್ನು ಮಟ್ಟಹಾಕಿದನು. ಯುದ್ಧದ ನಂತರ ಕೊಳ್ಳೆ ಹೊಡೆದ ಅಪಾರ ಸಂಪತ್ತನ್ನು ವಿಜಯನಗರದ ಸೇನಾಪತಿಗೆ ಅರ್ಪಿಸಿದನು. ಸೇನಾಧಿಪತಿ ಸುಜಾನಸಿಂಹನಿಂದ ಕದಿರಪ್ಪ ನಾಯಕನ ಶೌರ್ಯ, ಪರಾಕ್ರಮಗಳ ಕೇಳಿ ತಿಳಿದುಕೊಂಡ ವಿಜಯನಗರದ ಅರಸರು ಆತನನ್ನು ವಿಜಯನಗರಕ್ಕೆ ಆಹ್ವಾನಿಸಿ ರಾಜೋಚಿತರಾಗಿ ಸತ್ಕರಿಸಿ ಬಾಗೇಪಲ್ಲಿ, ಚೇಳೂರು ಮುಂತಾದ ಗ್ರಾಮಗಳನ್ನು ಬಹುಮಾನವಾಗಿ ಕೊಟ್ಟರು. ಗುಮ್ಮನಾಯಕ ಪಾಳೆಯಕ್ಕೆ ಸಂಸ್ಥಾನದ ದರ್ಜೆ ನೀಡಿ ಆನೆ, ಕುದುರೆ ಪಲ್ಲಕ್ಕಿ, ಛತ್ರಚಾಮರ, ಧ್ವಜ, ಕತ್ತಿಗಳನ್ನು ಉಡುಗೊರೆಯಾಗಿ ನೀಡಿದರು. ಹೀಗೆ ವಿಜಯನಗರದ ಅರಸರ ಗೌರವಾದರಗಳನ್ನು ಪಡೆದ ಕದಿರಪ್ಪನಾಯಕನು ವಿಜಯನಗರದ ಮಾದರಿಯಲ್ಲಿ ವಿಜಯ ದಶಮಿಯನ್ನು ಗುಮ್ಮನಾಯಕ ಪಾಳೆಯದಲ್ಲಿಯೂ ಆಚರಿಸುವ ಸಂಪ್ರದಾಯವನ್ನು ಆರಂಭಿಸಿದನು. ಸುಯ್ಯಲೂರಿನ ಪಾಳೆಯಗಾರನಾಗಿದ್ದ ರಾಮರಾಜನ ಸೊಕ್ಕನ್ನು ಅಡಗಿಸಿದ ಕದಿರಪ್ಪನಾಯಕನು ಅವನ ಅನೇಕ ಗ್ರಾಮಗಳನ್ನು ತನ್ನ ರಾಜ್ಯದೊಂದಿಗೆ ವಿಲೀನಗೊಳಿಸಿಕೊಂಡನು. ಈ ಪ್ರಭಾವಶಾಲಿ ಪಾಳೆಯಗಾರನು ಕ್ರಿ.ಶ. ೧೩೮೮ರಲ್ಲಿ ಮರಣ ಹೊಂದಿದನು. ಇವನ ನಂತರ ಇವನ ಮಗನಾದ ಸಿಂಗಪ್ಪನಾಯಕನು ಅಧಿಕಾರಕ್ಕೆ ಬಂದನು.

ಸಿಂಗಪ್ಪ ನಾಯಕ : (ಕ್ರಿ.ಶ. ೧೩೮೮-೧೪೫೭)

ಸಿಂಗಪ್ಪನಾಯಕನು ಅಸಮರ್ಥ ದೊರೆಯಾಗಿದ್ದ ಈತ ತನ್ನ ತಂದೆಯಂತೆ ಪರಾಕ್ರಮಶಾಲಿ ನಾಯಕನಾಗಿರಲಿಲ್ಲ. ಆದರೆ ತಂದೆ ಹಾಕಿದ ಮಾರ್ಗದಲ್ಲಿಯೇ ವಿಜಯನಗರದ ಅರಸನಿಗೆ ವಿಧೇಯನಾಗಿದ್ದು, ದಾನ ಧರ್ಮಗಳನ್ನು ಮಾಡುತ್ತ ದೀರ್ಘಕಾಲ ರಾಜ್ಯಭಾರ ಮಾಡಿದನು.

ದೊಡ್ಡ ವಸಂತನಾಯಕ : (ಕ್ರಿ.ಶ. ೧೪೫೭-೧೪೬೭)

ಗುಮ್ಮನಾಯಕ ಪಾಳೆಯಗಾರರಲ್ಲಿ ಮತ್ತೊಬ್ಬ ಸಮರ್ಥ ದಕ್ಷ ನಾಯಕನೇ ದೊಡ್ಡ ವಸಂತನಾಯಕ. ಈತ ಕ್ರಿ.ಶ. ೧೪೫೭ರಲ್ಲಿ ಅಧಿಕಾರಕ್ಕೆ ಬಂದನು. ಈ ವೇಳೆಗಾಗಲೇ ವಿಜಯನಗರ ಸಾಮ್ರಾಜ್ಯವನ್ನು ಆಳುತ್ತಿದ್ದ ಪ್ರೌಢದೇವರಾಯನು ತನ್ನ ಸಾಮ್ರಾಜ್ಯದ ರಕ್ಷಣಾಗೋಡೆಗಳಾಗಿದ್ದ ನಾಯಕರೊಂದಿಗೆ ಅತ್ಯುತ್ತಮ ಬಾಂಧವ್ಯ ಹೊಂದಿದ್ದನು. ಪ್ರೌಢದೇವರಾಯನ ನಿಕಟವರ್ತಿಯಾಗಿದ್ದ ದೊಡ್ಡ ವಸಂತನಾಯಕನು ಕಲುಬುರ್ಗಿ ಕೋಟೆಗಳನ್ನು ಜಯಗಳಿಸುವಲ್ಲಿ ಮುಖ್ಯ ಪಾತ್ರ ವಹಿಸಿದನು. ಈ ಯುದ್ಧದಲ್ಲಿ ವಿಜಯನಗರದ ಅರ್ಧ ಲಕ್ಷ ಸೇನೆಯೊಂದಿಗೆ, ಗಂಡಿಕೋಟೆ ಪೆಮ್ಮಸಾನಿ ತಮ್ಮನಾಯಕನ ಭಾರೀ ಸೇನೆಯು ಜೊತೆಗೂಡಿತು. ಹಾಗೆಯೇ ಕೊಕ್ಕಂಟಪಾಳ್ಯದ ಸಿಂಗಪ್ಪನಾಯಕನು ಒಂದು ಸಾವಿರದ ಸೈನ್ಯವನ್ನು ಕಳುಹಿಸಿದ. ವಸಂತನಾಯಕನು ಯುದ್ಧದ ನಾಯಕತ್ವ ವಹಿಸಿ ಯುದ್ಧವನ್ನು ಮುನ್ನಡೆಸಿದ. ಕಲುಬುರ್ಗಿಯ ಕೋಟೆಯ ಮೇಲೆ ವಿಜಯನಗರದ ಬಾವುಟವನ್ನು ಹಾರಿಸಿದ. ಈ ವಿಜಯದಿಂದ ಸಂತುಷ್ಟನಾದ ಪ್ರೌಢದೇವರಾಯನು, ದೊಡ್ಡ ವಸಂತನಾಯಕ ಮತ್ತು ಇತರ ಪಾಳೆಯಗಾರರನ್ನು ಸನ್ಮಾನಿಸಿ ಬೆಲೆಬಾಳುವ ಬಹುಮಾನಗಳನ್ನು ನೀಡಿದ. ಈ ಯುದ್ಧದಲ್ಲಿ ವಿಜಯನಗರದ ಅರಸರಿಗೆ ೧೪ ಲಕ್ಷ ವರಹಗಳ ಕೊಳ್ಳೆ ಸಿಕ್ಕಿತು. ದೊಡ್ಡ ವಸಂತನಾಯಕನು ನಂದಿ ಮತ್ತು ತ್ರಿಶೂಲವಿರುವ ನಾಣ್ಯಗಳನ್ನು ಟಂಕಿಸಿ ಚಲಾವಣೆಗೆ ತಂದನು.

ದೊಡ್ಡ ವಸಂತನಾಯಕನ ಬೇಡಿಕೆಯಂತೆ ಪ್ರೌಢದೇವರಾಯನು "ಗಡಿದಂಕೊಂಡ" ಸುತ್ತಮುತ್ತಲಿನ ಕಾಡನ್ನು ನಾಯಕನಿಗೆ ಒಪ್ಪಿಸಿದನು. ಈ ಪ್ರಾಂತ್ಯದಲ್ಲಿ ಹಲವಾರು ಗ್ರಾಮಗಳನ್ನು ಮತ್ತು ಕೆರೆಗಳನ್ನು ಕಟ್ಟಿಸಿ ಭೂಮಿಯನ್ನು ಸಾಗುವಳಿ ಯೋಗ್ಯವನ್ನಾಗಿ ಮಾಡಿದ. ಹಿಂದೊಮ್ಮೆ ವಿಜಯನಗರದ ವಿರುದ್ಧ ಮುಗಿಬಿದ್ದಿದ್ದ ಕೊಕ್ಕಂಟ ಪಾಳೆಯದ ಸಿಂಗಪ್ಪನಾಯಕನ ದ್ರೋಹವನ್ನು ಪ್ರೌಢದೇವರಾಯನು ಮನ್ನಿಸುವಂತೆ ಮಾಡಿದನು. ವಸಂತನಾಯಕನ ಇಚ್ಚೆಯಂತೆ ಕೊಕ್ಕಂಟ ಪಾಳೆಯದ ಸಿಂಗಪ್ಪ ನಾಯಕನಿಗೆ ಪಾಳೆಯಪಟ್ಟನ್ನು ಹಿಂತಿರುಗಿಸಲಾಯಿತು. ವೀರನೂ, ವಿನಯ ಕ್ಷಮಾಗುಣ ಸಂಪನ್ನನೂ ಆಗಿದ್ದ ಅಪಾರ ಕೀರ್ತಿ ಸಂಪಾದಿಸಿದ ದೊಡ್ಡ ವಸಂತನಾಯಕನು ಹಲವು ದೇವಾಲಯಗಳನ್ನು ಕಟ್ಟಿಸಿದ.[೨೭]

ದೊಡ್ಡಕದಿರಪ್ಪ ನಾಯಕ (೧೬೬೭-೭೩)

ದೊಡ್ಡ ಕದಿರಪ್ಪ ನಾಯಕನು ಕ್ರಿ.ಶ. ೧೪೬೭ರಿಂದ ೧೪೭೩ರವರೆಗೂ ಆಡಳಿತ ನಡೆಸಿದ. ಈ ಕದಿರಪ್ಪ ನಾಯಕನು ಕೃಷ್ಣದೇವರಾಯನ ಕಳಿಂಗ ದಂಡಯಾತ್ರೆಯಲ್ಲಿ ಭಾಗವಹಿಸಿದ್ದ ಎಂಬ ಬಖೈರಿನ ಹೇಳಿಕೆಯನ್ನು ಪುಟ್ಟಣ್ಣನವರು ಸೇರಿದಂತೆ ಬಹುತೇಕ ವಿದ್ವಾಂಸರು ಅಲ್ಲಗಳೆದಿದ್ದಾರೆ. ಈ ಯುದ್ಧದಲ್ಲಿ ದೊಡ್ಡ ಕದಿರಪ್ಪ ನಾಯಕನು ಭಾಗವಹಿಸಿರಲಿಲ್ಲವೆಂದೂ ಬಹುತೇಕ ವಿದ್ವಾಂಸರ ಅಭಿಪ್ರಾಯವಾಗಿದೆ. ಬದಲಾಗಿ ದೊಡ್ಡಕದಿರಪ್ಪ ನಾಯಕನು ಪ್ರೌಢದೇವರಾಯನ ಕಾಲದ ಅಮರನಾಯಕನಾಗಿದ್ದು, ಯುದ್ಧವೊಂದರಲ್ಲಿ ವಿಜಯನಗರದ ಪರವಾಗಿ ಕಾದಾಡಿ ಗೆದ್ದು

ಚಕ್ರವರ್ತಿಯಿಂದ ವಸ್ತ್ರಾಭರಣಗಳನ್ನು, ಆಯುಧಗಳನ್ನು ಬಹುಮಾನವಾಗಿ ಪಡೆದ. ಒಟ್ಟಿನಲ್ಲಿ ಈತ ವಿಜಯನಗರ ಅರಸರೊಂದಿಗೆ ಅತ್ಯುತ್ತಮ ಸಂಬಂಧವನ್ನು ಹೊಂದಿದ್ದ.

ಇಮ್ಮಡಿ ಕದಿರಪ್ಪ ನಾಯಕ (ಕ್ರಿ.ಶ. ೧೪೮೨–೧೫೦೮)

ಇಮ್ಮಡಿ ಕದಿರಪ್ಪ ನಾಯಕನು ತನ್ನ ತಂದೆ ಜೀವಂತವಾಗಿರುವಾಗಲೇ ಕ್ರಿ.ಶ. ೧೪೮೨ರಲ್ಲಿ ಅಧಿಕಾರಕ್ಕೆ ಬಂದನು. ಇಮ್ಮಡಿ ಕದಿರಪ್ಪ ನಾಯಕನು ವಿಜಯನಗರದ ವೀರನರಸಿಂಹನಾಯಕನ ಸಮಕಾಲೀನನಾಗಿದ್ದನು. ವಿಜಯನಗರ ಸಾಮ್ರಾಜ್ಯಕ್ಕೆ ಕಂಟಕ ಪ್ರಾಯನಾಗಿದ್ದ ಇಡ್ಗೂರು ಮತ್ತು ಚಿನ್ನಗಾನಪಲ್ಲಿಯ ಪಾಳೆಯಗಾರ ರಂಗರಾಜನನ್ನು ಮಣಿಸಲು ಇಮ್ಮಡಿ ಕದಿರಪ್ಪ ನಾಯಕನಿಗೆ ವೀರ ನರಸರಾಜನು ಆಜ್ಞಾಪಿಸಿದನು. ಸ್ವಾಮಿನಿಷ್ಠನೂ ಕರ್ತವ್ಯ ದಕ್ಷನೂ ಆಗಿದ್ದ ಇಮ್ಮಡಿ ಕದಿರಪ್ಪ ನಾಯಕನು ರಂಗರಾಜನ ಮೇಲೆ ಯುದ್ಧವನ್ನು ಮಾಡಿ ರಂಗರಾಜನನ್ನು ಸೋಲಿಸಿ ಬಂಧಿಸಿದನು. ನಂತರ ರಂಗರಾಜನೊಂದಿಗೆ ಒಪ್ಪಂದವನ್ನು ಮಾಡಿಕೊಂಡು ಎರಡು ವರ್ಷದ ಪೊಗಾದಿಯಾಗಿ ಹಣ ೨೪೦೦೦ ಪ್ರತಿವರ್ಷ ಪೊಗಾದಿ ಹಣ ೧೨೦೦೦ ವರಹಗಳನ್ನು ತಪ್ಪದೆ ಸಲ್ಲಿಸುವುದು ಮತ್ತು ಯುದ್ಧದ ವೆಚ್ಚ ೭೦೦೦ ವರಹಗಳನ್ನು ಕೊಡುವ ಕರಾರಿನೊಂದಿಗೆ ಸಂಧಿಯನ್ನು ಮಾಡಿಕೊಂಡನು. ನಂತರ ರಂಗರಾಜನನ್ನು ಬಂಧಿಸಿ ವಿಜಯನಗರದ ಚಕ್ರವರ್ತಿಗಳಿಗೆ ಒಪ್ಪಿಸಿದನು. ಈ ಒಪ್ಪಂದದಿಂದ ವಿಜಯನಗರದ ಅರಸನ ಪ್ರೀತಿ ಮತ್ತು ಗೌರವಗಳಿಗೆ ಪಾತ್ರನಾದನು. ವೀರ ನರಸಿಂಹನಾಯಕನು ಇಮ್ಮಡಿ ಕದಿರಪ್ಪ ನಾಯಕನಿಗೆ ತನ್ನ ಅರಮನೆಯಲ್ಲಿ ನವರಾತ್ರಿ ಸಂಭ್ರಮವನ್ನು ವೀಕ್ಷಿಸಲು ಆಹ್ವಾನ ನೀಡಿದನು. ವೀರನರಸರಾಜನ ಆಹ್ವಾನದ ಮೇರೆಗೆ ಇಮ್ಮಡಿ ಕದಿರಪ್ಪ ನಾಯಕನು ನವರಾತ್ರಿ ಉತ್ಸವದಲ್ಲಿ ಭಾಗವಹಿಸಿದನು. ಈ ಸಂದರ್ಭದಲ್ಲಿ ಸಂಸ್ಥಾನದ ಭಟರಾಜನೊಬ್ಬ ಕೈಯಲ್ಲಿ ಒಂದು ಹರಿತವಾದ ಕಠಾರಿಯನ್ನು ಹಿಡಿದು ತನ್ನ ಕಠಾರಿಗೆ ಎದೆಯೊಡ್ಡುವ ಶೂರ ಯಾರಾದರೂ ಇದ್ದಾರೆಯೇ? ಎಂದು ಸವಾಲು ಹಾಕಲು ಇಮ್ಮಡಿ ಕದಿರಪ್ಪ ನಾಯಕನು ಧೈರ್ಯದಿಂದ ತನ್ನ ಎದೆಯೊಡ್ಡಿ ನಿಂತನು. ಭಟರಾಜನು ತಿವಿದ ಕಠಾರಿಯಿಂದ ಚಿಮ್ಮಿದ ರಕ್ತವು ಕೆಂಪು ಓಕುಳಿ ಎಂದೂ, ಕಠಾರಿಯು ಕೃತ್ರಿಮವಾದುದೆಂದೂ ತಿಳಿಯಿತು. ಇಮ್ಮಡಿ ಕದಿರಪ್ಪ ನಾಯಕನ ಧೈರ್ಯಕ್ಕೆ ಮೆಚ್ಚಿದ ಭಟರಾಜನು ಪಾಳೆಯಗಾರರನ್ನು ಆಶುಕವಿತ್ವದಿಂದ ಹೊಗಳಿದನು. ಭಟರಾಜನ ಯುಕ್ತಿ ಮತ್ತು ತಂತ್ರಗಾರಿಕೆಯನ್ನು ಮೆಚ್ಚಿದ ಇಮ್ಮಡಿ ಕದಿರಪ್ಪ ನಾಯಕನು ತನ್ನ ಮುತ್ತಿನ ಕಂಠೀಹಾರ ಮತ್ತು ಜೋಡಿ ಶಾಲನ್ನು ಬಹುಮಾನವಾಗಿ ನೀಡಿದನು.[೨೮]

ತನ್ನ ಪಾಳೆಯಪಟ್ಟಿನ ವಿಸ್ತರಣೆಗೆ ಹಾತೊರೆಯುತ್ತಿದ್ದ ಇಮ್ಮಡಿ ಕದಿರಪ್ಪ ನಾಯಕ ಮನವಿಯನ್ನು ಪುರಸ್ಕರಿಸಿದ ವಿಜಯನಗರದ ದೊರೆಯು ಕೊಂಚಕೋಮಾರ್ಲ ಹೋಬಳಿ, ದೇವಿಕುಂಟೆ ಮೊದಲಾದ ಕೆಲವು ಗ್ರಾಮಗಳನ್ನು ಅವನಿಗೆ ಬಿಟ್ಟಿ ಕೊಟ್ಟಿದ್ದಲ್ಲದೇ ಮುತ್ತಿನಹಾರ, ಕೆಂಪುಕೊಡೆ ಹಾಗೂ ಏಳು ಸಹಸ್ರ ವರಹಗಳನ್ನು ಕಾಣಿಕೆಯಾಗಿ ನೀಡಿದನು.

ಗುಮ್ಮನಾಯಕನ ಪಾಳಯದ ಜನರಿಗೂ ಬಳ್ಳಾಪುರವೆಂಬ ಪಾಳೆಪಟ್ಟಿನ ನಿವಾಸಿಗಳಿಗೂ ಆಗುತ್ತಿದ್ದ ಘರ್ಷಣೆಯನ್ನು ತಪ್ಪಿಸಲು ಬಳ್ಳಾಪುರದ ಪಾಳೆಯಗಾರನ ಕೋರಿಕೆಯ ಮೇರೆಗೆ ಕದರಪ್ಪನಾಯಕನು ಅವನೊಂದಿಗೆ ಸಹಕರಿಸಲು ಒಪ್ಪಿಕೊಂಡನು. ದೇವಿಕುಂಟೆ ಎಂಬ ಪ್ರಾಂತವನ್ನು ಮೈತ್ರಿಯ ಕುರುಹಾಗಿ ಕದಿರಪ್ಪ ನಾಯಕನು ಬಳ್ಳಾಪುರದ ಪಾಳೆಯಗಾರನಿಗೆ ಕೊಡಲು ಸಮ್ಮತಿಸಿದನು. ಹೀಗೆ ಜನರ ಪ್ರೀತಿಗೆ ಪಾತ್ರನಾಗಿದ್ದ ಇಮ್ಮಡಿ ಕದಿರಪ್ಪ ನಾಯಕ ಜನಪರ ಆಡಳಿತ ನೀತಿಯಿಂದ ಜನಮಾನಸದಲ್ಲಿ ಅಮರನಾದನು. ಕ್ರಿಶ. ೧೫೦೮ರಲ್ಲಿ ಮರಣ ಹೊಂದಿದನು.

*** ಅಗ್ಗಿ ತಿಮ್ಮನಾಯಕ (ಕ್ರಿಶ. ೧೫೦೮-೧೫೧೪)**

ವಿಜಯನಗರದ ಅರಸ ಕೃಷ್ಣದೇವರಾಯನ ಕಾಲದ ಅಮರನಾಯಕನಾದ ಅಗ್ಗಿ ತಿಮ್ಮನಾಯಕ ಆಳ್ವಿಕೆಯು ದಕ್ಷತೆ, ನಿಷ್ಪಕ್ಷಪಾತತೆಗೆ ಹೆಸರುವಾಸಿಯಾಗಿದೆ. ಅಗ್ಗಿ ತಿಮ್ಮನಾಯಕನು ತನ್ನ ತಂದೆ ಕದಿರಪ್ಪ ನಾಯಕನಂತೆ ದಕ್ಷನೂ, ಸಮರ್ಥನು ಹಾಗೂ ಶ್ರೇಷ್ಠ ಆಡಳಿತಗಾರನಾಗಿದ್ದನು. ಈತನ ಕಾಲವೂ ನಿಷ್ಪಕ್ಷಪಾತ ನ್ಯಾಯಾಡಳಿತಕ್ಕೆ ಪ್ರಸಿದ್ಧಿಯಾಗಿದೆ. ತಿಮ್ಮನಾಯಕನು ತನ್ನ ತಂದೆಯಂತೆಯೇ ವಿಜಯನಗರ ದೊರೆಗಳಿಗೆ ವಿಧೇಯಕನಾಗಿದ್ದು ಸ್ವಾಮಿನಿಷ್ಠೆಗೆ ಹೆಸರಾಗಿದ್ದನು. ಈತ ವಿಜಯನಗರದ ದೊರೆ ಕೃಷ್ಣದೇವರಾಯನೊಂದಿಗೆ ಬಿಜಾಪುರದ ಷಾಹಿ ಸುಲ್ತಾನರ ವಿರುದ್ಧ ಹೋರಾಡಲು ಸಹಕರಿಸಿದನು ಹಾಗೂ ಪ್ರತಿವರ್ಷ ತಪ್ಪದೇ ಹತ್ತು ಸಹಸ್ರ ವರಹಗಳನ್ನು ವಾರ್ಷಿಕ ಪೊಗಾದಿಯಾಗಿ ನೀಡಲಾರಂಭಿಸಿದನು. ಅಗ್ಗಿ ತಿಮ್ಮಪ್ಪನಾಯಕನು ತನ್ನ ಸಹೋದರನಾದ ಕೃಷ್ಣಪ್ಪನಾಯಕನು ಪ್ರಜಾ ಪೀಡಕನಾಗಿ, ಅನೈತಿಕ ವ್ಯವಹಾರಗಳಲ್ಲಿ ಮಗ್ನನಾದಾಗ ತಿಮ್ಮಪ್ಪನಾಯಕನು ತನ್ನ ತಮ್ಮನೆಂದು ಪಕ್ಷಪಾತವನ್ನು ಮಾಡದೆ ಕೃಷ್ಣಪ್ಪನಾಯಕನ ಕಿವಿ, ಮೂಗು ಕೊಯ್ಯಿಸಿ ಸೆರೆಮನೆಗೆ ಹಾಕಿದನು. ಮತ್ತೊಂದು ಸಂದರ್ಭದಲ್ಲಿ ತನ್ನ ಎರಡನೇ ರಾಣಿಯ ಮಗ ನಾಗಪ್ಪನಾಯಕನು ಹಿರಿಯ ರಾಣಿ ಆಲಮೇಲು ಮಂಗಮ್ಮನ ಮಗ ವಸಂತನಾಯಕನಿಗೆ ಅಡುಗೆಯವನ ಮೂಲಕ ವಿಷಪ್ರಯೋಗ ಮಾಡಿಸಿದನು. ವಿಷಯ ತಿಳಿದ ಅಗ್ಗಿ ತಿಮ್ಮಪ್ಪನಾಯಕನು ಮಗ ನಾಗಪ್ಪನಾಯಕನಿಗೂ, ಅಡುಗೆಯವನಿಗೂ ಮರಣದಂಡನೆ ವಿಧಿಸಿದನು. ಹಿರಿಯ ಮಗ ವಸಂತನಾಯಕ ತನ್ನ ತಮ್ಮನಿಗೆ ಜೀವದಾನ ಮಾಡಬೇಕೆಂದು ತಂದೆಯನ್ನು ಬೇಡಲಾಗಿ ನಾಗಪ್ಪನಾಯಕನನ್ನು ಗಡಿಪಾರು ಮಾಡಲಾಯಿತು.

*** ಹಿರೇ ವಸಂತನಾಯಕ (ಕ್ರಿಶ. ೧೫೧೪-೧೫೧೭)**

ಅಗ್ಗಿ ತಿಮ್ಮಪ್ಪನಾಯಕನು ತನ್ನ ಮಗನಾದ ಹಿರೇವಸಂತನಾಯಕನಿಗೆ ಕ್ರಿಶ. ೧೫೧೪ರಲ್ಲಿ ಪಟ್ಟ ಕಟ್ಟಿದನು. ಹಿರೇ ವಸಂತನಾಯಕನು ಅಗ್ಗಿ ತಿಮ್ಮನಾಯಕನು ಹಿರಿಯ ರಾಣಿಯಾದ ಅಲಮೇಲು ಮಂಗಳ ಮಗನಾಗಿದ್ದನು. ಬಾಲ್ಯದಿಂದಲೂ ದೇವರಲ್ಲೂ ದ್ವಿಜರಲ್ಲೂ ಭಕ್ತಿಯುಳ್ಳವನಾಗಿ ದಾನ-ಧರ್ಮಗಳಿಗೆ ಖ್ಯಾತಿಯಾಗಿದ್ದನು. ಈತನು ದಯಾಪರನು, ಮೃದು ಸ್ವಭಾವದವನೂ, ಸಜ್ಜನನು, ವಿದ್ಯಾವಂತವನು ಆಗಿದ್ದನು. ಗಡಿಪಾರು ಮಾಡಲಾಗಿದ್ದ ತಮ್ಮನನ್ನು ಹುಡುಕಿಸಿ ಕರೆತಂದು,

ಮದುವೆ ಮಾಡಿ ಕೆಲವು ಗ್ರಾಮಗಳನ್ನು ಕೊಟ್ಟು ದಯೆ ತೋರಿದನು. ಆದರೂ ನಾಗಪ್ಪನಾಯಕನು ದ್ರೋಹ ಚಿಂತನೆಯನ್ನು ಬಿಡದಿರಲು ಅಣ್ಣನಾದ ವಸಂತನಾಯಕ ಅವನನ್ನು ಅರಮನೆ ಪ್ರವೇಶಿಸದಂತೆ ನಿಷೇದಿಸಿದನು.

*** ಇಮ್ಮಡಿ ಸಿಂಗಪ್ಪನಾಯಕ (ಕ್ರಿ.ಶ. ೧೫೧೭-೧೫೨೧)**

ಇಮ್ಮಡಿ ಸಿಂಗಪ್ಪನಾಯಕ ಹಿರೇ ವಸಂತನಾಯಕನ ಮಗನಾಗಿದ್ದು ತಂದೆಯ ಕೃಪೆಯಿಂದಲೇ ಅಧಿಕಾರಕ್ಕೆ ಬಂದನು. ಈತ ಕ್ರಿ.ಶ. ೧೫೧೪ರಿಂದ ೧೫೧೭ರವರೆಗೆ ರಾಜ್ಯಭಾರ ಮಾಡಿ ನಂತರ ತನ್ನ ಪುತ್ರನಾದ ಮುಮ್ಮಡಿ ನರಸಿಂಹನಾಯಕನಿಗೆ ಪಟ್ಟ ಕಟ್ಟಿದನು.

*** ಮುಮ್ಮಡಿ ನರಸಿಂಹನಾಯಕ (ಕ್ರಿ.ಶ. ೧೫೨೧-೧೫೨೪)**

ಮುಮ್ಮಡಿ ನರಸಿಂಹನಾಯಕನು ಕೇವಲ ೪ ವರ್ಷಗಳ ಕಾಲ ಮಾತ್ರ ರಾಜ್ಯಭಾರ ಮಾಡಿದನು ನಂತರ ತನ್ನ ಮನನಾದ ಇಮ್ಮಡಿ ವಸಂತನಾಯಕನಿಗೆ ಪಟ್ಟ ಕಟ್ಟಿ ಆಡಳಿತದಿಂದ ದೂರ ಉಳಿದನು.

*** ಇಮ್ಮಡಿ ವಸಂತನಾಯಕ (ಕ್ರಿ.ಶ. ೧೫೨೪-೧೫೪೮)**

ಇಮ್ಮಡಿ ವಸಂತನಾಯಕನು ಕ್ರಿ.ಶ. ೧೫೨೪ರಿಂದ ೧೫೪೮ವರೆಗೆ ಸುಮಾರು ೨೪ ವರ್ಷಗಳ ಕಾಲ ರಾಜ್ಯಭಾರ ಮಾಡಿದ. ಇಮ್ಮಡಿ ವಸಂತನಾಯಕನು ವಿಜಯನಗರದ ಅರಸರ ಬಗ್ಗೆ ನಿಷ್ಠೆಯಿಂದ ಇದ್ದನು. ಈತ ತನ್ನ ಪುತ್ರನಾದ ವೀರದಾಸಪ್ಪ ನಾಯಕನಿಗೆ ಕ್ರಿ.ಶ. ೧೫೪೮ರಲ್ಲಿ ರಾಜ್ಯಾಭಿಷೇಕ ಮಾಡಿ ತಾನು ವಿರಕ್ತನಾದನು.

*** ವೀರದಾಸಪ್ಪ ನಾಯಕ (ಕ್ರಿ.ಶ. ೧೫೪೮-೧೫೮೪)**

ವೀರದಾಸಪ್ಪನು ವಿಜಯನಗರದ ಅರಸು ರಾಮರಾಯನ ಅಮರನಾಯಕನಾಗಿದ್ದ. ತನ್ನ ಪೂರ್ವಿಕರಂತೆ ತಾನು ಕೂಡ ವಿಜಯನಗರದ ದೊರೆಗಳಿಗೆ ಸ್ವಾಮಿನಿಷ್ಠೆಯನ್ನು ತೋರಿಸುತ್ತಿದ್ದ. ಈತನ ಅಧಿಕಾರವಧಿಯಲ್ಲಿ ವಿಜಯನಗರ ಸಾಮ್ರಾಜ್ಯದ ವಿನಾಶಕ್ಕೆ ಕಾರಣವಾದ ತಾಳಿಕೋಟೆ ಯುದ್ದ ನಡೆಯಿತು. ಕ್ರಿ.ಶ. ೧೫೬೫ರ ತಾಳಿಕೋಟೆಯ ಯುದ್ಧದಲ್ಲಿ ವಿಜಯನಗರದ ಪರವಾಗಿ ವೀರದಾಸಪ್ಪ ಬಹಳ ಪರಾಕ್ರಮದಿಂದ ಹೋರಾಡಿದ. ಆದರೆ ವಿಜಯನಗರ ಸಂಪೂರ್ಣ ಪತನವಾಯಿತು. ಹೀಗಾಗಿ ವಿಜಯನಗರಕ್ಕೆ ಬಲಿಷ್ಠ ರಕ್ಷಣಾ ಗೋಡೆಗಳಂತಿದ್ದ ಅಮರನಾಯಕರಲ್ಲಿ ಬಹುತೇಕರು ಹೊರಬಂದು ತಮ್ಮ ಸೀಮೆಗಳಲ್ಲಿ ಸ್ವತಂತ್ರ ಪಾಳೆಯಗಾರರಾದರು. ಆದರೆ ವಿಜಯನಗರಕ್ಕೆ ನಿಷ್ಠೆಯನ್ನು ಬದಲಿಸದ ವೀರದಾಸಪ್ಪ ನಾಯಕನು ಸೋತ ಅರಸರಿಗೆ ವಿಧೇಯಕನಾಗಿಯೇ ಇದ್ದನು. ಶ್ರೀರಂಗಪಟ್ಟಣದ ರಂಗನಾಥ ದೇವಾಲಯದ ಜೀರ್ಣೋದ್ಧಾರದ ಹೊಣೆಯನ್ನು ಶ್ರೀರಂಗರಾಯನು ವೀರದಾಸಪ್ಪ ನಾಯಕನಿಗೆ ವಹಿಸಲಾದಾಗ ನಾಯಕನು ೨೦೦೦ ಮಂದಿ ಗಾರೆ ಕೆಲಸದವರೊಂದಿಗೆ ಹೋಗಿ ದೇವಾಲಯದ ಪೂರ್ವ ದಿಕ್ಕಿನ ಮೂರು ಗೋಪುರಗಳನ್ನು ಸ್ವಂತ

ಖರ್ಚಿನಿಂದ ನಿರ್ಮಿಸಿದನು. ವೀರದಾಸಪ್ಪ ನಾಯಕ ತನ್ನ ಸೀಮೆಯಲ್ಲಿ ಕುದುರೆ, ಆನೆ ಹಾಗೂ ಕಾಲ್ದಳವನ್ನು ವ್ಯವಸ್ಥೆಗೊಳಿಸಿ ತನ್ನ ಸೀಮೆಯ ಎಲ್ಲೆಯನ್ನು ನಿಗದಿಪಡಿಸಿಕೊಂಡನು. ತನ್ನ ಸೀಮೆಯ ಎಲ್ಲ ಕಟ್ಟುಗಳನ್ನು ಗುರುತು ಮಾಡಿ ಉಕ್ಕಡಗಳನ್ನು, ಪಹರೆ ಕಾವಲುಗಳನ್ನು ಏರ್ಪಡಿಸಿದನು. ಇವನ ಮರಣದ ನಂತರ ಇವನ ಮಗನಾದ ಮುಮ್ಮಡಿ ವಸಂತನಾಯಕ ೧೫೮೪ರಲ್ಲಿ ಅಧಿಕಾರಕ್ಕೆ ಬಂದನು.

*** ಮುಮ್ಮಡಿ ವಸಂತನಾಯಕ (ಕ್ರಿ.ಶ. ೧೫೮೪–೧೬೪೪)**

ಮುಮ್ಮಡಿ ವಸಂತನಾಯಕನು ಕ್ರಿ.ಶ. ೧೫೪೮ರಿಂದ ೧೬೪೪ರವರೆಗೂ ಗುಮ್ಮನಾಯಕ ಪಾಳೆಯವನ್ನು ರಾಜ್ಯಭಾರ ಮಾಡಿದನು. ಈ ವೇಳೆಗಾಗಲೇ ವಿಜಯನಗರ ಸಾಮ್ರಾಜ್ಯ ತುಂಬಾ ಶೋಚನೀಯ ಸ್ಥಿತಿಯಲ್ಲಿತ್ತು. ವಿಜಯನಗರದ ದೊರೆ ಶ್ರೀರಂಗರಾಯನು ಮೊಗಲ ಸಾಮ್ರಾಟ ಪ್ರತಿನಿಧಿಯಾದ ದಿಲಾವರ್‌ಖಾನನ ದುರಾಕ್ರಮಣವನ್ನು ಅಡಗಿಸಲು ಸಹಾಯ ಮಾಡುವಂತೆ ಕೋರಿದನು. ಆಗ ವಸಂತನಾಯಕನು ವಿಜಯನಗರ ಮಹಾರಾಜ ಶ್ರೀರಂಗರಾಯನ ಕೋರಿಕೆಯಂತೆ ವಿಜಯನಗರಕ್ಕೆ ಬಂದು ರಂಗರಾಯನ ಸೇನೆಯೊಂದಿಗೆ ದಿಲಾವರ್‌ಖಾನನನ್ನು ರಣರಂಗದಲ್ಲಿ ಎದುರಿಸಿದನು.

ರಣರಂಗದಲ್ಲಿ ಸೆರೆಸಿಕ್ಕ ದಿಲಾವರ್‌ಖಾನನ್ನು ಮತ್ತು ಅವನ ನಾಲ್ವರು ಸರದಾರರನ್ನು ಕೊಂದು ಹಾಕಿದನು. ಶ್ರೀರಂಗರಾಯನ ಆಣತಿಯಂತೆ ಶ್ರೀರಂಗದಲ್ಲಿ ಕೈಗೊಂಡಿದ್ದ ಶ್ರೀರಂಗನಾಥ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕೆ ಸಹಾಯ ಮಾಡಲು ಅನೇಕ ಶಿಲ್ಪಿಗಳನ್ನು ಕಳುಹಿಸಿದನು. ಹಾಗೂ ಧನಸಹಾಯವನ್ನು ಮಾಡಿದನು. ದೇವರನ್ನು ಅಲಂಕರಿಸಲು ರತ್ನಾಭರಣಗಳನ್ನು ದಾನ ಮಾಡಿದನು ಹಲವಾರು ರೀತಿಯಲ್ಲಿ ವಿಜಯನಗರ ಅರಸ ಶ್ರೀರಂಗರಾಯನಿಗೆ ಸಹಾಯ ಮಾಡುತ್ತಿದ್ದನು. ಮುಮ್ಮಡಿ ವಸಂತನಾಯಕನ ಸೇವೆಯಿಂದ ಸಂತೃಪ್ತನಾದ ಶ್ರೀರಂಗರಾಯನು ಗುಮ್ಮನಾಯಕನ ಪಾಳೆಯವು ಸಲ್ಲಿಸುತ್ತಿದ್ದ ಪೊಗಾದಿಯನ್ನು ಹತ್ತು ಸಹಸ್ರ ವರಹಗಳಿಂದ, ಆರು ಸಹಸ್ರ ವರಹಗಳಿಗೆ ಇಳಿಸಿದನು. ಇವನ ಮರಣದ ತರುವಾಯ ಇವನ ಮಗನಾದ ನಾಲ್ವಡಿ ನರಸಿಂಹನಾಯಕನು ಗುಮ್ಮನಾಯಕ ಪಾಳೆಯದ ಪಾಳೆಯಗಾರನಾಗಿ ಅಧಿಕಾರರೂಢನಾದನು.

*** ನಾಲ್ವಡಿ ನರಸಿಂಹನಾಯಕ (ಕ್ರಿ.ಶ. ೧೬೪೪–೧೬೮೦)**

ನಾಲ್ವಡಿ ನರಸಿಂಹನಾಯಕನ ಆಡಳಿತವು ಕ್ರಿ.ಶ. ೧೬೪೪ರಲ್ಲಿ ಆರಂಭವಾಯಿತು. ಈತ ತನ್ನ ತಂದೆ ವಸಂತನಾಯಕನಂತೆ ವಿಜಯನಗರದ ಅರಸರಿಗೆ ವಿಧೇಯಕನಾಗಿದ್ದು ವಾರ್ಷಿಕ ಪೊಗಾದಿ ಹಣವನ್ನು ಕೊಡುತ್ತಿದ್ದ. ನಾಲ್ವಡಿ ನರಸಿಂಹ ಆಳ್ವಿಕೆಯು ಆತ ಕೈಗೊಂಡ ಯುದ್ಧಗಳಿಗಿಂತಲೂ ಆತ ಜಾರಿಗೆ ತಂದ ಆಡಳಿತ ಸುಧಾರಣೆಗಳಿಗೆ ಹೆಸರುವಾಸಿಯಾಗಿದೆ. ಅತ್ಯುತ್ತಮ ಆಡಳಿತಗಾರನಾಗಿದ್ದ ನಾಲ್ವಡಿ ನರಸಿಂಹನಾಯಕನು ಗುಮ್ಮನಾಯಕ ಪಾಳೆಯದ ಒಡ್ಡೋಲಗದ ಚಾವಡಿಯನ್ನು ವಿಸ್ತಾರವಾಗಿ ಅಲಂಕೃತವಾಗಿ ಕಟ್ಟಿಸಿ, ಅಧಿಕಾರಿ ವಿದ್ವಾಂಸರ ನಡುವೆ ದರಬಾರು ಮಾಡಿ, ರಾಜ್ಯಭಾರದ

ವಿಚಾರಣೆಯನ್ನು ವಿಚಕ್ಷಣೆಯಿಂದ ಮಾಡುತ್ತಿದ್ದನು. ಇವನು ತನ್ನ ಕಾಲದಲ್ಲಿ ಪಾಳೆಯದ ಬೆಟ್ಟದ ಬುಡದಲ್ಲಿದ್ದ ಅರಮನೆಯನ್ನು ಹೊಸದಾಗಿ ಕಟ್ಟಿಸಿ, ರಾಣಿವಾಸದ ಕೋಟೆಯನ್ನು ಕಟ್ಟಿಸಿದ. ಅರಮನೆಯ ಮುಂಭಾಗದಲ್ಲಿ 'ಅಟ್ಟವಡಿ ಚಾವಡಿ' ಎಂಬ ಅಧಿಕಾರಿಗಳ ನೆಲೆ ಮಾಡಿ ರಾಜ್ಯದ ಶಿಸ್ತು ಮತ್ತು ಕಂದಾಯದ ಸಂಬಂಧದ ವ್ಯವಸ್ಥೆಯನ್ನು ಅದಕ್ಕೆ ವಹಿಸಿದ. ಬೊಕ್ಕಸದ ಚಾವಡಿಯನ್ನು ಕಟ್ಟಿಸಿ, 'ಗುರಿಕಾರ' ರಾಯಸದವರು ಮುಂತಾದವರಿಂದ ಹಣಕಾಸು ವ್ಯವಹಾರಗಳನ್ನು ವರದಿ ಮಾಡಲು ವ್ಯವಸ್ಥೆ ಮಾಡಿದ. ಠಾಣ್ಯದ ಚಾವಡಿಯಲ್ಲಿ ದೊಡ್ಡ ಗುರಿಕಾರರು, ಸೇರುವೆಗಾರರು, ಓಬಳಗಾರರು, ದಫೆದಾರರು, ಓಲೆಕರಾರುಗಳನ್ನು ನೇಮಿಸಿ, ಅವರಿಗೆ ಕಾವಲುಗಾರರನ್ನು ಏರ್ಪಡಿಸಿ. ಕಳ್ಳಕಾಕರು, ಪುಂಡರು, ಶತ್ರುಗಳು ಪ್ರವೇಶಿಸದಂತೆ ಬಿಗಿಮಾಡಿದ. ಗೋವಿನ ಚಾವಡಿಯನ್ನು ಕಟ್ಟಿ ದನಗಳ ಪೋಷಣೆ ಮಾಡಿ ಅವುಗಳ ಉಸ್ತುವಾರಿಗೆ ವ್ಯವಸ್ಥೆ ಮಾಡಿದ. ಸುಂಕದ ಛಾವಡಿಯಲ್ಲಿ ಮಣೆಗಾರರು, ಶಾನುಭೋಗರು, ಕೋಲುಕಾರರನ್ನು ಇರಿಸಿ ಬೆಳೆಗಳ ಮೇಲೆ, ಸಾರಾಯಿ ಅಂಗಡಿ ಸಾಮಾನು ಇತ್ಯಾದಿಗಳ ಮೇಲಿನ ಸುಂಕ ಹಾಗೂ ಬೇರೆ ದೇಶಗಳಿಂದ ಬಂದ ಮಾರಾಟವಾದ ಪದಾರ್ಥಗಳ ಮೇಲೆ ಸುಂಕವನ್ನು ವಸೂಲಿ ಮಾಡುವ ವ್ಯವಸ್ಥೆ ಮಾಡಿದ.

ಈ ಎಲ್ಲ ಚಾವಡಿಗಳ ಮೇಲೆ ಮೇಲ್ವಿಚಾರಣೆಗಾಗಿ ಸರ್ವಾಧಿಕಾರಿ ಇದ್ದ. ಸರ್ಕಾರಿ ನೌಕರರಿಗೆ ನಗದು ಸಂಬಳವನ್ನು ನೀಡಲಾಗುತ್ತಿತ್ತು. ಇಲ್ಲವೇ ದವಸ ರೂಪದಲ್ಲಾಗಲಿ ನೀಡಲಾಗುತ್ತಿತ್ತು. ಗ್ರಾಮದ ಅಧಿಕಾರಿಗಳಾಗಿ ರೆಡ್ಡಿ, ತೋಟಿ, ತಳಾರಿ, ನೀರಗಂಟಿ ಹಾಗೂ ಇತರ ಬಾರಾಬಲೂತಿಗಳನ್ನು ನೇಮಕ ಮಾಡಿದ. ನ್ಯಾಯಾಂಗ ಇಲಾಖೆ ಮತ್ತು ಕಂದಾಯ ಇಲಾಖೆಗಳನ್ನು ಸ್ಥಾಪಿಸಿದ. ಹೀಗೆ ಅತ್ಯುತ್ತಮ ಆಡಳಿತವನ್ನು ನೀಡಿದ ನಾಲ್ವಡಿ ನರಸಿಂಹನಾಯಕ ಕ್ರಿ.ಶ. ೧೬೮೦ರಲ್ಲಿ ಮರಣ ಹೊಂದಿದ.

* ಬಂಗಾರ ತಿಮ್ಮನಾಯಕ (ಕ್ರಿ.ಶ. ೧೬೮೦–೧೭೨೮)

ನಾಲ್ವಡಿ ವಸಂತರಾಯನ ಉತ್ತರಾಧಿಕಾರಿಯಾಗಿ ಕ್ರಿ.ಶ. ೧೬೮೦ರಲ್ಲಿ ಪಟ್ಟವೇರಿದ ಬಂಗಾರ ತಿಮ್ಮನಾಯಕನು ತನ್ನ ಪೂರ್ವಿಕರ ನೀತಿಯನ್ನು ಅನುಸರಿಸಿ, ವಿಜಯನಗರದ ಅರಸನಿಗೆ ವಿಧೇಯಕನಾಗಿದ್ದನು. ಈ ವೇಳೆಗಾಗಲೇ ವಿಜಯನಗರವು ತುಂಬಾ ದುರ್ಬಲವಾಗಿ, ಹೈದರಾಬಾದಿನ ಮುಸ್ಲಿಂ ನವಾಬರ ಹಾಗೂ ಮೊಗಲ್ ಸಾಮ್ರಾಜ್ಯದ ಪ್ರತಿನಿಧಿಯ ಆಕ್ರಮಣಕ್ಕೆ ಗುರಿಯಾಗಿತ್ತು. ಅದರ ಪರಿಣಾಮವಾಗಿ ಪಾಳೆಯಗಾರರೆಲ್ಲರೂ ಅಧಿಕ ಮೊತ್ತದ ಹಣವನ್ನು ಹೈದರಾಬಾದಿನ ನಿಜಾಮನ ಪ್ರತಿನಿಧಿ ಲಿಂಗಪ್ಪನಿಗೆ ಕೊಡಬೇಕಾಯಿತು. ಬಂಗಾರು ತಿಮ್ಮನಾಯಕನು ಮೃದು ಸ್ವಭಾವದವನು, ದಯಾಪರನೂ ಆಗಿದ್ದನು. ಇವನ ಅಸಮರ್ಥತೆಯಿಂದ ಗುಮ್ಮನಾಯಕನ ಪಾಳೆಯ ಕೆಲವು ವರ್ಷಗಳ ಕಾಲ ಹೈದರಾಬಾದಿನ ನಿಜಾಮನ ವಶಕ್ಕೂ ನಂತರ ಮೊಗಲ್ ಚಕ್ರವರ್ತಿಗಳ ಅಧೀನಕ್ಕೆ ಒಳಪಡುವಂತಾಯಿತು ಹೀಗೆ ಗುಮ್ಮನಾಯಕ ಪಾಳೆಯ ಅವನತಿಯ ಪತದತ್ತ ನಡೆಯಲಾರಂಭಿಸಿತು.

* **ಮುಮ್ಮಡಿ ಕದಿರಪ್ಪ ನಾಯಕ (ಕ್ರಿ.ಶ. ೧೭೨೮-೧೭೪೦)**

ಮುಮ್ಮಡಿ ಕದಿರಪ್ಪ ನಾಯಕನು ಬಂಗಾರು ತಿಮ್ಮನಾಯಕನ ಮೊಮ್ಮಗನಾಗಿದ್ದನು. ಈತನ ಅಧಿಕಾರದ ವೇಳೆಗೆ ದಕ್ಷಿಣ ಭಾರತದಲ್ಲಿ ಮರಾಠ ಪ್ರಾಬಲ್ಯ ಹೆಚ್ಚಾಗಿತ್ತು. ಮರಾಠರ ಒಂದನೇ ಪೇಶ್ವೆ ಬಾಜಿರಾಯನನ್ನು ಎದುರಿಸಲು ಅಸಮರ್ಥನಾಗಿದ್ದ ಮುಮ್ಮಡಿ ಕದಿರಪ್ಪ ನಾಯಕನು ಮರಾಠರ ಅಧಿಪತಿಗೆ ೨೫,೦೦೦ ವರಹಗಳ ಕಪ್ಪವನ್ನು ಕೊಡಬೇಕಾಯಿತು.

* **ಐಮುಡಿ ನರಸಿಂಹನಾಯಕ (ಕ್ರಿ.ಶ. ೧೭೧೦-೧೭೬೦)**

ಮುಮ್ಮಡಿ ಕದಿರಪ್ಪ ನಾಯಕನ ಮರಣದ ತರುವಾಯ ಕ್ರಿ.ಶ. ೧೭೧೦ರಲ್ಲಿ ಅವನ ಪುತ್ರನಾದ ಐದನೆಯ ನರಸಿಂಹನಾಯಕ ಪಾಳೆಯಗಾರನಾಗಿ ಅಧಿಕಾರ ವಹಿಸಿಕೊಂಡನು. ತನ್ನ ಪಾಳೆಯಪಟ್ಟನ್ನು ವಿಸ್ತರಿಸಲು ಹಲವಾರು ಕ್ರಮಗಳನ್ನು ಕೈಗೊಂಡನು. ಮರಾಠರ ಪೇಶ್ವೆ ಬಾಜಿರಾಯನಿಂದ ೨೫ ಸಹಸ್ರ ರೂಪಾಯಿಗಳಿಗೆ ಗೋರಂಟ್ಲ ಸಮ್ಮತ್ತು ಪ್ರದೇಶವನ್ನು ಕೊಂಡುಕೊಂಡನು. ಆ ಪ್ರದೇಶಕ್ಕೆ 'ಕೋಡಿಕೊಂಡ' ಎಂಬುದಾಗಿ ನಾಮಕರಣ ಮಾಡಿದನು. ಅಲ್ಲಿ ದುರ್ಗವೊಂದನ್ನು ಕಟ್ಟಿಸಿದನು.

ಗುಮ್ಮನಾಯಕ ಪಾಳೆಯದ ಸುತ್ತಮುತ್ತಲ ಪ್ರದೇಶಗಳಲ್ಲಿ ಕೆರೆಗಳನ್ನು, ಪುಷ್ಕರಣಿಗಳನ್ನು ನಿರ್ಮಿಸಿದನು. ಈ ಪಾಳೆಯಗಾರನ ಆಳ್ವಿಕೆಯಲ್ಲಿ ಕಲಾವಿದರಿಗೂ, ಶಿಲ್ಪಿಗಳಿಗೂ ಉತ್ತೇಜನ ದೊರೆಯಿತು. ಹಾಗೂ ರಾಜ್ಯದ ಆದಾಯ ನಲವತ್ತು ಸಹಸ್ರ ವರಹಗಳಿಗೇರಿತು. ಮರಾಠರ ಸೇನಾಧಿಪತಿಯಾದ. ಗೋಪಾಲರಾಯನು ಗುಮ್ಮನಾಯಕನ ಪಾಳೆಯಕ್ಕೆ ಸೇರಿದ್ದ ಕಂದಕೂರು ತಾಲ್ಲೂಕನ್ನು ವಶಪಡಿಸಿಕೊಂಡು ಪ್ರತಿವರ್ಷ ನಲವತ್ತು ಸಾವಿರ ರೂಪಾಯಿಗಳನ್ನು ಪೊಗಾದಿಯಾಗಿ ಕೊಡಬೇಕೆಂದು ಒತ್ತಾಯಿಸಿದನು. ಆದರೆ ಐದನೆಯ ನರಸಿಂಹನಾಯಕನು ಪೇಶ್ವೆಯ ಮನ ಒಲಿಸಿಕೊಂಡು ಆ ಪ್ರದೇಶವನ್ನು ಮತ್ತೆ ಪಡೆದುಕೊಂಡನು. ಆದರೆ ಐದನೆಯ ನರಸಿಂಹನಾಯಕನ ದುರದೃಷ್ಟವೆಂಬಂತೆ ಹೈದಾರಾಬಾದಿನ ನಿಜಾಮನ ಸಾಮಂತನಾಗಿದ್ದ ಮುರಾರಿರಾಯನೆಂಬ ಮರಾಠನ 'ಕೋಡಿಕೊಂಡ'ವನ್ನು ತನ್ನ ಸೇನೆಯ ಬಲದಿಂದ ವಶಪಡಿಸಿಕೊಂಡು ೨೫ ಸಹಸ್ರ ರೂಪಾಯಿಗಳನ್ನು ಪೊಗಾದಿಯಾಗಿ ಕೊಡಬೇಕೆಂದು ಒತ್ತಾಯಿಸಿದನು. ಈ ವೇಳೆಯಲ್ಲಿ ಮೈಸೂರಿನ ಸರ್ವಾಧಿಕಾರಿಯಾಗಿದ್ದ ಹೈದರಾಲಿ ಗುಮ್ಮನಾಯಕ ಪಾಳೆಯದ ಮೇಲೆ ದಂಡೆತ್ತಿ ಬಂದು ವಶಪಡಿಸಿಕೊಂಡನು. ಮೀರ್ ಸಾಹೇಬ್ ಎಂಬುವವನನ್ನು ಗುಮ್ಮನಾಯಕ ಪಾಳೆಯದ ಜಹಗೀರುದಾರನನ್ನಾಗಿ ನೇಮಿಸಿದನು. ನರಸಿಂಹನಾಯಕನು ಹೈದಾರಾಲಿಯೊಂದಿಗೆ ಸಂಧಾನ ಮಾಡಿಕೊಂಡ ಫಲವಾಗಿ ಹೈದರಾಲಿಯು ಗುಮ್ಮನಾಯಕ ಪಾಳೆಯನ್ನು ನರಸಿಂಹನಾಯಕನಿಗೆ ಹಿಂತಿರುಗಿಸಿದನು. ನಿಜಾಮನ ವಶದಲ್ಲಿದ್ದ ಕೋಡಿಕೊಂಡವು ಹೈದರಾಲಿಯ ವಶಕ್ಕೆ ಬಂದುದರಿಂದ, ನರಸಿಂಹನಾಯಕನು ಹೈದರಾಲಿಯ ಮೊರೆಹೊಕ್ಕು ಅವನ ಸಹಾನುಭೂತಿಯಿಂದ ಕೋಡಿಕೊಂಡ ಪ್ರದೇಶವನ್ನು ಪುನಃ ಗಳಿಸಿಕೊಂಡನು. ಆದರೆ 'ಕೋಡಿಕೊಂಡ' ಪ್ರಾಂತ್ಯವನ್ನು ಗುಮ್ಮನಾಯಕನ ಪಾಳೆಯಗಾರರಿಗೆ ಹಿಂತಿರುಗಿಸಬೇಕೆಂದು ಹೈದರಾಲಿಯು ಮೀರ್ ಸಾಹೇಬ್‌ನಿಗೆ ಆದೇಶ ನೀಡಿದರೂ ಅವನು ಹೈದರನ ಆಜ್ಞೆಯನ್ನು

ಉಲ್ಲಂಘಿಸಿದನು. ತೀವ್ರವಾಗಿ ಅನಾರೋಗ್ಯದಿಂದ ತತ್ತರಿಸಿದ ನರಸಿಂಹನಾಯಕನು ತನ್ನ ಪತ್ನಿಯಾದ ರಾಮಕ್ಕ ನಾಯಕಿಗೆ ಅಧಿಕಾರವನ್ನು ವಹಿಸಿಕೊಟ್ಟನು.

*** ರಾಮಕ್ಕ ನಾಯಕಿ (ಕ್ರಿ.ಶ. ೧೭೬೦)**

ಗುಮ್ಮನಾಯಕ ಪಾಳೆಯಗಾರರಲ್ಲಿ ಮೊದಲ ಮಹಿಳಾ ಪಾಳೆಯಗಾರ್ತಿ ಎಂದರೆ ರಾಮಕ್ಕ ನಾಯಕಿ (ನಾಯಕರಾಲು). ಈಕೆ ತನ್ನ ಪತಿ ಐಮುಡಿ ನರಸಿಂಹನಾಯಕನ ಅನಾರೋಗ್ಯ ಪರಿಸ್ಥಿತಿಯಲ್ಲಿ ಅಧಿಕಾರದ ಚುಕ್ಕಾಣಿಯನ್ನು ಹಿಡಿದಳು. ನರಸಿಂಹನಾಯಕನ ಅನಾರೋಗ್ಯ ಲಾಭ ಪಡೆದುಕೊಂಡು ದಳವಾಯಿ ಸಾನಿ ನರಸಿಂಹಯ್ಯನು, ಪಾಳೆಯದ ಇಟ್ಟಿಕಲ್ಲುದುರ್ಗವನ್ನು ವಶಪಡಿಸಿಕೊಂಡು ತನ್ನ ಹೆಸರಿನಲ್ಲಿಯೇ ಆಡಳಿತವನ್ನು ನಡೆಸಲು ಆಜ್ಞೆಗಳನ್ನು ಹೊರಡಿಸಿದನು. ಚತುರಳಾದ ರಾಣಿ ರಾಮಕ್ಕ ದಳವಾಯಿಯ ದುರುದ್ದೇಶವನ್ನು ಅರಿತು ಪೇಶ್ವೆ ಬಾಜಿರಾಯನ ದಳಪತಿ ಮುರಾರಿರಾಯನ ಸಹಾಯದಿಂದ ನರಸಿಂಹಯ್ಯ ಮರಾಠಿಗರಿಗೆ ಹಣ ನೀಡಿ ತನ್ನ ಪರ ಒಲಿಸಿಕೊಂಡನು. ಆದರೆ ರಾಣಿ ರಾಮಕ್ಕ ತನ್ನ ಸಾಮಂತರೆಲ್ಲರ ಬೆಂಬಲದೊಂದಿಗೆ ದಳವಾಯಿ ನರಸಿಂಹಯ್ಯನ ವಿರುದ್ಧ ೧೭೫೦ರಲ್ಲಿ ದಡಿಗಂ ಬಳಿ ಯುದ್ಧ ಘೋಷಿಸಿದಳು. ಯುದ್ಧದಲ್ಲಿ ಸೋತು ಸೆರೆಸಿಕ್ಕ ನರಸಿಂಹಯ್ಯನನ್ನು ರಾಮಕ್ಕನ ಬಳಿ ಕರೆತಂದಾಗ ಮಾನವೀಯತೆಯ ದೃಷ್ಟಿಯಿಂದ ಅವನಿಗೆ ಜೀವದಾನ ಮಾಡಿದಳು ಮತ್ತು ಅವನಿಗೆ ಸ್ವಲ್ಪ ಜೀವನಾಂಶವನ್ನು ಮಂಜೂರು ಮಾಡಿದಳು. ದಕ್ಷ ಆಡಳಿತಗಾರಳೆಂದು ಪ್ರಸಿದ್ಧಿಯನ್ನು ಪಡೆದ ರಾಮಕ್ಕ ನಾಯಕ ತನ್ನ ಹೆಸರಿನಲ್ಲಿ ದೊಡ್ಡ ಜಲಾಶಯವನ್ನು ನಿರ್ಮಿಸಿದಳು. ದಿನ ದಿನಕ್ಕೂ ರಾಮಕ್ಕ ನಾಯಕಿ ಪ್ರಬಲಳಾಗುತ್ತಿರುವುದನ್ನು ಗಮನಿಸಿದ ಹೈದರಾಲಿಯು ರಾಮಕ್ಕ ನಾಯಕಿಯ ಏಳಿಗೆಯನ್ನು ಸಹಿಸಲಾರದೆ ಕ್ರಿ.ಶ. ೧೭೬೦ರಲ್ಲಿ ಗುಮ್ಮನಾಯಕ ಪಾಳೆಯದ ಮೇಲೆ ಯುದ್ಧ ಮಾಡಿದನು. ಸೋತು ಅಸಹಾಯಕ ಸ್ಥಿತಿಯಲಿದ್ದ ರಾಮಕ್ಕ ನಾಯಕಿಯನ್ನು ಸೆರೆಹಿಡಿದು ಬಂಧಿಸಲಾಯಿತು. ಇಲ್ಲಿಗೆ ಗುಮ್ಮನಾಯಕ ಪಾಳೆಯದ ಮಹಿಳಾ ನಾಯಕಿಯ ಆಡಳಿತ ಅಂತ್ಯಗೊಂಡಿತು. ಅಪಾರ ದೈವಭಕ್ತೆಯಾಗಿದ್ದ ರಾಮಕ್ಕ ನಾಯಕಿ ೧೭೪೫ರಲ್ಲಿ ಜೂಲುಪಾಳ್ಯ ಗ್ರಾಮವನ್ನು ಶೃಂಗೇರಿಯ ನರಸಿಂಹ ಭಾರತಿ ಸ್ವಾಮಿಗಳಿಗೆ ಬಳುವಳಿಯಾಗಿ ನೀಡಿದ ದಾಖಲೆಯಿದೆ.

*** ನಾಲ್ವಡಿ ವಸಂತನಾಯಕ (ಕ್ರಿ.ಶ. ೧೭೬೦-೧೭೬೫)**

ಐದನೆಯ ನರಸಿಂಹನಾಯಕ ಉತ್ತರಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ನಾಲ್ಮಡಿ ವಸಂತನಾಯಕನು ಹೈದರಾಲಿಗೆ ಅತಿ ನಿಷ್ಠೆಯಿಂದ ನಡೆದುಕೊಂಡನು. ವಸಂತನಾಯಕನು ನಾಮಮಾತ್ರ ಪಾಳೆಯಗಾರನಾಗಿದ್ದ. ಈತ ತನ್ನ ಆಡಳಿತಾವಧಿಯಲ್ಲಿ ಯಾವ ಮಹತ್ಕಾರ್ಯವನ್ನು ಮಾಡಲಿಲ್ಲ.

*** ಆರ್ಮಡಿ ನರಸಿಂಹನಾಯಕ (ಕ್ರಿ.ಶ. ೧೭೬೫-೧೮೦೩)**

ಆರ್ಮಡಿ ನರಸಿಂಹನಾಯಕ ಗುಮ್ಮನಾಯಕ ಪಾಳೆಯದ ಕೊನೆಯ ದೊರೆ. ಈತನ ಅಧಿಕಾರದ ಅವಧಿಯಲ್ಲಿ ಗುಮ್ಮನಾಯಕ ಪಾಳೆಯವು ಅವನತಿಯಾಯಿತು. ಈತ ಕ್ರಿ.ಶ. ೧೭೬೫ರಿಂದ

೧೮೦೨ ರಾಜ್ಯಭಾರವನ್ನು ಮಾಡಿದನು. ತನ್ನ ಹಿಂದಿನವರು ಕಳೆದುಕೊಂಡಿದ್ದ 'ಕೋಡಿಕೊಂಡ' ಮತ್ತೆ ಪಡೆಯಬೇಕೆಂಬುದು ಅವನ ಮಹತ್ವಾಕಾಂಕ್ಷೆಯಾಗಿತ್ತು. ಆದರೆ ಮೀರ್ ಸಾಹೇಬನ ಕುತಂತ್ರದಿಂದ ಆರನೇ ನರಸಿಂಹನಾಯಕನ ಪ್ರಯತ್ನಗಳೆಲ್ಲವೂ ನೀರಿನಲ್ಲಿ ಮಾಡಿದ ಹೋಮದಂತಾದವು. ೧೭೮೨ರಲ್ಲಿ ಪಟ್ಟಕ್ಕೆ ಬಂದ ಟಿಪ್ಪು ಸುಲ್ತಾನನ ಕಾಲದಲ್ಲಿ ಬಹುತೇಕ ಪಾಳೆಯಪಟ್ಟುಗಳು ನಿರ್ನಾಮಗೊಂಡವು. ಟಿಪ್ಪು ಸುಲ್ತಾನನು ಮೀರ್ ಸಾಹೇಬನ ಸುಳ್ಳು ವರದಿಗಳನ್ನು ನಂಬಿಕೊಂಡು ಪಾಳೆಯಪಟ್ಟುಗಳ ನಾಶಕ್ಕಾಗಿ ಸುಗ್ರಿವಾಜ್ಞೆ ಹೊರಡಿಸಿದನು. ಇಂತಹ ಸಂದರ್ಭಕ್ಕಾಗಿ ಕಾದು ಕುಳಿತಿದ್ದ ಮೀರ್ ಸಾಹೇಬನು ಸೈನ್ಯ ಸಮೇತ ಹೋಗಿ ಗುಮ್ಮನಾಯಕ ಪಾಳೆಯದ ಮೇಲೆ ದಾಳಿ ಮಾಡಿದನು. ಮೀರ್ ಸಾಹೇಬ ಕುತಂತ್ರಗಳನ್ನು ಬಯಗೆಳೆಯಲು ನಿರ್ಧರಿಸಿದ್ದ ಆರನೇ ನರಸಿಂಹ ನಾಯಕನು ಪತ್ರವೊಂದನ್ನು ಬರೆದ ಟಿಪ್ಪುವಿನ ಬಳಿ ಕಳುಹಿಸಿದನು. ಆದರೆ ಮೀರ್ ಸಾಹೇಬ ಓಲೆಕಾರರನ್ನು ಮಧ್ಯದಲ್ಲಿಯೇ ತಡೆದು ಕೊಲೆ ಮಾಡಿಸಿದನು. ಪರಿಸ್ಥಿತಿ ತನ್ನ ಕೈ ಮೀರಿದ್ದನ್ನು ಗಮನಿಸಿದ ಆರನೇ ನರಸಿಂಹನಾಯಕ ತನ್ನ ನಗ ನಾಣ್ಯಗಳನ್ನೆಲ್ಲ ತೆಗೆದುಕೊಂಡು ಕುಟುಂಬ ಸಮೇತವಾಗಿ ದೋಣಿ ಬೈಲೆಗೆ ಓಡಿಹೋದನು.

ಮೂರನೆಯ ಆಂಗ್ಲೋ ಮೈಸೂರು ಯುದ್ಧದ ಸಮಯದಲ್ಲಿ ಟಿಪ್ಪುವಿನ ವೈರಿಗಳಾದ ಬ್ರಿಟಿಷರ ನೆರವನ್ನು ಆರನೆಯ ನರಸಿಂಹನಾಯಕ ಯಾಚಿಸಿದನು.[೨೯] ಜನರಲ್ ಮೆಡೋಸನು ಟಿಪ್ಪು ವೈರಿಗಳಾದ ಮೈಸೂರಿನ ರಾಣಿ ಲಕ್ಷ್ಮಮ್ಮಣಿಯವರಿಗೂ ಹಾಗೂ ಆರನೇ ನರಸಿಂಹನಾಯಕನಿಗೂ ಸಹಾಯ ನೀಡುವ ಭರವಸೆ ನೀಡಿದನು. ಆರನೇ ನರಸಿಂಹನಾಯಕನ ಕೋರಿಕೆಯಂತೆ ಮೆಡೋಸನು ಗುಮ್ಮನಾಯಕ ಪಾಳ್ಯದ ಆಡಳಿತವನ್ನು ನೀಡಿದನು. ಆದರೆ ಅದು ಕ್ಷಣಿಕವಾಗಿತ್ತು. ಪುನಃ ಗುಮ್ಮನಾಯಕ ಪಾಳೆಯ ಮೈಸೂರಿಗೆ ಸೇರಿತು.

ಗುಮ್ಮನಾಯಕ ಪಾಳೆಯಗಾರರ ಅವನತಿ

ಗುಮ್ಮನಾಯಕ ಪಾಳೆಯಗಾರರ ಅವನತಿಯು ಕ್ರಿ.ಶ. ೧೬೮೦ರಿಂದಲೇ ಪ್ರಾರಂಭವಾಯಿತು. ಗುಮ್ಮನಾಯಕ ಪಾಳೆಯದ ಪಾಳೆಯಗಾರನಾದ ಬಂಗಾರು ತಿಮ್ಮನಾಯಕ ಕಾಲದಿಂದ ಪ್ರಾರಂಭವಾದ ಅವನತಿಯ ಹಾದಿಯು ಕ್ರಿ.ಶ. ೧೭೯೯ರ ಆರನೇ ನರಸಿಂಹ ಕಾಲದಲ್ಲಿ ಪೂರ್ಣಗೊಂಡಿತು. ವಿಜಯನಗರ ಸಾಮ್ರಾಜ್ಯದ ಅವನತಿಯೊಂದಿಗೆ ಗುಮ್ಮನಾಯಕ ಪಾಳೆಯದ ಅವನತಿಯ ಹಾದಿ ಸುಗಮಗೊಂಡಿತು. ಹೈದರಾಬಾದಿನ ನಿಜಾಮರು, ಮರಾಠರು, ಹೈದಾರಲಿ, ಟಿಪ್ಪು ಇವರ ರಾಜಕೀಯ ಚದುರಂಗದಾಟದಲ್ಲಿ ಗುಮ್ಮನಾಯಕ ಪಾಳೆಯದ ಸ್ವಾತಂತ್ರ್ಯ ಸ್ವಾಭಿಮಾನ ಪಗಡೆಯ ದಾಳದಂತೆ ಉರುಳುತ್ತಲೇ ಹೋಯಿತು. ಗುಮ್ಮನಾಯಕ ಪಾಳೆಯವು ಕೊನೆಗೆ ೧೭೯೨ರ ಮೂರನೇ ಆಂಗ್ಲೋ ಮೈಸೂರು ಯುದ್ಧ ನಂತರ ಗುಮ್ಮನಾಯಕ ಪಾಳೆಯ ಮತ್ತೊಮ್ಮೆ ಪಾಳೆಗಾರರ ಕೈ ಬಿಟ್ಟು ಹೋಯಿತು. ೧೭೯೯ರಲ್ಲಿ ನಡೆದ ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದ ತರುವಾಯ ಬ್ರಿಟಿಷರು ಮೈಸೂರು ಆಡಳಿತವನ್ನು ಕೃಷ್ಣರಾಜ ಒಡೆಯರಿಗೆ ಹಸ್ತಾಂತರಿಸಿದರು.

ಕೃಷ್ಣರಾಜ ಒಡೆಯರ ನೆರವಿಗೆ ದಿವಾನ್ ಪೂರ್ಣಯ್ಯನವರನ್ನು ನೇಮಿಸಿದರು. ಜನರಲ್ ಹ್ಯಾರಿಸನ ಆಶ್ವಾಸನೆಯ ಹೊರತಾಗಿಯೂ ಪೂರ್ಣಯ್ಯನವರು ಕೊಟ್ಟ ಭರವಸೆಯನ್ನು ಈಡೇರಿಸಲಿಲ್ಲ. ಪೂರ್ಣಯ್ಯನವರು ಭೇಟಿಯಾಗಲು ಹೊರಟ ಆರ್ಮುಡಿ ನರಸಿಂಹನಾಯಕನು, ಮಾರ್ಗ ಮಧ್ಯದಲ್ಲಿಯೇ ಮರಣ ಹೊಂದಿದನು. ಹೀಗೆ ಗುಮ್ಮನಾಯಕ ಪಾಳೆಯದ ಇತಿಹಾಸವು ಅಂತ್ಯಗೊಂಡಿತು.[೩೦]

ವಿಜಯನಗರ ಸಾಮ್ರಾಜ್ಯ ಮತ್ತು ಗುಮ್ಮನಾಯಕ ಪಾಳೆಯ ನಡುವಿನ ಸಂಬಂಧಗಳು

ಕ್ರಿ.ಶ. ೧೨೪೩ರಿಂದ ೧೮೦೩ರವರೆಗೆ ಆಡಳಿತ ನಡೆಸಿದ ಗುಮ್ಮನಾಯಕ ಪಾಳೆಯಗಾರು ಈ ವಂಶದ ೪ನೆಯ ಪಾಳೆಗಾರನಾದ ಗುಮ್ಮನಾಯಕ ಕಾಲದಿಂದ ಅಂದರೆ ಕ್ರಿ.ಶ. ೧೪೯೬ ರಿಂದ ಬಂಗಾರು ತಿಮ್ಮನಾಯಕನ ಕಾಲದವರೆಗೆ (೧೭೬೮ರವರೆಗೆ) ವಿಜಯನಗರದ ಅಮರನಾಯಕರಾಗಿದ್ದರು. ಗುಮ್ಮನಾಯಕ ಪಾಳೆಯದ ಪಾಳೆಯಗಾರರು ವಿಜಯನಗರದೊಡನೆ ಅತ್ಯಂತ ವಿಧೇಯವಾಗಿ ನಡೆದುಕೊಳ್ಳುವುದರೊಂದಿಗೆ ರಾಜಮನ್ನಣೆಗೆ ಪಾತ್ರವಾದರು. ಸಂಸ್ಥಾನ ದರ್ಜೆಯ ಸ್ಥಾನಮಾನಗಳನ್ನು ಪಡೆದುಕೊಂಡರು. ಶಾಸನಗಳು ಕೂಡ ಗುಮ್ಮನಾಯಕ ಪಾಳೆಯದ ಪಾಳೆಯಗಾರರು ವಿಜಯನಗರ ಸಾಮ್ರಾಜ್ಯದ ಮೊದಲ ವರ್ಗದ ಅಮರನಾಯಕರಾಗಿದ್ದರು ಎಂಬುದನ್ನು ಸಮರ್ಥಿಸುತ್ತವೆ.

ಅಂತಹ ಕೆಲವು ಪ್ರಮುಖ ಶಾಸನಗಳನ್ನು ಮಾತ್ರ ಇಲ್ಲಿ ವಿಶ್ಲೇಷಿಸಲಾಗಿದೆ. ಕ್ರಿ.ಶ. ೧೪೧೮ರ ಕೋಡವಾರಪಲ್ಲಿ ಶಾಸನವು ತೆಲುಗು ಭಾಷೆಯಲ್ಲಿದ್ದು "ಶ್ರೀ ಮನ್ಮಹಾನಾಯಕಾಚಾರ್ಯ ಲಪ್ಪ ಬೊಮ್ಮನಾಯಡುನ್ನು ಸಂಗಮನಾಯುಡುನ್ನು ಪೆದ್ದ ಚೆನ್ನಮನಾಯುಡು ಅಂದರೆ ಮಹಾನಾಯಕಚಾರ್ಯ ಬೊಮ್ಮನಾಯಕ ಸಂಗಮನಾಯಕ ಹಾಗೂ ಹಿರೆ ಚಿಂನಮನಾಯಕರು ಸೇರಿ ಗುಡಿಚೋಟ ಗಂಗ ಸಮುದ್ರ ಕೆರೆಯನ್ನು ಕಟ್ಟಿಸಿಕೊಟ್ಟ ವಿಷಯವನ್ನು ಹೇಳುತ್ತದೆ. ಇಲ್ಲಿ ಕೋಲಾರದಂತಹ ಒಣ ಪ್ರದೇಶದಲ್ಲಿ ಗುಮ್ಮನಾಯಕ ಪಾಳೆಯ ಪಟ್ಟಿನ ನಾಯಕರು ಕೆರೆಗಳ ನಿರ್ಮಾಣಕ್ಕೆ ಪ್ರೋತ್ಸಾಹ ಕೊಟ್ಟ ಸಂಗತಿಯು ಸೂಚಿತವಾಗಿದೆ. ವಿಜಯನಗರದ ಸಂಗಮ ದೊರೆ ದೇವರಾಯನ ಕಾಲದ ಮೊದಲ ವರ್ಗದ ಅಮರನಾಯಕರ ಈ ಪಾಳೆಯ ಪಟ್ಟಿನಲ್ಲಿ ಸಂಗಮ ವಂಶದ ಮೇಲಿನ ಅಭಿಮಾನದಿಂದ ಆ ವಂಶದ ಹೆಸರನ್ನು ಧರಿಸಿರುವುದು; ಮೂರನೆ ಗುಮ್ಮನಾಯಕ ಪಾಳೆಯ ಪಟ್ಟಿನ ದೊರೆ ಚಿಂನಮನಾಯಕರ ಹೆಸರನ್ನು ವಂಶಿಕರು ಪರಂಪರಾಗತ ಮಾಡಿರುವುದು ಮಹಾನಾಯಕಚಾರ್ಯ ಬಿರುದಿನ ಮೌಲ್ಯವನ್ನು ಮುಂದುವರಿಸಿರುವುದು ಕಂಡುಬರುತ್ತದೆ. ಒಟ್ಟಿನಲ್ಲಿ ವಿಜಯನಗರದ ಪ್ರಭಾವ ದಟ್ಟವಾಗಿರುವುದನ್ನು ತಿಳಿಯಬಹುದು.

ಕ್ರಿ.ಶ. ೧೫೨೭ರ ಬೈರಕೂರು ಶಾಸನದಲ್ಲಿ ಶ್ರೀ ಮನ್ಮಹಾನಾಯಕಚಾರ್ಯರಾದ ಯರ್‍ರಿ ತಿಮ್ಮನಾಯಕರ ಕುಮಾರ ಮುತ್ತೋಜನಾಗಿನಾಯಕ ಪಾತ್ರನ ಅಧಿಕಾರಿ ನಾಗ (..) (ತಂಮ) ಪ ಗೌಂಡರ ಕಾರ್ಯಾರ್ಕರ್ತ ಚಿಕ್ಕಪಶೆಟ್ಟಿ ತಂಬಿನಪನು ತಮ್ಮನಾಯಕ ಹಾಗೂ ತಂಮಪ ಗೌಡರಿಗೆ ಪುಣ್ಯವಾಗಬೇಕೆಂದು ಬೈರೆಕೂರ ರಾಮದೇವರು, ಹನುಮಂತ ದೇವರಿಗೆ ಧರ್ಮ ಸಾಧನ ಕೊಟ್ಟ ಬಗ್ಗೆ ಮಾಹಿತಿಯಿದೆ. ಕೃಷ್ಣದೇವರಾಯನ ಕಾಲದ ಮೊದಲ ವರ್ಗದ ಅಮರನಾಯಕರ ಪ್ರಸ್ತಾಪವಿದ್ದು, ಈ ನಾಯಕರ ಜನಪ್ರಿಯತೆಯ ಸೂಚನೆಯನ್ನು ನೀಡಿದೆ.

ಕ್ರಿ.ಶ. ೧೫೭೧ರ ಬೀಚಗಾನಹಳ್ಳಿ ಶಾಸನದಲ್ಲಿ ಶ್ರೀ ಮನ್ಮಹಾನಾಯಕಾಚಾರ್ಯ ನಾಯಕನ ಪುತ್ರ ಬಸವನಾಯಕನ ಅನುಮತಿಯಿಂದ ಬೀಚಗಾನಹಳ್ಳಿಯ ಗರುಡದೇವರಿಗೆ ಮುಂದೆ ಚನ್ನರಾಯ ದೇವರಿಗೆ ಅಮೃತಪಡಿಗಾಗಿ ಬೀಚಗಾನಹಳ್ಳಿಗೆ 'ಚಂನಸಮುದ್ರ' ಎಂಬ ಪ್ರತಿನಾಮಧೇಯವಿಟ್ಟು ದಾನ ಕೊಟ್ಟ ಬಗ್ಗೆ ಹೇಳಿದೆ. ಇಲ್ಲಿ 'ಅನುಮತದಿಂ' ಎಂದು ಹೇಳಿರುವುದೇ ವಿಜಯನಗರ ಕಾಲದ ಅಮರನಾಯಕತನ ಮುಂದುವರಿಯುವುದರ ಸೂಚನೆ ಆಗಿದೆ. ಈ ನಾಯಕರ ಆಡಳಿತದಲ್ಲಿ ಸಾರ್ವಜನಿಕ ಉಪಯೋಗ ಕಾರ್ಯಗಳು ನಡೆದು ಜನ ಜೀವನ ಸಮೃದ್ಧಿಯಾಗಿತ್ತು ಎಂದು ತಿಳಿಯಬಹುದು.

ಒಟ್ಟಾರೆಯಾಗಿ ವಿಜಯನಗರ ಮತ್ತು ಗುಮ್ಮನಾಯಕ ಪಾಳೆಯ ಪಾಳೆಯಗಾರರ ನಡುವಿನ ಸಂಬಂಧಗಳು ಸೌಹಾರ್ದಯುತವಾಗಿದ್ದವು. ಯಲಹಂಕದ ನಾಡಪ್ರಭುಗಳಂತೆ ಗುಮ್ಮನಾಯಕ ಪಾಳೆಯ ಪಾಳೆಯಗಾರರು ಸ್ವಾಮಿನಿಷ್ಠೆಗೆ ಪಾತ್ರರಾಗಿದ್ದು ವಿಜಯನಗರ ಅರಸರ ಪ್ರೀತಿಗೆ ಪಾತ್ರರಾಗಿದ್ದರು.

ಒಟ್ಟಾರೆಯಾಗಿ ವಿಜಯನಗರದ ಅರಸರಿಗೆ ಮಿತ್ರರಾಗಿ ಅವರ ಆಡಳಿತದಲ್ಲಿ ಮೊದಲ ದರ್ಜೆಯ ಅಮರನಾಯಕರಾಗಿ, ವಿಜಯನಗರ ಸಾಮ್ರಾಜ್ಯದ ಹಲವಾರು ಪ್ರಮುಖ ಯುದ್ಧಗಳಲ್ಲಿ ಭಾಗಿಯಾಗಿ ತಮ್ಮ ತನು ಮನ ಧನಗಳನ್ನು ವಿಜಯನಗರಕ್ಕೆ ಅರ್ಪಿಸಿದರು. ಗುಮ್ಮನಾಯಕ ಕಾಲದಿಂದ ಆರಂಭವಾದ ಸಾಮಂತಿಕೆಯನ್ನು ಅರವೀಡು ಮನೆತನದ ಶ್ರೀರಂಗರಾಯನ ಆಡಳಿತದವರೆಗೂ ಮುಂದುವರೆಸಿಕೊಂಡು ಹೋಗಿದ್ದು ಅವರ ವಿಶ್ವಾಸವನ್ನು, ನಂಬಿಕೆಯನ್ನು ಎತ್ತಿ ಹಿಡಿಯುತ್ತದೆ. ೧೫೬೫ರ ತಾಳಿಕೋಟೆಯ ಯುದ್ಧದ ನಂತರ ಹಲವಾರು ಸಾಮಂತ ಮನೆತನಗಳು ಸ್ವತಂತ್ರ ಪಾಳೆಯ ಪಟ್ಟುಗಳಾಗಿ ಉದಯವಾದರೂ ಗುಮ್ಮನಾಯಕ ಪಾಳೆಯ ಸ್ವತಂತ್ರವಾಗದೇ ಶ್ರೀರಂಗರಾಯನ ಕಾಲದವರೆಗೂ ಕಪ್ಪ ಸಲ್ಲಿಸುತ್ತ ಬಂದಿತ್ತು. ಅರವೀಡು ಮನೆತನದ ಅವನತಿಯ ನಂತರ ಕೆಲವು ಕಾಲ ಮರಾಠ, ನಿಜಾಮ, ಹೈದರಾಲಿಯ ಅಧೀನರಾಗಬೇಕಾಯಿತು. ಟಿಪ್ಪುವಿನ ಕಾಲದಲ್ಲಿ ಸಂಪೂರ್ಣವಾಗಿ ಅವನತಿಗೆ ಒಳಗಾಯಿತು. ಬ್ರಿಟಿಷರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದ ಗುಮ್ಮನಾಯಕ ಪಾಳೆಯಗಾರರು ಪುನಃ ತಮ್ಮ ಅಧಿಕಾರವನ್ನು ಮರಳಿ ಪಡೆಯುವಲ್ಲಿ ವಿಫಲರಾದರು. ಹೀಗಾಗಿ ಗುಮ್ಮನಾಯಕ ಪಾಳೆಯವು ೪ನೇ ಆಂಗ್ಲೋ ಮೈಸೂರು ಯುದ್ಧದ ನಂತರ ಮೈಸೂರು ಸಂಸ್ಥಾನದಲ್ಲಿ ವಿಲೀನಗೊಂಡಿತು.

೪.೪ ಚಿತ್ರದುರ್ಗ ನಾಯಕರು

ವಿಜಯನಗರ ಸಾಮ್ರಾಜ್ಯದ ರಾಜ್ಯಾಡಳಿತದ ಆಧಾರ ಸ್ತಂಭಗಳಂತಿದ್ದ ಅಮರನಾಯಕರಲ್ಲಿ ಚಿತ್ರದುರ್ಗ ನಾಯಕರು ಪ್ರಮುಖರಾಗಿದ್ದಾರೆ. ಇವರು ಕ್ರಿ.ಶ. ಹದಿನಾರನೆಯ ಶತಮಾನದ ಪೂರ್ವಾರ್ಧದಿಂದ ಹದಿನೆಂಟನೆಯ ಶತಮಾನದ ಉತ್ತಾರಾರ್ಧದವರೆಗೂ ಒಟ್ಟು ೨೫೦ ವರ್ಷಗಳವರೆಗೆ ಆಡಳಿತವನ್ನು ನಡೆಸಿದರು.[೩೧] ಚಿತ್ರದುರ್ಗದ ನಾಯಕರು ತಮ್ಮ ಧೈರ್ಯ, ಶೌರ್ಯ, ಕಲಿತನಗಳ ಮೂಲಕವೇ ಕರ್ನಾಟಕದ ಇತಿಹಾಸದಲ್ಲಿ ಶಾಶ್ವತವಾದ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಚಿತ್ರದುರ್ಗದ ಆರಂಭದ ನಾಯಕರು ವಿಜಯನಗರ ಅರಸರಿಂದ ಕೆಲ

ಗ್ರಾಮಗಳನ್ನು ತಮ್ಮ ನಾಯಕತನಕ್ಕಾಗಿ ಪಡೆದುಕೊಂಡು ಕೆಲವು ವರುಷಗಳು ವಿಜಯನಗರದ ಅಮರನಾಯಕರಾಗಿ ಆಡಳಿತವನ್ನು ನಡೆಸಿದರು. ನಂತರ ಸ್ವತಂತ್ರವಾಗಿ ತಮ್ಮ ಸಮಕಾಲೀನ ಪಾಳೆಯಗಾರರಾದ ರಾಯದುರ್ಗ, ಹರಪನಹಳ್ಳಿ, ಸಿರಾ, ತರೀಕೆರೆ, ನಿಡುಗಲ್ಲು, ಜರಿಮಲೆ, ಗುಡೇಕೋಟೆ, ನಾಯಕನಹಟ್ಟಿ ಪಾಳೆಯಗಾರರೊಂದಿಗೆ ತಮ್ಮ ಅಸ್ತಿತ್ವದ ಮುಂದುವರಿಕೆಗಾಗಿ ಯುದ್ಧಗಳನ್ನು ಮಾಡುತ್ತ ಇಲ್ಲವೇ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುತ್ತಾ ಅತ್ಯಂತ ಪ್ರಭಾವಶಾಲಿ ನಾಯಕರಾಗಿ ಬೆಳೆದರು. ವಿಜಯನಗರದ ಅರಸರೊಂದಿಗೆ ಇವರಿಗಿದ್ದ ಸಂಬಂಧಗಳೇ ಆರಂಭದಲ್ಲಿಯೇ ಇವರು ಭದ್ರವಾಗಿ ನೆಲೆಯೂರಲು ಕೋಟೆ–ಕೊತ್ತಲಗಳನ್ನು ನಿರ್ಮಿಸಿಕೊಂಡು ಸಾಮಂತ ಸ್ಥಾನಮಾನ ಪಡೆಯಲು ಕಾರಣವಾದವು. ಚಿತ್ರದುರ್ಗ ನಾಯಕರು ಸ್ವತಂತ್ರರಾದರೂ ತುಳುವ ಮನೆತನದ ಸದಾಶಿವರಾಯ ಹಾಗೂ ಅರವೀಡು ಮನೆತನದ ವೆಂಕಟಪತಿರಾಯರ ಕಾಲದಲ್ಲಿ ಅವರ ಕಾರ್ಯಕರ್ತರಾಗಿದ್ದನ್ನು ಗಮನಿಸಿದರೆ ಬಹುಶಃ ಅವರು ವಿಜಯನಗರದ ಸಾರ್ವಭೌಮತ್ವನ್ನು ಒಪ್ಪಿಕೊಂಡು ಅವರ ಸಾಮಂತರಾಗಿ ಮುಂದುವರಿದಿದ್ದರು ಎಂದು ಸ್ಪಷ್ಟವಾಗಿ ಹೇಳಬಹುದು. ವಿಜಯನಗರದ ಅರವೀಡು ಮನೆತನದ ಪತನದ ನಂತರ ಇವರು ಸಂಪೂರ್ಣವಾಗಿ ಸ್ವತಂತ್ರರಾಗಿರಬೇಕು. ಚಿತ್ರದುರ್ಗದ ನಾಯಕರು ತಮ್ಮ ರಾಜಕೀಯ ಅಸ್ತಿತ್ವಕ್ಕಾಗಿ ಕೆಲವು ಕಾಲ ಬಿಜಾಪುರದ ಸೇನೆ ಮತ್ತು ಮೊಗಲರೊಂದಿಗೆ ಸೆಣಸಬೇಕಾಯಿತು. ಮೈಸೂರಿನ ಸರ್ವಾಧಿಕಾರಿ ಹೈದರಾಲಿಯೊಂದಿಗಿನ ಸಂಬಂಧಗಳೇ ಚಿತ್ರದುರ್ಗ ನಾಯಕರ ಅವನತಿಗೆ ಕಾರಣವಾಯಿತು. ಚಿತ್ರದುರ್ಗ ನಾಯಕರ ಶೌರ್ಯ, ಸಾಹಸಗಳನ್ನು ಕಣ್ಣಾರೆ ಕಂಡು ತನ್ನ ರಾಜಕೀಯ ಉನ್ನತಿಗಾಗಿ ಅವರೊಂದಿಗೆ ಸಹಾಯಹಸ್ತವನ್ನು ಚಾಚಿದ ಹೈದರಾಲಿ ಮುಂದೆ ಚಿತ್ರದುರ್ಗದ ನಾಯಕರ ಕಡುವೈರಿಯಾಗಿ ಚಿತ್ರದುರ್ಗ ಸಂಸ್ಥಾನವನ್ನು ನಿರ್ನಾಮ ಮಾಡಿದನು. ಹೀಗೆ ಸುಮಾರು ೨೫೦ ವರ್ಷಗಳ ಸುದೀರ್ಘ ಕಾಲ ಚಿತ್ರದುರ್ಗವನ್ನು ಆಳಿದ ನಾಯಕರು ಟಿಪ್ಪು ಸುಲ್ತಾನನ ಕಾಲದಲ್ಲಿ ಸಂಪೂರ್ಣ ಇತಿಹಾಸ ಪುಟಗಳಿಂದ ನಿರ್ಗಮಿಸಬೇಕಾಯಿತು. ಆರಂಭದಲ್ಲಿ ವಿಜಯನಗರದ ಸಾಮಂತರಾಗಿ, ವಿಜಯನಗರದೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದ ನಾಯಕರು ರಾಜಕೀಯ ಚದುರಂಗದಾಟಕ್ಕೆ ಸಿಲುಕಿಕೊಂಡರು. ನಂತರ ಸ್ವತಂತ್ರಗೊಂಡರು. ಸಣ್ಣ ಮಟ್ಟದ ಸ್ಥಳೀಯ ಪ್ರಭುಗಳಾಗಿ ಗುರುತಿಸಿಕೊಂಡು ಇಂದಿಗೂ ಜನಮಾನಸದಲ್ಲಿ ಸ್ಮರಣೀಯರಾಗಿದ್ದಾರೆ.

ಆಕರಗಳು

ಚಿತ್ರದುರ್ಗ ನಾಯಕರ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಗ್ರಂಥಗಳು ವಿಪುಲವಾಗಿದೆ.

೧. ೧೯೨೪ರಲ್ಲಿ ಹೊರಬಂದ ಎಂ.ಎಸ್. ಪುಟ್ಟಣ್ಣನವರ ಚಿತ್ರದುರ್ಗದ ಪಾಳೆಯಗಾರರು ಎಂಬ ಕೃತಿಯು ಚಿತ್ರದುರ್ಗ ನಾಯಕರ ಇತಿಹಾಸವನ್ನು ಮೊದಲ ಬಾರಿಗೆ ದಾಖಲಿಸಿದ ಐತಿಹಾಸಿಕ ಕೃತಿಯಾಗಿದ್ದು, ಚಿತ್ರದುರ್ಗ ನಾಯಕರ ಇತಿಹಾಸ ರಚಿಸುವಲ್ಲಿ ಮುಂದಿನ ಇತಿಹಾಸಕಾರರಿಗೆ ಮಾರ್ಗದರ್ಶಕವಾಗಿದೆ.

೨. ಚಿತ್ರದುರ್ಗ ನಾಯಕರ ಇತಿಹಾಸ ರಚನೆಗೆ ಸಂಬಂಧಿಸಿದ ಶಾಸನಗಳು ಬಿ.ಎಲ್.ರೈಸ್ (ಸಂ) ಎಪಿಗ್ರಾಫಿಯಾ ಕರ್ನಾಟಿಕಾ ಶಾಸನ ಸಂಪುಟ-೧೧ರಲ್ಲಿ ಪ್ರಕಟಗೊಂಡಿವೆ. ಇತ್ತೀಚೆಗೆ ೨೦೧೨ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಹೊರತಂದಿರುವ ಪಾಳೆಯಗಾರರ ಶಾಸನಗಳು ಸಂಪುಟ-೧ರಲ್ಲಿ ಚಿತ್ರದುರ್ಗ ನಾಯಕರ ಕಾಲದ ಸುಮಾರು ೭೦ ಶಾಸನಗಳು ಪ್ರಕಟಗೊಂಡಿವೆ. ಇದರ ಜೊತೆಗೆ ಡಾ.ಬಿ. ರಾಜಶೇಖರಪ್ಪರವರು ತಮ್ಮ ಕ್ಷೇತ್ರಕಾರ್ಯದಲ್ಲಿ ಪತ್ತೆ ಹಚ್ಚಿದ ಕೆಲವು ಶಾಸನಗಳು 'ದುರ್ಗಶೋಧನ' ಕೃತಿಯಲ್ಲಿ ಪ್ರಕಟಗೊಂಡಿವೆ. ಈ ಎಲ್ಲ ಶಾಸನಗಳನ್ನು ಪರಿಷ್ಕರಿಸಿದಾಗ ವಿಜಯನಗರ ಹಾಗೂ ಚಿತ್ರದುರ್ಗ ನಾಯಕರ ಸಾರ್ವಭೌಮ ಮತ್ತು ಸಾಮಂತರ ಚರಿತ್ರೆಗೆ ಹೊಸ ರೂಪ ಬರುವ ಸಾಧ್ಯತೆಗಳಿವೆ.

೩. ಚಿತ್ರದುರ್ಗದ ಬಖೈರು ಅಥವಾ ಮೆದಕೇರಿ ರಾಜರ ಚರಿತ್ರೆ ಎಂದು ಕರೆಯುವ ಒಂದು ದಸ್ತಾವೇಜು, ಭರಮಣ್ಣ ನಾಯಕನ ಸಮರ ವಿಜಯ ಮತ್ತು ಹಿರೇಮೆದಕೇರಿ ನಾಯಕನ ತಾರವಳಿ, ಮೆದಕೇರಿ ರಾಜೇಂದ್ರ ದಂಡಕ ಕೃತಿಗಳು ಕಣಕುಪ್ಪೆ ಕೋಟೆ ಕಟ್ಟಿದ ಕೈಫಿಯತ್ತು ಮತ್ತು ಜಂಪಣನಾಯಕನ ಕೈಫಿಯತ್ತು, ಲಿಂಗಣ್ಣ ಕವಿಯ ಕೆಳದಿ ನೃಪವಿಜಯಂ, ಹೈದರ್‌ನಾಮ, ಶ್ರೀಮನ್ಮಹಾರಾಜರ ವಂಶಾವಳಿ ಮೊದಲಾದವುಗಳು ಸಮಕಾಲೀನ ಐತಿಹಾಸಿಕ ದಾಖಲೆಗಳಾಗಿವೆ.[೨]

೪. ಹುಲ್ಲೂರು ಶ್ರೀನಿವಾಸ ಜೋಯಿಸರು ಸಂಗ್ರಹಿಸಿರುವ ಪಾಳೆಯಗಾರರ ಜನಪದ ಗೀತೆಗಳು, ಡಾ.ಬಿ.ರಾಜಶೇಖರಪ್ಪರವರ ಇತಿಹಾಸ ಕಥನ, ಪ್ರೊ. ಲಕ್ಷ್ಮಣ್ ತೆಲಗಾವಿಯವರ ಚಿತ್ರದುರ್ಗ ನಾಯಕ ಅರಸರು, ಡಾ.ಬಿ. ರಾಜಶೇಖರಪ್ಪರವರ ಚಿತ್ರದುರ್ಗ ಪಾಳೆಯಗಾರರ ದಾಖಲೆಗಳು-ಇವೆಲ್ಲವುಗಳು ಚಿತ್ರದುರ್ಗ ಪಾಳೆಯಗಾರರ ಕುರಿತು ಹೆಚ್ಚಿನ ಮಾಹಿತಿಗಳನ್ನು ನೀಡುತ್ತವೆ.

೫. ಕರ್ನಲ್ ವಿಲ್ಕ್‌ನ ಮೈಸೂರಿನ ಇತಿಹಾಸ, ವೈ.ಎಚ್.ನಾಯಕವಾಡಿಯವರ ಚಿತ್ರದುರ್ಗ ನಾಯಕರ ಸಾಂಸ್ಕೃತಿಕ ಇತಿಹಾಸ, ಬ್ಯಾರಿಸ್ ಲೂಯಿಯವರ ಚಿತ್ರದುರ್ಗ ಪಾಳೆಯಗಾರು, ಶ್ರೀಶೈಲ ಆರಾಧ್ಯರವರ ವಿಜಯನಗರ ಅರಸರು ಮತ್ತು ಚಿತ್ರದುರ್ಗ ನಾಯಕರು ಎಂಬ ಸಂಶೋಧನಾ ಲೇಖನಗಳು. ಡಾ.ಟಿ. ಮಂಜಣ್ಣರವರ ಚಿತ್ರದುರ್ಗ ನಾಯಕರು ಎಂಬ ಅಪ್ರಕಟಿತ ಪಿ.ಎಚ್.ಡಿ ಮಹಾಪ್ರಬಂಧ, ಡಾ.ಎಚ್.ಟಿ. ದೇಶಪಾಂಡೆಯವರು ಬರೆದಿರುವ 'ದಿ ಚಿತ್ರದುರ್ಗ ಸ್ಟೇಟ್' ಎಂಬ ಪಿ.ಎಚ್.ಡಿ. ಮಹಾಪ್ರಬಂಧ ಇವುಗಳು ಚಿತ್ರದುರ್ಗ ನಾಯಕರ ರಾಜಕೀಯ ಸಾಂಸ್ಕೃತಿಕ ಇತಿಹಾಸದ ಎಲ್ಲ ಮಗ್ಗುಲುಗಳನ್ನು ಪರಿಚಯ ಮಾಡಿಕೊಡುತ್ತವೆ. ಈ ಮೇಲಿನ ಎಲ್ಲ ಮಾಹಿತಿಗಳನ್ನು ಗಮನದಲ್ಲಿಟ್ಟುಕೊಂಡು ವಿಜಯನಗರದ ಅರಸರು ಮತ್ತು ಚಿತ್ರದುರ್ಗ ನಾಯಕರ ನಡುವಿನ ಸಂಬಂಧಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಮೂಲ

ಚಿತ್ರದುರ್ಗ ನಾಯಕರ ಮೂಲವನ್ನು ಕುರಿತು ಇತಿಹಾಸಕಾರರಲ್ಲಿ ಸಾಕಷ್ಟು ವಾದ-ವಿವಾದಗಳಿವೆ. ಕೆಲವು ಇತಿಹಾಸಕಾರರು ಚಿತ್ರದುರ್ಗ ನಾಯಕರ ಮೂಲವನ್ನು ಸ್ಥಳೀಯವಾಗಿ ಗುರುತಿಸುವ

ಪ್ರಯತ್ನ ಮಾಡಿದರೆ, ಇನ್ನು ಕೆಲವು ಇತಿಹಾಸಕಾರರು ಇವರ ಮೂಲವನ್ನು ಆಂಧ್ರ ಪ್ರದೇಶದಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಒಂದು ಐತಿಹ್ಯದ ಪ್ರಕಾರ ಈ ಮನೆತನದ ಮೂಲಪುರುಷ ಚಿತ್ರನಾಯಕ ಎಂಬುದಾಗಿ ತಿಳಿಯುತ್ತದೆ. ಈತನು ದೆಹಲಿಯ ಸುಲ್ತಾನ ಬಳಿ ವಜೀರನಾಗಿದ್ದನೆಂತಲೂ ಈ ಚಿತ್ರನಾಯಕನೇ ಆನೆ ಪಳಗಿಸಿದ ವೀರನಾಗಿದ್ದರಿಂದ ಸುಲ್ತಾನನಿಂದ ಮದಕರಿ ಎಂಬ ಬಿರುದನ್ನು ಪಡೆದಿದ್ದನು. ಆದ್ದರಿಂದ ಇವನ ವಂಶಸ್ಥರೆಲ್ಲರೂ ಮದಕರಿ ನಾಯಕರೆಂಬ ಅಭಿದಾನವನ್ನು ಪಡೆದಿರುವುದಕ್ಕೆ ಇದೇ ಕಾರಣವೆಂದು ತಿಳಿಯುತ್ತದೆ. ಈ ವಂಶಸ್ಥರು ಮೊದಲು ಈಗಿನ ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯ ಜಡೇಕಲ್ಲು, ಕರಿಮಲೆ, ರಾಮದುರ್ಗಗಳಲ್ಲಿ ನೆಲೆಸಿದ್ದು ಅನಂತರ ಅಲ್ಲಿಂದ ಕರ್ನಾಟಕದ ಕಡೆ ವಲಸೆ ಬಂದು ಚಿತ್ರದುರ್ಗ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೆಲೆನಿಂತು ಕ್ರಮೇಣ ರಾಜಕೀಯ ಸ್ಥಾನಮಾನಗಳನ್ನು ಸಂಪಾದಿಸಿದರು.[೩೩]

ಈ ಮೇಲಿನ ಮಾಹಿತಿಗಳನ್ನು ಬಿ.ಎಲ್.ರೈಸ್ ಅವರ (ಸಂ) ಎಪಿಗ್ರಾಫಿಯಾ ಶಾಸನ ಸಂಪುಟ–೧೧, ಮೈಸೂರು ಸ್ಟೇಟ್ ಗೆಝೆಟಿಯರ್ (ಚಿತ್ರದುರ್ಗ ಜಿಲ್ಲೆ)ಗಳಲ್ಲಿ ಉಲ್ಲೇಖಿತಗೊಂಡಿವೆ. ಎಂ.ಎಸ್. ಪುಟ್ಟಣ್ಣನವರಿಂದ ಹಿಡಿದು ಲಕ್ಷ್ಮಣ್ ತೆಲಗಾವಿಯವರೆಗೂ ಬಹುತೇಕ ಇತಿಹಾಸಕಾರರು ಚಿತ್ರದುರ್ಗ ನಾಯಕರ ಮೂಲವನ್ನು ಆಂಧ್ರಪ್ರದೇಶದಲ್ಲಿಯೇ ಗುರುತಿಸುವ ಪ್ರಯತ್ನಗಳನ್ನು ಮಾಡಿದ್ದಾರೆ. ಲಕ್ಷ್ಮಣ್ ತೆಲಗಾವಿಯವರು ಚಿತ್ರದುರ್ಗದ ನಾಯಕರ ಮನೆತನದ ಆರಾಧ್ಯ ದೈವ ಲಕ್ಷ್ಮಿನರಸಿಂಹ ಸ್ವಾಮಿಯೆಂದೂ, ಆಂಧ್ರದಲ್ಲಿಯೇ ಬರುವ ಮದ್ದಕೇರಿ ಎಂಬ ಗ್ರಾಮದ ಉಲ್ಲೇಖವನ್ನು ನೀಡುತ್ತ ಮೆದಕೇರಿಯ ಮೂಲ ವಂಶಸ್ಥರು ಆಂಧ್ರ ಮೂಲದಿಂದ ಬಂದಿರಬಹುದಾದ ಸಾಧ್ಯತೆಗಳನ್ನು ಚರ್ಚಿಸಿದ್ದಾರೆ.[೩೪] ಟಿ. ಮಂಜಣ್ಣನವರು ತಮ್ಮ ಪಿ.ಎಚ್.ಡಿ. ಮಹಾಪ್ರಬಂಧದಲ್ಲಿ ಚಿತ್ರದುರ್ಗ ನಾಯಕರು ಹೊರಗಿನವರಾಗಿರದೆ ಸ್ಥಳೀಯ ನಾಯಕರೇ ಆಗಿರುವ ಸಾಧ್ಯತೆಗಳೇ ಹೆಚ್ಚಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ವಾದ–ವಿವಾದಗಳೇನೇ ಇದ್ದರೂ ಕಾಮಗೇತಿ ವಂಶಸ್ಥರ ಮೂಲ ಆಂಧ್ರಪ್ರದೇಶವೇ ಆಗಿರುವ ಸಾಧ್ಯತೆಗಳಿವೆ. ದೆಹಲಿ ಸುಲ್ತಾನರ ಆಸ್ಥಾನದಲ್ಲಿ ನಾಡ ತಳವಾರರಾಗಿ ಅನಂತ ಆಂಧ್ರದಲ್ಲಿ ಕೆಲವು ಕಾಲ ನೆಲೆಸಿ ನಂತರ ಚಿತ್ರದುರ್ಗದಲ್ಲಿ ನೆಲೆನಿಂತು ಪ್ರಸಿದ್ಧರಾದರು. ಈ ಕಾಮಗೇತಿ ವಂಶಸ್ಥರಲ್ಲಿ ಹೆಚ್ಚು ಶೂರನು, ಪರಾಕ್ರಮಿಯೂ ಆಗಿದ್ದ ಮತ್ತಿ ತಿಮ್ಮಣ್ಣ ನಾಯಕ ೧೫೬೮ರಲ್ಲಿ ಚಿತ್ರದುರ್ಗದಲ್ಲಿ ಪಾಳೆಯ ಪಟ್ಟನ್ನು ಸ್ಥಾಪಿಸಿದನು.[೩೫] ಹೀಗಾಗಿ ಚಿತ್ರದುರ್ಗ ನಾಯಕರ ಮನೆತನದ ಮೂಲ ಪುರುಷ ಆಂಧ್ರ ಮೂಲ ಅಥವಾ ತೆಲುಗು ಮೂಲದವನೆಂದು ಸ್ಪಷ್ಟಪಡಿಸಬಹುದು. ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದಲ್ಲಿ ಉದಯವಾದ ಚಿಕ್ಕಪುಟ್ಟ ಪಾಳೆಯಗಾರ ಮನೆತನದ ಮೂಲ ಪುರುಷರು ಬಹುಪಾಲು ತೆಲುಗು ಮೂಲದವರು ಇಲ್ಲವೇ ತಮಿಳು ಮೂಲದವರು ಆಗಿರುವುದನ್ನು ನೆನಪಿಸಿಕೊಳ್ಳಬಹುದು.[೩೬]

ಸ್ಥಾಪನೆ ಮತ್ತು ರಾಜಕೀಯ ಇತಿಹಾಸ

ಚಿತ್ರದುರ್ಗ ನಾಯಕ ಸಂಸ್ಥಾನವು ಕ್ರಿ.ಶ. ೧೫೬೮ರಲ್ಲಿ ವಾಲ್ಮೀಕಿ ಗೋತ್ರದ ಕಾಮಗೇತಿ ವಂಶ ಶೂರನಾದ ಬೇಡ ಜನಾಂಗದ ಮತ್ತಿ ತಿಮ್ಮಣ್ಣ ನಾಯಕನೇ ಚಿತ್ರದುರ್ಗ ನಾಯಕರ ಐತಿಹ್ಯ

ಪುರುಷ. ಈತನ ಕಾಲದಿಂದ ನಮಗೆ ಶಾಸನಗಳು ದೊರೆಯುತ್ತವೆ. ಇದುವರೆಗಿನ ದಾಖಲೆಗಳನ್ನು ಪರಿಶೀಲಿಸಿದಾಗ ಮತ್ತಿ ತಿಮ್ಮಣ್ಣ ನಾಯಕನಿಗಿಂತಲೂ ಹಿಂದೆ ಮೂವರು ನಾಯಕರಿದ್ದರು. ಸಬ್ಬಗಡಿ ಒಬನಾಯಕ, ಜಡವಿನಾಯಕ ಮತ್ತು ಬುಳ್ಳನಾಯಕರೆಂಬ ಸೋದರರು ತಮ್ಮ ಮನೆದೇವರು ಆಹೋಬಲ ನರಸಿಂಹನ ಪೆಟ್ಟಿಗೆ ತುರು, ಕುರಿ, ಕೊಲ್ಲಾರವನ್ನು ನಡೆಸಿಕೊಂಡು ದಿಲ್ಲಿಯಿಂದ ದಕ್ಷಿಣದ ಕಡೆ ಬಂದರು. ಇವರು ವಿಜಯನಗರಕ್ಕೆ ಬಂದು ವಿರೂಪಾಕ್ಷನ ದರ್ಶನ ಪಡದು ಸೇವೆ ಮಾಡಿಕೊಂಡು ಮುಂದಕ್ಕೆ ಪ್ರಯಾಣಿಸುವಾಗ, ಆ ಗುಡಿಯಲ್ಲಿ ಮಂತ್ರ ಪುಷ್ಪದ ಕೆಲಸಕ್ಕಿದ್ದ ಇಬ್ಬರು ಬ್ರಾಹ್ಮಣ ಹುಡುಗರಾದ ಕರೆ ಜೋಯಿಸ, ವಿರೂಪಾಕ್ಷ ಜೋಯಿಸರೆಂಬುವರು, ಈ ನಾಡ ತಳವಾರರ ಬೆನ್ನು ಹತ್ತಿ ಬಂದರಂತೆ. ತಳವಾರರು ಚಿತ್ರದುರ್ಗ ಜಿಲ್ಲೆಯ ಬಿಳಿಚೋಡುವಿಗೆ ಬಂದು ಅಲ್ಲಿ ರೊಪ್ಪ ಹಾಕಿಕೊಂಡು ಮೂರು ತಿಂಗಳಿದ್ದು ಮುಂದಕ್ಕೆ ನೀರು ತಡಿ ಗ್ರಾಮದ ಕಡೆ ಹೊರಟರು. ಬಿಳಿಚೋಡು ಸ್ಥಳದ ಜೋಯಿಸರಿಗೆ ನಷ್ಟ ಸಂತಾನವಾಗಿದ್ದರಿಂದ ಈ ಇಬ್ಬರು ಹುಡುಗರನ್ನು ಆ ಸ್ಥಳದ ಜೋಯಿಸರನ್ನಾಗಿ ಮಾಡಿಕೊಳ್ಳಿರೆಂದು ಅಲ್ಲಿನ ಗೌಡ, (ಶ್ಯಾನುಭೋಗ) ಸೇನಭೋಗ, ನಾಯಕವಾಡಿಗಳನ್ನು ಕೇಳಿಕೊಂಡು ಅಧಿಕಾರದ ಭೋಗಪಟ್ಟ ಬರೆಸಿಕೊಡುವಲ್ಲಿ ಈ ನಾಡ ತಳವಾರರು ಆಸಕ್ತಿ ವಹಿಸಿದರು. ದಿಲ್ಲಿಯಿಂದ ಹೊರಟ ಮೂವರಲ್ಲಿ ಸಬ್ಬಗಡಿ ಒಬನಾಯಕನ ಮಗ ತಿಮ್ಮಣ್ಣ ನಾಯಕನು ಮತ್ತಿ ಗ್ರಾಮದಲ್ಲೂ ಜಡವಿನಾಯಕನ ಮಗ ಹಿರೆ ಹನುಮ ನಾಯಕನು ಶಾಗಲೆಯಲ್ಲೂ, ಬುಳ್ಳನಾಯಕನ ಮಕ್ಕಳಾದ ಚಿಕ್ಕ ಹನುಮನಾಯಕರು ಬಿಳಿಚೋಡುನಲ್ಲೂ ನೆಲೆನಿಂತರು.[೩೭] ಇವರುಗಳಲ್ಲಿ ಅತ್ಯಂತ ಪ್ರಬಲ ಬೇಡನಾಯಕನಾಗಿ ಹೊರಹೊಮ್ಮಿದ್ದು ಸಬ್ಬಗಡಿ ಒಬನಾಯನ ಮಗನೇ ಮತ್ತಿ ತಿಮ್ಮಣ್ಣ ನಾಯಕ. ಮತ್ತಿ ತಿಮ್ಮಣ್ಣ ನಾಯಕನು ಕ್ರಿ.ಶ. ೧೫೫೬ರಿಂದಲೇ ವಿಜಯನಗರದ ಸಾರ್ವಭೌಮನಾದ ಸದಾಶಿವರಾಯನ ಸಂಪರ್ಕದಲ್ಲಿದ್ದನು. ಇದನ್ನು ಕ್ರಿ.ಶ. ೧೫೫೬ರ ಹಿರಿಯೂರಿನ ಹಳೆವೂರಿನ ಶಿಲಾಶಾಸನವು ದೃಢೀಕರಿಸುತ್ತದೆ. ಮಹಾಮಂಡಲೇಶ್ವರನಾದ ರಾಮರಾಜಯ ಎರೆದಿಂಮರಾಜಯನವರ ಕಾರ್ಯಕ್ಕೆ ಕರ್ತನಾದ ಕಾಮಗೇತಿ ತಿಂಮಣ ನಾಯಕರು ತನ್ನ ಒಡೆಯ ಎರೆದಿಂಮನಿಗೆ ಪುಣ್ಯವಾಗಲೆಂದು ಹಾಗೂ ದೇವಸ್ಥಾನದಲ್ಲಿ ಪೂಜೆಯನ್ನು ನಡೆಸಿಕೊಂಡು ಹೋಗಲು ಹಿರಿಯೂರು ತಮ್ಮಡಿಯವರಿಗೂ ಮತ್ತು ದೇವಸ್ಥಾನದ ಬ್ರಾಹ್ಮಣರಿಗೂ ದೇವಸ್ಥಾನದಿಂದ ಬರುವ ಆದಾಯವನ್ನು ಸರ್ವಮಾನ್ಯವಾಗಿ ಬಿಟ್ಟ ಹಾಗೂ ಎಲ್ಲಾ ರೀತಿಯ ತೆರಿಗೆಯಿಂದ ವಿನಾಯ್ತಿ ನೀಡಿದ ವಿವರಗಳು ಈ ಶಾಸನದಲ್ಲಿ ದಾಖಲಾಗಿವೆ.[೩೮] ಶಾಸನವು ನೀಡುವ ವಿವರಗಳನ್ನು ಪರಿಶೀಲಿಸಿದಾಗ ಕ್ರಿ.ಶ. ೧೫೫೬ರಿಂದಲೇ ಮತ್ತಿ ತಿಮ್ಮಣ್ಣ ನಾಯಕನು ವಿಜಯನಗರದ ಸಾಮಂತನಾಗಿದ್ದನೆಂದು ಸ್ಪಷ್ಟವಾಗುತ್ತದೆ. ಶಾಸನದಲ್ಲಿ ದಾಖಲಾಗಿರುವಂತೆ ಮತ್ತಿ ತಿಮ್ಮಣ್ಣ ನಾಯಕನನ್ನು ಕಾರ್ಯಕರ್ತನೆಂದು ಉಲ್ಲೇಖಿಸಿದೆ. ವಿಜಯನಗರದ ಕಾರ್ಯಕರ್ತರೆಂದರೆ ಅವರು ಅಮರನಾಯಕ ಹುದ್ದೆಯಲ್ಲಿದ್ದವರೇ; ವಿಜಯನಗರ ಕಾಲದ ನೂರಾರು ಶಾಸನಗಳು ವಿಜಯನಗರದ ಕಾರ್ಯಕರ್ತರು ನಾಯಕತನವನ್ನು ಪಡೆದುಕೊಂಡಿರುವುದನ್ನು ಸಮರ್ಥಿಸುತ್ತವೆ. ವಿಜಯನಗರದ ಮಾಂಡಲೀಕನಾದ ರಾಮರಾಜನಯ ಎರೆದಿಂಮರಾಜಯನ ಕಾರ್ಯಕರ್ತನಾಗಿದ್ದ

ಮತ್ತಿ ತಿಮ್ಮಣ್ಣ ನಾಯಕನು ಕ್ರಿ.ಶ. ೧೫೫೬ ಅಥವಾ ಅದಕ್ಕಿಂತ ಹಿಂದಯೇ ವಿಜಯನಗರದ ಅಮರನಾಯಕನಾಗಿರಬಹುದು. ಈ ಹೇಳಿಕೆಯನ್ನು ಇತಿಹಾಸಕಾರ ಡಾ.ಬಿ. ರಾಜಶೇಖರಪ್ಪನವರ 'ಚಿತ್ರದುರ್ಗದ ಪಾಳೆಯಗಾರ ಅರಸರು: ರಾಜಕೀಯ ಇತಿಹಾಸ' ಎಂಬ ಸಂಶೋಧನಾ ಲೇಖನವೂ ಸಮರ್ಥಿಸುತ್ತದೆ. ಈ ಲೇಖನದಲ್ಲಿ ಉಲ್ಲೇಖವಾಗಿರುವಂತೆ ಈಚೆಗೆ ದೊರೆತ ಕೆಲವು ಶಿಲಾಶಾಸನಗಳಿಂದ ಕ್ರಿ.ಶ. ೧೫೪೯ರಷ್ಟು ಹೊತ್ತಿಗಾಗಲೇ ಈ ವಂಶದ ತಿಮ್ಮಣ್ಣ ನಾಯಕನು ಶ್ರೀಮನ್ಮಹಾನಯಕಾಚಾರ್ಯ ಎಂಬ ಸ್ಥಾನ ಗೌರವದೊಂದಿಗೆ ಈ ಪ್ರದೇಶದಲ್ಲಿ ಪ್ರಾಂತ್ಯಪಾಲಕನಾಗಿದ್ದನೆಂಬ ಸಂಗತಿ ಸ್ಪಷ್ಟವಾಗುತ್ತದೆ.[೩೯] ಮತ್ತಿ ತಿಮ್ಮಣ್ಣ ನಾಯಕನು ಚಿತ್ರದುರ್ಗ ಪ್ರದೇಶದಲ್ಲಿ ಪ್ರಭಾವಶಾಲಿ ನಾಯಕನಾಗಿ ಬೆಳೆಯುತ್ತಿದ್ದನ್ನು ಗಮನಿಸಿದ ವಿಜಯನಗರದ ಅರಸ ಸದಾಶಿವರಾಯ ಸಾಳ್ವ ನರಸಿಂಗರಾಯನ ನೇತೃತ್ವದಲ್ಲಿ ಸೈನ್ಯವನ್ನು ಕಳುಹಿಸಿ ಚಿತ್ರದುರ್ಗಕ್ಕೆ ಮುತ್ತಿಗೆಯನ್ನು ಹಾಕಿಸಿದ. ಈ ಮುತ್ತಿಗೆಯಲ್ಲಿ ತನ್ನ ಸಣ್ಣ ಸೈನ್ಯದ ಬಲದಿಂದಲೇ ಸಾಳ್ವ ನರಸಿಂಗನನ್ನು ಸೋಲಿಸಿದ.[೪೦] ಈ ಯುದ್ಧದಲ್ಲಿ ಮತ್ತಿ ತಿಮ್ಮಣ್ಣನಾಯಕನ ಶೌರ್ಯ, ಸಾಹಸಗಳನ್ನು ಕಣ್ಣಾರೆ ಕಂಡ ವಿಜಯನಗರದವರು ಕಲಬುರಗಿ ಕೋಟೆಯನ್ನು ವಶಪಡಿಸಿಕೊಂಡುವಂತೆ ಕೇಳಿದರು. ತಿಮ್ಮಣ್ಣನಾಯಕ ತನ್ನ ಮಗ ಗುಲಪಿನಾಯಕ, ಅಣ್ಣಾಗಾರ ಓಬಣ್ಣ ಮತ್ತು ೩೦೦ ಮಂದಿ ವೀರರೊಂದಿಗೆ ಕಲಬುರಗಿ ಕೋಟೆಯನ್ನು ಮುತ್ತಿಗೆ ಹಾಕಿ ವಶಪಡಿಸಿಕೊಂಡು ವಿಜಯನಗರಕ್ಕೆ ಕೋಟೆಯನ್ನು ಒಪ್ಪಿಸಿದನು.[೪೧]

ಮತ್ತಿ ತಿಮ್ಮಣ್ಣ ನಾಯಕನ ಪ್ರಾಮುಖ್ಯತೆಯನ್ನು ಅರಿತು ವಿಜಯನಗರದ ಅರಸರು ಅವನನ್ನು ವಿಜಯನಗರಕ್ಕೆ ಆಹ್ವಾನಿಸಿದರು. ಚಿನ್ನದ ಮುಲಾಮಿನ ಶಂಖ ಚಕ್ರದ ಜೊತೆ ಅಂದಳ ಮತ್ತು ಮೊಸಳೆ ಬಾಯಿ ಜೋಡು, ಫಿರಂಗಿ ಶ್ವೇತ ಛತ್ರಿ ಚಿನ್ನದ ಹಸ್ತ ಹಗಲ ದೀವಟಿಗೆ, ಚಿನ್ನಾಭರಣಗಳನ್ನು ನೀಡಿ 'ಹಗಲು ಕೊಗ್ಗಲೆ ಮಾನ್ಯ' ಎಂಬ ಬಿರುದನ್ನು ನೀಡಿ ಹೊಗಳು ಭಟರೊಂದಿಗೆ ಚಿತ್ರದುರ್ಗಕ್ಕೆ ಕಳಿಸಿಕೊಟ್ಟರು.[೪೨]

ಹೀಗೆ ವಿಜಯನಗರ ಸಾರ್ವಭೌಮರಿಂದ ಸಾಮಂತಿಕೆಯ ಪೂರ್ವ ಮರ್ಯಾದೆಯನ್ನು, ಬಿರುದುಗಳನ್ನು ಪಡೆದ ಮತ್ತಿ ತಿಮ್ಮಣ್ಣ ನಾಯಕ ತನ್ನ ಬಲವನ್ನು ಮತ್ತಷ್ಟು ಹೆಚ್ಚಿಸಿಕೊಂಡು ಚಿತ್ರದುರ್ಗದ ಸುತ್ತಮುತ್ತಲಿನ ಸಮಕಾಲೀನ ನಾಯಕರಲ್ಲಿಯೇ ಅತ್ಯಂತ ಪ್ರಬಲವಶಾಲಿ ನಾಯಕನಾಗಿ ಪ್ರವರ್ಧಮಾನಕ್ಕೆ ಬಂದನು. ಸಾಳ್ವ ನರಸಿಂಗರಾಯನ ಕುಟೀಲ ರಾಜಕೀಯ ತಂತ್ರಗಳಿಗೆ ತಲೆಬಾಗಿದ ವಿಜಯನಗರದ ಅರಸರು ಉಪಾಯವಾಗಿ ತಿಮ್ಮಣ್ಣನಾಯಕನನ್ನು ತಮ್ಮ ರಾಜಧಾನಿಗೆ ಕರೆಸಿ ಬಂಧಿಸಿ ಸೆರೆಮನೆಯಲ್ಲಿಟ್ಟರು. ಮತ್ತಿ ತಿಮ್ಮಣ್ಣನಾಯಕನ ರಾಜ್ಯ ವಿಸ್ತಾರ ನೀತಿಯನ್ನು ಸಹಿಸದ ವಿಜಯನಗರದ ಅರಸರು ಅವನ ಅವಿಧೇಯತೆಯನ್ನು ಮಟ್ಟ ಹಾಕಲು ಸೆರೆಮನೆಗೆ ದೂಡಿದಾಗ ಅಲ್ಲಿಯೇ ಕ್ರಿ.ಶ. ೧೫೫೮ರಲ್ಲಿ ತಿಮ್ಮಣ್ಣನಾಯಕನು ಮರಣ ಹೊಂದಿದನು. ಹೀಗೆ ಚಿತ್ರದುರ್ಗದ ಪ್ರಬಲ ನಾಯಕನೊಬ್ಬನ ಸಾವು ಸೆರೆಮನೆಯ ಸರಳುಗಂಬಿಗಳ ಹಿಂದೆ ನಡೆದಿದ್ದು ಇತಿಹಾಸದ ದುರಂತವೇ ಆಗಿದೆ.

ಮತ್ತಿ ತಿಮ್ಮಣ್ಣನಾಯಕನ ಮರಣದ ನಂತರ ಅವನ ಮಗನಾದ ಓಬಣ್ಣನಾಯಕನು ಅಧಿಕಾರಕ್ಕೆ ಬಂದನು. ಸದಾಶಿವರಾಯನ ಆಡಳಿತದಲ್ಲಿ ಮಂಡಲೇಶ್ವರನಾಗಿದ್ದ ರಾಮರಾಯನು ಕಾಮಗೇತಿ ವಂಶಸ್ಥರಿಗೆ ಬೆನ್ನೆಲುಬಾಗಿ ನಿಂತನು. ರಾಮರಾಯನು ಸದಾಶಿವರಾಯನ ಅನುಮತಿಯ ಮೇರೆಗೆ ತಿಮ್ಮಣ್ಣನಾಯಕನ ಉತ್ತರಾಧಿಕಾರಿಯಾಗಿ ಅಧಿಕಾರಕ್ಕೆ ಬಂದ ಓಬಣ್ಣನಾಯಕ (ಮೊದಲ ಮೆದಕೇರಿ ನಾಯಕ)ನಿಗೆ ನಾಯಕತನವನ್ನು ಮುಂದುವರಿಸಿದನು.[೪೩] ಇದನ್ನು ಹೊಳಲಕೆರೆಯ ಗೋಪಾಲಕೃಷ್ಣ ದೇವಸ್ಥಾನದ ಶಿಲಾಶಾಸನವು ದೃಢೀಕರಿಸುತ್ತದೆ. ಕ್ರಿ.ಶ. ೧೫೬೮ರ ಈ ಶಾಸನ ಸದಾಶಿವರಾಯನ ಕಾಲಕ್ಕೆ ಸಂಬಂಧಿಸಿದ್ದು, ಮಹಾಮಂಡಲೇಶ್ವರ ಅಳಿಯ ರಾಮರಾಯನ ಕಾಲದಲ್ಲಿ ತಿರುಮಲರಾಯ ರಾಜೇಯದೇವ ಹೊಳಲಕೆರೆಯ ಸೀಮೆಯನ್ನು ಮಹಾನಾಯಕಾಚಾರ್ಯ ಕಾಮಗೇತಿ ಕಸ್ತೂರಿ ಮದಕರಿ ನಾಯಕನಿಗೆ ಅಮರ ಮಾಗಣಿಯಾಗಿ ಪಾಲಿಸಿದ ವಿವರ ನೀಡುತ್ತದೆ.[೪೪] ಹೀಗೆ ವಿಜಯನಗರದವರಿಂದ ನಾಯಕತವನ್ನು ಪಡೆದುಕೊಂಡ ಓಬಣ್ಣನಾಯಕನು ತಾಳಿಕೋಟೆಯ ಕದನದ ನಂತರ ಸ್ವತಂತ್ರನಾದನು. ಇವನ ನಂತರ ಅಧಿಕಾರಕ್ಕೆ ಬಂದ ಒಂದನೇ ಕಸ್ತೂರಿ ರಂಗಪ್ಪ ನಾಯಕನು ಚಿತ್ರದುರ್ಗದ ಸ್ವತಂತ್ರ ಅರಸನಾದನು. ಕಸ್ತೂರಿ ರಂಗಪ್ಪನ ಆಳ್ವಿಕೆಯ ವೇಳೆಗೆ ಚಿತ್ರದುರ್ಗ ಮತ್ತು ವಿಜಯನಗರದ ಮಧ್ಯೆ ಯಾವುದೇ ಸಾರ್ವಭೌಮ ಮತ್ತು ಸಾಮಂತಿಕೆಯ ಸಂಬಂಧಗಳು ಕಂಡುಬರುವುದಿಲ್ಲ. ಆದರೆ ಕ್ರಿ.ಶ. ೧೬೦೬ರ ಚಿತ್ರದುರ್ಗ ಜಿಲ್ಲೆಯ ಕೋಗುಂಡೆ ಶಾಸನವು ವಿಜಯನಗರದ ಅರಸು ವೆಂಕಟಪತಿರಾಯರ ಕಾಲದ್ದಾಗಿದ್ದು ವೆಂಕಟಪತಿ ಮಹಾರಾಯನ ಕಾರ್ಯಕರ್ತರಾದ ಕಾಮಗೇತಿ ಚಿಕ್ಕಣ್ಣನಾಯಕನವರ ಕಾರ್ಯಕರ್ತರಾದ ಬಿಳಿಚೋಡು ಸೀಮೆಯ ಪಾರುಪತ್ಯಗಾರ ಸೀರೆಯ ಮಲ್ಲಿಸೆಟ್ಟಿಯು ಬಿಳಿಚೋಡು ಸೀಮೆಯ ಕೆಲಸಿಗಳಿಗೆ ಗ್ರಾಮದ ತೆರಿಗೆಯನ್ನು ಸರ್ವ ಮಾನ್ಯವಾಗಿ ಬಿಟ್ಟ ವಿವರವನ್ನು ದಾಖಲಿಸುತ್ತದೆ.[೪೫] ಈ ಶಾಸನದ ಮಾಹಿತಿಯನ್ನು ಪರಿಶೀಲಿಸಿದಾಗ ಚಿಕ್ಕಣ್ಣ ನಾಯಕನು ವಿಜಯನಗರದ ವೆಂಕಟಪತಿರಾಯನ ನಾಯಕನಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಓಬಣ್ಣ ನಾಯಕನ ನಂತರ ಚಿತ್ರದುರ್ಗದ ನಾಯಕನಾಗಿ ಕಸ್ತೂರಿ ರಂಗಪ್ಪ ನಾಯಕನಾಗಿದ್ದರೆ "ಈ ಕಾಮಗೇತಿ ಚಿಕ್ಕಣ್ಣ ನಾಯಕ ಯಾರು"? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಶಾಸನವೊಂದನ್ನು ಹೊರತುಪಡಿಸಿದರೆ ಬೇರೆ ಯಾವ ದಾಖಲೆಗಳು ಏನನ್ನು ಹೇಳದೇ ಇರುವುದರಿಂದ ಚಿಕ್ಕಣ್ಣ ನಾಯಕನು ಕಾಮಗೇತಿಯ ವಂಶಸ್ಥನೇ ಆಗಿದ್ದು, ವಿಜಯನಗರ ಅರಸರಿಂದ ನಾಯಕತನವನ್ನು ಪಡೆದುಕೊಂಡು ಕೋಗುಂಡೆ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳ ಉಸ್ತುವಾರಿಯನ್ನು ಹೊಂದಿರುವ ನಾಯಕನಾಗಿರುವ ಸಾಧ್ಯತೆಗಳಿವೆ. ಈ ಮಾಹಿತಿಯನ್ನು ಬದಿಗಿರಿಸಿ ಕಸ್ತೂರಿ ರಂಗಪ್ಪ ಆಡಳಿತವನ್ನು ಗಮನಿಸುವುದಾದರೆ ಕ್ರಿ.ಶ. ೧೬೩೮ರ ಹೊತ್ತಿಗೆ ಕಸ್ತೂರಿ ರಂಗಪ್ಪ ನಾಯಕನು ನಾಯಕತ್ವದಿಂದ ಅರಸೊತ್ತಿಗೆಯನ್ನು ಹೊಂದಿದಂತೆ ಕರೆದುಕೊಂಡಿದ್ದಾನೆ.[೪೬] ಕಸ್ತೂರಿ ರಂಗಪ್ಪ ನಾಯಕನು ತಾನೇ ಚಿತ್ರದುರ್ಗದ ಅರಸನೆಂಬ ರೀತಿಯಲ್ಲಿ ಸಂಭೋದಿಸಿಕೊಂಡು ಪತ್ರಗಳನ್ನು ಬರೆದುಕೊಂಡಿರುವುದನ್ನು ಕಾಣಬಹುದು. ಇವನ ಕಾಲದಲ್ಲಿ ಚಿತ್ರದುರ್ಗವು ಸುತ್ತುಮುತ್ತಲಿನ ಪಾಳೆಯಗಾರರಲ್ಲಿ ಅತ್ಯಂತ ಪ್ರಬಲ ಪಾಳೆಯಪಟ್ಟಾಗಿ ರೂಪುಗೊಂಡಿತು. ಕಸ್ತೂರಿ ರಂಗಪ್ಪ

ನಾಯಕನು ಕ್ರಿ.ಶ. ೧೬೫೨ರಲ್ಲಿ ಮರಣ ಹೊಂದಿದನು. ಇವನ ನಂತರ ಇವನ ಮಗನಾದ ಇಮ್ಮಡಿ ಮದಕೇರಿ ನಾಯಕನು ಅಧಿಕಾರಕ್ಕೆ ಬಂದನು. ಇಮ್ಮಡಿ ಮದಕೇರಿ ನಾಯಕನ ಆರಂಭದ ಆಡಳಿತಾವಧಿಯಲ್ಲಿ ಪುನಃ ವಿಜಯನಗರ ಸಾರ್ವಭೌಮತ್ವವನ್ನು ಒಪ್ಪಿಕೊಂಡಂತೆ ಕಾಣುತ್ತದೆ. ಕ್ರಿ.ಶ. ೧೬೫೩ನೇ ಕಡಲೆಗುದ್ದು ಗ್ರಾಮದ ಶಿಲಾಶಾಸನವು ವಿಜಯನಗರದ ಅರಸ ಶ್ರೀರಂಗರಾಯನ ಕಾಲದ್ದಾಗಿದ್ದು, ಈ ಶಾಸನದಲ್ಲಿ ವಿಜಯನಗರದ ಅರಸು ಶ್ರೀರಂಗರಾಯನ ಕಾರ್ಯಕರ್ತರಾದ ಕಾಮಗೇತಿ ಕಸ್ತೂರಿ ರಂಗಪ್ಪನಾಯಕರ ಪುತ್ರರಾದ ಇಮ್ಮಡಿ ಮದಕೇರಿ ನಾಯಕನು ಭಟ್ಟರ ಭಗತುಮಟ್ಟಣ್ಣನ ಮಗನಾದ ರಾಮನಿಗೆ ಪುನಃ ಪ್ರೀತಿಯಾಗಿ ಚಿತ್ರಹಳ್ಳಿ ಸೀಮೆಯ ಹೀರೆಗುಂಟನೂರು ಮಾಗಣಿಗೆ ಸಲ್ಲುವ ಕಡಲೆಗುಂದಿ ಗ್ರಾಮವನ್ನು ಅಗ್ರಹಾರವಾಗಿ ಮಾಡಿ ದಾನ ಕೊಟ್ಟ ವಿವರಗಳಿವೆ.[೪೭] ಈ ಶಾಸನದ ಮಾಹಿತಿಯನ್ನಾಧರಿಸಿ ಹೇಳುವುದಾದರೆ ಇಮ್ಮಡಿ ಮದಕೇರಿ ನಾಯಕನು ಶ್ರೀರಂಗರಾಯನ ಕಾರ್ಯಕರ್ತನಾಗಿದ್ದು ಅವರ ಅರಸೊತ್ತಿಗೆಯನ್ನು ಒಪ್ಪಿಕೊಂಡಂತೆ ಕಾಣುತ್ತದೆ. ನಂತರ ಈತನು ಸ್ವತಂತ್ರವಾಗಿ ತರೀಕೇರಿಯ ಚಿಕ್ಕ ಹನುಮಪ್ಪ ನಾಯಕ ಮತ್ತು ಪಟ್ಟಾಭಿರಾಮನನ್ನು ಸೋಲಿಸಿದನು. ಗುಡೇಕೋಟೆ, ನನ್ನಿವಾಳ, ಐಮಂಗಲ, ಹಿರಿಯೂರು ಕೋಟೆಗಳನ್ನು ಗೆದ್ದುಕೊಂಡನು.[೪೮] ಇವನ ಕಾಲದಲ್ಲಿ ೬೫,೦೦೦ ವರಹಗಳ ಆದಾಯವಿದ್ದ ಚಿತ್ರದುರ್ಗ ೧ ಲಕ್ಷ ತಲುಪಿತು. ಆರ್ಥಿಕವಾಗಿ ಸದೃಢಗೊಂಡ ಚಿತ್ರದುರ್ಗ ರಾಜಕೀಯವಾಗಿ ಪ್ರಬಲವಾಯಿತು. ಇಮ್ಮಡಿ ಮದಕೇರಿ ನಾಯಕನ ನಂತರ ಅಧಿಕಾರಕ್ಕೆ ಬಂದ ಓಬಣ್ಣ ನಾಯಕನ ಕಾಲಾವಧಿಯ ಯಾವ ದಾಖಲೆಗಳು ವಿಜಯನಗರದ ಅರಸರ ಕುರಿತು ಏನನ್ನು ಉಲ್ಲೇಖಿಸುವುದಿಲ್ಲ. ಬಹುಶಃ ಈ ವೇಳೆಗಾಗಲೇ ವಿಜಯನಗರ ಸಾಮ್ರಾಜ್ಯದ ಅವಶೇಷವಾಗಿ ಉಳಿದುಕೊಂಡಿದ್ದು ಅರವೀಡು ಮನೆತನ ಸಂಪೂರ್ಣ ನಾಶಗೊಂಡಿತು. ಹೀಗಾಗಿ ಚಿತ್ರದುರ್ಗದ ನಾಯಕರು ಸಂಪೂರ್ಣ ಸ್ವತಂತ್ರ ಪಾಳೆಯಗಾರರಾಗಿ ಅಸ್ತಿತ್ವವನ್ನು ಇಮ್ಮಡಿ ಮದಕೇರಿ ನಾಯಕನ ಕಾಲದಲ್ಲಿಯೇ ಪಡೆದುಕೊಂಡರು. ಆದರೂ ವಿಜಯನಗರದೊಂದಿಗೆ ಚಿತ್ರದುರ್ಗ ನಾಯಕರ ಸಂಬಂಧಗಳು ಮುಂದುವರೆದು ಬಂದಿರುವುದನ್ನು ಕೆಲವು ದಾಖಲೆಗಳ ಮೂಲಕ ಗುರುತಿಸಬಹುದು. ವಿಜಯನಗರದ ಆಶ್ರಯದಲ್ಲಿದ್ದ ವೆಂಕಟಗಿರಿ ಜಟ್ಟಿಯೆಂಬುವ ಶಸ್ತ್ರ ವಿದ್ಯಾ ನೈಪುಣ್ಯನಾಗಿದ್ದು ದುರ್ಗದ ದೊರೆಗಳ ಆಶ್ರಯನ್ನು ಕೋರಿ ಬರುತ್ತಾನೆ. ಇವನು ಅಸ್ತ್ರ ಶಸ್ತ್ರಾಭ್ಯಾಸಗಳಲ್ಲಿ, ಕುಸ್ತಿಯಲ್ಲಿ ನುರಿತ ಪಟುವಾಗಿದ್ದನು. ಈ ವಂಶದ ಜಟ್ಟಿಗಳು ದುರ್ಗದ ಅವನತಿಯಾಗುವವರೆಗೂ ಇಲ್ಲಿನ ಗರಡಿಗಳ ಮುಖ್ಯಸ್ಥರಾಗಿದ್ದರೆಂಬ ಹೇಳಿಕೆಯಿದೆ.[೪೯] ಭರಮಣ್ಣ ನಾಯಕನ ನಂತರ ಅಧಿಕಾರಕ್ಕೆ ಬಂದವನೇ ಹಿರೇಮದಕೇರಿ ನಾಯಕ, ಹಿರೇಮದಕೇರಿ ನಾಯಕನು ಸಮಕಾಲೀನ ಪಾಳೆಯಗಾರರಾದ ವಿಜಯನಗರ ಸಂತಿತಿಯವರಾಗಿದ್ದ ಆನೆಗೊಂದಿ ಸಂಸ್ಥಾನದ ನರಪತಿ ಮಗಳು ಓಬವ್ವ ನಾಗತಿಯನ್ನು ವಿವಾಹವಾದನು.[೫೦] ಹೀಗೆ ವಿಜಯನಗರ ಸಂತತಿಯವರೊಂದಿಗೆ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಂಡನು. ಕನಕಗಿರಿಯ ವೆಂಕಟಾಚಲ ನಾಗತಿಯೊಂದಿಗೆ ವಿವಾಹವಾದನು. ಹಿರೇಮದಕೇರಿ ನಾಯಕನು ಮಾಡಿಕೊಂಡ ಈ ವಿವಾಹಗಳಿಂದಾಗಿ ರಾಜಕೀಯವಾಗಿ ಅವನು ಮತ್ತಷ್ಟು ಬಲಶಾಲಿಯಾಗಿ ನೆಲೆಯೂರಲು

ಕಾರಣವಾಯಿತು. ಹಿರೇಮೆದಕೇರಿ ನಾಯಕನ ಆಡಳಿತಾವಧಿಯಲ್ಲಿ ವಿಜಯನಗರದ ಕೊನೆಯ ಸಂತತಿಯಾದ ಅರವೀಡು ಮನೆತನ ಎರಡು ಶಾಖೆಗಳಾಗಿ ಒಡೆದುಹೋಗಿತ್ತು. ಒಂದು ಶಾಖೆಯು ಪೆನುಗೊಂಡೆಯಿಂದಲೂ, ಮತ್ತೊಂದು ಶಾಖೆಯು ಚಂದ್ರಗಿರಿಯಿಂದಲೂ ಆಳುತ್ತಿತ್ತು. ಹೀಗಾಗಿ ವಿಜಯನಗರದೊಂದಿಗೆ ಚಿತ್ರದುರ್ಗ ನಾಯಕರ ಸಂಬಂಧಗಳು ಸಂಪೂರ್ಣ ನಿಂತು ಹೋದವು. ಹಿರೇಮೆದಕೇರಿ ನಾಯಕನ ನಂತರ ಇಮ್ಮಡಿ ಕಸ್ತೂರಿ ರಂಗಪ್ಪ ನಾಯಕನು ಅಧಿಕಾರಕ್ಕೆ ಬಂದನು. ಈತ ಕೇವಲ ೫ ವರ್ಷಗಳ ಕಾಲ ಅಧಿಕಾರದಲ್ಲಿದ್ದನು. ಇವನ ಕಾಲದಲ್ಲಿ ಮರಾಠರು ವಿಶೇಷವಾಗಿ ಪೇಶ್ವೆಗಳು ಚಿತ್ರದುರ್ಗದ ಮೇಲೆ ದಂಡೆತ್ತಿ ಬಂದು ವಡ್ಡನಹಳ್ಳಿ ಹಾಗೂ ಅಣಜಿಗೆ ಮುತ್ತಿಗೆ ಹಾಕಿದಾಗ ಕಸ್ತೂರಿ ರಂಗಪ್ಪ ನಾಯಕ ನಾನಾ ಸಾಹೇಬನೊಂದಿಗೆ ಒಪ್ಪಂದ ಮಾಡಿಕೊಂಡನು. ಕ್ರಿ.ಶ. ೧೭೫೪ರಲ್ಲಿ ಅನಾರೋಗ್ಯ ಪೀಡಿತನಾದ ಈತ ಮರಣ ಹೊಂದಿದನು. ವಿಷಪ್ರಾಶನದಿಂದ ಕಸ್ತೂರಿ ರಂಗಪ್ಪನಾಯಕ ಮರಣ ಹೊಂದಿರಬಹುದೆಂಬ ನಂಬಿಕೆಯೂ ಇದೆ.

ಕಸ್ತೂರಿ ರಂಗಪ್ಪನಾಯಕನ ಮರಣದ ನಂತರ ಆತನ ತಾಯಿ ಗಂಡೋಬವ್ವ ನಾಗತಿಯು ದುರ್ಗದ ರಾಜಕೀಯ ಸಿಂಹಾಸನವನ್ನೇರಿ ಮುಂದಿನ ರಾಜಾನಾದ ಕೊನೆಯ ಮೆದಕೇರಿ ನಾಯಕನು ಏರುವವರೆಗೂ ಅಧಿಕಾರವನ್ನು ಅತ್ಯಂತ ಯಶಸ್ವಿಯಾಗಿ ಮುನ್ನಡೆಸಿದಳು.[೫೧] ಇವನು ಗಂಡೋಬವ್ವ ನಾಗತಿಯ ಮಾನಸಪುತ್ರನಾಗಿದ್ದು ಇವನ ತಂದೆಯನ್ನು ತೊದಲು ಭರಮಪ್ಪ ನಾಯಕನೆಂದೇ ಗುರುತಿಸಲಾಗಿದೆ. ರಾಜವೀರ ಮೆದಕೇರಿ ನಾಯಕನು ಚಿತ್ರದುರ್ಗ ನಾಯಕರ ಇತಹಾಸದಲ್ಲಿಯೇ ತುಂಬಾ ಪ್ರಸಿದ್ಧನಾದ ಅರಸನಾಗಿದ್ದು, ಚಿತ್ರದುರ್ಗ ನಾಯಕರ ಕೀರ್ತಿಯು ದಕ್ಷಿಣ ಭಾರತದೆಲ್ಲೆಡೆ ಹರಡಲು ಕಾರಣವಾಯಿತು. ಕೊನೆಗೆ ಮೈಸೂರಿನ ಸರ್ವಾಧಿಕಾರಿ ಹೈದಾರಾಲಿಯೊಂದಿಗೆ ನಡೆದ ಯುದ್ಧದಲ್ಲಿ ಪರಾಜಿತನಾಗಿ ಹೈದಾರಾಲಿಗೆ ಸೆರೆಸಿಕ್ಕು ಕ್ರಿ.ಶ. ೧೭೭೯ರಲ್ಲಿ ಶ್ರೀರಂಗಪಟ್ಟಣದ ಸೆರೆಮನೆಯಲ್ಲಿ ಮರಣ ಹೊಂದಿದನು. ಇವನ ಕಾಲಕ್ಕೆ ಚಿತ್ರದುರ್ಗ ಸಂಸ್ಥಾನವೂ ಅಸ್ತಂಗತವಾಯಿತು.

ಎರಡನೆಯ ಕಸ್ತೂರಿ ರಂಗಪ್ಪ ನಾಯಕನ ದತ್ತುಮಗನಾಗಿದ್ದ ದೊಡ್ಡ ಮೆದಕೇರಿ ನಾಯಕನನ್ನು ಚಿತ್ರದುರ್ಗದ ಪತನದ ನಂತರ ಸೆರೆಮನೆಯಿಂದ ಬಿಡಿಸಿದ ಹೈದರಾಲಿ ತನ್ನ ರಾಜಕೀಯ ಸಲಹೆಗಾರನಾಗಿ ನೇಮಿಸಿಕೊಂಡನು. ಹೈದರಾಲಿಯ ಮರಣದ ತರುವಾಯ ಅಧಿಕಾರಕ್ಕೆ ಬಂದ ಟಿಪ್ಪು ಸುಲ್ತಾನ ಹಿರೇಮೆದಕೇರಿ ನಾಯಕನನ್ನು ಕೊಲೆ ಮಾಡಿಸಲು ಸಂಚನ್ನು ರೂಪಿಸಿದನು. ವಿಷಯ ಗ್ರಹಿಸಿದ ಹಿರೇಮೆದಕೇರಿ ನಾಯಕನು ಟಿಪ್ಪುವಿನ ಸೇನೆಯನ್ನು ತೊರೆದು ತಿರುವನಂತಪುರದ ರಾಜ ಕಿರೀಟಪತಿ ರಾಮವರ್ಮನಲ್ಲಿಗೆ ಹೋಗಿ ಆಶ್ರಯ ಪಡೆದನು. ಕ್ರಿ.ಶ. ೧೭೯೯ರಲ್ಲಿ ಬ್ರಿಟಿಷರು ಶ್ರೀರಂಗಪಟ್ಟಣದ ಮೇಲೆ ಸೈನ್ಯ ಸಮೇತ ಮುತ್ತಿಗೆ ಹಾಕಿದಾಗ ಬ್ರಿಟಿಷರಿಗೆ ನೆರವಾದನು. ೪ನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಮರಣ ಹೊಂದಿದಾಗ ಮೈಸೂರು ಸಂಸ್ಥಾನವು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ನೀಡಲ್ಪಟ್ಟಿತು. ಮೈಸೂರು ಸಂಸ್ಥಾನದ ಆಡಳಿತ ವ್ಯಾಪ್ತಿಯಲ್ಲಿನ ಚಿತ್ರದುರ್ಗ ಸಂಸ್ಥಾನವನ್ನು ಹಿಂತಿರುಗಿಸಿರುವಂತೆ ಬ್ರಿಟಿಷರು ಮನವಿ ಮಾಡಿದರು. ಆದರೆ ಮೈಸೂರು

ಸಂಸ್ಥಾನದ ದಿವಾನ್ ಪೂರ್ಣಯ್ಯನವರು ಚಿತ್ರದುರ್ಗವನ್ನು ಹಿಂತಿರುಗಿಸಲಿಲ್ಲ. ನಿರಾಶೆಗೊಂಡ ಹಿರೇಮದಕೇರಿ ನಾಯಕ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಗೆ ಬಂದು ಅಲ್ಲೇ ನೆಲೆನಿಂತು ಮರಣ ಹೊಂದಿದನು.[೩೫] ಇದರೊಂದಿಗೆ ಚಿತ್ರದುರ್ಗದ ನಾಯಕ ಮನೆತನವೂ ಸಂಪೂರ್ಣವಾಗಿ ಚರಿತ್ರೆಯ ಪುಟಗಳಿಂದ ಕಣ್ಮರೆಯಾಯಿತು.

ಅವಲೋಕನ

ವಿಜಯನಗರದ ತುಳುವ ಮನೆತನದವರಿಂದ ಅಮರನಾಯಕತವನ್ನು ಪಡೆದು ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬಂದ ಚಿತ್ರದುರ್ಗ ನಾಯಕರು ಅರವೀಡು ಮನೆತನದ ಶ್ರೀರಂಗರಾಯನ ಕಾಲದವರೆಗೂ ಅವರ ಕಾರ್ಯಕರ್ತರಾಗಿದ್ದರು. ಬದಲಾದ ರಾಜಕೀಯ ಸನ್ನಿವೇಶಗಳನ್ನು ಬಳಸಿಕೊಂಡು ಸಂಪೂರ್ಣ ಸ್ವತಂತ್ರಗೊಂಡ ಚಿತ್ರದುರ್ಗ ನಾಯಕರು ಹದಿನೆಂಟನೆಯ ಶತಮಾನದವರೆಗೂ ಮುಂದುವರಿದರು. ತಮ್ಮ ಅಸ್ತಿತ್ವಕ್ಕಾಗಿ ಯುದ್ಧಗಳನ್ನು ಮಾಡುತ್ತಲೇ ಜನಪ್ರಿಯ ನಾಯಕರಾಗಿ ಹೊರಹೊಮ್ಮಿ ಸಮಕಾಲೀನ ಪಾಳೆಯಗಾರರಲ್ಲಿ ಬಲಾಢ್ಯ ಪಾಳೆಯಗಾರರಾಗಿ ಹೊರಹೊಮ್ಮಿದರು. ಯುದ್ಧ ಪ್ರಿಯರು, ಸಾಹಸಿಗಳು ಆಗಿದ್ದ ಇವರು ಹಲವಾರು ದೇವಾಲಯಗಳನ್ನು, ಕೆರೆ-ಕಾಲುವೆಗಳನ್ನು ನಿರ್ಮಿಸಿದರು. ಹಗಲು ಕಗ್ಗೊಲೆ ಮಾನ್ಯ ಗಾದರಿಮಲೆ ಹೆಬ್ಬುಲಿ, ಶ್ರೀಮನ್‌ಮಹಾನಾಯಕಾಚಾರ್ಯ, ಗಂಡುಗೊಡಲಿಯಸರ್ಜಾ, ಚಂದ್ರಾವಿ ಛಲದಾಂಕಿ ಧೂಳ್‌ಕೋಟೆ ವಜೀರ ಮೊದಲಾದ ಬಿರುದುಗಳು ಅವರ ಶಕ್ತಿ ಸಾಮರ್ಥ್ಯಕ್ಕೆ ನಿದರ್ಶನವಾಗಿವೆ.

೧. ಭೌಗೋಳಿಕವಾಗಿ ಚಿತ್ರದುರ್ಗ ಸಂಸ್ಥಾನವು ಬೆಟ್ಟ-ಗುಡ್ಡಗಳ ಪ್ರವೇಶದಲ್ಲಿದ್ದುದರಿಂದ ನೈಸರ್ಗಿಕವಾಗಿ ತುಂಬಾ ರಕ್ಷಣಾತ್ಮಕವಾದ ೭ ಸುತ್ತಿನ ಕೋಟೆಯಿಂದ ಆವೃತ್ತವಾಗಿತು. ಆದುದರಿಂದ ಚಿತ್ರದುರ್ಗದ ನಾಯಕರು ರಾಜಕೀಯವಾಗಿ ಸ್ಥಿರತೆಯನ್ನು ಆರಂಭದಲ್ಲಿಯೇ ಗಳಿಸಿಬಿಟ್ಟರು. ಈ ಸಂತತಿಯ ಮೊದಲ ಐತಿಹಾಸಿಕ ದೊರೆ ಮತ್ತಿ ತಿಮ್ಮಣ್ಣ ನಾಯಕನು ವಿಜಯನಗರದ ಅರಸರ ಅನುಮತಿ ಪಡೆದು ಚಿತ್ರದುರ್ಗದ ಬೆಟ್ಟಗುಡ್ಡಗಳ ಮಧ್ಯೆ ಕಲ್ಲಿನ ಕೋಟೆಯನ್ನು ನಿರ್ಮಿಸಿ ಅರಮನೆಯನ್ನು ನಿರ್ಮಿಸಿಕೊಂಡಿದ್ದು ತನ್ನ ಮುಂದಿನ ವಂಶಜರಿಗೆ ಭದ್ರವಾದ ರಾಜಕೀಯ ನೆಲೆಯನ್ನು ಒದಗಿಸಿಕೊಡುವಲ್ಲಿ ಯಶ್ವಸಿಯಾದ.

೨. ಮೂಲತಃ ವಾಲ್ಮೀಕಿ ಗೋತ್ರ ಕಾಮಗೇತಿ ವಂಶದ ಬೇಡ ಸಮುದಾಯಕ್ಕೆ ಸೇರಿದ್ದ ಈ ಮನೆತನಕ್ಕೆ ವಿಜಯನಗರದವರ ಪ್ರೋತ್ಸಾಹ ಹೆಚ್ಚಾಗಿತ್ತು. ವಿಜಯನಗರದ ಅರಸ ಸದಾಶಿವರಾಯನ ಅನುಮತಿಯಿಂದ ಅವನ ಕಾರ್ಯಕರ್ತರಾದ ಎರೆದಿಮ ರಾಜನು ತಿಮ್ಮಣ್ಣ ನಾಯಕನಿಗೆ ನಾಯಕತನವನ್ನು ನೀಡಿ ಚಿತ್ರದುರ್ಗ ಪ್ರಾಂತ್ಯದಲ್ಲಿ ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬರಲು ಕಾರಣರಾದರು. ಅದರಂತೆ ಅರವೀಡು ಮನೆತನದ ರಾಮರಾಯನು ತಿಮ್ಮಣ್ಣ ನಾಯಕನ ಮಗನಾದ ಓಬಣ್ಣ ನಾಯಕನಿಗೆ ನಾಯಕತನವನ್ನು ಮುಂದುವರಿಸಿದ್ದು ಕೂಡ ವಿಜಯನಗರದ ಬೆಂಬಲವನ್ನು ಸೂಚಿಸುತ್ತದೆ. ಚಿತ್ರದುರ್ಗದ ನಾಯಕರು ಕೂಡ ಕಸ್ತೂರಿ ರಂಗಪ್ಪ ನಾಯಕನನ್ನು ಹೊರತುಪಡಿಸಿ

ಅವನ ಮಗ ಇಮ್ಮಡಿ ಮದಕೇರಿ ನಾಯಕ ಅರವೀಡು ಮನೆತನದ ಶ್ರೀರಂಗರಾಯನ ಕಾರ್ಯಕರ್ತನಾಗಿದ್ದನ್ನು ಶಾಸನಗಳು ಸ್ಪಷ್ಟಪಡಿಸುತ್ತವೆ. ಅರವೀಡು ಮನೆತನದ ಪತನದ ನಂತರ ಸಂಪೂರ್ಣ ಸ್ವತಂತ್ರರಾದ ಚಿತ್ರದುರ್ಗ ನಾಯಕರು ಮರಾಠರಿಗೆ, ನಿಜಾಮರಿಗೆ, ಹೈದರಾಲಿಯೊಂದಿಗೆ ಯುದ್ಧಗಳನ್ನು ಇಲ್ಲವೇ ಶಾಂತಿ ಒಪ್ಪಂದಗಳನ್ನು ಮಾಡಿಕೊಳ್ಳುತ್ತ ತಮ್ಮ ಸಂಸ್ಥಾನವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಿದ್ದುದು ಕಂಡು ಬರುತ್ತದೆ.

೩. ಕಾಮಗೇತಿ ಮನೆತನದ ಅರಸರು ನಾಯಕ ಜನಾಂಗದವರಾಗಿದ್ದರು ಸಹ ಶ್ರೀ ವೈಷ್ಣವ ಪಂಥದ ಭಕ್ತರಾಗಿದ್ದರು. ಆಹೋಬಲ ನರಸಿಂಹಸ್ವಾಮಿ ಈ ಮನೆತನದ ದೇವರು. ಮೇಲುಕೋಟೆ, ತಿರುಪತಿ ಹಾಗೂ ಆಹೋಬಲಕ್ಕೆ ಸಮಾನ ಭಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಚಿತ್ರದುರ್ಗ ಆರಾಭ ನಾಯಕರು ಶೈವ ಪಂಥದ ರಸಸಿದ್ಧರ ಪ್ರಭಾವಕ್ಕೆ ಒಳಗಾಗಿದ್ದರು. ಬಿಚ್ಚುಗತ್ತಿಯ ಬರಮಣ್ಣ ನಾಯಕ ಮುರುಘಾ ಶ್ರೀಗಳಿಗೆ ಕೋಟೆಯಲ್ಲಿ ಮಠವನ್ನು ನಿರ್ಮಿಸಿ ಅವರು ನೆಲೆಯೂರಲು ಕಾರಣಕರ್ತನಾದ. ಹೀಗೆ ಶೈವ, ವೈಷ್ಣವ ಪಂಥಗಳನ್ನಷ್ಟೆ ಅಲ್ಲದೆ ಶಾಕ್ತ ಪಂಥಕ್ಕೂ ಸಮಾನ ಗೌರವಾಭಿಮಾನಗಳನ್ನು ತೋರಿಸುತ್ತಿದ್ದರು. ಇವರ ಕಾಲದಲ್ಲಿ ನಿರ್ಮಾಣವಾದ ಏಕನಾಥೇಶ್ವರಿ ದೇಗುಲ, ಉಚ್ಚಂಗಿ ಎಲ್ಲಮ್ಮ ದೇವಾಲಯಗಳು ಇದಕ್ಕೆ ನಿದರ್ಶನವಾಗುತ್ತವೆ. ಚನ್ನಕೇಶವ ದೇವಾಲಯ, ರಂಗನಾಥ, ವೇಣುಗೋಪಾಲ, ಮೊದಲಾದ ದೇವಾಲಯಗಳು ಇವರ ಕಾಲದಲ್ಲಿ ನಿರ್ಮಾಣಗೊಂಡಿದ್ದು ಸಾಂಸ್ಕೃತಿಕ ಸುಭೀಕ್ಷೆಗೆ ನಿದರ್ಶನವಾಗಿದೆ.

೪. ಈ ಸಂಸ್ಥಾನದ ಉದ್ದಕ್ಕೂ ರಾಜಕೀಯ ಅಸ್ಥಿರತೆ ಕಂಡುಬಂದರೂ ಅವುಗಳೆಲ್ಲವನ್ನು ಮೆಟ್ಟಿ ನಿಲ್ಲುವ ಬಲಾಢ್ಯ ಗಂಡುಮೆಟ್ಟಿನ ಕಲಿಗಳನ್ನು ನೀಡಿದ ಹೆಮ್ಮೆ ಈ ನಾಯಕ ಮನೆತನದ್ದು ಮರಾಠರ, ಮೊಗಲರ, ನವಾಬರ, ನಿಜಾಮರ, ಹೈದರಾಲಿಯ ದಾಳಿಗಳು ಹಾಗೂ ಸುತ್ತಮುತ್ತಲಿನ ಪಾಳೆಯಗಾರರ ದಾಳಿಗಳು ಹಾಗೂ ಸಂಸ್ಥಾನದ ಒಳಗಿನ ದಳವಾಯಿಗಳ ಸಂಘರ್ಷಗಳು, ರಾಜ ಮನೆತನದವರ ಪಿತೂರಿಗಳ ಮಧ್ಯೆಯೂ ಸುಮಾರು ೨೫೦ ವರ್ಷಗಳಷ್ಟು ಸುದೀರ್ಘ ಕಾಲ ಚಿತ್ರದುರ್ಗವನ್ನು ಆಳಿದ್ದು ನಾಯಕರ ಗಂಡುಗಲಿತನವನ್ನು, ಎದೆಗಾರಿಕೆಯನ್ನು ರಾಜಕೀಯ ಚಾಣಕ್ಷತನವನ್ನು ತೋರಿಸುತ್ತದೆ.

೫. ಚಿತ್ರದುರ್ಗ ನಾಯಕರು ಧರ್ಮಬೀರುಗಳಾಗಿದ್ದು ಕೂಡ್ಲೀ ಶೃಂಗೇರಿ ಮಠದ ಅನನ್ಯ ಭಕ್ತರಾಗಿದ್ದರು. ಕೂಡ್ಲೀ ಶೃಂಗೇರಿ ಮಠಕ್ಕೆ ಇವರು ನೀಡಿರುವ ಭೂದಾನಗಳು ಹಾಗೂ ಶೃಂಗೇರಿ ಮಠದೊಂದಿಗೆ ನಡೆಸುತ್ತಿದ್ದ ಪತ್ರ ವ್ಯವಹಾರಗಳು ಇವರ ಧರ್ಮ ರಕ್ಷಣಾ ಕಾರ್ಯಕ್ಕೆ ಸಾಕ್ಷಿಯಾಗಿವೆ.

೬. ಈ ಮನೆತನದ ಕೊನೆಯ ನಾಯಕನಾದ ರಾಜವೀರ ಮದಕೇರಿ ನಾಯಕನು ಹೈದರಾಲಿಯ ಕೈಗೆ ಸೆರೆಸಿಕ್ಕ ಶ್ರೀರಂಗಪಟ್ಟಣ ಸೆರೆಮನೆಯಲ್ಲಿ ಕೊನೆಯುಸಿರೆಳೆದಿದ್ದು ದುರಂತದ ಸಂಗತಿಯಾಗಿದೆ. ಚಿತ್ರದುರ್ಗದ ನಾಯಕರೆಂದರೆ ಯುದ್ಧಕಲಿಗಳು, ಸಾಹಸಿಗಳು, ಪರಾಕ್ರಮಿಗಳು, ಶೂರರು, ಗಂಡುಗಲಿಗಳು ಎಂಬ ಚಿತ್ರಣವೇ ಜನಮಾನಸದಲ್ಲಿರುವುದು ಇಂದಿಗೂ ಅವರ ಶೌರ್ಯ, ಪರಾಕ್ರಮಗಳ ಸಂಕೇತವಾಗಿದೆ.

೪.೫ ಹರತಿ ಪಾಳೆಯಗಾರರು

ಪೀಠಿಕೆ: ಈಗ ಹರ್ತಿಕೋಟೆ ಎಂದೇ ಹೆಸರಾಗಿರುವ ಅಂದಿನ ಹರತಿಯು ಇಂದಿನ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಒಂದು ಸಣ್ಣ ಗ್ರಾಮ ಪ್ರದೇಶವಾಗಿದೆ. ವಿಜಯನಗರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಸುಪ್ರಸಿದ್ಧ ಅಮರನಾಯಕ ಮನೆತನಗಳಲ್ಲಿ ಹರತಿಯು ಒಂದಾಗಿದೆ. ಈ ವಂಶದ ಮೂಲ ಪುರುಷನಾದ ತಿಪ್ಪರಾಜನು ವಿಜಯನಗರದ ಸಂಗಮ ವಂಶದ ದೊರೆಗಳಾದ ಹಕ್ಕ ಬುಕ್ಕರ ಸೇನೆಯಲ್ಲಿ ಪ್ರಬಲ ದಂಡನಾಯಕನಾಗಿದ್ದನು. ವಿಜಯನಗರದ ಅರಸರಿಂದ ಚಿತ್ರದುರ್ಗ ಜಿಲ್ಲೆಯ ವೇದಾವತಿ ನದಿ ತೀರದ ಕೆಲವು ಪ್ರದೇಶಗಳನ್ನು ಉಂಬಳಿಯಾಗಿ ಪಡೆದು ವಿಜಯನಗರದ ಸಾಮಂತನಾಗಿ ಅಧಿಕಾರವನ್ನು ಆರಂಭಿಸಿದನು. ಹೀಗೆ ತಿಪ್ಪರಾಜನ ಮೂಲಕ ವಿಜಯನಗರದ ಸಾಮಂತರಾಗಿ, ಅವರ ಅಮರನಾಯಕರಾಗಿ ರಾಜಕೀಯ ರಂಗವನ್ನು ಪ್ರವೇಶಿಸಿದ ಹರತಿಯ ವಂಶವೂ, ಮುಂದೆ ಕೋಟೆಕೆರೆ, ಬುಕ್ಕಾಪಟ್ಟಣ, ಪರಶುರಾಂಪುರ, ದೊಡ್ಡೇರಿ, ಐಮಂಗಲ, ತಳಕು, ಹೊಸಕೋಟೆ, ಮಡಕಶಿರಾ, ರತ್ನಗಿರಿ, ನಿಡುಗಲ್ಲು ಮೊದಲಾದ ಕಡೆ ಪಾಳೆಯ ಪಟ್ಟುಗಳನ್ನು ಸ್ಥಾಪಿಸಿತು. ಮೂಲತಃ ಕನ್ನಡಿಗರಾಗಿದ್ದ ಹರತಿಯ ನಾಯಕರು ಕರ್ನಾಟಕದಲ್ಲಿ ಪ್ರಮುಖ ಪಾಳೆಯಪಟ್ಟುಗಳ ಹುಟ್ಟಿಗೆ ಕಾರಣರಾಗಿ ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಗಳಿಸಿದ್ದಾರೆ.

ಆಕರಗಳು

ಹರತಿಯ ಪಾಳೆಯಗಾರರಿಗೆ ಸಂಬಂಧಿಸಿದಂತೆ ಆಕರಗಳು ಅತ್ಯಂತ ಕಡಿಮೆ ಪ್ರಮಾಣದಲ್ಲಿ ದೊರಕುತ್ತವೆ. ಇರುವ ಆಕರಗಳನ್ನು ವಿಶ್ಲೇಷಿಸಿ ಹರತಿ ನಾಯಕರ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ರಚಿಸಲಾಗಿದೆ.

೧. ಹರತಿ ನಾಯಕರಿಗೆ ಸಂಬಂಧಿಸಿದ ಶಾಸನಗಳು ಕ್ರಿಶ. ೧೩೧೩ರಿಂದ ಕ್ರಿಶ. ೧೭೩೮ರವರೆಗೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಹಿರಿಯೂರು ಮತ್ತು ಹೊಳಲ್ಕೆರೆಗಳಲ್ಲಿ ದೊರೆತಿದ್ದು ಬಿ.ಎಲ್. ರೈಸ್ (ಸಂ) ಅವರ ಎಪಿಗ್ರಾಫಿಯಾ ಕರ್ನಾಟಿಕಾ ಶಾಸನ ಸಂಪುಟ ೧೧ರಲ್ಲಿ ಪ್ರಕಟಗೊಂಡಿವೆ. ಈ ಶಾಸನಗಳು ಹರತಿ ಪಾಳೆಯಗಾರರ ರಾಜಕೀಯ, ಆಡಳಿತಾತ್ಮಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸಾಧನೆಗಳಿಗೆ ಸಂಬಂಧಿಸಿದಂತೆ ಅತ್ಯಮೂಲ್ಯವಾದ ಮಾಹಿತಿಯನ್ನು ನೀಡುತ್ತವೆ.[೫೩]

೨. ಈ ಮನೆತನಕ್ಕೆ ಸಂಬಂಧಪಟ್ಟ ಜಯರೇಖೆಯೊಂದು ಹರತಿ ವಂಶಸ್ಥರ ವಶದಲ್ಲಿದ್ದು, ಈ ಜಯರೇಖೆಯ ಆಧಾರದ ಮೇಲೆ ದಿವಂಗತ ಹೆಚ್.ವಿ. ವೀರನಾಯಕ ಹರತಿಯವರು 'ಹಾರತೇಯರು' ಎಂಬ ಲೇಖನವನ್ನು ಹರತಿ ಸಿರಿ ಎಂಬ ಸಂಪಾದಿತ ಕೃತಿಯಲ್ಲಿ ಪ್ರಕಟಿಸಿದ್ದಾರೆ. ಈ ಜಯರೇಖೆಯಲ್ಲಿರುವ ಮಾಹಿತಿಗಳು ಹಲವಾರು ದಂತಕತೆಗಳಿಂದ ಕೂಡಿದ್ದು ಅದರಲ್ಲಿನ ಮಾಹಿತಿಯೇ ಇತಿಹಾಸಕಾರರಲ್ಲಿ ಸಾಕಷ್ಟು ಗೊಂದಲವನ್ನು ಮೂಡಿಸುತ್ತದೆ. ಈ ಜಯರೇಖೆಯು ಮಂದಪ್ಪ ನಾಯಕನ ಪೂರ್ವಜರಾದ ಆರು ಮಂದಿಯ ವಂಶಾವಳಿಗಳನ್ನು ಉಲ್ಲೇಖಿಸುತ್ತದೆ.

ಈ ಜಯರೇಖೆಯು ಹರತಿಯವರನ್ನು ಹಾರತೇಯರೆಂದು ಉಲ್ಲೇಖಿಸಿದೆ. ಇದರಲ್ಲಿರುವ ಮಾಹಿತಿಯನ್ನು ವಿಶ್ಲೇಷಿಸಿದಾಗ ಬಾದಾಮಿಯ ಚಾಲುಕ್ಯರು, ಬನವಾಸಿಯ ಕದಂಬರು ಕೂಡ ತಮ್ಮನ್ನು ಹಾರೀತಿ ಪುತ್ರರೆಂದು ಕರೆದುಕೊಂಡಿದ್ದಾರೆ. ಆದುದರಿಂದ ಹರತಿ ಪಾಳೆಯಗಾರರ ವಂಶದದವರೂ, ಕದಂಬರು ಚಾಲುಕ್ಯರು ಒಂದೇ ಮೂಲದಿಂದ ಬಂದವರಿರಬೇಕು. ಈ ಬಗ್ಗೆ ಮತ್ತಷ್ಟು ಸಂಶೋಧನೆಗಳು ನಡೆದರೆ ಮಾತ್ರ ನಿಖರ ವಿವರಗಳು ದೊರೆಯಬಲ್ಲವು.

೩. ೨೦೦೧ರಲ್ಲಿ ಕನ್ನಡ ವಿಶ್ವವಿದ್ಯಾಲಯವು ಹೊರತಂದಿರುವ ಎಂ. ವಸು (ಸಂ) ದಕ್ಷಿಣ ಕರ್ನಾಟಕದ ಅರಸು ಮನತನಗಳು ಎಂಬ ಕೃತಿಯಲ್ಲಿ ಬಿ.ಮಂ. ಶ್ಯಾಮಲಾ ರತ್ನಕುಮಾರಿಯವರು ಹರತಿ ಪಾಳೆಯಗಾರರು ಲೇಖನವನ್ನು ಪ್ರಕಟಿಸಿದ್ದು ಹರತಿ ನಾಯಕರ ರಾಜಕೀಯ ಇತಿಹಾಸವನ್ನು ದಾಖಲು ಮಾಡಲಾಗಿದೆ.

೪. ಲಕ್ಷ್ಮಣ್ ತೆಲಗಾವಿ (ಸಂ) ನೇತೃತ್ವದಲ್ಲಿ ಹೊರತರಲಾಗಿರುವ ಹರತಿ ಸಿರಿ ಎಂಬ ಅಭಿನಂದನಾ ಗ್ರಂಥದಲ್ಲಿ ಹರತಿ ಪಾಳೆಯಗಾರರಿಗೆ ಸಂಬಂಧಿಸಿದಂತೆ ಮೂರು ಸಂಶೋಧನಾ ಲೇಖನಗಳು ಪ್ರಕಟಗೊಂಡಿವೆ. ಈ ಲೇಖನಗಳು ಹರತಿಯ ವಂಶಾವಳಿ, ಹಾರತೇಯರ ಮೂಲ, ಹಾಗೂ ಹರತಿಯ ಸ್ಮಾರಕಗಳನ್ನು ಕುರಿತಾಗಿದೆ.

೫. ಹರತಿ ಸಂಸ್ಥಾನದ ರಾಜಕೀಯ ಚರಿತ್ರೆಯ ಮೇಲೆ ಅಲ್ಪಸಲ್ಪ ಮಾಹಿತಿಯನ್ನು ಬಿ.ಎನ್. ಸತ್ಯನ್ (ಸಂ) ಮೈಸೂರು ಸ್ಟೇಟ್ ಗೆಝೆಟಿಯರ್ ಹಾಗೂ ಕರ್ನಾಟಕ ವಿಷಯ ವಿಶ್ವಕೋಶದಲ್ಲಿ, ಕಲಬುರ್ಗಿ (ಸಂ) ಅವರ ಕರ್ನಾಟಕ ಕೈಫಿಯತ್ತುಗಳಲ್ಲಿ ಕಾಣಬಹುದು.

೬. ಡಾ.ಸಿ.ಆರ್. ಶ್ಯಾಮಲ ಅವರ 'ಪೂರ್ವ ಕರ್ನಾಟಕದ ಪಾಳೆಯಗಾರರು' ಪ್ರಕಟಿತ ಪಿಎಚ್.ಡಿ. ಸಂಶೋಧನಾ ಕೃತಿ ಹರತಿಯ ನಾಯಕರ ಕುರಿತು ಸಂಕ್ಷಿಪ್ತವಾದ ಮಾಹಿತಿಯು ದಾಖಲುಗೊಂಡಿದೆ.

ಮೂಲ: ವಿಜಯನಗರ ಸಾಮ್ರಾಜ್ಯದ ಆಡಳಿತಾವಧಿಯಲ್ಲಿ ಉದಯವಾದ ನೂರಾರು ಅಮರನಾಯಕ ಮನೆತನಗಳ ಮೂಲವನ್ನು ಹುಡುಕುವುದು ಬಹುದೊಡ್ಡ ಸವಾಲಿನ ಕೆಲಸ. ಏಕೆಂದರೆ ವಿಜಯನಗರ ಸಾಮ್ರಾಜ್ಯದ ಉದಯದೊಂದಿಗೆ ತಳಕು ಹಾಕಿಕೊಂಡ ದಂತಕತೆಗಳ ನಾಯಕ ಮನೆತನಗಳ ಉದಯದೊಂದಿಗೆ ತಳಕು ಹಾಕಿಕೊಂಡಿವೆ. ಮೊಲ ನಾಯಿಯನ್ನು ಅಟ್ಟಿಸಿಕೊಂಡು ಬಂದ ಕಥೆಯಂತೂ ವಿಜಯನಗರದ ಸಮಕಾಲೀನ ಬಹುತೇಕ ನಾಯಕ ಮನೆತನಗಳ ಸ್ಥಾಪನೆಯ ಕಥೆಯಲ್ಲಿ ಸಾಮಾನ್ಯವಾಗಿ ಕಂಡು ಬರುವ ಅಂಶ. ಹೀಗಾಗಿ ಕರ್ನಾಟಕದಲ್ಲಿ ಕ್ರಿ.ಶ. ೧೬, ೧೭ ಮತ್ತು ೧೮ ಶತಮಾನದಲ್ಲಿ ಉದಯವಾದ ಪಾಳೆಯಗಾರರ ಮೂಲ ಪುರುಷರ ಬಗ್ಗೆ ಏನನ್ನು ಸ್ಪಷ್ಟವಾಗಿ ಹೇಳುವುದು ಸಾಧ್ಯವಾಗುವುದಿಲ್ಲ.[೫೪] ಈ ಮನೆತನದ ಮೂಲಪುರುಷನಾದ ತಿಪ್ಪರಾಜನ ಬಗ್ಗೆ ಐತಿಹ್ಯವೊಂದರಲ್ಲಿ ದಾಖಲಾಗಿದೆ.

೧. ತಿಪ್ಪರಾಜನ ಪೂರ್ವಜರು ಬಿಜಾಪುರ ಪ್ರದೇಶದ ಹರತಿ ಮತ್ತು ದೊಡ್ಡೇರಿಗಳ ನಿವಾಸಿಗಳಾಗಿದ್ದು ಚಲುವಾದಿ ಹೊಲೆಯ ಜನಾಂಗಕ್ಕೆ ಸೇರಿದವರಾಗಿದ್ದರು. ಕ್ಷತ್ರಿಯ ವಂಶಜನಾದ ತಿಮ್ಮ ರಾಜನೆಂಬುವವನ ಕನ್ಯೆಯ ಮಗಳಿಗೆ ಸೂರ್ಯನ ವರಪ್ರಸಾದದಿಂದ ಜನಿಸಿದ ಮಗುವನ್ನು ತಿಪ್ಪೆಯಲ್ಲಿ ಬಿಸಾಕಿದರು. ಆ ಮಗುವನ್ನು ಕಮ್ಮನೆನ್ನುವ ಗೊಲ್ಲನು ತಂದು ಸಾಕಿದನು. ಎಮ್ಮೆಯ ಹಾಲನ್ನು ಕುಡಿದು ಬೆಳೆದಿದ್ದರಿಂದ ಇವನಿಗೆ ಎನುಮಲ ಎಂಬ ಹೆಸರು ಸೇರಿಕೊಂಡಿತು. ತಿಪ್ಪರಾಜನು ಕೆಲವು ಕಾಲದ ನಂತರ ಕಮಲಾಪುರದಲ್ಲಿ ಬಂದು ನೆಲೆನಿಂತನು. ಒಮ್ಮೆ ವಿಜಯನಗರದ ದೊರೆ ಕೃಷ್ಣದೇವರಾಯನು ಹುಲಿ ಕಾಳಗವನ್ನು ನೋಡಲು ಬಂದಿದ್ದಾಗ ಹುಲಿಯೊಂದು ತಪ್ಪಿಸಿಕೊಂಡು ಹೋಗಿ ಊರ ದನಕರುಗಳ ಮೇಲೆ ಬೀಳಲು ಅದನ್ನು ಕಂಡು ಬಾಲಕನು ಧೈರ್ಯದಿಂದ ಮುನ್ನುಗ್ಗಿ ಹುಲಿಯನ್ನು ಕೊಂದುಹಾಕಿದನು. ವಿಜಯನಗರ ಅರಸನ ಕೃಪಾದೃಷ್ಟಿಗೆ ಬಿದ್ದನು. ಕೆಲ ದಿನಗಳ ತರುವಾಯ ವಿಜಯನಗರ ಆಸ್ಥಾನಕ್ಕೆ ಬಂದ ಜಟ್ಟಿಯನ್ನು ಸೋಲಿಸಿದನು. ತಿಪ್ಪನ ಈ ಶೌರ್ಯ, ಸಾಹಸಗಳನ್ನು ಮೆಚ್ಚಿ ಕೃಷ್ಣದೇವರಾಯನು ಚಿತ್ರದುರ್ಗ ಜಿಲ್ಲೆಯ ಪೂರ್ವ ಭಾಗವಾದ ವನರಾಜ್ಯವನ್ನು ಜಹಗೀರಿಯಾಗಿ ನೀಡಿದನು. ಈ ವನರಾಜ್ಯವು ಮಾಚಿ ಸಮುದ್ರ, ಗೋಸಿಕೆರೆ ಮತ್ತು ಚಳ್ಳಕೆರೆ ಪ್ರಾಂತ್ಯಗಳನ್ನು ಒಳಗೊಂಡಿತ್ತು.[೫೫]

ಈ ಐತಿಹ್ಯವನ್ನು ನಂಬಲು ಸಾಧ್ಯವೇ ಇಲ್ಲ. ತಿಪ್ಪರಾಜನ ಮೂಲವನ್ನು ಮಹಾಭಾರತದ ಕರ್ಣನ ಜನನದ ಮೂಲಕ್ಕೆ ಹೋಲಿಸಿದಂತೆ ಕಾಣುತ್ತದೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಸಾಮಾನ್ಯ ಬೇಡ ಜಾತಿ ವಾಲ್ಮೀಕಿ ಗೋತ್ರದ ಎನುಮಲ ಶಾಖೆಯ ವೀರನಿಗೆ ಕ್ಷತ್ರಿಯ ಸ್ಥಾನಮಾನ ಕೊಡಿಸಲು ಈ ಕಥೆ ರೂಪುಗೊಂಡಿರಬೇಕು. ಹಾಗೂ ತಿಪ್ಪರಾಜನು ತುಳುವ ವಂಶದ ಕೃಷ್ಣದೇವರಾಯನಿಂದ ನಾಯಕತನವನ್ನು ಪಡೆದನು ಎಂಬುದಕ್ಕೆ ಯಾವುದೇ ಐತಿಹಾಸಿಕ ಆಧಾರವಿಲ್ಲ. ತಿಪ್ಪರಾಜನು ಸಂಗಮ ವಂಶದ ಹರಿಹರರಾಯ ಮತ್ತು ಬುಕ್ಕರಾಯನ ಸಮಕಾಲೀನನಾಗಿರುವುದರಿಂದ ಹರತಿಯ ಮೂಲ ಪುರುಷನನ್ನು ಹುಡುಕುವಲ್ಲಿ ಇತಿಹಾಸಕಾರರು ಈ ಐತಿಹ್ಯವನ್ನು ಕೈಬಿಡಬೇಕಾಗುತ್ತದೆ.

೨. ನಿಡುಗಲ್ಲು ಅರಸುಗಳ ವಂಶಾವಳಿಯು ಕೃಷ್ಣರಾಯರು ಬಾಲಕ ತಿಪ್ಪರಾಜನನ್ನು ತಮ್ಮ ತೊಡೆಯ ಮೇಲೆ ಕೂರಿಸಿಕೊಂಡು ಆತ ಮಾತಾಪಿತರನನ್ನು ಕರೆಯಿಸಿ, ಆ ಮಗುವಿನ ಪೂರ್ವೋತ್ತರವೆಲ್ಲ ವಿಚಾರಿಸಿ, ತಮ್ಮ ಸಂಗಡ ವಿಜಯನಗರಕ್ಕೆ ಕರೆದೊಯ್ದು, ಕೆಂಚಪ್ಪನಾಯಕನ ಕುಮಾರಿ ವೀರಮ್ಮ ಎಂಬುವಳನ್ನು ಕೊಡಿಸಿ ಮದುವೆ ಮಾಡಿಸಿದರು ಎನ್ನುತ್ತದೆ.[೫೬]

ಈ ಕಥೆಯು ಕೂಡ ಸತ್ಯಕ್ಕೆ ದೂರವಾದ ಕಥೆಯಾಗಿದ್ದು ತಿಪ್ಪರಾಜನು ಕೃಷ್ಣದೇವರಾಯನ ಕಾಲದವನಲ್ಲ. ಕೃಷ್ಣದೇವರಾಯನು ವಿಜಯನಗರದ ಸುಪ್ರಸಿದ್ಧ ಅರಸನಾಗಿದ್ದರಿಂದ ಈ ನಿಡುಗಲ್ಲು ವಂಶಾವಳಿಯ ರಚನೆಕಾರರು ಕೃಷ್ಣರಾಯನ ಕಾಲದವನೆಂದು ತಿಪ್ಪರಾಜನನ್ನು ನಿರೂಪಿಸುವ ವ್ಯರ್ಥ ಪ್ರಯತ್ನ ಮಾಡಿರುವುದು ಸ್ಪಷ್ಟವಾಗಿ ತಿಳಿಯುತ್ತದೆ.

೩. ದಿವಂಗತ ಹೆಚ್.ಬಿ. ವೀರನಾಯಕ ಹರತಿಯು ಸಂಪಾದಿಸಿರುವ ಆನೆಗೊಂದಿ ನರಪತಿಗಳ ಜಯರೇಖೆಯು ಆನೆಗೊಂದಿಯು ಇವರ ಮೂಲವೆಂದು ಉಲ್ಲೇಖಿಸುತ್ತದೆ. ಶ್ರೀದೇವಿ ಹರತಿ ಈ ಮನೆತನದ ಕುಲದೇವತೆಯೆಂದು, ಅವಳ ಕೃಪೆಯಿಂದ ಜನಸಿದ ಪುತ್ರ ಹಾರತೇಯ ಹಾಗೂ ಇವನ ಸಂತತಿಯವರು ಹರತಿ ಪಾಳೆಯಗಾರರು ಎಂಬ ಹೆಸರನ್ನು ಪಡೆದರು. ಕದಂಬ ಚಾಲುಕ್ಯ ವಂಶದವರಂತೆ ತಮ್ಮನ್ನು ಹಾರತೀ ಪುತ್ರರೆಂದು ಕರೆದುಕೊಂಡಿದ್ದಾರೆ.[೫೭]

೪. ಮತ್ತೊಂದು ಮೂಲದ ಪ್ರಕಾರ ಇವರು ವಿಜಾಪುರ ಜಿಲ್ಲೆಯ ಹರತಿ ಮತ್ತು ದೊಡ್ಡೇರಿ ಪ್ರದೇಶದಿಂದ ವಲಸೆ ಬಂದವರೆಂದು, ವಿಜಯನಗರ ಕಾಲದಲ್ಲಿ ಅಮರನಾಯಕತನವನ್ನು ಪಡೆದುಕೊಂಡು ತಮ್ಮ ಮೂಲ ನೆಲೆಯಾದ ಹರತಿ ಮತ್ತು ದೊಡ್ಡೇರಿ ಸ್ಮರಣಾರ್ಥವಾಗಿ ಚಳ್ಳಕೆರೆ ಮತ್ತು ಹಿರಿಯೂರು ತಾಲ್ಲೂಕಿನಲ್ಲಿ ಕ್ರಮವಾಗಿ ದೊಡ್ಡೇರಿ ಮತ್ತು ಹರತಿ ಎಂಬ ಊರುಗಳನ್ನು ನಿರ್ಮಿಸಿದ್ದು ಇವರು ವಿಜಾಪುರದ ಮೂಲದವರೆಂದು ಸ್ಪಷ್ಟವಾಗುತ್ತದೆ.

ಈ ಮಾಹಿತಿಯನ್ನು ನಂಬುವುದಾದರೆ ದೊಡ್ಡೇರಿ ಮತ್ತು ಹರತಿ (ಇಂದಿನ ಹರ್ತಿಕೋಟೆ) ಇಂದಿಗೂ ಚಿತ್ರದುರ್ಗ ಜಿಲ್ಲೆಯಲ್ಲಿರುವ ಗ್ರಾಮಗಳಾಗಿದ್ದು ಹರತಿ ನಾಯಕ ಆಳ್ವಿಕೆಯ ಸ್ಮಾರಕವಶೇಷಗಳನ್ನು ಹೊತ್ತುಕೊಂಡು ನಿಂತಿವೆ. ಈ ಹಿನ್ನೆಲೆಯಲ್ಲಿ ಹರತಿ ಪಾಳೆಯಗಾರರ ಮೂಲ ಪುರುಷನಾದ ತಿಪ್ಪರಾಜನು ಬಿಜಾಪುರದವನಾಗಿದ್ದು, ಈತ ಅಪ್ಪಟ ಬೇಡ ನಾಯಕನಾಗಿದ್ದನೆಂದು ಹೇಳಬಹುದು. ಈತ ಬಿಜಾಪುರದಿಂದ ವಿಜಯನಗರಕ್ಕೆ ವಲಸೆ ಹೋಗಿ ವಿಜಯನಗರದ ಸೇನೆಯಲ್ಲಿ ದಳಪತಿ ಹುದ್ದೆಯನ್ನು ಗಳಿಸಿ ವಿಜಯನಗರದವರಿಂದ ಉಂಬಳಿಯಾಗಿ ಚಳ್ಳಕೆರೆ ಹಾಗೂ ಹಿರಿಯೂರು ತಾಲೂಕಿನ ಭೂಭಾಗವನ್ನು ಪಡೆದುಕೊಂಡು ಹರತಿ ಸಂಸ್ಥಾನದ ಸ್ಥಾಪನೆಯನ್ನು ಮಾಡಿದನು. ಈತನ ಮನೆತನವು ಮುಂದೆ ಹಲವಾರು ಕವಲುಗಳಾಗಿ ಒಡೆದುಹೋಗಿ ಕರ್ನಾಟಕದ ಹಲವಾರು ಪಾಳೆಯ ಪಟ್ಟುಗಳನ್ನು ಹುಟ್ಟುಹಾಕಿ ಸುಮಾರು ವರ್ಷಗಳ ಕಾಲ ಆಡಳಿತವನ್ನು ನಡೆಸಿತು.

ಸ್ಥಾಪನೆ

ಹರತಿ ಪಾಳೆಯಗಾರರ ಸಂತತಿಯು ಯಾರಿಂದ ಹೇಗೆ ಮತ್ತು ಯಾವಾಗ ಸ್ಥಾಪನೆಯಾಯಿತು ಎಂದು ಹುಡುಕುತ್ತ ಹೋದಂತೆ ಇವರ ಚರಿತ್ರೆಯು ಸಾಕಷ್ಟು ಕಗ್ಗಂಟಾಗುತ್ತಲೇ ಹೋಗುತ್ತದೆ. ಆನೆಗೊಂದಿ ನರಪತಿಯ ಜಯರೇಖೆಯ ತಿಪ್ಪರಾಜನನ್ನು ಹರತಿ ವಂಶದ ಮೂಲ ಪುರುಷನೆಂದು ಉಲ್ಲೇಖಿಸುತ್ತದೆ. ಚಿತ್ರದುರ್ಗದ ಗೆಝೆಟಿಯರ್ ಹಾಗೂ ಕೆಲವು ಸ್ಥಳೀಯ ಐತಿಹ್ಯಗಳು, ದಾಖಲೆಗಳು ಕೂಡ ಇದೇ ಅಂಶವನ್ನು ಸ್ಪಷ್ಟಪಡಿಸುತ್ತವೆ. ಹೀಗಾಗಿ ತಿಪ್ಪರಾಜನನ್ನೇ ಹರತಿ ಸಂತತಿಯ ಮೂಲ ಪುರುಷನೆಂದು ನಂಬಬೇಕಾಗುತ್ತದೆ. ತಿಪ್ಪರಾಜನು ವಿಜಯನಗರದ ಅರಸರಿಂದ ಚಿತ್ರದುರ್ಗ ಜಿಲ್ಲೆಯ ಪೂರ್ವ ಭಾಗವಾದ ವನರಾಜ್ಯವನ್ನು ಉಂಬಳಿಯಾಗಿ ಪಡೆದು ತನ್ನ ಸಂಸ್ಥಾನವನ್ನು ವಿಸ್ತರಿಸಿಕೊಂಡು ತನ್ನ ಪೂರ್ವಿಕರ ನೆನಪಿಗಾಗಿ ದೊಡ್ಡೇರಿ ಮತ್ತು ಹರತಿ ಪಟ್ಟಣಗಳನ್ನು ನಿರ್ಮಿಸಿದನು. ತನ್ನ ರಾಜ್ಯವನ್ನು ಚಿತ್ರದುರ್ಗದಿಂದ ಪಾವಗಡದವರೆಗೆ, ಮೊಳಕಾಲ್ಮೂರಿನಿಂದ ಸಿರಾದವರೆಗೆ

ವಿಸ್ತರಿಸಿದನು.[೫೮] ವಿಜಯನಗರ ಕಾಲದಲ್ಲಿ ಹರತಿಯವರೆಂದು ಹೇಳಿಕೊಂಡಿರುವ ಸುಮಾರು ೪೫ ಮಂದಿ ನಾಯಕರು ಒಂದೇ ಮನೆತನಕ್ಕೆ ಸೇರಿದವರಾಗಿದ್ದು ವಿವಿಧ ಪ್ರಾಂತ್ಯಗಳಲ್ಲಿ ಆಳ್ವಿಕೆ ನಡೆಸಿರುವುದು ಸ್ಪಷ್ಟವಾಗುತ್ತದೆ.

ರಾಜಕೀಯ ಇತಿಹಾಸ

ವಿಜಯನಗರ ರಾಜ್ಯಾಡಳಿತ ವ್ಯವಸ್ಥೆಯ ಪ್ರಧಾನ ಭಾಗವಾಗಿದ್ದ ಅಮರನಾಯಕರಲ್ಲಿ ಹರತಿಯ ನಾಯಕರು ಒಬ್ಬರಾಗಿದ್ದಾರೆ. ವಿಜಯನಗರದ ಸಂಗಮ ದೊರೆಗಳಿಂದ ತಮ್ಮ ನಾಯಕತನಕ್ಕಾಗಿ ಪೂರ್ವ ಕರ್ನಾಟಕದ ವೇದಾವತಿ ನದಿ ತೀರದ ಕೆಲವು ಪ್ರದೇಶಗಳನ್ನು ಉಂಬಳಿಯಾಗಿ ಪಡೆದು ಸ್ಥಳೀಯ ಸಾಮಂತ ಪ್ರಭುಗಳಾಗಿ ಆಡಳಿತವನ್ನು ನಡೆಸಿದವರೇ ಹರತಿ ಪಾಳೆಯಗಾರರು. ಈ ಹಿನ್ನೆಲೆಯಲ್ಲಿ ವಿಜಯನಗರ ಮತ್ತು ಹರತಿಯ ಪಾಳೆಯಗಾರರ ನಡುವಿನ ಸಂಬಂಧಗಳನ್ನು ಅರಸ ಮತ್ತು ಸಾಮಂತ ವ್ಯವಸ್ಥೆಯ ಚೌಕಟ್ಟಿನೊಳಗೆ ವಿಶ್ಲೇಷಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ವಿಜಯನಗರದೊಂದಿಗಿನ ಅವರ ರಾಜಕೀಯ ಸಂಬಂಧಗಳನ್ನು ಪರಿಶೀಲಿಸಬೇಕಾಗುತ್ತದೆ.

ಹರತಿಯ ಮೂಲಪುರುಷ ತಿಪ್ಪರಾಜನು ಸಂಗಮ ವಂಶ ಹರಿಹರರಾಯ ಬುಕ್ಕರಾಯನ ಕಾಲದಲ್ಲಿ ಅವರ ಸೇನೆಯ ಪ್ರಮುಖ ದಂಡನಾಯಕನಾಗಿದ್ದನು. ಅಪ್ರತಿಮ ವೀರನು, ಶೂರನು ಪರಾಕ್ರಮಿಯೂ ಆಗಿದ್ದ ತಿಪ್ಪರಾಜನು ಕ್ಷಾತ್ರ ತೇಜಸ್ಸನ್ನು ಹೊಂದಿದ್ದನು. ಹಕ್ಕಬುಕ್ಕರು ಕೈಗೊಂಡ ಹಲವಾರು ಪ್ರಮುಖ ಯುದ್ಧಗಳಲ್ಲಿ ಭಾಗವಹಿಸಿ ಅವರಿಗೆ ಗೆಲುವಿನ ರೂವಾರಿಯಾದನು. ಇವನು ನಿಡಗಲ್ಲು ದುರ್ಗಾಧಿಪತಿ ಚಿಕ್ಕ ಬೊಮ್ಮ ನಾಯಕನನ್ನು ದ್ವಂದ್ವ ಯುದ್ಧದಲ್ಲಿ ಶಿರಚ್ಛೇದನ ಮಾಡಿದನು. ಆದ್ದರಿಂದ ಹರಿಹರನು ಅವರಿಗೆ "ಹೊಳಕಲ್ಲು ಬೊಂಮನ ಶಿರಶ್ಚೇದನಂ" ಎಂಬ ಬಿರುದನ್ನು ನೀಡಿ ಗೌರವಿಸಿದನು.[೫೯]

ಹೊಯ್ಸಳರ ಮೂಲ ಸ್ಥಳವಾದ ಸೊಸೆವೂರನ್ನು ಮುತ್ತಿ ಹಾಳುಗೆಡವಿದ್ದರಿಂದ ಬುಕ್ಕರಾಯನು ಇವನಿಗೆ 'ಹೊಯ್ಸಳ ದಳ ವಿಭಾಡಂ' ಎಂಬ ಬಿರುದನ್ನು ನೀಡಿದನು. ಬಹುಮನಿ ಸುಲ್ತಾನರ ಕಡೆಯಿಂದ ಬಂದಿದ್ದ ಮಲಿಕ್ ಬಹದ್ದೂರ್ ಎಂಬ ಪೈಲ್ವಾನನನ್ನು ಕಠಾರಿ ಕಾಳಗದಲ್ಲಿ ಸೋಲಿಸಿದ್ದರಿಂದ ಅವನಿಗೆ ಭದ್ರಮಲುಕ ಸಪ್ತಾಂಗ ಶರಣಂ ಮತ್ತು ಕಠಾರೀರಾಯಂ ಎಂಬ ಬಿರುದುಗಳನ್ನು ಬುಕ್ಕರಾಯನು ಪಾಲಿಸಿದನು. ಬಹುಮನಿ ಮತ್ತು ವಿಜಯನಗರದ ಯುದ್ಧಗಳಲ್ಲಿ ಮುಸ್ಲಿಮರ ತಲೆಗಳನ್ನು ಕಡಿದುದರಿಂದ 'ಮೆಸನತಲೆಗುಂಡ ಗಂಡಂ' ಎಂಬ ಬಿರುದನ್ನು ನೀಡಲಾಯಿತು.

ತಿಪ್ಪರಾಜನ ಶೌರ್ಯ, ಸಾಹಸಗಳನ್ನು ದಾಖಲಿಸಿರುವ ನಡುಮಿದೊಡ್ಡಿಯ ಪಾಳೆಯ ಕೈಫಿಯತ್ತು ಉಲ್ಲೇಖಿಸುವಂತೆ ಮೇಸ ತಿಮ್ಮನಾಯಕ ಎಂಬುವನು ಬುಕ್ಕರಾಯನ ಜೊತೆಗೂಡಿ ಬಹುಮನಿ ಸುಲ್ತಾನನಾದ ಮಹಮ್ಮದನ ದಾಳಿಯನ್ನು ಎದುರಿಸಿದನು. ಕಾಳಗದಲ್ಲಿ ಗಾಯಗೊಂಡರೂ ಅವನು ಶತ್ರುಗಳ ಸೇನಾನಿ ಸಹಿತವಾಗಿ ಆನೇಕರನ್ನು ಕೊಂದು ಶತ್ರುಗಳ ತಲೆ ಬುರುಡೆಗಳನ್ನು ರಾಯನಿಗೆ ಕಾಣಿಕೆಯಾಗಿ ಸಲ್ಲಿಸಿದನು. ರಾಯನು ಕೂಡಲೇ ಅವುಗಳನ್ನು ಪತಾಕೆಯ ಕೋಲುಗಳಿಗೆ ಕಟ್ಟಿ

ತೂಗುಹಾಕಿದನು. ರಾಯನು ಬೆಲೆಬಾಳುವ ವಸ್ತುಗಳನ್ನು ತಿಮ್ಮನಾಯಕನಿಗೆ ಕೊಟ್ಟು ಸನ್ಮಾನಿಸಿ ಕುಮ್ಮತ್ತನ್ನು ಜಹಗೀರಾಗಿ ನೀಡಿದನು.

ಹೀಗೆ ತನ್ನ ಶೌರ್ಯ, ಸಾಹಸ, ಪರಾಕ್ರಮಗಳಿಂದಲೇ ವಿಜಯನಗರದ ಅರಸನಾದ ಹರಿಹರರಾಯ, ಬುಕ್ಕರಾಯ ಮನಸ್ಸನ್ನು ಗೆದ್ದ ತಿಪ್ಪರಾಜನು ಬುಕ್ಕರಾಯನು ವಿಜಯನಗರ ಅಧಿಕಾರ ಸೂತ್ರಗಳನ್ನು ಹಿಡಿದಾಗ ಬುಕ್ಕರಾಯನಿಂದ ವೇದಾವತಿ ನದಿ ತೀರದ ಭೂಭಾಗವನ್ನು ಜಹಗೀರಾಗಿ ಪಡೆದನು. ನಡುಮಿದೊಡ್ಡಿಯ ಪಾಳೆಯ ಕೈಫಿಯತ್ತಿನಲ್ಲಿ ಉಲ್ಲೇಖಿಸಲಾಗಿರುವ ತಿಮ್ಮರಾಜನೇ ಹರತಿಯ ತಿಪ್ಪರಾಜನಾಗಿದ್ದಾನೆ. ತಿಪ್ಪರಾಜನು ತನ್ನ ಪೂರ್ವಿಕರ ಹೆಸರಿನಲ್ಲಿ ಹರತಿ ಕೋಟೆಯನ್ನು ನಿರ್ಮಿಸಿ ಕ್ರಿ.ಶ. ೧೩೪೦ರಿಂದ ೧೩೫೫ರವರೆಗೆ ಆಡಳಿತವನ್ನು ನಡೆಸಿದನು.[೬೦] ತಿಪ್ಪರಾಜನು ತನ್ನ ತಂದೆಯ ಹೆಸರಿನಲ್ಲಿ ಚಂದ್ರಗಿರಿಯೆಂದು ಮತ್ತು ತಾಯಿಯ ಹೆಸರಿನಲ್ಲಿ ರತ್ನಗಿರಿಯೆಂದು ಹೆಸರಿಟ್ಟನು.[೬೧] ತಿಪ್ಪರಾಜನ ನಂತರ ಅವನ ಮಗ ಕಾಮಯನಾಯಕನು ಅಧಿಕಾರಕ್ಕೆ ಬಂದನು ಕಾಮಯನಾಯಕನ ನಂತರ ಅಬ್ಬಯನಾಯಕನು ಅಧಿಕಾರಕ್ಕೆ ಬಂದನು. ಅಬ್ಬಯ ನಾಯಕನ ಕಾಲದಿಂದ ಶಾಸನಗಳು ದೊರೆಯುತ್ತವೆ. ಇವನು ತನ್ನ ತಾತ ತಿಪ್ಪರಾಜನಂತೆ ಶೂರನೂ, ಪರಾಕ್ರಮಿಯೂ ಆಗಿದ್ದನು. ಹರತಿಯ ಸಂತತಿಯಲ್ಲಿಯೇ ಅತ್ಯಂತ ವೈಭವಯುತವಾಗಿ ಆಡಳಿತವನ್ನು ನಡೆಸಿದನು. ಇವನು ಸಂಗಮ ದೊರೆಯಾದ ಇಮ್ಮಡಿ ಹರಿಹರ ಸಮಕಾಲೀನನಾಗಿದ್ದು ಅವನ ಸಾಮಂತನಾಗಿದ್ದನು. ಹಿರಿಯೂರಿನ ಕರಿವೋಬನ ಹಳ್ಳಿಯಲ್ಲಿರುವ ಶಾಸನವು ವಿಜಯನಗರವನ್ನು ವೀರಬುಕ್ಕರಾಯನ ಕುಮಾರ ಹರಿಹರರಾಯನು ಪಾಲಿಸುತ್ತಿದ್ದಾಗ ಶ್ರೀಮನ್ಮಹಾನಾಯಕಾಚಾರ್ಯ ಮೊರೆಹೊಕ್ಕವರ ಕಾವರಗಂಡ ಭಾಷೆಗೆ ತಪ್ಪುವ ನಾಯಕರ ಗಂಡ ಕೋಟಿಕೆರೆಯ ಅಬೆಯ ನಾಯಕರ ಮಕ್ಕಳು ಕಾಮನಾಯಕ ಮತ್ತು ಬೊಮ್ಮನಾಯಕರು ದಾನ ನೀಡಿದ ವಿವರಗಳನ್ನು ದಾಖಲಿಸಿದೆ.[೬೨] ಇದರಿಂದ ಅಬ್ಬೆಯನಾಕನು ಇಮ್ಮಡಿ ಹರಿಹರನ ಸಮಾಕಾಲೀನನೆಂದು ಸ್ಪಷ್ಟವಾಗುತ್ತದೆ. ತುಮಕೂರು ಜಿಲ್ಲೆಯ ಪಾವಗಡದ (ಶಾಸನ ಸಂಖ್ಯೆ ೫೪) ಶಾಸನವು ಅಬ್ಬಯ್ಯ ನಾಯಕನನ್ನು ಶ್ರೀ ಮದ್ವೈಭವನೆಬ್ಬ ನಾಯಕ ಮಹಾಲಿಂಗಸ್ಪರ ದ್ವೀಕ್ಷಣೇದ್ದುಮ ಜ್ಯೋತಿ ಮಹೇಶನ್ ಎಂದು ಪ್ರಶಂಸಿದೆ.[೬೩] ಇದರಿಂದ ಅಬ್ಬಯನಾಯಕನು ವೈಭವದಿಂದ ಆಳಿದನು ಎಂದು ಸ್ಪಷ್ಟವಾಗುತ್ತದೆ. ಕಾಮನಾಯಕನ ಕಿರಿಯ ಮಗ ಪಾಲೆನಾಯಕನು ಕೋಟೆಕೆರೆ ಮತ್ತು ಹರತಿ ಕೋಟೆಗಳನ್ನು ಆಳಿದನು. ಅಬ್ಬೆ ನಾಯಕನ ಇನ್ನಿಬ್ಬರು ಮಕ್ಕಳಾದ ಕಾಮನಾಯಕ ಮತ್ತು ಬೊಮ್ಮನಾಯಕರು ವಿಜಯನಗರದ ಅರಸನ ಆಜ್ಞೆಯನ್ನು ಪಡೆದು ಐಮಂಗಲ ಮತ್ತು ಹರತಿ ಸಾರವಾಡದ ಸುತ್ತಮುತ್ತಲಿನ ಪ್ರದೇಶವನ್ನು ಆಳಿದರು. ಬೊಂಮನಾಯಕನು ದೊಡ್ಡೇರಿ ಮತ್ತು ತಳಕುಗಳನ್ನು ಸ್ಥಾಪಿಸಿ ಗೋಸಿಕೆರೆಯನ್ನು ನಿರ್ಮಿಸಿದನು. ಪಾಲನಾಯಕನ ಮಗ ಬೊಂಮೆಯ ನಾಯಕ. ಈತನ ಮಗ ಎರಂಬಾಪೆಯ ನಾಯಕನು ತನ್ನ ಹೆಸರಿನಲ್ಲಿ ಯರಂಬಾಪೆನಹಳ್ಳಿ ಅಥವಾ ಇಂದಿನ ಯರಬಳ್ಳಿಯನ್ನು ಸ್ಥಾಪಿಸಿದನು.[೬೪]

ಪುನಃ ಹರತಿಯ ನಾಯಕರ ವಂಶಾವಳಿಯಲ್ಲಿ ವಿಜಯನಗರ ಕಾಲದ ಉಲ್ಲೇಖಗಳು ಸಿಗುವುದು ಸದಾಶಿವರಾಯನ ಕಾಲದಿಂದ. ಸದಾಶಿವರಾಯನ ಕಾಲದ ಶಾಸನವೊಂದು (ಚಳ್ಳಕೆರೆ

ಇ.ಸಿ. ಶಾಸನ ೫೪) ಮಹಾಮಂಡಲೇಶ್ವರನಾದ ರಾಮರಾಜು ತಿರುಮಲರಾಜ ದೇವ ಮಹಾಅರಸುಗಳು ಕೋಟಿ ಕೆರೆಯ ಅಬ್ಬೆಯನಾಯಕರ ಬೊಂಮನಾಯಕರ ವಂಶೋದ್ಭವರಾದ ಹಿಯೊಡರ ಚಿಕಪನಾಯಕರ ಕುಮಾರ ಹೊಟ್ಟೆಣ್ಣ ನಾಯಕರಿಗೆ ಅಮರ ಮಾಗಣಿಗೆ ಪಾಲಿಸಿದ ರಾಯದುರ್ಗ ರಾಜ್ಯದ ಕೊಟೆಕರೆ ವೇಂಟೆಗೆ ಸಲ್ಲುವ ದೊಡ್ಡೇರಿ ಸೀಮೆ ಎಂಬ ವಿವರಗಳಿವೆ.[೬೫]

ವೀರವೆಂಕಟಪತಿ ದೇವನ ಕಾಲದ ಹಿರಿಯೂರಿನ ಶಾಸನವೊಂದು ಹರತಿಯ ಚಿಕ ರಂಗಪ್ಪ ನಾಯಕರು ತಮ್ಮ ನಾಯಕತನಕ್ಕೆ ಸಲುವ ರಾಯದುರ್ಗ ವೇಂಠೆಯ ಹರತಿ ಸ್ಥಳದ ಗಣ ಹೆಲಮಡಿ ಮೊಳೆಲಂಬ ಗ್ರಾಮವನ್ನು ದಾನ ನೀಡಿದ ವಿವರಗಳನ್ನು ಶಾಸನವು ದಾಖಲಿಸಿದೆ.[೬೬]

ಹಿರಿಯೂರಿನ ಸದಾಶಿವರಾಯನ ಕಾಲದ ಶಾಸನವೊಂದು ನಾಯಕಾಚಾರ್ಯ ಹರತಿ ಕೆಂಚಪ್ಪ ನಾಯಕರು ತಿರುಮಲ ದೇವರಿಗೆ ದಾನ ನೀಡಿ ವಿವರಗಳನ್ನು ದಾಖಲಿಸಿದೆ.[೬೭]

ಶಾಸನಗಳಲ್ಲಿನ ಮಾಹಿತಿಯನ್ನು ಪರಿಶೀಲಿಸಿ ನೋಡಿದಾಗ ಹರತಿಯ ನಾಯಕರು ಹಕ್ಕ ಬುಕ್ಕರಿಂದ ಹಿಡಿದು ಅರವೀಡು ಮನೆತನದ ವೆಂಕಟಪತಿರಾಯನ ಕಾಲದವರೆಗೂ ಅವರ ಸಾಮಂತರಾಗಿದ್ದುದು ಸ್ಪಷ್ಟವಾಗುತ್ತದೆ.

ಹರತಿಯ ಶಾಖೆಗಳು

ನಿಡುಗಲ್ಲು

ನಿಡುಗಲ್ಲು ನಾಯಕ ಮನೆತನದ ಸಂಸ್ಥಾಪಕ ಚಿಕ್ಕ ತಿಪ್ಪರಾಜನು ಹರತಿಯ ನಾಯಕ ಎರೆಬಾಪೆಯ ನಾಯಕ ಮತ್ತು ಅಂಮಮಾಂಬಗಳ ಪುತ್ರನಾಗಿದ್ದನು. ವಿಜಯನಗರದ ಅರಸ ಸಾಳ್ವ ನರಸಿಂಹನ ಸಮಕಾಲೀನನಾಗಿದ್ದನು. ಈತ ಸಾಳ್ವ ನರಸಿಂಹನಲ್ಲಿ ಹೆಚ್ಚು ನಿಷ್ಠೆಯನ್ನು ಹೊಂದಿದ್ದರಿಂದ ವೈಷ್ಣವ ಪಂಥವನ್ನು ಸ್ವೀಕರಿಸಿದನು. ಇವನು ತನ್ನ ಮೂಲ ಪುರುಷನಾದ ತಿಪ್ಪರಾಜನ ಬಿರುದುಗಳ ಜೊತಗೆ "ಸಂಪುಟ ನಾರಾಯಣ ಎಂಬ ಬಿರುದನ್ನು ಹೊಂದಿದ್ದನು".[೬೮]

ತಿಪ್ಪರಾಜನ ನಂತರ ನಿಡುಗಲ್ಲು ಶಾಖೆಯನ್ನು ಕಾಮನಾಯಕ, ಅಬ್ಬಿನಾಯಕ ಮತ್ತು ಬೊಮ್ಮನಾಯಕನು ವಿಜಯನಗರದ ಕೃಷ್ಣದೇವರಾಯನ ಅಮರನಾಯಕನಾಗಿದ್ದನು. ಈ ಬೊಮ್ಮನಾಯಕನಿಗೆ ಜಕ್ಕನಾಯಕ ಎಂಬ ಮತ್ತೊಂದು ಹೆಸರಿತ್ತು. ಈತನಿಗೆ ೭ ಜನ ಮಕ್ಕಳಿದ್ದರು. ಇವನ ನಂತರ ಈಶ್ವರ ನಾಯಕ, ಚಿಕ್ಕಣ್ಣ ನಾಯಕ ಹೊಟ್ಟೆಣನಾಯಕ, ತಿಮ್ಮಣ್ಣ ನಾಯಕರು ನಿಡುಗಲ್ಲನ್ನು ಆಳಿದರು. ತಿಮ್ಮಣ್ಣ ನಾಯಕನು ವಿಜಯನಗರದ ಸದಾಶಿವರಾಯನ ಮಹಾ ಮಂಡಲೇಶ್ವರ ಗುತ್ತಿ ತಿರುಮಲ ರಾಜೈಯ ದೇವ ಮಹಾ ಅರಸುಗಳಿಂದ ನಾಯಕತನವನ್ನು ಪಡೆದುಕೊಂಡಿದ್ದನು. ಎಪಿಗ್ರಾಫಿಯಾ ಕರ್ನಾಟಿಕಾ ಶಾಸನ ಸಂಪುಟ-೧೨ರಲ್ಲಿ. ಪಾವಗಡ-೪೨ ಶಾಸನವು ಈ ಮಾಹಿತಿಯನ್ನು ದೃಢೀಕರಿಸುತ್ತದೆ.[೬೯] ತಿಮ್ಮಣ್ಣ ನಾಯಕನ ನಂತರ ನಿಡುಗಲ್ಲು

ಸೀಮೆಯ ಆಡಳಿತನವನ್ನು ಇವರ ದಾಯಾದಿಗಳಾದ ಹರತಿಯವರು ವಶಪಡಿಸಿಕೊಂಡರು. ಈ ನಾಯಕರು ತಮ್ಮನ್ನು ಹರತಿ ನಿಡುಗಲ್ಲು ನಾಯಕರೆಂದೇ ಕರೆದುಕೊಂಡಿದ್ದಾರೆ.

ಸೀರ್ಾ

ನಿಡುಗಲ್ಲಿನಲ್ಲಿ ಅಧಿಕಾರವನ್ನು ಕಳೆದುಕೊಂಡು ನಾಯಕರು ಮಡಕಪಲ್ಲೇ ಕಡೆ ಹೋದರು. ನಂತರ ಸೀರ್ಾ ಪಾಳೆಯಪಟ್ಟನ್ನು ಸ್ಥಾಪಿಸಿದರು. ಬಿ.ಎಲ್. ರೈಸ್ ಅವರ (ಸಂ) ಎಪಿಗ್ರಾಫಿಯಾ ಶಾಸನ ಸಂಪುಟ ೧೨ ರಲ್ಲಿ ಮಧುಗಿರಿಯ ಶಾಸನವೊಂದು ವಿಜಯನಗರದ ಲಕ್ಷ್ಮಿಪತಿನಾಯಕನಿಗೆ ಸಿರಾ ಅಗಳಿ ದೊಡ್ಡೇರಿಗಳನ್ನು ಅಮರ ಮಾಗಣಿಗಳಾಗಿ ನೀಡಿರುವುದನ್ನು ವಿವರಿಸುತ್ತದೆ.[೬೦] ಹಿರಿಯೂರು ತಾಲ್ಲೂಕಿನ ಒಂದು ಶಾಸನವು ಲಕ್ಷ್ಮೀಪತಿನಾಯಕ ವಂಶವನ್ನು ವಿವರಿಸಿದೆ. ಹರತಿಯ ದುಂಡಪ್ಪನಾಯಕ ಮಗ ಲಕ್ಷ್ಮಿಪತಿ ನಾಯಕ. ಈತನಿಗೆ ರಂಗಪ್ಪ ನಾಯಕ ಮತ್ತು ಚಿಕ್ಕ ರಂಗಪ್ಪ ನಾಯಕರೆಂಬ ಮಕ್ಕಳಿದ್ದರು. ಲಕ್ಷ್ಮೀಪತಿ ನಾಯಕನು ತಾನು ವಿಜಯನಗರದವರಿಂದ ಅಮರ ಮಾಗಣಿಯಾಗಿ ಪಡೆದುಕೊಂಡಿದ್ದ ಸೀರ್ಾ ಸೀಮೆಗೆ ನಾಯಕನನ್ನಾಗಿ ಹಿರಿಯ ಮಗನಾದ ರಂಗಪ್ಪ ನಾಯಕನನ್ನು ನೇಮಿಸಿದನು. ಕಿರಿಯ ಮಗನಿಗೆ ಹರತಿಯ ನಾಯಕತನ ನೀಡಿದನು. ಕ್ರಿ.ಶ. ೧೫೨೧ರಲ್ಲಿ ಕರಿ ರಂಗಪ್ಪನಾಯಕನನ್ನು ನೇಮಿಸಿದನು. ಕಿರಿಯ ಮಗನಿಗೆ ಹರತಿಯ ನಾಯಕತನ ನೀಡಿದನು. ಅನಂತಪುರ ಜಿಲ್ಲಾ ಗೆಝೆಟಿಯರ್‌ನಲ್ಲಿ ಕ್ರಿ.ಶ. ೧೫೨೧ರಲ್ಲಿ ಕರಿ ರಂಗಪ್ಪನಾಯಕನ ಕಾಲದಲ್ಲಿ ಸೀರ್ಾ ಕೋಟೆಯನ್ನು ಕಟ್ಟಲಾಯಿತೆಂಬ ಮಾಹಿತಿಯಿದೆ.[೬೧] ಕರಿ ರಂಗಪ್ಪ ನಾಯಕನೇ ರಂಗಪ್ಪ ನಾಯಕನಾಗಿರುವ ಸಾಧ್ಯತೆಗಳಿವೆ. ರಂಗಪ್ಪ ನಾಯಕನ ನಂತರ ಈತನ ತಮ್ಮ ಚಿಕ್ಕರಂಗಪ್ಪ ನಾಯಕ ಸಿರ್ಾ ಆಡಳಿತವನ್ನು ನೋಡಿಕೊಂಡನು. ತದನಂತರ ರಂಗಪ್ಪ ನಾಯಕನ ಪುತ್ರ ಇಮ್ಮಡಿ ರಂಗಪ್ಪ ನಾಯಕ ಅವನ ನಂತರ ಮುಮ್ಮಡಿ ರಂಗಪ್ಪ ನಾಯಕರು ಸೀರ್ಾವನ್ನು ಆಳಿದರು. ಮುಮ್ಮಡಿ ರಂಗಪ್ಪನಾಯಕನೇ ಸೀರ್ಾ ಪಾಳೆಯಗಾರರಲ್ಲಿ ಕೊನೆಯವ.

ಇವನ ಮರಣದ ನಂತರ ಪಾಳೆಯಪಟ್ಟು ಅವನತಿಯಾಯಿತು. ಕ್ರಿ.ಶ. ೧೬೩೮ರಲ್ಲಿ ಬಿಜಾಪುರದ ಸೇನಾಧಿಪತಿಗಳಾದ ರಣದುಲ್ಲಾಖಾನನು ತರೀಕೆರೆ ಪಾಳೆಯಗಾರರು ಜೊತೆಗೂಡಿ ಸೀರ್ಾದ ಮೇಲೆ ಮುತ್ತಿಗೆ ಹಾಕಿದರು. ಗುಮ್ನಳ್ಳಿ ಬಯಲಿನಲ್ಲಿ ನಡೆದ ಕದನದಲ್ಲಿ ಮುಮ್ಮಡಿ ರಂಗಪ್ಪ ನಾಯಕನು ಹತನಾದನು. ರಣದುಲ್ಲಾಖಾನನು ಸೀರ್ಾವನ್ನು ವಶಪಡಿಸಿಕೊಂಡನು. ಇಲ್ಲಿಂದ ಸೀರ್ಾ ಮುಸ್ಲಿಮರ ಅಧಿಪತ್ಯಕ್ಕೆ ಒಳಗಾಯಿತು. ಕ್ರಿ.ಶ. ೧೭೬೧ರಲ್ಲಿ ಹೈದರಾಲಿಯು ಸೀರ್ಾವನ್ನು ಬಿಜಾಪುರ ಸುಲ್ತಾನರಿಂದ ಗೆದ್ದನು. ಟಿಪ್ಪು ಸುಲ್ತಾನನು ಸೀರ್ಾವನ್ನು ಮೈಸೂರು ಸಂಸ್ಥಾನದಲ್ಲಿ ವಿಲೀನಗೊಳಿಸಿದನು.

ರತ್ನಗಿರಿ

ಕ್ರಿ.ಶ. ೧೬೩೮ರ ಗುಮ್ನಳ್ಳಿ ಕದನದ ನಂತರ ಸೀರ್ಾ ಪಾಳೆಯಗಾರರ ವಂಶವೂ ಎರಡು

ಶಾಖೆಗಳಾಗಿ ಒಡೆದು ಹೋಯಿತು. ಅದರಲ್ಲಿ ಒಂದು ಶಾಖೆಯು ರತ್ನಗಿರಿಯಲ್ಲಿ, ಮತ್ತೊಂದು ಶಾಖೆಯು ಮಿಡಿಗೇಶಿಯಲ್ಲಿ ಆಡಳಿತ ನಡೆಸಿರುವುದು ಕಂಡುಬರುತ್ತದೆ. ಹರತಿಯ ಲಕ್ಷ್ಮೀಪತಿ ನಾಯಕನ ಹಿರಿಯ ಮಗ ರಂಗಪ್ಪ ನಾಯಕನು ರತ್ನಗಿರಿಯನ್ನು ಆಳಿದನು.

ಇವನ ನಂತರ ಇಮ್ಮಡಿ ರಂಗಪ್ಪ ನಾಯಕ, ಮುಮ್ಮಡಿ ರಂಗಪ್ಪ ನಾಯಕರು ರತ್ನಗಿರಿಯನ್ನು ಆಳಿದರು. ಸುಮಾರು ೧೬೨೮ರ ನಂತರ ಹರತಿ ಸಂಮೇಟ ಎಂಬ ವಿಶಿಷ್ಟ ಮನೆ ಹೆಸರುಳ್ಳ ಕಸ್ತೂರಿ ರಂಗಪ್ಪ ನಾಯಕರು ರತ್ನಗಿರಿಯನ್ನು ೨೭ ವರ್ಷಗಳ ಕಾಲ ಆಳಿದರು.[೭೨] ಬಿಜಾಪುರದ ರಣದುಲ್ಲಾಖಾನನು ಸೀರ್ಯಾವನ್ನು ಮುತ್ತಿಗೆ ಹಾಕಿದಾಗ ಯುದ್ಧದಲ್ಲಿ ಕಸ್ತೂರಿ ರಂಗಪ್ಪ ನಾಯಕನು ಮರಣ ಹೊಂದಿದನು. ಈತನ ಇಬ್ಬರ ಮಕ್ಕಳು ಯುದ್ಧದಲ್ಲಿ ಹತರಾದರು. ಇನ್ನಿಬ್ಬರು ಮಕ್ಕಳನ್ನು ಮಧುಗಿರಿಯ ರಾಜ ಹಿರೇಗೌಡನ ವಂಶಕ್ಕೆ ಬಿಡಲಾಯಿತು. ಈತ ಈ ಇಬ್ಬರು ಗಂಡು ಮಕ್ಕಳನ್ನು ಸಂರಕ್ಷಿಸಿ ಅದರಲ್ಲಿ ಹಿರಿಯವನಾದ ರಾಯಪ್ಪ ರಾಜನಿಗೆ ರತ್ನಗಿರಿಯ ಸಿಂಹಾಸನವನ್ನು ಬಿಟ್ಟುಕೊಟ್ಟನು. ಅಧಿಕಾರಕ್ಕೆ ಬಂದ ರಾಯಪ್ಪ ರಾಜನು ತನ್ನ ಸಹೋದರ ರಂಗಪ್ಪರಾಜನ ನೆರವಿನೊಂದಿಗೆ ಸೀರ್ಯಾದ ಮೇಲೆ ದಾಳಿ ಮಾಡಿದನು. ಬಿಜಾಪುರದವರೊಡನೆ ಯುದ್ಧ ಒಪ್ಪಂದವಾಗಿ ಹರತಿ, ಐಮಂಗಲ, ತರೂರು ಬ್ರಹ್ಮಸಮುದ್ರ ಕವಣಕಾಲ, ದಬ್ಬೆಗಟ್ಟಿ, ಭನ್ಮಾಂಗಿ ಹಿರೇ ಸಮುದ್ರ ದ್ಯಾವರಕೊಂಡಗಳನ್ನು ರಾಯಪ್ಪ ರಾಜನು ಪಡೆದುಕೊಂಡು ಕ್ರಿ.ಶ. ೧೫೮೮ರವರೆಗೂ ರಾಜ್ಯವನ್ನಾಳಿದನು.[೭೩]

ರಾಯಪ್ಪರಾಜನ ನಂತರ ಇವನ ಮಗ ಎರಡನೆ ರಾಯಪ್ಪ ರಾಜ, ಇವನ ಮಗ ವೀರ ರಾಯಪ್ಪ ರಾಜನು ರತ್ನಗಿರಿಯನ್ನು ಆಳಿದರು. ನಂತರ ಅನುಕ್ರಮವಾಗಿ ರಂಗಪ್ಪರಾಜ, ರಾಯಣ್ಣರಾಜ ಸರ್ಜಪ್ಪರಾಯರು ರತ್ನಗಿರಿಯನ್ನು ಆಳಿದರು. ಸರ್ಜಪ್ಪರಾಯನ ಆಳ್ವಿಕೆಯಲ್ಲಿ ರತ್ನಗಿರಿಯು ಹೈದರಾಲಿಯ ವಶವಾಯಿತು. ಚಿತ್ರದುರ್ಗ ನಾಯಕ ಹರತಿ ಐಮಂಗಲ ಸೀಮೆಗಳನ್ನು ಗೆದ್ದನು. ಈ ಸಮಯದಲ್ಲಿ ಮಿಡಿಗೇಶಿ ಗೌಡರ ಆಶ್ರಯದಲ್ಲಿದ್ದ ಸರ್ಜಪ್ಪರಾಜನ ತಮ್ಮ ೩ನೇ ರಾಯಪ್ಪ ರಾಜನು ರತ್ನಗಿರಿಯನ್ನು ವಶಪಡಿಸಿಕೊಂಡನು. ನಂತರ ಇವನ ಮಗ ೩ನೇ ರಂಗಪ್ಪರಾಜ ಅಧಿಕಾರಕ್ಕೆ ಬಂದನು. ಇವನ ಕಾಲದಲ್ಲಿ ಕ್ರಿ.ಶ. ೧೭೭೮ರಲ್ಲಿ ಹೈದರಾಲಿಯು ರತ್ನಗಿರಿಯನ್ನು ವಶಪಡಿಸಿಕೊಂಡು ರಂಗಪ್ಪರಾಜನನ್ನು ಬಂಧಿಸಿ ಶ್ರೀರಂಗಪಟ್ಟಣದ ಸೆರೆಮನೆಯಲ್ಲಿಟ್ಟನು. ನಂತರ ರಂಗಪ್ಪ ರಾಜನ ಮಕ್ಕಳಿಗೆ ತಾಯೊರನ್ನು ಜಹಗೀರಾಗಿ ನೀಡಿ ನಿವೃತ್ತಿ ವೇತನವನ್ನು ನೀಡಿದನು. ಕ್ರಿ.ಶ. ೧೭೯೨ರಲ್ಲಿ ನಡೆದ ದ್ವಿತೀಯ ಆಂಗ್ಲೋ ಮೈಸೂರು ಕದನದಲ್ಲಿ ೪ನೇ ರಾಯಪ್ಪರಾಜನು ಬ್ರಿಟಿಷರಿಗೆ ನೆರವು ನೀಡಿದನು. ಲಾರ್ಡ್ ಕಾರ್ನ್‌ವಾಲೀಸನಿಂದ ರತ್ನಗಿರಿಯನ್ನು ಮರಳಿ ಪಡೆದು ಬಂದು ಒಂದು ವರ್ಷ ಆಳಿದನು. ಆದರೆ ಬ್ರಿಟಿಷರು ಮತ್ತು ಟಿಪ್ಪು ಸುಲಾನ್ತನಿಗೆ ಶಾಂತಿ ಒಪ್ಪಂದ ನಡೆದ ೪ನೇ ರಾಯಪ್ಪ ರಾಜ ಸುರಪುರಕ್ಕೆ ಪಲಾಯನ ಮಾಡಿದನು.

ರತ್ನಗಿರಿಯ ಪಾಳೆಯಗಾರರ ಮೇಲೆ ವಿಪರೀತ ದ್ವೇಷವನ್ನು ಹೊಂದಿದ್ದ ಟಿಪ್ಪು ೧೭೯೪ರ ಹೊತ್ತಿಗೆ ರತ್ನಗಿರಿ ಪಾಳೆಯ ಪಟ್ಟವನ್ನು ಸಂಪೂರ್ಣವಾಗಿ ನಾಶ ಮಾಡಿದನು. ೪ನೇ ಆಂಗ್ಲೋ ಮೈಸೂರು ಕದನದ ನಂತರ ಈ ವಂಶದ ಇಮ್ಮಡಿ ನಂದರಾಜನಿಗೆ ಬ್ರಿಟಿಷ್ ಸರಕಾರ ನಿವೃತ್ತಿ ವೇತನ ಮಂಜೂರು ಮಾಡಿತು. ಹೀಗೆ ಟಿಪ್ಪುವಿನ ಕ್ರಮಗಳಿಂದಾಗಿ ರತ್ನಗಿರಿಯ ಪಾಳೆಯಗಾರರು ಅವನತಿ ಹೊಂದಿದರು.

ಮಿಡಿಗೇಶಿ

ಮಿಡಿಗೇಶಿ ಪಾಳೆಯಪಟ್ಟನ್ನು ಹರತಿ ವಂಶಸ್ಥನಾದ ಕಸ್ತೂರಿ ರಂಗಪ್ಪನಾಯಕನು ಸ್ಥಾಪಿಸಿದನು. ಈತನ ಮಗನಾದ ಸರ್ಜಾ ಭೂಪಾಲನ ಕಾಲದಲ್ಲಿ ಮೈಸೂರು ಒಡೆಯರು ಮಿಡಿಗೇಶಿಯ ಮೇಲೆ ದಾಳಿಯನ್ನು ನಡೆಸಿದರು. ಕ್ರಿ.ಶ. ೧೭೧೧ರಲ್ಲಿ ಶ್ರೀರಂಗಪಟ್ಟಣದ ಮೂಗರಸರಾದ ಕಂಠೀರವ ಮಹಾರಾಜ ಒಡೆಯರು ಮಿಡಿಗೇಶಿಯ ಮೇಲೆ ದಾಳಿ ಮಾಡಿದರು. ರಂಗಪ್ಪ ರಾಜನನ್ನು ಕೊಂದುಹಾಕಿದರು. ಹಾಗೂ ಖಂಡಣಿಯನ್ನು ನಿಗದಿ ಮಾಡಿದರು. ರಂಗಪ್ಪರಾಜನ ಮಕ್ಕಳಾದ ಕೃಷ್ಣಪ್ಪರಾಜ ಮತ್ತು ವೆಂಕಟಶಾಯಿ ರಾಜರು ಯುಕ್ತ ವಯಸ್ಸಿಗೆ ಬಂದ ನಂತರ ಕೃಷ್ಣಪ್ಪರಾಜ ದೊಡ್ಡಕಣ್ಣಯ್ಯನ ಕೈಯಲ್ಲಿ ಕೊಲೆಯಾದನು. ನಂತರ ವೆಂಕಟಶಾಮಿರಾಜನು ಕ್ರಿ.ಶ. ೧೭೬೫ರಲ್ಲಿ ಹೈದರಾಲಿಯಿಂದ ಮಿಡಿಗೇಶಿಯನ್ನು ಜಹಗೀರಾಗಿ ಪಡೆದನು. ಈತನ ನಂತರ ಹರತಿ ಸಂತತಿಯ ಆಳ್ವಿಕೆ ಮಿಡಿಗೇಶಿಯಲ್ಲಿ ಅಂತ್ಯಗೊಂಡು ಕಾಳ ಚಿಕ್ಕಪ್ಪಗೇಡನ ವಂಶದ ಆಳ್ವಿಕೆ ಆರಂಭವಾಯಿತು. ಹರತಿ, ಸಾರವಾಡ, ಐಮಂಗಲ, ಅಗಳೆ, ದೊಡ್ಡೇರಿ, ಹಿರಿಯೂರು, ಬುಕ್ಕಾಪಟ್ಟಣಗಳಲ್ಲಿಯೂ ಹರತಿಯ ಸಂತತಿಯವರು ಆಳ್ವಿಕೆ ನಡೆಸಿರುವುದು ಕಂಡು ಬರುತ್ತದೆ.

೪.೬ ಹಂಡೆ ವಜೀರರು/ಪಾಳೆಯಗಾರರು

ವಿಜಯನಗರ ಮತ್ತು ವಿಜಯನಗರೋತ್ತರ ಕಾಲಾವಧಿಯಲ್ಲಿ ಪ್ರವರ್ಧಮಾನಕ್ಕೆ ಬಂದ ಪಾಳೆಯ ಪಟ್ಟುಗಳಲ್ಲಿ ಹಂಡೆಯ ಪಾಳೆಯಗಾರರೂ ಪ್ರಮುಖರಾಗಿದ್ದಾರೆ. ಕ್ರಿ.ಶ. ೧೫೧೩ರಿಂದ ಕ್ರಿ.ಶ. ೧೮೪೦ರವರೆಗೆ ಸುಮಾರು ೩೦೦ ವರ್ಷಗಳಷ್ಟು ಸುಧೀರ್ಘ ಕಾಲ ಆಡಳಿತವನ್ನು ನಡೆಸಿದರು.[೭೪] ಬಳ್ಳಾರಿ ಇವರ ಮುಖ್ಯ ಆಡಳಿತ ಪ್ರದೇಶವಾಗಿದ್ದರೂ ನೆರೆಯ ಆಂಧ್ರಪ್ರದೇಶದ ಅನಂತಪುರದವರೆಗೂ ತಮ್ಮ ಆಡಳಿತವನ್ನು ವಿಸ್ತರಿಸಿದರು. ಅನಂತಪುರ, ನಂದ್ಯಾಲ, ಧರ್ಮಾವರ, ಬಳ್ಳಾರಿ, ಕುರುಗೋಡು, ತೆಕ್ಕಲಕೋಟೆ, ಬಂಕಾಪುರ ಮೊದಲಾದ ಪ್ರದೇಶಗಳು ಇವರ ಆಡಳಿತಕ್ಕೆ ಒಳಪಟ್ಟಿದ್ದವು. ಆರಂಭದ ಹಂತದಲ್ಲಿ ಬಿಜಾಪುರದ ಆದಿಲ್‌ಷಾಹನ ಕೈಕೆಳಗೆ ಗೌಡಿಕೆಯನ್ನು ಮಾಡಿಕೊಂಡಿದ್ದ ಹಂಡೆಯವರು ನಂತರದ ದಿನಗಳಲ್ಲಿ ವಿಜಯನಗರದವರಿಂದ ನಾಯಕತನವನ್ನು ಪಡೆದುಕೊಂಡು ವಿಜಯನಗರದ ಸಾಮಂತರಾದರು. ವಿಜಯನಗರದ ಪತನದ ನಂತರ ಬದಲಾದ ರಾಜಕೀಯ ಸನ್ನಿವೇಶಗಳಿಗೆ ತಕ್ಕಂತೆ ಪುನಃ ಬಿಜಾಪುರ ಸುಲ್ತಾನರ ವಿಶ್ವಾಸವನ್ನು ಗಳಿಸಿಕೊಂಡರು. ತಮ್ಮ ರಾಜಕೀಯ ಅಸ್ತಿತ್ವಕ್ಕಾಗಿ ಮೊಗಲರೊಂದಿಗೆ ಹೈದರಾಲಿಯೊಂದಿಗೆ ಹೋರಾಡಬೇಕಾಯಿತು.

ಅಂತಿಮವಾಗಿ ಹೈದರಾಲಿಗೆ ತಮ್ಮ ಸಂಸ್ಥಾನವನ್ನು ಒಪ್ಪಿಸಿ ರಾಜಕೀಯದಿಂದ ದೂರ ಸರಿದು ಬ್ರಿಟಿಷರ ಕಾಲದಲ್ಲಿ ಪಿಂಚಣಿ ಪಡೆದು ಮೂಲೆಗುಂಪಾದ ಹಂಡೆ ಪಾಳೆಯಗಾರರ ರಾಜಕೀಯ ಇತಿಹಾಸವನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದು.

ಆಕರಗಳು

೧. ಹಂಡೆ ಪಾಳೆಯಗಾರರ ಕುರಿತು ಮಾಹಿತಿಯನ್ನು ಒಳಗೊಂಡಿರುವ ಶಾಸನಗಳು ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ ಬಳ್ಳಾರಿ ಜಿಲ್ಲೆ ಮತ್ತು ಹಂಪಿಯ ಶಾಸನ ಸಂಪುಟಗಳಲ್ಲಿ ದೊರೆಯುತ್ತವೆ. ಈ ಶಾಸನಗಳು ಹಂಡೆಯ ಪಾಳೆಯಗಾರರ ರಾಜಕೀಯ ಮತ್ತು ಧಾರ್ಮಿಕ ಚರಿತ್ರೆಯನ್ನು ತಿಳಿಯುವಲ್ಲಿ ಸಹಾಯಕವಾಗುತ್ತವೆ.

೨. ಹಂಡೆ ಅನಂತಪುರ ಕೈಫಿಯತ್ತು, ಬಳ್ಳಾರಿ, ಕುರುಗೋಡು ಕೈಫಿಯತ್ತುಗಳು, ಶ್ರೀಶೈಲ ಪೀಠದ ನಿಡುಮಾಮಿಡಿ ದಾಖಲೆಗಳು, ಜಗದ್ಗುರು ಕೊಟ್ಟೂರು ಸ್ವಾಮಿ ಗುರುಪರಂಪರೆ ಮತ್ತು ಮಠದ ದಾಖಲೆಗಳು, ಪಲ್ಲಕವಿ ಬರೆದ ಶ್ರೀಶೈಲ ಪಂಡಿತಾರಾಧ್ಯ ಚರಿತ್ರೆ, ಸಿರಿಪಿ ಆಂಜನೇಯಲು ಬರೆದ ಕರಿಬಸವ ಸ್ವಾಮಿ ಕಾವ್ಯ, ನಾಗಸಂದ್ರಂ ವಾಸುದೇವರಾವ್ ವಿರಚಿತ ಅನಂತಪುರ ಮಂಡಲ ಚರಿತ್ರೆ ಕಥಲು, ಬುಕ್ಕರಾಯ ಚರಿತ್ರೆ ಸಿ.ಪಿ. ಬ್ರೌನ್ ಅವರು ಬರೆದ 'ದಿ ವಾರ್ ಆಫ್ ದಿ ರಾಜಾಸ್' ಹಂಡೆ ಆಸ್ಥಾನ ಕವಿ ಬರೆದ ರಸಿಕ ಮನೋರಂಜವಿಲಾಸ ಮತ್ತು ಅಹೋಬಲನ 'ವಿರೂಪಾಕ್ಷ' ವಸಂತೋತ್ಸವ ಚಂಪು' ಮೊದಲಾದ ಕೃತಿಗಳು ಹಂಡೆ ಪಾಳೆಯಗಾರರ ಕಾಲದ ರಾಜಕೀಯ, ಧಾರ್ಮಿಕ, ಸಾಮಾಜಿಕ, ಆಡಳಿತಾತ್ಮಕ ವಿವರಗಳನ್ನು ಒಳಗೊಂಡಿವೆ.

೩. ಹಂಡೆಯ ಪಾಳೆಯಗಾರರಿಗೆ ಸಂಬಂಧಿಸಿದಂತೆ ಇತ್ತೀಚಿನ ದಿನಗಳಲ್ಲಿ ಹಲವಾರು ಅಧ್ಯಯನಗಳು ನಡೆದಿವೆ. ಈ ಪಾಳೆಯಗಾರರ ಬಗ್ಗೆ ಬಳ್ಳಾರಿ ಜಿಲ್ಲಾ ಗೆಝೆಟಿಯರ್‌ನಲ್ಲಿ ಸಂಕ್ಷಿಪ್ತ ಲೇಖನವಿದ್ದು ಈ ಮಾಹಿತಿಯನ್ನಾಧರಿಸಿ ಡಾ.ವಿರೂಪಾಕ್ಷಿ ಪೂಜಾರಹಳ್ಳಿಯವರು ಬಳ್ಳಾರಿ ಅಥವಾ ಹಂಡೆ ಪಾಳೆಯಗಾರರು ಎಂಬ ಸಂಶೋಧನಾ ಲೇಖನವೊಂದನ್ನು ಬರೆದಿದ್ದಾರೆ. ಅದು ಬಳ್ಳಾರಿ ಜಿಲ್ಲೆಯ ಪಾಳೆಯಗಾರರು ಎಂಬ ಕೃತಿಯಲ್ಲಿ ಪ್ರಕಟಗೊಂಡಿದೆ. ಸಿ.ಆರ್.ಶ್ಯಾಮಲಾರವರು ಪೂರ್ವ ಕರ್ನಾಟಕದ ಪಾಳೆಯಗಾರರು ಎಂಬ ಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧದಲ್ಲಿ ಹಂಡೆಯ ಪಾಳೆಯಗಾರರ ಕುರಿತು ವಿಶ್ಲೇಷಿಸಿದ್ದಾರೆ. ಕರ್ನಾಟಕ ಇತಿಹಾಸ ದರ್ಶನ ಸಂಪುಟ ೭ ರಲ್ಲಿ ಡಾ. ಚನ್ನಾಂಬಿಕೆ ಪಾವಟೆಯವರ ಹಂಡೆಯ ಪಾಳೆಯಗಾರರ ಮೇಲೆ ಹೊಸ ಬೆಳಕು ಎನ್ನುವ ಲೇಖನವು ಈ ಪಾಳೆಯಗಾರ ಕುರಿತು ತಿಳಿಸುತ್ತದೆ. ಪಿ.ಯಶೋದಾ ರಾಜಶೇಖರಪ್ಪರವರ ಬಳ್ಳಾರಿ ಪಾಳೆಯಗಾರರು ಎಂಬ ಲೇಖನವು ಇವರ ಕುರಿತು ಮಾಹಿತಿಯನ್ನು ನೀಡುತ್ತದೆ. ಡಾ.ಎಸ್.ಸಿ.ಪಾಟೀಲರವರ ಬಳ್ಳಾರಿ ಹಂಡೆ ಪಾಳೆಯಗಾರರ

ಐತಿಹಾಸಿಕ ಹಿನ್ನೆಲೆ ಎಂಬ ಲೇಖನವು ಹಂಡೆ ಪಾಳೆಯಗಾರ ರಾಜಕೀಯ ವಿವರಗಳನ್ನು ಒಳಗೊಂಡಿದೆ. ಕೃಷ್ಣಸ್ವಾಮಿ ಅಯ್ಯರ್ ಅವರ 'Sources of Vijayanagara History' ಎಂಬ ಕೃತಿಯಲ್ಲಿ ಹಂಡೆ ಪಾಳೆಯಗಾರರ ಆರಂಭಿಕ ಇತಿಹಾಸದ ವಿವರಗಳಿವೆ. ಹಿಂದಿನ ಎಲ್ಲ ಪ್ರಕಟಿತ ಲೇಖನಗಳನ್ನು ಗಮನದಲ್ಲಿಟ್ಟುಕೊಂಡು ಹಂಡೆಯ ಪಾಳೆಯಗಾರರ ಚರಿತ್ರೆಯನ್ನು ರಚಿಸಲಾಗಿದೆ.

ಮೂಲ

ಹಂಡೆಯ ಪಾಳೆಯಗಾರರ ಮೂಲಪುರುಷರು ವಿಜಾಪುರ ಜಿಲ್ಲೆಯ ಮುತ್ತಿಗೆ ಮತ್ತು ವಡವಡಗಿ ಗ್ರಾಮಗಳಲ್ಲಿ ಗೌಡಿಕೆಯನ್ನು ಮಾಡಿಕೊಂಡಿದ್ದರು. ಬಳ್ಳಾರಿ ಕೈಫಿಯತ್ತಿನಲ್ಲಿ ಹಂಡೆಯ ಮನೆತನದವರು ವಿಜಯನಗರದ ಅಚ್ಯುತರಾಯನ ಕಾಲದಲ್ಲಿ ವಿಜಾಪುರ ಜಿಲ್ಲೆಯ ಮುತ್ತಿಗೆ ಗ್ರಾಮದಲ್ಲಿ ಗೌಡಿಕೆ ಮೂಡಿಕೊಂಡಿದ್ದಾರೆಂದು, ಕೃಷ್ಣದೇವರಾಯನ ನಂತರ ಬಿಜಾಪುರದ ಆದಿಲ್‌ಷಾಹನ ಕಾಲದಲ್ಲಿ ಕೃಷ್ಣಾ ನದಿಯ ಉತ್ತರ ಭಾಗದಲ್ಲಿರುವ ಮೂರ್ತಿಗಿರಿ ಗ್ರಾಮದಲ್ಲಿ ಗೌಡಿಕೆಯನ್ನು ಮುಂದುವರಿಸಿಕೊಂಡು ಹೋಗಿದ್ದರೆಂಬ ಮಾಹಿತಿಯು ಉಲ್ಲೇಖಗೊಂಡಿದೆ.[೮] ಕೈಫಿಯತ್ತುಗಳು ಹನುಪ್ಪ ನಾಯಕನನ್ನು ಕುರುಬ ಜಾತಿಗೆ ಸೇರಿದವನೆಂದು ಹೇಳುತ್ತವೆ. ಲಕ್ಕಿ ನಾಯಕ ಎಂಬುವನು ಮುತ್ತಗಿ ವಡವಡಗಿ ಗ್ರಾಮದ ಗೌಡಿಕೆಯನ್ನು ಮಾಡಿಕೊಂಡಿದ್ದನು. ಇವನಿಗೆ ಬಾಲ ಹನುಮಪ್ಪ ನಾಯಕ ಮತ್ತು ಬಳಗ ನಾಯಕ ಎಂಬ ಇಬ್ಬರು ಮಕ್ಕಳಿದ್ದರು. ಇವರಿಬ್ಬರಲ್ಲಿ ಹಂಡೆ ಮನೆತನದ ಮೂಲ ಪುರುಷನೇ ಬಾಲದ ಹನುಮಪ್ಪ ನಾಯಕ. ಈತ ಬಿಜಾಪುರದಲ್ಲಿದ್ದ ಆದಿಲ್‌ಷಾಹನ ಆಸ್ಥಾನದ ಸೇನಾಧಿಕಾರಿಯಾಗಿ ತನ್ನ ರಾಜಕೀಯ ಜೀವನವನ್ನು ಆರಂಭಿಸಿದನು.

ರಾಜಕೀಯ ಇತಿಹಾಸ

ಹಂಡೆಯ ಪಾಳೆಯಗಾರರು ತಮ್ಮ ಮೂಲ ನೆಲೆಯಾದ ವಿಜಾಪುರವನ್ನು ತೊರೆದು ಬಳ್ಳಾರಿ ಜಿಲ್ಲೆಗೆ ವಲಸೆ ಬರಲು ಕಾರಣಗಳೇನು ಎಂಬುದನ್ನು ಪರಿಶೀಲಿಸಿದಾಗ ಎರಡು ಪ್ರಧಾನ ಅಂಶಗಳು ಗೋಚರಿಸುತ್ತವೆ. (ಎ) ಬಿಜಾಪುರದ ಆದಿಲ್‌ಷಾ ಸುಲ್ತಾನನ ವಜೀರನಾಗಿ ಬಳ್ಳಾರಿ. ತೆಕ್ಕಲಕೋಟೆ, ಕುರುಗೋಡು ಪ್ರದೇಶಗಳಲ್ಲಿ ಆಡಳಿತ ನಡೆಸಿದ್ದು (ಬಿ) ಮುಂದೆ ವಿಜಯನಗರದ ಅಳಿಯ ರಾಮರಾಯನಿಂದ ನಂದ್ಯಾಲ ಬುಕ್ಕರಾಯ ಸಮುದ್ರ, ಧರ್ಮಾವರ, ಕಣೇಕಲ್ಲು, ಬಳ್ಳಾರಿ, ಕುರುಗೋಡು ಗ್ರಾಮಗಳನ್ನು ನಾಯಕತನಕ್ಕಾಗಿ ಪಡೆದು ಬಳ್ಳಾರಿಯಲ್ಲಿಯೇ ಸ್ಥಿರವಾಗಿ ನಿಲ್ಲಲು ಕಾರಣವಾಗಿರಬೇಕು.

ಈ ಎರಡು ಪ್ರಧಾನ ಅಂಶಗಳಿಂದ ಬಾಲದ ಹನುಮಪ್ಪ ನಾಯಕನು ಬಳ್ಳಾರಿ ಜಿಲ್ಲೆಯಲ್ಲಿ ಪಾಳೆಯಪಟ್ಟನ್ನು ಸ್ಥಾಪಿಸಿದನು.

ಬಾಲದ ಹನುಮಪ್ಪ ನಾಯಕನು ರಾಜಕೀಯವಾಗಿ ಪುರೋಗತಿಯನ್ನು ಸಾಧಿಸಿದ್ದು ಬಿಜಾಪುರದ ಆದಿಲ್‌ಷಾಹನ ಕಾಲದಲ್ಲಯೇ. ಈತ ಆರಂಭದಲ್ಲಿ ಸಾಮಾನ್ಯ ಸೈನಿಕನಾಗಿ ಸೇರಿಕೊಂಡು ತನ್ನ

ಶಕ್ತಿ ಸಾಮರ್ಥ್ಯಗಳಿಂದ ವಜೀರನೆಂಬ ಬಿರುದನ್ನು ಪಡೆದು ಗೌರವಿಸಲ್ಪಟ್ಟನು. ಬಿಜಾಪುರ ಸುಲ್ತಾನನು ಬಳ್ಳಾರಿ, ತೆಕ್ಕಲಕೋಟೆ, ಕುರುಗೋಡು ಈ ಮೂರು ಪರಗಣೆಗಳನ್ನು ಬಾಲದ ಹನುಮಪ್ಪ ನಾಯಕನಿಗೆ ಸನ್ನದು ಬರೆದು ನೀಡಿ ಕಳುಹಿಸಿದನು. ಕ್ರಿ.ಶ. ೧೫೧೦ರಲ್ಲಿ ಬಂಕಾಪುರದಲ್ಲಿ ತಲೆ ಎತ್ತಿದ ಅರಾಜಕತೆಯನ್ನು ಹೋಗಲಾಡಿಸಿ ಅಲ್ಲಿ ಒಂದು ಕೋಟೆಯನ್ನು ನಿರ್ಮಿಸಿದನು. ಉತ್ತಮ ಆಡಳಿತಗಾರನಾಗಿ ಖ್ಯಾತನಾದನು. ಬಾಲದ ಹನುಮಪ್ಪ ನಾಯಕನ ಕಾರ್ಯಗಳನ್ನು ಮೆಚ್ಚಿದಂತಹ ಬಿಜಾಪುರದ ಸುಲ್ತಾನನು ಹನುಮಪ್ಪ ನಾಯಕನನ್ನು ಕರಿಸಿ ಅವನಿಗೆ ತೆಕ್ಕಲಕೋಟೆ ಕಣೇಕಲ್ಲು, ಕುಂದುರ್ಪಿ, ಧರ್ಮಾವರ, ಅನಂತಪುರ, ನಂದ್ಯಾಲ, ಶಿರವಾಳ, ಶಿರಗುಪ್ಪೆ, ಶಿನ್ನೂರು, ನಾಗರಪುರ, ಒಡ್ಡು, ದರೋಜಿ, ಕುರುಗೋಡು[೭೬] ಮುಂತಾದ ಪರಗಣೆಗಳನ್ನು ನೀಡಿ ಸತ್ಕರಿಸುತ್ತಾನೆ. ಆರಂಭದಲ್ಲಿ ಕೇವಲ ಮೂರೇ ಮೂರು ಪರಗಣೆಗಳ ಒಡೆಯನಾದ ಬಾಲದ ಹನುಮಪ್ಪ ನಾಯಕನು ಕಾಲಕ್ರಮೇಣ ತನ್ನ ರಾಜಕೀಯ ಶಕ್ತಿಯನ್ನು ವೃದ್ಧಿಸಿಕೊಂಡು ಹನ್ನೊಂದು ಪರಗಣೆಗಳ ಆಡಳಿತವನ್ನು ನಿರ್ವಹಿಸುವಲ್ಲಿ ಯಶಸ್ವಿಯಾದನು. ಬಾಲದ ಹನುಮಪ್ಪ ನಾಯಕನು ಶ್ರೀಶೈಲ ನಿಡುಮಾಮಿ ಪೀಠದ ಇಮ್ಮಡಿ ಶ್ರೀಕರಿಬಸವ ಸ್ವಾಮಿಗಳ ಅನನ್ಯ ಭಕ್ತನಾಗಿದ್ದನು.

ಈ ಸಂದರ್ಭದಲ್ಲಿ ವಿಜಯನಗರವನ್ನು ಕಬಳಿಸಲು ಮುಸಲ್ಮಾನರು ಪ್ರಯತ್ನಿಸುತ್ತಿದರು. ಆಗ ವಿಜಯನಗರವನ್ನು ಪರಿಪಾಲಿಸುತ್ತಿದ್ದ ಸದಾಶಿವರಾಯ ಮತ್ತು ಅಳಿಯ ರಾಮರಾಯರು ಸಾಮ್ರಾಜ್ಯಕ್ಕೆ ಬಂದುದೊಗಿದ ಗಂಡಾಂತರರವನ್ನು ಶ್ರೀಶೈಲ ನಿಡುಮಾಮಿ ಪೀಠದ ಸ್ವಾಮಿಗಳ ಬಳಿ ನಿವೇದನೆ ಮಾಡಿಕೊಂಡರು. ಕರಿಬಸವ ಸ್ವಾಮಿಗಳು ಈ ಬಂಡಾಯವನ್ನು ಅಡಗಿಸಲು ಬಾಲದ ಹನುಮಪ್ಪ ನಾಯಕನನ್ನು ನಿಯಮಿಸುವಂತೆ ಸಲಹೆ ನೀಡಿದರು. ಸ್ವಾಮಿಗಳ ಆದೇಶದಂತೆ ಹಂಡೆ ಹನುಮಪ್ಪ ನಾಯಕನ ನೆರವನ್ನು ಪಡೆದು ಬಂಡಾಯದ ಮುಂಚೂಣಿಯಲ್ಲಿದ್ದ ತಿಮ್ಮಯ್ಯನನ್ನು ಸೆರೆ ಹಿಡಿಯುವಲ್ಲಿ ರಾಮರಾಯನು ಯಶಸ್ವಿಯಾದನು. ತರುವಾಯ ಹನುಮಪ್ಪ ನಾಯಕನು ನಿಜಾಂಷಾನನ್ನು ಸೆರೆ ಹಿಡಿದು ರಾಮರಾಯನಿಗೆ ಒಪ್ಪಿಸಿದನು. ಹನುಮಪ್ಪ ನಾಯಕನ ಶೌರ್ಯ, ಸಾಹಸಗಳನ್ನು ಮೆಚ್ಚಿದ ರಾಮರಾಯನು ಇವನಿಗೆ ವಿಜಯನಗರದ ಸಾಮಂತ ರಾಜನ ಸ್ಥಾನ ನೀಡಿ ಗೌರವಿಸಿದನು. ಬಳ್ಳಾರಿ ಜಿಲ್ಲೆಯ ಶಾಸನವು ವಿಜಯನಗರದ ರಾಮರಾಯನು ನಂದ್ಯಾಲ, ಬುಕ್ಕರಾಯನ ಸಮುದ್ರ, ಧರ್ಮಾವರ, ಕಣೇಕಲ್ಲು, ಬಳ್ಳಾರಿ, ಕುರುಗೋಡು ಗ್ರಾಮಗಳನ್ನು ನಾಯಕತನಕ್ಕೆ ಪಾಲಿಸಿದ್ದನ್ನು ಸಮರ್ಥಿಸುತ್ತದೆ.[೭೭] ಅರವೀಡು ಮನೆತನದ ವೆಂಕಟಪತಿ ದೇವನ ಕಾಲದ ಶಾಸನವು (ಶಾಸನ ಸಂಖ್ಯೆ ೬೩) ಹಂಡೆ ಹನುಮಿನಾಯಕ ಅಂಕುಸರಾಯ ಅಮರ ಮಾಗಣೆಯಾಗಿ ಪಡೆದ ಬಳ್ಳಾರಿ ಸೀಮೆಯ ವಿವರಗಳನ್ನು ಒಳಗೊಂಡಿದೆ.[೭೮] ಹೀಗೆ ಬಾಲದ ಹನುಮಪ್ಪ ನಾಯಕನು ವಿಜಯನಗರದ ಅಮರನಾಯಕನಾಗಿ ಬಳ್ಳಾರಿಯನ್ನು ಆಳಿದನು. ವಿಜಯನಗರದ ಪತನದ ನಂತರ ಪುನಃ ತನ್ನ ನಿಷ್ಠೆಯನ್ನು ಬಿಜಾಪುರದ ಸುಲ್ತಾನನಿಗೆ ವ್ಯಕ್ತಪಡಿಸಿದನು. ಇದು ಇವನ ರಾಜಕೀಯ ದೂರದೃಷ್ಟಿ ಕೋನವನ್ನು ಚಾಣಕ್ಷತನವನ್ನು ತೋರಿಸುತ್ತದೆ. ಬಾಲದ ಹನುಮಪ್ಪ ನಾಯಕನ ಐದು ಜನ

ಮಕ್ಕಳಲ್ಲಿ ೪ನೇ ಮಗನಾದ ಹಿರಿಮಲುಕಪ್ಪ ನಾಯಕನು ಬಳ್ಳಾರಿಯ ಪಾಳೆಯಗಾರನಾಗಿ ನಿಯುಕ್ತಿಗೊಂಡನು.

ಹಿರಿಮಲುಕಪ್ಪ ನಾಯಕನ ನಂತರ ಸಿದ್ದಪ್ಪನಾಯಕ, ಹಿರೆರಾಮಪ್ಪನಾಯಕರು ಕ್ರಮವಾಗಿ ಬಳ್ಳಾರಿಯಲ್ಲಿ ಕ್ರಿ.ಶ. ೧೫೬೦ರಿಂದ ೧೬೩೨ರವರೆಗೆ ಆಳಿದರು. ಕ್ರಿ.ಶ. ೧೬೩೩ರಲ್ಲಿ ಬಳ್ಳಾರಿಯು ಬಿಜಾಪುರದ ತೆಕ್ಕೆಗೆ ಸೇರಿತು. ಬಿಜಾಪುರದ ಸುಲ್ತಾನನಾದ ಮಹಮ್ಮದ್ ಆದಿಲ್‌ಷಾನು ತನ್ನ ಸೇನಾಧಿಪತಿ ಬಡೇಸಾಹೇಬನ ನೇತೃತ್ವದಲ್ಲಿ ಸೇನೆಯನ್ನು ಕಳುಹಿಸಿದನು. ಬಡೇ ಸಾಹೇಬನು ಮೋಸದಿಂದ ಹಿರೆರಾಮಪ್ಪ ನಾಯಕನನ್ನು ಬಂಧಿಸಿ ಬಿಜಾಪುರದ ಸೆರೆಮನೆಯಲ್ಲಿಡಲಾಯಿತು. ಹೀಗಾಗಿ ಕೆಲವು ವರ್ಷಗಳ ಕಾಲ ಬಳ್ಳಾರಿಯಲ್ಲಿ ಬಿಜಾಪುರ ಸುಲ್ತಾನರ ಆಡಳಿತವೇ ಮುಂದುವರಿಯಿತು. ಈ ಅವಧಿಯಲ್ಲಿ ಕರೀಂ ಸಾಹೇಬ, ಮಸೂದ್‌ಖಾನ್‌ರು ಬಿಜಾಪುರದ ಸುಲ್ತಾನರ ಪ್ರತಿನಿಧಿಗಳಾಗಿ ಅಧಿಕಾರ ನಡೆಸಿದರು. ಈ ಸಮಯದಲ್ಲಿ ಪುನಃ ಹಿರೆ ರಾಮಪ್ಪ ನಾಯಕನನ್ನು ಬಿಡುಗಡೆ ಮಾಡಲಾಯಿತು. ಕೆಲವು ವರ್ಷಗಳ ಕಾಲ ಈತ ಸಿದ್ಧಿ ಮಸೂದ್‌ಖಾನನ ಜೊತೆ ಬಳ್ಳಾರಿಯಲ್ಲಿ ಜಂಟಿಯಾಗಿ ಆಡಳಿತ ನಡೆಸಿದರು.[೬೯]

ಸಿದ್ಧಿ ಮಸೂದ್‌ಖಾನನ ಮರಣನಂತರ ಪಾಳೆಯಗಾರ ಹಿರೆ ರಾಮಪ್ಪನಾಯಕನನ್ನು ಬಂಧಿಸಿ ಪುನಃ ಬಿಜಾಪುರದ ಸೆರೆಮನೆಯಲ್ಲಿಡಲಾಯಿತು. ಬಿಜಾಪುರದವರು ಬಾಬಾ ಸಾಹೇಬನನ್ನು ಬಳ್ಳಾರಿಯ ಆಡಳಿತಗಾರನನ್ನಾಗಿ ನೇಮಿಸಿದರು. ಪುನಃ ಬಳ್ಳಾರಿಯಲ್ಲಿ ಪಾಳೆಯಗಾರರ ಉಲ್ಲೇಖ ಸಿಗುವುದು ಹಿರೆ ರಾಮಪ್ಪನಾಯಕನ ಮಗನಾದ ಚಿಕ್ಕ ಮಲಕಪ್ಪನಾಯಕನ ಕಾಲದಲ್ಲಿ. ಕ್ರಿ.ಶ. ೧೬೯೨ರಲ್ಲಿ ಆನೆಗೊಂದಿಯವರು ಮುದ್ದಲಾಪುರ ಗ್ರಾಮವನ್ನು ಚಿಕ್ಕ ಮಲುಕಪ್ಪನಿಗೆ ಜಹಗೀರಾಗಿ ನೀಡಿದರು. ಬಳ್ಳಾರಿ ಸೀಮೆಯ ಮಣೂರು ಗ್ರಾಮವನ್ನು ವಶಪಡಿಸಿಕೊಂಡು ಆಡಳಿತ ನಡೆಸಿದ. ಇವನ ನಂತರ ಚಿಕ್ಕನಾಯಕ, ದೇವಪ್ಪ, ದೊಡ್ಡತಲೆ ರಾಮಪ್ಪ ನಾಯಕರು ಬಳ್ಳಾರಿಯನ್ನು ಆಳಿದರು. ದೊಡ್ಡ ತಲೆರಾಮಪ್ಪ ನಾಯಕನು ಪ್ರಜಾಹಿತ ಚಿಂತಕನು, ಪರೋಪಕಾರಿಯಾದ ಪಾಳೆಯಗಾರನಾಗಿದ್ದನು. ಇವನ ಆಡಳಿತಾವಧಿಯಲ್ಲಿ ಕೋಟೆಗಳು, ಕೆರೆಗಳು, ಬಾವಿಗಳು ನಿರ್ಮಾಣವಾದವು. ಸೈನ್ಯವನ್ನು ಬಲಪಡಿಸಿಕೊಂಡನು. ಆನೆಗೊಂದಿಯವರ ಜೊತೆ ಯುದ್ಧಗಳನ್ನು ಮಾಡಿ ಅವರಿಗೆ ಸೇರಿದ ಸಿರಿಗೆರೆ, ಯಮ್ಮಿಗನೂರುಗಳನ್ನು ಗೆದ್ದುಕೊಂಡನು.[೭೦] ಅನಾರೋಗ್ಯದಿಂದ ದೊಡ್ಡತಲೆ ರಾಮಪ್ಪ ನಾಯಕನು ಮರಣ ಹೊಂದಿದನು. ದೊಡ್ಡತಲೆ ರಾಮಪ್ಪ ನಾಯಕನ ಕಾಲದಲ್ಲಿಯೇ ಅನಂತಪುರ ಪಾಳೆಯಗಾರರಿಗೂ ಬಳ್ಳಾರಿ ಪಾಳೆಯಗಾರರಿಗೂ ಅಂತಃಕಲಹಗಳು ಆರಂಭವಾದವು. ದೊಡ್ಡತಲೆ ರಾಮಪ್ಪ ನಾಯಕನ ಮರಣದನಂತರ ಅನಂತಪುರದವರು ಸ್ವತಂತ್ರರಾಗಿ ತಮ್ಮ ರಾಜ್ಯವನ್ನು ಹಿಂದಕ್ಕೆ ಪಡೆದರು.

ದೊಡ್ಡತಲೆ ರಾಮಪ್ಪ ನಾಯಕನ ಮರಣದ ನಂತರ ಸಿಂಹಾಸನಕ್ಕಾಗಿ ಅಂತಃಕಲಹಗಳು ಶುರುವಾದವು. ಈತನಿಗೆ ಪುತ್ರ ಸಂತಾನವಿರಲಿಲ್ಲ. ಹೀಗಾಗಿ ಈತನ ಸಹೋದರ ಹನುಮಪ್ಪ

ನಾಯಕನು ಅಧಿಕಾರಕ್ಕೆ ಬಂದನು. ಈತನ ಕಾಲದಲ್ಲಿಯೇ ಹೊರಗಿನ ಶತ್ರುಗಳ ದಾಳಿಯು ಆರಂಭವಾಯಿತು. ಹೈದರಾಬಾದಿನ ನಿಜಾಮ ಆಲಿಖಾನನು ಬಸಾಲ್ ಜಂಗ್ ಬಹದ್ದೂರ್ ನೇತೃತ್ವದಲ್ಲಿ ಸೈನ್ಯವನ್ನು ಕಳುಹಿಸಿ ಬಳ್ಳಾರಿಯನ್ನು ಮುತ್ತಿಗೆ ಹಾಕುವಂತೆ ಆದೇಶಿಸಿದನು. ಈ ಕದನದಲ್ಲಿ ಹನುಮಪ್ಪ ನಾಯಕ ಮೃತನಾದನು. ನಂತರ ಈತನ ಸಾಕು ಮಗ ದೊಡ್ಡಪ್ಪ ನಾಯಕನು ಬಳ್ಳಾರಿಯ ಪಾಳೆಯಗಾರನಾದನು.[೮೧]

ದೊಡ್ಡಪ್ಪ ನಾಯಕನ ಕಾಲದಲ್ಲಿ ಹೈದರಾಲಿಯ ದಾಳಿಗಳು ಆರಂಭವಾದವು. ಹೈದರಾಲಿಯು ಕೈಗೊಂಡ ಪ್ರಥಮ ದಾಳಿಯು ಯಶಸ್ವಿಯಾಗಲಿಲ್ಲ. ಕ್ರಿ.ಶ. ೧೭೭೫ರಲ್ಲಿ ಹೈದರಾಲಿಯು ರಾಮದುರ್ಗದ ನಾಯಕರ ಸಹಾಯವನ್ನು ಪಡೆದು ಬಳ್ಳಾರಿಗೆ ಎರಡನೆಯ ಬಾರಿಗೆ ಮುತ್ತಿಗೆ ಹಾಕಿದನು. ಯುದ್ಧದಲ್ಲಿ ದೊಡ್ಡಪ್ಪ ನಾಯಕನು ಸೋತು ಹೋಗಿ ಕುಟುಂಬಸಮೇತನಾಗಿ ಕುರುಗೋಡಿಗೆ ಓಡಿ ಹೋದನು.[೮೨] ಹೈದರಾಲಿ ಮತ್ತು ಅವನ ಮಗ ಟಿಪ್ಪು ಸುಲ್ತಾನನ ವಶದಲ್ಲಿದ್ದ ಬಳ್ಳಾರಿಯು ಟಿಪ್ಪುವಿನ ಮರಣದ ನಂತರ ಬ್ರಿಟಿಷ್ ಸರಕಾರಕ್ಕೆ ಹಸ್ತಾಂತರವಾಯಿತು. ಬ್ರಿಟಿಷ್ ಆಡಳಿತಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಮನ್ರೋ ಹಂಡೆಯ ಪಾಳೆಯಗಾರರಿಗೆ ನಿವೃತ್ತ ವೇತನವನ್ನು ನಿಗದಿಗೊಳಿಸಿದನು. ಕ್ರಿ.ಶ. ೧೮೬೦ರವರೆಗೂ ಹಂಡೆಯ ಪಾಳೆಯಗಾರರು ಬ್ರಿಟಿಷರಿಂದ ನಿವೃತ್ತಿ ವೇತನ ಪಡೆದುಕೊಂಡು ರಾಜಕೀಯದಿಂದ ಸಂಪೂರ್ಣ ನಿರ್ಗಮಿಸಿದರು.

ಅವಲೋಕನ

೧. ಹಂಡೆಯ ಪಾಳೆಯಗಾರರು ಕರ್ನಾಟಕವನ್ನು ಆಳಿದ ಪಾಳೆಯಗಾರರಲ್ಲಿ ಅಪ್ಪಟ ಕನ್ನಡಿಗರಾಗಿದ್ದು ಸ್ಥಳೀಯ ನಾಯಕರೇ ಆಗಿದ್ದಾರೆ. ಮೂಲತಃ ಕುರುಬ ಜಾತಿಗೆ ಸೇರಿದ್ದು ನಂತರದಲ್ಲಿ ವೀರಶೈವ ಧರ್ಮ ಅನುಸರಿಸಿರುವುದು ಕಂಡು ಬರುತ್ತದೆ. ಶ್ರೀಶೈಲ ಪೀಠದೊಂದಿಗಿನ ಸಂಪರ್ಕವೇ ಅವರು ವೀರಶೈವ ಧರ್ಮವನ್ನು ಆಚರಿಸಲು ಕಾರಣವಾಗಿರಬೇಕು.

೨. ಬಳ್ಳಾರಿಯು ರಾಜಕೀಯವಾಗಿ ಆಯಕಟ್ಟಿನ ಪ್ರದೇಶದಲ್ಲಿರುವುದರಿಂದ ಈ ಪಾಳೆಯ ಪಟ್ಟಿನ ಮೇಲೆ ಮೊಗಲರ, ನಿಜಾಮರ, ಹೈದರಾಲಿಯ ದಾಳಿಗಳು ಪದೇ ಪದೇ ಸಂಭವಿಸಿದ್ದರಿಂದ ರಾಜಕೀಯ ಸ್ಥಿರತೆಯನ್ನು ಕಾಯ್ದುಕೊಳ್ಳಲು ಈ ಪಾಳೆಯಗಾರರು ಸದಾ ಯುದ್ಧಗಳಲ್ಲಿಯೇ ನಿರತರಾಗಿತಬೇಕಿತ್ತು. ರಾಜಕೀಯ ಅಸ್ಥಿರತೆ ಈ ಪಾಳೆಯ ಪಟ್ಟಿನುದ್ದಕ್ಕೂ ಕಂಡು ಬರುತ್ತದೆ.

೩. ಧರ್ಮ ಪರಿಪಾಲಕರು, ಧರ್ಮ ಬೀರುಗಳು ಆಗಿದ್ದು ಹಂಡೆಯವರು ಶ್ರೀಶೈಲ ನಿಡುಮಾಮಿ ಪೀಠದ ಭಕ್ತರು. ಸೊನ್ನಲಾಪುರದ ಸಿದ್ಧರಾಮನ ಭಕ್ತರು ಆಗಿದ್ದರು. ಶ್ರೀಶೈಲ ಮಠಕ್ಕೆ ಇವರು ನೀಡಿರುವ ಭೂದಾನಗಳು ಹಾಗೂ ಬಳ್ಳಾರಿಯ ಮಠಕ್ಕೆ ನೀಡಿರುವ ಭೂದಾನಗಳು ಇವರು ಧರ್ಮಬೀರುಗಳಾಗಿದ್ದರು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಬಂಕಾಪುರ ಹಾಗೂ ಕುರುಗೋಡು ಪ್ರದೇಶಗಳ ಸುತ್ತಮುತ್ತ ಪ್ರಸಿದ್ಧವಾದ ಶ್ರೀಗುರು ತೋಂಟದ ಸಿದ್ಧಲಿಂಗೇಶ್ವರ ಸಂಪ್ರದಾಯದ ವಿರಕ್ತಮಠದ ನೀಲಕಂಠಸ್ವಾಮಿಗಳಿಗೆ ಭಕ್ತಿಯಿಂದ ನಡೆದುಕೊಂಡಿದ್ದಾರೆ. ಹಾಗೆಯೇ ಡಂಬಳದ

ಸಂತೆಯ ಶ್ರೀತೋಂಟದಾರ್ಯರು ಈ ವಂಶದ ಅರಸರಿಗೆ ರಾಜ ಗುರುಗಳಾಗಿದ್ದರೆಂದು ದಾಖಲೆಯೊಂದು ಹೇಳುತ್ತದೆ.[೮೩]

೪.೭. ಗುಡೇಕೋಟೆ ಪಾಳೆಯಗಾರರು

ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಬೇಡ ಪಾಳೆಯಪಟ್ಟುಗಳಲ್ಲಿ ಗುಡೇಕೋಟೆಯು ಒಂದಾಗಿದೆ. ಗುಡೇಕೋಟೆಯು ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಒಂದು ಪ್ರದೇಶವಾಗಿದೆ.[೮೪] ಆರಂಭದಲ್ಲಿ ವಿಜಯನಗರದ ಅರಸರಿಂದ ಅಮರನಾಯಕತನವನ್ನು ಪಡೆದುಕೊಂಡು ವಿಜಯನಗರದ ಪತನದ ನಂತರ ಸ್ವತಂತ್ರಗೊಂಡು, ನಂತರ ಚಿತ್ರದುರ್ಗ ನಾಯಕರ ಅಧೀನರಾಗಿ ಆಳಿದ ಗುಡೇಕೋಟೆಯ ಪಾಳೆಯಗಾರರು ಹೈದರಾಲಿಯ ದಾಳಿಗಳಿಗೆ ತುತ್ತಾಗಿ ಅವನ ಮಗ ಟಿಪ್ಪು ಸುಲ್ತಾನನ ಕಾಲದಲ್ಲಿ ಸಂಪೂರ್ಣ ಅವನತಿಗೊಂಡರು. ನಾಲ್ಕನೇ ಕಾಲದಲ್ಲಿ ಸಂಪೂರ್ಣ ಅವನತಿಗೊಂಡರು. ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದ ತರುವಾಯ ಹೈದರಾಬಾದಿನ ನಿಜಾಮನ ಆಳ್ವಿಕೆಗೆ ಒಳಪಟ್ಟ ಗುಡೇಕೋಟೆಯು ನಂತರ ಬ್ರಿಟಿಷರ ದತ್ತ ಮಂಡಲವಾಗಿ ರೂಪುಗೊಂಡಿತು. ೪ನೇ ಆಂಗ್ಲೋ ಮೈಸೂರು ಯುದ್ಧದವರೆಗೂ ಗುಡೇಕೋಟೆಯ ಪಾಳೆಯಗಾರರು ರಾಜಕೀಯ ಅಸ್ತಿತ್ವಕ್ಕಾಗಿ ಹೋರಾಟಗಳನ್ನು ನಡೆಸುತ್ತಲೇ ಬಂದರು. ಕೊನೆಗೆ ಅವರ ಹೋರಾಟಗಳೆಲ್ಲವೂ ವಿಫಲವಾಗಿ ಅಂತಿಮವಾಗಿ ಬ್ರಿಟಿಷರಿಂದ ಪಿಂಚಣಿ ಪಡೆಯಲು ಯತ್ನಿಸಿದ ಪಾಳೆಯಗಾರರ ಇತಿಹಾಸವೇ ರೋಚಕವಾಗಿದೆ. ರಾಜಕೀಯ ಅಸ್ಥಿರತೆಗಳ ನಡುವೆಯೂ ತಮ್ಮ ಅಸ್ತಿತ್ವಕ್ಕಾಗಿ ಸದಾ ಹೋರಾಟಗಳನ್ನು ನಡೆಸುತ್ತಾ ಬಂದ ಪಾಳೆಯಗಾರರ ಧೈರ್ಯ, ಶೌರ್ಯ, ಹೋರಾಟದ ನೆಲೆಗಳು ಚಿರಸ್ಮರಣೀಯವಾಗಿವೆ.

ಆಕರಗಳು

೧. ಗುಡೇಕೋಟೆಯ ಪಾಳೆಯಗಾರರ ಚರಿತ್ರೆಗೆ ಲಿಖಿತ ಆಧಾರಗಳ ಕೊರತೆಯಿದೆ. ಗುಡೇಕೋಟೆಯ ಪಾಳೆಯಗಾರರಿಗೆ ಸಂಬಂಧಿಸಿದ ಶಾಸನಗಳು ಕೇವಲ ಬೆರಳಣಿಕೆಯಷ್ಟಿವೆ. ಇವರ ಕಾಲದ ಒಟ್ಟು ಮೂರು ಶಾಸನಗಳು ಪತ್ತೆಯಾಗಿದ್ದು ಅವು ಪುರಾತತ್ವ ವರದಿಯಲ್ಲಿ ಪ್ರಕಟಗೊಂಡಿವೆ. ಇವುಗಳ ಜೊತೆಗೆ ಈ ಪಾಳೆಯಗಾರರ ಕಾಲದಲ್ಲಿ ನಿರ್ಮಾಣಗೊಂಡಿರುವ ದೇವಾಲಯಗಳು, ಆರಮನೆ, ಕೋಟೆ, ಸ್ಮಾರಕಗಳು ಇವರ ಇತಿಹಾಸ ರಚನೆಗೆ ನೆರವನ್ನು ನೀಡುತ್ತವೆ. ಬಳ್ಳಾರಿ ಕೈಫಿಯತ್ತು, ಕುರುಗೋಡು ಕೈಫಿಯತ್ತು ಬಳ್ಳಾರಿ ಜಿಲ್ಲಾ ಗೆಝೆಟಿಯರ್‌ಗಳಲ್ಲಿ ಗುಡೇಕೋಟೆ ಪಾಳೆಯಗಾರರ ಕುರಿತು ಮಾಹಿತಿಗಳು ದೊರೆಯುತ್ತದೆ.

೨. ಗುಡೇಕೋಟೆ ಪಾಳೆಯಗಾರರ ಕುರಿತು ಇತ್ತೀಚೆಗೆ ಹಲವು ಅಧ್ಯಯನಗಳು ನಡೆದಿವೆ. ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾಗಿರುವ ಗುಡೇಕೋಟೆ ಚಾರಿತ್ರಿಕ ಅಧ್ಯಯನ ಎಂಬ ಅಪ್ರಕಟಿತ ಎಂ.ಫಿಲ್. ಪ್ರಬಂಧವು ಗುಡೇಕೋಟೆಯ ಪಾಳೆಯಗಾರರ ಕುರಿತು ಮಾಹಿತಿಯನ್ನು ನೀಡುತ್ತದೆ. ಡಾ. ವಿರೂಪಾಕ್ಷಿ ಪೂಜಾರಹಳ್ಳಿಯವರ ಬಳ್ಳಾರಿ ಜಿಲ್ಲೆಯ ಪಾಳೆಯಗಾರರು ಎಂಬ ಕೃತಿಯಲ್ಲಿ

ಗುಡೇಕೋಟೆ ಪಾಳೆಯಗಾರರ ಕುರಿತು ವಿವರಣಾತ್ಮಕ ಮಾಹಿತಿಯಿದೆ. ಇದೇ ಸಂಶೋಧಕರ ಗುಡೇಕೋಟೆ ಶೋಧನೆ ಎಂಬ ಸಂಶೋಧನಾ ಲೇಖನವು ಈ ಪಾಳೆಯಗಾರರ ಕುರಿತು ಮಾಹಿತಿಯನ್ನು ಒದಗಿಸುತ್ತದೆ. ಡಾ. ಯೋಗೀಶ್ವರಪ್ಪರವರು "ಮಧ್ಯಕಾಲೀನ ಕರ್ನಾಟಕ ಪಾಳೆಯಗಾರರು ಎಂಬ ಕೃತಿಯಲ್ಲಿ ಗುಡೇಕೋಟೆ ಪಾಳೆಯಗಾರರ ಬಗ್ಗೆ ವಿಶ್ಲೇಶಣಾತ್ಮಕ ಮಾಹಿತಿಯನ್ನು ನೀಡಿದ್ದಾರೆ." ಮೆಕೆಂಜಿಯವರ ಅಪ್ರಕಟಿತ ಇಂಗ್ಲಿಷ್ ದಾಖಲೆಯು ಗುಡೇಕೋಟೆ ಪಾಳೆಯಗಾರರ ಕುರಿತು ಮಾಹಿತಿಯನ್ನು ಒಳಗೊಂಡಿದೆ. ಸಿ.ಆರ್.ಶ್ಯಾಮಲಾರವರು ತಮ್ಮ ಪೂರ್ವ ಕರ್ನಾಟಕದ ಪಾಳೆಯಗಾರರು ಎಂಬ ಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧದಲ್ಲಿ ಗುಡೇಕೋಟೆ ಪಾಳೆಯಗಾರರ ಕುರಿತು ಸಂಕ್ಷಿಪ್ತ ಮಾಹಿತಿಯನ್ನು ನೀಡಿದ್ದಾರೆ. ಈ ಎಲ್ಲ ಪ್ರಕಟಿತ ಕೃತಿಗಳಲ್ಲಿನ ಮಾಹಿತಿಯನ್ನು ವಿಶ್ಲೇಷಿಸಿ ಗುಡೇಕೋಟೆ ಪಾಳೆಯಗಾರರ ಇತಿಹಾಸವನ್ನು ರಚಿಸಲಾಗಿದೆ.

ಮೂಲ

ಗುಡೇಕೋಟೆ ಪಾಳೆಯಗಾರರ ಮೂಲವನ್ನು ಕುರಿತು ಚರ್ಚಿಸುವಾಗ ಕೈಫಿಯತ್ತುಗಳು ನೀಡುವ ಮಾಹಿತಿಯನ್ನು ವಿಶ್ಲೇಷಿಸಬೇಕಾಗುತ್ತದೆ. ಡಾ.ಎಂ.ಎಂ. ಕಲಬುರ್ಗಿ ಅವರು ಸಂಗ್ರಹಿಸಿರುವ ಕರ್ನಾಟಕ ಕೈಫಿಯತ್ತುಗಳಲ್ಲಿ ಗುಡೇಕೋಟೆ ಪಾಳೆಯಗಾರರ ಮೂಲ ವಂಶಜ ಕುಮಾರರಾಮ ಎಂಬ ಉಲ್ಲೇಖವಿದೆ. ಈ ಕುಮಾರರಾಮನ ವಂಶಸ್ಥರು ಬೊಮ್ಮಂತರಾಜ ಈತ ಬೇಡ ಜನಾಂಗದ ಮಳಾರ ಗೋತ್ರದವನೆಂದೂ ಕೃಷ್ಣದೇವರಾಯನ ಕಾಲದಲ್ಲಿ ಅಮರನಾಯಕತನವನ್ನು ಪಡೆದನೆಂದು ಹೇಳಲಾಗಿದೆ.[೧೫] ಕುಮಾರರಾಮನು ಕುಮ್ಮಟದುರ್ಗದ ರಾಜ. ಈತ ಬೇಡ ಜನಾಂಗದ ಇಂತಹ ವೀರನ ವಂಶಸ್ಥರೆಂದು ಹೇಳಿಕೊಳ್ಳುವುದರ ಮೂಲಕ ತಮ್ಮ ಮನೆತನದ ಗೌರವವನ್ನು ಹೆಚ್ಚು ಮಾಡಿಕೊಳ್ಳುವ ಹಲವಾರು ಪ್ರಸಂಗಗಳನ್ನು ಮಧ್ಯಕಾಲೀನ ಸಾಮಂತ ಮನೆತನದ ಇತಿಹಾಸದಲ್ಲಿ ಕಾಣುತ್ತೇವೆ. ಈ ಮೇಲಿನ ಹೇಳಿಕೆಯನ್ನು ಸಮರ್ಥಿಸುತ್ತಾರೆ. ಡಾ.ಡಿ.ಎಂ. ಯೋಗೀಶ್ವರಪ್ಪನವರ ಪ್ರಕಾರ ಗುಡೇಕೋಟೆ ಪಾಳೆಯಗಾರರಿಗೂ, ಕುಮಾರರಾಮನ ವಂಶದವರಿಗೂ ಯಾವುದೇ ಸಂಬಂಧವಿಲ್ಲವೆಂದೂ ಈ ಪಾಳೆಯಗಾರರು ಆಂಧ್ರ ಪ್ರದೇಶದ ನೆಲ್ಲೂರಿನಿಂದ ವಿಜಯನಗರಕ್ಕೆ ಬಂದು ನೆಲೆಸಿರಬಹುದೆಂದು, ಕಾಲಾನಂತರದಲ್ಲಿ ಗುಡೇಕೋಟೆಗೆ ವಲಸೆ ಬಂದಿರಬಹುದು ಎಂಬ ತರ್ಕಬದ್ಧವಾಗಿ ಪ್ರತಿಪಾದಿಸಿದ್ದಾರೆ. ಇದನ್ನು ದೃಢೀಕರಿಸಲು ಯೋಗೀಶ್ವರಪ್ಪನವರು ಮೆಕೆಂಜಿ ಸಂಗ್ರಹದ ದಾಖಲೆಯನ್ನು ಪೂರಕವಾಗಿ ತೆಗೆದುಕೊಂಡಿದ್ದಾರೆ. ಮೆಕಂಝಿ ಸಂಗ್ರಹದ ದಾಖಲೆಯು ತಿಳಿಸುವಂತೆ "ಈ ಮನೆತನದ ಸಂಸ್ಥಾಪಕನಾದ ಗಂಡಾಳನಾಯಕನ ಪೂರ್ವಜರು ಆರಂಭದಲ್ಲಿ ಅಂದರೆ ರಾಜ್ಯ ಸ್ಥಾಪನೆ ಮಾಡುವ ಮೊದಲು ನೆಲ್ಲೂರಿನಲ್ಲಿದ್ದರೆಂದು ತಿಳಿಸುತ್ತದೆ.[೧೬] ನೆಲ್ಲೂರಿನಿಂದ ಕರ್ನಾಟಕದ ಬಳ್ಳಾರಿ ಜಿಲ್ಲೆಗೆ ವಲಸೆ ಬಂದರೆಂದು ದಾಖಲೆಗಳಲ್ಲಿ ತಿಳಿಸಲಾಗಿದೆ.

ಡಾ. ವಿರೂಪಾಕ್ಷಿ ಪೂಜಾರಹಳ್ಳಿಯವರು ಗುಡೇಕೋಟೆ ಪಾಳೆಯಗಾರರು ಸ್ಥಳೀಯ ಮೂಲದವರೆಂದು, ಪ್ರತಿಪಾದಿಸಲು ಯತ್ನಿಸಿದ್ದಾರೆ. ಸೊಂಡೂರು ಶ್ರೀಕುಮಾರಸ್ವಾಮಿ ಚರಿತ್ರೆ ಎಂಬ

ಕೃತಿಯಲ್ಲಿನ ಮಾಹಿತಿಯನ್ನು ವಿಶ್ಲೇಷಿಸಿ ಮಳೆನೋರು ಮನೆತನದ ಪಾಳೆಯಗಾರರ ಕೂಡ್ಲಿಗಿ ತಾಲ್ಲೂಕಿನ ಗುಡೇಕೋಟೆ ಪಾಳೆಯಗಾರರಿಗೆ ಸಂಬಂಧಿಕನೆಂದೂ, ಈ ಹಿನ್ನೆಲೆಯಲ್ಲಿ ಗುಡೇಕೋಟೆ ಅರಸರು ಸ್ಥಳೀಯ ಬೇಡರಾಗಿದ್ದು ಬೇಟೆಯ ಮೂಲಕ ರಾಜ್ಯವನ್ನು ಸ್ಥಾಪನೆ ಮಾಡಿದರೆಂದು ಹೇಳುತ್ತಾರೆ.[೮೭]

ವಾದಗಳೇನೇ ಇದ್ದರೂ ಗುಡೇಕೋಟೆ ಪಾಳೆಯಗಾರರನ್ನು ಸ್ಥಳೀಯ ಬೇಡ ನಾಯಕರೆಂದೇ ನಂಬಬೇಕಾಗುತ್ತವೆ. ಇವರು ಆಂಧ್ರಪ್ರದೇಶದಿಂದ ವಲಸೆ ಬಂದ ತೆಲುಗರಾದರೂ ನಂತರದಲ್ಲಿ ಕನ್ನಡ ನಾಡಿನಲ್ಲಿ ನೆಲೆನಿಂತು ಬೇಡ ಪಾಳೆಯಪಟ್ಟಿನ ಉಗಮಕ್ಕೆ ಕಾರಣ ಕರ್ತರಾದರು. ಅರವೀಡು ಮನೆತನದ ವೆಂಕಟಪತಿ ದೇವರಾಯನ ಕಾಲದಲ್ಲಿ ಬೊಮ್ಮಂತರಾಜನಿಗೆ ನಾಯಕತನ ದೊರೆಯಿತು. ಈ ವಂಶದ ಮೂಲ ಪುರುಷ ಗಂಡಳನಾಯಕ.

ರಾಜಕೀಯ ಇತಿಹಾಸ

ಗಂಡಳ ನಾಯಕನು ಗುಡೇಕೋಟೆ ಪಾಳೆಯಗಾರರ ಮೂಲ ಪುರುಷ. ಪೌರಾಣಿಕವಾಗಿ ಆಳ್ವಿಕೆ ನಡೆಸಿದ ಗುಡೇಕೋಟೆಯ ಗಡಿಯಾಂಕ ಭೀಮನ ನಂತರ ಚಾರಿತ್ರಿಕವಾಗಿ ರಾಜ್ಯ ಸ್ಥಾಪನೆ ಮಾಡಿದ ಕೀರ್ತಿ ಗಂಡಳನಾಯಕನಿಗೆ ಸಲ್ಲುವುದು.[೮೮] ಗಂಡಳ ನಾಯಕನು ಕೃಷ್ಣದೇವರಾಯನ ಸಮಕಾಲೀನನಾಗಿದ್ದು ಕೃಷ್ಣದೇವರಾಯನ ಸೈನ್ಯದಲ್ಲಿ ಸೈನ್ಯಾಧಿಕಾರಿಯಾಗಿ ಸೇವೆಯನ್ನು ಸಲ್ಲಿಸಿದ್ದನು.[೮೯] ಪ್ರಜಾ ಹಿತಚಿಂತಕನು, ಉತ್ತಮ ಆಡಳಿತಗಾರನೂ ಆಗಿದ್ದ ಗಂಡಳ ನಾಯಕನು ಗುಡೇಕೋಟೆಯ ಗುಡ್ಡದ ಮೇಲೆ ಕೋಟೆಯನ್ನು ನಿರ್ಮಿಸಿ ಅರಮನೆಯನ್ನು ಕಟ್ಟಿಸಿದನು. ಗಂಡಳನಾಯಕನು ಕೃಷ್ಣದೇವರಾಯನಿಂದ ಉಂಬಳಿಯಾಗಿ ಪಡೆದಿದ್ದ ಉಜ್ಜನಿ, ಕುಡುತಿನಿ, ಸಂಡೂರು ಮುಂತಾದ ಪ್ರದೇಶಗಳ ಆಡಳಿತವನ್ನು ನಿರ್ವಹಿಸಿಕೊಂಡು ಹೋದನು. ಈ ಪ್ರದೇಶಗಳ ಜೊತೆಗೆ ಲಿಂಗಮ್ಮನಹಳ್ಳಿ, ಜಾಜರಕಲ್ಲು, ಮಡೇನಹಳ್ಳಿ, ಲಕ್ಷ್ಮೀಪುರ, ಹಿರೇಹಾಳು ಮೊದಲಾದ ಪ್ರದೇಶಗಳು ಈತನ ಆಳ್ವಿಕೆಯ ವ್ಯಾಪ್ತಿಗೆ ಒಳಪಟ್ಟಿದ್ದವು. ಗಂಡಳನಾಯಕನು ಗುಡೇಕೋಟೆಯನ್ನು ಸಾಕಷ್ಟು ಅಭಿವೃದ್ಧಿಪಡಿಸಿದನು.

ಗಂಡಳನಾಯಕನ ನಂತರ ಪೆನ್ನಪ್ಪ ನಾಯಕ (೧೫೨೧–೪೧) ಪಾಪನಾಯಕ (೧೫೪೧ ರಿಂದ ೧೫೪೮) ಕೆಮ್ಮಯ್ಯ ರಾಜ (೧೫೪೮ರಿಂದ ೧೬೦೯) ರಾಮಪ್ಪ ನಾಯಕ (೧೬೦೨–೩೭) ಆಳ್ವಿಕೆಯನ್ನು ನಡೆಸಿದರು. ಆದರೆ ಈ ನಾಯಕರ ಆಡಳಿತವನ್ನು ತಿಳಿಸುವ ದಾಖಲೆಗಳು ಇದುವರೆಗೂ ದೊರೆತಿರುವುದಿಲ್ಲ; ಇವರ ನಂತರ ಪಾಳೆಯಗಾರರ ದಾಖಲೆಗಳು ಸಿಗುತ್ತದೆ.

ತಿಮ್ಮಪ್ಪ ನಾಯಕ

ತಿಮ್ಮಪ್ಪ ನಾಯಕನು ಗುಡೇಕೋಟೆ ಪಾಳೆಯಗಾರರಲ್ಲಿ ಅತ್ಯಂತ ದಕ್ಷನು, ಸಮರ್ಥನು ರಾಜಕೀಯ ಮುತ್ಸದ್ಧಿಯೂ ಆಗಿದ್ದನು. ತಿಮ್ಮಪ್ಪ ನಾಯಕನು ಅಧಿಕಾರಕ್ಕೆ ಬಂದ ಸಮಯದಲ್ಲಿ ವಿಜಯನಗರವು ಅಂತಃಕಲಹದಿಂದ ತುಂಬಿಹೋಗಿತ್ತು. ಆಳಿಯ ರಾಮರಾಯನು ಅತ್ಯಂತ

ಪ್ರಬಲನಾಗಿದ್ದನು. ಆದರೆ ಬಿಜಾಪುರದ ಆದಿಲ್‌ಷಾಹಿ ಐದು ಮನೆತನಗಳು ಒಂದುಗೂಡಿ ತಾಳಿಕೋಟೆ ಯುದ್ಧದಲ್ಲಿ ರಾಮರಾಯನನ್ನು ಕೊಂದುಹಾಕಿದವು. ವಿಜಯನಗರಕ್ಕೆ ಸೇರಿದ್ದ ತುಂಗಾಭದ್ರ ನದಿ ತೀರಿದ ಎಲ್ಲ ಪ್ರದೇಶಗಳು ಬಹುಮನಿ ಸುಲ್ತಾನರ ವಶವಾದವು. ಬಹುಮನಿ ಸುಲ್ತಾನ ಮನೆತನದ ಒಂದು ಶಾಖೆಯಾದ ಬಿಜಾಪುರದ ಆದಿಲ್-ಷಾಗಳು ತಾಳಿಕೋಟೆಯ ಕದನದ ನಂತರ ಹೆಚ್ಚು ಬಲಾಢ್ಯರಾದರು. ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಲು ದಕ್ಷಿಣ ಕರ್ನಾಟಕದತ್ತ ವಿಶೇಷ ಅಸಕ್ತಿಯನ್ನು ವಹಿಸಿದರು. ಸಿಕಿಂದರ್ ಆದಿಲ್‌ಷಾನ ಕಾಲದಲ್ಲಿ ವಜೀರನಾಗಿದ್ದ ಸಿದ್ಧಿ ಮಸೂದ್‌ಖಾನ್ (೧೬೫೦-೧೬೮೦) ಆದಿಲ್‌ಷಾನ ಸಾಮ್ರಾಜ್ಯ ವಿಸ್ತರಣೆಗೆ ಕೈಹಾಕಿದನು. ಇದೇ ಸಮಯದಲ್ಲಿ ವಿಜಯನಗರದ ಅಮರನಾಯಕರಾಗಿದ್ದು, ವಿಜಯನಗರದ ಪತನದ ನಂತರ ಸ್ವತಂತ್ರ ಪಾಳೆಯ ಪಟ್ಟುಗಳನ್ನು ರೂಪಿಸಿಕೊಂಡಿದ್ದ ಪಾಳೆಯಗಾರರು ರಾಜ್ಯ ವಿಸ್ತರಣೆಯಲ್ಲಿ ತೊಡಗಿಕೊಂಡಿದ್ದರು. ಹೀಗಾಗಿ ರಾಜಕೀಯವಾಗಿ ಸೈನಿಕವಾಗಿ ಅಷ್ಟೇನೂ ಬಲಾಢ್ಯವಲ್ಲದ ಪಾಳೆಯಪಟ್ಟುಗಳ ಮೇಲೆ ಸಿದ್ಧಿ ಮಸೂದ್‌ಖಾನನು ದೃಷ್ಟಿ ಹರಿಸಿದನು. ಈ ಹಿನ್ನೆಲೆಯಲ್ಲಿಯೇ ಗುಡೇಕೋಟೆ ಪಾಳೆಯಗಾರರೊಂದಿಗೆ ಅದಿಲ್‌ಷಾಹಿಗಳ ಯುದ್ಧ ಆರಂಭವಾಯಿತು.[೮೯]

ಸಿದ್ಧಿ ಮಸೂದ್‌ಖಾನ್ ಸೈನ್ಯ ಸುಮಾರು ೧೨ ವರ್ಷಗಳ ಕಾಲ ಗುಡೇಕೋಟೆಯ ಮೇಲೆ ಯುದ್ಧವನ್ನು ಸಾರಿತು.[೯೦] ಆದರೆ ಗುಡೇಕೋಟೆಯು ಶತ್ರುಗಳ ವಶವಾಗಲಿಲ್ಲ. ಕೊನೆಗೆ ಸಿದ್ಧಿ ಮಸೂದ್ ಖಾನನು ಯುದ್ಧವನ್ನು ತ್ಯಜಿಸಿ ತಿಮ್ಮಪ್ಪ ನಾಯಕನೊಂದಿಗೆ ಶಾಂತಿ ಒಪ್ಪಂದಕ್ಕೆ ಮುಂದಾದನು. ಒಪ್ಪಂದದ ಪ್ರಕಾರ ತಿಮ್ಮಪ್ಪ ನಾಯಕನಿಗೆ 'ರಾಜಾ' ಎಂಬ ಬಿರುದನ್ನು ನೀಡಿ ಗೌರವಿಸಲಾಯಿತು ಹಾಗೂ ಕೋಟೆ ಮತ್ತು ನಗರಗಳನ್ನು ನಿರ್ಮಿಸಿಕೊಳ್ಳಲು ಅನುಮತಿಯನ್ನು ನೀಡಲಾಯಿತು.

ತಿಮ್ಮಪ್ಪನಾಯಕನಿಗೆ ಸಂಡೂರು, ಕುಡುತಿನಿ, ನಾಗಲಾಪುರ, ಗೂಳೂರು, ಮಚ್ಚೇರಿ, ದೊಡ್ಡ ಘಟ್ಟ, ಹೊಸೂರು, ನಾರಾಯಣದೇವಕೆರೆ, ಬೋರಕುಂಟೆ ಮೊದಲಾದ ಗ್ರಾಮಗಳನ್ನು ಜಹಗೀರು ನೀಡಲಾಯಿತು. ಒಟ್ಟಿನಲ್ಲಿ ತಿಮ್ಮಪ್ಪ ನಾಯಕನು ಬಿಜಾಪುರದ ಸಾಮಂತನ ಸ್ಥಾನಮಾನಗಳನ್ನು ಪಡೆದುಕೊಂಡು ತನ್ನ ಪಾಳೆಯಪಟ್ಟಿನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡನು.

ರಾಮರಾಜ

ರಾಜಾ ತಿಮ್ಮಪ್ಪ ನಾಯಕನ ನಂತರ ಅವನ ಮಗ ರಾಮರಾಜನು ಗುಡೇಕೋಟೆ ಪಾಳೆಯಗಾರನಾಗಿ ಅಧಿಕಾರ ವಹಿಸಿಕೊಂಡನು. ಇವನು ತನ್ನ ಪಾಳೆಯಪಟ್ಟಿನ ಆರ್ಥಿಕಾಭಿವೃದ್ಧಿಗೆ ವಿಶೇಷ ಒತ್ತನ್ನು ನೀಡಿದನು. ಹಳೆಯ ಕೋಟೆಗಳನ್ನು ದುರಸ್ತಿಗೊಳಿಸಿ ಹೊಸ ಕೋಟೆಗಳನ್ನು ನಿರ್ಮಿಸಿದನು. ವ್ಯಾಪಾರ, ವಾಣಿಜ್ಯ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಲು ಹಲವಾರು ಕ್ರಮಗಳನ್ನು ಕೈಗೊಂಡನು. ವರ್ತಕ ಸಮುದಾಯಗಳು ಗುಡೇಕೋಟೆಯಲ್ಲಿ ನೆಲೆ ನಿಲ್ಲಲು ಪ್ರೋತ್ಸಾಹಿಸಿದನು. ವ್ಯಾಪಾರಿಗಳಿಗೆ ಎಲ್ಲ ಅನುಕೂಲತೆಗಳನ್ನು ಮಾಡಿಕೊಟ್ಟನು. ಚಿತ್ರದುರ್ಗ ಪಾಳೆಯಗಾರರೊಂದಿಗೆ

ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಂಡನು. ತನ್ನ ಮಗಳಾದ ಬಂಗಾರಪ್ಪ ನಾಗತಿಯನ್ನು ಚಿತ್ರದುರ್ಗದ ಪಾಳೆಯಗಾರ ಭರಮಣ್ಣ ನಾಯಕನಿಗೆ ವಿವಾಹ ಮಾಡಿಕೊಟ್ಟನು. ಗುಡೇಕೋಟೆಯಲ್ಲಿ ದೇವಾಲಯಗಳನ್ನು ನಿರ್ಮಿಸಿದನು. ಈತ ನಿರ್ಮಿಸಿರುವ ದೇವಾಲಯಗಳು ವಿಜಯನಗರೋತ್ತರ ಶೈಲಿಯಲ್ಲಿವೆ.

ಬೊಮ್ಮಂತರಾಜ

ಬೊಮ್ಮಂತರಾಜ ಗುಡೇಕೋಟೆಯನ್ನು ಆಳಿದಂತಹ ಪಾಳೆಯಗಾರರಲ್ಲಿ ಜನಪ್ರಿಯ ಪಾಳೆಯಗಾರನಾಗಿದ್ದನು. ಇವನು ತನ್ನ ತಂದೆ ರಾಮರಾಜನಂತೆ ಉತ್ತಮ ಆಡಳಿತಗಾರನು ಪರಾಕ್ರಮಿ, ಶೂರನು, ದೈವಭಕ್ತನು ಆಗಿದ್ದನು. ಇವನ ಆಳ್ವಿಕೆಯಲ್ಲಿ ಗುಡೇಕೋಟೆ ಪಾಳೆಯ ಪಟ್ಟಿನ ವ್ಯಾಪ್ತಿಯು ಹೆಚ್ಚಾಯಿತು. ರಾಯದುರ್ಗದ ಗೊಲ್ಲಪಲ್ಲಿ, ಗಲಗಲ್ಲು, ಮೊಳಕಾಲ್ಮೂರು, ಚಳ್ಳಕೆರೆ, ಜಗಳೂರು, ಕೂಡ್ಲಿಗಿ ಮುಂತಾದವು ಪಾಳೆಯಗಾರನ ಆಡಳಿತಕ್ಕೆ ಒಳಪಟ್ಟವು. ರಾಯದುರ್ಗವನ್ನು ತನ್ನ ತಮ್ಮನಾದ ಯರಿ ಬೊಮ್ಮಳನಾಯಕನಿಗೆ ಬಿಟ್ಟುಕೊಟ್ಟನು. ಗುಡೇಕೋಟೆ ಮಠ ಮತ್ತು ಕುಡುತಿನಿ ವಿರಕ್ತಮಠಕ್ಕೆ ಅಪಾರವಾದ ದತ್ತಿಗಳನ್ನು ನೀಡಿ ಧರ್ಮ ಪೋಷಕನೆನಿಸಿದ್ದಾನೆ.

ಚಿನ್ನಯರಾಜ

ಬೊಮ್ಮಂತರಾಜನ ತರುವಾಯ ಅವನ ಸಹೋದರ ಚಿನ್ನಯರಾಜನು ಅಧಿಕಾರಕ್ಕೆ ಬಂದನು. ಇವನ ಆಡಳಿತವು ರಾಜಕೀಯ ಅಸ್ಥಿರತೆಗಳಿಂದ ಕೂಡಿತ್ತು. ಗುಡೇಕೋಟೆಯ ನೆರೆಹೊರೆಯ ಪಾಳೆಯಗಾರರಾದ ಚಿತ್ರದುರ್ಗ, ಹರಪನಹಳ್ಳಿ, ಜರೀಮಲೆ ಪಾಳೆಯಗಾರರು ಗುಡೇಕೋಟೆಯನ್ನು ವಶಪಡಿಸಿಕೊಳ್ಳುವ ಹುನ್ನಾರದಲ್ಲಿದ್ದರು. ಇಂತಹ ರಾಜಕೀಯ ತಾಕಲಾಟಗಳ ನಡುವೆಯೇ ಈತ ಅಧಿಕಾರವನ್ನು ನಡೆಸಿದ.

ಜಟ್ಟಿಂಗರಾಜ

ಜಟ್ಟಿಂಗರಾಜ ಗುಡೇಕೋಟೆ ಪಾಳೆಯಗಾರರ ಸಂತತಿಯ ಕೊನೆಯ ಅರಸರಲ್ಲಿ ಸುಪ್ರಸಿದ್ಧನಾದವನು. ಇವನು ಚಿತ್ರದುರ್ಗ ಪಾಳೆಯಗಾರನಾದ ಹಿರೇ ಮೆದಕೇರಿ ನಾಯಕನ ಸಮಕಾಲೀನ. ಹಿಂದಿನಿಂದಲೂ ಚಿತ್ರದುರ್ಗದವರೊಂದಿಗೆ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಂಡಿದ್ದ ಗುಡೇಕೋಟೆ ಪಾಳೆಯಗಾರರು ಜಟ್ಟಿಂಗ ರಾಜನ ಕಾಲದಲ್ಲಿಯೇ ಈ ಬಾಂದವ್ಯಗಳನ್ನು ಹಾಗೆಯೇ ಮುಂದುವರಿಸಿದರು. ಹಿರೇಮೆದಕೇರಿ ಸಹೋದರಿಯನ್ನು ಜಟ್ಟಿಂಗ ರಾಜನು, ಜಟ್ಟಿಂಗರಾಜನ ಸಹೋದರಿಯನ್ನು ಹಿರೇಮೆದಕೇರಿ ನಾಯಕ ವಿವಾಹವಾಗಿದ್ದನು. ಆದರೆ ಜಟ್ಟಿಂಗರಾಜನು ಗುಡೇಕೋಟೆ ಸಂಸ್ಥಾನದ ನಾಯಕನಾಗಿ ಅಧಿಕಾರವನ್ನು ವಹಿಸಿಕೊಂಡ ಮೇಲೆ ತನ್ನ ತಂದೆ ಚಿತ್ರದುರ್ಗದವರೊಂದಿಗೆ ಮಾಡಿಸಿದ್ದ ವಿವಾಹವನ್ನು ಮುರಿದು ಕನಕಗಿರಿ ಮತ್ತು ಗುಡಿಬಂಡೆ ಸಂಸ್ಥಾನಕ್ಕೆ ಸೇರಿದ ೪ ಜನ ನಾಗತಿಯರನ್ನು ವಿವಾಹವಾದನು.[೬೦] ಇದರಿಂದ

ರಕ್ತಸಂಬಂಧಗಳು ಮುರಿದು ಚಿತ್ರದುರ್ಗ ಮತ್ತು ಗುಡೇಕೋಟೆಯ ಮಧ್ಯೆ ದ್ವೇಷ ಅಸೂಯೆಗಳಿಂದ ಕೂಡಿದ ರಾಜಕೀಯ ಶುರುವಾಯಿತು. ಈ ರಾಜಕೀಯ ದ್ವೇಷಗಳಿಗೆ ಗುಡೇಕೋಟೆ ದೊಡ್ಡ ಬೆಲೆಯನ್ನು ತೆರೆಯಬೇಕಾಯಿತು. ಚಿತ್ರದುರ್ಗದ ಹಿರೇಮೇದಕೇರಿಯು ಗುಡೇಕೋಟೆಯನ್ನು ಮೂರು ವರ್ಷ ಮುತ್ತಿಗೆ ಹಾಕಿ ವಶಪಡಿಸಿಕೊಂಡನು. ಗುಡೇಕೋಟೆಯು ಚಿತ್ರದುರ್ಗದವರ ಅಧೀನಕ್ಕೆ ಬಂದಿತು. ಜೀವಭಯದಿಂದ ಜಟ್ಟಿಂಗರಾಜನು ಗುಡೇಕೋಟೆಯಿಂದ ಪಲಾಯನ ಮಾಡಿದನು. ಈ ಸಮಯದಲ್ಲಿ ಗುಡೇಕೋಟೆಯಲ್ಲಿದ್ದ ಜಟ್ಟಿಂಗರಾಜನ ಮಗ ಇಮ್ಮಡಿ ಜಟ್ಟಿಂಗರಾಜನು ತನ್ನ ಮಲತಾಯಿಯ ಮೇಲೆ ಅತ್ಯಾಚಾರ ಮಾಡಿದನು. ಮೆಕೆಂಜಿಯ ಅಪ್ರಕಟಿತ ದಾಖಲೆಯು ಇದನ್ನೇ ಸಮರ್ಥಿಸುತ್ತದೆ.[೯೧] ಜಟ್ಟಿಂಗರಾಜನು ಅರಮನೆಗೆ ಹಿಂತಿರುಗಿ ಮಗನನ್ನು ಕುಲ ಆಚಾರಗಳ ಪ್ರಕಾರ ದಂಡಿಸಲು ಮುಂದಾದನು. ಇಮ್ಮಡಿ ಜಟ್ಟಿಂಗರಾಜನು ತಂದೆಯ ಕ್ರಮಗಳನ್ನು ಅರಿತು ಗುಡೇಕೋಟೆಯನ್ನು ತೊರೆದು ಓಡಿಹೋದನು. ಹೀಗಾಗಿ ಜಟ್ಟಿಂಗರಾಜನು ತನ್ನ ಎರಡನೇ ಪುತ್ರ ರಾಮಪ್ಪನಿಗೆ ಅಧಿಕಾರವನ್ನು ನೀಡಿದನು. ರಾಮಪ್ಪ ನಾಯಕ (ಇಮ್ಮಡಿ ರಾಜಪ್ಪ ನಾಯಕ) ಗುಡೇಕೋಟೆ ಪಾಳೆಯಗಾರರಲ್ಲಿ ಕೊನೆಯ ರಾಜ. ಈತನ ಕಾಲದಲ್ಲಿ ಗುಡೇಕೋಟೆ ಪಾಳೆಯಪಟ್ಟು ಸಂಪೂರ್ಣ ಅವನತಿಗೀಡಾಯಿತು. ಹಿರೇ ಮೆದಕೇರಿಯು ಗುಡೇಕೋಟೆಯನ್ನು ವಶಪಡಿಸಿ ಕೊಂಡಿದ್ದರಿಂದ ಗುಡೇಕೋಟೆ ಪಾಳೆಯಗಾರರು ಚಿತ್ರದುರ್ಗದವರ ಅಧೀನರಾಗಿ ಉಳಿಯಬೇಕಾಯಿತು. ಹಿರೇ ಮೆದಕೇರಿಯ ಮರಣದ ನಂತರ ಕನಕಗಿರಿ ನಾಯಕರ ನೆರವನ್ನು ಪಡೆದು ಗುಡೇಕೋಟೆಯನ್ನು ವಶಪಡಿಸಿಕೊಂಡು ಆಳ್ವಿಕೆಯನ್ನು ನಡೆಸಲಾರಂಭಿಸಿದನು. ಈ ಸಮಯದಲ್ಲಿ ಗುತ್ತಿಯ ಮುರಾರಿರಾಯ ಗುಡೇಕೋಟೆಯನ್ನು ವಶಪಡಿಸಿಕೊಂಡನು. ರಾಮಪ್ಪ ನಾಯಕನು ತನ್ನ ತಂದೆ ಜಟ್ಟಿಂಗರಾಜನೊಂದಿಗೆ ತನ್ನ ಕುಟುಂಬ ಸದಸ್ಯರೊಂದಿಗೆ ಕನಕಗಿರಿಗೆ ಹೋಗಿ ತಲೆಮರೆಸಿಕೊಂಡನು.

ಅವನತಿ

ರಾಮಪ್ಪ ನಾಯಕನು ತಲೆಮರೆಸಿಕೊಂಡು ಕನಕಗಿರಿಗೆ ಹೋದ ನಂತರ ಚಿತ್ರದುರ್ಗ ನಾಯಕರನ್ನು ಮಟ್ಟಹಾಕಲು ಸಮಯ ಕಾಯುತ್ತಿದ್ದನು. ಇದೇ ಸಂದರ್ಭದಲ್ಲಿ ಹೈದರಾಲಿಯು ಚಿತ್ರದುರ್ಗದ ಮೇಲೆ ದಾಳಿ ಮಾಡಿದನು. ಈ ಅವಕಾಶವನ್ನು ಉಪಯೋಗಿಸಿಕೊಳ್ಳಲು ಮುಂದಾದ ರಾಮಪ್ಪ ನಾಯಕನು ಹೈದರಾಲಿಯೊಂದಿಗೆ ಕೈ ಜೋಡಿಸಿದನು. ಕನಕಗಿರಿಯ ಪಾಳೆಯಗಾರರು ಸಹ ಇದರಲ್ಲಿ ಭಾಗಿಯಾದರು. ಈ ಯುದ್ಧದಲ್ಲಿ ರಾಮಪ್ಪ ನಾಯಕನು ಹೈದರಾಲಿಯ ಗಮನ ಸೆಳೆಯುವಲ್ಲಿ ಯಶಸ್ವಿಯಾದನು. ಹೈದರಾಲಿಯು ತನ್ನ ಮುಂದಿನ ದಂಡಯಾತ್ರೆಗಳಲ್ಲಿ ರಾಮಪ್ಪ ನಾಯಕನನ್ನು ಪ್ರಮುಖ ಸೇನಾ ನಾಯಕನಾಗಿ ನಿಯಮಿಸಿಕೊಂಡನು. ಕೊಡಗಿನ ಮುತ್ತಿಗೆಯಲ್ಲಿ ಅಪ್ರತಿಮವಾಗಿ ಹೋರಾಟ ಮಾಡಿದ ರಾಮಪ್ಪ ನಾಯಕನನ್ನು ಹೈದಾರಾಲಿಯು ಶ್ರೀರಂಗಪಟ್ಟಣದಲ್ಲಿ ಸನ್ಮಾನಿಸಿದನು. ನಂತರ ಗುಡೇಕೋಟೆಯನ್ನು ಮರಳಿ ನೀಡುವ ಭರವಸೆಯನ್ನು ನೀಡಿದನು. ಹೈದರಾಲಿಯು ಎರಡನೆಯ ಬಾರಿ ಕೊಡಗಿನ ಮುತ್ತಿಗೆಯಲ್ಲಿ ನಿರತನಾಗಿ ಈ ಯುದ್ಧದಲ್ಲಿ ರಾಮಪ್ಪ ನಾಯಕ ಮರಣ ಹೊಂದಿದನು. ಹೈದರಾಲಿಯ ಮರಣದ ನಂತರ ಗುಡೇಕೋಟೆಯು

ಟಿಪ್ಪುಸುಲ್ತಾನನ ವಶಕ್ಕೆ ಬಂದಿತು. ಟಿಪ್ಪು ಸುಲ್ತಾನನು ಗುಡೇಕೋಟೆ ಪಾಳೆಯಗಾರ ವಂಶಸ್ಥರಾದ ರಾಮಲಿಂಗರಾಜು ಮತ್ತು ಬೊಮ್ಮಂತರಾಜರಿಗೆ ಗುಡೇಕೋಟೆ ಮರಳಿ ನೀಡಲು ಇಷ್ಟವಿರಲಿಲ್ಲ. ಹೀಗಾಗಿ ರಾಮಪ್ಪ ನಾಯಕನ ಮಕ್ಕಳಾದ ರಾಮಲಿಂಗರಾಜು ಮತ್ತು ಬೊಮ್ಮಂತ ರಾಜರು ಶ್ರೀರಂಗಪಟ್ಟಣದಿಂದ ತಪ್ಪಿಸಿಕೊಂಡು ಗುಡೇಕೋಟೆಗೆ ಮರಳಿ ಬಂದರು. ಮರಾಠರೊಂದಿಗೆ ಸಂಧಾನ ಮಾಡಿಕೊಂಡು ವಾರ್ಷಿಕ ಕಾಣಿಕೆಯಾಗಿ ೩೦,೦೦೦ ರೂಪಾಯಿ ನೀಡಲು ಸಹಿ ಹಾಕಿ ಗುಡೇಕೋಟೆಯನ್ನು ಆಳಿದರು.[೧೨] ಆಗ ಟಿಪ್ಪುವಿನ ಅಧಿಕಾರಿಗಳು ಗುಡೇಕೋಟೆಗೆ ಮುತ್ತಿಗೆ ಹಾಕಿದರು. ಗುಡೇಕೋಟೆ ಪಾಳೆಯಗಾರರು ಓಡಿಹೋದರು. ಕ್ರಿ.ಶ. ೧೭೯೯ರಲ್ಲಿ ಟಿಪ್ಪು ಸುಲ್ತಾನನ ಮರಣದ ನಂತರ ಗುಡೇಕೋಟೆಯು ಹೈದರಾಬಾದಿನ ನಿಜಾಮನಿಗೆ ಸೇರಿತು. ಇವನು ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿ ಬಳ್ಳಾರಿ ಜಿಲ್ಲೆಯನ್ನು ಬ್ರಿಟಿಷರಿಗೆ ಬಿಟ್ಟುಕೊಟ್ಟನು. ಬಳ್ಳಾರಿ ಜಿಲ್ಲೆಯು ದತ್ತಿ ಮಂಡಲ ೧೮೦೦ರಲ್ಲಿ (Ceded District) ವಾಗಿ ಮದ್ರಾಸ್ ಅಧಿಪತ್ಯಕ್ಕೆ ಒಳಗಾಯಿತು. ೧೮೦೩ರಲ್ಲಿ ಸರ್. ಥಾಮಸ್ ಮನ್ರೋ ಗುಡೇಕೋಟೆಗೆ ಭೇಟಿ ನೀಡಿದನು.[೧೩] ಮೀರ್ ಅಲಮ್ ಬಳಿ ಇದ್ದ ಬೊಮ್ಮಂತ ರಾಜನ ಅರ್ಜಿಯನ್ನು ಪರಿಶೀಲಿಸಿ ಬ್ರಿಟಿಷರಿಂದ ೫೦೦ ರೂಪಾಯಿಗಳ ವಿಶ್ರಾಂತಿ ವೇತನವನ್ನು ಗುಡೇಕೋಟೆ ಪಾಳೆಯಗಾರರಿಗೆ ನಿಗದಿಗೊಳಿಸಿದನು. ನಂತರ ೧೮೨೮ರಲ್ಲಿ ಬೊಮ್ಮಂತರಾಜನು ಗುಡೇಕೋಟೆಯಲ್ಲಿ ಭೀಕರವಾದ ಕ್ಷಾಮ ತಲೆದೋರಿದಾಗ ಬ್ರಿಟಿಷ್ ಸರ್ಕಾರದ ವಿರುದ್ಧ ಬೇಡ ಸಮುದಾಯದ ೫೦೦ ಜನ ಹೋರಾಟಗಾರರನ್ನು ಸಿದ್ಧಗೊಳಿಸಿ ದಂಗೆ ಎದ್ದನು. ಈ ದಂಗೆಯನ್ನು ಹತ್ತಿಕ್ಕುವಲ್ಲಿ ಬ್ರಿಟಿಷರು ಯಶಸ್ವಿಯಾದರು.

ಅವಲೋಕನ

೧. ಗುಡೇಕೋಟೆ ಪಾಳೆಯಗಾರರು ವಿಜಯನಗರ ಸಾಮ್ರಾಜ್ಯದಲ್ಲಿ ಸೇನಾಧಿಕಾರಿಗಳಾಗಿ ನಾಡತಳವಾರರಾಗಿ ರಾಜಕೀಯ ಜೀವನವನ್ನು ಆರಂಭಿಸಿದರು. ಈ ಮನೆತನದ ಮೂಲ ಪುರುಷ ಗಂಡಳನಾಯಕನು ಕೃಷ್ಣದೇವರಾಯನ ಸೈನ್ಯಾಧಿಕಾರಿಯಾಗಿ ರಾಯನಿಂದ ಗುಡೇಕೋಟೆ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳ ಆಡಳಿತಾಧಿಕಾರಿಯಾಗಿ ರಾಜಕೀಯವಾಗಿ ನೆಲೆನಿಂತನು. ಗುಡೇಕೋಟೆ ಪಾಳೆಯಪಟ್ಟನ್ನು ಸ್ಥಾಪಿಸಿದನು. ವಿಜಯನಗರದ ಪತನದ ನಂತರ ಗುಡೇಕೋಟೆ ಪಾಳೆಯಗಾರರು ಸ್ವತಂತ್ರರಾಗಿ ನಂತರ ಬಲಿಷ್ಠ ಚಿತ್ರದುರ್ಗ ಪಾಳೆಯಗಾರರ ಸಾಮಂತರಾಗಿ ವಂಶಪಾರಂಪರ್ಯವಾಗಿ ಆಡಳಿತ ನಡೆಸಿದರು.

೨. ಮೂಲತಃ ಬೇಡ ಬುಡಕಟ್ಟಿಗೆ ಸೇರಿದ ಗುಡೇಕೋಟೆ ಪಾಳೆಯಗಾರರು ಸಮಕಾಲೀನ ಬೇಡ ಪಾಳೆಯ ಪಟ್ಟುಗಳೊಂದಿಗೆ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಂಡು ರಾಜಕೀಯವಾಗಿ ಅದರ ಲಾಭಗಳನ್ನು ಪಡೆದುಕೊಂಡರು. ಚಿತ್ರದುರ್ಗ, ಕನಕಗಿರಿ, ಗುಡಿಬಂಡೆ ಪಾಳೆಯಪಟ್ಟುಗಳ ನಡುವಿನ ವೈವಾಹಿಕ ಸಂಬಂಧಗಳು ರಾಜಕೀಯವಾಗಿ ಗುಡೇಕೋಟೆ ಪಾಳೆಯಗಾರರನ್ನು ಬಲಿಷ್ಠ ಪಡಿಸಿದವು. ಆದರೆ ಚಿತ್ರದುರ್ಗ ಪಾಳೆಯಗಾರರೊಂದಿಗಿನ ವೈವಾಹಿಕ ಸಂಬಂಧಗಳನ್ನು

ಕೆಡಿಸಿಕೊಂಡಿದ್ದರಿಂದ ತಮ್ಮ ರಾಜಕೀಯ ನೆಲೆಯಾದ ಗುಡೇಕೋಟೆಯನ್ನು ಕೆಲವು ಕಾಲ ಕಳೆದುಕೊಳ್ಳಬೇಕಾಯಿತು. ಹಾಗೂ ಚಿತ್ರದುರ್ಗದವರ ನಿರಂತರ ಉಪಟಳಕ್ಕೆ ಗುರಿಯಾಗಬೇಕಾಯಿತು. ಪರಸ್ಪರ ಈ ದ್ವೇಷ ರಾಜಕಾರಣ ಮುಂದೆ ಹೈದರಾಲಿಯ ಕಾಲದಲ್ಲಿ ಸ್ಫೋಟಗೊಂಡು, ಚಿತ್ರದುರ್ಗ ನಾಯಕ ರಾಜವೀರ ಮದಕೇರಿ ನಾಯಕನ ವಿರುದ್ಧ ಹೈದರಾಲಿಯ ಜೊತೆ ಕೈ ಜೋಡಿಸಿದ ಗುಡೇಕೋಟೆ ಪಾಳೆಯಗಾರರು ಚಿತ್ರದುರ್ಗದ ಪತನಕ್ಕೂ ಕಾರಣರಾದರು.

೩. ಗುಡೇಕೋಟೆ ಸಂಸ್ಥಾನವು ತನ್ನ ರಾಜಕೀಯ ಇತಿಹಾಸದ ಉದ್ದಕ್ಕೂ ರಾಜಕೀಯ ಅಸ್ಥಿರತೆಗೆ ಬಲಿಯಾಗಬೇಕಾಯಿತು. ಕಾರಣ ಸಂಸ್ಥಾನದ ನಾಲ್ಕು ದಿಕ್ಕುಗಳಲ್ಲಿ ಬಲಾಢ್ಯರಾಗಿದ್ದ ಚಿತ್ರದುರ್ಗದ ನಾಯಕರು, ಹೈದರಾಲಿ, ಟಿಪ್ಪು ಸುಲ್ತಾನ್, ಮರಾಠರು ಮತ್ತು ನಿಜಾಮರ ನಡುವೆ ತಮ್ಮ ರಾಜಕೀಯ ಅಸ್ತಿತ್ವಕ್ಕಾಗಿ ನಿರಂತರವಾದ ಕಾದಾಟಗಳ ನಡುವೆಯೂ ಕರ್ನಾಟಕದ ಸಾಂಸ್ಕೃತಿಕ ಇತಿಹಾಸಕ್ಕೆ ಇವರ ಕೊಡುಗೆಯನ್ನು ಕಡೆಗಣಿಸುವಂತಿಲ್ಲ. ಇವರ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳು, ಕೋಟೆಗಳು, ಸ್ಮಾರಕಗಳು ಇಂದಿಗೂ ಅವರ ಆಡಳಿತದ ಕೊಡುಗೆಗಳಾಗಿ ಗಮನಸೆಳೆಯುತ್ತವೆ.

೪. ಸಮಕಾಲೀನ ಬಹುತೇಕ ಪಾಳೆಯಪಟ್ಟುಗಳಂತೆ ಗುಡೇಕೋಟೆಯು ಸಹ ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ರಾಜಕೀಯ ವಿಸ್ತರಣಾ ನೀತಿಗಳಿಗೆ ಬಲಿಯಾಗಿ ಹೋಯಿತು. ಈ ಮನೆತನದ ಕೊನೆಯ ನಾಯಕರಾದ ಬೊಮ್ಮಂತರಾಜು, ರಾಮಲಿಂಗರಾಜರು ಸಂಸ್ಥಾನವನ್ನು ಮರಳಿ ಪಡೆಯುವ ಹೋರಾಟದಲ್ಲಿ ಸಂಪೂರ್ಣ ವಿಫಲರಾಗಿ ಕೊನೆಗೆ ಬ್ರಿಟಿಷರಿಂದ ೫೦೦ ರೂಪಾಯಿ ಮಾಶಾಸನ ಪಡೆಯುವಂತಾಗಿದ್ದು ಇವರ ದುರಾದೃಷ್ಟವೇ ಸರಿ.

೫. ಗುಡೇಕೋಟೆ ಪಾಳೆಯಗಾರರು ಸ್ವಾಭಿಮಾನಿಗಳು, ಪರಾಕ್ರಮಿಗಳು, ಶೂರರೂ, ಹುಟ್ಟು ಹೋರಾಟಗಾರರಾಗಿದ್ದರು. ತಮ್ಮ ಸಂಸ್ಥಾನವನ್ನು ಕಳೆದುಕೊಂಡು ರಾಜಕೀಯ ನೆಲೆಯಿಲ್ಲದೆ ದಿಕ್ಕುಪಾಲಾದರೂ ಪುನಃ ತಮ್ಮ ಸಂಸ್ಥಾನವನ್ನು ಮರಳಿ ಪಡೆಯಲು ಪದೇ ಪದೇ ಪ್ರಯತ್ನಗಳನ್ನು ನಡೆಸುತ್ತಲೇ ಬಂದರು. ಬ್ರಿಟಿಷರಿಂದ ಪಿಂಚಣಿ ಸೌಲಭ್ಯ ಪಡೆದರೂ ಬ್ರಿಟಿಷರ ದುರಾಡಳಿತ ವಿರುದ್ಧ ಎದೆತಟ್ಟಿ ನಿಂತರು. ಗುಡೇಕೋಟೆ ಪಾಳೆಯಗಾರರ ವಂಶಸ್ಥನಾದ ಬೊಮ್ಮಂತರಾಜನು ೫೦೦ ಜನ ಬೇಡ ಯುವಕರನ್ನು ಸಂಘಟಿಸಿ ಬ್ರಿಟಿಷರ ವಿರುದ್ಧ ದಂಗೆ ಎದ್ದನು. ಈ ದಂಗೆಯು ಪಾಳೆಯಗಾರರ ದಂಗೆ ಎಂದೇ ಖ್ಯಾತಗೊಂಡಿದೆ. ಭಾರತದ ಸ್ವಾತಂತ್ರ್ಯ ಹೋರಾಟ, ಏಕೀಕರಣ ಹೋರಾಟಗಳಲ್ಲಿ ಪಾಳೆಯಗಾರರು ಪ್ರಮುಖ ಪಾತ್ರವಹಿಸಿರುವುದು ಅವರು ಹುಟ್ಟು ಹೋರಾಟಗಾರರು ಎಂಬುದನ್ನು ಸಾಬೀತುಪಡಿಸುತ್ತದೆ.

ಕೊನೆ ಟಿಪ್ಪಣಿಗಳು

೧. ಕೆಳದಿ ವೆಂಕಟೇಶ್ ಜೋಯಿಸ, ವಿಜಯನಗರ ಚರಿತ್ರೆಯಲ್ಲಿ ಕೆಳದಿ ನಾಯಕರು, ವಿಜಯನಗರ ಅಧ್ಯಯನ ಸಂಪುಟ–೧, ಪು. ೮೮.

೨. ಆರ್. ಶಾಮಶಾಸ್ತ್ರಿ (ಸಂ), ಲಿಂಗಣ್ಣ ಕವಿಯ ಕೆಳದಿ ನೃಪವಿಜಯಂ, ಪು. ೧೪೩.

೩. ರೈಸ್. ಬಿ.ಎಲ್. (ಸಂ), ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ–೮, ಪು. ೪೩೩.

೪. ಬಸವರಾಜ ನೆಲ್ಲಿಸರ, ಕೆಳದಿ ಸಮಗ್ರ ಇತಿಹಾಸ, ಪು. ೨೨೬.

೫. ಕೆಳದಿ ಗುಂಡಾ ಜೋಯಿಸ್, ಲಿಂಗಣ್ಣ ಕವಿಯ ಕೆಳದಿ ನೃಪವಿಜಯಂ ಗದ್ಯಾನುವಾದ, ಪು. ೭೧.

೬. ಕೆಳದಿ ವೆಂಕಟೇಶ್ ಜೋಯಿಸ್, ಅದೇ, ಪೂರ್ವೋಕ್ತ, ಪು. ೯೧.

೭. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಪು. ೯೩.

೮. ಕೆಳದಿ ವೆಂಕಟೇಶ ಜೋಯಿಸ್, ಕರ್ನಾಟಕ ಇತಿಹಾಸ ದರ್ಶನ, ಸಂಪುಟ–೯, ಪು. ೭೫.

೯. ಬಸವರಾಜ ನೆಲ್ಲಿಸರ, ಕೆಳದಿ ಸಮಗ್ರ ಇತಿಹಾಸ, ಪು. ೨೨೭.

೧೦. ಕೆ.ಎಸ್. ಶಿವಣ್ಣ, ಕೆಳದಿ ರಾಜ್ಯದಲ್ಲಿ ಊಳಿಗಮಾನ್ಯ ಅಂಶಗಳು (ಲೇ), ಕೆಳದಿ ಸಮಗ್ರ ಇತಿಹಾಸ, ಪು. ೨೪.

೧೧. ಕೆ.ಎನ್. ಚಿಟ್ನಿಸ್, ಕೆಳದಿಯ ರಾಜ್ಯಭಾರ ಪದ್ಧತಿ (ಲೇ), ಕೆಳದಿ ಸಮಗ್ರ ಇತಿಹಾಸ, ಪು. ೭೫.

೧೨. ಸೂರ್ಯನಾಥ ಕಾಮತ್, ಬೆಂಗಳೂರು ದರ್ಶನ, ಸಂಪುಟ–೧, ಪು. ೧೨.

೧೩. ಬಿ.ಎಸ್. ಪುಟ್ಟಸ್ವಾಮಿ, ಯಲಹಂಕ ನಾಡಪ್ರಭು, ಕೆಂಪೇಗೌಡ ವಂಶಸ್ಥರು, ಪು. ೪.

೧೪. ಕೆ.ಎಲ್. ರಾಜಶೇಖರ್, ವಿಜಯನಗರ ಕಾಲದ ಯಲಹಂಕ ನಾಡು, (ಲೇ) ವಿಜಯನಗರ ಅಧ್ಯಯನ ಸಂಪುಟ–೧೦, ಪು. ೨೭೧.

೧೫. ಜಮುನಾ (ಸಂ), ಯಲಹಂಕನಾಡ ಪ್ರಭುಗಳ ಶಾಸನ ಸಂಪುಟ, ಶಾಸನ ಸಂಖ್ಯೆ–೧೧, ಪು. ೨೩.

೧೬. ಜಮುನಾ (ಸಂ), ಅದೇ, ಪೂರ್ವೋಕ್ತ, ಪು. ೨೬.

೧೭. ಜಮುನಾ (ಸಂ), ಅದೇ, ಪೂರ್ವೋಕ್ತ, ಪು. ೩೩.

೧೮. ಕೆ.ಎಲ್. ರಾಜಶೇಖರ್, ಅದೇ, ಪೂರ್ವೋಕ್ತ, ಪು. ೨೭೧.

೧೯. ತುಳಸಿರಾಮ ನಾಯಕ್, ಬೆಂಗಳೂರಿನ ಸಂಕ್ಷಿಪ್ತ ಇತಿಹಾಸ, ಪು. ೩೧.

೨೦. ಬಿ.ಎಸ್. ಪುಟ್ಟಸ್ವಾಮಿ, ಮಾಗಡಿ ಕೆಂಪೇಗೌಡನ ವಂಶಸ್ಥರು, ವಿಜಯನಗರ ಅಧ್ಯಯನ ಸಂಪುಟ–೧೭.

೨೧. ಜಮುನಾ (ಸಂ), ಅದೇ ಪೂರ್ವೋಕ್ತ, ಪು. ೧೧೭.

೨೨. ಬೆಂಗಳೂರು ಇತಿಹಾಸ ದರ್ಶನ ಸಂಪುಟ–೧, ಪು. ೧೫.

೨೩. ಕೆ.ಎಲ್. ರಾಜಶೇಖರ್, ವಿಜಯನಗರ ಕಾಲದ ಯಲಹಂಕನಾಡು (ಲೇ), ವಿಜಯನಗರ ಅಧ್ಯಯನ ಸಂಪುಟ–೧೦, ಪು. ೨೭೩.

೨೪. ಕೆ.ಎಲ್. ರಾಜಶೇಖರ್, ಅದೇ ಪೂರ್ವೋಕ್ತ, ಪು. ೨೭೩.

೨೫. ಎಂ.ಜಿ. ನಾಗರಾಜ್, ನಾಯಕರ ಆಡಳಿತ (ಲೇ), ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು. ೧೫೭

೨೬. ಪಿ.ಎಲ್. ಸರೋಜ, ಗುಮ್ಮನಾಯಕನ ಪಾಳೆಯದ ಪಾಳೆಯಗಾರರು, (ಲೆ), ಇತಿಹಾಸ ಪುಟಗಳು, ಲೇಖನ ಮಾಲೆ ೪, ಚೈತನ್ಯ ಕನ್ನಡ ವಾರಪತ್ರಿಕೆ, ದಿನಾಂಕ ೨೭.೪.೨೦೦೯.

೨೭. ಬಿ.ಆರ್. ಕೃಷ್ಣ, ಐತಿಹಾಸಿಕ ಗುಮ್ಮನಾಯಕನ ಪಾಳ್ಯ, ಪು. ೨೩.

೨೮. ಬಿ. ವೆಂಕಟರಾಮಣ್ಣ, ವಿಜಯನಗರ ಇತಿಹಾಸಕ್ಕೆ ಕೋಲಾರ ಜಿಲ್ಲೆಯ ಕೊಡುಗೆ, ಪು. ೧೦೧.

೨೯. ಬಿ.ಎನ್. ಶಾಸ್ತ್ರಿ (ಅನು), ಪಾಳೆಯಗಾರರು ಕರ್ಣಾಟಕದ ಪರಂಪರೆ, ಪು. ೨೦೪.

೩೦. ಬಿ.ಆರ್. ಕೃಷ್ಣ, ಪೂರ್ವೋಕ್ತ, ಪು. ೪೨.

೩೧. ರಾಜಶೇಖರಪ್ಪ ಬಿ., ಚಿತ್ರದುರ್ಗ ಪಾಳೆಯಗಾರರು (ಲೇ), ಚಿತ್ರದುರ್ಗದ ಇತಿಹಾಸ ಮತ್ತು ಪುರಾತತ್ವ ಪು. ೧೧೨.

೩೨. ರಾಜಶೇಖರಪ್ಪ ಬಿ. ಪೂರ್ವೋಕ್ತ, ಪು. ೧೧೨.

೩೩. ಲಕ್ಷ್ಮಣ್ ತೆಲಗಾವಿ, ಕಾಮಗೇತಿ ಅರಸರು, ಪು. ೬೭.

೩೪. ಅದೇ, ಪೂರ್ವೋಕ್ತ ಪು. ೬೮.

೩೫. ಮಂಜಣ್ಣ ಟಿ. ಚಿತ್ರದುರ್ಗ ಪಾಳೆಯಗಾರರ ಅವನತಿ, ಪು. ೨೬.

೩೬. ಯೋಗೀಶ್ವರಪ್ಪ ಡಿ.ಎನ್., ಮಧ್ಯಕಾಲೀನ ಕರ್ನಾಟಕದ ಅರಸು ಮನೆತನಗಳು ಪು. ೨೯.

೩೭. ಪುಟ್ಟಣ್ಣ ಎಂ.ಎಸ್., ಚಿತ್ರದುರ್ಗದ ಪಾಳೆಯಗಾರರು ಪು. ೪–೫.

೩೮. ಎಪಿಗ್ರಾಫಿಯಾ ಕರ್ನಾಟಿಕಾ ಶಾಸನ ಸಂಪುಟ–೧೧, ಪು. ೩೦೩ ಹಿರಿಯೂರು.

೩೯. ರೈಸ್ ಬಿ.ಎಲ್ (ಸಂ) ಎಪಿಗ್ರಾಫಿಯಾ ಕರ್ನಾಟಿಕಾ ಶಾಸನ ಸಂಪುಟ ೧೧, ಪು. ೩೨೭.

೪೦. ರಾಜಶೇಖರಪ್ಪ ಬಿ., ಇತಿಹಾಸ ಕಥನ ಪು. ೭೩.

೪೧. ಮಂಜಣ್ಣ ಟಿ., ಪೂರ್ವೋಕ್ತ ಪು. ೨೬.

೪೨. ಶ್ರೀಶೈಲ ಆರಾಧ್ಯ, ವಿಜಯನಗರದ ಅರಸರು ಮತ್ತು ಚಿತ್ರದುರ್ಗದ ನಾಯಕರು (ಲೇ) ವಿಜಯನಗರ ಅಧ್ಯಯನ ಸಂಪುಟ-೧, ಪು. ೧೨೮.

೪೩. ರಾಜಶೇಖರಪ್ಪ ಬಿ., ಪೂರ್ವೋಕ್ತ, ಪು. ೭೩.

೪೪. ರೈಸ್ ಬಿ.ಎಲ್. (ಸಂ), ಪೂರ್ವೋಕ್ತ ಪು. ೩೨೭.

೪೫. ಮಂಜಣ್ಣ ಟಿ., ಅದೇ, ಪೂರ್ವೋಕ್ತ, ಪು. ೩೦.

೪೬. ಗಂಗಾನಾಯಕ ಕೆ.ಎನ್. (ಸಂ), ಪೂರ್ವೋಕ್ತ, ಸಂಪುಟ-೧, ಪು. X

೪೭. ಅದೇ, ಪೂರ್ವೋಕ್ತ, ಪು. ೧೮.

೪೮. ಶ್ರೀಶೈಲ ಆರಾಧ್ಯ, ಪೂರ್ವೋಕ್ತ ಪು. ೧೨೯.

೪೯. ರಾಜಶೇಖರಪ್ಪ ಬಿ., ಪೂರ್ವೋಕ್ತ, ಪು. ೮೧.

೫೦. ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗ ನಾಯಕ ಅರಸರು, ಪು. ೮೩-೮೪.

೫೧. ಲಕ್ಷ್ಮಣ್ ತೆಲಗಾವಿ, (ಸಂ), ಕರ್ನಾಟಕ ಪಾಳೆಯಗಾರರ ನ್ಯಾಯಾಡಳಿತ, ಪು. ೧೩೨.

೫೨. ಶ್ಯಾಮಲಾ ರತ್ನಕುಮಾರಿ ಬೆ.ಮಂ. ಚಿತ್ರದುರ್ಗ ಜಿಲ್ಲೆಯ ಹರತಿ ಪಾಳೆಯಗಾರರು, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು. ೧೨೯.

೫೩. ಯೋಗೀಶ್ವರಪ್ಪ ಡಿ.ಎನ್. ಪೂರ್ವೋಕ್ತ

೫೪. SriSathayan B.N. (HONS), Chief editer Mysore State Gazatteer, Chitradurga District, p. 59.

೫೫. ಲಕ್ಷ್ಮಣ್ ತೆಲಗಾವಿ, (ಸಂ), ಹರತಿ ಸಿರಿ, ಹರತಿ ಪಾಳೆಯಗಾರರ ವಂಶಾವಳಿ: ಒಂದು ವ್ಯಾಸಂಗ, ಪು. ೨೮೯.

೫೬. ಅದೇ, ಪೂರ್ವೋಕ್ತ, ಪು. ೨.

೫೭. ಶ್ಯಾಮಲಾ ಸಿ.ಆರ್., ಪೂರ್ವೋಕ್ತ, ಪು. ೪೪.

೫೮. ಅದೇ, ಪೂರ್ವೋಕ್ತ, ಪು. ೩೪೫.

೫೯. ದುರುಗಪ್ಪ ಎಂ.ಕೆ., ವಿಜಯನಗರೋತ್ತರ ಕಾಲದ ಬೇಡ ಜನಾಂಗದ ಸ್ಥಿತ್ಯಂತರಗಳು ಚಾರಿತ್ರಿಕ ಅಧ್ಯಯನ ಪು. ೪೦.

೬೦. ಕಲಬುರ್ಗಿ ಎಂ.ಎಂ., (ಸಂ), ಕರ್ನಾಟಕದ ಕೈಫಿಯತ್ತುಗಳು.

೬೧. ಶ್ಯಾಮಲಾ ಸಿ.ಆರ್., ಪೂರ್ವೋಕ್ತ, ಪು. ೩೪೫.

೬೨. ಶ್ಯಾಮಲಾ ರತ್ನಕುಮಾರಿ, ಬೆ.ಮಂ. ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪು. ೧೬೦.

೬೩. ರೈಸ್ ಬಿ.ಎಲ್. (ಸಂ), ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೧೧, ಹಿರಿಯೂರು ತಾಲೂಕು.

೬೪. ರೈಸ್ ಬಿ.ಎಲ್. (ಸಂ), ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೧೨ ಪು. ೩೦೦, ಪಾವಡಗಡ.

೬೫. ಶ್ಯಾಮಲಾ ರತ್ನಕುಮಾರಿ, ಹರತಿ ಪಾಳೆಯಗಾರರು, (ಲೇ), ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪು. ೧೬೧.

೬೬. ರೈಸ್ ಬಿ.ಎಲ್., (ಸಂ), ಪೂರ್ವೋಕ್ತ, ಸಂಪುಟ-೧೧, ಪು. ೨೯೦, ಚಳ್ಳಕೆರೆ ತಾಲೂಕು.

೬೭. ರೈಸ್ ಬಿ.ಎಲ್., (ಸಂ), ಪೂರ್ವೋಕ್ತ, ಸಂಪುಟ-೧೨, ಪು. ೨೮೯-೨೯೦.

೬೮. ರೈಸ್ ಬಿ.ಎಲ್., (ಸಂ), ಪೂರ್ವೋಕ್ತ, ಸಂಪುಟ-೧೧, ಪು. ೩೦೫.

೬೯. ರೈಸ್ ಬಿ.ಎಲ್., (ಸಂ), ಪೂರ್ವೋಕ್ತ, ಸಂಪುಟ-೧೨, ಪು. ೪೦೫, ಮಧುಗಿರಿ.

೭೦. ರೈಸ್ ಬಿ.ಎಲ್., (ಸಂ), ಪೂರ್ವೋಕ್ತ, ಸಂಪುಟ-೧೨, ಪು. ೪೦೬.

೭೧. ಶ್ಯಾಮಲಾ ರತ್ನಕುಮಾರಿ ಬೆ.ಮಂ., ಪೂರ್ವೋಕ್ತ, ಪು. ೧೬೩.

೭೨. ಶ್ಯಾಮಲಾ ಸಿ.ಆರ್., ಪೂರ್ವೋಕ್ತ, ಪು. ೧೦೦.

೭೩. ಪಾಟೀಲ ಎಸ್.ಸಿ., ಬಳ್ಳಾರಿ ಹಂಡೆ ಪಾಳೆಯಗಾರರ ಐತಿಹಾಸಿಕ ಹಿನ್ನೆಲೆ, ವಿಜಯನಗರ ಅಧ್ಯಯನ ಸಂಪುಟ-೧೨, ಪು. ೩೯೩.

೭೪. ಕಲಬುರ್ಗಿ ಎಂ.ಎಂ. (ಸಂ), ಪೂರ್ವೋಕ್ತ, ಪು. ೪೫೧.

೭೫. ಪಾಟೀಲ ಎನ್.ಸಿ., ಪೂರ್ವೋಕ್ತ, ಪು. ೩೯೩.

೭೬. ದೇವರಕೊಂಡಾರೆಡ್ಡಿ (ಸಂ), ಬಳ್ಳಾರಿ ಜಿಲ್ಲೆಯ ಶಾಸನಗಳು ಪೂರ್ವೋಕ್ತ, ಪು. ೭೦.

೭೭. ದೇವರಕೊಂಡಾರೆಡ್ಡಿ (ಸಂ), ಅದೇ ಪೂರ್ವೋಕ್ತ, ಪು. ೧೩೫.

೭೮. ಶ್ಯಾಮಲಾ ಸಿ.ಆರ್. ಪೂರ್ವೋಕ್ತ, ಪು. ೧೮.

೭೯. ಕೊಟ್ರೇಶ್ ಎಂ., ಬಳ್ಳಾರಿ ಜಿಲ್ಲೆಯ ಕೋಟೆಗಳು, ಪು. ೬೧.

೮೦. Manual report of Bellary District p. 161.

೮೧. ಯಶೋಧಾ ರಾಜಶೇಖರಪ್ಪ, ಬಳ್ಳಾರಿ ಜಿಲ್ಲೆಯ ಪಾಳೆಯಗಾರರು (ಲೇ), ವಿಜಯನಗರ ಅಧ್ಯಯನ ಸಂಪುಟ-೧೩, ಪು. ೨೪೫.

೮೨. ಅದೇ ಪೂರ್ವೋಕ್ತ, ಪು. ೨೪೫.

೮೩. ವಿರೂಪಾಕ್ಷಿ ಪೂಜಾರಹಳ್ಳಿ, ಗುಡೇಕೋಟೆ ಪಾಳೆಯಗಾರರು (ಲೇ), ವಿಜಯನಗರ ಅಧ್ಯಯನ ಸಂಪುಟ-೧೩, ಪು. ೨೫೪.

೮೪. ಕಲಬುರ್ಗಿ ಎಂ.ಎಂ. (ಸಂ), ಪೂರ್ವೋಕ್ತ, ಪು. ೪೮.

೮೫. ವಿರೂಪಾಕ್ಷಿ ಪೂಜಾರಹಳ್ಳಿ, ಬಳ್ಳಾರಿ ಜಿಲ್ಲೆಯ ಪಾಳೆಯಗಾರರು, ಪು. ೪೫.

೮೬. ವಿರೂಪಾಕ್ಷಿ ಪೂಜಾರಹಳ್ಳಿ, ಗುಡೇಕೋಟೆ ಪಾಳೆಯಗಾರರು, ಪೂರ್ವೋಕ್ತ, ಪು. ೨೫೬.

೮೭. ಯೋಗೀಶ್ವರಪ್ಪ ಡಿ.ಎನ್., ಪೂರ್ವೋಕ್ತ, ಪು. ೫೦.

೮೮. ವಿರೂಪಾಕ್ಷಿ ಪೂಜಾರಹಳ್ಳಿ, ಗುಡೇಕೋಟೆ ಪಾಳೆಯಗಾರರು, ಪೂರ್ವೋಕ್ತ, ಪು. ೨೬೩.

೮೯. M.R.I, Bellary District, p. 167.

೯೦. ಅದೇ, ಪೂರ್ವೋಕ್ತ, ಪು. ೧೬೮.

❖❖❖

ಅಧ್ಯಾಯ : ಐದು

ಅಮರನಾಯಕರ ಕಾಲದ ಆಡಳಿತ

೫.೧ ಕೇಂದ್ರಾಡಳಿತ

೫.೨ ಪೌರಾಡಳಿತ

೫.೩ ನ್ಯಾಯಾಡಳಿತ

೫.೪ ಸೈನ್ಯಾಡಳಿತ

೫.೫ ಗ್ರಾಮಾಡಳಿತ

೫.೬ ಆರ್ಥಿಕ ವ್ಯವಸ್ಥೆ

೫.೭ ಸಾಂಸ್ಕೃತಿಕ ಕೊಡುಗೆಗಳು

ಅಧ್ಯಾಯ: ಐದು

ಅಮರನಾಯಕ ಕಾಲದ ಆಡಳಿತ

ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ನಾಯಕರು ನಮ್ಮ ನಾಡಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಕ್ಷೇತ್ರಗಳಿಗೆ ನೀಡಿರುವಂತಹ ಕೊಡುಗೆ ಅನನ್ಯವಾದುದು. ಇವರು ವಿಜಯನಗರ ಕಾಲದಲ್ಲಿ ಸಾಮಂತರಾಜರಾಗಿದ್ದರು. ಪ್ರಾದೇಶಿಕ ಮಟ್ಟದಲ್ಲಿ ತಮ್ಮದೇ ಆದ ಸ್ವಯಂ ಆಡಳಿತವನ್ನು ಜಾರಿಗೆ ತಂದು ಆಡಳಿತವನ್ನು ನಡೆಸುತ್ತಿದ್ದರು. ಕೇಂದ್ರ ಸರಕಾರದ ಆಡಳಿತ ಪ್ರಭಾವವಿದ್ದರೂ ಕೂಡ ತಮ್ಮ ಪ್ರದೇಶದ ಜನಜೀವನ, ಸಂಸ್ಕೃತಿಗೆ ತಕ್ಕಂತೆ ಆಡಳಿತವನ್ನು ರೂಪಿಸಿಕೊಂಡು ಜನಪರ ಆಡಳಿತವನ್ನು ನಡೆಸುತ್ತಿದ್ದರು. ದರ್ಪಿಷ್ಟ ಆಡಳಿತವಿದ್ದರೂ ಸಹ ಅವರು ಕೈಗೊಳ್ಳುತ್ತಿದ್ದ ಪ್ರಜಾಹಿತ ಕಾರ್ಯಗಳಿಂದಾಗಿ ಸ್ಥಳೀಯ ಜನರಿಂದ ರಾಜರಂತೆ ಗೌರವಿಸಲ್ಪಡುತ್ತಿದ್ದರು. ನಾಯಕರು ಹಲವಾರು ಧಾರ್ಮಿಕ ಸಂಸ್ಥೆಗಳನ್ನು ಪೋಷಿಸುತ್ತ, ದೇವಾಲಯಗಳ ನಿರ್ಮಾಣ ಕಾರ್ಯದ ಜೊತೆಗೆ ಶಿಕ್ಷಣವನ್ನು ಬೆಳೆಸಿದರು. ನಾಯಕರ ಕಾಲದಲ್ಲಿ ನಿರ್ಮಾಣಗೊಂಡಿರುವ ಅಸಂಖ್ಯಾತ ದೇವಾಲಯಗಳು, ಮಠಗಳು, ಅಗ್ರಹಾರಗಳು, ಕೆರೆ-ಕಾಲುವೆಗಳು ಅವರ ಉತ್ತಮ ಆಡಳಿತಕ್ಕೆ ನಿದರ್ಶನಗಳಾಗಿವೆ. ಈ ಹಿನ್ನೆಲೆಯಲ್ಲಿ ಪೂರ್ವಕರ್ನಾಟಕ ಮತ್ತು ದಕ್ಷಿಣ ಕರ್ನಾಟಕವನ್ನು ಆಳಿದ ಕೆಲವು ಪಾಳೆಯಗಾರರ ಆಡಳಿತದ ಪ್ರಾಮುಖ್ಯತೆಯನ್ನು ವಿವರಿಸಲು ಅವರ ಕಾಲದ ಆಡಳಿತ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಹಿತ್ಯ, ಶಿಕ್ಷಣ, ಕಲೆ ಮತ್ತು ವಾಸ್ತುಶಿಲ್ಪವನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ನಾಯಕರ ಕಾಲದ ರಾಜ್ಯಾಡಳಿತ

ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಪಾಳೆಯಗಾರರ ಕಾಲದ ರಾಜ್ಯಾಡಳಿತ ಹಲವಾರು ಕಾರಣಗಳಿಂದ ವಿಶಿಷ್ಟವಾಗಿದೆ. ಪಾಳೆಯಗಾರರು ವಿಜಯನಗರದ ಅರಸರು ಹಾಕಿಕೊಟ್ಟ ಮಾರ್ಗದಲ್ಲಿಯೇ ಮುನ್ನಡೆದು ವಿಜಯನಗರದ ಸಾಂಸ್ಕೃತಿಕ ಪರಂಪರೆಯನ್ನು ಹಾಗೆಯೇ ಮುಂದುವರಿಸಿಕೊಂಡು ಬಂದರು. ವಿಜಯನಗರದ ಹುಟ್ಟು ಹಿಂದೂ ಧರ್ಮ, ಸಂಸ್ಕೃತಿಯ ರಕ್ಷಣೆಗಾಗಿ ಆರ್ವಿಭವಿಸಿತೋ ಅದೇ ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆಯ ಭಾರವನ್ನು ವಿಜಯನಗರದ ಪತನದ ನಂತರ ವಿಜಯನಗರೋತ್ತರ ನಾಯಕರು ಮುಂದುವರಿಸಿದರು.

ನಮ್ಮ ನಾಡನ್ನು ಆಳಿದ ಬಹುತೇಕ ಅಮರನಾಯಕ ಮನೆತನಗಳು ಅಸಂಖ್ಯಾತವಾದ ದೇವಾಲಯಗಳನ್ನು ಹೊಸತಾಗಿ ನಿರ್ಮಿಸಿದ್ದುದಲ್ಲದೇ, ಹಳೆಯ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿ ಅಪಾರ ಪ್ರಮಾಣದ ಭೂಮಿಯನ್ನು ದೇವಾಲಯಗಳ ಅಭಿವೃದ್ಧಿಗೆ ದಾನವಾಗಿ ನೀಡಿದರು. ಅಗ್ರಹಾರಗಳನ್ನು ನಿರ್ಮಿಸಿ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದರು. ಹಲವಾರು ಮಠಗಳನ್ನು ನಿರ್ಮಿಸಿ ಹಿಂದೂ ಧರ್ಮದ ಅನನ್ಯತೆಯ ಮುಂದುವರಿಕೆಗೆ ಕಾರಣರಾದರು. ವಿಜಯನಗರೋತ್ತರ ಕಾಲದ ಕಲಾ ಶೈಲಿಯು ನಾಯಕರ ಕಾಲದ ಕಲಾ ಶೈಲಿಯಂದೇ ಖ್ಯಾತಗೊಂಡಿದೆ. ಈ ಹಿನ್ನೆಲೆಯಲ್ಲಿ ನಾಯಕರ ಕಾಲದ ರಾಜ್ಯಾಡಳಿತ, ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪಗಳಲ್ಲಿ ಅವರ ಕೊಡುಗೆಯನ್ನು ಗುರುತಿಸುವುದರ ಮೂಲಕ ನಾಯಕರ ಆಡಳಿತ ಪ್ರಾಮುಖ್ಯತೆಯನ್ನು ತಿಳಿಯಬಹುದಾಗಿದೆ.

ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ನಾಯಕರ ಆಡಳಿತವು ಸಂಪೂರ್ಣವಾಗಿ ಧರ್ಮಶಾಸ್ತ್ರ ಮತ್ತು ನೀತಿಶಾಸ್ತ್ರಗಳ ಮೇಲೆಯೇ ಅವಲಂಬಿತವಾಗಿತ್ತು. ಕರ್ನಾಟಕದ ವಿವಿಧ ಭಾಗಗಳಲ್ಲಿ ಬೇರೆ ಬೇರೆ ಮನೆತನಗಳ ನಾಯಕರು ರಾಜ್ಯಾಡಳಿತವನ್ನು ನಿಭಾಯಿಸಿದರೂ ಆ ಆಡಳಿತವೆಲ್ಲವೂ ವಿಜಯನಗರದಂತೆ ರಾಜಧರ್ಮವೇ ರಾಜ್ಯಾಡಳಿತದ ಆಧಾರವಾಗಿತ್ತು. ನಮ್ಮ ನಾಡನ್ನು ಆಳಿದ ವಿಜಯನಗರೋತ್ತರ ಕಾಲದ ಪಾಳೆಯಗಾರರು ತಮ್ಮ ಆಡಳಿತ ಪದ್ಧತಿಯನ್ನು ಸಪ್ತಾಂಗ ಸೂತ್ರದ ಮೇರೆಗೆ ನಡೆಸಿಕೊಂಡು ಹೋಗುತ್ತಿದ್ದರು. ಸಪ್ತಾಂಗ ಸೂತ್ರವೆಂದರೆ ರಾಜ, ಮಂತ್ರಿಮಂಡಲ, ಪ್ರಾಂತಾಡಳಿತ, ಕೋಶ, ಬಲ, ವರ್ಗ ಮತ್ತು ನ್ಯಾಯಾಂಗ. ನಾಯಕರ ಕಾಲದ ಶಾಸನಗಳು ಹಾಗೂ ಸಾಹಿತ್ಯವನ್ನು ನೋಡಿದಾಗ ಪಾಳೆಯಗಾರರು ತಮ್ಮ ಆಡಳಿತ ವ್ಯವಸ್ಥೆಯಲ್ಲಿ ಕೇಂದ್ರಾಡಳಿತ ರಾಜ್ಯಾಡಳಿತ ಮತ್ತು ಗ್ರಾಮಾಡಳಿತಗಳನ್ನು ಒಳಗೊಳಿಸಿದ್ದರೆಂಬುದನ್ನು ಗಮನಿಸಬಹುದು.[೧]

೫.೧. ಕೇಂದ್ರಾಡಳಿತ

ಕೇಂದ್ರಾಡಳಿತದಲ್ಲಿ ನಾಯಕರೇ ಸರ್ವಾಧಿಕಾರಿಗಳು; ಸಾರ್ವಭೌಮರು ಆಗಿರುತ್ತಿದ್ದರು. ಪಾಳೆಯಗಾರರು ತಮ್ಮನ್ನು ತಾವು ನಾಯಕರೆಂದು, ಮಹಾನಾಯಕಚಾರ್ಯರೆಂದು, ಒಡೆಯರೆಂದು, ನಾಡಪ್ರಭುಗಳೆಂದು, ಅರಸರೆಂದು, ಪ್ರಭುಗಳೆಂದು ಗುರುತಿಸಿಕೊಳ್ಳುತ್ತಿದ್ದರು. ವಿಜಯನಗರೋತ್ತರ ಕಾಲದಲ್ಲಿ ಪಾಳೆಯಗಾರ ಎಂಬ ಪದವು ದರ್ಪಿಷ್ಠತೆಯ ಸರ್ವಾಧಿಕಾರದ ಸಂಕೇತವಾಗಿ ಬಳಕೆಯಾಗುತ್ತಿತ್ತು. ವಿಜಯನಗರೋತ್ತರ ಕಾಲದ ನಾಯಕರು ತಮ್ಮನ್ನು ಪಾಳೆಯಗಾರರು ಎಂದು ಕರೆದುಕೊಳ್ಳದೆ ಬೇರೆ ಸಂಸ್ಥಾನದ ನಾಯಕರನ್ನು ಪಾಳೆಯಗಾರರು ಎಂದು ಕರೆದುಕೊಳ್ಳುತ್ತಿದ್ದರು. ಅಮರನಾಯಕರು ತಮ್ಮ ಸಂಸ್ಥಾನದ ರಕ್ಷಕರಾಗಿದ್ದು ಪ್ರಜೆಗಳ ಪಾಲಕರಾಗಿದ್ದರು. ಈ ಹಿನ್ನೆಲೆಯಲ್ಲಿ ರಾಜರಾಗಿ ಪಾಳೆಯಗಾರರ ಅಧಿಕಾರ ಮತ್ತು ಕರ್ತವ್ಯಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದು.

ರಾಜ

ನಾಯಕರ ಕಾಲದಲ್ಲಿ ಇವರೇ ತಮ್ಮ ಸಂಸ್ಥಾನಗಳ ಮುಖ್ಯಸ್ಥರಾಗಿದ್ದು ಸಮಸ್ತ ಅಧಿಕಾರವನ್ನು ತಮ್ಮಲ್ಲಿಯೇ ಕೇಂದ್ರೀಕೃತಗೊಳಿಸಿಕೊಂಡಿದ್ದರು. ರಾಜತ್ವವು ವಂಶಪಾರಂಪರ್ಯವಾದುದಾದರೂ ಅಧಿಕಾರಕ್ಕಾಗಿ ಕಿತ್ತಾಟ ಮತ್ತು ಅಂತಃಕಲಹಗಳು ಸಂಭವಿಸುತ್ತಿದ್ದವು.

ರಾಜನ ಕರ್ತವ್ಯಗಳು

ರಾಜ ಅಥವಾ ನಾಯಕರು ಅಧಿಕಾರ ವಹಿಸಿಕೊಂಡ ನಂತರ ಹಲವಾರು ಕರ್ತವ್ಯಗಳನ್ನು ನಿರ್ವಹಿಸಬೇಕಾಗಿತ್ತು. ಧರ್ಮವನ್ನು ರಕ್ಷಿಸುವುದು, ಪ್ರಜೆಗಳನ್ನು ರಕ್ಷಿಸುವುದು, ಸಮಾಜ ವ್ಯವಸ್ಥೆಯನ್ನು ಜತನವಾಗಿ ಕಾಪಾಡುವುದು ಶಿಷ್ಟರನ್ನು ರಕ್ಷಿಸಿ, ದುಷ್ಟರನ್ನು ದಂಡಿಸುವುದು, ಜನರ ಆರ್ಥಿಕ ಯೋಗಕ್ಷೇಮ ನೋಡಿಕೊಳ್ಳುವುದು, ಧರ್ಮಶಾಸ್ತ್ರಗಳು ಹೇಳುವಂತೆ ಸಾರ್ವಜನಿಕ ಉಪಯೋಗ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಇತ್ಯಾದಿ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿತ್ತು.[೨] ಇದಕ್ಕೆ ಪ್ರತಿಯಾಗಿ ಜನರು ನಾಯಕರನ್ನು ರಾಜರೆಂದು, ಗೌರವಿಸುತ್ತಿದ್ದರು. ಪಾಳೆಯಗಾರರೇ ತಮ್ಮ ತಮ್ಮ ಸಂಸ್ಥಾನಗಳಲ್ಲಿ ಒಡೆಯರಾಗಿರುತ್ತಿದ್ದರಿಂದ ನಾಯಕರ ರಾಜಕೀಯ ಏಳು–ಬೀಳುಗಳು ಸಾಮಾನ್ಯ ಜನರ ಜೀವನದ ಮೇಲೆ ಪರಿಣಾಮ ಬೀರುತ್ತಿದ್ದವು. ನಾಯಕರು ನೀತಿಶಾಸ್ತ್ರ ಮತ್ತು ಧರ್ಮಶಾಸ್ತ್ರಗಳಿಗನುಗುಣವಾಗಿ ಆಡಳಿತ ನಡೆಸಿರುವುದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಉದಾಹರಣೆಗೆ ಚಿತ್ರದುರ್ಗದ ನಾಯಕರಾದ ತಿಮ್ಮಣ್ಣ ನಾಯಕ, ಇಮ್ಮಡಿ ಮೇದಕೇರಿನಾಯಕ, ಭರಮಣ್ಣ ನಾಯಕ, ಕೊನೆಯ ರಾಜ ವೀರ ಮದಕರಿನಾಯಕ, ಬಳ್ಳಾರಿಯ ನಾಯಕರಾದ ಬಾಲದ ಹನುಮಪ್ಪ ನಾಯಕ, ಹಿರೇಮಲುಕಪ್ಪನಾಯಕ, ಸಿದ್ದಪ್ಪನಾಯಕ, ಹಿರೇರಾಮಪ್ಪನಾಯಕ, ಜರೀಮಲೆ ನಾಯಕರಾದ ಪಾಪಣ್ಣ ನಾಯಕ, ಇಮ್ಮಡಿ ನಾಯಕ, ಗುಡೆಕೋಟೆ ನಾಯಕರಾದ ಗಂಡಳನಾಯಕ ಮುಂತಾದ ನಾಯಕರು ಧರ್ಮ ಮಾರ್ಗದಲ್ಲಿ ನಡೆದು ಪ್ರಜಾಹಿತ ಕಾರ್ಯಗಳನ್ನು ಮಾಡಿದರು.

ನಾಯಕರು ತಮ್ಮ ಸಂಸ್ಥಾನಗಳಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ಎಲ್ಲ ರಕ್ಷಣಾ ಕಾರ್ಯಗಳನ್ನು ಕೈಗೊಳ್ಳುತ್ತಿದ್ದರು. ಪ್ರಜೆಗಳಿಗಾದ ಅನ್ಯಾಯವನ್ನು ಪರಿಹರಿಸುತ್ತಿದ್ದರು ಮತ್ತು ತಮ್ಮ ಸಂಸ್ಥಾನಗಳ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳಲು ಸಮಕಾಲೀನ ನಾಯಕರೊಂದಿಗೆ ಯುದ್ಧಗಳನ್ನು ಮಾಡುತ್ತಿದ್ದರು. ಅವರು ಯಜ್ಞ ಯಾಗಾದಿಗಳನ್ನು ಆಚರಿಸುತ್ತಿದ್ದರು. ಕಾಲ ಪುರುಷ ಮತ್ತು ತುಲಾ ಪುರುಷ ದಾನಗಳನ್ನು ಮಾಡುತ್ತಿದ್ದರು.[೩] ಹೊಸ ದೇವಾಲಯಗಳನ್ನು ಕಟ್ಟಿ ಹಳೆಯ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿ ದೇವಾಲಯಗಳಿಗೂ ಬ್ರಾಹ್ಮಣರಿಗೂ ಭೂಮಿಯನ್ನು ಗ್ರಾಮಗಳನ್ನು ದಾನ ಮಾಡಿ ವಿವಿಧ ಧರ್ಮಗಳನ್ನು ಪೋಷಿಸುತ್ತಿದ್ದರು.

ಇದಕ್ಕೆ ಉದಾಹರಣೆಯಾಗಿ ಚಿತ್ರದುರ್ಗ ಕಾಲದ ನಾಯಕರು ನೀಡಿದ ಶಾಸನೋಕ್ತ ದಾನದ ವಿವರಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಕ್ರಿ.ಶ. ೧೫೬೮ ಮೇ ೨೭ರ ಹೊಳಲ್ಕೆರೆಯ ಗೋಪಾಲಕೃಷ್ಣ

ದೇವಸ್ಥಾನದ ಶಿಲಾಶಾಸನವು ಶ್ರೀ ವೀರಸದಾಶಿವರಾಯನನ್ನು ಉಲ್ಲೇಖಿಸುತ್ತದೆ. ವೀರಸದಾಶಿವರಾಯನು ವಿಜಯಗರವನ್ನು ಆಳುವಾಗ ಅಳಿಯ ರಾಮರಾಯನು ಮುಸ್ಲಿಮರ ವಿರುದ್ಧ ಹೋರಾಟದಲ್ಲಿ ಸಾಯುತ್ತಾನೆ. ಈ ಸಂದರ್ಭದಲ್ಲಿ ಹೊಳಲ್ಕೆರೆ ನಗರವು ಮುಸ್ಲಿಮರಿಂದ ಕೊಳ್ಳೆ ಹೊಡೆಯಲ್ಪಡುತ್ತದೆ. ಆಗ ರಾಜಶ್ರೀ ತಿರುಮಲರಾಜದೇವ ಮಹಾ ಅರಸುಗಳು ಕಾಮಗೇತಿಯ ಮದಕರಿ ನಾಯಕರಿಗೆ ಅಮರ ಮಾಗಣಿಯಾಗಿ ಪಾಲಿಸಿದ ಮೇಲೆ ನಾಶವಾಗಿ ಹೋದ ಹೊಳಲ್ಕೆರೆಯ ಸೀಮೆಯನ್ನು ತನ್ನ ಮೈದುನ ಗುಲ್ಲಿಯಪ್ಪ ನಾಯಕನಿಗೆ ಉಂಬಳಿಯಾಗಿ ನೀಡಲಾಗಿರುತ್ತದೆ. ಹೀಗೆ ಭಗ್ನವಾದ ಹೊಳಲ್ಕೆರೆಯ ಶ್ರೀ ಮದನಗೋಪಾಲಕೃಷ್ಣಸ್ವಾಮಿ ದೇವರನ್ನು ಗುಲ್ಲಿಯಪ್ಪ ನಾಯಕನು ಬ್ರಾಹ್ಮಣರ ಮೂಲಕ ಪುನರ್ ಪ್ರತಿಷ್ಠಾಪಿಸಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದ ವಿವರಗಳು ಶಾಸನದಲ್ಲಿ ದಾಖಲಾಗಿವೆ.[೪]

ರಂಗಸಮುದ್ರದ ತಿಮ್ಮಣ್ಣನಾಯಕನ ಶಿಲಾಶಾಸನವು (ಶಾಸನ ಸಂಖ್ಯೆ-೭) ಸದಾಶಿವರಾಯನ ಕಾಲದ್ದಾಗಿದ್ದು ಮಹಾನಾಯಕಾಚಾರ್ಯ ಕಾಮಗೇತಿ ತಿಮ್ಮಣನಾಯಕನು ಕ್ರಿಶ. ೧೫೮೩ ನವೆಂಬರ್ ೨೩ರಂದು ಮಾಲ್ಯವಂತ ರಾಮಾನುಜ ಜೀಯ್ಯನವರಿಗೆ ಹಾಗೂ ವಿಜಯನಗರದ ಅರಸು ತಿರುಮಲರಾಯನಿಗೆ ಪುಣ್ಯವಾಗಲೆಂದು ಸ್ವಭಾನು ಸಂವತ್ಸರದ ಉತ್ಥಾನ ದ್ವಾದಶಿ ಪುಣ್ಯಕಾಲದಂದು ಹಂಪಿ ವಿರೂಪಾಕ್ಷ ಮತ್ತು ಶ್ರೀ ಮಾಲ್ಯವಂತ ರಘುವಂತನಾಯಕರ ಸನ್ನಿಧಿಯಲ್ಲಿ ಕೊಟ್ಟ ದಾನದ ವಿವರಗಳನ್ನು ಒಳಗೊಂಡಿದೆ.[೫] ಜಂಪಳನಾಯಕನ ಕೋಟೆಯ ಶಿಲಾಶಾಸನವೊಂದು (ಶಾಸನ ಸಂಖ್ಯೆ-೧೦) ಕ್ರಿಶ. ೧೫೯೧ರಲ್ಲಿ ಮೊದಲನೇ ಮೆದಕೇರಿ ನಾಯಕ (ಓಬಣ್ಣ ನಾಯಕ) ಹನುಮಂತ ದೇವರ ಗುಡಿಯನ್ನು ನಿರ್ಮಿಸಲು ಕಟ್ಟಲು ವೊಡವಿನ ಬೊಪ್ಪಗೊಂಡ, ಕೆಂಚಗೊಂಡ ಹಾಗೂ ಸೊಂಡೆಕೆರೆಯ ಬಡಗಿ ಪರುವೋಜನ ಮಗ ಗೌರಯ್ಯರಿಗೆ ಭೂಮಿಯನ್ನು ದಾನ ನೀಡಿದ ವಿವರಗಳಿವೆ.[೬]

ಕೂಡ್ಲಿ ಶೃಂಗೇರಿ ಸಂಸ್ಥಾನದಲ್ಲಿರುವ ದಾನ ಪತ್ರವೊಂದು ಕ್ರಿಶ. ೧೬೭೮ಕ್ಕೆ ಸಂಬಂಧಿಸಿದ್ದು. ಕಾಮಗೇತಿ ಕಸ್ತೂರಿ ಚಿಕ್ಕಣ್ಣ ನಾಯಕರು ಬ್ರಹ್ಮಭಟ್ಟರಿಗೆ ಬಾಗೂರು ಸೀಮೆಯ ಮಾರಬಗಟ್ಟೆ ಎಂಬ ಗ್ರಾಮವನ್ನು ದಾನವಾಗಿ ಕೊಟ್ಟು ಈ ಗ್ರಾಮದ ನಾಲ್ಕು ಮೂಲೆಗೂ ವಾಮನ ಮುದ್ರೆಯುಳ್ಳ ಕಲ್ಲುಗಳನ್ನು ನಡೆಸಿ ಇದಕ್ಕೆ ಪ್ರತಿಯಾಗಿ ಶೃಂಗೇರಿಯ ಶ್ರೀ ಶಂಕರ ಭಾರತಿ ಸ್ವಾಮಿಗಳಿಗೆ ಉಡುಗೊರೆಯನ್ನು ಕಳಿಸಿಕೊಟ್ಟ ವಿವರಗಳು ದಾಖಲಾಗಿವೆ.[೭] (ಶಾಸನ ಸಂಖ್ಯೆ-೩೦)

ಮೊರಡಿ ಗ್ರಾಮದ ಶಿಲಾಶಾಸನ(ಶಾಸನ ಸಂಖ್ಯೆ-೩೭)ವು ಕ್ರಿಶ. ೧೬೮೯ನೇ ವರ್ಷದ್ದಾಗಿದ್ದು ಇದು ಚಿತ್ರದುರ್ಗ ನಾಯಕರಾದ ಭರಮಣ್ಣ ನಾಯಕರು ತಮ್ಮ ಹಿರಿಯರಿಗೆ ಪುಣ್ಯವಾಗಲೆಂದು ಆಪ್ತಸಂಭ ಸೂತ್ರದ ಭಾರದ್ವಜ ಗೋತ್ರದ ಆರುವೇಲಿ ಹರಿಭಟ್ಟರ ಪುತ್ರರಾದ ಮೆಗ್ಗಂಭಟ್ಟರ ಪುತ್ರರಿಗೆ ಸಂತೆಬೆನ್ನೂರು ಸೀಮೆಯ ದೇಮಚಯನದುರ್ಗವನ್ನು ಗ್ರಾಮದ ಅಗ್ರಹಾರವನ್ನು ಮಹಾವೈಶಾಖ ಶುದ್ಧ ಪೌರ್ಣಮಿ ಪುಣ್ಯ ಕಾಲದಲ್ಲಿ ಶಿವಾರ್ಪಿತವಾಗಿ ದಾನ ನೀಡಿದ ವಿವರಗಳು ದಾಖಲಾಗಿವೆ.[೮]

ಹೀಗೆ ಚಿತ್ರದುರ್ಗ ನಾಯಕರು ಹಳೆಯ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿ ಹೊಸ ದೇವಾಲಯಗಳನ್ನು ನಿರ್ಮಿಸಿ, ಅಗ್ರಹಾರಗಳನ್ನು ನಿರ್ಮಿಸಿ ಮಠ, ಮಂದಿರಗಳಿಗೆ ದಾನ ನೀಡಿದ ವಿವರಗಳನ್ನು ಪರಿಶೀಲಿಸಿದಾಗ ಚಿತ್ರದುರ್ಗ ನಾಯಕರು ಧರ್ಮಬೀರುಗಳಾಗಿದ್ದು ಧರ್ಮಪರಿಪಾಲಕರಾಗಿದ್ದರೆಂದು ತಿಳಿಯಬಹುದು.

ಬಳ್ಳಾರಿಯ ವಜೀರರಾದ ಹನುಮನಾಯಕನು ಹೊರಡಿಸಿರುವ ಶಾಸನವು ಎಸ್. ತಿಮಣೂರು (ಸಿರುಗುಪ್ಪ ತಾಲೂಕು)ನಲ್ಲಿ ದೊರೆತಿದ್ದು ಈ ಶಾಸನದಲ್ಲಿ ವೆಂಕಟಪತಿದೇವರಾಯನು ಪೆನುಗೊಂಡೆಯಿಂದ ಆಳುತ್ತಿದ್ದಾಗ ಅವನ ಸಾಮಂತನಾದ ಹಂಡೆ ಹನುಮನಾಯಕ ಅಂಕುಸರಾಯನು ರಾಜನಿಂದ ಅಮರಮಾಗಣಿಯಾಗಿ ಪಡೆದಿದ್ದ ಬಳ್ಳಾರಿ ಸೀಮೆಯ ಮಣುನೂರನ್ನು ತನ್ನ ಮಗನಾದ ರಾಮಪ್ಪನಿಗೆ ಪುಣ್ಯವಾಗಬೇಕೆಂದು ಕರಿಯ ವೀರಣ್ಣಡೆಯನ ಶಿಷ್ಯನಾದ ಚನ್ನಮಲ್ಲಿಕಾರ್ಜುನದೇವನ ಶಿಷ್ಯನಾದ ಕೇದರದೇವನಿಗೆ ದಾನ ನೀಡಿದ ವಿವರಗಳು ದಾಖಲುಗೊಂಡಿವೆ.[೯]

ಹಾಸನ ಜಿಲ್ಲೆಯ ಗೊರೂರು ಶಾಸನವು ಬೇಲೂರು ನಾಯಕರಿಗೆ ಸಂಬಂಧಿಸಿದೆ. (ಶಾಸನ ಸಂಖ್ಯೆ ೨೨) ಕ್ರಿ.ಶ. ೧೫೭೫ರ ಶಾಸನದಲ್ಲಿ ಬೇಲೂರು ಕೃಷ್ಣಪ್ಪನಾಯಕರಿಗೆ ಪುಣ್ಯವಾಗಲೆಂದು ಅವನ ಮಗ ವೆಂಕಟಾದ್ರಿ ನಾಯಕನು ಗೊರೂರು ವಾಸುದೇವ ನರಸಿಂಹ, ಕೈಲಾಸದೇವ, ಚಿಕ್ಕಯ್ಯ, ವರದರಾಜ ಅಪ್ಪರಸಯ್ಯ ದೇವಾಲಯಗಳಿಗೆ ಬ್ರಹ್ಮದಾಯಕ್ಕೆ ದಾನ ನೀಡಿದ ವಿವರಗಳಿವೆ.[೧೦]

ಹಾಸನ ಜಿಲ್ಲೆ ಹೊಳೆನರಸೀಪುರದ ಶಾಸನವು (ಶಾಸನ ಸಂಖ್ಯೆ-೪೦) ಕ್ರಿ.ಶ. ೧೬೫೪ರ ಕಾಲಕ್ಕೆ ಸಂಬಂಧಿಸಿದ್ದು ಬೇಲೂರ ನಾಯಕ ಕೃಷ್ಣಪ್ಪ ನಾಯಕನ ಮಗ ರಂಗಪ್ಪ ನಾಯಕನು ಒಂದು ಗುಡಿ ಕಟ್ಟಿಸಿ ಅಲ್ಲಿ ಗರುಡ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿದ ವಿವರಗಳಿವೆ.[೧೧]

ಹೊಳೆನರಸೀಪುರದ ಕ್ರಿ.ಶ. ೧೬೫೭ರ ಶಾಸನವೊಂದರಲ್ಲಿ (ಶಾ.ಸಂ. ೪೬) ಬಯಪನಾಯಕರ ಪುತ್ರರಾದ ಕೃಷ್ಣಪ್ಪನಾಯಕರ ಪುತ್ರ ವೆಂಕಟಾದ್ರಿ ನಾಯಕರ ಪುತ್ರ ಲಕ್ಷ್ಮಪ್ಪ ನಾಯಕರ ಪುತ್ರ ನರಸಿಂಹನಾಯಕರು ತನಗೆ ಶ್ರೇಯೋಭಿವೃದ್ಧಿಯಾಗಲೆಂದು ಒಂದು ಕೊಳ ಕಟ್ಟಿಸಿ ಈ ಕೊಳಕ್ಕೆ ಚಂದ್ರ ಸರಸ್ಸು ಎಂಬ ನಾಮಧೇಯವಿಟ್ಟ ವಿವರಗಳನ್ನು ಒಳಗೊಂಡಿದೆ.[೧೨]

ಒಟ್ಟಿನಲ್ಲಿ ಬಳ್ಳಾರಿಯ ನಾಯಕರು, ಬೇಲೂರು ನಾಯಕರು ಬ್ರಹ್ಮದೇವಾಲಯಗಳಿಗೆ, ದೇವದೇಯಗಳಿಗೆ ಅಗ್ರಹಾರಗಳ, ಕೊಳಗಳ, ದೇವಾಲಯಗಳ ನಿರ್ಮಾಣ ಮಾಡಿರುವುದಕ್ಕೆ ಶಾಸನಗಳು ಸಮರ್ಥನೆಯನ್ನು ನೀಡುತ್ತವೆ.

ಉಮ್ಮತ್ತೂರು ಪಾಳೆಯಗಾರರ ಒಂದೆರಡು ಶಾಸನಗಳನ್ನು ಗಮನಿಸುವುದಾದರೆ ಮೈಸೂರು ಜಿಲ್ಲೆ ಗುಂಡ್ಲುಪೇಟೆ ತಾಲೂಕು, ಚನ್ನಮಲ್ಲಾಪುರದ ಶಾಸನವೊಂದು ಕ್ರಿ.ಶ. ೧೪೩೦ರ ಕಾಲದ್ದಾಗಿದ್ದು, ಮಹಾಮಂಡಲೇಶ್ವರ ಶ್ರೀ ವೀರ ಸೋಮಣ್ಣ ಒಡೆಯ ಕುಮಾರ ಚಿಕ್ಕಣ್ಣ ಒಡೆಯರು ತೆರಕಣಾಂಬಿಯ ರಾಜ್ಯವನ್ನು ಆಳುತ್ತಿದ್ದ ಸಂದರ್ಭದಲ್ಲಿ ಶ್ರೀ ನಂಜುಂಡೇಶ್ವರ ದೇವರಿಗೆ ಆಲತೂರು ಗ್ರಾಮವನ್ನು ದಾನ ಬಿಟ್ಟ ವಿವರಗಳಿವೆ.[೧೩]

ಮೈಸೂರು ಜಿಲ್ಲೆ, ಕೊಳ್ಳೆಗಾಲ ತಾಲ್ಲೂಕು, ಕುಂತೂರು ಬಸವೇಶ್ವರ ದೇವಾಲಯದ ಮುಂದಿನ ಶಾಸನವೊಂದು ಕ್ರಿ.ಶ. ೧೫೧೨ನೇ ವರ್ಷಕ್ಕೆ ಸೇರಿದೆ. ಉಮ್ಮತ್ತೂರಿನ ರಾಜ ನಂಜರಾಜಯ ಒಡೆಯರ ಮಗ ಚಿಕ್ಕರಾಯ ಒಡೆಯನು ಸಾಲೂರು ಶಾಂತದೇವ ಮಠಕ್ಕೆ ೫೦ ಗದ್ಯಾಣ ಮತ್ತು ಒಂದು ಹಳ್ಳಿಯನ್ನು ದಾನ ಕೊಟ್ಟ ವಿವರಗಳಿವೆ.[೧೪]

ಜರೀಮಲೆಯ ನಾಯಕನಾದ ಪೆನ್ನಪ್ಪನಾಯಕನು ಉಜ್ಜಯನಿಯಲ್ಲಿ ಸಿದ್ದೇಶ್ವರ ಮಠವನ್ನು, ಸಿದ್ದೇಶ್ವರ ದೇವಾಲಯವನ್ನು ನಿರ್ಮಾಣ ಮಾಡಿದನು.[೧೫] ಗುಡೆಕೋಟೆಯ ಪಾಳೆಯಗಾರ ಗಂಡಳನಾಯಕನು ಗುಡೆಕೋಟೆಯ ಗುಡ್ಡದ ಮೇಲೆ ಕೋಟೆಯನ್ನು ಕಟ್ಟಿ ಶಿವನ ದೇವಾಲಯದ ಬಳಿ ಅರಮನೆಯನ್ನು ನಿರ್ಮಿಸಿದನು.[೧೬] ಮೈಸೂರಿನ ರಾಜ ಒಡೆಯರು ಲಕ್ಷ್ಮಿಕಾಂತ ಸ್ವಾಮಿಗಾಗಿ ಸಂಕ್ರಾಂತಿ ಮಠವನ್ನು ಕಟ್ಟಿಸಿದರು. ರಾಮಾನುಜಕೂಟಕ್ಕೆ ಭೂಮಿಯನ್ನು ದಾನ ಮಾಡಿದರು. ಬೆಳಗೊಳದಲ್ಲಿ ಜನಾರ್ಧನ ಸ್ವಾಮಿಯ ದೇವಾಲಯಕ್ಕೆ ಒಂದು ಅನ್ನಛತ್ರವನ್ನು ಕಟ್ಟಿಸಿದರು. ೨೮ ಬ್ರಾಹ್ಮಣರಿಗೆ ಮತ್ತಿಗೆರೆ (ನರಸಿಂಹಪುರ) ಗ್ರಾಮದ ೫೦ ಭಾಗಗಳನ್ನು ಹಂಚಿಕೊಟ್ಟರು. ಚಾಮರಾಜ ಒಡೆಯರು ಬ್ರಾಹ್ಮಣರಿಗಾಗಿ ಚಾಮರಾಜ ಸಮುದ್ರವೆಂಬ ಒಂದು ಅಗ್ರಹಾರವನ್ನು ನಿರ್ಮಿಸಿದರು. ಒಂದು ಭಾಗವನ್ನು ಭಗವಾನ್ ಗಂಜಾ ನರಸಿಂಹ ಸ್ವಾಮಿಗೆ ಅರ್ಪಿಸಿದರು.[೧೭]

ಹೀಗೆ ಕರ್ನಾಟಕವನ್ನು ಆಳಿದ ವಿಜಯನಗರೋತ್ತರ ಕಾಲದ ನಾಯಕರ ಶಾಸನಗಳನ್ನು, ಸಮಕಾಲೀನ ಸಾಹಿತ್ಯ ದಾಖಲೆಗಳನ್ನು ಗಮನಿಸಿದಾಗ ನಾಯಕರು ತಮ್ಮ ಸಂಸ್ಥಾನಗಳಲ್ಲಿನ ಆರ್ಥಿಕ ಮಿತಿಯಲ್ಲಿಯೇ ದೇವಾಲಯಗಳನ್ನು, ಕೋಟೆಗಳನ್ನು, ಅರಮನೆಗಳನ್ನು, ಅಗ್ರಹಾರಗಳನ್ನು, ಕೆರೆ–ಬಾವಿ, ಕೊಳಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ. ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ನಾಯಕ ಕಾಲದ ರಾಜ್ಯಾಡಳಿತವು ಸಂಪೂರ್ಣವಾಗಿ ಹಿಂದೂ ಧರ್ಮದ ಅಡಿಯಲ್ಲಿ ನಿಂತಿದ್ದು, ಧರ್ಮ ಪೋಷಣೆಗಾಗಿ ನಾಯಕರು ನೀಡಿರುವ ಉಂಬಳಿಗಳು, ದಾನ–ದತ್ತಿಗಳು ಈ ವಿಷಯವನ್ನು ಸಮರ್ಥಿಸುತ್ತವೆ.

ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ರಾಜ್ಯಾಡಳಿತದಲ್ಲಿ ಗಮನಿಸಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ ಧಾರ್ಮಿಕ ಸಹಿಷ್ಣುತೆ. ನಾಯಕರು ತಮ್ಮ ಸಮಕಾಲೀನ ಧರ್ಮಗಳಾದ ಶೈವ, ವೈಷ್ಣವ, ಜೈನ, ವೀರಶೈವ ಧರ್ಮಗಳಿಗೆ ಸಮಾನ ಆದ್ಯತೆಯನ್ನು ನೀಡಿದರು. ಉದಾಹರಣೆಗೆ ಚಿತ್ರದುರ್ಗದ ನಾಯಕರು ವೈಷ್ಣವರಾಗಿದ್ದು ಅಹೋಬಲ ನರಸಿಂಹ ಸ್ವಾಮಿ ಇವರ ಕುಲದೈವ ಆದರೂ ಇವರ ಸಂಸ್ಥಾನದಲ್ಲಿ ಶೈವ ಮತ್ತು ವೀರಶೈವ ಧರ್ಮ ಶಾಕ್ತ ಧರ್ಮಗಳಿಗೆ ಸಮಾನ ಪ್ರೋತ್ಸಾಹ ನೀಡಿದರು. ಚಿತ್ರದುರ್ಗದ ಪ್ರಸಿದ್ಧ ನಾಯಕ ಬಿಚ್ಚುಗತ್ತಿ ಭರಮಣ್ಣ ನಾಯಕನು ಮುರುಘಾಮಠವೆಂಬ ವಿರಕ್ತಮಠವನ್ನು ನಿರ್ಮಿಸಿ ಮಠಕ್ಕೆ ಹಲವಾರು ಹಳ್ಳಿಗಳನ್ನು ದಾನವಾಗಿ ನೀಡಿದನು. ಅದರಂತೆ ಹಂಡೆ ನೀಲಮ್ಮ ರಾಮಪ್ಪ ನಾಯಕತಿಯು ಕ್ರಿ.ಶ. ೧೭೩೩ರಲ್ಲಿ ಬಳ್ಳಾರಿಯ ಮರಿಮಹಂತ ಸ್ವಾಮಿಗಳ ವಿರಕ್ತಮಠಕ್ಕೆ ತೆಕ್ಕಲಕೋಟೆ ತಾಲೂಕು ವುಳೇನೂರು ಗ್ರಾಮವನ್ನು ತನ್ನ

ಹಿರಿಯರಿಗೆ ಸುಕೃತವಾಗಲೆಂದು ದಾನ ನೀಡಿದಳು.[೧೮] ಸಂತೇಬೆನ್ನೂರು ನಿಜಮದವಣಿಗ ಹನುಮಪ್ಪನಾಯಕರ ಪುತ್ರರಾದ ಸರ್ಜಾ ಹನುಮಪ್ಪನಾಯಕರು ಕೂಡ್ಲಿ ಶೃಂಗೇರಿ ಮಠದ ಶ್ರೀ ವಿದ್ಯಾರಣ್ಯ ಭಾರತೀ ಸ್ವಾಮಿಗಳಿಗೆ ಆರಗದ ವೇಂಠಗೆ ಸಲ್ಲುವ ಗಂಗೆ ಮಂಡಲದ ನಾಡವಳಗನ ಬಸವಾಪಟ್ಟಣದ ಹೋಬಳಿ ಹೊಳೆಹೊನ್ನೂರು ಸೀಮೆಗೆ ಸಲ್ಲುವ ಯಡತೋರೆ ಸೀಮೆಯ ಜಾವಳ್ಳಿ, ಬೆನವಳ್ಳಿ ಹಾಗೂ ಭಾರತೀಪಾಲು ಗ್ರಾಮಗಳನ್ನು ತಮ್ಮ ತಂದೆತಾಯಿಗಳಿಗೆ ಪುಣ್ಯವಾಗಲೆಂದು ದಾನ ನೀಡಿದರು.[೪೪] ಸಂತೇಬೆನ್ನೂರು ಸರ್ಜಾ ಹನುಮಪ್ಪ ನಾಯಕರ ಪುತ್ರ ಸೀತಾರಾಮಪ್ಪನಾಯಕನು ತಮ್ಮ ತಂದೆತಾಯಿಗಳಿಗೆ ಪುಣ್ಯವಾಗಲೆಂದು ತುಂಗಭದ್ರಾ ತೀರವಾಸ ಗೋಪಾಲ ಕ್ಷೇತ್ರದ ಶ್ರೀ ಗೋಪಾಲಕೃಷ್ಣ ದೇವರಿಗೆ ಅಮೃತಪಡಿ, ನಂದಾದೀಪ, ಕಟ್ಟಲೆ, ಕಂದಾಚಾರ ಮುಂತಾದವುಗಳನ್ನು ನಡೆಸಿಕೊಂಡು ಬರಲು ಕಾತೂರು ಸೀಮೆಯೊಳಗಣ ದುಗ್ಗಲಾಪುರದ ಸೆಟ್ಟಿ ಹಳ್ಳಿಯನ್ನು ದಾನವಾಗಿ ನೀಡುವನು.[೧೯]

ಹೀಗೆ ಚಿತ್ರದುರ್ಗ ನಾಯಕರು, ಹಂಡೆಯ ವಜೀರರು ಸಂತೆಬೆನ್ನೂರು ನಾಯಕರು ತಮ್ಮ ಆಡಳಿತಾವಧಿಯಲ್ಲಿ ಶೈವ, ವೈಷ್ಣವ ಧರ್ಮಗಳಿಗೆ ಸಮಾನ ಪ್ರೋತ್ಸಾಹವನ್ನು ನೀಡಿದ್ದನ್ನು ಗಮನಿಸಬಹುದು. ಅದರಂತೆ ಗುಡೆಕೋಟೆಯ ಪಾಳೆಯಗಾರರು ತಮ್ಮ ಆಡಳಿತಾವಧಿಯಲ್ಲಿ ನಿರ್ಮಿಸಿರುವ ಆಂಜನೇಯ, ಚೌಡಮ್ಮ, ಮರಿಯಮ್ಮ, ರಾಮಲಿಂಗೇಶ್ವರ, ಬಸವಣ್ಣ, ಕಾಳಮ್ಮ, ಈಶ್ವರ, ಲಕ್ಷ್ಮಿ ವೆಂಕಟೇಶ್ವರ, ಉಮಾಮಹೇಶ್ವರ, ಪಂಚಲಿಂಗೇಶ್ವರ ಮೊದಲಾದ ದೇವಾಲಯಗಳು ಅವರ ಧಾರ್ಮಿಕ ಸಹಿಷ್ಣುತೆಗೆ ಪ್ರತೀಕವಾಗಿವೆ. ಕೆಳದಿಯ ವೆಂಕಟಪ್ಪ ನಾಯಕನು ವೀರಶೈವ ಮಠಗಳು ಮತ್ತು ಪವಿತ್ರ ಸ್ಥಾನಗಳಿಗೆ ಮಾತ್ರವಲ್ಲದೆ, ರಾಮಾನುಜಕೂಟಗಳಿಗೆ, ಶೃಂಗೇರಿಯ ಅದ್ವೈತ ಮಠಗಳಿಗೆ, ಮುಸ್ಲಿಂ ಮಸೀದಿಗಳಿಗೂ ಉದಾರವಾಗಿ ದಾನ ನೀಡಿದರು. ಶಿವಪ್ಪ ನಾಯಕನು ಕ್ರೈಸ್ತ ಧರ್ಮ ಬೆಳೆಯಲು ಪ್ರೋತ್ಸಾಹ ನೀಡಿದನು.[೨೦] ಯಲಹಂಕದ ನಾಡಪ್ರಭುವಾದ ಹಿರಿಯ ಕೆಂಪೇಗೌಡನು ಬೆಂಗಳೂರಿನಲ್ಲಿ ಸಂಪಂಗಿ ಕೆರೆ, ಧರ್ಮಾಂಬುದಿ ಕೆರೆ, ಜಕರಾಯನ ಕೆರೆ ಹಾಗೂ ಕಾರಂಜಿ ಕೆರೆಗಳನ್ನು ಕಟ್ಟಿಸಿ, ಜನರಿಗೆ ಹಾಗೂ ಜಾನುವಾರುಗಳಿಗೆ ಮತ್ತು ವ್ಯವಸಾಯಕ್ಕೆ ಅನುಕೂಲವಾಗುವ ಹಾಗೆ ಸರ್ವಜನರಿಗೂ ಅನುಕೂಲವಾಗಲೆಂದು ನಿರ್ಮಿಸಿದನು.[೨೧]

ವಿಜಯನಗರ ಮತ್ತು ವಿಜಯನಗರೋತ್ತರ ನಾಯಕರು ಯಾವುದೇ ಒಂದು ಧರ್ಮ, ಸಿದ್ಧಾಂತ ತತ್ವಗಳಿಗೆ ಅಧೀನರಾಗದೇ ಸರ್ವಧರ್ಮ ಸಮನ್ವಯತೆಯನ್ನು ಪಾಲಿಸಿದರು. ಇವರ ಕಾಲದಲ್ಲಿ ಧಾರ್ಮಿಕ ಸಾಮರಸ್ಯ ಇತ್ತು ಎಂಬುದನ್ನು ಅವರು ಹೊರಡಿಸಿರುವ ಶಾಸನಗಳು, ನಿರ್ಮಿಸಿರುವ ದೇವಾಲಯಗಳು, ಅಗ್ರಹಾರಗಳು ಉತ್ತಮ ನಿದರ್ಶನವಾಗಿ ನಿಲ್ಲುತ್ತವೆ.

ನಾಯಕರು ತಮ್ಮ ಆಡಳಿತಾವಧಿಯಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳು ಹೆಚ್ಚು ವಿಸ್ತಾರಗೊಳ್ಳಲು ಕಾರಣಕರ್ತರಾದರು. ಕೃಷಿ ಉತ್ಪನ್ನವನ್ನು ಹೆಚ್ಚಿಸಲು ಅರಣ್ಯಗಳನ್ನು ಕಡಿದು ಭೂಮಿಯನ್ನು ಕೃಷಿಯೋಗ್ಯ ಭೂಮಿಯನ್ನಾಗಿಸಿದರು. ದೇಶಿ ಮತ್ತು ವಿದೇಶಿ ವ್ಯಾಪಾರವನ್ನು

ಪ್ರೋತ್ಸಾಹಿಸಿದರು. ಗುಮ್ಮನಾಯಕ ಪಾಳೆಯಗಾರರಲ್ಲಿ ಸುಪ್ರಸಿದ್ಧನಾದ ಕದಿಯಪ್ಪ ನಾಯಕ (ಕ್ರಿ.ಶ. ೧೪೨೭-೭೫) ತನ್ನ ಆಡಳಿತಾವಧಿಯಲ್ಲಿ ರೈತರಿಗೆ ಮತ್ತು ವರ್ತಕರಿಗೆ ಸಾಕಷ್ಟು ಪ್ರೋತ್ಸಾಹವನ್ನು ನೀಡಿದನು. ಸಾಮ್ರಾಜ್ಯದಲ್ಲಿನ ದಂಗೆಕೋರರನ್ನು ಸದೆಬಡಿದನು. ಕಳ್ಳಕಾಕರನ್ನು, ದರೋಡೆಕೋರರನ್ನು ಮತ್ತು ಬೇಟೆಗಾರರನ್ನು ವ್ಯವಸಾಯಗಾರರನ್ನಾಗಿಸಿದ. ಇದರಿಂದ ಸಂಸ್ಥಾನದ ಆದಾಯ ಹೆಚ್ಚಿತು. ಆಡಳಿತ ವ್ಯವಸ್ಥೆಯನ್ನು ಉತ್ತಮಗೊಳಿಸಿ, ಆಡಳಿತದ ಅನುಕೂಲಕ್ಕಾಗಿ ಅಟ್ಟವಣಿ ಚಾವಣಿ, ಬೊಕ್ಕಸದ ಚಾವಡಿ, ನಾಣ್ಯದ ಚಾವಡಿ, ಗೋವಿನ ಚಾವಡಿ ಮತ್ತು ಸುಂಕದ ಚಾವಡಿಗಳನ್ನು ನಿರ್ಮಿಸಿದನು. ಅದಲ್ಲದೆ ಆಡಳಿತಾಧಿಕಾರಿಗಳಾದ ಸುಭೇದಾರ, ಶಿರಸ್ತೇದಾರ, ಓಲೆಗಾರ, ದಫೇದಾರ, ಶ್ಯಾನುಭೋಗ, ನೀರಗಂಟಿ, ತೋಟಿ ತಳವಾರ ಮತ್ತು ಶೇಕುದಾರರನ್ನು ವಿಜಯನಗರದ ಆಡಳಿತದ ಆಧಾರದ ಮೇಲೆ ನೇಮಕ ಮಾಡಿದನು. ಇವನು ವಿಜಯನಗರದ ಟಂಕಗಳ ಜೊತೆಗೆ ನಂದಿ ಮತ್ತು ತ್ರಿಶೂಲಗಳನ್ನು ಹೊಂದಿದ ನಾಣ್ಯಗಳನ್ನು ಅಚ್ಚು ಹಾಕಿಸಿದನು.[೨೨]

ಚಿತ್ರದುರ್ಗದ ಸುಪ್ರಸಿದ್ಧ ಅರಸನಾದ ಭರಮಣ್ಣ ನಾಯಕನು ಕೃಷಿ ಮತ್ತು ವಾಣಿಜ್ಯ ಚಟುವಟಿಕೆಗಳ ಮಹತ್ವವನ್ನು ಅರಿತವನಾಗಿದ್ದನು. ಇವನ ಕಾಲದಲ್ಲಿ ಚಿತ್ರದುರ್ಗದ ಸಂಸ್ಥಾನದಲ್ಲಿ ಪ್ರಮುಖವಾದ ೨೧ ಕೆರೆಗಳು ನಿರ್ಮಾಣವಾಯಿತೆಂದು ಪ್ರೊ. ಲಕ್ಷ್ಮಣ್ ತೆಲಗಾವಿಯವರು ಗುರುತಿಸಿದ್ದಾರೆ. ಭರಮಣ್ಣ ನಾಯಕನ ಕಾಲದಲ್ಲಿ ಸುಮಾರು ೩೦ ದೇವಾಲಯಗಳು, ೪ ಅರಮನೆಗಳು ಹಾಗೂ ೫ ಬಲಿಷ್ಠ ದುರ್ಗಗಳು ನಿರ್ಮಾಣಗೊಂಡವು.[೨೩]

ಯಲಹಂಕದ ನಾಡಪ್ರಭು ಹಿರಿಯ ಕೆಂಪೇಗೌಡನು ಕುಶಾಗ್ರಮತಿ, ಧರ್ಮಿಷ್ಠ ಪ್ರಭುವಾಗಿದ್ದು ಆಧುನಿಕ ಬೆಂಗಳೂರನ್ನು ನಿರ್ಮಿಸಿದನು. ವ್ಯಾಪಾರ ವಾಣಿಜ್ಯವನ್ನು ಅಭಿವೃದ್ಧಿಪಡಿಸಲು ವಿವಿಧ ರಾಜ್ಯಗಳಾದ, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಗುಜರಾತ್ ಮತ್ತು ಉತ್ತರ ಭಾರತದ ವಿವಿಧ ವೃತ್ತಿ, ಜಾತಿ ಮತ್ತು ಮತಗಳ ಸಮುದಾಯದವರನ್ನು ಕರೆತಂದು ಅವರ ವಸತಿ ಮತ್ತು ವೃತ್ತಿಗೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸಿ, ಅವರು ನಿಶ್ಚಿಂತೆಯಿಂದ ನೆಲೆಸಿ, ನಿರಾಳವಾಗಿ ತಮ್ಮ ವೃತ್ತಿಗಳನ್ನು ನಡೆಸಲು ಅವಕಾಶವನ್ನು ಕಲ್ಪಿಸಿಕೊಟ್ಟನು. ಬೆಂಗಳೂರಿನಲ್ಲಿ ೬೪ ಪೇಟೆಗಳನ್ನು ನಿರ್ಮಿಸಿದನು. ೬೪ ಪೇಟೆಗಳನ್ನು ೩ ವಿಶೇಷ ಭಾಗಗಳಾಗಿ ವಿಭಾಗಿಸಿದನು. ೧. ಕಸುಬುದಾರರಿಗೆ– ಕುಂಬಾರ ಪೇಟೆ, ಗಾಣಿಗರ ಪೇಟೆ, ನಗರ್ತಪೇಟೆ, ಉಪ್ಪಾರ ಪೇಟೆ ಇತ್ಯಾದಿ. ೨. ವ್ಯಾಪಾರಸ್ಥರಿಗೆ– ಅರಳೇಪೇಟೆ, ಅಕ್ಕಿಪೇಟೆ, ರಾಗಿಪೇಟೆ, ಬಳೇಪೇಟೆ, ತಗರುಪೇಟೆ, ಮಂಡಿಪೇಟೆ, ದೊಡ್ಡಪೇಟೆ, ಚಿಕ್ಕಪೇಟೆ ೩. ಜನವಸತಿಗೆ– ಬಳ್ಳಾಪುರಪೇಟೆ, ತಾರಮಂಡಲಪೇಟೆ, ಹಳೇಚಾಮರಾಜಪೇಟೆ, ಹಲಸೂರುಪೇಟೆ, ಮಾಮೂಲ್‌ಪೇಟೆ, ರಾಣಸಿಂಗ್ ಪೇಟೆ, ಮನವಾರ್ತೆಪೇಟೆ ಇತ್ಯಾದಿ ಪೇಟೆಗಳನ್ನು ನಿರ್ಮಿಸಿದನು.[೨೪] ಕೆಂಪೇಗೌಡನು ಸ್ಥಾಪಿಸಿದ ಮಾರುಕಟ್ಟೆ, ಪೇಟೆಗಳ ವಿಂಗಡನೆ ವ್ಯಾಪಾರಕ್ಕೆ ಈತ ನೀಡಿದ ಪ್ರೋತ್ಸಾಹಗಳು ದೇಶ ವಿದೇಶಿ ವರ್ತಕರನ್ನು ಆಕರ್ಷಿಸಿತು. ಬೆಂಗಳೂರು ಆಧುನಿಕ ಬೆಂಗಳೂರಾಗಿ ರೂಪುಗೊಳ್ಳಲು ಹಿರಿಯ ಕೆಂಪೇಗೌಡನು ಅಸ್ತಿಭಾರವನ್ನು ಹಾಕಿದನು. ಅಂದು

ಹಿರಿಯ ಕೆಂಪೇಗೌಡನು ಕಟ್ಟಿದ ಬೆಂಗಳೂರು ಇಂದು ಜಾಗತಿಕ ಇತಿಹಾಸದ ಪುಟಗಳಲ್ಲಿ ಗುರುತಿಸಿಕೊಳ್ಳಲು ಕಾರಣರಾದವರೇ ಯಲಹಂಕದ ನಾಡಪ್ರಭುಗಳು ಎಂದು ಹೇಳಬಹುದು.

ಬಿಜ್ಜಾವರದ ಮಹಾನಾಡ ಪ್ರಭುಗಳ ಆಡಳಿತಾವಧಿಯಲ್ಲಿ ಕೃಷಿ ವ್ಯಾಪಾರ ವಾಣಿಜ್ಯ ಚಟುವಟಿಕೆಗಳಿಗೆ ಅಪಾರ ಪ್ರೋತ್ಸಾಹ ದೊರೆಯಿತು. ಬಿಜ್ಜಾವರದ ಮಹಾಪ್ರಭು ಹಿರೇ ಚಿಕ್ಕಪ್ಪಗೌಡನು ಬಿಜ್ಜಾವರದಲ್ಲಿ ಕೆರೆಯನ್ನು ಹಾಗೂ ೪೦ ಅಡಿ ಉದ್ದ ೪೦ ಅಡಿ ಅಗಲವುಳ್ಳ ದೊಡ್ಡದಾದ ಕೊಳವನ್ನು ನಿರ್ಮಿಸಿದನು. ಇಮ್ಮಡಿ ಚಿಕ್ಕ ಭೂಪಾಲ ಕ್ರಿ.ಶ. ೧೬೯೩ರಲ್ಲಿ ತನ್ನ ಗುರುತೋಂಟದ ಸಿದ್ಧಲಿಂಗೇಶ್ವರರ ನೆನಪಿಗೋಸ್ಕರ ದೇವಾಲಯಗಳನ್ನು ನೀರಿಗಾಗಿ ಒಂದು ದೊಡ್ಡ ಕೆರೆ ನಿರ್ಮಿಸಿರುವ ವಿವರಗಳು ಎಪಿಗ್ರಾಫಿಯಾ ಶಾಸನ ಸಂಪುಟ ೧೨ ಶಾಸನ ಸಂಖ್ಯೆ ೨೧ರಲ್ಲಿ ದಾಖಲಾಗಿವೆ.[೨೫] ಮಹಾನಾಡ ಪ್ರಭುಗಳ ಕಾಲದಲ್ಲಿ ನಿರ್ಮಾಣಗೊಂಡಿರುವ ಕಡಗತ್ತೂರಿನ ಕೆರೆ ಅತ್ಯಂತ ದೊಡ್ಡದಾದ ಕೆರೆಯಾಗಿದೆ. ಇವರ ವಂಶಾವಳಿಯಲ್ಲಿ ಸುಮಾರು ೬೦ಕ್ಕೂ ಹೆಚ್ಚು ಸಣ್ಣ ಕೆರೆ ಮತ್ತು ದೊಡ್ಡ ಕೆರೆಗಳನ್ನು ನಿರ್ಮಿಸಲಾಗಿತ್ತೆಂದು ವಿವರಿಸಲಾಗಿದೆ. ಮೆಕೆಂಜಿಯವರು ತಮ್ಮ ಕೈಫಿಯತ್ತಿನಲ್ಲಿ ಮಧುಗಿರಿ ನಾಡಿನಾದ್ಯಂತ ಇರುವ ನೀರಿನ ಮೂಲಗಳನ್ನು ವಿವರಿಸಿದ್ದಾರೆ.[೨೬]

ಹೀಗೆ ವಿಜಯನಗರ ಕಾಲದ ಪ್ರಸಿದ್ಧ ವಾಕ್ಯವಾದ ಕೆರೆಯಂ ಕಟ್ಟಿಸು, ಬಾವಿಯು ಸವೆಸು, ದೇವಗಾರಂ ಮಾಡಿಸು ಎಂಬ ನಾಣ್ಣುಡಿಯನ್ನು ವಿಜಯನಗರೋತ್ತರ ಪಾಳೆಯಗಾರರು ತಮ್ಮ ರಾಜ್ಯಾಡಳಿತದ ಧ್ಯೇಯವಾಗಿಸಿಕೊಂಡು ಅದನ್ನು ಅಕ್ಷರಶಃ ಜಾರಿಗೊಳಿಸಿದರು. ಒಟ್ಟಿನಲ್ಲಿ ಪಾಳೆಯಗಾರರ ದಾನ-ಧರ್ಮಗಳು ಬ್ರಾಹ್ಮಣರಿಗೆ ದೇವರಿಗೆ ಸಂದಾಯವಾಗುವ ಹಾಗೆ ಸಾಮಾನ್ಯ ಪ್ರಜೆಗಳಿಗೂ ಸಂದಾಯವಾಗುತ್ತಿತ್ತು. ಅದು ಪಾಳೆಯಗಾರರು ನಿರ್ಮಿಸುತ್ತಿದ್ದ ಕೆರೆ, ಕಾಲುವೆಗಳು, ಬಾವಿಗಳು, ಅನ್ನದಾನ ಛತ್ರಗಳ ರೂಪದಲ್ಲಿ ಜನತೆಗೆ ಸಂದಾಯವಾಗುತ್ತಿತ್ತು.

ವಿಜಯನಗರ ಮತ್ತು ವಿಜಯನಗರೋತ್ತರ ನಾಯಕರು ಆದಾಯ ಸಹಿತವಾಗಿ ಯಾವ ರೀತಿಯ ತೆರಿಗೆಯೂ ಇಲ್ಲದೆ ಭೂಮಿಯನ್ನು, ಹಳ್ಳಿಗಳನ್ನು ಯಾವ ತೊಂದರೆಯು ಇಲ್ಲದಂತೆ ದಾನ ಧರ್ಮಗಳನ್ನು ನಡೆಸಿಕೊಂಡು ಹೋಗಲು ಬ್ರಾಹ್ಮಣರಿಗೆ ದಾನ ನೀಡುತ್ತಿದ್ದರು. ದಾನ ಕೊಟ್ಟು ಭೂಮಿ ಹಳ್ಳಿ ಅಗ್ರಹಾರಗಳಿಂದ ಬರುವ ಆದಾಯ ತೆರಿಗೆಗಳನ್ನು ವಸೂಲಿ ಮಾಡಿಕೊಂಡು ಅನುಭವಿಸಬಹುದಿತ್ತು.[೨೭] ಉದಾಹರಣೆಗೆ ಹಾಲೇರಿ ರಾಜನಾದ ಕೊಡಗಿನ ರಾಜ ವೀರರಾಜೇಂದ್ರನು ತನ್ನ ತಾತ ಅಪ್ಪರಾಜೇಂದ್ರ ಒಡೆಯರು ಕ್ರಿ.ಶ. ೧೭೯೮ ಅಕ್ಟೋಬರ್ ೨೩ರಂದು ಅಬ್ಬಿಮಠಕ್ಕೆ ಕೊಟ್ಟಿದ್ದ ದಾನವನ್ನು ಮುಂದುವರಿಸಿ ಹೊಸಹಳ್ಳಿ ಗ್ರಾಮ, ಜಿಗಟಳ್ಳಿ ಗ್ರಾಮಗಳನ್ನು ದಾನವಾಗಿ ನೀಡಿದ ವಿವರಗಳು ಅಬ್ಬಿಮಠದ ಶಾಸನದಲ್ಲಿ ದಾಖಲಾಗಿವೆ.[೨೮]

ಹಾಸನ ಜಿಲ್ಲೆ, ಅರಕಲಗೂಡು ಜೋಡಿ ಮುತ್ತಿಗೆ ಗ್ರಾಮವನ್ನು ವಿರೂಪಾಕ್ಷ ಭಟ್ಟ, ಯಜ್ಞರಾಮದೀಕ್ಷಿತ, ಅಕ್ಷಂತಲ ನರಸಾವಧಾನಿಗಳಿಗೆ, ಮಹಾದೇವಭಟ್ಟ, ವೆಂಕಟೇಶ್ವರ ಭಟ್ಟ, ಬ್ರಹ್ಮೇಶ್ವರ ಭಟ್ಟ, ಚಿತಂಬರ ಭಟ್ಟ, ಹೇಮಾಪ್ರಭಟ್ಟರ ಪುತ್ರ ರಾಮವಧಾನಿ, ತಿಂಮಾವಧಾನಿ, ನಾರಾಯಣಭಟ್ಟ,

ರಂಗನಾಥ ಅಯ್ಯ, ತಿಂಮರಸೈಯನ ಮಗ ವೆಂಕಟ ಕೃಷ್ಣಭಟ್ಟ ಮುಂತಾದ ಬ್ರಾಹ್ಮಣರಿಗೆ ಬೇಲೂರು ನಾಯಕ ಕೃಷ್ಣಪ್ಪ ನಾಯಕನ ಮಗ ವೆಂಕಟಾದ್ರಿ ನಾಯಕನ ಪುತ್ರ ಕೃಷ್ಣಪ್ಪನಾಯಕನು ಮುತ್ತಿಗೆ ಗ್ರಾಮದ ಪ್ರತಿನಾಮವಾಗಿ ಕೃಷ್ಣಾಪುರ ಗ್ರಾಮವನ್ನು ಸಹಿರಂಣ್ಯೋದಕವಾದ ದಾನ ನೀಡಿದನು.[೨೯]

ಮಧುಗಿರಿಯ ತುಂಗೋಟಯ ಶಿಲಾ ಶಾಸನವೊಂದು ಮಧುಗಿರಿ ಮಹಾನಾಡ ಪ್ರಭುಗಳ ಕಾಲದ ಶಾಸನವಾಗಿದ್ದು ಇದು ಕ್ರಿ.ಶ. ೧೫೫೨ ಅಕ್ಟೋಬರ್ ೨೫ ಸಂಬಂಧಿಸಿದಂತೆ ಈ ಶಾಸನದಲ್ಲಿ ಮುಮ್ಮಡಿ ಚಿಕ್ಕಪ್ಪಗೌಡರಿಗೆ ಪುಣ್ಯವಾಗಲೆಂದು ಬಿಜ್ಜಾವರದ ಕೆಂಚಯ್ಯ ನಾಯಕರು ಸುಂಕದಿಂದ ಬರುವ ಆದಾಯವನ್ನು ರಂಗನಾಥ ದೇವಸ್ಥಾನಕ್ಕೆ ಧಾರಾಪೂರ್ವಕವಾಗಿ ಬಿಟ್ಟುಕೊಟ್ಟ ವಿವರಗಳು ದಾಖಲಾಗಿವೆ.[೩೦]

ಈ ಮೇಲಿನ ಶಾಸನೋಕ್ತ ವಿವರಗಳನ್ನು ಪರಿಶೀಲಿಸಿದಾಗ ನಾಯಕರು ತಮ್ಮ ಆಡಳಿತ ವ್ಯಾಪ್ತಿಯ ಭೂಮಿಯನ್ನು ಬ್ರಾಹ್ಮಣರಿಗೆ, ಮಠಗಳಿಗೆ, ಪಂಡಿತರುಗಳಿಗೆ, ದೇವಾಲಯಗಳಿಗೆ, ಅಗ್ರಹಾರಗಳಿಗೆ ಭೂಮಿಯನ್ನು ದಾನವಾಗಿ ನೀಡುತ್ತಿದ್ದು ಸ್ಪಷ್ಟವಾಗುತ್ತದೆ. ಹೀಗೆ ಭೂದಾನಗಳು ಹೆಚ್ಚಾದಂತೆಲ್ಲ ಊಳಿಗಮಾನ್ಯ ವ್ಯವಸ್ಥೆಯು ಹಾಗೂ ಅವರ ಅಡಿಯಲ್ಲಿ ಉಪ ಊಳಿಗಮಾನ್ಯ ವ್ಯವಸ್ಥೆಯು ವಿಜಯನಗರ ಮತ್ತು ವಿಜಯನಗರೋತ್ತರದಲ್ಲಿಯೂ ಮುಂದುವರಿಯಿತು.

ಚಿತ್ರದುರ್ಗ ನಾಯಕರಾದ ಭರಮಪ್ಪ ನಾಯಕ ಮತ್ತು ಹಿರೇಮೆದಕೇರಿ ನಾಯಕರ ಆಡಳಿತಾವಧಿಯಲ್ಲಿ ಚಿತ್ರದುರ್ಗಕ್ಕೆ ಭಾರೀ ಕ್ಷಾಮ ಮತ್ತು ಪ್ಲೇಗ್ ಬಂದು ಜನರು ಸಾಯಲಾರಂಭಿಸಿದರು. ಆಗ ನಾಯಕರು ಪ್ರಜೆಗಳಿಗೆ ಎಲ್ಲ ರೀತಿಯ ಅನುಕೂಲಗಳನ್ನು ಮಾಡಿಸಿಕೊಟ್ಟರು.[೩೧]

ಹಿರಿಯ ಕೆಂಪೇಗೌಡರ ಆಡಳಿತಾವಧಿಯಲ್ಲಿ ಭೀಕರವಾದ ಕ್ಷಾಮ ಬೆಂಗಳೂರಿನಲ್ಲಿ ತಲೆ ಎತ್ತಿತು.[೩೨] ಪಾಳೆಯಗಾರರು ಜನಪರವಾಗಿ ಆಡಳಿತ ನಡೆಸುತ್ತಿದ್ದರು ಎಂಬುದಕ್ಕೆ ಈ ಮೇಲಿನ ಪ್ರಸಂಗಗಳು ಸಾಕ್ಷಿಯಾಗುತ್ತವೆ.

ಉತ್ತಾರಾಧಿಕಾರಿಗಳ ಆಯ್ಕೆ

ನಾಯಕರಲ್ಲಿ ಅರಸೊತ್ತಿಗೆ ಅನುವಂಶಿಕವಾಗಿದ್ದು ಹಿರಿಯ ಮಗನಿಗೆ ತಂದೆಯ ನಂತರ ಅಧಿಕಾರ ಪ್ರಾಪ್ತವಾಗುತಿತ್ತು. ನಾಯಕರ ಕಾಲದ ಸಮಕಾಲೀನ ದಾಖಲೆಗಳನ್ನು ಪರಿಶೀಲಿಸಿದಾಗ ಈ ಅಂಶವು ಸ್ಪಷ್ಟವಾಗುತ್ತದೆ. ಯಲಹಂಕ, ಚನ್ನಪಟ್ಟಣ, ಗುಮ್ಮನಾಯಕನ ಪಾಳೆಯ ಚಿತ್ರದುರ್ಗ, ಹಾಗಲವಾಡಿ, ಬಿಜ್ಜಾವರ, ಮಧುಗಿರಿ, ಹರಪನಹಳ್ಳಿ, ಬಳ್ಳಾರಿ ಮೊದಲಾದ ನಾಯಕರುಗಳಲ್ಲಿ ತಂದೆಯ ನಂತರ ಹಿರಿಯ ಮಗನೇ ಪಟ್ಟಕ್ಕೆ ಬಂದಿರುವುದು ಸಮಕಾಲೀನ ಐತಿಹಾಸಿಕ ದಾಖಲೆಗಳಿಂದ ತಿಳಿದು ಬರುತ್ತದೆ. ಮೃತನಾದ ಪಾಳೆಯಗಾರನಿಗೆ ಮಗನಿಲ್ಲದೆ ಹೋದರೆ ಅಥವಾ ಮಕ್ಕಳು ಅನರ್ಹರೆಂದು ಸಾಬೀತುಗೊಂಡರೆ ಅಂತಹ ಕ್ಲಿಷ್ಟ ಸಂದರ್ಭಗಳಲ್ಲಿ ನಾಯಕರ ತಮ್ಮಂದಿರೋ, ಮೊಮ್ಮಕ್ಕಳು, ಚಿಕ್ಕಪ್ಪಂದಿರೋ, ಸೋದರ ಸಂಬಂಧಿಗಳಲ್ಲಿ ಅರ್ಹ ವ್ಯಕ್ತಿಗಳನ್ನು ಅಧಿಕಾರಕ್ಕೆ ತರಲಾಗುತ್ತಿತ್ತು. ಉದಾ: ಇಮ್ಮಡಿ ಕಸ್ತೂರಿ ರಂಗಪ್ಪ ನಾಯಕನ ಮರಣದ ನಂತರ ಆತನ ಪತ್ನಿ

ಗಂಡೋಬವ್ವ ನಾಗತಿಯು ತನ್ನ ಮಾನಸಪುತ್ರನಾದ ಜಾನುಕಲ್ಲಿನ ತೊದಲು ಭರಮಪ್ಪ ನಾಯಕನ ಪುತ್ರನಾದ ೫ ವರ್ಷದ ಬಾಲಕ ರಾಜಾ ವೀರಮದಕರಿ ನಾಯಕನನ್ನು ಅಧಿಕಾರಕ್ಕೆ ತಂದರು. ಹಾಗಲವಾಡಿಯ ಮುದ್ದವೀರಪ್ಪ ನಾಯಕನು ಮಕ್ಕಳಿಲ್ಲದೇ ಮರಣ ಹೊಂದಿದಾಗ ಅವನ ತಮ್ಮನಾದ ಪ್ರಸನ್ನ ರಾಮಪ್ಪ ನಾಯಕನು ಅಧಿಕಾರಕ್ಕೆ ಬಂದನು. ಚನ್ನಪಟ್ಟದ ಇಮ್ಮಡಿ ಜಗದೇವರಾಯನಿಗೆ ಮಾದನ ಕುಮಾರ ಜಗದೇವ ವೆಂಕಟಪತಿ ಎಂಬ ಮೂರು ಜನ ಮಕ್ಕಳಿದ್ದರೂ ಜಗದೇವರಾಯನ ಮರಣದ ನಂತರ ಅವರಲ್ಲಿ ಯಾರು ಅಧಿಕಾರಕ್ಕೆ ಬರಲಿಲ್ಲ. ಬದಲಾಗಿ ಪೆದ್ದಜಗದೇವರಾಯನ ತಮ್ಮ ಅಂಕುಶರಾಯ ಚನ್ನಪಟ್ಟಣದ ಪಾಳೆಯಗಾರನಾಗಿ ಕ್ರಿ.ಶ. ೧೬೦೦ರಲ್ಲಿ ಅಧಿಕಾರಕ್ಕೆ ಬಂದನು.[೩೩] ಕೆಳದಿಯಲ್ಲಿ ರಾಮರಾಜ ನಾಯಕನಿಗೆ ಇಬ್ಬರು ಗಂಡು ಮಕ್ಕಳಿದ್ದರೂ ಅವನ ಸಹೋದರ ಒಂದನೇ ವೆಂಕಟಪ್ಪನಾಯಕನು ವಾರಸುದಾರನಾದನು. ಅವನು ತನ್ನ ಮೊಮ್ಮಗ ವೀರಭದ್ರ ನಾಯಕನನ್ನು ತನ್ನ ವಾರಸುದಾರನನ್ನಾಗಿ ನೇಮಕ ಮಾಡಿದನು.[೩೪] ಹಂಡೆಯ ಪಾಳೆಯಗಾರನಾದ ದ್ಯಾವಪ್ಪನಿಗೆ ನಾಯಕ ಮಗನಾದ ಹಿರಿಯ ರಾಮಪ್ಪ ನಾಯಕನಿಗೆ ಪುತ್ರ ಸಂತಾನವಿಲ್ಲದಾಗ ಆತ ತಮ್ಮ ಚಿಕ್ಕರಾಮಪ್ಪ ನಾಯಕ ಅಧಿಕಾರಕ್ಕೆ ಬಂದನು. ಆತನಿಗೆ ಪುತ್ರ ಸಂತಾನವಿಲ್ಲದ ಕಾರಣ ಆತನ ತಮ್ಮ ಹನುಮಪ್ಪ ನಾಯಕನು ಅಧಿಕಾರಕ್ಕೆ ಬಂದನು.[೩೫] ಅರ್ಹರಾದ ವಾರಸುದಾರರಿಲ್ಲದಿದ್ದಾಗ ವಿಧವೆ ರಾಣಿಯೋ ಅಥವಾ ಗಂಡ ಬದುಕಿದ್ದು ಕಾರಣಾಂತರಗಳಿಂದ ಸಂಸ್ಥಾನ ಪಾಲಿಸಲು ಸಾಧ್ಯವಾಗದಿದ್ದಾಗ ಆತನ ಪರವಾಗಿ ಆತನ ಪತ್ನಿಯರು ಆಡಳಿತ ನಡೆಸಿರುವ ನಿದರ್ಶನಗಳಿವೆ. ಉದಾಹರಣೆಗೆ ಕೆಳದಿಯ ಚೆನ್ನಮ್ಮಾಜಿಯು ತನ್ನ ಪತಿ ಒಂದನೇ ಸೋಮಶೇಖರಪ್ಪ ನಾಯಕನ ಮರಣದ ನಂತರ ಅಧಿಕಾರವನ್ನು ನಿಭಾಯಿಸಿದಳು. ಚಿತ್ರದುರ್ಗದ ಎರಡನೇ ಕಸ್ತೂರಿ ರಂಗಪ್ಪನಾಯಕನ ಮರಣದ ನಂತರ ರಾಜಾ ಮದಕರಿ ನಾಯಕನು ಅಧಿಕಾರ ವಹಿಸಿಕೊಳ್ಳುವವರೆಗೂ ಗಂಡೋಬವ್ವ ನಾಗತಿಯು ರಾಜ್ಯದ ಎಲ್ಲ ಆಡಳಿತ ಸೂತ್ರಗಳನ್ನು ನಿಭಾಯಿಸಿದಳು. ಗುಮ್ಮನಾಯಕ ಪಾಳೆಯಗಾರ ನರಸಿಂಹನಾಯಕನು ರೋಗಗ್ರಸ್ಥನಾದಾಗ ಆತನ ಪತ್ನಿ ರಾಮಕ್ಕ ನಾಯಕಿ ಪಾಳೆಯಪಟ್ಟಿನ ಎಲ್ಲ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದಳು. ರಾಮಕ್ಕ ನಾಯಕಿ ದಕ್ಷತೆಯಿಂದ ಆಡಳಿತ ನಿರ್ವಹಿಸಿದಳು. ಪ್ರಜೆಗಳಿಗೆ ಕೃಷಿಕರಿಗೆ ಅನುಕೂಲವಾಗುವಂತೆ ದೊಡ್ಡ ದೊಡ್ಡ ಜಲಾಶಯಗಳನ್ನು ನಿರ್ಮಿಸಿ, ರಾಮಕ್ಕ ನಾಯಕಿ ಪ್ರಜಾ ಹಿತ ಸಾಧಕಳಾಗಿ ಪ್ರಸಿದ್ಧಳಾದಳು.[೩೬]

ನಾಯಕರು ತಮಗೆ ಪುತ್ರ ಸಂತಾನವಾಗದಿದ್ದಲ್ಲಿ ಹಿಂದೂ ಧರ್ಮಾಧ ಅನ್ವಯ ದತ್ತು ಸ್ವೀಕಾರ ಮಾಡಿ ತಮ್ಮ ವಾರಸುದಾರರೆಂದು ಘೋಷಿಸುತ್ತಿದ್ದರು. ಈ ದತ್ತು ಪ್ರಕ್ರಿಯೆಯು ನಾಯಕರ ರಕ್ತ ಸಂಬಂಧಿಕರಲ್ಲಿಯೇ ನಡೆಯುತ್ತಿತ್ತು. ಉದಾ: ಬಳ್ಳಾರಿಯ ದ್ಯಾವಪ್ಪ ನಾಯಕನ ಮೂರು ಜನ ಮಕ್ಕಳಿಗೂ ಸಂತಾನವಿರದ ಕಾರಣ ಆತನ ಕಿರಿಯ ಹೆಂಡತಿ ನೀಲಮ್ಮ ನಾಗತಿ ಹಂಡೆ ವಂಶದವರಾದ ಬಾಲದ ಹನುಮಪ್ಪ ನಾಯಕನ ಹಿರಿಯ ಮಗ ಅಂಕುಶರಾಯನ ವಂಶದವನಾದ ರಾಮಪ್ಪ ನಾಯಕನನ್ನು ದತ್ತು ತೆಗೆದುಕೊಂಡಳು. ಅದರಲ್ಲಿ ಹಿರಿಯವನಾದ

ರಾಮಪ್ಪನಿಗೆ ಪಟ್ಟ ಕಟ್ಟಿದಳು.[೩೭] ಚಿತ್ರದುರ್ಗದ ನಾಯಕ ಇಮ್ಮಡಿ ಮದಕರಿನಾಯಕನು ಪುತ್ರ ಸಂತಾನವಾಗದಾಗ ಓಬಣ್ಣ ನಾಯಕನನ್ನು ದತ್ತು ತೆಗೆದುಕೊಂಡನು. ಕ್ರಿ.ಶ. ೧೬೭೪ರಲ್ಲಿ ಇಮ್ಮಡಿ ಮದಕರಿಯು ಮರಣ ಹೊಂದಿದಾಗ ಅವನ ಸಾಕುಮಗ ಓಬಣ್ಣ ನಾಯಕನು ಅಧಿಕಾರಕ್ಕೆ ಬಂದನು.[೩೮] ಕಂಠೀರವ ನರಸರಾಜ ಒಡೆಯರು ತಮ್ಮ ಸಂಬಂಧಿ ದೇವರಾಜ ಒಡೆಯರನ್ನು ದತ್ತಕ ಪಡೆದುಕೊಂಡರು. ಕೆಳದಿಯ ಚೆನ್ನಮ್ಮಾಜಿಯು ಬಸವಪ್ಪನಾಯಕನನ್ನು ದತ್ತು ಸ್ವೀಕರಿಸಿ ಮೊದಲನೆಯ ಹಿರಿಯ ಬಸಪ್ಪನಾಯಕ ಎಂಬ ಹೆಸರಿನಿಂದ ಅವರನ್ನು ತನ್ನ ವಾರಸುದಾರನೆಂದು ಘೋಷಿಸಿದಳು.[೩೯] ಹೀಗೆ ದತ್ತು ಸ್ವೀಕಾರಗಳು ನಾಯಕರ ಕಾಲದಲ್ಲಿ ಹಿಂದೂ ಧರ್ಮದ ಅಡಿಯಲ್ಲಿ ಪದ್ಧತಿಗಳಿಗೆ ಅನುಸಾರವಾಗಿ ಆಚರಣೆಯಲ್ಲಿದ್ದವು ಎಂದು ಹೇಳಬಹುದು.

ಯುವರಾಜನ ಪದವಿ ಮತ್ತು ಪಟ್ಟಾಭಿಷೇಕ

ವಿಜಯನಗರ ಕಾಲದ ಆಡಳಿತ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋದ ನಾಯಕರು ವಿಜಯನಗರ ಸಾಮ್ರಾಜ್ಯದಲ್ಲಿನ ಯುವರಾಜ ಪದವಿಯನ್ನು ಹಾಗೆಯೇ ಮುಂದುವರಿಸಿದರು. ನಾಯಕರು ತಮ್ಮ ಪಾಳೆಯ ಪಟ್ಟುಗಳ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಂತೆ ಆಡಳಿತದಲ್ಲಿ ಪೂರ್ವಭಾವಿಯಾಗಿ ತರಬೇತಿಯನ್ನು ನೀಡಲು ಯುವರಾಜರನ್ನು ತಯಾರು ಮಾಡುತ್ತಿದ್ದರು. ಯುವರಾಜರನ್ನಾಗಿ ಸಾಮಾನ್ಯವಾಗಿ ತಮ್ಮ ಮಕ್ಕಳನ್ನು, ಸಹೋದರರನ್ನು, ಮೊಮ್ಮಕ್ಕಳನ್ನು ಈ ಪದವಿಯಲ್ಲಿ ನಿಯಮಿಸುತ್ತಿದ್ದರು. ಕೆಳದಿ, ಚಿತ್ರದುರ್ಗ, ಗುಮ್ಮನಾಯಕ ಪಾಳೆಯ ಮತ್ತು ಹಂಡೆ ಮುಂತಾದ ಸಂಸ್ಥಾನಗಳಲ್ಲಿ ಈ ಯುವರಾಜನ್ನು ನೇಮಿಸುವ ಪದ್ಧತಿಯಿತ್ತು.

ಪಟ್ಟಾಭಿಷೇಕವೆನ್ನುವುದು ಅತ್ಯಂತ ವೈಭವಯುತವಾಗಿ ನಡೆಯುತ್ತಿತ್ತು. ಪ್ರಜೆಗಳು, ಸಮಕಾಲೀನ ಪಾಳೆಯಗಾರರು ಹಾಗೂ ರಾಜಗುರುಗಳ ಸಮ್ಮುಖದಲ್ಲಿ ಪಟ್ಟಾಭಿಷೇಕ ವಿಧಿವತ್ತಾಗಿ ನಡೆಸಲಾಗುತ್ತಿತ್ತು. ಪಟ್ಟಾಭಿಷೇಕವು ರಾಜನ ಅರಮನೆಯಲ್ಲಿ ರಾಜ ಗಾಂಭೀರ್ಯ ಮತ್ತು ಆಡಂಬರವಾಗಿ ನಡೆಯುತ್ತಿತ್ತು. ಪಟ್ಟಾಭಿಷೇಕವನ್ನು ಒಂದು ದೊಡ್ಡ ಉತ್ಸವದಂತೆ ನಡೆಸಲಾಗುತ್ತಿತ್ತು. ಪಟ್ಟಾಭಿಷೇಕದ ನಂತರ ಸಂಸ್ಥಾನ ಸಮಸ್ತ ಆಡಳಿತ ಸೂತ್ರವೆಲ್ಲವೂ ನೂತನ ರಾಜನ ಕೈಯಲ್ಲಿರುತ್ತಿತ್ತು. ಚಿತ್ರದುರ್ಗದ ಪ್ರಸಿದ್ಧ ದೊರೆ ಬಿಚ್ಚುಗತ್ತಿ ಭರಮಣ್ಣ ನಾಯಕನಿಗೆ ಮುರುಘರಾಜೇಂದ್ರ ಶ್ರೀಗಳು ಪಟ್ಟ ಕಟ್ಟಿ ಅಧಿಕಾರಕ್ಕೆ ಬರಲು ಕಾರಣಕರ್ತರಾದರು. ಬಿಜ್ಜಾವರದಲ್ಲಿ ಗುರು ಜೋಳಬಸವೇಶ್ವರರು ಸಪ್ಪೆಗೌಡನಿಗೆ ಪಟ್ಟ ಕಟ್ಟಿ ಮುಮ್ಮಡಿ ಚಿಕ್ಕಪ್ಪಗೌಡನೆಂದು ಕರೆದರು.

ಮಂತ್ರಲೋಚನೆ ಸಭೆ

ಪಾಳೆಯಗಾರರ ಕಾಲದಲ್ಲಿ ಮಂತ್ರ ಪರಿಷತ್ತು ಅಥವಾ ಮಂತ್ರಿಮಂಡಳಿ ರಾಜ್ಯಾಡಳಿತದ ಪ್ರಮುಖ ಆಧಾರ ಸ್ತಂಭವಾಗಿತ್ತು. ಬಹುತೇಕ ಪಾಳೆಯಗಾರರ ಸಂಸ್ಥಾನಗಳಲ್ಲಿ ಬ್ರಾಹ್ಮಣರೇ ಮಂತ್ರಿ ಪರಿಷತ್ತಿನ ಪ್ರಧಾನಿಗಳಾಗಿರುತ್ತಿದ್ದರು. ಆಡಳಿತಕ್ಕೆ ಸಂಬಂಧಿಸಿದಂತೆ ಪ್ರಮುಖ ತೀರ್ಮಾನಗಳನ್ನು ಮಂತ್ರಿಲೋಚನಾ ಸಭೆಯಲ್ಲಿ ನಿರ್ಣಯಿಸಲಾಗುತ್ತಿತ್ತು. ಈ ಮಂತ್ರಲೋಚನೆಯ ಸದಸ್ಯರನ್ನು

ರಾಜನೇ ನೇಮಕ ಮಾಡುತ್ತಿದ್ದನು. ಈ ಸಭೆಯಲ್ಲಿ ರಾಜಗುರುಗಳು, ಪ್ರಧಾನಿಗಳು, ಬಲನಾಯಕರು, ಗುರಿಕಾರರು, ರಾಹುತದವರು, ಠಾಣ್ಯದ ಸೇರುವೆಗಾರರು, ಸಾಮಾಜಿಕರು, ಪಟ್ಟಣಸೆಟ್ಟಿಗಳು, ಪೇಟೆ ಸೆಟ್ಟಿಗಳು ಮತ್ತು ಪ್ರಮುಖ ವರ್ತಕ ಸಮುದಾಯದ ಮುಖ್ಯಸ್ಥರು ಸದಸ್ಯರಾಗಿರುತ್ತಿದ್ದರು.[೪೦]

ಈ ಸಭೆಯಲ್ಲಿ ನಡೆಯುತ್ತಿದ್ದ ಚರ್ಚೆಗಳು ಮತ್ತು ತೀರ್ಮಾನಗಳು ಸಂಸ್ಥಾನ ರಾಜಕೀಯ ಏಳು–ಬೀಳುಗಳ ಮೇಲೆ ಮಹತ್ತರವಾದ ಪರಿಣಾಮವನ್ನು ಬೀರುತ್ತಿದ್ದವು. ಉದಾಹರಣೆಗೆ: ಚಿತ್ರದುರ್ಗ ಸಂಸ್ಥಾನದ ಮಂತ್ರಲೋಚನೆಯ ಸಭೆಯು ಜಾನಕಲ್ಲು ಹೊಸದುರ್ಗದ ಸೇನಾಧಿಪತಿಯಾಗಿದ್ದ ಹಿರೇಮದಕರಿ ನಾಯಕನ ತಮ್ಮ ದಂಡಿನ ಜಂಪಣ್ಣ ನಾಯಕನ ಮಗ ಕುಮಾರ ಭರಮಪ್ಪನಿಗೆ ಪಟ್ಟ ಕಟ್ಟಿಸಿದರು.[೪೧] ಮತ್ತೊಮ್ಮೆ ಹೈದರಾಲಿಯ ಸಂಗಡ ಯುದ್ಧ ತೊಡಗಿದ ಕಾಲದಲ್ಲಿ ಮದಕರಿ ನಾಯಕನು ಮಂತ್ರಾಲೋಚನೆಯ ಸಭೆಯನ್ನು ಕರೆದು ರಾಜ್ಯದ ವಿಪತ್ತನ್ನು ವಿವರಿಸಿದಾಗ ಒಂದು ವರ್ಷದವರೆಗೂ ಆಗುವ ಯುದ್ಧದ ವೆಚ್ಚವನ್ನು ಭರಿಸಲು ಪ್ರಮುಖರು ಒಪ್ಪಿಗೆ ನೀಡಿದರು. ದೊರೆತನ ಬದಲಾಯಿಸಬೇಕಾದರೂ ಪ್ರಜೆಗಳ ಸಮ್ಮುಖದಲ್ಲಿ ಮಂತ್ರಾಲೋಚನೆ ನಡೆಸಿ ಚಿತ್ರದುರ್ಗ ನಾಯಕರು ಕಾರ್ಯೋನ್ಮುಖರಾಗುತ್ತಿದ್ದರು.[೪೨]

ಕೆಳದಿಯ ಅರಸರ ಸಂಸ್ಥಾನದಲ್ಲಿಯೇ ಮಂತ್ರಾಲೋಚನೆ ಸಭೆಯಿತ್ತು. ರಾಜಗುರು, ಪ್ರಧಾನಿ, ಸರ್ವಾಧಿಕಾರಿ, ದಳವಾಯಿ, ಬೊಕ್ಕಸದ ಮಂತ್ರಿ, ಸಮಾಜದ ಗಣ್ಯ ವ್ಯಕ್ತಿಗಳು ಈ ಮಂಡಳಿಯ ಸದಸ್ಯರಾಗಿರುತ್ತಿದ್ದರು. ಈ ಮಂಡಳಿಯ ಕೇವಲ ಸಲಹಾ ಮಂಡಳಿಯಾಗಿ ಕಾರ್ಯನಿರ್ವಹಿಸಿದರೂ ಈ ಮಂಡಳಿಯ ತೀರ್ಮಾನಗಳನ್ನು ರಾಜ ಗೌರವದಿಂದ ಸ್ವೀಕರಿಸುತ್ತಿದ್ದರು.

೫.೨ ಪೌರಾಡಳಿತ

ನಾಯಕರ ಸಂಸ್ಥಾನಗಳಲ್ಲಿ ಪೌರಾಡಳಿತವನ್ನು ನೋಡಿಕೊಳ್ಳಲು ಒಂದು ಅಧಿಕಾರಿಗಳ ಶ್ರೇಣಿಯಿತ್ತು. ನಾಯಕರ ಆಸ್ಥಾನದಲ್ಲಿದ್ದ ಅಶ್ವಶಾಲೆ, ಗಜಶಾಲೆ, ಬೊಕ್ಕಸ, ಆಸ್ಥಾನ, ಕೋಟೆಯ ಮೇಲ್ವಿಚಾರಣೆಯನ್ನು ಗಮನಿಸಲು ಅಧಿಕಾರಿಗಳನ್ನು ನೇಮಕ ಮಾಡಲಾಗುತ್ತಿತ್ತು. ಇವರ ಕಾಲದ ಪ್ರಮುಖ ಪೌರಾಡಳಿತ ಅಧಿಕಾರಿಗಳೆಂದರೆ (ಎ) ಬೊಕ್ಕಸದ ಅಧಿಕಾರಿ: ಸಾಮ್ರಾಜ್ಯದ ಖಜಾನೆಯ ಜವಾಬ್ದಾರಿಯನ್ನು ಹೊತ್ತವನು. (ಬಿ) ತೆರಿಗೆ ಸಂಗ್ರಹ ಅಧಿಕಾರಿ: ಈತ ಸಂಸ್ಥಾನ ಕೃಷಿ ಉತ್ಪನ್ನದ ಮೇಲೆ ತೆರಿಗೆ ವಿಧಿಸಿ ವಸೂಲಿ ಮಾಡುವವನು (ಸಿ) ಓಲೇಕಾರ: ಪತ್ರಗಳನ್ನು ರವಾನೆ ಮಾಡುವ ಅಧಿಕಾರಿ (ಡಿ) ಠಾಣ್ಯದ ಗುರಿಕಾರ: ಪೌರ ಮತ್ತು ಸೈನ್ಯ ಇಲಾಖೆಗಳ ಜವಾಬ್ದಾರಿ ಹೊತ್ತ ಅಧಿಕಾರಿ (ಇ) ನಗರದ ಮುಖ್ಯಸ್ಥ: ಈತ ಸಂಸ್ಥಾನದ ಮುಖ್ಯ ಜವಾಬ್ದಾರಿ ಹೊತ್ತಿದ್ದನು. ಪಟ್ಟಣದ ಆಡಳಿತವನ್ನು ಸಕ್ರಿಯವಾಗಿ ನಡೆಸಿಕೊಂಡು ಹೋಗುವುದು ಈತನ ಜವಾಬ್ದಾರಿಯಾಗಿತ್ತು. ಇವರ ಜೊತೆಗೆ ಶಾನುಭೋಗ, ರೆಡ್ಡಿ, ತೋಟಿ, ತಳವಾರ ವ್ಯವಸ್ಥೆ, ಇನಾಮ ನೀಡಿಕೆ, ಸುಂಕ ವಸೂಲಿ ದಾನಾದಿ ಕಾರ್ಯಗಳು, ರಾಯಸದವರು ಶಿಲ್ಪಿಗಳು, ಅಕ್ಕಸಾಲಿಗರು, ಭಟ್ಟಂಗಿ ಮೊದಲಾದ ಖಾಸ

ಅಧಿಕಾರಿಗಳು ಇರುತ್ತಿದ್ದರು.[೪೩] ಈ ಎಲ್ಲ ಅಧಿಕಾರಿಗಳು ರಾಜನ ನಿರ್ದೇಶನದಂತೆ ಕಾರ್ಯ ನಿರ್ವಹಿಸಬೇಕಾಗಿತ್ತು.

೫.೩ ನ್ಯಾಯಾಡಳಿತ

ನಾಯಕರ ಕಾಲದಲ್ಲಿ ಕಾನೂನು ಮತ್ತು ಶಾಂತಿ ಸುವ್ಯವಸ್ಥೆಯ ಪಾಲನೆಗೆ ಹೆಚ್ಚು ಗಮನ ನೀಡಲಾಗುತ್ತಿತ್ತು. ಠಾಣಾದಾರ, ಗುರಿಕಾರ, ಶಿರಸ್ತೇದಾರ, ಗುಮಾಸ್ತರು, ಹೋಬಳಿದಾರರು, ಓಲೇಕಾರರು, ಕೊಂಬಿನವರು, ತಮ್ಮಟೆಯವರು ಪೋಲೀಸ್ ಕಾರ್ಯಚರಣೆಯನ್ನು ಮಾಡುತ್ತಿದ್ದರು.

ನಾಯಕರ ಆಸ್ಥಾನ ಅಥವಾ ಹುಜೂರಿನಲ್ಲಿ ನಡೆಯುತ್ತಿದ್ದ ನ್ಯಾಯ ತೀರ್ಮಾನ ಸಂದರ್ಭಗಳಲ್ಲಿ ಮುಖ್ಯ ನ್ಯಾಯಾಧೀಶನ ಸ್ಥಾನದಲ್ಲಿರುತ್ತಿದ್ದ ಅರಸನೊಡನೆ ಆತನ ಪ್ರಧಾನರು, ದಳವಾಯಿಗಳು, ಕುಮಾರರು, ಅಳಿಯಂದಿರು, ಮೈದುನರು, ಪಾರುಪತ್ತೆಗಾರರು, ಗುರಿಕಾರರು, ಊಳಿಗದವರು, ಸಾಮಾಜಿಕರು, ಸಮಸ್ತರು ಮೊದಲಾದವರು ಉಪಸ್ಥಿತರಿರುತ್ತಿದ್ದರು.[೪೪]

ಈ ನಾಯಕ ಅರಸರ ಕಾಲದಲ್ಲಿನ ಶಿಕ್ಷೆಗಳು ಸಹ ವಿಜಯನಗರ ಕಾಲದಲ್ಲಿದ್ದ ಶಿಕ್ಷಾ ಪದ್ಧತಿಯಂತಿಯೇ ಇದ್ದುದನ್ನು ನೋಡಬಹುದು. ಸಿವಿಲ್ ಮತ್ತು ಕ್ರಿಮಿನಲ್ ಅಪರಾಧಗಳಿಗೆ ತಕ್ಕಂತೆ ಶಿಕ್ಷೆಯು ನಿರ್ಧಾರವಾಗುತ್ತಿತ್ತು. ರಾಜದ್ರೋಹ ಅಪರಾಧ ಮಾಡಿದವರಿಗೆ ಅರಸನ ಅನುಚಿತ ಮಾತುಗಳನ್ನಾಡುವವರಿಗೆ, ದುವರ್ತನೆ ತೋರಿದವರಿಗೆ ಕಠಿಣ ಶಿಕ್ಷೆಗಳನ್ನು ವಿಧಿಸಲಾಗುತ್ತಿತ್ತು. ಉದಾಹರಣೆಗೆ ಗಡಿಪಾರು, ಕಾಲುಛೇದನ, ಗಲ್ಲುಚಡಾಪು, ತಲೆ ಹೊಯ್ಯುವುದು (ಶಿರಚ್ಛೇದನ) ಮೂಗು ಕೊಯ್ಯುಯುವುದು, ಹಲ್ಲುಗಳನ್ನು ಕೀಳಿಸುವುದು ಮುಂತಾದ ಶಿಕ್ಷೆಗಳು ರೂಢಿಯಲ್ಲಿದ್ದವು.[೪೫]

ನಾಯಕರ ಕಾಲದಲ್ಲಿ ನ್ಯಾಯಮಂಡಳಿಯಾಗಿ ಪ್ರತಿಯೊಂದು ಕಂದಾಯದ ಗ್ರಾಮಕ್ಕೆ ಪಂಚಾಯ್ತಿ ಕಟ್ಟೆಯಿದ್ದು ಇದು ಪ್ರಮುಖವಾದ ಕಾರ್ಯವನ್ನು ನಿರ್ವಹಿಸುತ್ತಿತ್ತು. ಈ ಪಂಚಾಯ್ತಿ ಕಟ್ಟೆಯ ಸದಸ್ಯರಾಗಿ ಗೌಡ (ಅಧ್ಯಕ್ಷ) ಪೂಜಾರಿ, ಶ್ಯಾನುಭೋಗ, (ಕುಲಕರ್ಣಿ) ಬಣಕಾರ, ಶೆಟ್ಟಿ, ಹುಂಡೇಕಾರ, ತಳವಾರ ಸದಸ್ಯರಾಗಿರುತ್ತಿದ್ದರು. ಗ್ರಾಮಗಳಲ್ಲಿ ಉಂಟಾದ ಜಗಳಗಳು ಮುಖ್ಯ ಗ್ರಾಮದ ಕಟ್ಟೆಮನೆಯಲ್ಲಿಯೇ ತೀರ್ಮಾನವಾಗುತ್ತಿದ್ದವು. ಕಟ್ಟೆಮನೆ ಗೌಡರು ಮತ್ತು ಸದಸ್ಯರು ಗ್ರಾಮದ ಒಂದು ಅರಳೇಕಟ್ಟೆ ಇಲ್ಲವೇ ದೇವರಗುಡಿ ಕಟ್ಟೆಯ ಮೇಲೆ ಕುಳಿತು ನ್ಯಾಯ ನಿರ್ಣಯ ಮಾಡುತ್ತಿದ್ದರು.[೪೬] ಇಲ್ಲಿ ಬಗೆಹರಿಯದ ವ್ಯಾಜ್ಯಗಳನ್ನು ನಾಯಕರು ತಮ್ಮ ಸಂಸ್ಥಾನಗಳಲ್ಲಿ ಬಗೆಹರಿಸುತ್ತಿದ್ದರು.

ಗುಡಿಗಂಟಿ ಸಂಸ್ಥಾನದ ನ್ಯಾಯಾಡಳಿತ ನಿರ್ವಹಿಸಲು ಪ್ರತ್ಯೇಕ ಇಲಾಖೆಯೇ ರಚನೆಗೊಂಡಿತು. (೧) ಮೌಲ್ (೨) ಫೌಜುದಾರಿ (೩) ದಿವಾನಿ (೪) ಪೋಲೀಸ್ ಈ ವಿಭಾಗಗಳಿಗೆ ಪ್ರತ್ಯೇಕವಾದ ಕೆಲಸ ಕಾರ್ಯಗಳಿರುತ್ತಿದ್ದವು. ಹೈದರಾಬಾದ್ ನಿಜಾಮನ ಆದೇಶದ ಮೇರೆಗೆ ನಿರ್ಮಾಣಗೊಂಡ ಅದಾಲತ್ ನ್ಯಾಯಾಲಯವು ಇಂದಿನ ಅರಮನೆಯ ಪ್ರಮುಖ ಭಾಗದಲ್ಲಿದೆ.[೪೭] ಈ ನ್ಯಾಯಾಲಯದಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ತೀರ್ಮಾನ ಮಾಡಲಾಗುತ್ತಿತ್ತು.

ನಾಯಕರ ಕಾಲದ ಕೆಲವು ವ್ಯಾಜ್ಯಗಳನ್ನು ಉಲ್ಲೇಖಿಸುವುದಾದರೆ ಇಮ್ಮಡಿ ಕೆಂಪೇಗೌಡನು ತಮ್ಮ ಸಂಪ್ರದಾಯದ ಕನ್ಯೆಯರಲ್ಲಿ ಕುಲ ಪರಂಪರೆಯಾಗಿ ಬಂದ ಕಿರಿಯ ವಯಸ್ಸಿನ ಹೆಣ್ಣು ಮಕ್ಕಳು ತಮ್ಮ ಮದುವೆಯ ಸಂದರ್ಭದಲ್ಲಿ ಹರಕೆಯ ವಿಧಿಯಲ್ಲಿ ತಮ್ಮ ಕಿರು ಬೆರಳುಗಳನ್ನು ಕತ್ತರಿಸಿಕೊಳ್ಳುವ ಪದ್ಧತಿಯಿತ್ತು. ಇಂಥ ದೇಹದಂಡನೆಯ ಹಿಂಸಾತ್ಮಕ ಅಮಾನವೀಯ ಪದ್ಧತಿಯನ್ನು ನಿಷೇಧ ಮಾಡುವಂತೆ ಆಜ್ಞೆ ಹೊರಡಿಸಿದನು.[೪೮]

ಮತ್ತೋಡು ಪಾಳೆಯಗಾರರ ಕಾಲದ ಕ್ಷೌರಿಕರ ವ್ಯಾಜ್ಯವೊಂದು ಶಾಸನೋಕ್ತವಾಗಿದ್ದು ಎಪಿಗ್ರಾಫಿಯಾ ಕರ್ನಾಟಿಕಾ ಶಾಸನ ಸಂಪುಟ ೧೧ರಲ್ಲಿ ಪ್ರಕಟಗೊಂಡಿದೆ. ಮತ್ತೋಡಿನ ಕ್ಷೌರಿಕರು ತಾವು ಕಟ್ಟಬೇಕಾಗಿದ್ದ ೧೦೦೦ ವರಹ ವೃತ್ತಿ ತೆರಿಗೆಯನ್ನು ವಜಾ ಮಾಡಿ ಮುಂದೆಯೂ ತೆರಿಗೆ ವಿನಾಯ್ತಿ ನೀಡಬೇಕೆಂದು ರಾಜನಲ್ಲಿ ಕೋರಿಕೆಯನ್ನು ಮಂಡಿಸಿದ್ದರು ಹಾಗೂ ನ್ಯಾಯ ತೀರ್ಮಾನಕ್ಕಾಗಿ ನಿರೀಕ್ಷಿಸಿದ್ದರು. ಅದೇ ವರ್ಷ ಚಿನ್ನದ ಗಿರಿಯಪ್ಪ ನಾಯಕನು ತನ್ನ ವಿವಾಹದ ಶುಭ ಸಂದರ್ಭದಲ್ಲಿ ಕ್ಷೌರಿಕರ ಮನವಿಯನ್ನು ಪರಿಗಣಿಸಿ ತೆರಿಗೆಮನ್ನಾ ಘೋಷಿಸಿ ಶಾಸನ ಹೊರಡಿಸಿದನು. ಈ ರೀತಿಯ ತೆರಿಗೆಯ ವಿನಾಯ್ತಿಗಳು ಕೂಡ ನಾಯಕರ ನ್ಯಾಯ ತೀರ್ಮಾನದ ವ್ಯಾಪ್ತಿಗೆ ಒಳಪಡುತ್ತಿದ್ದವು.

ಯಲಹಂಕ ನಾಡಪ್ರಭುಗಳ ಕಾಲದ ಜಾತಿ ಸಂಘರ್ಷವನ್ನು ವಿವರಿಸುವ ವ್ಯಾಜ್ಯವೊಂದು ಶಾಸನೋಕ್ತವಾಗಿದ್ದು ರಾಮನಗರ ಜಿಲ್ಲೆ ಕನಕನಪುರ ತಾಲ್ಲೂಕಿನ ಭೂತನಹಳ್ಳಿಯಲ್ಲಿ ದೊರೆತಿದೆ. ಕ್ರಿ.ಶ. ೧೭೦೦ ಅವಧಿಯ ಈ ಶಾಸನವು ಮಡಿವಾಳರು ಮತ್ತು ಕ್ಷೌರಿಕರ ನಡುವೆ ನಡೆದ ಜಾತಿ ಪಂಚಾಯಿತಿಯ ವಿವರಗಳನ್ನು ಉಲ್ಲೇಖಿಸುತ್ತದೆ. ಭೂತನಹಳ್ಳಿಯ ಚೆನ್ನಿಗರಾಯ ದೇವಾಲಯದ ಮುಂಭಾಗ ಕ್ಷೌರಿಕರು ತಮ್ಮ ವಾಲಗಕ್ಕೆ ಮಲ್ಲಿಗೆ ಹೂವನ್ನು ಅಲಂಕರಿಸಿ ಹಾಗೂ ಕೊರಳಿಗೆ ಮಲ್ಲಿಗೆ ಹಾರ ಹಾಕಿಕೊಂಡು ವಾಲಗ ನುಡಿಸುತ್ತಿರುತ್ತಾರೆ. ಆಗ ಮಡಿವಾಳರ ಚೆನ್ನಶೆಟ್ಟಿ ಎಂಬುವನು ಅದಕ್ಕೆ ಆಕ್ಷೇಪ ವ್ಯಕ್ತಪಡಿಸುತ್ತಾನೆ. ವಾದ–ವಿವಾದಗಳೇರ್ಪಟ್ಟು ಅಂತಿಮವಾಗಿ ಈ ವ್ಯಾಜ್ಯ ನಾಡಸಭೆಯ ಮೆಟ್ಟಿಲೇರುತ್ತದೆ. ಅಲ್ಲಿ ವಿವಾದ ಬಗೆಹರಿಯುವುದಿಲ್ಲ. ಅಂತಿಮ ತೀರ್ಪಿಗಾಗಿ ಕಂಚಿಯ ನ್ಯಾಯಪೀಠಕ್ಕೆ ಮೇಲ್ಮನವಿ ಸಲ್ಲಿಸಲಾಗುತ್ತದೆ. ಆಗ ಕಂಚಿಯ ನ್ಯಾಯಪೀಠಾಧಿಪತಿಗಳು ಶಾಸನದ ಪ್ರತಿಯನ್ನು ತೆಗೆದು ಓದಿ ತೀರ್ಪು ನೀಡುತ್ತಾರೆ. ಈ ಶಾಸನದಲ್ಲಿ "ಕೆಂಪಿನ ಗಣಗಲ ಹೂ, ಕೆಂಪಿನ ಹೊಡಪು ಸಾಸೆ ಕಟ್ಟಡೆ ಬಾಗಲು" ಹಜಾಮರಿಗೆ ಸಲ್ಲುತ್ತದೆ ಎಂದೂ ಮಡಿವಾಳರಿಗೆ ಮಲ್ಲಿಗೆ ಹೂ ಬಿಳಿ ಗಣಗಲು ಹೂ ಬಿಳಿಛತ್ರಿ ಬಿಳಿ ಹೊಡಪು ಮಲ್ಲಿಗೆ ಮಹಾದೇವಿಗೆ ಸಲ್ಲುವುದೆಂದು ದಾಖಲಾಗಿರುತ್ತದೆ. ಇದನ್ನು ಭೇದ ಮಾಡಿದರೆ ಕುಲಕ್ಕೆ ಹೊರಗೆಂದು ತಿಳಿಸಲಾಗುತ್ತದೆ. ತೀರ್ಪಿನ ಹಿನ್ನೆಲೆಯಲ್ಲಿ ಕ್ಷೌರಿಕರು ತಮ್ಮ ವಿರುದ್ಧ ಮಂಡಿತವಾದ ನ್ಯಾಯಕ್ಕೆ ಬದ್ಧರಾಗಿ ದೇಶ, ನಾಡಿನವರಿಗೆ ಹಾಗೂ ಕುಲಕ್ಕೆ ದಂಡವನ್ನು ಕಟ್ಟುತ್ತಾರೆ.[೪೯]

ಮತ್ತೋಡು ನಾಯಕರ ಭೂವಿವಾದವೊಂದು ಇಂದಿಗೂ ಮನೆಮಾತಾಗಿದೆ. ಭಟ್ಟರಹಳ್ಳಿಯ ಊರುಗೌಡನಿಗೂ ಅಲ್ಲಿನ ಕೆರೆಗೌಡನಿಗೂ ಅ ಪ್ರದೇಶದ ಹೂವಿನಗದ್ದೆ ಮತ್ತು ಮಡಿಲಗದ್ದೆಗಳ

ಒಡೆತನದ ಬಗೆಗೆ ವ್ಯಾಜ್ಯ ಉಂಟಾದಾಗ ನ್ಯಾಯಕ್ಕಾಗಿ ಮತ್ತೋಡು ನಾಯಕ ಸಂಸ್ಥಾನಕ್ಕೆ ಬಂದರು. ಆಗ ಮತ್ತೋಡು ನಾಯಕರು ಆ ಗದ್ದೆಗಳು ಊರಗೌಡನಿಗೆ ಸೇರಬಹುದಾಗಿದ್ದರೂ ಅವುಗಳನ್ನು ಕೆರೆಗೌಡನಿಗೆ ಬಳುವಳಿ ರೂಪದಲ್ಲಿ ಬಿಟ್ಟುಕೊಡುವಂತೆ ನ್ಯಾಯ ತೀರ್ಮಾನ ಮಾಡಿ ತಂಟೆಯನ್ನು ಇತ್ಯರ್ಥಪಡಿಸಲಾಯಿತು.[೫೦]

ಬ್ರಾಹ್ಮಣರಲ್ಲಿ ತಲೆದೋರಿದ ವ್ಯಾಜ್ಯಗಳನ್ನು ಬ್ರಾಹ್ಮಣರ ಸಭೆಯಲ್ಲಿ ಅವರ ಗುರುಗಳ ಸಮ್ಮುಖದಲ್ಲಿಯೇ ತೀರ್ಮಾನಿಸಲಾಗುತ್ತಿತ್ತು. ರಾಜನಿಗಿದ್ದಷ್ಟೇ ನ್ಯಾಯ ತೀರ್ಮಾನ ಅಧಿಕಾರ ರಾಜಗುರುಗಳಿಗಿತ್ತು. ನ್ಯಾಯವನ್ನು ತೀರ್ಮಾನಿಸುವಾಗ ಮುದ್ದೆ ತುಪ್ಪದ ಪ್ರಮಾಣ ದೃಷ್ಟಿ ದೀವಿಗೆ ವಿಘ್ನೇಶ್ವರ ಶಾಸ್ತ್ರ ಓದಿಸುವುದು ಮುಂತಾದ ವಿಧಿ ವಿಧಾನಗಳನ್ನು ಅನುಸರಿಸಲಾಗುತ್ತಿತ್ತು. ನಾಯಕರು ತಮ್ಮ ಸಂಸ್ಥಾನಗಳಲ್ಲಿ ನಡೆಯುವ ವ್ಯಾಜ್ಯಗಳನ್ನು ತೀರ್ಮಾನಿಸುವಾಗ ತುಂಬಾ ಎಚ್ಚರಿಕೆಯಿಂದ ವಿವರವಾಗಿ ಪರಿಶೀಲಿಸುತ್ತಿದ್ದರು. ಹನ್ನೆರಡು ಜನ ಕೈವಾಡದವರ ಮೂಲಕ ತಪಿಸ್ಥರ ವಿಚಾರಣೆ ನಡೆಯುತ್ತಿತ್ತು.[೫೧] ರಾಜನೇ ಅಂತಿಮ ತೀರ್ಪು ನೀಡುವ ನ್ಯಾಯಾಧೀಶನಾಗಿ ಕಾರ್ಯನಿರ್ವಹಿಸುತ್ತಿದ್ದನು. ಕೆಳದಿ ರಾಜ್ಯದ ನ್ಯಾಯಾಡಳಿತವನ್ನು ಕುರಿತು ವಿದೇಶಿ ಪ್ರವಾಸಿ ಅಲೆಗ್ಸಾಂಡರ್ ಹ್ಯಾಮಿಲ್ಟನ್ ಹೇಳುವಂತೆ "ಈ ದೇಶದ ಪ್ರಜೆಗಳು ಎಷ್ಟು ಚೆನ್ನಾಗಿ ಕಾನೂನುಗಳಿಗೆ ಬದ್ಧರಾಗಿರುತ್ತಾರೆಂದರೆ ಇವರಲ್ಲಿ ದರೋಡೆ, ಕೊಲೆ ಎನ್ನುವುದು ಕೇಳಿ ಬರುವುದಿಲ್ಲ. ಅಪರಿತನೊಬ್ಬನು ಎಲ್ಲಿಗೆ ಹೋಗುತ್ತಿದ್ದಾನೆ. ಅವನಿಗೇನು ಕೆಲಸ ಎಂದು ಯಾರು ಕೇಳದೆಯೇ ನಿರಾಳವಾಗಿ ಹೋಗಬಹುದು.[೫೨]

ನಾಯಕರ ಕಾಲದಲ್ಲಿ ಅಂಗಚ್ಛೇದ, ಶಿರಚ್ಛೇದ, ಕಾರಗೃಹವಾಸ, ಗಡೀಪಾರು ರೂಪುಗೊಂಡಿದ್ದವು. ಪಾಳೆಯಗಾರರು ಧರ್ಮ ವ್ಯಾಜ್ಯಗಳನ್ನಾಗಲಿ, ಜಾತಿ ಸಂಘರ್ಷಗಳನ್ನಾಗಲಿ, ಭೂವಿವಾದಗಳನ್ನಾಗಲಿ ತುಂಬಾ ವಿವೇಚನೆಯಿಂದ ತೀರ್ಪುಗಳನ್ನು ನೀಡಿರುವುದು ಹಲವಾರು ಮೊಕದ್ದಮೆಗಳಲ್ಲಿ ದಾಖಲಾಗಿದೆ. ಒಟ್ಟಿನಲ್ಲಿ ದುಷ್ಟ ಶಿಕ್ಷೆ, ಶಿಷ್ಟ ಪರಿಪಾಲನೆ ಪಾಳೆಯಗಾರರ ನ್ಯಾಯದರ್ಶನದ ತತ್ವವಾಗಿತ್ತು. ಈ ತತ್ವದ ಚೌಕಟ್ಟಿನಲ್ಲಿಯೇ ನ್ಯಾಯಾಡಳಿತವನ್ನು ನಾಯಕರು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿದ್ದರು.

೫.೪ ಸೈನ್ಯಾಡಳಿತ

ಸೈನ್ಯಾಡಳಿತವು ನಾಯಕರ ರಾಜ್ಯಾಡಳಿತ ವ್ಯವಸ್ಥೆಯ ಒಂದು ಭಾಗವಾಗಿತ್ತು. ತಮ್ಮ ತಮ್ಮ ಸಂಸ್ಥಾನಗಳಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ಬಲಿಷ್ಠವಾದ ಸೈನ್ಯವನ್ನು ಪ್ರತಿಯೊಬ್ಬ ನಾಯಕರು ಕಟ್ಟಿಕೊಳ್ಳುತ್ತಿದ್ದರು. ವಿಜಯನಗರೋತ್ತರ ಕಾಲದ ಅತಂತ್ರ ರಾಜಕೀಯ ಸಂದರ್ಭದಲ್ಲಿ ಬಲಿಷ್ಠ ಸೇನೆಯನ್ನು ನಿರ್ಮಿಸಿಕೊಳ್ಳುವುದು ನಾಯಕರಿಗೆ ಅನಿವಾರ್ಯವಾಗಿತ್ತು. ಕಾರಣ ವಿಜಯನಗರದ ಪತನದ ನಂತರ ಯಾವುದೇ ಬೃಹತ್ ಸಾಮ್ರಾಜ್ಯ ಕರ್ನಾಟಕದ ಇತಿಹಾಸದಲ್ಲಿ ತಲೆ ಎತ್ತಲಿಲ್ಲ. ಹೀಗಾಗಿ ಸಣ್ಣಪುಟ್ಟ ನಾಯಕರುಗಳು ತಮ್ಮ ಶಕ್ತಿ ಸಂವರ್ಧನೆಯನ್ನು ಹೆಚ್ಚಿಸಿಕೊಳ್ಳಲು ನೆರೆಹೊರೆಯ ನಾಯಕ ಅರಸರೊಂದಿಗೆ ಸದಾ ಕಾಲವೂ ಯುದ್ಧಕ್ಕೆ ಮುಗಿಬೀಳುತ್ತಿದ್ದವು. ಹಲವು ಸಂಘರ್ಷ

ಮತ್ತು ತಿಕ್ಕಾಟಗಳಿಂದ ಕೂಡಿದ ದಿನಗಳಲ್ಲಿ ನಾಯಕರು ಸೈನ್ಯ ಬಲವರ್ಧನೆಗೆ ಹೆಚ್ಚು ಗಮನಕೊಡುತ್ತಿದ್ದರು. ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ನಾಯಕರ ಆಡಳಿತವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈ ಅವಧಿಯು ಸಂಪೂರ್ಣವಾಗಿ ಸಮಕಾಲೀನ ನಾಯಕ ಮನೆತನಗಳೊಂದಿಗೆ, ಮರಾಠರೊಂದಿಗೆ, ಮೊಗಲರೊಂದಿಗೆ, ನಿಜಾಮರೊಂದಿಗೆ ಹಾಗೂ ಹೈದರ್, ಟಿಪ್ಪು ಮತ್ತು ಬ್ರಿಟಿಷ್‌ರೊಂದಿಗೆ ಯುದ್ಧಗಳಲ್ಲಿ ಕಳೆದಿರುವುದು ತಿಳಿದು ಬರುತ್ತದೆ. ನಾಯಕರು ನಿರ್ಮಿಸಿಕೊಂಡಿದ್ದ ಸೈನ್ಯ ಅದರ ಅಧಿಕಾರ ವರ್ಗ ಶಸ್ತ್ರಾಸ್ತ್ರಗಳ ಉತ್ಪಾದನೆ, ಕೋಟೆ ಕೊತ್ತಲಗಳ ನಿರ್ಮಾಣ, ಗೆರಿಲ್ಲಾ ಮಾದರಿಯ ಯುದ್ಧ ತಂತ್ರಗಳು, ಫಿರಂಗಿಗಳು, ತುರು ಕಾಳಗಗಳು, ಗಡಿಯುದ್ಧಗಳು, ಬಯಲು ಯುದ್ಧಗಳು ಮತ್ತು ಕೋಟೆಕಾಳಗಗಳನ್ನು ಗಮನಿಸಿದಾಗ ಯುದ್ಧಗಳಿಗೆ ನಾಯಕರು ನೀಡಿದ ಪ್ರಾಮುಖ್ಯತೆ ಹಾಗೂ ಅದರ ಅನಿವಾರ್ಯತೆಯ ಅರ್ಥವಾಗುತ್ತದೆ. ನಾಯಕರು ತಮ್ಮ ಸಂಸ್ಥಾನಗಳ ಸಮಗ್ರತೆ ಮತ್ತು ಪ್ರಭುತ್ವವನ್ನು ಉಳಿಸಿಕೊಂಡು ಮುಂದುವರಿಸಿಕೊಂಡು ಹೋಗಲು ಸೈನ್ಯಾಡಳಿತಕ್ಕೆ ಹೆಚ್ಚು ಆದ್ಯತೆಯನ್ನು ನೀಡಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಬಹುತೇಕ ನಾಯಕರು ತಮ್ಮ ಯುದ್ಧಗಳಲ್ಲಿ ಗೆರಿಲ್ಲಾ ತಂತ್ರಗಾರಿಕೆಯನ್ನು ಬಳಸುತ್ತಿದ್ದರು. ರಾತ್ರಿಯಲ್ಲಿ ಎತ್ತುಗಳ ಕೋಡಿಗೆ ದೀವಟಿಗೆ ಕಟ್ಟಿಸಿ ನಗಾರಿ ವಾದ್ಯದವರನ್ನು ಗುಡ್ಡದಲ್ಲಿಟ್ಟು ಏಕಕಾಲದಲ್ಲಿ ಶಬ್ದ ಮಾಡಿ ನೂರಿನ್ನೂರು ಹುಲ್ಲಿನ ಬಣಗಳಿಗೆ ಬೆಂಕಿ ಹಚ್ಚಿ ಶತ್ರುಗಳನ್ನು ಎದುರಿಸುವುದು ಇವರ ಯುದ್ಧತಂತ್ರವಾಗಿತ್ತು. ಫಿರಂಗಿ ತುಪಾಕಿಗಳನ್ನು ಹಾರಿಸುವುದು; ಎಡಗಳನ್ನು ಹಾಕಿ ಹಲ್ಲಾ ಹತ್ತುವುದು; ಕೋಟೆಗೋಡೆಗೆ ಸರಿಯಾಗಿ ಮೊಹರ್ಜೆ ಕಟ್ಟಿ ಫಿರಂಗಿಗಳನ್ನು ಹಾರಿಸುವುದು ಮೊದಲಾದ ಯುದ್ಧ ತಂತ್ರಗಳನ್ನು ಬಳಸುತ್ತಿದ್ದರು. ಉದಾಹರಣೆಗೆ ಚಿತ್ರದುರ್ಗ ನಾಯಕರು ಕೋಟೆ ಕಾಳಗದಲ್ಲಿ ಎಷ್ಟು ನೈಪುಣ್ಯತೆಯನ್ನು ಸಾಧಿಸಿದ್ದರೆಂದರೆ ಹೈದರಾಲಿಯು ಒಂದು ವರ್ಷ ನಿಜಗಲ್ಲು ಕೋಟೆಗೆ ಮುತ್ತಿಗೆ ಹಾಕಿ ವಿಫಲನಾದ. ನಂತರ ರಾಜಾವೀರ ಮದಕರಿ ನಾಯಕನ ನೆರವನ್ನು ಕೋರಿದ. ಆಗ ಮದಕರಿ ನಾಯಕನ ನೇತೃತ್ವದಲ್ಲಿ ಮುನ್ನುಗ್ಗಿದ ಚಿತ್ರದುರ್ಗ ಸೇನೆಯು ಕೆಲವೇ ದಿನಗಳಲ್ಲಿ ನಿಜಗಲ್ಲು ಕೋಟೆಯನ್ನು ಗೆದ್ದು ಹೈದರಾಲಿಗೆ ನೀಡಿತು. ಚಿತ್ರದುರ್ಗ ಸೇನೆಯ ಕೋಟೆ ಕಾಳಗವನ್ನು ಕಣ್ಣಾರೆ ಕಂಡ ಹೈದರಾಲಿಯು ಚಿತ್ರದುರ್ಗದ ನಾಯಕರ ಶಕ್ತಿಯನ್ನು ಅರಿತು ಬೆಚ್ಚಿಬಿದ್ದು ಮುಂದೆ ದುರ್ಗದ ವೈರತ್ವ ಕಟ್ಟಿಕೊಳ್ಳಲು ಕಾರಣವಾಯಿತು.

ಮೈಸೂರು ಒಡೆಯರು ಕೂಡ ಚಿತ್ರದುರ್ಗ ನಾಯಕರ ಹಲವಾರು ಯುದ್ಧ ತಂತ್ರಗಳನ್ನು ಅನುಸರಿಸುತ್ತಿದ್ದರು. ಎತ್ತುಗಳ ಕೋಡುಗಳಿಗೆ ಪಂಜುಗಳನ್ನು ಕಟ್ಟಿ ಉರಿಸಿ ಅವುಗಳನ್ನು ರಾತ್ರಿ ವೇಳೆ ನಡೆಸಿ ವೈರಿಗೆ ಭಾರೀ ಸೇನೆ ಬರುತ್ತಿದೆಯೆಂಬ ಭೀತಿ ಹುಟ್ಟುವಂತೆ ಮಾಡುವುದು. ಸೈನ್ಯವನ್ನು ಅತಿವೇಗವಾಗಿ ಮುನ್ನಡೆಸುವುದು; ಅನೀರಿಕ್ಷಿತವಾಗಿ ರಾತ್ರಿಯ ವೇಳೆ ದಾಳಿ ಮಾಡುವುದು ಮೊದಲಾದ ಯುದ್ಧತಂತ್ರಗಳನ್ನು ಅನುಸರಿಸುತ್ತಿದ್ದರು.

ನಾಯಕರ ಕಾಲದಲ್ಲಿ ತುರುಕಾಳಗಗಳು ತುಂಬಾ ಪ್ರಖ್ಯಾತಗೊಂಡಿದ್ದವು. ಗೋವುಗಳನ್ನು ಸೆರೆಹಿಡಿದು ಯುದ್ಧಕ್ಕೆ ಆಹ್ವಾನಿಸುವುದು ಆ ಕಾಲದ ಯುದ್ಧ ಸಂಪ್ರದಾಯವಾಗಿತ್ತು. ಆದ್ದರಿಂದ ನಾಯಕರು ತಮ್ಮ ಗೋವುಗಳನ್ನು ರಕ್ಷಿಸಿಕೊಳ್ಳಲು ತಮ್ಮ ಪ್ರಾಣವನ್ನು ಲೆಕ್ಕಿಸದೇ ಹೋರಾಟಗಳನ್ನು ಮಾಡುತ್ತಿದ್ದರು. ಕೆಲವೊಮ್ಮೆ ಗೋಕಾಳಗದಲ್ಲಿ ಪ್ರಾಣವನ್ನು ತ್ಯಾಗ ಮಾಡುತ್ತಿದ್ದರು.

ಇಮ್ಮಡಿ ಕಸ್ತೂರಿ ರಂಗಪ್ಪನ ಮರಣದ ನಂತರ ೧೨ ವರ್ಷದ ಬಾಲಕ ಮದಕರಿ ನಾಯಕನಿಗೆ ಪಟ್ಟವಾಯಿತು. ಮೆದಕೇರಿಯು ಅಪ್ರಾಪ್ತ ಬಾಲಕನಾಗಿದ್ದರಿಂದ ರಾಜಪ್ರತಿನಿಧಿಯಾಗಿ ಗಂಡೋಬವ್ವ ನಾಗತಿಯೇ ಆಡಳಿತ ಸೂತ್ರಗಳನ್ನು ಕೈಯಲ್ಲಿ ಹಿಡಿದಿದ್ದಳು. ಆಗ "ಆ ದುರ್ಗಕ್ಕೀಗ ಗಂಡಸರ ದಿಕ್ಕಿಲ್ಲ ಪಟ್ಟದ ಮೇಲೆ ಚೋಟುದ್ದದ ಹುಡುಗ ಆಡಳಿತ ಮಾಡುವುದು ಮುದುಕಿ ನಿಮ್ಮ ಕೈಲೇನಾದಿತು" ಎಂದು ರಾಯದುರ್ಗದವರು ಚಿತ್ರದುರ್ಗದ ಗಡಿಯಲ್ಲಿ ಮೇಯುತ್ತಿದ್ದ ನೂರಾರು ದನಕರುಗಳನ್ನು ಸೆರೆ ಹಿಡಿದರು. ಈ ಸಂದರ್ಭದಲ್ಲಿ ಓಬಳವ್ವ ನಾಗತಿ ರಣವೀಳ್ಯ ಸ್ವೀಕರಿಸಿ ಕೂಚುಭೇರಿ ಹೊಡಿಸಿ ಹೆಣ್ಣು ಪಡೆಯಲ್ಲಿ ಮುಂಚೂಣಿಯಲ್ಲಿದ್ದು ರಾಯದುರ್ಗದವರ ಮೇಲೆ ಯುದ್ಧ ಮಾಡಿ ಚಿತ್ರದುರ್ಗಕ್ಕೆ ಗೆಲುವು ತಂದುಕೊಟ್ಟಳು. ರಾಯದುರ್ಗದ ಪಾಳೆಯಗಾರರ ಅಹಂಕಾರವನ್ನು ಮುರಿದು ಚಿತ್ರದುರ್ಗದ ವೀರ ವನಿತೆಯರನ್ನು ಇತಿಹಾಸದಲ್ಲಿ ದಾಖಲು ಮಾಡಿದಳು.[೫೩]

ನಾಯಕರು ತಮ್ಮ ಸೇನಾಪಡೆಯನ್ನು ಪ್ರಮುಖವಾಗಿ ೪ ವಿಭಾಗಗಳಾಗಿ ವಿಂಗಡಿಸಿದ್ದರು. ಪದಾತಿದಳ ಕುದುರೆದಳ, ಗಜಸೇನೆ ಮತ್ತು ಫಿರಂಗಿದಳ. ಯುದ್ಧಗಳಲ್ಲಿ ಈಟಿ, ಭರ್ಜಿ, ಕತ್ತಿ, ಬಿಲ್ಲು, ಬಾಣ, ಫಿರಂಗಿಗಳ ಜೊತೆ ಕೈ ಕೋವಿಯನ್ನು ಬಳಸುತ್ತಿದ್ದರು. ಸೇನೆಯಲ್ಲಿ ಮುಖ್ಯರಾದ ಅಧಿಕಾರಿಗಳೆಂದರೆ ದಂಡನಾಯಕ ಇವರನ್ನು ದಳವಾಯಿಗಳೆಂದು, ದಣನಾಯಕರೆಂದು ಕರೆಯುತ್ತಿದ್ದರು. ಕೆಳದಿಯಲ್ಲಿ ದಂಡನಾಯಕನ ಜೊತೆ ಸಬ್ಬುನಿಸಿ ಎಂಬ ಅಧಿಕಾರಿಯು ಕಾರ್ಯನಿರ್ವಹಿಸುತ್ತಿದ್ದ. ಸೇನೆಯ ಯೋಧರ ಹಾಜರಿ ಪಟ್ಟಿ ಬರೆಯುವುದು ಮತ್ತು ವೇತನ ಬಿಲ್ಲುಗಳನ್ನು ತಯಾರಿಸುವುದು ಇವನ ಕರ್ತವ್ಯವಾಗಿತ್ತು.[೫೪] ಚಿತ್ರದುರ್ಗ ನಾಯಕ ಮನೆತನವು ದಳವಾಯಿಗಳ ಸರ್ವಾಧಿಕಾರಕ್ಕೆ ಬಲಿಯಾಗಿತ್ತು. ರಾಜಾ ಓಬಣ್ಣ ನಾಯಕನ ಮರಣದಲ್ಲಿ ದಳವಾಯಿಗಳ ಪಾತ್ರ ದೊಡ್ಡದಿತ್ತು. ಚಿತ್ರದುರ್ಗದಲ್ಲಿ ಭರಮಪ್ಪ ನಾಯಕ, ಹರಪನಹಳ್ಳಿಯಲ್ಲಿ ಓಬಳನಾಯಕನು ಪ್ರಸಿದ್ಧ ದಳವಾಯಿಗಳಾಗಿ ಗುರುತಿಸಿಕೊಂಡಿದ್ದರು. ಒಟ್ಟಿನಲ್ಲಿ ನಾಯಕರ ಕಾಲದ ದಂಡನಾಯಕರು ಸೈನ್ಯಾಡಳಿತ, ನಾಯಕರ ರಾಜ್ಯಾಡಳಿತವನ್ನು ನೋಡಿಕೊಳ್ಳುವುದರ ಜೊತೆಗೆ ಸಾಮ್ರಾಜ್ಯವನ್ನು ರಕ್ಷಿಸುವ ಕಾರ್ಯದಲ್ಲಿಯೂ ತೊಡಗಿಕೊಳ್ಳುತ್ತಿದ್ದರು.

೫.೫ ಗ್ರಾಮಾಡಳಿತ

ವಿಜಯನಗರೋತ್ತರ ಕಾಲದ ನಾಯಕರ ಆಡಳಿತಾವಧಿಯಲ್ಲಿ ಪಟ್ಟಣಗಳು, ಅಗ್ರಹಾರಗಳು ರಾಜ್ಯಾಡಳಿತ ಉಪವಿಭಾಗಗಳು ಮುಖ್ಯ ಘಟಕಗಳಾದರೆ ಗ್ರಾಮಗಳು ರಾಜ್ಯಾಡಳಿತದ ಅತ್ಯಂತ

ಚಿಕ್ಕ ಪ್ರಮಾಣದ ಆಡಳಿತ ಘಟಕಗಳಾಗಿ ರೂಪುಗೊಂಡಿದ್ದವು. ಗಾವುಂಡ ಅಥವಾ ಗೌಡ ಎಂಬ ಮುಖಂಡನು ಗ್ರಾಮಾಡಳಿತದಲ್ಲಿ ಪ್ರಮುಖ ವ್ಯಕ್ತಿಯಾಗಿದ್ದನು.[೫೫] ಗ್ರಾಮಗಳಲ್ಲಿ ಗ್ರಾಮ ಸಭೆಗಳಿದ್ದು ಗ್ರಾಮಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದವು. ವಿಜಯನಗರ ಕಾಲದ ಬಾರಬಲೂತಿ ಪದ್ಧತಿಯನ್ನೇ ಮುಂದುವರಿಸಿಕೊಂಡು ಹೋದರು. ಇದನ್ನು ನಿರ್ವಹಿಸಲು ೧೨ ಜನ ಗ್ರಾಮ ಅಧಿಕಾರಿಗಳನ್ನು ನೇಮಿಸುತ್ತಿದ್ದರು. ಇವರನ್ನು ಆಯಗಾರರೆಂದು ಕರೆಯಲಾಗಿದೆ. ಇವರಲ್ಲಿ ಮುಖ್ಯರಾದ ಅಧಿಕಾರಿಗಳೆಂದರೆ ಗೌಡ, ಸೇನಾಭೋವ, ಪುರೋಹಿತ, ತಳವಾರಿ, ಅಂಬಿಗ, ತೋಟಿಗ, ಕಲ್ಲು ಕುಟುಗ, ಬಡಗಿ, ಅಕ್ಕಸಾಲೆ, ಮರಗೆಲಸದವನು, ನಾಯಿಂದ, ಜೋಯಿಸ ಮುಂತಾದವರು ಬಾರಬಲೂತಿಯ ಮುಖ್ಯಸ್ಥರಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದರು.

ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ಗ್ರಾಮಸಭೆಗಳು ಅಸ್ತಿತ್ವದಲ್ಲಿದ್ದವು ಎಂಬುದಕ್ಕೆ ನೂರಾರು ಶಾಸನಗಳು ಸ್ಪಷ್ಟೀಕರಣ ನೀಡುತ್ತವೆ. ಉದಾಹರಣೆಗೆ ಸಂತೆಬೆನ್ನೂರು ನಾಯಕರ ಕಾಲಕ್ಕೆ ಸೇರಿದ ಚನ್ನಗಿರಿಯ ಕಸಬಾ ಗ್ರಾಮದ ಶಾಸನವು (ಶಾಸನ ಸಂಖ್ಯೆ ೭) ಸಂತೆಬೆನ್ನೂರು ಹನುಮಿನಾಯಕರ ಮಕ್ಕಳಾದ ಬಿಲ್ಲಪ್ಪ (ಪಿಲ್ಲಪ್ಪ) ನಾಯಕರು, ಕೆಂಗಪ್ಪ ನಾಯಕರು ಶ್ರೀವತ್ಸ ಗೋತ್ರದ ಮಲ್ಲಿಭಟ್ಟನ ಮಕ್ಕಳು ಅಪ್ಪಾಭಟ್ಟರ ತಮ್ಮನಾದ ಲಿಂಗಣ್ಣನಿಗೆ ಸಂತೆಬೆನ್ನೂರು ಸ್ಥಳದ ಸೇನಾ ಬೋವಿಕೆ, ಜ್ಯೋತಿಷ್ಯ, ಪೌರೋಹಿತ್ಯ ಮುಂತಾದವುಗಳನ್ನು ನಡೆಸಿಕೊಂಡು ಹೋಗಲು ದಾನ ನೀಡಿದ ವಿವರಗಳಿವೆ.[೫೬]

ನಾಯಕರು ಹಾಗೂ ಅಧಿಕಾರಿಗಳು ನೂತನ ಗ್ರಾಮಗಳನ್ನು ನಿರ್ಮಿಸುತ್ತಿದ್ದರು. ಹಾಗೂ ತಮ್ಮ ತಂದೆ ತಾಯಿಗಳ ಹೆಸರನ್ನು ಗ್ರಾಮಗಳಿಗೆ ನಾಮಧೇಯವಾಗಿ ಇಡುತ್ತಿದ್ದರು. ಹಾಗೂ ಕೆಲವೊಮ್ಮೆ ಗ್ರಾಮಗಳನ್ನು ತೆರಿಗೆ ಸಹಿತವಾಗಿ ದೇವಾಲಯಗಳಿಗೆ, ಅಗ್ರಹಾರಗಳಿಗೆ ದಾನವಾಗಿ ನೀಡುತ್ತಿದ್ದರು.

ಚಿತ್ರದುರ್ಗ ನಾಯಕರ ಕಾಲದ ಸಿದ್ದಮ್ಮನಹಳ್ಳಿ ಶಿಲಾಶಾಸನವು (ಶಾಸನ ಸಂಖ್ಯೆ ೩೫) ಕಸ್ತೂರಿ ಚಿಕ್ಕಣ್ಣ ನಾಯಕನ ಕಾಲಕ್ಕೆ ಸಂಬಂಧಿಸಿದೆ. (೧೬೮೫) ಈ ಶಾಸನದಲ್ಲಿ ಚಿಕ್ಕಣ್ಣ ನಾಯಕನ ಪಾರುಪತ್ಯಗಾರನಾದ ಬೂತ್ಯೆನ ವೀರಣ್ಣನು ತನ್ನ ಹೆಂಡತಿ ಸಿದ್ದವನ ಹೆಸರಿನಲ್ಲಿ ಸಿದ್ದಾಪುರ ಗ್ರಾಮವನ್ನು ನಿರ್ಮಿಸುತ್ತಾನೆ. ಹಾಗೂ ಈ ಗ್ರಾಮದಲ್ಲಿ ದೇವಾಲಯ ಮಠವನ್ನು ನಿರ್ಮಾಣ ಮಾಡಲು ಅಡಿಗಲ್ಲು ಇಟ್ಟ ಬಗೆಯನ್ನು ವಿವರಿಸಲಾಗಿದೆ.[೫೭]

ಒಟ್ಟಿನಲ್ಲಿ ನಾಯಕರು ಹಾಗೂ ಅವರ ಅಧಿಕಾರಿಗಳು ಗ್ರಾಮಗಳನ್ನು ನಿರ್ಮಿಸಿರುವುದಕ್ಕೆ ಅನೇಕ ಶಾಸನೋಕ್ತ ನಿದರ್ಶನಗಳು ದೊರೆಯುತ್ತವೆ

ಗ್ರಾಮ ಸಭೆಗಳು

ಗೌಂಡನು ಗ್ರಾಮ ಸಭೆಯ ಮುಖ್ಯಾಧಿಕಾರಿಯಾಗಿ ಆಡಳಿತಾಧಿಕಾರಿಯಾಗಿ, ಜನಪ್ರತಿನಿಧಿಯಾಗಿ, ಸರಕಾರದ ಪ್ರತಿನಿಧಿಯಾಗಿಯೂ ಕಾರ್ಯ ನಿರ್ವಹಿಸುತ್ತಿದ್ದ. ನಾಯಕರ ಕಾಲದ ಗ್ರಾಮ

ತೀರ್ಮಾನಗಳೆಲ್ಲವೂ ಗೌಡನನ್ನು ಮುಖ್ಯಸ್ಥನಾಗಿ ಒಳಗೊಂಡ ಪಂಚಾಯ್ತಿ ಕಟ್ಟೆ ಅಥವಾ ಕಟ್ಟೆ ಮನೆಗಳಲ್ಲಿಯೇ ತೀರ್ಮಾನವಾಗುತ್ತಿದ್ದವು. ಸೇವಬೋವ (ಶ್ಯಾನುಭೋಗ) ಹಳ್ಳಿಯ ಲೆಖ್ಖಿಗನಾಗಿದ್ದರೆ, ತಳವಾರಿಯು ಪೋಲೀಸ್ ಕಾರ್ಯಗಳನ್ನು ನಿರ್ವಹಿಸುತ್ತಿದ್ದ. ಗ್ರಾಮಸಭೆಯು ತನ್ನ ವ್ಯಾಪ್ತಿಯಲ್ಲಿರುವ ಭೂಮಿಯ ಮೇಲೆ ಹತೋಟಿಯನ್ನು ಹೊಂದಿತ್ತು. ಧಾರ್ಮಿಕ ಅಥವಾ ಸಾರ್ವಜನಿಕ ಉದ್ದೇಶಗಳಾಗಿ ಭೂಮಿಯನ್ನು ಮಾರಾಟ ಮಾಡುವ ಹಾಗೂ ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿತ್ತು.

ಒಟ್ಟಿನಲ್ಲಿ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ನಾಯಕರು ತಮ್ಮ ಆಡಳಿತವನ್ನು ಬಹುತೇಕವಾಗಿ ವಿಜಯನಗರದವರಂತೆ ರೂಪಿಸಿಕೊಂಡಿದ್ದರು. ಸ್ಥಳೀಯ ಅವಶ್ಯಕತೆ ಅನಿವಾರ್ಯತೆಗಳಿಗೆ ತಕ್ಕಂತೆ ಆಡಳಿತದಲ್ಲಿ ಮಾರ್ಪಾಟುಗಳನ್ನು ಮಾಡಿಕೊಳ್ಳುತ್ತಿದ್ದರು. ತಮ್ಮ ತಮ್ಮ ಪ್ರದೇಶದ ಜನ, ಸಂಸ್ಕೃತಿಗೆ ತಕ್ಕಂತೆ ಆಡಳಿತವನ್ನು ನಡೆಸಿಕೊಂಡು ಹೋಗುತ್ತಿದ್ದರು. ಕೆರೆ ಬಾವಿಗಳ, ಕಾಲುವೆಗಳ, ದೇವಾಲಯಗಳ ನಿರ್ಮಾಣದ ಜೊತೆಗೆ ಕೈಗಾರಿಕೆ, ಕೃಷಿ, ವ್ಯಾಪರ ವಾಣಿಜ್ಯ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ ರಾಜ್ಯವನ್ನು ಮುನ್ನಡಿಸಿದರು ಎಂದು ಹೇಳಬಹುದು.

೫.೬. ಆರ್ಥಿಕ ವ್ಯವಸ್ಥೆ

ವಿಜಯನಗರದ ಕಾಲದ ಅಮರನಾಯಕರ ಕಾಲದ ಆರ್ಥಿಕ ಪದ್ಧತಿಯನ್ನು ತಿಳಿಯಲು ಸಮಕಾಲೀನ ಸಾಹಿತ್ಯಧಾರಗಳು ಹಾಗೂ ಶಾಸನಾಧರಗಳು ಹೆಚ್ಚಿನ ಪ್ರವಾಣದಲ್ಲಿ ಸಹಾಕಾರಿಯಾಗುತ್ತದೆ. ಅಂದಿನ ಕಾಲದ ಕೃಷಿ ತೆರಿಗೆ ವ್ಯವಸ್ಥೆ, ನಾಣ್ಯ ವ್ಯವಸ್ಥೆ, ವಿನಿಮಯ, ವಿಜಯನಗರೊಂದಿಗೆ ಅಮರನಾಯಕರ ಆರ್ಥಿಕ ಒಪ್ಪಂದ ಇವೇ ಮೊದಲಾದ ವಿಷಯಗಳನ್ನು ಅಧ್ಯೈಸಿಕೊಳ್ಳುವಲ್ಲಿ ದೇಶಿ ವಿದೇಶಿ ಸಾಹಿತ್ಯ ಆಕರಗಳು ನೇರವಾಗುತ್ತವೆ.

ಕೃಷಿ ಪದ್ದತಿ

ಪ್ರಾಚೀನಾ ಕಾಲದಿಂದಲೂ ಕೃಷಿಯು ಭಾರತೀಯರ ಪ್ರಮುಖ ಉದ್ಯೋಗವಾಗಿತ್ತು. ವಿಜಯನಗರದ ಅರಸರು ಮತ್ತು ಅವರ ಅಧೀನರಾಗಿದ್ದರಿಂತಹ ಅಮರನಾಯಕರು ಕೃಷಿಯು ಅಭಿವೃದ್ದಿಗೆ ಅನೇಕ ಯೋಜನೆಗಳನ್ನು ಕೈಗೊಂಡರು. ವಿಜಯನಗರದ ಅರಸರು ಹಾಗೂ ಅವರ ಪ್ರಾಂತ್ಯಾಧಿಕಾರಿಗಳಾಗಿದ್ದ ಅಮರನಾಯಕರು ತಮ್ಮ ಯುದ್ಧಗಳ ವೆಚ್ಚಕ್ಕೆ ಭೋಗವಿಲಾಸದ ಜೀವನಕ್ಕೆ ಬಗೆ ಬಗೆಯ ತೆರಿಗೆಗಳನ್ನು ಜನರ ಮೇಲೆ ವಿಧಿಸಿದ್ದರು. ಬಾಲವಿರಿರುವ ಪ್ರಾಣಿಗಳ ಮೇಲಿನ ತೆರಿಗೆ, ಕ್ಷೌರಿಕರ ಮೇಲಿನ ತೆರಿಗೆ, ವೀಳ್ಯದೆಲೆಯ ಮೇಲಿನ ತೆರಿಗೆ, ಮದುವೆಗಳ ಮೇಲೆ ತೆರಿಗೆಗಳನ್ನು ವಿಧಿಸುತ್ತಿದ್ದರು. ಕೆಳದಿ ನಾಯಕರು ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನು ನೀರಾವರಿ ಭೂಮಿ ಖುಷ್ಕಿ ಭೂಮಿ ಎಂದು ಎರಡು ಭಾಗಗಳಾಗಿ ವಿಭಾಗಿಸಿಕೊಂಡು ವ್ಯವಸಾಯ ಮಾಡಿ ಇವುಗಳ ಆಧಾರದ ಮೇಲೆಯೇ ತೆರಿಗೆಯನ್ನು ವಸೂಲಿ ಮಾಡುತಿದ್ದರು. ಖುಷ್ಕಿ ಭೂಮಿಯಲ್ಲಿ ಭತ್ತ, ರಾಗಿ, ಕಬ್ಬು, ಎಳ್ಳು, ಶೇಂಗ, ದ್ವಿದಳ ಧ್ಯಾನಗಳನ್ನು ಬೆಳೆಯುತ್ತಿದ್ದರು. ನೀರಾವರಿ ಭೂಮಿಯಲ್ಲಿ ತೆಂಗು, ಭತ್ತ, ಅಡಿಕೆ, ಮಾವು, ಬಾಳೆ, ವೀಳ್ಯದೆಲೆ ಮೆಣಸು ಮುಂತಾದ ವಾಣಿಜ್ಯ ಬೆಳೆಗಳಮ್ಮು

ಬೆಳೆಯುತ್ತಿದ್ದರು. ಸಾವಯುವ ಕೃಷಿ ಪದ್ಧತಿಯು ಹೆಚ್ಚು ಆಚರಣೆಯಲ್ಲಿತ್ತು. ಕೆಳದಿ ನಾಯಕರ ಕಾಲದಲ್ಲಿ ಗುಡಿ ಕೈಗಾರಿಕೆಗಳು ಅಸ್ತಿತ್ವದಲ್ಲಿದ್ದವು. ನೇಕಾರಿಕೆ, ಕಂಬಾರಿಕೆ, ಅಕ್ಕಸಾಲಿಗರು, ಜನಿವಾರರು, ಬಡಗಿಗಳು ಮೋಚಿಗಳು, ಗಾಣಿಗರು ಗೃಹ ಕೈಗಾರಿಕೆಗಳನ್ನು ಅವಲಂಬಿಸಿದ್ದರು. ಇವರಗಳ ಮೇಲೆ ಕೆಳದಿಯ ನಾಯಕರು ಮಿತ ಪ್ರಮಾಣದಲ್ಲಿ ತೆರಿಗೆಯನ್ನು ವಿಧಿಸುತ್ತಿದ್ದರು.

ಪೋರ್ಚುಗೀಸರೊಂದಿಗೆ, ಬ್ರಿಟಿಷರೊಂದಿಗೆ ಉತ್ತಮ ವಿದೇಶಿ ವ್ಯಾಪಾರವನ್ನು ನಡೆಸುತ್ತಿದ್ದ ಕೆಳದಿಯ ನಾಯಕರು ಪೋರ್ಚುಗಲ್ ಮತ್ತು ಇಂಗ್ಲೆಂಡ್‌ಗಳಿಂದ ಕುದುರೆಗಳನ್ನು, ಉತ್ತಮ ದರ್ಜೆಯ ಬಟ್ಟೆಗಳು, ಮತ್ತುರತ್ನಗಳನ್ನು ಆಮದು ಮಾಡಿಕೊಂಡು ಏಲಕ್ಕಿ, ಮೆಣಸುಗಳನ್ನು ರಫ್ತು ಮಾಡುತ್ತಿದ್ದರು. ವಿಜಯನಗರದ ಮಾದರಿಯಲ್ಲಿಯೇ ಕೆಳದಿಯ ನಾಯಕರು ಚಿನ್ನದ ವರಹ ಎಂಬ ನಾಣ್ಯವನ್ನು ಅಚ್ಚು ಹಾಕಿಸಿದರು. ಇದನ್ನು ಇಕ್ಕೇರಿ ವರಹ, ನಾಣ್ಯ, ಹೊನ್ನು ಎಂಬುದಾಗಿ ಕರೆಯಲಾಯಿತು. (ಡಾ. ಕೆಳದಿ. ವೆಂಕಟೇಶ್ ಜೋಯಿಸ್, ಕೆಳದಿ ನಾಯಕರ ಸಂಕ್ಷಿಪ್ತ ಚರಿತ್ರೆ ಪು.೧೬, ೧೯೯೯)ಇವರ ಕಾಲದಲ್ಲಿ ಬೆಳ್ಳಿಯ ತಾರ ಎಂಬ ನಾಣ್ಯವು ಮತ್ತು ತಾಮ್ರದ ಪಣಂ ಎಂಬ ನಾಣ್ಯಗಳು ಚಲಾವಣೆಯಲ್ಲಿದ್ದವು. ಕೆಳದಿ ರಾಜ್ಯದ ಆದಾಯದ ಮೂಲಗಳೆಂದರೆ (೧) ಭೂಕಂದಾಯ (೨) ಸುಂಕ ತೆರಿಗೆ (೩) ಕೈಗಾರಿಕೆಗಳ ಮೇಲಿನ ತೆರಿಗೆ (೪) ವೃತ್ತಿ ತೆರಿಗೆ (೫) ಸಮಾಜ ತೆರಿಗೆ (೬) ಸಮುದಾಯದ ತೆರಿಗೆ (೭) ರೂಢಿಯ ಕೊಡುಗೆಗಳು (೮) ಸೈನಿಕರ ಕರ (೯) ಆಸ್ತಿ ಕರ (೧೦)ಮಾರಾಟ ಕರ (೧೧) ಅಸ್ವಾಮಿ ಕರ (೧೨) ಸೇವೆ ಸಲ್ಲಿಸಿದ್ದಕ್ಕೆ ಶುಲ್ಕ (೧೩)ನ್ಯಾಯಾಂಗ ವಿಧಿಸಿದ ದಂಡ (೧೪) ಅರಣ್ಯ ಉತ್ಪನ್ನ (೧೫) ಧಾರ್ಮಿಕ ಸಂಸ್ಥೆಗಳ ಮೇಲಿನ ತೆರಿಗೆ ಇತರ ವರಮಾನ ಭೂ ಕಂದಾಯಗಳನ್ನು ವಿವಿಧ ರೂಪಗಳಲ್ಲಿ ವಿವಿಧ ಹೆಸರುಗಳಲ್ಲಿ ಹೇರಲಾಗುತ್ತಿತ್ತು. ಉದಾ: ಶಿಸ್ತು (ನಿಗದಿ ತೆರಿಗೆ) ಅರೆವಾಸಿ (ಅರ್ಧಾಂಶ) ಬಿರಾಡ, ಸಿದ್ದಾಯ (ನಿರ್ಧಾರಿತ ತೆರಿಗೆ) ದಾಸೋಹ, ಪಗುಡಿ ಮತ್ತು ಪಟ್ಟಿ ಬಿದರಿನ ಬುಟ್ಟಿ, ಭತ್ತ, ಉಪ್ಪು, ಮೆಣಸಿನ ಕಾಳು, ಎಣ್ಣೆ ತುಪ್ಪ, ಹುಣಸೆ ಹಣ್ಣ ತಂಬಾಕು ಇತ್ಯಾದಿಗಳ ಮೇಲೆ ಸುಂಕವನ್ನು ವಸೂಲು ಮಾಡುತ್ತಿದ್ದರು.[೫೮]

ಯಲಹಂಕ ನಾಡಪ್ರಭುಗಳ ಆಡಳಿತಾವಧಿಯಲ್ಲಿ ಬೆಂಗಳೂರು ಪ್ರದೇಶದಲ್ಲಿ ಅವರೆ, ರಾಗಿ, ಭತ್ತ, ಹೆಸರು, ಉದ್ದು, ನವಣೆ ಮುಂತಾದವುಗಳನ್ನು ಬೆಳೆಯುತ್ತಿದ್ದರು. ಕಬ್ಬನ್ನು ಕೃಷಿ ಮತ್ತು ತರಿ ಭೂಮಿಗಳಲ್ಲಿ ಬೆಳೆಯುತ್ತಿದ್ದರು. ನೀರಾವರಿಯು ಮುಖ್ಯವಾಗಿ ಕೆರೆ-ಬಾವಿ-ಕಾಲುವೆ, ನದಿಗಳನ್ನು ಅವಲಂಬಿಸಿತ್ತು. ಯಲಹಂಕ ನಾಡಪ್ರಭುಗಳು ಕೃಷಿ ಮತ್ತು ಗೃಹ ಬಳಕೆಗೆ ಸಂಬಂಧಿಸಿದಂತೆ ನೀರಿನ ಪೂರೈಕೆ ವಿಷಯದಲ್ಲಿ ಆಸಕ್ತಿ ಉಳ್ಳವರಾಗಿದ್ದರು. ಯಲಹಂಕ ನಾಡಪ್ರಭುಗಳು ಬೆಂಗಳೂರು ಸೇರಿದಂತೆ ವಿವಿಧೆಡೆಯಲ್ಲಿ ಹಲವಾರು ಕೆರೆಗಳನ್ನು ನಿರ್ಮಿಸಿದರು. ಇವರ ಕಾಲದಲ್ಲಿ ಕೆಂಪಾಂಬುದಿ ಕೆರೆ, ಧರ್ಮಾಂಬುದಿ ಕೆರೆ, ಸಂಪಂಗಿರಾಮ ಕೆರೆ, ಚೆನ್ನಮ್ಮನ ಕೆರೆ, ಕಾರಂಜಿ ಕೆರೆ, ಹಲಸೂರು ಕೆರೆ ಮುಂತಾದ ಕೆರೆಗಳನ್ನು ನಿರ್ಮಿಸಿದರು. ಹಾಗೆಯೇ ಧಾರ್ಮಿಕ ಕಾರ್ಯಗಳಿಗೆ ನೆರವಾಗಲೆಂದು

ನೂರಕ್ಕೂ ಹೆಚ್ಚು ಕಲ್ಯಾಣಿಗಳನ್ನು ನಿರ್ಮಿಸಿದರು. ಅವುಗಳಲ್ಲಿ ಅಣ್ಣಮ್ಮ ದೇವಾಲಯದ ಹತ್ತಿರವಿದ್ದ ಕಲ್ಯಾಣಿ, ಲಾಲ್‌ಬಾಗ್, ಚಿಕ್ಕಪೇಟೆ, ಸಿದ್ಧಿಕಟ್ಟೆ ಸಂಪಂಗಿ ನಗರ ಮುಂತಾದ ಕಲ್ಯಾಣಿಗಳು ಹಿರಿಯ ಕೆಂಪೇಗೌಡನ ಕಾಲಾವಧಿಯಲ್ಲಿ ನಿರ್ಮಾಣಗೊಂಡವು. ನಾಡಪ್ರಭುಗಳ ಕಾಲಾವಧಿಯಲ್ಲಿ ಅವರ ಸಂಸ್ಥಾನದಾದ್ಯಂತ ಹಲವಾರು ತೆರಿಗೆಗಳು ಜಾರಿಯಲ್ಲಿದ್ದವು. ಅವುಗಳಲ್ಲಿ ಮುಖ್ಯವಾಗಿ ಮನೆ ಕಂದಾಯ, ಎತ್ತುಗಳ ಸುಂಕ, ಅಂಗಡಿ ಸುಂಕ, ಮಗ್ಗದ ತೆರಿಗೆ, ಕುಂಬಾರ, ಗಾಣಿಗ, ಅಕ್ಕಸಾಲಿಗ, ಚಿನಿವಾರ ಮುಂತಾದ ಕಸುಬುದಾರ ಮೇಲಿನ ತೆರಿಗೆಯನ್ನು ಅವರ ಆದಾಯಕ್ಕೆ ತಕ್ಕಂತೆ ವಿಧಿಸಲಾಗುತ್ತಿತ್ತು. ಕೃಷಿಕರಿಂದ ಹಾಗೂ ವೃತ್ತಿಪರರಿಂದ ವಸೂಲಿ ಮಾಡಿದ ತೆರಿಗೆಯಲ್ಲಿ ವಿಜಯನಗರಕ್ಕೆ ನಿಗದಿಪಡಿಸಿದಷ್ಟು ಕಂದಾಯವನ್ನು ಪಾವತಿ ಮಾಡಿ ಉಳಿದ ಹಣವನ್ನು ತಮ್ಮ ಸಂಸ್ಥಾನದ ಆಡಳಿತ ಖರ್ಚುಗಳಿಗಾಗಿ ಹಾಗೂ ಸಾರ್ವಜನಿಕ ಕೆಲಸ ಕಾರ್ಯಗಳಿಗಾಗಿ ಸಂದಾಯ ಮಾಡಲಾಗುತ್ತಿತ್ತು. ಮೂಲತಃಹ ಉದ್ಯಮಶೀಲ ಕೃಷಿಕರಾಗಿದ್ದ ನಾಡಪ್ರಭುಗಳು ಕೃಷಿ ಮತ್ತು ಕೈಗಾರಿಕಾ ಚಟುವಟಿಕೆಗಳಿಗೆ ಹೆಚ್ಚು ಆದ್ಯತೆಯನ್ನು ನೀಡಿದಂತೆ ವ್ಯಾಪಾರ ಮತ್ತು ವಾಣಿಜ್ಯೋದ್ಯಮಕ್ಕೆ ಅಪಾರ ಪ್ರೋತ್ಸಾಹವನ್ನು ನೀಡಿದರು. ಯಲಹಂಕ ನಾಡಪ್ರಭು ಹಿರಿಯ ಕೆಂಪೇಗೌಡನ ಅಧಿಕಾರಾವಧಿಯಲ್ಲಿ ಬೆಂಗಳೂರಿನಲ್ಲಿ ೬೪ ಪೇಟೆಗಳು ನಿರ್ಮಾಣಗೊಂಡವು. ಅವುಗಳಲ್ಲಿ ೫೪ ಪೇಟೆಗಳು ಮಾತ್ರ ಲಭ್ಯವಾಗಿವೆ. ಅವುಗಳನ್ನು ವೃತ್ತಿಯಾಧಾರಿತ ಮತ್ತು ಜಾತಿಯಾಧಾರಿತ ಪೇಟೆಗಳೆಂದು ವಿಂಗಡಿಸಲಾಗಿದೆ. ಇವರ ಕಾಲದಲ್ಲಿ ನಿರ್ಮಾಣವಾದ ಪೇಟೆಗಳೆಂದರೆ ಅರಳೆಪೇಟೆ, ಅಕ್ಕಿಪೇಟೆ, ಕುಂಬಾರಪೇಟೆ, ರಾಗಿಪೇಟೆ, ಗಾಣಿಗರ ಪೇಟೆ, ಮಡಿವಾಳಪೇಟೆ, ಗೊಲ್ಲರಪೇಟೆ, ಹೂವಾಡಿಗರ ಪೇಟೆ, ಮಂಡಿಪೇಟೆ, ಅಂಚೆಪೇಟೆ, ಬಳೇಪೇಟೆ, ತರುಗು ಪೇಟೆ, ಸುಣ್ಣಕಲ್ ಪೇಟೆ, ಮೇದಾರ ಪೇಟೆ, ಕುರುಬರ ಪೇಟೆ, ಮುತ್ಯಾಲ ಪೇಟೆ, ಕುಂಚಿಟಗಂ ಪೇಟೆ, ದೊಡ್ಡಪೇಟೆ, ಚಿಕ್ಕಪೇಟೆ, ಉಪ್ಪಾರ ಪೇಟೆ, ಕಲ್ಲಾರ ಪೇಟೆ, ತಿಗಳರ ಪೇಟೆ, ಮಾಮುಲ್ ಪೇಟೆ, ನಗರ್ತಪೇಟೆ, ಸುಲ್ತಾನ ಪೇಟೆ, ಮನವರ್ತ ಪೇಟೆ ಮುಂತಾದ ಪೇಟೆಗಳು ಪ್ರಮುಖವಾಗಿವೆ. ಈ ಪೇಟೆಗಳನ್ನು ನಿರ್ಮಿಸಿ ದೇಶದ ವಿವಿಧ ಪ್ರದೇಶಗಳಿಂದ ವರ್ತಕರನ್ನು ಕರೆತಂದು ಅವರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಂಡು ಬೆಂಗಳೂರು ಪ್ರದೇಶವನ್ನು ಪ್ರಮುಖ ವ್ಯಾಪಾರ ವಾಣಿಜ್ಯ ಕೇಂದ್ರವನ್ನಾಗಿ ರೂಪಿಸಿದ ಶ್ರೇಯಸ್ಸು ಈ ನಾಡಪ್ರಭುಗಳಿಗೆ ಸಲ್ಲುತ್ತದೆ.

ಯಲಹಂಕ ನಾಡಪ್ರಭುಗಳು ಹೊರಡಿಸಿದ ನಾಣ್ಯಗಳು ಜನಸಾಮಾನ್ಯರ ಭಾಷೆಯಲ್ಲಿ ವಿಜಯನಾಣ್ಯಗಳೆಂದೇ ಪ್ರಸಿದ್ಧವಾಗಿವೆ. ಈ ನಾಣ್ಯಗಳನ್ನು ಹಿರಿಯ ಕೆಂಪೇಗೌಡನು ಮೊದಲ ಬಾರಿಗೆ ಜಾರಿಗೆ ತಂದನು. ಈ ನಾಣ್ಯಗಳನ್ನು ಭೈರವ ಅಥವಾ ಭೈರವೇಶ್ವರ ನಾಣ್ಯಗಳೆಂದು ಕರೆಯಲಾಗುತ್ತಿತ್ತು. "ವೀರಭದ್ರ" ಎಂಬ ವರಹಗಳನ್ನು ಮುದ್ರಿಸಿ ಜಾರಿಗೆ ತಂದ ಎಂದು ಹೇಳಲಾಗಿದೆ. ಬೆಂಗಳೂರಿನ ಕಾನಕಹಳ್ಳಿಯಲ್ಲಿ ನಾಣ್ಯಗಳನ್ನು ಟಂಕಿಸುವ ಟಂಕಸಾಲೆಯನ್ನು ಸ್ಥಾಪಿಸಲಾಗಿತ್ತು. ಗ್ರಾಮೀಣ ಭಾಗದಲ್ಲಿ ಆಯಾಗಾರ ಪದ್ಧತಿಯು ಇವರ ಕಾಲದಲ್ಲಿ ಅತ್ಯಂತ ಯಶಸ್ವಿಯಾಗಿ ಜಾರಿಯಲ್ಲಿತ್ತು.

ಚಿತ್ರದುರ್ಗ ನಾಯಕರು ಆರ್ಥಿಕವಾಗಿ ಅತ್ಯಂತ ಬಲಿಷ್ಠವಾದಂತಹ ಸಂಸ್ಥಾನವನ್ನು ಕಟ್ಟಿದರು. ಚಿತ್ರದುರ್ಗ ಪ್ರದೇಶವು ಬಹುತೇಕವಾಗಿ ಬಯಲು ಸೀಮೆಯ ಪ್ರದೇಶವಾಗಿತ್ತು. ಕೆಳದಿ ರಾಜ್ಯದಷ್ಟು ಆರ್ಥಿಕವಾಗಿ ಶ್ರೀಮಂತವಾಗಿರದಿದ್ದರೂ, ಆರ್ಥಿಕವಾಗಿ ಇವರು ಕೂಡ ಸಬಲರೇ ಆಗಿದ್ದರು. ಚಿತ್ರದುರ್ಗ ನಾಯಕರು ಕೃಷಿ ಚಟುವಟಿಕೆಗಳಿಗೆ ಹೆಚ್ಚು ಉತ್ತೇಜನವನ್ನು ನೀಡಿದರು. ಚಿತ್ರದುರ್ಗದ ಶಾಸನಗಳಲ್ಲಿ ಬಂದಿರುವ ತೋಟ ಎಂಬ ಪದದಿಂದ ತೆಂಗು, ಬಾಳೆ, ಮಾವು, ಸೀಬೆ, ನಿಂಬೆ, ಅಡಿಕೆ ಮುಂತಾದವುಗಳನ್ನು ಗಾವರಸೆಟ್ಟಿ ಎಂಬ ಪದದ ಉಲ್ಲೇಖವಿರುವುದರಿಂದ ವೀಳ್ಯದೆಲೆಯನ್ನು ಬೆಳೆಸುತ್ತಿದ್ದರೆಂದು ತಿಳಿದು ಬರುತ್ತದೆ. ಮೆಣಸಿನಕಾಯಿ, ಬದನೆ, ಬೆಂಡೆ, ಸಿಹಿಗುಂಬಳ, ಹುರುಳಿ, ಅವರೆ, ಬಾಳೆ, ಮಾವು, ಸೀಬೆ, ನಿಂಬೆ ಮುಂತಾದ ತರಕಾರಿ ಹಣ್ಣುಗಳನ್ನು ಅಲ್ಲದೆ ಬೂದಿಹಾಳಿನ ಸುತ್ತಮುತ್ತ ತೆಂಗನ್ನು ಬೆಳೆಯುತ್ತಿದ್ದರು. ನೀರಾವರಿ ಪ್ರಾಮುಖ್ಯತೆಯನ್ನು ಮನಗಂಡಿದ್ದ ಚಿತ್ರದುರ್ಗ ನಾಯಕರು ಹಲವಾರು ಕೆರೆಗಳನ್ನು ನಿರ್ಮಿಸಿದರು. ಚಿತ್ರದುರ್ಗದ ಭರಮಪ್ಪ ನಾಯಕನ ಕಾಲದಲ್ಲಿ ಸುಮಾರು ೬೦ ಕೆರೆಗಳು ನಿರ್ಮಾಣವಾದವು. ಚಿತ್ರದುರ್ಗ ನಾಯಕರ ಕಾಲದಲ್ಲಿ ವರಹ ಎಂಬ ಚಿನ್ನದ ನಾಣ್ಯಗಳು, ದುರ್ಗಿ ಎಂಬ ಪಗೋಡಗಳು ಚಲಾವಣೆಯಲ್ಲಿದ್ದವು. ಹರತಿ ಪಾಳೆಯಗಾರರು ಸಹ ತಮ್ಮ ಆಡಳಿತ ವ್ಯಾಪ್ತಿಯ ಪ್ರದೇಶದಲ್ಲಿ ಕೃಷಿ ಮತ್ತು ಕೈಗಾರಿಕಾ ಚಟುವಟಿಕೆಗಳಿಗೆ ಉತ್ತೇಜನ ನೀಡಿದರು. ಹಲವಾರು ಕೆರೆ–ಕಾಲುವೆಗಳನ್ನು ನಿರ್ಮಿಸಿದರು. ರಾಗಿ, ಜೋಳ, ನವಣೆ, ದ್ವಿದಳ, ಧಾನ್ಯಗಳಾದ ತೊಗರಿ, ಹೆಸರು, ಕಡಲೆ, ಅಗಸೆ, ಕುಸುಬಿ, ಅಲಸಂದಿ ಮುಂತಾದವುಗಳು ಇವರ ಕಾಲದ ಪ್ರಮುಖ ಬೆಳೆಗಳಾಗಿದ್ದವು. ಇವರ ನಾಣ್ಯ ಚಲಾವಣೆಯ ಕುರಿತು ಯಾವುದೇ ಮಾಹಿತಿಯು ಬೆಳಕಿಗೆ ಬಂದಿಲ್ಲ. ಹಂಡೆಯ ವಜೀರರು ಕೃಷಿ ಕೈಗಾರಿಕೆ ಮತ್ತು ಹೈನುಗಾರಿಕೆಗೆ ಹೆಚ್ಚು ಉತ್ತೇಜನ ನೀಡಿದರು. ಇವರ ಕಾಲದಲ್ಲಿ ರಾಗಿ, ಭತ್ತ, ಸಜ್ಜೆ, ನವಣೆ, ಜೋಳ, ಜವೆನೆಲ್ಲು, ಬರಗು (ಗೋಧಿಯಂತಹ ಧಾನ್ಯ, ಬಾರ್ಲಿ) ಮುಂತಾದವುಗಳನ್ನು ಬೆಳೆಯುತ್ತಿದ್ದರು. ದ್ವಿದಳ ಧಾನ್ಯಗಳಾದ ಹುರುಳಿ, ತೊಗರಿ, ಹೆಸರು, ಕಡಲೆ, ಅವರೆ, ಅಲಸಂದಿ, ಮಡಕೆ, ಕುಸುಬಿ, ಅಗಸೆ ಮುಂತಾದವುಗಳನ್ನು ಬೆಳೆಯುತ್ತಿದ್ದರು. ಇವುಗಳ ಜೊತೆ ತರಕಾರಿಗಳಾದ ಬದನೆ, ಬೆಂಡೆ, ಚಳ್ಳವರೆ, ಹೀರೆಕುಂಬಳ, ಅವರೆ ಕಲ್ಲುಪಡವಲ, ಶಮಿ, ಹರವಿ, ಕರಿಬೇವು, ರಾಜಗಿರಿ, ಸಬ್ಬಸಗೆ, ಮೆಂತೆ, ಕೊತ್ತಂಬರಿ ಮುಂತಾದವುಗಳನ್ನು ಬೆಳೆಯುತ್ತಿದ್ದರು.[೫೯] ಇವರ ಕಾಲದಲ್ಲಿ ವೃತ್ತಿಪರ ತೆರಿಗೆಗಳು ಮತ್ತು ಕೃಷಿ ಉತ್ಪನ್ನಗಳ ಮೇಲೆ ತೆರಿಗೆಗಳನ್ನು ವಿಧಿಸುತ್ತಿದ್ದರು. ಹಂಡೆಯ ವಜೀರರು ವ್ಯಾಪಾರ ಚಟುವಟಿಕೆಗಳನ್ನು ಮತ್ತು ಹೈನುಗಾರಿಕೆಯನ್ನು ಉತ್ತೇಜಿಸಿದರು.

ಗುಡೇಕೋಟೆಯ ಪಾಳೆಯಗಾರರು ತಮ್ಮ ಪ್ರದೇಶದಲ್ಲಿ ಬೆಳೆಯುತ್ತಿದ್ದ ಬೆಳೆಗಳ ಬಗ್ಗೆ ಹೀರೆಹಾಳ ಕೈಫಿಯತ್ತು ಈ ಕೆಳಗಿನಂತೆ ಮಾಹಿತಿಯನ್ನು ಒದಗಿಸುತ್ತದೆ. ಗೋಧಿ, ತೊಗರಿ, ಹೆಸರು, ಕಡ್ಲೆ, ಅವರೆ, ಎಳ್ಳು, ಅಲಸಂದಿ, ಔಡಲ, ಹುರುಳಿ, ನವಣೆ, ರಾಗಿ, ಅರಿಶಿಣ, ಜೋಳ, ಬರಗು, ಗುರೆಳ್ಳು, ಕುಸುಬಿ, ಬದನೆಕಾಯಿ, ಬೆಂಡೆಕಾಯಿ, ಪುಂಡೆ, ಚಳ್ಳವರೆಕಾಯಿ, ಹಿರೇಕಾಯಿ, ಕುಂಬಳಕಾಯಿ, ಮೆಣಸಿನಕಾಯಿ, ಹಾಲುಗುಂಬಳಕಾಯಿ, ತುಪ್ಪದ ಹಿರೇಕಾಯಿ, ಹರ್ವಿಪಲ್ಯೆ, ರಾಜಗಿರಿ, ಮೆಂತೆ

ಸಬ್ಬಕ್ಕಿ ಮತ್ತು ಕೊತ್ತಂಬರಿ ಸೊಪ್ಪನ್ನು ಬೆಳೆಯುತ್ತಿದ್ದರು. ಈ ಪಾಳೆಯಗಾರರು ಹಳ್ಳಿಗಳಿಂದ ಕಂದಾಯವನ್ನು ವಸೂಲಿ ಮಾಡುತ್ತಿದ್ದರು. ಆದರೆ ಕಂದಾಯ ವಸೂಲಿ ಮಾಡುವ ಪದ್ಧತಿಯು ವಿವರವಾಗಿ ತಿಳಿದು ಬಂದಿಲ್ಲ. ಇವರ ಆಡಳಿತಾವಧಿಯಲ್ಲಿ ಜನನ ಮರಣ ತೆರಿಗೆ ವಿಧಿಸುತ್ತಿದ್ದರೆಂದು ಎಂಬುದನ್ನು ಚೋರುನೊರು ವಿರಕ್ತಮಠದ ಮೊಗಸಾಲೆಯಲ್ಲಿರುವ ಶಾಸನವು ತಿಳಿಸುತ್ತದೆ.

೫.೭ ಅಮರನಾಯಕರ ಕಾಲದ ಸಾಂಸ್ಕೃತಿಕ ಕೊಡುಗೆಗಳು

ಅಮರನಾಯಕರ ಕಾಲದ ಸಾಂಸ್ಕೃತಿಕ ಕೊಡುಗೆಗಳು ಹೆಚ್ಚು ಕಡಿಮೆ ವಿಜಯನಗರ ಕಾಲದ ಸಾಂಸ್ಕೃತಿಕ ಕೊಡುಗೆಗಳೊಂದಿಗೆ ಬೆರೆತುಹೋಗಿವೆ ಕಾರಣವಿಷ್ಟೆ! ಅಮರನಾಯಕರು ವಿಜಯನಗರ ಕಾಲದ ಪ್ರಾಂತೀಯ ಮಟ್ಟದಲ್ಲಿ ಹುದ್ದೆಯಲ್ಲಿದ್ದು ತಮ್ಮ ಆಡಳಿತ ಪ್ರದೇಶದ ವ್ಯಾಪ್ತಿಯಲ್ಲಿ ತಮ್ಮ ಅಧಿಕಾರಾವಧಿಯಲ್ಲಿ ನಿರ್ಮಿಸಿದ ದೇವಾಲಯಗಳು, ಮಠ–ಮಂದಿರಗಳು, ಸಾರ್ವಜನಿಕ ಕಟ್ಟಡಗಳು ಕೆರೆ ಕಾಲುವೆಗಳನ್ನು ವಿಜಯನಗರದ ಅರಸರಿಗೆ ಸಮರ್ಪಿಸಿರುವುದರಿಂದ ಎಲ್ಲ ಸ್ಮಾರಕಗಳು ವಿಜಯನಗರ ಕಾಲದ ಕಲಾಶೈಲಿಯಲ್ಲಿ ಹೊರಬಂದಿವೆ. ಹಾಗೆಯೇ ಈ ಅಮರನಾಯಕ ವಂಶಸ್ಥರೇ ವಿಜಯನಗರದ ಪತನದ ನಂತರ ಸ್ವತಂತ್ರ ನಾಯಕರಾಗಿ ಹೊರಮ್ಮಿದ್ದರಿಂದ ತಮ್ಮ ಹಿಂದಿನ ಕಲಾಶೈಲಿಯನ್ನು ಮುಂದುವರಿಸಿಕೊಂಡು ಹೋಗಿದ್ದರಿಂದ ಇದನ್ನು ವಿಜಯನಗರೋತ್ತರ ಕಲಾಶೈಲಿಯೆಂದೇ ಇತಿಹಾಸ ತಜ್ಞರು ಗುರುತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ವಿಜಯನಗರ ಕಾಲದಲ್ಲಿ ಅಮರನಾಯಕರಾಗಿ ಬದಲಾದ ರಾಜಕೀಯ ಸ್ಥಿತ್ಯಂತರಗಳಿಗೆ ಈಡಾಗಿ ಪಾಳೆಯಗಾರರಾಗಿ ಹೊರಹೊಮ್ಮಿದ ಕೆಲ ಅಮರನಾಯಕರ ಸಾಂಸ್ಕೃತಿಕ ಕೊಡುಗೆಗಳನ್ನು ಮಾತ್ರ ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಅಮರನಾಯಕರ ಕಾಲದ ಕಲೆಯ ಉಗಮವನ್ನು ಕುರಿತಂತೆ ಜಿಜ್ಞಾಸೆ ನಡೆಸಿದಾಗ ಅವರ ಕಾಲದ ಕಲೆಯಲ್ಲಿ ಹಲವಾರು ಕಲಾತ್ಮಕ ಅಂಶಗಳು ಗಮನಸೆಳೆಯುತ್ತವೆ. ಗಟ್ಟಿಯಾದ ಕಣಶಿಲೆಯಲ್ಲಿ ಕೆತ್ತಿದ ಶಿಲ್ಪಗಳಲ್ಲಿ ನಾಜೂಕಾದ ಕಲೆಯು ಒಡಮೂಡದಿದ್ದರೂ ಕೂಡ ವಿಜಯನಗರ ಕಲಾ ಶೈಲಿಯ ಪ್ರಭಾವವಂತೂ ದಟ್ಟವಾಗಿ ಪ್ರಭಾವ ಬೀರಿರುವುದನ್ನು ಕೆಳದಿ, ಯಲಹಂಕ, ಚಿತ್ರದುರ್ಗ, ಹರತಿ, ಹಂಡೆ, ಗುಡೇಕೋಟೆಯ ನಾಯಕರ ಕಾಲದ ಕಲಾಸ್ಮಾರಕಗಳನ್ನು ನೋಡಿದಾಗ ಸ್ಪಷ್ಟವಾಗುತ್ತದೆ. ವಿಜಯನಗರ ಕಾಲದ ಮುಂದುವರಿದ ಕಲಾಶೈಲಿಯನ್ನು ನಾಯಕರ ಕಾಲದ ಕಲಾ ಶೈಲಿಯಲ್ಲಿ ಗುರುತಿಸಬಹುದು. ಕಲಾ ಕ್ಷೇತ್ರಕ್ಕೆ ನಾಯಕ ಅರಸರು ನೀಡಿದಂತಹ ಕೊಡುಗೆಯನ್ನು ಈ ಕೆಳಗಿನಂತೆ ವಿವರಿಸಬಹುದು.

ಕೆಳದಿ

ಕೆಳದಿ ನಾಯಕರು ವಿಜಯನಗರ ಅರಸರ ಮೊದಲ ವರ್ಗದ ಅಮರನಾಯಕರಾಗಿದ್ದರು. ಸಾಳ್ವ ನರಸಿಂಗರಾಯನ ಕಾಲದಿಂದ ಶ್ರೀರಂಗನ ಕಾಲದ ನಾಯಕ ಶಿವಪ್ಪನಾಯಕನ ಕಾಲದವರೆಗೂ ಕೆಳದಿಯ ನಾಯಕರು ವಿಜಯನಗರದೊಂದಿಗೆ ಸೌಹಾರ್ದಯುತ ಸಂಬಂಧಗಳನ್ನು ಹೊಂದಿದ್ದರು.

ಕೆಳದಿಯ ಸಂಸ್ಥಾಪಕನಾದ ಚೌಡಪ್ಪನಿಂದ ಚಿಕ್ಕ ಸಂಗಣ್ಣ ನಾಯಕನ ಕಾಲದವರೆಗೂ ವಿಜಯನಗರದ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ವಲಯಗಳ ಅಭ್ಯುದಯಕ್ಕೆ ಈ ನಾಯಕರು ಅವಿರತವಾಗಿ ದುಡಿದರು. ಸಾಂಸ್ಕೃತಿಕ ವಲಯಕ್ಕೆ ಇವರು ನೀಡಿದ ಕೊಡುಗೆಗಳು ಅನನ್ಯವಾಗಿದ್ದು ಕೆಳದಿ, ಇಕ್ಕೇರಿ, ಹಳೆನಗರ ಮತ್ತು ಕವಲೆದುರ್ಗದಲ್ಲಿ ಕಟ್ಟಿಸಿದಂದಂತಹ ದೇವಾಲಯಗಳು, ಶಿವಮೊಗ್ಗದಲ್ಲಿ ನಿರ್ಮಿಸಿರುವಂತಹ ಅರಮನೆಯ ಸಂಪೂರ್ಣವಾಗಿ ವಿಜಯನಗರದ ಶೈಲಿಯಲ್ಲಿವೆ.[೬೦]

ರಾಮೇಶ್ವರ ದೇವಾಲಯ: ಕ್ರಿ.ಶ. ೧೫೧೨ರಲ್ಲಿ ನಿರ್ಮಾಣವಾದ ಈ ದೇವಾಲಯವನ್ನು ದ್ರಾವಿಡ ಹೊಯ್ಸಳ ಶೈಲಿಯಲ್ಲಿ ಹಸಿರು ಬಣ್ಣದ ಕಲ್ಲುಗಳಿಂದ ನಿರ್ಮಿಸಲಾಗಿದೆ. ಈ ದೇಗುಲದ ನಿರ್ಮಾಣ ಕಾರ್ಯವು ಮೊದಲು ಚೌಡಪ್ಪನ ಕಾಲದಿಂದ ಆರಂಭವಾಯಿತು. ಚೌಡಪ್ಪನ ಮರಣದ ನಂತರ ಆಳ್ವಿಕೆಗೆ ಬಂದ ಸದಾಶಿವ ನಾಯಕನು ಇಂದು ಕಾಣುವ ಶ್ರೀ ರಾಮೇಶ್ವರ ದೇವಾಲಯವನ್ನು ಸುಂದರ/ಹಸಿರು ಬಣ್ಣದ ಶಿಲೆಯಿಂದ ನಿರ್ಮಿಸಿದನು. ಹಿರಿಯ ವೆಂಕಟಪ್ಪನಾಯಕನ ಕಾಲದಲ್ಲಿ ರಾಮೇಶ್ವರ ದೇವರ ರಂಗಮಂಟಪ ನಿರ್ಮಾಣವಾಯಿತೆಂದು ದಾಖಲೆಗಳಿಂದ ತಿಳಿದು ಬರುತ್ತದೆ.[೬೧] ಈ ದೇವಾಲಯವು ಚಿಕ್ಕದಾದ ಗರ್ಭಗೃಹ, ಪ್ರದಕ್ಷಿಣಾ ಪಥ, ನವರಂಗ, ಮುಖ ಮಂಟಪಗಳಿಂದ ಕೂಡಿದೆ. ಜಗುಲಿಯ ಹೊರಭಾಗದ ಒಂದು ದಿಂಡಿನಲ್ಲಿ ವಾದ್ಯಗಾರರ, ನರ್ತಕರ ಶಿಲ್ಪಗಳಿವೆ. ಎರಡು ಅಡಿ ಎತ್ತರದ ಮೆರುಗಿರುವ ಶಿವಲಿಂಗವಿರುವ ಗರ್ಭಗೃಹದ ಭಿತ್ತಿಯಲ್ಲಿ ಚಚೌಕದ ಕಂಬಗಳ ಅಲಂಕಾರವಿದೆ; ನಡುವೆ ಗರುಡ, ಹನುಮ, ಒಂಟೆ, ಆನೆ, ಮಿಥುನಶಿಲ್ಪಗಳು, ಆನೆಯ ಜೊತೆ ಹೋರಾಟ ನಡೆಸುತ್ತಿರುವ ಯೋಧ, ಸೋಮ ಗ್ರಹಣ, ಮದ್ದಳೆಗಾರ, ಯೋಗನಿರತ ರಾಮೇಶ್ವರ ಮೊದಲಾದ ಶಿಲ್ಪಗಳಿವೆ. ಮುಂದೆ ಚಾಚಿಕೊಂಡಿರುವ ಚಾವಣಿಯ ಏಣುಗಳಲ್ಲಿ ವೀರಭದ್ರ ತಾಂಡವೇಶ್ವರ, ಪಾರ್ವತಿ, ಮೋಹಿನಿ, ವೇಣುಗೋಪಾಲ, ಕಾಳಿಂಗಮರ್ದನ ಭೈರವ ಶಿಲ್ಪಗಳಿವೆ. ಗರ್ಭಗೃಹದ ಮೇಲಿನ ಗೋಪುರ ಚೌಕಾಕಾರದ್ದಾಗಿದೆ. ಮುಖಮಂಟಪವು ನಾಲ್ಕು ಅಂಕಣ ಉದ್ದ ಮತ್ತು ಮೂರು ಅಂಕಣ ಅಗಲವಿದೆ. ಹದಿನೆಂಟು ಕಂಬಗಳು ಇಲ್ಲಿವೆ. ಇಲ್ಲಿ ಎಡ ಬಲಗಳಲ್ಲಿ ಗಣಪತಿ, ಮಹಿಷಿಮರ್ಧಿನಿಯ ಮೂರ್ತಿಗಳಿವೆ; ದ್ವಾರಬಂಧದ ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರಿದ್ದಾರೆ. ನವರಂಗ ಚಿಕ್ಕದಾಗಿದೆ. ಇಲ್ಲಿ ಬಸವ ಮತ್ತು ಶಿವಪಾರ್ವತಿಯವರ ಉತ್ಸವ ಮೂರ್ತಿಗಳಿವೆ. ಪ್ರದಕ್ಷಿಣಾ ಪಥದ ಕಲ್ಲು ಒಂದು ಗುಂಟೆಯಷ್ಟು ದೊಡ್ಡದಾಗಿದೆ. ಇದರ ಮೇಲೆ ಆರು ಕಂಬಗಳಿವೆ. ಈ ದೇವಾಲಯವು ಮೂರು ಪ್ರವೇಶ ದ್ವಾರಗಳನ್ನು ಹೊಂದಿದೆ. ಒಳಗೆ ಸುತ್ತಲೂ ಕುಳಿತುಕೊಳ್ಳುವಂಥ ಜಗುಲಿಯಿದೆ.[೬೨]

ನವಗ್ರಹಗಳು, ನಾಗಬಂಧಗಳು, ದಕ್ಷಬ್ರಹ್ಮ, ನಾರಸಿಂಹ ಶಿಲ್ಪಗಳು, ಕಮಲ ಶಿಲ್ಪಗಳಿವೆ. ದೇವಾಲಯದ ಕಂಬಗಳು ಯಾಳಿಗಳಿಂದ ಕೂಡಿದೆ. ಒಂದೆಡೆ ಮರಾಠ ಪ್ರಭಾವದ ಕುದುರೆ ಸವಾರ ಆನೆ ಮುಖದ ಹಂಸ, ಯೋಗಿಯ ಶಿರದ ಅರ್ಧ ಭಾಗದಲ್ಲಿ ವೃಕ್ಷ ಬೆಳೆದ ಶಿಲ್ಪ ರಾಜಚಿಹ್ನೆಯಿಂದ ಕೂಡಿದ ನಾಯಕ, ಕಮಲಗಳು, ಚಂದ್ರ, ಆನೆ, ಸಿಂಹ, ಹೂವು, ಪರ್ವತ,

ಮಾವು, ಎತ್ತು ಮೊದಲಾದಗಳನ್ನು ಕೆತ್ತಲಾಗಿದೆ. ಗರ್ಭಗೃಹದಲ್ಲಿ ವೀರಭದ್ರನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ.

ಅಘೋರೇಶ್ವರ ದೇವಾಲಯ: ಕೆಳದಿ ನಾಯಕರು ಕಟ್ಟಿಸಿದಂತಹ ಅತ್ಯಂತ ಸುಂದರವಾದ ಬೃಹತ್ ದೇವಾಲಯಗಳಲ್ಲಿ ಆಘೋರೇಶ್ವರ ದೇವಾಲಯವು ಒಂದಾಗಿದೆ. ಈ ದೇವಾಲಯವನ್ನು ಕ್ರಿ.ಶ. ೧೫೨೦ರಲ್ಲಿ ಕಟ್ಟಿಸಲಾಗಿದೆ. ಇದು ಹೊಯ್ಸಳ ಮತ್ತು ವಿಜಯನಗರದ ಶೈಲಿಗಳನ್ನು ಒಳಗೊಂಡಿರುವಂತಹ ದೇವಾಲಯವಾಗಿದೆ. ಹೊಯ್ಸಳರ ಶೈಲಿಯ ಎತ್ತರವಾದ ಜಗಲಿ, ಕಲ್ಲಿನ ಗೋಪುರ, ೧೬ ಮುಖಗಳುಳ್ಳ ದುಂಡಗಿನ ಕಂಬಗಳು, ಅಲಂಕಾರವುಳ್ಳ ಭಿತ್ತಿಗಳು, ಗರ್ಭಗೃಹದ ಸುತ್ತಲೂ ಪ್ರದಕ್ಷಿಣ ಪಥ ಮತ್ತು ಎರಡು ಸುಖನಾಸಿಗಳು ಮತ್ತು ಒಂದು ನವರಂಗ ಕಂಡು ಬರುತ್ತದೆ. ಈ ಬಗ್ಗೆ ನೃಪವಿಜಯಂ ಕಾವ್ಯದಲ್ಲಿ ಮಾಹಿತಿಯಿದೆ. ಹಾಗೆಯೇ ಬಿ.ಎಲ್ ರೈಸ್ (ಸಂ) ಗೆಝೆಟಿಯರನಲ್ಲಿ ಸಂಕ್ಷಿಪ್ತ ಮಾಹಿತಿಗಳು ದೊರೆಯುತ್ತವೆ. ಈ ರಾಮೇಶ್ವರ ದೇವಾಲಯಕ್ಕೆ ಕೆಳದಿಯ ಅರಸರು ಭಕ್ತಿ ಶ್ರದ್ಧೆಗಳಿಂದ ನಡೆದುಕೊಳ್ಳುತ್ತಿದ್ದರು. ಹಾಗೂ ದೇವಾಲಯಕ್ಕೆ ಅಪಾರ ಪ್ರಮಾಣದ ಭೂ ದತ್ತಿಗಳನ್ನು ನೀಡಿದ್ದರು.

ವೀರಭದ್ರ ದೇವಾಲಯ: ವೀರಭದ್ರ ದೇವಾಲಯವನ್ನು ರಾಮೇಶ್ವರ ದೇವಾಲಯಕ್ಕೆ ಹೊಂದಿಕೊಂಡಂತೆ ನಿರ್ಮಿಸಲಾಗಿದೆ. ಕ್ರಿ.ಶ. ೧೫೩೦ ಮತ್ತು ೧೫೪೦ರ ಮಧ್ಯಕಾಲದಲ್ಲಿ ಈ ದೇವಾಲಯ ನಿರ್ಮಾಣಗೊಂಡಿತು.[೬೩] ಕೆಳದಿ ನೃಪವಿಜಯಂ ಕಾವ್ಯವು ದೊಡ್ಡ ಸಂಕಣ್ಣ ನಾಯಕನು ತೀರ್ಥಯಾತ್ರೆಗೆ ಹೋಗಿದ್ದಾಗ ಕನಸಿನಲ್ಲಿ ವೀರಭದ್ರನನ್ನು ಕಂಡು ಅಂತೆಯೇ ಇಲ್ಲಿ ಪ್ರತಿಷ್ಠಾಪನೆ ಮಾಡಿದನೆಂದು ತಿಳಿಸುತ್ತದೆ. ನಂತರ ಭದ್ರಪ್ಪ ನಾಯಕನ್ನು ಈ ದೇವಾಲಯ ನಿರ್ಮಾಣ ಕಾರ್ಯವನ್ನು ಪೂರ್ತಿಗೊಳಿಸಿದನು. ಈ ದೇವಾಲಯದ ಗರ್ಭಗೃಹದ ಅದಿಷ್ಠಾನವು ಅನೇಕ ಚಿಕ್ಕ ಶಿಲ್ಪಗಳಿಂದ ಮತ್ತು ಗೋಡೆಯು ಅನೇಕ ಗೋಡೆಗಂಬಗಳಿಂದ ಅಲಂಕರಿಸಲ್ಪಟ್ಟಿದೆ. ಪಶ್ಚಿಮದ ಗೋಡೆಯ ಮೇಲೆ ವಾಸ್ತು ಪುರುಷನ ಶಿಲ್ಪವಿದೆ. ಈ ವಾಸ್ತುಪುರುಷನ ಬಲ ಭಾಗದಲ್ಲಿ ಸ್ತ್ರಿ ಮತ್ತು ಮಗುವಿದ್ದಾರೆ. ಎಡ ಪಾರ್ಶ್ವದಲ್ಲಿ ಮೋಹಿನಿ ಭಸ್ಮಾಸುರರಿದ್ದಾರೆ. ಮಂಟಪದ ಮುಂದೆ ಒಂದು ಚಿಕ್ಕ ಎತ್ತರವಾದ ಜಗುಲಿಯು ಐದು ಭಾಗಗಳನ್ನು ಹೊಂದಿದ್ದು, ಅವುಗಳಲ್ಲಿ ಎರಡರ ಮೇಲೆ ಕೀರ್ತಿಮುಖ ಹಾಗೂ ಹಿಂಗಾಲುಗಳ ಮೇಲೆ ನಿಂತಿರುವ ಸಿಂಹಗಳ ಅಲಂಕಾರವಿದೆ. ಈ ಜಗುಲಿಯು ಕೇವಲ ಗರ್ಭಗೃಹಕ್ಕೆ ಮಾತ್ರವಿದೆ. ಗರ್ಭಗೃಹದಲ್ಲಿ ಕಲ್ಲಿನ ಶಿವಲಿಂಗವಿದೆ. ಈ ದೇವಾಲಯದಲ್ಲಿ ೩೨ ಕೈಗಳ ಅಘೋರೇಶ್ವರನ ಉತ್ಸವ ಮೂರ್ತಿಯಿದೆ. ಅರ್ಧಮಂಟಪದ ದ್ವಾರದಲ್ಲಿ ಎರಡು ಬದಿಯಲ್ಲಿ ಅಘೋರೇಶ್ವವರನ ಪರಿವಾರದ ಕೆತ್ತನೆಗಳಿವೆ. ಎಡಭಾಗದಲ್ಲಿ ಮಹಿಷಮರ್ದಿನಿ, ಭೈರವನ ಕೆತ್ತನೆಗಳಿವೆ. ಬಲಭಾಗದಲ್ಲಿ ಗಣಪತಿ, ಷಣ್ಮುಖನ ಕೆತ್ತನೆಗಳಿವೆ. ಎದುರಿನ ಮುಖಮಂಟಪವು ಕೆತ್ತನೆಯಿರುವ ಕಂಬಗಳ ಆಧಾರದ ಮೇಲೆ ನಿಂತಿದೆ. ದೇಗುಲವು ದ್ರಾವಿಡ ಶೈಲಿಯ ಕಳಸವನ್ನು ಹೊಂದಿದೆ. ದೇಗುಲದ ಪಶ್ಚಿಮದಲ್ಲಿ ಇದೇ ಶೈಲಿಯ ಆದರೆ ಸ್ವಲ್ಪ

ಸಣ್ಣದಾದ ಅಖಿಲಾಂಡೇಶ್ವರಿಯ ದೇಗುಲವಿದೆ. ಎದುರಿಗೆ ನಂದಿ ಮಂಟಪವಿದೆ. ಈ ಮಂಟಪದ ನಾಲ್ಕು ಬದಿಗೆ ಕಮಾನಿನ ಪ್ರವೇಶಗಳಿವೆ.[೬೪]

ಪಾರ್ವತಿ ದೇವಾಲಯ: ಕೆಳದಿ ನಾಯಕರ ಕಾಲದಲ್ಲಿ ನಿರ್ಮಾಣವಾಗಿರುವ ಸುಂದರವಾದ ದೇವಾಲಯಗಳಲ್ಲಿ ಪಾರ್ವತಿ ದೇವಾಲಯವು ಒಂದಾಗಿದೆ. ಈ ದೇವಾಲಯದಲ್ಲಿ ಭೈರವ, ಷಣ್ಮುಖ, ಗಣೇಶ, ಅಂಧಕಾಸುರನ ವಧೆಯಲ್ಲಿರುವ ನಟರಾಜ, ಪುರುಷಾಮೃಗ ಕಣ್ಣಪ್ಪ, ಗಜಲಕ್ಷ್ಮಿಯ ಶಿಲ್ಪಗಳಿವೆ. ಈ ದೇವಾಲಯದಲ್ಲಿಯೇ ಕೆಳದಿ ಸಂಸ್ಥಾನದ ಉದಯಕ್ಕೆ ಮೂಲಕಾರಣದಿಂದ ಎಡವ ಬಲವ-ಮುರಾರಿಯವರ ಮರದ ಮೂರ್ತಿಗಳು ಮತ್ತು ಅವರ ಹೆಂಡತಿಯವರ ಮೂರ್ತಿಗಳು ಹಾಗೂ ಇತರೆ ಚಂದನದ ಕೆತ್ತನೆಗಳು ಇದೆ. ಗರ್ಭಗೃಹವು ಶಿಲಾಮಯದಿಂದ ಕೂಡಿದ್ದು ಪಾರ್ವತಿಯ ಶಿಲ್ಪ ಸುಂದರವಾಗಿದೆ. ಈ ದೇವಾಲಯದ ಛಾವಣಿಯಲ್ಲಿ ೪೦-೫೦ ಬಗೆಯ ಹೂವಿನ ಕೆತ್ತನೆಗಳಲ್ಲಿ ಪ್ರತಿಯೊಂದು ಭಿನ್ನವಾಗಿವೆ. ಇದು ಈ ಶಿಲ್ಪಗಳ ಕರಕುಶಲ ಕಲೆಗೆ ಸಾಕ್ಷಿಯಾಗಿದೆ. ನವರಾತ್ರಿಯಂದು ಈ ದೇಗುಲದಲ್ಲಿ ದುರ್ಗಾಪೂಜೆಯ ಬಹು ವಿಜೃಂಭಣೆಯಿಂದ ನಡೆಯುತ್ತದೆ.

ಕೊಲ್ಲೂರು ಮೂಕಾಂಬಿಕಾ ದೇವಾಲಯ: ಕೆಳದಿ ನಾಯಕರ ಕಾಲದಲ್ಲಿ ನಿರ್ಮಾಣಗೊಂಡ ಮತ್ತೊಂದು ಬೃಹತ್ ಪ್ರಮಾಣದ ದೇವಾಲಯವೆಂದರೆ ಕೊಲ್ಲೂರು ಮೂಕಾಂಬಿಕೆ. ಮೂಕಾಂಬಿಕೆಯು ಕೊಲ್ಲೂರಿನ ಅಧಿದೇವತೆಯಾಗಿದ್ದಳು. ಕೆಳದಿಯ ವೆಂಕಟಪ್ಪ ನಾಯಕನ ಕಾಲದಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯ ಸಂಪೂರ್ಣ ಶಿಲೆಯಿಂದ ನಿರ್ಮಿಸಲ್ಪಟ್ಟಿದೆ. ಕೆಳದಿ ನಾಯಕರು ಈ ದೇವಾಲಯಕ್ಕೆ ಅಪಾರ ಪ್ರಮಾಣದ ದಾನ-ದತ್ತಿಗಳನ್ನು ನೀಡಿ ಅಭಿವೃದ್ಧಿಪಡಿಸಿದರು.

ಕೆಳದಿಯ ನಾಯಕರು ನೂತನವಾಗಿ ದೇವಾಲಯಗಳನ್ನು ನಿರ್ಮಿಸಿದ್ದಲ್ಲದೇ ಹಲವಾರು ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿದರು. ಇವರ ಕಾಲದಲ್ಲಿ ರಾಮೇಶ್ವರ, ವೀರಭದ್ರ ಅಘೋರೇಶ್ವರ ಪಾರ್ವತಿ ಮೊದಲಾದ ಶೈವ ದೇವಾಲಯಗಳು ನಿರ್ಮಾಣಗೊಂಡರೆ, ಕಾಶಿಯಲ್ಲಿನ ಕರ್ದಮೇಶ್ವರ, ನರ್ಮವೇಶ್ವರ, ಭೀಮಚಂಡಿಕೆ, ವೃಷಭಧ್ವಜೇಶ್ವರ ದೇವಾಲಯಗಳು ಹಾಗೂ ಧರ್ಮಸ್ಥಳ, ಗೋಕರ್ಣ ದೇವಾಲಯಗಳು ಜೀರ್ಣೋದ್ಧಾರಗೊಂಡವು. ಇವರ ಕಾಲದಲ್ಲಿ ಉಡುಪಿಯು ವೈಷ್ಣವರ ಪ್ರಮುಖ ಕೇಂದ್ರವಾಗಿತ್ತು. ಉತ್ತರ ಕನ್ನಡ ಜಿಲ್ಲೆಯ ಸೋದೆಯ ವಾದಿರಾಜತೀರ್ಥರ ಮಠ ಹಾಗೂ ತೀರ್ಥಹಳ್ಳಿಯ ಅಕ್ಷೋಭ್ಯತೀರ್ಥ ಮಠಗಳು ಕೆಳದಿ ಅರಸರ ಆಶ್ರಿತ ಮಠಗಳಾಗಿದ್ದು, ಅಪಾರ ಪ್ರಮಾಣ ಸೌಲಭ್ಯಗಳನ್ನು ಪಡೆದಿದ್ದವು. ಉಡುಪಿಯ ಕೃಷ್ಣ ದೇವಾಲಯದ ನಿರ್ವಹಣೆಗಾಗಿ ಬಾರಕೂರು ಪ್ರದೇಶಕ್ಕೆ ಸೇರಿದ್ದ ಹೂವಿನ ಕೆರೆ ಎಂಬ ಗ್ರಾಮವನ್ನು ದಾನವನ್ನಾಗಿ ಈ ನಾಯಕರು ಪಾಲಿಸಿದ್ದರು.[೬೫]

ಒಟ್ಟಿನಲ್ಲಿ ಕೆಳದಿಯ ನಾಯಕರು ವೀರಶೈವ ಮತಾವಲಂಬಿಗಳಾಗಿದ್ದರೂ ಎಲ್ಲ ಧರ್ಮಗಳಿಗೂ ಸಮಾನ ಆದ್ಯತೆಯನ್ನು ನೀಡಿ ಪ್ರೋತ್ಸಾಹ ನೀಡಿದರು. ವಿಜಯನಗರದವರಂತೆ ಸರ್ವಧರ್ಮ

ಸಹಿಷ್ಣುತೆ ಇವರ ಧಾರ್ಮಿಕ ನೀತಿಯ ತಳಹದಿಯಾಗಿತ್ತು. ವಿಜಯನಗರದಂತಹ ಸೇನಾ ಸಾಮ್ರಾಜ್ಯದ ಅಮರನಾಯಕರಾಗಿ ಅವರ ಜೊತೆ ಈ ನಾಯಕರು ನಿರಂತರವಾದ ಯುದ್ಧಗಳಲ್ಲಿ ತೊಡಗಿಕೊಂಡಿದ್ದರೂ ಸಹ ಕಲಾ ಕ್ಷೇತ್ರಕ್ಕೆ ವಿಶೇಷ ಗಮನ ನೀಡುವುದರ ಮೂಲಕ ನಾಡಿನ ಸಾಂಸ್ಕೃತಿಕ ಕ್ಷೇತ್ರಕ್ಕೆ ತಮ್ಮದೇ ಆದಂತಹ ಕೊಡುಗೆಯನ್ನು ಸಲ್ಲಿಸಿದರು.

ಯಲಹಂಕ

ಯಲಹಂಕ ನಾಡಪ್ರಭುಗಳು ವಿಜಯನಗರದ ಅರಸರ ರಾಜಕೀಯ ಮತ್ತು ಧಾರ್ಮಿಕ ನೀತಿಗಳನ್ನು ಅನುಸರಿಸಿದರು. ವಿಜಯನಗರಕ್ಕಿಂತ ಭಿನ್ನವಾದ ಅನೇಕ ಉದಾತ್ತ ಅಂಶಗಳನ್ನು ಇವರ ಆಡಳಿತದಲ್ಲಿ ಕಾಣಬಹುದಾಗಿದೆ. ಆಕ್ರಮಣಶೀಲ ಮನೋಭಾವಕ್ಕೆ ಹೆಚ್ಚು ಶರಣಾಗದೇ ಪ್ರಜಾಹಿತ ಕಾರ್ಯಗಳನ್ನು ಪ್ರಮುಖವಾಗಿ ಕಾಣುತ್ತ ಬಂದ ಇವರ ಸಂಕಲ್ಪ ಶಕ್ತಿ ಮತ್ತು ಕಾರ್ಯಕ್ರಮಗಳು ಧರ್ಮದ ತಳಹದಿಯ ಮೇಲೆ ಆಧಾರಗೊಂಡಿದ್ದವೆಂದರೆ ತಪ್ಪಾಗಲಾರದು. ಅಂತೆಯೇ ಇವರ ಅವಧಿಯಲ್ಲಿ ನಿರ್ಮಾಣಗೊಂಡ ಅನೇಕ ಗುಡಿ–ಗೋಪುರಗಳ ಪ್ರಕಾರಗಳು, ಅನ್ನ ಛತ್ರಗಳು, ತಟಾಕಾಗಳು, ಮಠ, ಅಗ್ರಹಾರಗಳು ಮುಂತಾದ ಜನಪರವಾದ ಹಾಗೂ ಜನೋಪಕಾರಿಯಾದ ಚಟುವಟಿಕೆಗಳು ಧಾರ್ಮಿಕ ಮನೋಭಾವದ ಹಿನ್ನೆಲೆಯಲ್ಲಿಯೇ ಬಿಂಬಿತವಾಗಿವೆ.[೬೬]

ಯಲಹಂಕ ನಾಡಪ್ರಭುಗಳು ಸಾಂಸ್ಕೃತಿಕ ವಲಯಕ್ಕೆ ನೀಡಿದ ಕೊಡುಗೆಗಳನ್ನು ಈ ಕೆಳಗಿನಂತೆ ವಿವರಿಸಬಹುದು.

ಯಲಹಂಕ ನಾಡಪ್ರಭುಗಳ ಕಾಲದ ದೇವಾಲಯಗಳು

ಯಲಹಂಕ ನಾಡಪ್ರಭುಗಳು ವಿಜಯನಗರದ ಅಮರನಾಯಕರಾಗಿ ಅವರ ಸಾಮಂತ ರಾಜರ ಸ್ಥಾನಮಾನ ಪಡೆದಿದ್ದ ಕಾರಣ ಅವರ ಕಾಲದ ಕಲೆ ಮತ್ತು ವಾಸ್ತುಶಿಲ್ಪದ ಮೇಲೆ ವಿಜಯನಗರದ ಪ್ರಭಾವ ಎದ್ದು ಕಾಣುತ್ತದೆ. ಇವರ ಕಾಲದಲ್ಲಿ ನಿರ್ಮಾಣಗೊಂಡ ಪ್ರಮುಖ ದೇವಾಲಯಗಳೆಂದರೆ ಅವತಿಯ ತಿಮ್ಮರಾಯಸ್ವಾಮಿ, ಚೆನ್ನಕೇಶವ, ದೇವನಹಳ್ಳಿಯ ಗೋಪಾಲಕೃಷ್ಣ, ಬೆಂಗಳೂರಿನ ಗವಿ ಗಂಗಾಧರೇಶ್ವರ, ಬಸವನಗುಡಿ ಬಡಾವಣೆಯ ದೊಡ್ಡ ಬಸವಣ್ಣನ ಗುಡಿ, ಹಲಸೂರು ಸೋಮೇಶ್ವರ, ಬಳ್ಳಾಪುರದ ಪೇಟೆರಂಗಸ್ವಾಮಿ, ಮಾಗಡಿ ಸೋಮೇಶ್ವರ, ತಿರುಮಲೆ ರಂಗನಾಥಸ್ವಾಮಿ, ಸಾವನದುರ್ಗ ವೀರಭದ್ರಸ್ವಾಮಿ, ಚಿಕ್ಕಬಳ್ಳಾಪುರದ ರಂಗನಾಥಸ್ವಾಮಿ, ಶಿವಗಂಗೆಯ ಕೆಂಪೇಗೌಡ ಹಜಾರ, ಹೊನ್ನಮ್ಮನ ಮಠ, ಉಜ್ಜನಿ ಮಠ, ಗುಮ್ಮಳಪುರದ ದೊಡ್ಡ ಮಠ ಮುಂತಾದವು. ಇವಲ್ಲದೆ ಕೆಲವೆಡೆ ಹಿಂದೆ ಇದ್ದ ದೇವಾಲಯಗಳನ್ನು ವಿಸ್ತರಣೆ ಮಾಡಿದರು ಅವುಗಳಲ್ಲಿ ನಂದಿಯ ಭೋಗನಂದೀಶ್ವರ ದೇವಾಲಯ, ಶಿವಗಂಗೆಯ ಹೊನ್ನಮ್ಮ ಹಾಗೂ ಗಂಗಾಧರೇಶ್ವರ ದೇವಾಲಯಗಳು, ಗೋಪಿನಾಥ ಗುಡ್ಡದ ಗೋಪಾಲಕೃಷ್ಣ ಸ್ವಾಮಿ ದೇವಾಲಯ, ಸಂಕೀಗಟ್ಟದ ಬಸದಿ, ಬೆಂಗಳೂರಿನ ಗುಟ್ಟಹಳ್ಳಿಯ ಗವಿಗಂಗಾಧರೇಶ್ವರ ದೇವಾಲಯ ಮುಖ್ಯವಾದವು.

ಇವಲ್ಲದೆ ಬಿಡಿ ರಚನೆಗಳಾದ ಕಾವಲು ಗೋಪುರಗಳು, ಎತ್ತರವಾದ ದೀಪ ಸ್ತಂಭಗಳು, ಉಯ್ಯಾಲೆಗಳು, ಬಿಡಿ ದೇವಾಲಯಗಳು, ಪ್ರವೇಶ ಗೋಪುರಗಳು, ಉಯ್ಯಾಲೆ ಕಂಬಗಳು ಹಾಗೂ ಏಕ ಶಿಲಾ ರಚನೆಗಳೆಂದು ವಿಂಗಡಿಸಬಹುದು.[೬೭]

ಅವತಿಯ ತಿಮ್ಮರಾಯಸ್ವಾಮಿ ದೇವಾಲಯ

ತಿಮ್ಮರಾಯಸ್ವಾಮಿ ದೇವಾಲಯವನ್ನು ಎತ್ತರವಾದ ಬೆಟ್ಟದಲ್ಲಿನ ಹರವಾದ ಬಯಲಿನಲ್ಲಿ ನಿರ್ಮಿಸಲಾಗಿದೆ. ಈ ದೇವಾಲಯವು ಗರ್ಭಗುಡಿ, ಅಂತರಾಳ ಮತ್ತು ನವರಂಗ ಮಂಟಪಗಳಿಂದ ಕೂಡಿದೆ. ನವರಂಗದ ಹೊರಗಡೆ ಒಂದು ಧ್ವಜಸ್ತಂಭ ಮತ್ತು ಸೋಪಾನಗಳನ್ನು ಮಾಡಲಾಗಿದೆ. ಚೌಕಾಕಾರದ ಗರ್ಭಗುಡಿಯಲ್ಲಿ ಕೇಶವನ ಶಿಲ್ಪವಿದೆ. ಕಪ್ಪುಶಿಲೆಯಲ್ಲಿ ನಿರ್ಮಿಸಲಾಗಿರುವ ಈ ಶಿಲ್ಪವು ನಾಡಪ್ರಭುಗಳ ಶಿಲ್ಪಕಲೆಯ ಒಂದು ಉಲ್ಲೇಖಾರ್ಹ ಶಿಲ್ಪವಾಗಿದೆ. ಚತುರ್ಭುಜ ಕೇಶವ ಶಿಲ್ಪ ಶಂಖ, ಚಕ್ರ, ಗದೆಯನ್ನು ಹಿಡಿದು ಅಭಯ ಮುದ್ರೆ ವಿನ್ಯಾಸದಲ್ಲಿದೆ. ವಿಜಯನಗರ ಶೈಲಿಯ ಉದ್ದನೆಯ ಕಿರೀಟ ಮತ್ತು ವಿವಿಧ ಆಭರಣಗಳಾದ ಭುಜಬಂಧ, ಕಾಲ್ಗಡಗ, ಕಂಠೀಹಾರ, ಉದರಬಂಧ ಹಾಗೂ ಯಜ್ಞೋಪವೀತ ಶಿಲ್ಪದಲ್ಲಿ ತೋರಿಸಲಾಗಿದೆ. ಕೇಶವನ ಶಿಲ್ಪದ ಸುತ್ತಲೂ ಕಮಾನಿನಾಕಾರದ ವಿನ್ಯಾಸವಿದ್ದು ಮೇಲ್ಭಾಗದಲ್ಲಿ ಸಿಂಹಮುಖದ ಕೀರ್ತಿಮುಖ ಅಲಂಕಾರವಿದೆ.[೬೮]

ದೇವಾಲಯದ ಗರ್ಭಗುಡಿಯ ದ್ವಾರಮಂಟಪದ ಮೇಲೆ ಗಜಲಕ್ಷ್ಮಿಯ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಗರ್ಭಗುಡಿಗೆ ಹೊಂದಿಕೊಂಡಂತೆ ಅಂತರಾಳ ಮಂಟಪವು ಚಿಕ್ಕದಾಗಿದ್ದು ಇದರ ಒಳಗೋಡೆಗಳು ಗರ್ಭಗುಡಿಯ ಗೋಡೆಗಳಂತೆ ಸರಳವಾಗಿವೆ. ಅಂತರಾಳದ ದ್ವಾರಗಳಲ್ಲಿ ವೈಷ್ಣವ ದ್ವಾರಪಾಲಕರ ಕಿರು ಗಾತ್ರದ ಉಬ್ಬುಶಿಲ್ಪಗಳಿವೆ. ದ್ವಾರದ ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವನ್ನು ನಿರ್ಮಿಸಲಾಗಿದೆ. ಈ ನವರಂಗ ಮಂಟಪವು ವಿಶಾಲವಾಗಿ ಚೌಕಾಕಾರದಲ್ಲಿದೆ. ನವರಂಗದ ಒಳಗೋಡೆಯು ಸರಳವಾಗಿದೆ. ನವರಂಗದ ಮಧ್ಯದಲ್ಲಿ ನಾಲ್ಕು ಮುಖ್ಯ ಕಂಬಗಳಿವೆ. ಹಾಗೂ ಗೋಡೆಗಳಲ್ಲಿ ಎಂಟು ಅರ್ಧ ಕಂಬಗಳಿವೆ.

ನವರಂಗದ ಕಂಬಗಳಲ್ಲಿ ವಿಷ್ಣುವಿನ ವಿವಿಧ ಅವತಾರಗಳು, ಸಂಗೀತಗಾರರು, ಪುಷ್ಪ ಮತ್ತು ವನ್ಯ ಪ್ರಾಣಿಗಳ ಉಬ್ಬುಶಿಲ್ಪಗಳಿವೆ. ಇಲ್ಲಿ ಕೂರ್ಮಾವತಾರ, ನರಸಿಂಹ, ಹಯಗ್ರೀವ, ಕಾಳಿಂಗ ಮರ್ಧನ, ಮತ್ಸ್ಯಾವತಾರ, ಚೆಂಚುಲಕ್ಷ್ಮಿ ಶಿಲ್ಪಗಳಿವೆ. ಇವುಗಳಲ್ಲದೆ ಈ ದೇವಾಲಯವನ್ನು ನಿರ್ಮಿಸಿರುವ ರಾಜ ರಾಣಿಯರ ಶಿಲ್ಪಗಳಿವೆ. ಈ ದೇವಾಲಯದ ಸುತ್ತಲಿನ ಹೊರಭಿತ್ತಿಯಲ್ಲಿ ರಾಮಾಯಣ ಮತ್ತು ಭಾಗವತ ಶಿಲ್ಪಗಳನ್ನು, ನರಸಿಂಹವತಾರ ಶಿಲ್ಪಗಳನ್ನು ಕೆತ್ತಲಾಗಿದೆ.

ವೇಣುಗೋಪಾಲಸ್ವಾಮಿ ದೇವಾಲಯ-ದೇವನಹಳ್ಳಿ

ದೇವನಹಳ್ಳಿಯ ಕೋಟೆಯ ಒಳಭಾಗದಲ್ಲಿ ನಾಡಪ್ರಭುಗಳ ಕಾಲದಲ್ಲಿ ನಿರ್ಮಾಣಗೊಂಡಿರುವ ವೇಣುಗೋಪಾಲಸ್ವಾಮಿ ದೇವಾಲಯವಿದೆ. ಈ ದೇವಾಲಯವನ್ನು ಪೂರ್ವ ದಿಕ್ಕಿಗೆ ಮುಖ ಮಾಡಿ ನಿರ್ಮಿಸಲಾಗಿದ್ದು, ವಿಶಾಲವಾದ ಪ್ರಾಕಾರದಿಂದ ನಿರ್ಮಿಸಲಾಗಿದೆ. ಗರ್ಭಗುಡಿ, ಅಂತರಾಳ,

ಅರ್ಧಮಂಟಪ, ನವರಂಗ ಮತ್ತು ಚಿಕ್ಕ ಮಂಟಪಗಳಿಂದ ಕೂಡಿದೆ. ಗರ್ಭಗುಡಿಯು ಚೌಕಾಕಾರದಲ್ಲಿದ್ದು ಒಳಗಡೆ ವೇಣುಗೋಪಾಲಸ್ವಾಮಿಯ ವಿಗ್ರಹವಿದೆ. ಗರ್ಭಗುಡಿಯ ದ್ವಾರದಲ್ಲಿ ಮೂರು ಪಟ್ಟಿಕೆಗಳ ಅಲಂಕೃತ ಬಾಗಿಲುವಾಡವಿದೆ. ಇದರ ಲಲಾಟದಲ್ಲಿ ಗಜಲಕ್ಷ್ಮಿ ಉಬ್ಬುಶಿಲ್ಪವಿದೆ. ಇದೇ ವಿನ್ಯಾಸ ಮತ್ತು ಶೈಲಿಯ ದ್ವಾರವನ್ನು ಅಂತರಾಳದಲ್ಲಿ ನಿರ್ಮಿಸಲಾಗಿದೆ. ನವರಂಗದ ಕಂಬಗಳ ಮೇಲೆ ಅನೇಕ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಕಾಳಿಂಗ ಮರ್ಧನ, ಲಕ್ಷ್ಮೀನರಸಿಂಹ, ನಾರಾಯಣ, ಹಯಗ್ರೀವ ಗಣೇಶ, ಚೆಂಚುಲಕ್ಷ್ಮಿ, ಯೋಗಾನರಸಿಂಹ, ಬಾಲಕೃಷ್ಣ, ಖಡ್ಗವಿಡಿದು ನಿಂತಿರುವ ವೀರ, ಬೃಂದಾವನವನ್ನು ಪೂಜೆಗೈಯುತ್ತಿರುವ ಶಿಲ್ಪ ಮುಂತಾದ ಕಿರುಗಾತ್ರದ ಶಿಲ್ಪಗಳನ್ನು ಕಾಣಬಹುದು. ಈ ಕಂಬಗಳ ಮೇಲೆ ಬಾಗಿದ ಪುಷ್ಪ ಬೋದಿಗೆಗಳಿವೆ. ನವರಂಗದ ಪೂರ್ವ ದ್ವಾರವು ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ ಐದು ಪಟ್ಟಿಕೆಗಳ ಬಾಗಿಲವಾಡದಿಂದ ಕೂಡಿದೆ. ಬಾಗಿಲವಾಡದ ಮೇಲಿನ ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಇಲ್ಲಿಯ ದ್ವಾರಪಾಲಕರ ಉಬ್ಬುಶಿಲ್ಪಗಳು ನೀಳವಾಗಿದ್ದು ಇವರು ಉದ್ದನೆಯ ಕಿರೀಟ, ದೊಡ್ಡ ಕಿವಿಯೋಲೆ ಯಜ್ಞೋಪವೀತ ವಿವಿಧ ಆಭರಣಗಳನ್ನು ಧರಿಸಿ ತ್ರಿಭಂಗಿಯಲ್ಲಿ ನಿಂತಿರುವರು. ಇವರಿಗೆ ಚತುರ್ಭುಜಗಳಿದ್ದು ಕೈಗಳಲ್ಲಿ ಶಂಖ, ಚಕ್ರ, ಗದೆಗಳನ್ನು ಹಿಡಿದು ಅಭಯ ಮುದ್ರೆಯಲ್ಲಿ ನಿಂತಿರುವರು. ದ್ವಾರದ ಹೊಸ್ತಿಲು ಕೂಡ ಅಲಂಕಾರಿಕವಾಗಿದೆ.[೬೯]

ನವರಂಗಕ್ಕೆ ಹೊಂದಿಕೊಂಡು ನಿರ್ಮಿಸಲಾಗಿರುವ ಮುಖಮಂಟಪದಲ್ಲಿ ಮುಂಭಾಗದ ಅಂಚಿನಲ್ಲಿರುವ ೪ ಕಂಬಗಳನ್ನು ಅತ್ಯಾಕರ್ಷಕವಾಗಿ ಕೆತ್ತಲಾಗಿದೆ. ಮಂಟಪಕ್ಕೆ ಪ್ರವೇಶಿಸುವ ಸೋಪಾನಗಳ ಇಕ್ಕಲೆಗಳಲ್ಲಿ ಜೋಡಿಸಲಾದ ಕಂಬಗಳು ಮುಂಭಾಗದಲ್ಲಿ ಸಿಂಹ ತನ್ನ ಹಿಂಬದಿಯ ಕಾಲುಗಳ ಮೇಲೆ ನಿಂತಿರುವಂತೆ ಎತ್ತರವಾಗಿ ರಚಿಸಲಾಗಿದೆ. ಈ ಸಿಂಹದ ಶಿಲ್ಪಗಳು ಆಕರ್ಷಣೀಯವಾಗಿದ್ದು ಇವುಗಳಲ್ಲಿ ಉದ್ದನೆಯ ಕೇಶ, ದೊಡ್ಡ ಗಾತ್ರದ ಕಣ್ಣು, ನೀಳ ದೇಹ ರಚನೆಯನ್ನು ಕಾಣುತ್ತೇವೆ. ನಾಲ್ಕು ಕಂಬಗಳ ಹಿಂಬದಿಯ ಮುಖ್ಯ ಕಂಬಗಳ ಮೇಲೆ ಕಿರು ಗಾತ್ರದ ಶಿಲ್ಪಗಳಿವೆ. ಕೂರ್ಮವತಾರ, ಮತ್ಸ್ಯಾವತಾರ, ಲಕ್ಷ್ಮೀನರಸಿಂಹ, ಗಣೇಶ, ಯೋಗಾನರಸಿಂಹ, ಹಯಗ್ರೀವ ಸೀತೆ ದೂರದ ಜಿಂಕೆಯನ್ನು ರಾಮನಿಗೆ ತೋರಿಸುತ್ತಿರುವ ಶಿಲ್ಪ ಬಾಲಕೃಷ್ಣ, ರಾಮ ಮತ್ತು ಹನುಮಾನ ಶಿಲ್ಪಗಳು ಇಲ್ಲಿಯ ಹನುಮಾನನ ಕೈಯಲ್ಲಿ ಉಂಗುರವಿದೆ. ಸೀತೆಯ ಅಪಹರಣದ ನಂತರ ದೊರೆತ ಉಂಗುರವನ್ನು ರಾಮನಿಗೆ ತೋರಿಸುತ್ತಿರುವ ಆಂಜನೇಯನ ದೃಶ್ಯವಿದೆ. ಚೆಂಚುಲಕ್ಷ್ಮಿ ಪಾದಕ್ಕೆ ನಾಟಿದ ಮುಳ್ಳನ್ನು ಮಾನವ ರೂಪದಲ್ಲಿ ಬಂದ ನರಸಿಂಹನು ತೆಗೆಯುತ್ತಿರುವ ಶಿಲ್ಪವಿದೆ. ವೈಷ್ಣವ ಶಿಲ್ಪಗಳಿಲ್ಲಿವೆ. ಹಂಸ, ಶಾಲಭಂಜಿಕಾ ಮಿಥುನ ಶಿಲ್ಪಗಳು ಸಹ ಈ ಕಂಬಗಳಲ್ಲಿವೆ. ಮುಖಮಂಟಪದ ಸಜ್ಜೆಯು ಸರಳವಾಗಿದ್ದು ಬಾಗಿನಾಕಾರದಲ್ಲಿದೆ. ಮಂಟಪಕ್ಕೆ ಪ್ರವೇಶಿಸಲು ಸೋಪಾನಗಳ ವ್ಯವಸ್ಥೆ ಮಾಡಲಾಗಿದೆ. ಮಂಟಪದ ಕುಂಬಿ ಗೋಡೆಯ ಮೂರು ಕೋಷ್ಠಕಗಳನ್ನು ರಚಿಸಲಾಗಿದೆ. ಇವುಗಳಲ್ಲಿ ಗಾರೆಯಲ್ಲಿ ರಚಿಸಿದ ಶಿಲ್ಪಗಳನ್ನು ಜೋಡಿಸಲಾಗಿದೆ. ವೇಣುಗೋಪಾಲ, ವಿಷ್ಣು ಮತ್ತು ರಾಮ ಪಟ್ಟಾಭಿಷೇಕ ಇತ್ಯಾದಿ ಶಿಲ್ಪಗಳಿವೆ.

ಶಿವಗಂಗೆಯ ಗವಿಗಂಗಾಧರೇಶ್ವರ ದೇವಾಲಯ

ಶಿವಗಂಗೆಯ ಗವಿ ಗಂಗಾಧರೇಶ್ವರ ದೇವಾಲಯವು ಹೊಯ್ಸಳ ಕಾಲದಲ್ಲಿ ನಿರ್ಮಾಣಗೊಂಡರೂ ಕೆಂಪೇಗೌಡನ ಕಾಲದಲ್ಲಿ ಹೆಚ್ಚು ವಿಸ್ತರಣೆಯನ್ನು ಪಡೆದುಕೊಂಡಿತು. ಈ ದೇವಾಲಯದ ಮುಖ್ಯದ್ವಾರ ಬಹು ಸುಂದರವಾಗಿದ್ದು ಪ್ರವೇಶದ್ವಾರದ ಎರಡು ಕಂಬಗಳಲ್ಲಿ ಯಲಹಂಕ ಪ್ರಭು ಮತ್ತು ಆತನ ರಾಣಿಯ ಉಬ್ಬುಶಿಲ್ಪಗಳಿವೆ. ಈ ಮಂಟಪದ ಅಧಿಷ್ಠಾನ ಮತ್ತು ರಂಗಸ್ಥಳ ಹಲಸೂರ ಸೋಮೇಶ್ವರ ದೇವಾಲಯದ ಮಾದರಿಯಲ್ಲಿದೆ.

ಗವಿ ಗಂಗಾಧರೇಶ್ವರ ದೇವಾಲಯ, ಬೆಂಗಳೂರು

ಬೆಂಗಳೂರಿನ ಗವಿ ಗಂಗಾಧರೇಶ್ವರ ದೇವಾಲಯವು ೧೬ನೇ ಶತಮಾನದ ರಚನೆಯಾಗಿದ್ದರೂ ಯಲಹಂಕ ಅರಸರ ಕಾಲದಲ್ಲಿ ಈ ದೇವಾಲಯದ ಮುಂಭಾಗವು ನಿರ್ಮಾಣಗೊಂಡಿದೆ. ಈ ದೇವಾಲಯದ ಗೋಪುರಗಳು ಏಕಶಿಲಾ ಛತ್ರಿ, ನಂದಿ ಮೊದಲಾದವುಗಳು ಯಲಹಂಕ ನಾಡಪ್ರಭುಗಳ ಕಾಲದ್ದೆಂಬುದರಲ್ಲಿ ಅನುಮಾನವಿಲ್ಲ. ಈ ಗವಿಗಳ ಮೇಲೆ ದೇವರಿಗೆ ನೇರದಲ್ಲಿ ಇಟ್ಟಿಗೆ ಗಾರೆಯಿಂದ ರಚಿತವಾದ ಶಿಖರಗಳಿವೆ. ಇಂತಹ ಶಿಖರವು ಶಿವಗಂಗೆಯಲ್ಲಿ ಗಂಗಾಧರ ಲಿಂಗದ ಮೇಲೆ ಕಲ್ಲಿನಿಂದ ನಿರ್ಮಿಸಲಾಗಿದೆ. ಹೊನ್ನಾದೇವಿಯ ಗವಿಯ ಮೇಲೆ ಇಟ್ಟಿಗೆಯಿಂದ ಕಟ್ಟಲಾಗಿದ್ದು ಗವಿಯು ಗಂಗರ ಕಾಲದ್ದು. ಸುಮಾರು ೮ನೇ ಶತಮಾನದ ಶಾಸನವೊಂದು ಈ ಗವಿಯ ಬಳಿಯೇ ದೊರೆತಿದೆ. ಒಟ್ಟಿನಲ್ಲಿ ಇವರ ಕಾಲದಲ್ಲಿ ಈ ಹಿಂದಿನ ರಾಜರು ನಿರ್ಮಿಸಿರುವ ದೇವಾಲಯಗಳನ್ನು ನಾಡಪ್ರಭುಗಳ ವಿಸ್ತರಣೆ ಮಾಡಿರುವುದು ಗಮನಾರ್ಹ.[೨೦]

ಒಟ್ಟಿನಲ್ಲಿ ಯಲಹಂಕ ನಾಡಪ್ರಭುಗಳ ಕಾಲದಲ್ಲಿ ಕಲಾ ವಲಯವು ಸಾಕಷ್ಟು ಶ್ರೀಮಂತಿಕೆಯನ್ನು ಪಡೆಯಿತು. ನಾಡಪ್ರಭುಗಳು ಧರ್ಮ ಪೋಷಕರಾಗಿದ್ದರಿಂದ ದೇವಾಲಯಗಳ ನಿರ್ಮಾಣದಲ್ಲಿ ವಿಶೇಷ ಆಸಕ್ತಿ ಶ್ರದ್ಧೆ ಉಳ್ಳವರಾಗಿದ್ದರು. ಇವರ ಕಾಲದಲ್ಲಿ ಸಾವನದುರ್ಗ, ಹುತ್ತರಿ ದುರ್ಗ, ರಾಮಗಿರಿ, ಮಾಗತಿ, ಹುಲಿಯೂರು ದುರ್ಗಗಳಲ್ಲಿ ಅಭೇದ್ಯವಾದ ಕೋಟೆಗಳು ನಿರ್ಮಾಣಗೊಂಡವು.

ನಾಯಕರ ಕಾಲದ ಆಡಳಿತದ ಪ್ರಾಮುಖ್ಯತೆಯನ್ನು ಅರಿಯುವಲ್ಲಿ ಅವರ ಕಾಲದಲ್ಲಿ ನಿರ್ಮಾಣಗೊಂಡ ಕಲೆ ಮತ್ತು ವಾಸ್ತುಶಿಲ್ಪಗಳು ನೆರವಿಗೆ ಬರುತ್ತವೆ. ಪಾಳೆಯಗಾರರ ಕಾಲವೆಂದರೆ ಅದು ಹಲವಾರು ರಾಜಕೀಯ ಸಂಘರ್ಷಗಳ ಏಳುಬೀಳುಗಳ ಕಾಲ. ಸಮಕಾಲೀನ ನಾಯಕರೊಂದಿಗೆ ಸಂಭವಿಸುತ್ತಿದ್ದ ಯುದ್ಧಗಳು, ಮೊಗಲ, ಮರಾಠರ ದಾಳಿಗಳು, ಹೈದರಾಲಿಯ ದಾಳಿಗಳ ನಡುವೆಯೂ ನಾಯಕರು ತಮ್ಮೆಲ್ಲ ಸಂಕಷ್ಟಗಳನ್ನು ಬದಿಗೊತ್ತಿ ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಗಳನ್ನು ಸಲ್ಲಿಸಿದ್ದಾರೆ. ಇವರ ಕಾಲದಲ್ಲಿ ನಿರ್ಮಾಣಗೊಂಡಿರುವ ಕೋಟೆಗಳು, ದೇವಾಲಯಗಳು, ಸ್ಮಾರಕ ಶಿಲ್ಪಗಳು ಇವರ ಸಾಧನೆಗಳಿಗೆ ಪ್ರತೀಕವಾಗಿವೆ. ಪಾಳೆಯಗಾರರ ಕಾಲದ ಕಲಾ ಪರಂಪರೆಯು ವಿಜಯನಗರದಷ್ಟು ಶ್ರೀಮಂತ ಮತ್ತು ವೈಭವದಿಂದ ಕೂಡಿರದಿದ್ದರೂ ತಮ್ಮ ಆರ್ಥಿಕ ಮಟ್ಟದಲ್ಲಿಯೇ ಕಲಾ ಮಾದರಿಯನ್ನು ಮುಂದುವರಿಸಿಕೊಂಡು ಹೋಗಿರುವುದನ್ನು ಗಮನಿಸಬಹುದು. ನಾಯಕರ

ಕಾಲದಲ್ಲಿ ನಿರ್ಮಾಣಗೊಂಡಿರುವ ಶೈಲಿಯನ್ನು ವಿಜಯನಗರೋತ್ತರ ಕಲಾಶೈಲಿಯೆಂದೇ ಗುರುತಿಸಲಾಗಿದೆ.

ಗುಮ್ಮನಾಯಕನ ಪಾಳೆಯ ಪಾಳೆಯಗಾರರ ಕಲೆ ಮತ್ತು ವಾಸ್ತುಶಿಲ್ಪ

ಗುಮ್ಮನಾಯಕನ ಪಾಳೆಯ ಕೋಟೆ

ಗುಮ್ಮನಾಯಕನ ಪಾಳೆಯದಲ್ಲಿ ಏಳು ಸುತ್ತಿನ ಕೋಟೆಯಿದೆ. ಪ್ರಸ್ತುತ ಕೋಟೆಯ ಕೆಳಭಾಗದ ಎರಡು ಸುತ್ತಿನ ಕೋಟೆಯ ಗೋಡೆಗಳು ಸಂಪೂರ್ಣವಾಗಿ ನಶಿಸಿಹೋಗಿವೆ. ಆದರೆ ಬೆಟ್ಟದ ಮೇಲಿನ ಕೋಟೆಯ ಗೋಡೆಗಳು ಇಂದಿಗೂ ಭದ್ರವಾಗಿವೆ. ಬುಡದಿಂದ ಕೋಟೆಯನ್ನೇರಲು ಅಂದಿನ ಮೆಟ್ಟಿಲು ಮಾರ್ಗವಿದೆ. ಈ ದಾರಿಯಲ್ಲಿ ಮುಂದುವರಿದರೆ ಮೊದಲಿಗೆ ಪೂರ್ವಾಭಿಮುಖವಾದ ಕೋಟೆಯ ಬಾಗಿಲು ಸಿಗುತ್ತದೆ. ಈ ಕೋಟೆಯ ಬಾಗಿಲು ಬಹಳಷ್ಟು ಶಿಥಿಲವಾಗಿದೆ. ಅಲ್ಲೇ ನಿರ್ಮಾಣಗೊಂಡಿರುವ ತಪಾಸಣಾ ದ್ವಾರ ದೊಡ್ಡ ಬಾಗಿಲನ್ನು ಹೊಂದಿದೆ. ದ್ವಾರದ ಎರಡು ಕಡೆಯಲ್ಲಿ ಪಹರೆ ಕಾಯುವ ಚಾವಡಿಯನ್ನು ಕಲಾತ್ಮಕವಾಗಿ ನಿರ್ಮಿಸಲಾಗಿದೆ. ಈ ಚಾವಡಿಯ ಪಕ್ಕದಲ್ಲಿ ದವಾಖಾನೆಯ ಕಟ್ಟಡದಲ್ಲಿ ಔಷಧಿಗಳನ್ನು ಇಡಲು ಗೋಡೆಯಲ್ಲಿಯೇ ಚೌಕಾಕಾರದ ಹಾಗೂ ಆಯತಕಾರದ ಗೂಡುಗಳನ್ನು ನಿರ್ಮಿಸಲಾಗಿದೆ.

ಉಗ್ರಾಣಗಳು: ಕೋಟೆಯ ಮೂರನೇ ಸುತ್ತಿನಲ್ಲಿ ಶಿಥಿಲಾವಸ್ಥೆಯ ಕಟ್ಟಡವಿದೆ. ಈ ಕಟ್ಟಡಕ್ಕೆ ಕಿಟಕಿ, ಬಾಗಿಲುಗಳನ್ನು ನಿರ್ಮಿಸದೇ ಇರುವುದರಿಂದ ಸ್ಥಳೀಯ ಜನರು ಇವುಗಳನ್ನು ಉಗ್ರಾಣವೆಂದು, ಇಲ್ಲವೇ ಸೆರೆಮನೆಯಾಗಿರಬಹುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಖಾದ್ರಿ ನರಸಿಂಹಸ್ವಾಮಿ ದೇವಾಲಯ: ಗುಮ್ಮನಾಯಕನ ಪಾಳೆಯದಲ್ಲಿ ಪಾಳೆಯಗಾರರಿಂದ ೧೦೮ ದೇವಾಲಯಗಳು ನಿರ್ಮಾಣಗೊಂಡವೆಂಬ ಪ್ರತೀತಿಯಿದೆ. ಈ ೧೦೮ ದೇವಾಲಯಗಳಲ್ಲಿ ಬಹುತೇಕ ದೇವಾಲಯಗಳು ನಾಶವಾಗಿದ್ದು ಉಳಿದವುಗಳಲ್ಲಿ ಖಾದ್ರಿ ನರಸಿಂಹಸ್ವಾಮಿ ದೇವಾಲಯವು ಅತ್ಯಂತ ಶಿಥಿಲ ವ್ಯವಸ್ಥೆಯಲ್ಲಿದೆ. ಖಾದ್ರಿ ನರಸಿಂಹನನ್ನು ಪಾಳೆಯಗಾರರು ತಮ್ಮ ಕುಲದೈವವೆಂದು ಪೂಜಿಸುತ್ತಿದ್ದರು. ಈ ದೇಗುಲವು ಯಾವುದೇ ಅಲಂಕಾರಗಳಿಲ್ಲದೆ ಸಾದಾ ಗೋಡೆಗಳಿಂದ ನಿರ್ಮಾಣ ಮಾಡಲಾಗಿದೆ. ಇತ್ತೀಚೆಗೆ ಈ ದೇವಾಲಯ ಮತ್ತಷ್ಟು ಶಿಥಿಲವಾಗಿದೆ.

ಈ ದೇಗುಲವನ್ನು ಹತ್ತಿ ಹೋದರೆ ಕೋಟೆಯ ಮೇಲ್ಭಾಗ ತಲುಪುವುದು. ಮೇಲ್ಭಾಗದ ಪ್ರವೇಶ ದ್ವಾರದ ಬದಿಗೆ ಶಾಸನವನ್ನು ಕೆತ್ತಲಾಗಿದೆ. ಈ ಶಾಸನದ ಬದಿಯಲ್ಲಿಯೇ ಎಂದಿಗೂ ಬತ್ತದ ನೀರಿನ ಚಿಲುಮೆ ಇದ್ದು ನೀರಿನ ದೋಣಿಗೆ ಕರ್ನಿಕಲ ದೋಣಿ ಎನ್ನುವರು.

ಅಕ್ಕಮ್ಮಗಾರರು ಎಂಬ ದೇವತೆಗಳಿಗೆ ಗುಡಿಯನ್ನು ನಿರ್ಮಿಸಲಾಗಿದೆ. ಸಿಡಿಮದ್ದನ್ನು ತಯಾರಿಸುತ್ತಿದ್ದರು ಎನ್ನಲಾದ ಕಟ್ಟಡದ ಅವಶೇಷಗಳಿಗೆ ಸುತ್ತಲೂ ಎತ್ತರವಾದ ಕೋಟೆ ಗೋಡೆಗಳನ್ನು ಹೊಂದಿದ್ದು ರಮಣೀಯವಾಗಿದೆ.

ಚಿತ್ರದುರ್ಗ ನಾಯಕರ ಕಾಲದ ದೇವಾಲಯಗಳು

ವಿಜಯನಗರದ ಅಮರನಾಯಕರಾಗಿ ಸೇವೆಯನ್ನು ಸಲ್ಲಿಸಿ, ನಂತರ ಸ್ವತಂತ್ರ ಪಾಳೆಯಗಾರರಾದ ಚಿತ್ರದುರ್ಗ ನಾಯಕರು ತಮ್ಮ ಆಡಳಿತಾವಧಿಯಲ್ಲಿ ಹಲವಾರು ದೇವಾಲಯಗಳನ್ನು ನಿರ್ಮಿಸಿದರು. ಕಲಾ ಪೋಷಕರಾಗಿದ್ದ ಈ ನಾಯಕರು ದೇವಾಲಯಗಳನ್ನು ನಿರ್ಮಿಸುವುದರ ಮೂಲಕ ಧರ್ಮ ಮತ್ತು ಸಂಸ್ಕೃತಿಯ ಪೋಷಕರಾಗಿ ಕಲೆ ಮತ್ತು ವಾಸ್ತುಶಿಲ್ಪ ರಂಗವನ್ನು ಅಭಿವೃದ್ಧಿಗೊಳಿಸಿದರು. ಇವರ ಕಾಲದ ಪ್ರಮುಖ ದೇವಾಲಯಗಳೆಂದರೆ ಚಿತ್ರದುರ್ಗ ಕೋಟೆಯಲ್ಲಿರುವ ಏಕನಾಥೇಶ್ವರಿ ದೇವಾಲಯ, ಚೆನ್ನಕೇಶವ ದೇವಾಲಯ, ವೆಂಕಟೇಶ್ವರ ದೇವಾಲಯ, ಸಂಪಿಗೆ ಸಿದ್ದೇಶ್ವರ ದೇವಾಲಯ, ಕರಿವರ್ತಿ ಈಶ್ವರ ದೇವಾಲಯ, ಹೊಳಲ್ಕೆರೆಯ ಬಯಲು ಗಣಪತಿ ದೇವಾಲಯ, ವೀರಭದ್ರೇಶ್ವರ ದೇವಾಲಯ, ಹಿರಿಯೂರಿನ ತೇರು ಮಲ್ಲೇಶ್ವರ ದೇವಾಲಯ, ಮೊಳಕಾಲ್ಮೂರಿನ ದೇವರ ಗುಡ್ಡದ ಕಾಲಭೈರವ ದೇವಾಲಯ, ಮತ್ತು ಸಮುದ್ರದಲ್ಲಿಯ ಶ್ರೀ ಭೋಗೇಶ್ವರ ಮತ್ತು ಕಲ್ಲೇಶ್ವರ ದೇವಾಲಯ, ಹುಲ್ಲೂರಿನ ಮಲ್ಲೇಶ್ವರ ದೇವಾಲಯಗಳು ಪ್ರಮುಖವಾಗಿವೆ.

ಏಕನಾಥೇಶ್ವರಿ ದೇವಾಲಯ

ಕ್ರಿ.ಶ. ೧೪ ಮತ್ತು ೧೫ನೇ ಶತಮಾನದಲ್ಲಿ ನಿರ್ಮಾಣಗೊಂಡಿರುವ ಏಕನಾಥೇಶ್ವರಿ ದೇವಾಲಯ ಬೆಟ್ಟದ ಮೊದಲ ಸುತ್ತಿನಲ್ಲಿದೆ. ಏಕನಾಥೇಶ್ವರಿ ಪಾಳೆಯಗಾರರ ಆರಾಧ್ಯ ದೇವತೆ; ಏಕನಾಥೇಶ್ವರಿ ದೇವಾಲಯವು ಬೌದ್ಧರಾಗಿದ್ದ ಆಂಧ್ರಭೃತ್ಯರ ಕಾಲದ ತಾರ ಭಗವತಿಯ ನಿಲಯವೆಂದೂ ಚರಿತ್ರೆಕಾರರ ಅಭಿಪ್ರಾಯವಾಗಿದೆ.[೭೧] ಈ ದೇವಾಲಯವನ್ನು ಬೃಹತ್ ಬಂಡೆಯ ಅಡಿಯಲ್ಲಿ ನಿರ್ಮಿಸಲಾಗಿದೆ. ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ ಅಂತರಾಳ ಹಾಗೂ ತೆರೆದ ಸಭಾಮಂಟಪವನ್ನು ನಿರ್ಮಿಸಲಾಗಿದೆ. ಆಯತಾಕಾರದ ಗರ್ಭಗೃಹದ ಮಧ್ಯದಲ್ಲಿ ಹುಟ್ಟು ಬಂಡೆಯಲ್ಲಿ ಕಟೆದಿರುವ ರುಂಡಭಾಗ ಇದೆ. ನಂತರ ಕಾಲಾವಧಿಯಲ್ಲಿ ಲೋಹದ ಕಿರೀಟ ಅಳವಡಿಸಲಾಗಿದೆ. ಗರ್ಭಗೃಹದ ಪ್ರವೇಶದ್ವಾರ ಸರಳವಾಗಿದ್ದು, ಪೇದ್ಯದಲ್ಲಿ ಎರಡು ಚಿಕ್ಕ ಹೂ ಕುಂಡಗಳ ಚಿತ್ರವಿದೆ. ಬದಿಗಳಲ್ಲಿ ಗಜಗಳ ಉಬ್ಬುಶಿಲ್ಪಗಳಿವೆ.[೭೨] ಈ ದೇವಾಲಯದ ಎದುರಿಗೆ ಬೃಹತ್ ದೀಪಮಾಲೆ ಕಂಬ ಮತ್ತು ಉಯ್ಯಾಲೆ ಕಂಬಗಳಿವೆ. ದೀಪಸ್ತಂಭದಲ್ಲಿ ಚಿತ್ರದುರ್ಗದ ಎರಡನೇ ಪಾಳೆಯಗಾರ ಓಬಣ್ಣ ನಾಯಕ ಮತ್ತು ಆತನ ಪತ್ನಿ ಕನಕಮ್ಮ ನಾಗತಿಯ ಚಿತ್ರಗಳಿವೆ.

ಉಚ್ಚಂಗಿ ಎಲ್ಲಮ್ಮ ದೇವಾಲಯ

ಕ್ರಿ.ಶ. ೧೬೭೪ರಲ್ಲಿ ಚಿತ್ರದುರ್ಗದ ಪಾಳೆಯಗಾರ ಇಮ್ಮಡಿ ಮದಕರಿ ನಾಯಕನು ಉಚ್ಚಂಗಿ ಎಲ್ಲಮ್ಮ ದೇವಾಲಯವನ್ನು ನಿರ್ಮಿಸಿದನು. ಪೂರ್ವಾಭಿಮುಖವಾಗಿರುವ ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗೃಹ ಅಂತರಾಳ, ವಿಶಾಲವಾದ ತೆರೆದ ನವರಂಗ ಹಾಗೂ ತೆರೆದ ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗುಡಿಯಲ್ಲಿ ಪೀಠದ ಮೇಲಿರುವ ಸಿಂಹದ ಮೇಲೆ ಆಸೀನಳಾದ ದೇವಿಯ ವಿಗ್ರಹವಿದೆ. ಚತುರ್ಭುಜಧಾರಿಯಾದ ದೇವಿಯು ಕೈಗಳಲ್ಲಿ ಕತ್ತಿ, ತ್ರಿಶೂಲ,

ಡಮರು ಮತ್ತು ಕಪಾಲಗಳನ್ನು ಹಿಡಿದಿದ್ದಾಳೆ. ದೇವಿಯ ಬಲಕ್ಕೆ ಪುತ್ರ ಪರಶುರಾಮನ ಮೂರ್ತಿಯಿದೆ. ಸ್ಥಾನಿಕ ಭಂಗಿಯಲ್ಲಿರುವ ಪರಶುರಾಮ ಚತುರ್ಭುಜಧಾರಿಯಾಗಿದ್ದು ತನ್ನ ಕೈಗಳಲ್ಲಿ ಪರಶು, ಖಡ್ಗ, ಬಿಲ್ಲು ಮತ್ತು ಬಾಣಗಳನ್ನು ಹಿಡಿದಿರುವನು. ಶಿಲ್ಪಗಳಿಂದ ಕೂಡಿದ ಕಲ್ಲುಮಂಟಪ ಇಂದಿಗೂ ದೇವಾಲಯದ ಭವ್ಯ ವಾಸ್ತುಶೈಲಿಗೆ ಸಾಕ್ಷಿಯಾಗಿದೆ.

ಚನ್ನಕೇಶವ ದೇವಾಲಯ

ಚಿತ್ರದುರ್ಗ ನಾಯಕರ ಕಾಲಾವಧಿಯಲ್ಲಿ ನಿರ್ಮಾಣಗೊಂಡಿರುವ ದೇವಾಲಯಗಳಲ್ಲಿ ಅತ್ಯಂತ ಸುಂದರವಾದ ದೇವಾಲಯಗಳಲ್ಲಿ ಚನ್ನಕೇಶವ ದೇವಾಲಯವು ಒಂದಾಗಿದೆ. ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಹಾಗೂ ತೆರೆದ ಮಂಟಪಗಳನ್ನು ಹೊಂದಿದೆ. ಚೌಕಾಕಾರದ ಗರ್ಭಗೃಹದಲ್ಲಿ ಪೀಠದ ಮೇಲೆ ವಿಷ್ಣುವಿನ ಸ್ಥಾನಿಕ ಶಿಲ್ಪವಿದೆ. ಚತುರ್ಭುಜಧಾರಿಯಾದ ವಿಷ್ಣು ತನ್ನ ಕೈಗಳಲ್ಲಿ ಪದ್ಮ, ಶಂಖ, ಚಕ್ರ ಹಾಗೂ ಗದೆ ಹಿಡಿದಿರುವನು. ಈತನ ಇಕ್ಕೆಲಗಳಲ್ಲಿ ಶ್ರೀದೇವಿ, ಭೂದೇವಿಯರ ವಿಗ್ರಹಗಳಿವೆ. ಗರ್ಭಗುಡಿಯ ಮುಂಭಾಗ ಕೈ ಮುಗಿದು ಕುಳಿತಿರುವ ಗರುಡನ ವಿಗ್ರಹವಿದೆ. ವಿಷ್ಣುವಿನ ವಾಹನವಾದ ಗರುಡನು ಅಂಜಲಿ ಮುದ್ರೆಯಲ್ಲಿದ್ದಾನೆ. ದೇವಾಲಯದ ಮುಖಮಂಟಪ ಐದು ಅಂಕಣಗಳಷ್ಟು ವಿಶಾಲವಾಗಿದ್ದು ಮಂಟಪದಲ್ಲಿ ನಾಲ್ಕು ಸ್ತಂಭಗಳ ಸಾಲಿದ್ದು, ಈ ಸ್ತಂಭಗಳಲ್ಲಿ ಆನೆಯ ಮೇಲೆ ಕುಳಿತಿರುವ ಮಾವುತ, ಮೂರು ತಲೆಯ ಹಸು, ಸಿಂಹ, ಗರುಡ, ಆಂಜನೇಯ, ಸುಂದರವಾಗಿ ಕೆತ್ತಿರುವ ಆನೆಗಳು, ಕುದುರೆಗಳು, ನವರಂಗದಲ್ಲಿ ಮೆಟ್ಟಿಲು ಮೇಲೆ ಕೈ ಮುಗಿದು ಮಲಗಿರುವ ಭಕ್ತರು, ನವರಂಗದ ಶಿಲಾಸ್ತಂಭಗಳ ಮೇಲೆ ನಂದಿ, ಗಣೇಶ, ಈಶ್ವರ, ಹಂಸ ಮುಂತಾದ ಶಿಲ್ಪಗಳಿವೆ. ದೇವಾಲಯದ ಹೊರ ಆವರಣದಲ್ಲಿ ಆದಿಶೇಷ, ಹಾವಾಡಿಗನ ಶಿಲ್ಪಗಳು ಸುಂದರವಾಗಿವೆ.

ಸಂಪಿಗೆ ಸಿದ್ದೇಶ್ವರ ದೇವಾಲಯ

ಚಿತ್ರದುರ್ಗ ಬೆಟ್ಟದ ಮೇಲುದುರ್ಗದಲ್ಲಿ ಸಂಪಿಗೆ ಸಿದ್ದೇಶ್ವರ ದೇವಾಲಯವಿದೆ. ಈ ದೇವಾಲಯದಲ್ಲಿ ನಾಲ್ಕು ಶಾಸನಗಳು ಕಂಡುಬರುತ್ತವೆ. ಶಾಸನಗಳು ದೇವಾಲಯವನ್ನು ಸಿದ್ಧನಾಥ ಎಂದು ಉಲ್ಲೇಖಿಸಿವೆ. ಕ್ರಿ.ಶ. ೧೩೫೫–೫೬ರ ಶಾಸನಗಳು ಮಹಾಮಂಡಲೇಶ್ವರ ಖಂಡೇರಾಯರ ಅಳಿಯ ಸಾಯಿನಾಯಕರ ಕುಮಾರ ಮಲ್ಲಿನಾಥ ಒಡೆಯ ಚಿಮ್ಮತ್ತಕಲ್ಲಿನಲ್ಲಿ ರಾಜ್ಯವಾಳುತ್ತಿರುವಾಗ, ಚಿಮ್ಮತ್ತನಕಲ್ಲ ಸಿದ್ಧನಾಥ ದೇವರಿಗೆ ಕಲ್ಲು ಉಪ್ಪರಿಗೆ ಹಾಕಿಸಿ ದೇವರ ಶಿಖರ ಪ್ರತಿಷ್ಠೆ ಮಾಡಿ ದೇವರ ಅಂಗ, ರಂಗ, ಭೋಗ, ಅಮೃತಪಡಿಗಾಗಿ ದತ್ತಿ ನೀಡಿದ ಬಗ್ಗೆ ತಿಳಿಸಿವೆ.[೨೩]

ಈ ದೇವಾಲಯದ ಗರ್ಭಗುಡಿಯಲ್ಲಿ ಸಿದ್ಧನಾಥ ಲಿಂಗವಿದೆ. ಅಲ್ಲಿ ಅಲ್ಲಮಪ್ರಭುವಿನ ವಿಗ್ರಹವಿದೆ. ಸುಮಾರು ೫ ಅಡಿ ಎತ್ತರದ ವೀರಭದ್ರನ ಮೂರ್ತಿಯಿದೆ. ವೀರಭದ್ರನ ಕೊರಳಿನಲ್ಲಿ ರುಂಡಮಾಲೆ, ಸರ್ಪ, ಕರ್ಣ ಕುಂಡಲಧಾರಿಯಾಗಿ, ಕಂಕಣ, ಕಾಲು ಗಗ್ಗರ ಮುಂತಾದ

ಆಭರಣಗಳನ್ನು ಧರಿಸಿದ್ದಾನೆ. ಬಲಗಡೆ ದಕ್ಷಬ್ರಹ್ಮ, ನಂದಿ ವಿಗ್ರಹ, ಹಿಂಭಾಗದಲ್ಲಿ ನರಸಿಂಹನ ವಿಗ್ರಹಗಳಿವೆ. ದಕ್ಷಿಣದಲ್ಲಿ ಹಿಡಿಂಬೆಯರ ವಿಗ್ರಹಗಳಿವೆ.

ಕರಿವರ್ತಿ ಈಶ್ವರ ದೇವಾಲಯ

ಕಾಮನ ಬಾಗಿಲಿನಿಂದ ಬೆಟ್ಟದ ಮೇಲಕ್ಕೆ ಹೋಗದೆ ಕಂದಕದ ದಾರಿಯನ್ನು ಹಿಡಿದು ಸಾಗಿದರೆ ಹೊಯ್ಸಳರ ಶೈಲಿಯಲ್ಲಿ ನಿರ್ಮಾಣಗೊಂಡಿರುವ ಕರಿವರ್ತಿ ಈಶ್ವರ ದೇವಾಲಯವಿದೆ. ಈ ದೇವಾಲಯವು ಸುಂದರವಾದ ಭುವನೇಶ್ವರಿ, ನವರಂಗಗಳಿಂದ ಕೂಡಿದ್ದು, ಕಂಬಗಳ ಮೇಲೆ ದೇವಾಲಯದ ಗೋಡೆಯ ಮೇಲೆ ಗೋಪಿಕಾ ಸ್ತ್ರೀಯರು, ಕಾಳಿಂಗ ಮರ್ಧನ, ನೃತ್ಯ ಗಣಪತಿ ಮಹಿಷಾಸುರ ಮರ್ಧಿನಿ, ನರಸಿಂಹ, ಗಜಲಕ್ಷ್ಮಿ, ಕುದುರೆ ಸವಾರರ ವಿಗ್ರಹಗಳ ಶಿಲ್ಪಗಳಿವೆ.

ಹೊಳಲ್ಕೆರೆ ಬಯಲು ಗಣಪತಿ ದೇವಾಲಯ

ಚಿತ್ರದುರ್ಗ ನಾಯಕರ ಕಾಲದಲ್ಲಿ ನಿರ್ಮಾಣಗೊಂಡಿರುವ ದೇವಾಲಯಗಳಲ್ಲಿ ಅತ್ಯಂತ ದೊಡ್ಡ ಗಣಪತಿ ದೇವಾಲಯವೇ ಹೊಳಲ್ಕೆರೆಯ ಬಯಲು ಗಣಪತಿ ದೇವಾಲಯ. ಬಯಲಿನಲ್ಲಿ ಗಣಪತಿ ನೆಲೆಸಿರುವುದರಿಂದ ಬಯಲು ಗಣಪನೆಂದೇ ಹೆಸರಾಗಿದೆ. ಈ ಗಣಪತಿಯ ಪೀಠದ ಮೇಲೆ ಕಾಮಗೇತಿ ಮದಕೇರಿ ನಾಯಕರ ಮೈದುನ ಗುಲ್ಯಪ್ಪ ನಾಯಕನ ಸೇವೆ ಎಂದು ಒಂದು ಸಾಲಿನ ಶಾಸನವಿದೆ. ಕ್ರಿ.ಶ. ೧೫೭೦ರಲ್ಲಿ ಗುಲ್ಯಪ್ಪ ನಾಯಕನು ಈ ಮೂರ್ತಿಯನ್ನು ಪ್ರತಿಷ್ಠಾಪಿಸಿರಬೇಕು.

ನಿರ್ತಡಿಯ ನರಸಿಂಹಸ್ವಾಮಿ ದೇವಾಲಯ

ನಿರ್ತಡಿಯ ನರಸಿಂಹಸ್ವಾಮಿಯ ದೇವಾಲಯವು ಸಂಪೂರ್ಣವಾಗಿ ವಿಜಯನಗರ ಶೈಲಿಯಲ್ಲಿ ನಿರ್ಮಾಣಗೊಂಡಿರುವ ದೇವಾಲಯ. ಈ ದೇವಾಲಯವು ಚಿತ್ರದುರ್ಗ ನಾಯಕರ ಕಾಲದಲ್ಲಿ ನಿರ್ಮಾಣಗೊಂಡಿದೆ. ದೇವಾಲಯವು ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮುಖಮಂಟಪಗಳಿಂದ ಕೂಡಿದೆ. ನವರಂಗಕ್ಕೆ ಮೂರು ಕಡೆಯಿಂದ ಪ್ರವೇಶದ್ವಾರಗಳಿದ್ದು ನಿರ್ದಿಷ್ಟವಾದ ದಿಕ್ಕುಗಳಲ್ಲಿ ಪರಿವಾರ ದೇವತೆಗಳ ಚಿಕ್ಕ ಗುಡಿಗಳಿವೆ. ಪ್ರಾಕಾರಕ್ಕೆ ಎತ್ತರವಾದ ಗೋಡೆಯಿದೆ. ಗರ್ಭಗೃಹವು ಚೌಕಾಕಾರವಿದೆ. ಈ ದೇಗುಲದ ನವರಂಗ ಮತ್ತು ಗರ್ಭಗೃಹದ ಗೋಡೆಗಳ ಮೇಲೆ ರಾಮಾಯಣದ ದೃಶ್ಯಗಳನ್ನು ಆಕರ್ಷಕವಾಗಿ ಕೆತ್ತಲಾಗದೆ. ಗರ್ಭಗೃಹದಲ್ಲಿ ನರಸಿಂಹಸ್ವಾಮಿಯ ವಿಗ್ರಹವಿದ್ದು ದ್ವಾರದ ಬಾಗಿಲುಗಳಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ನವರಂಗದಲ್ಲಿ ನಾಲ್ಕು ಚೌಕಾಕಾರದ ಕಂಬಗಳಿವೆ. ಅವುಗಳಿಗೆ ಪುಷ್ಪ ಭೋದಿಗೆಗಳಿವೆ. ಇವುಗಳಲ್ಲಿ ಸಂಗೀತಗಾರ್ತಿಯರ ಉಬ್ಬುಶಿಲ್ಪಗಳಿವೆ. ಗೋಪಿಕಾ ವಸ್ತ್ರಾಪಹರಣ ದೃಶ್ಯ ಮನೋಹರವಾಗಿದೆ. ಇವುಗಳಲ್ಲದೆ ನರಸಿಂಹ, ಮೃಗ ಪುರುಷ, ಮೋಹಿನಿ ಮತ್ತು ವಿವಿಧ ಶೈಲಿಯ ನರ್ತಕಿಯರು ಕಣ್ಮನ ಸೆಳೆಯುತ್ತಾರೆ. ಈ ದೇವಾಲಯವು ನಾಯಕರ ಕಾಲದ ಅತ್ಯುತ್ತಮವಾದ ವಾಸ್ತುಕಲೆಗೆ ನಿದರ್ಶನವಾಗಿದೆ.

ಇಂಡೋ ಇಸ್ಲಾಮಿಕ್ ಶೈಲಿಯ ಕೆಲವು ಸ್ಮಾರಕಗಳು ನಾಯಕರ ಕಾಲದಲ್ಲಿ ನಿರ್ಮಾಣಗೊಂಡವು. ಕೋಟೆಯ ಮುಖ್ಯದ್ವಾರದ ಮೇಲಿರುವ ಕಾವಲು ಗೂಡುಗಳು ಇಂಡೋ-ಇಸ್ಲಾಮಿಕ್ ವಾಸ್ತುಕಲೆಗೆ ಉತ್ತಮ ನಿದರ್ಶನಗಳು. ಊರಿನ ಮಧ್ಯಭಾಗದಲ್ಲಿರುವ ೧೭೮೦ರ ಮಸೀದಿ ಬಿಜಾಪುರದ ಗೋಲಗುಮ್ಮಟದ ಶೈಲಿಯ ಗುಮ್ಮಟವನ್ನು ಹೊಂದಿದ್ದು, ಮುಂದೆ ಎರಡು ಎತ್ತರವಾದ ಮಿನಾರ್‌ಗಳು ಇವೆ. ಇದು ಶ್ರೀರಂಗಪಟ್ಟಣದ ಮಸೀದಿಯನ್ನು ಹೋಲುತ್ತದೆ. ಇದು ಇಲ್ಲಿಯ ಟಿಪ್ಪುವಿನ ಪ್ರಾಂತ್ಯಾಧಿಕಾರಿ ದೌಲತ್‌ಖಾನ್‌ನಿಂದ ನಿರ್ಮಾಣವಾಗಿದೆ ಎಂದು ಶಾಸನಗಳಿಂದ ತಿಳಿದುಬರುತ್ತದೆ. ಮತ್ತು ಮದಕರಿ ನಾಯಕನ ಕಾಲದಲ್ಲಿ ಅಹಮದ್ ಷಾಹ ಎಂಬ ಸಂತನೋರ್ವನು ಇಲ್ಲಿ ವಾಸವಾಗಿದ್ದನೆಂದು ಮದಕರಿ ನಾಯಕರ ಆಶ್ರಯದಲ್ಲಿ ಇದ್ದ ಸೈಯದ್ ಅಹಮದ್ ಷಾಹನ ಸಮಾಧಿಯ ಕಟ್ಟಡವು ಎತ್ತರವಾದ ವೇದಿಕೆಯ ಮೇಲೆ ಬಿಜಾಪುರ ಶೈಲಿಯ ಗುಮ್ಮಟವನ್ನು ಹೊಂದಿದೆ. ಈ ಸಮಾಧಿಯು ೧೭೮೨ರಲ್ಲಿ ನಿರ್ಮಿಸಲಾದದ್ದೆಂದು ಎರಡು ಪರ್ಶಿಯನ್ ಶಾಸನಗಳು ತಿಳಿಸುತ್ತವೆ.[೭೪]

ಹೀಗೆ ಚಿತ್ರದುರ್ಗ ಜಿಲ್ಲೆಯಾದ್ಯಂತ ನಾಯಕರ ಕಾಲದಲ್ಲಿ ನಿರ್ಮಾಣಗೊಂಡಿರುವ ಹಲವಾರು ದೇವಾಲಯಗಳು ಕಂಡುಬರುತ್ತವೆ. ಚಿತ್ರದುರ್ಗ ನಾಯಕರ ಕಾಲದ ಕಲೆ ಮತ್ತು ವಾಸ್ತುಶಿಲ್ಪದ ಇತಿಹಾಸವನ್ನು ರಚಿಸುವಲ್ಲಿ ಈ ಸ್ಮಾರಕಗಳು ಮಹತ್ವವೆನಿಸುತ್ತವೆ.

ಚಿತ್ರದುರ್ಗ ಕೋಟೆ

ಚಿತ್ರದುರ್ಗ ಬೆಟ್ಟದ ಮೇಲಿರುವ ಏಳು ಸುತ್ತಿನ ಕೋಟೆ ಕರ್ನಾಟಕದಲ್ಲಿ ರಚನೆಯಾಗಿರುವ ಕೋಟೆಗಳಲ್ಲಿಯೇ ಅತ್ಯಂತ ಬಲಿಷ್ಠವಾದ ಕೋಟೆಯಾಗಿದೆ. ಈ ಕೋಟೆಯ ನಿರ್ಮಾಣ ಕಾರ್ಯ ವಿಜಯನಗರ ಕಾಲದಲ್ಲಿಯೇ ಆರಂಭವಾಗಿತ್ತು ಎಂಬುದಕ್ಕೆ ಶಾಸನಗಳು ಸಮರ್ಥನೆಯನ್ನು ನೀಡುತ್ತವೆ. ಚಿತ್ರದುರ್ಗದ ಬೆಟ್ಟದ ಮೇಲಿರುವ ಸಂಪಿಗೆ ಸಿದ್ದೇಶ್ವರ ದೇವಾಲಯದಲ್ಲಿರುವ ೧ನೇ ಬುಕ್ಕರಾಯನಿಗೆ ಸಂಬಂಧಿಸಿದ ಎರಡು ಶಾಸನಗಳಲ್ಲಿ ಕೋಟೆಯ ಬಗ್ಗೆ ವಿವರಗಳಿವೆ. ಅಗಳುಗಳು, ಆಳ್ವೇರಿಗಳು, ಬತೇರಿಗಳು, ಕೊತ್ತಲಗಳು, ಒಡ್ಡುಗಳು, ಬಾವುಟದ ದಿನ್ನೆಗಳು ಹೇರಳವಾಗಿವೆ. ಇಂತಹ ಕೋಟೆಯನ್ನು ಏನೆಂದು ವರ್ಣಿಸಲಿ, ಸ್ವಸೇನೆಗೂ ಶತ್ರುಸೇನೆಗೂ ವಜ್ರ ಕೋಟೆಯಂತೆ ತೋರುವುದು ಎಂದು ಕೋಟೆಯನ್ನು ವರ್ಣಿಸಲಾಗಿದೆ. ಈ ಶಾಸನದಲ್ಲಿ ಮಲ್ಲಿನಾಥ ಪಡೆಯನಿಗೆ ನಡುಗೋಂಟೆ ಮಲ್ಲ ಎಂಬ ಬಿರುದಿರುವುದು ಕಂಡು ಬರುತ್ತದೆ. ನಡುಕೋಂಟೆಗೆ ನಡೆದಾಡುವ ಕೋಟೆ ಎಂಬ ಅರ್ಥವಿದೆ. ಈ ಎರಡು ಶಾಸನಗಳ ಮಾಹಿತಿಯಿಂದ ವಿಜಯನಗರದ ಪ್ರತಿನಿಧಿಯಾಗಿ (ಮಹಾಮಂಡಲೇಶ್ವರ) ಚಿತ್ರದುರ್ಗವನ್ನು ಆಳುತ್ತಿದ್ದ ವೀರಮಲ್ಲಣ್ಣ ಪಡೆಯನು ಕ್ರಿಶ. ೧೩೫೬ರ ಸುಮಾರಿಗೆ ಸಂಪಿಗೆ ಸಿದ್ದೇಶ್ವರ ದೇವಾಲಯದ ಪ್ರವೇಶ ದ್ವಾರವನ್ನು ಉಯ್ಯಾಲೆ ಕಂಬ, ಹಿಡಂಬೇಶ್ವರ ದೇವಲಾಯದ ಶಿಖರ ನಿರ್ಮಾಣ ಮಾಡಿರುವುದು ತಿಳಿದು ಬರುತ್ತದೆ. ಹೀಗಾಗಿ ಚಿತ್ರದುರ್ಗ ಕೋಟೆಯ ಪೂರ್ವ ರಚನೆಯು ವಿಜಯನಗರ ಕಾಲದಲ್ಲಿಯೇ ಆಗಿತ್ತೆಂದು ಹೇಳಬಹುದು.

ಮಲ್ಲಣ್ಣ ಒಡೆಯನ ನಂತರ ಕಾಮಗೇತಿ ವಂಶಸ್ಥನಾದ ಮತ್ತು ತಿಮ್ಮಣ್ಣನು ಚಿತ್ರದುರ್ಗ ಸೀಮೆಯನ್ನು ಅಮರಮಾಗಣಿಯಾಗಿ ಪಡೆದು ನಾಯಕನಾಗಿ ಅಧಿಕಾರಕ್ಕೆ ಬಂದ ನಂತರ ಈ ಕೋಟೆಯ ರಚನೆಯನ್ನು ಪೂರ್ತಿಗೊಳಿಸಿದನು. ಚಿತ್ರದುರ್ಗ ನಾಯಕರ ಕಾಲದಲ್ಲಿ ಪೂರ್ತಿಯಾಗಿ ನಿರ್ಮಾಣಗೊಂಡ ಈ ಕೋಟೆಯ ರಕ್ಷಣಾ ಕೌಶಲ್ಯ, ವಿನ್ಯಾಸ, ರಚನೆಯ ಜಾಣ್ಮೆಯು ಶತ್ರುಗಳನ್ನು ನಿಬ್ಬೆರಗಾಗಿಸುತ್ತದೆ. ಕೋಟೆಯಲ್ಲಿ ಮದ್ದು ಗುಂಡುಗಳನ್ನು ತಯಾರಿಸಲು, ಆಹಾರವನ್ನು ಸಂಗ್ರಹಿಸಲು, ಮದ್ದು ಗುಂಡುಗಳನ್ನು ಶೇಖರಿಸಿಡಲು ಕಣಜಗಳನ್ನು ನಿರ್ಮಿಸಿರುವುದು ಕಂಡು ಬರುತ್ತದೆ. ಕೋಟೆಯ ಒಳಗೆ ಗೋಪಾಲಕೃಷ್ಣ ಸ್ವಾಮಿ ಹೊಂಡ, ಅಕ್ಕ ತಂಗಿಯರ ಹೊಂಡಗಳಿದ್ದು ನೀರನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ ಯಾವತ್ತೂ ನೀರ ಬರ ತಗಲುದಂತೆ ಮಾಡಲಾಗಿದೆ. ಚಿತ್ರದುರ್ಗ ಕೋಟೆಯ ಸುತ್ತಲೂ ಕಂದಕಗಳನ್ನು ನಿರ್ಮಿಸಲಾಗಿದೆ. ಒಟ್ಟಿನಲ್ಲಿ ಚಿತ್ರದುರ್ಗದ ಪಾಳೆಯಗಾರರು ಶತ್ರುಗಳಿಗೆ ಅಭೇದ್ಯವಾದ ಬಲಾಢ್ಯವಾದ ೭ ಸುತ್ತಿನ ಕಲ್ಲಿನ ಕೋಟೆಯನ್ನು ನಿರ್ಮಾಣ ಮಾಡಿದರು.

ಹರತಿ ಪಾಳೆಯಗಾರರ ಕಾಲದ ದೇವಾಲಯಗಳು

ವಿಜಯನಗರದ ಅಮರನಾಯಕರಾಗಿದ್ದ ಹರತಿ ಪಾಳೆಯಗಾರರು ವಿಜಯನಗರದ ಅರಸರಂತೆ ಧರ್ಮ ಸಂರಕ್ಷಣೆಯ ನೀತಿಯನ್ನು ಪರಿಪಾಲಿಸಿದರು. ಧರ್ಮ ಸಂರಕ್ಷಣೆ ಮತ್ತು ಸಂಸ್ಕೃತಿಯ ಪೋಷಕರಾಗಿದ್ದ ಹರತಿ ನಾಯಕರು ತಮ್ಮ ಅಧಿಕಾರಾವಧಿಯಲ್ಲಿ ಹಲವಾರು ದೇವಾಲಯಗಳನ್ನು ನಿರ್ಮಿಸಿದರು. ದೇವತಾ ವಿಗ್ರಹಗಳನ್ನು ಪ್ರತಿಷ್ಠಾಪಿಸಿ, ಅದರ ಅಂಗಭೋಗ, ರಂಗಭೋಗಗಳಿಗೆ ದಾನ ದತ್ತಿಗಳನ್ನು ನೀಡಿರುವುದು ಶಾಸನೋಕ್ತವಾಗಿದೆ.

ಅಹೋಬಲ ನರಸಿಂಹಸ್ವಾಮಿ ದೇವಾಲಯ

ಅಹೋಬಲ ನರಸಿಂಹಸ್ವಾಮಿಯ ದೇವಾಲಯ ಹರ್ತಿಕೋಟೆಯ ಪೂರ್ವ ದಿಕ್ಕಿನಲ್ಲಿದೆ. ದೇವಾಲಯದ ಗರ್ಭಗುಡಿಯನ್ನು ಹೊರತುಪಡಿಸಿದರೆ ಮುಖಮಂಟಪವನ್ನು ಇತ್ತೀಚೆಗೆ ನಿರ್ಮಾಣ ಮಾಡಲಾಗಿದೆ. ದೇವಾಲಯದ ಮುಂಭಾಗದಲ್ಲಿ ದೀಪಸ್ತಂಭವಿದೆ. ದೇವಾಲಯದ ಆವರಣದಲ್ಲಿ ದಕ್ಷಿಣದ ಕಡೆ ಮುಖ ಮಾಡಿದ ವೀರಗಲ್ಲಿದೆ. ವೀರಗಲ್ಲಿನ ಮೇಲಿನ ಶಾಸನವು ಪೂಜಾರಿ ಬಿಕಯ ಕೊಮ/ರುತು ಬಿರೇದ ಎಂಬ ಬರಹವಿದ್ದು ಮಾಹಿತಿಯು ಅಸ್ಪಷ್ಟವಾಗಿದೆ.

ಕಲ್ಲುಬಾವಿ

ಹರತಿಯಲ್ಲಿರುವ ಸ್ಮಾರಕಗಳಲ್ಲಿ ಕಲ್ಲು ಬಾವಿಯು ವಿಶಿಷ್ಟವಾಗಿದೆ. ಉತ್ತರಾಭಿಮುಖವನ್ನು ಹೊಂದಿರುವ ಈ ಬಾವಿಯು ೭ ಅಡಿ ಎತ್ತರದ ಬಾಗಿಲುವಾಡವನ್ನು ದಾಟಿ ಹನ್ನೆರಡು ಮೆಟ್ಟಿಲುಗಳನ್ನಿಳಿದು ಒಳ ಪ್ರವೇಶಿಸಿದರೆ ೬೫ ಕಲ್ಲು ಪಾವಟಿಗೆಗಳನ್ನು ಇಳಿಯಬೇಕಾಗುತ್ತದೆ. ಸುತ್ತಲೂ ಮೂರಡಿಗಳ ಸ್ಥಳವಿದ್ದು ಅದರ ಮಧ್ಯೆ ಪೂರ್ವ ಪಶ್ಚಿಮ ಆರಡಿ ಮತ್ತು ಉತ್ತರ ದಕ್ಷಿಣ ಐದಡಿ ಎರಡಂಗುಲದ ಒಳಬಾವಿಯು ಹದಿಮೂರಡಿ ಆಳದಲ್ಲಿ ಕಾಣುತ್ತದೆ. ಈ ಬಾವಿ ಈಗಲೂ ಜನರಿಗೆ ಕುಡಿಯುವ ನೀರನ್ನು ಒದಗಿಸುತ್ತದೆ.

ವಾಸ್ತುಶಿಲ್ಪದ ದೃಷ್ಟಿಯಿಂದ ಈ ಬಾವಿಯು ಅಷ್ಟೇನು ಮಹತ್ವ ಪಡೆಯದಿದ್ದರೂ ಬಾವಿಯಲ್ಲಿ ಇಳಿಯುವಾಗ ಮೆಟ್ಟಿಲುಗಳ ಎರಡು ಬದಿಯ ಗೋಡೆಗಳಲ್ಲೂ ಅಳವಡಿಸಿರುವ ಕಲ್ಲುತುಂಡುಗಳ ಮೇಲೆ ಚಿಕ್ಕದಾಗಿ ಕೆತ್ತಿರುವ ಸ್ತ್ರೀ ಮತ್ತು ಪುರುಷ ಮಿಥುನ ಶಿಲ್ಪ, ಆನೆ ಹಾಗೂ ನಗ್ನ ಸ್ತ್ರೀ ಚಿತ್ರಗಳು ಗಮನ ಸೆಳೆಯುತ್ತವೆ.

ಆಂಜನೇಯ ದೇವಾಲಯ

ಆಂಜನೇಯಸ್ವಾಮಿ ದೇವಾಲಯವು ಹರತಿ ಪಾಳೆಯಗಾರರ ಕಾಲದಲ್ಲಿ ನಿರ್ಮಾಣಗೊಂಡಿರುವ ಆಕರ್ಷಣೀಯ ದೇವಾಲಯವಾಗಿದೆ. ಈ ದೇವಾಲಯದ ಮುಂಭಾಗ ದೀಪಸ್ತಂಭ ಮತ್ತು ಉಯ್ಯಾಲೆ ಕಂಬಗಳಿವೆ. ಏಕಶಿಲೆಯಿಂದ ನಿರ್ಮಾಣಗೊಂಡಿರುವ ಅಪೂರ್ವ ಕೆತ್ತನೆಗಳಿಂದ ಕೂಡಿರುವ ದೀಪಸ್ತಂಭ ಸುಮಾರು ೨೦ ಅಡಿ ಎತ್ತರವಾಗಿದೆ.

ಮಜ್ಜನ ಬಾವಿ

ಹರತಿಯ ಪೂರ್ವ ದಿಕ್ಕಿನಲ್ಲಿ ಮಜ್ಜನಬಾವಿ ಇದೆ. ಈ ಬಾವಿಯ ಸಮೀಪ ಕೊಲ್ಲಾಪುರದಮ್ಮನ ಗುಡಿ ಹಾಗೂ ಯರಬಳ್ಳಿಯ ಮಾರಕ್ಕನ ಗುಡಿಯಿದೆ. ಈ ಬಾವಿಯಲ್ಲಿ ಸಿಹಿ ನೀರು ಲಭ್ಯವಿದ್ದು ಗ್ರಾಮದ ಎಲ್ಲಾ ದೇವತೆಗಳಿಗೂ ಈ ಬಾವಿಯ ನೀರನ್ನೇ ಮಜ್ಜನಕ್ಕಾಗಿ ಬಳಸುವುದರಿಂದ ಮಜ್ಜನ ಬಾವಿಯೆಂಬ ಹೆಸರಿದೆ.[೨೫]

ಓರುಗಲ್ಲಮ್ಮ ದೇವಾಲಯ

ಈ ದೇವಾಲಯವು ರೇವಣಸಿದ್ದೇಶ್ವರ ದೇವಾಲಯದ ಹಿಂಭಾಗದಲ್ಲಿದೆ. ಆಂಧ್ರಪ್ರದೇಶದ ಓರಂಗಲ್ಲಿನಿಂದ ವಲಸೆ ಬಂದ ಹಾರೆ ಕುರುಬರು ಓರುಗಲ್ಲಮ್ಮ ದೇವತೆಯನ್ನು ತಮ್ಮ ಜೊತೆಗೆ ಹರತಿಗೆ ಕರೆತಂದು ಪ್ರತಿಷ್ಠಾಪನೆ ಮಾಡಿದರೆಂಬ ಪ್ರತೀತಿಯಿದೆ. ಶಕ್ತಿ ದೇವತೆಯಾದ ಓರುಗಲ್ಲಮ್ಮನ ದೇವಾಲಯವನ್ನು ಪ್ರಾರಂಭದಲ್ಲಿ ಮಣ್ಣಿನ ಗೋಡೆಗಳಿಂದ ಕಟ್ಟಿದ್ದರು. ಇತ್ತೀಚೆಗೆ ಆಧುನಿಕ ಕಟ್ಟಡವನ್ನು ಕಂಚಿನ ಹಿತ್ತಾಳೆ ಲೋಹದಿಂದ ಮಾಡಿಸಲಾಗಿದೆ. ಹರತಿ ಪಾಳೆಯಗಾರರ ಕಾಲದ ಇನ್ನಿತರ ಕಾಲದ ಸ್ಮಾರಕಗಳೆಂದರೆ ವೀರಭದ್ರಸ್ವಾಮಿ ದೇವಾಲಯ, ಕೆಂಚಲಿಂಗೇಶ್ವರ ಹಾಗೂ ವೀರಮಾಳೇಶ್ವರ ದೇವಾಲಯಗಳು, ರೇವಣಸಿದ್ದೇಶ್ವರ ದೇವಾಲಯಗಳು ಪ್ರಮುಖವಾಗಿವೆ. ಹಾಗೆಯೇ ವೀರಗಲ್ಲುಗಳು ಉಪ್ಪಿನ ಮಾಳಗಳು ಚಲವಾದಿ ಬೆಳಪ್ಪನ ಸಮಾಧಿ, ಪದ್ಮಣ್ಣನಾಯನ ಸಮಾಧಿಗಳು ಪ್ರಮುಖ ಅವಶೇಷಗಳಾಗಿವೆ.

ಹಂಡೆ ಪಾಳೆಯಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪ

ಹಂಡೆ ಪಾಳೆಯಗಾರರು ವಿಜಯನಗರದ ಅಮರನಾಯಕರಾಗಿ ಕರ್ತವ್ಯ ನಿಭಾಯಿಸಿದ್ದರಿಂದ ಈ ನಾಯಕರ ಕಾಲದ ಕಲೆ ಮತ್ತು ವಾಸ್ತುಶಿಲ್ಪದ ಮೇಲೆ ವಿಜಯನಗರದ ಪ್ರಭಾವ ದಟ್ಟವಾಗಿರುವುದನ್ನು ಗಮನಿಸಬಹುದು. ಹಂಡೆ ಪಾಳೆಯಗಾರರ ಕಲಾ ಸ್ಮಾರಕಗಳಲ್ಲಿ ವಿಜಯನಗರ

ಶೈಲಿಯ ಜೊತೆ ಸ್ಥಳೀಯ ಜಾನಪದೀಯ ಅಂಶಗಳು ಸೇರಿಕೊಂಡಿವೆ. ಇವರ ಕಾಲದ ದೇವಾಲಯಗಳು ಒಡ್ಡು, ದರೋಜಿ, ಸಿರುಗುಪ್ಪ, ರೂಪನಗುಡಿ, ಕಣಿಕಲ್ಲು ಮತ್ತು ವುಳೆನೂರು, ತೋಲಮಾಮಿಡಿ, ಬಾಗನೂರು, ಸಂಗನಕಲ್ಲು, ಬಳ್ಳಾರಿ, ಸಿಂಧನೂರು, ರಾರಾವಿ, ಸಿಡಗಿನ ಮೇಳ, ಕುಡುತಿನಿ, ಮಣೂರು, ಕೊಟ್ಟೂರು, ಕಾರೆಕಲ್ಲು, ಕುರುಗೋಡು, ನಿಡುಮಾಮಿಡಿ ಇನ್ನು ಹಲವಾರು ಪ್ರದೇಶಗಳಲ್ಲಿ ಕಂಡುಬರುತ್ತವೆ. ಹಂಡೆ ಅರಸರು ನಿರ್ಮಿಸಿದ ಮತ್ತು ಅವರ ಅವಧಿಯಲ್ಲಿ ನಿರ್ಮಾಣಗೊಂಡಿರುವ ದೇವಾಲಯಗಳು ಕಲಾತ್ಮಕ ದೃಷ್ಟಿಯಿಂದ ಅವರ ಅರಸರಾದ ವಿಜಯನಗರದವರಷ್ಟು ಶ್ರೀಮಂತಿಕೆಯಿಂದ ಕೂಡಿರದಿದ್ದರೂ ಅವುಗಳಿಗೆ ತಮ್ಮದೇ ಆದ ಐತಿಹಾಸಿಕ ಮಹತ್ವವಿದೆ.[೭೬] ಇವರ ಕಾಲದ ಪ್ರಮುಖ ದೇವಾಲಯಗಳೆಂದರೆ ಬಸವೇಶ್ವರ, ಈಶ್ವರ, ಆಂಜನೇಯ, ವೀರಭದ್ರ, ಮಲ್ಲೇಶ್ವರ ದೇವಾಲಯಗಳಾಗಿವೆ.

ಅರಮನೆ ವಾಸ್ತುಕಲೆ: ಹಂಡೆ ಪಾಳೆಯಗಾರರ ಕಾಲದಲ್ಲಿ ನಿರ್ಮಾಣವಾಗಿದ್ದ ಅರಮನೆಗಳಾಗಲಿ ಅಥವಾ ಜನವಸತಿ ಸ್ಮಾರಕಗಳು ಸಂಪೂರ್ಣ ನಾಶಗೊಂಡಿವೆ. ಕಾರಣ ಬೇರೆ ಬೇರೆ ಕಾಲಘಟ್ಟದಲ್ಲಿ ಬೇರೆಯವರ ಅಧೀನಕ್ಕೆ ಒಳಪಟ್ಟ ಕೋಟೆಯಲ್ಲಿ ವಾಸದ ಮನೆಗಳು ಸಹ ಬದಲಾಗುತ್ತಾ ಬಂದಿವೆ.[೭೭]

ಹಂಡೆ ಪಾಳೆಯಗಾರರು ಹಲವಾರು ಬಾವಿಗಳನ್ನು, ಕೆರೆಗಳನ್ನು, ಮಠಗಳನ್ನು ನಿರ್ಮಾಣ ಮಾಡಿದ್ದು, ಬಳ್ಳಾರಿ ಆಂಧ್ರಾಳು ಬಂಕಾಪುರ, ಕುರುಗೋಡು, ಬೈಲೂರುಗಳಲ್ಲಿ ಕಂಡುಬಂದಿವೆ. ವಡ್ಡು, ದರೋಜಿ, ಕುರುಗೋಡು, ನಿಟ್ಟೂರು, ಕುಡುತಿನಿಗಳಲ್ಲಿ ಇವರ ಕಾಲದ ಕೆರೆಗಳು ಕಂಡುಬರುತ್ತವೆ. ಕುರುಗೋಡು, ಕುಡುತಿನಿ, ನಿಡುಮಾಮಿಡಿ, ಕೊಟ್ಟೂರು, ಹೊಸಪೇಟೆ, ಬಳ್ಳಾರಿ, ಶೃಂಗೇರಿ ಮಠ ಮತ್ತು ಸಂಗನಕಲ್ಲು ಮಠಗಳಿಗೆ ಹಲವಾರು ದಾನದತ್ತಿಗಳನ್ನು ನೀಡಿರುವುದು ಶಾಸನೋಕ್ತವಾಗಿದೆ.

ಬಳ್ಳಾರಿ ಕೋಟೆ

ಬಳ್ಳಾರಿ ಕೋಟೆಯನ್ನು ಹಂಡೆಯ ವಜೀರರು ನಿರ್ಮಿಸಿದರು. ಹಂಡೆಯ ನಾಯಕ ಬಾಲದ ಹನುಮಪ್ಪ ನಾಯಕನು ಬಳ್ಳಾರಿ ಕೋಟೆಯನ್ನು ನಿರ್ಮಿಸಿದನು. ಹಂಡೆಯ ವಜೀರರು ನಿರ್ಮಿಸಿದ ಈ ಕೋಟೆಯನ್ನು ನಿರ್ನಾಮ ಮಾಡಿ ಈಗಿರುವ ಕೋಟೆಯನ್ನು ಹೈದರಾಲಿಯು ನಿರ್ಮಿಸಿದನು. ನಂತರ ಕ್ರಿ.ಶ. ೧೭೯೨ರಲ್ಲಿ ಈ ಕೋಟೆಯು ಹೈದರಾಲಿಯ ಮಗನಾದ ಟಿಪ್ಪುವಿನ ವಶಕ್ಕೆ ಬಂದಾಗ ಈ ಕೋಟೆಯ ಕೊತ್ತಲ ಮತ್ತು ಕಂದಕಗಳಿಗೆ ಗಚ್ಚಿನ ಕಾಮಗಾರಿಕೆಯನ್ನು ಮಾಡಿಸುವ ಮೂಲಕ ದುರಸ್ತಿಗೊಳಿಸಿದನು.[೯೧] ನಂತರ ಈ ಕೋಟೆ ಕೆಲವು ಕಾಲ ನಿಜಾಮರ ವಶವಾಗಿ ನಂತರ ಬ್ರಿಟಿಷರ ಕೈ ಸೇರಿತು. ಬ್ರಿಟಿಷರು ಕೆಳಭಾಗದ ಕೋಟೆಯಲ್ಲಿ ಅನೇಕ ಕಟ್ಟಡಗಳನ್ನು ಕಟ್ಟಿಸಿದರು. ೪ ಸುತ್ತುಗಳ ಈ ಕೋಟೆಯು ಅತ್ಯಂತ ರಕ್ಷಣಾತ್ಮಕವಾಗಿ ನಿರ್ಮಾಣ ಮಾಡಲಾಗಿದೆ. ಕೋಟೆಯ ಆಗ್ನೇಯ ದಿಕ್ಕಿನಲ್ಲಿ ಮದ್ದುಗುಂಡುಗಳನ್ನು ಹಾಗೂ ಕುದುರೆಗಳನ್ನು ರಕ್ಷಿಸಲು ಅನುಕೂಲವಾಗುವಂತೆ ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ಕೋಟೆಯ ಒಳಭಾಗದ

ಅರಮನೆಯಲ್ಲಿ ಬೃಹತ್ ಕಟ್ಟಡಗಳಿರುವುದನ್ನು ಗಮನಿಸಬಹುದು. ಬೆಟ್ಟದ ತುದಿಯಲ್ಲಿ ವಾಸದ ಮನೆಗಳು, ಕಣಜಗಳು, ನೀರಿನ ಹೊಂಡಗಳು ಇರ್ವ[೨] ಪ್ರಾಯಶಃ ಶತ್ರುಗಳಿಂದ ರಕ್ಷಣೆ ಪಡೆಯಲು ಇವುಗಳನ್ನು ನಿರ್ಮಿಸಿರಬಹುದು.

ಒಟ್ಟಿನಲ್ಲಿ ನಾಯಕ ಕಾಲದ ಕೋಟೆಗಳನ್ನು ಗಮನಿಸಿದಾಗ ಕೋಟೆಗಳ ನಿರ್ಮಾಣ ಕಾರ್ಯದಲ್ಲಿ ಮತ್ತು ರಕ್ಷಣೆಗೆ ಹೆಚ್ಚು ಒತ್ತು ಕೊಟ್ಟಿರುವುದು ಕಂಡು ಬರುತ್ತದೆ. ನಾಯಕರು ತನ್ನ ಕೋಟೆಯಲ್ಲಿ ಜನವಸತಿಗೆ ಅನುಕೂಲವಾಗುವ ಎಲ್ಲ ನಾಗರಿಕ ಸೌಲಭ್ಯಗಳನ್ನು ನಿರ್ಮಿಸಿಕೊಂಡಿರುವುದು ಗಮನಾರ್ಹ ಸಂಗತಿ. ನೀರಿನ ಬಳಕೆಗಾಗಿ ಕೋಟೆಯಲ್ಲಿ ನಿರ್ಮಾಣ ಮಾಡಲಾಗಿರುವ ದೋಣಿಗಳು, ಹೊಂಡಗಳು, ಕೊಳಗಳು ಯಾವಾಗಲೂ ಬತ್ತದಂತೆ ಎಚ್ಚರ ವಹಿಸುತ್ತಿದ್ದರು. ಶತ್ರುಗಳು ಕೋಟೆಗೆ ಮುತ್ತಿಗೆ ಹಾಕಿದಾಗ ಪ್ರಜೆಗಳಿಗೆ ತೊಂದರೆಯಾಗದಂತೆ ಆಹಾರ ಧಾನ್ಯಗಳನ್ನು ಶೇಖರಿಸಲು, ತುಪ್ಪ, ಎಣ್ಣೆಗಳನ್ನು ಶೇಖರಿಸಿಡಲು ದೊಡ್ಡ ದೊಡ್ಡ ಖಣಜಗಳನ್ನು ನಿರ್ಮಿಸಿರುವುದು ನಾಯಕರ ರಾಜಕೀಯ ದೂರದೃಷ್ಟಿತನವನ್ನು ಎತ್ತಿ ತೋರಿಸುತ್ತವೆ. ಇವರು ತಂತ್ರಜ್ಞಾನ ಮತ್ತು ರಕ್ಷಣಾ ಕೌಶಲ್ಯಗಳನ್ನು ಬಳಸಿಕೊಂಡು ತಮ್ಮ ಸಂಪನ್ಮೂಲಗಳ ಮಿತಿಯಲ್ಲಿಯೇ ಕೋಟೆಗಳನ್ನು ನಿರ್ಮಿಸಿರುವುದು ಅವರ ಜಾಣತನವನ್ನು ಪ್ರದರ್ಶಿಸುತ್ತದೆ.

ಗುಡೇಕೋಟೆ ಪಾಳೆಯಗಾರರ ಕಾಲದ ದೇವಾಲಯಗಳು

ಗುಡೇಕೋಟೆ ಪಾಳೆಯಗಾರರು ತಮ್ಮ ಆಡಳಿತದ ಅವಧಿಯಲ್ಲಿ ಹಲವಾರು ಕಲಾ ಸ್ಮಾರಕಗಳನ್ನು ನಿರ್ಮಿಸಿದ್ದಾರೆ. ಇವರ ಕಾಲದಲ್ಲಿ ನಿರ್ಮಾಣಗೊಂಡಿರುವ ದೇವಾಲಯಗಳನ್ನು ಗಮನಿಸಿದಾಗ ಶೈವ ಮತ್ತು ವೈಷ್ಣವ ಧರ್ಮಕ್ಕೆ ವಿಶೇಷವಾದ ಪ್ರೋತ್ಸಾಹ ನೀಡಿರುವುದು ಕಂಡುಬರುತ್ತವೆ. ಈ ಎರಡು ಧರ್ಮಗಳಿಗೆ ಸಂಬಂಧಿಸಿದಂತೆ ಹಲವಾರು ದೇವಾಲಯಗಳು ನಿರ್ಮಾಣಗೊಂಡಿವೆ. ಗುಡೇಕೋಟೆಯ ಪಾಳೆಯಗಾರರು ಆಂಜನೇಯ ದೇವಾಲಯ, ಚೌಡಮ್ಮ ದೇವಾಲಯ, ಮಲಿಯಮ್ಮ ದೇವಾಲಯ, ರಾಮಲಿಂಗೇಶ್ವರ ದೇವಾಲಯ, ಬಸವಣ್ಣ ದೇವಾಲಯ, ಕಾಳಮ್ಮ ದೇವಾಲಯ, ಈಶ್ವರ ದೇವಾಲಯ, ಲಕ್ಷ್ಮೀವೆಂಕಟೇಶ್ವರ ದೇವಾಲಯ, ಚೌಳೇಶ್ವರ ದೇವಾಲಯ, ಪಂಚಲಿಂಗೇಶ್ವರ ಗುಹಾಲಯ, ಶಿವಪಾರ್ವತಿಯರ ದೇವಾಲಯಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಈ ದೇವಾಲಯಗಳ ಜೊತೆಗೆ ಹಲವಾರು ಮಠಗಳನ್ನು ನಿರ್ಮಿಸಿದ್ದಾರೆ. ಏಣಿ ಈರಪ್ಪ ಮಠ ಮತ್ತು ವಿರಕ್ತ ಮಠಗಳು ಪ್ರಮುಖ ಮಠಗಳಾಗಿವೆ.

ರಾಮಲಿಂಗೇಶ್ವರ ದೇವಾಲಯ

ರಾಮಲಿಂಗೇಶ್ವರ ದೇವಾಲಯವು ಪಾಳೆಯಗಾರರ ಕಾಲದಲ್ಲಿ ನಿರ್ಮಾಣಗೊಂಡಿರುವ ಪ್ರಮುಖ ದೇವಾಲಯವಾಗಿದ್ದು ಇತ್ತೀಚೆಗೆ ಪತ್ತೆಯಾಗಿದೆ. ರಾಮಲಿಂಗೇಶ್ವರ ದೇವಾಲಯವು ಗರ್ಭಗೃಹ ಮತ್ತು ತೆರೆದ ಸಭಾಮಂಟಪಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗ ಮತ್ತು ನಂದಿ ಶಿಲ್ಪಗಳಿವೆ. ಈ ದೇಗುಲದ ಆವರಣದಲ್ಲಿ ಭಿನ್ನವಾದ ನಾಗಕನ್ಯೆಯ ವಿಗ್ರಹವಿದೆ.[೭೮]

ಬಸವಣ್ಣ ದೇವಾಲಯ

ಕ್ರಿ.ಶ. ೧೮ನೆಯ ಶತಮಾನದಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯವು ಇಂದು ಸಾಕಷ್ಟು ಶಿಥಿಲಾವಸ್ಥೆಯಲ್ಲಿದೆ. ಈ ದೇಗುಲದಲ್ಲಿ ಗರ್ಭಗೃಹ ಮಾತ್ರವಿದ್ದು, ಯಾವುದೇ ವಿಗ್ರಹಗಳಿಲ್ಲ. ಈ ದೇಗುಲದ ಶಿಖರವನ್ನು ಇಟ್ಟಿಗೆ ಹಾಗೂ ಗಾರೆಗಳಿಂದ ನಿರ್ಮಾಣ ಮಾಡಿರುವುದು ಕಂಡುಬರುತ್ತದೆ.

ಉಮಾಮಹೇಶ್ವರ ದೇವಾಲಯ

ವಾಸ್ತುಶಿಲ್ಪದ ದೃಷ್ಟಿಯಿಂದ ಗಮನ ಸೆಳೆಯುವ ಪ್ರಮುಖ ದೇವಾಲಯವೇ ಉಮಾ ಮಹೇಶ್ವರ ದೇವಾಲಯವಾಗಿದೆ. ಇದನ್ನು ಶಿವಪಾರ್ವತಿಯರ ದೇವಾಲಯವೆಂದು ಕರೆಯುತ್ತಾರೆ. ಈ ದೇವಾಲಯವನ್ನು ಸಂಪೂರ್ಣವಾಗಿ ಸ್ಥಳೀಯವಾಗಿ ಲಭ್ಯವಿರುವ ಗ್ರಾನೈಟ್ ಶಿಲೆ, ಗಾರೆ, ಇಟ್ಟಿಗೆ, ಮರದ ತುಂಡಿನಿಂದ ನಿರ್ಮಿಸಲಾಗಿದೆ. ಈ ದೇವಾಲಯವು ವಿಜಯನಗರ ಕಾಲದಲ್ಲಿ ನಿರ್ಮಿಸಿದ್ದಂತಿದ್ದರೂ ಅನಂತರದ ಲಕ್ಷಣಗಳನ್ನು ಹೆಚ್ಚಾಗಿ ಹೋಲುತ್ತದೆ. ವೇಸರ ಶೈಲಿಯನ್ನು ಹೊಂದಿದ್ದು, ವೈಶಿಷ್ಟ್ಯಪೂರ್ಣ ಲಕ್ಷಣಗಳು ಇಲ್ಲಿವೆ. ಗರ್ಭಗುಡಿ, ಅಂತರಾಳ, ನವರಂಗ ಮಂಟಪಗಳಿಂದ ಸರಳವಾಗಿ ರಚನೆಗೊಂಡಿದೆ.[೯]

ಈ ದೇವಾಲಯದ ಗೋಪುರವು ಇಟ್ಟಿಗೆಯಿಂದ ರಚಿತವಾಗಿದ್ದು ಸುತ್ತು ಗೋಡೆಯನ್ನು ಕಟ್ಟಲಾಗಿದೆ. ದೇಗುಲದ ದ್ವಾರದ ಬದಿಯಲ್ಲಿ ಗಣೇಶ, ಮಹಿಷ ವಿಗ್ರಹಗಳಿದ್ದು ೩ ಅಡಿ ಎತ್ತರದ ನಂದಿಶಿಲ್ಪವಿದೆ. ಗರ್ಭಗೃಹದಲ್ಲಿರುವ ಉಮಾಮಹೇಶ್ವರ ಶಿಲ್ಪ ಆಕರ್ಷಣೀಯವಾಗಿದೆ. ಇದು ಸುಮಾರು ೩ ಅಡಿ ಎತ್ತರದ ಪೀಠದ ಮೇಲೆ ೬ ಅಡಿ ಎತ್ತರದ ಕಪ್ಪು ಶಿಲೆಯ ವಿಗ್ರಹವಾಗಿದೆ. ಶಿವನ ನಾಲ್ಕು ಕೈಗಳಲ್ಲಿ ಎಡದ ಭಾಗದ ಹಿಂಬದಿ ಕೈಯಲ್ಲಿ ತ್ರಿಶೂಲ ಹಿಡಿದು ಅದರಲ್ಲಿ ಕುಂಡವಿದೆ. ಬಲ ಬದಿಯ ಅಂಗೈಯಲ್ಲಿ ಢಮರುಗ ಹಿಡಿದ ಶಿವ ಮುಂಗೈಯನ್ನು ಬಲತೊಡೆಯಲ್ಲಿ ಸುಖಾಸೀನಲಾದ ಪಾರ್ವತಿಯ ಎರಡು ಕಾಲುಗಳನ್ನು ಕೆಳಗೆ ಬಿಟ್ಟು ದ್ವಿಬಾಹುಗಳನ್ನು ಎಡಗೈಯಲ್ಲಿ ಕಟುವಾಂಗ ಹಿಡಿದು ಬಲಗೈಯಿಂದ ಶಿವನ ಕೊರಳು ಬಳಸಿ ಹಿಡಿದು ಕುಳಿತಿದ್ದಾಳೆ. ಪೀಠದ ಕೆಳಭಾಗದಲ್ಲಿ ನಂದಿಯ ಉಬ್ಬುಶಿಲ್ಪವಿದೆ.[೧೦]

ಈಶ್ವರ ದೇವಾಲಯ

ಈಶ್ವರ ದೇವಾಲಯವನ್ನು ಸ್ಥಳೀಯವಾಗಿ ಏಣಿ ಈರಪ್ಪನ ಗುಡಿಯೆಂದು ಕರೆಯುವರು. ಈ ದೇವಾಲಯವು ಪಾಳೆಯಗಾರರ ಕಾಲದಲ್ಲಿ ನಿರ್ಮಾಣವಾಗಿದ್ದು, ಈ ದೇವಾಲಯದ ಒಂದು ಮಂಟಪವು ವಿರಕ್ತಮಠವಾಗಿತ್ತು. ಈ ವಿರಕ್ತಮಠದಲ್ಲಿ ಏಣಿ ಈರಪ್ಪ ಎಂಬ ಸನ್ಯಾಸಿಯೊಬ್ಬ ವಾಸಿಸುತ್ತಿದ್ದರಿಂದ ಸ್ಥಳೀಯರು ಈ ದೇವಾಲಯವನ್ನು ಏಣಿ ಈರಪ್ಪನ ದೇವಾಲಯವೆಂದು ಕರೆಯುವರು. ಗರ್ಭಗುಡಿಯಲ್ಲಿರುವ ಶಿವಲಿಂಗವನ್ನು ನಿಧಿ ಚೋರರು ತುಂಡರಿಸಿದ್ದಾರೆ.

ಪಂಚಲಿಂಗೇಶ್ವರ ದೇವಾಲಯ

ಈ ಗುಹಾಲಯವು ಶೈವ ಗುಹಾಲಯವಾಗಿದ್ದು ಕ್ರಿ.ಶ. ೧೨ನೆಯ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಕಲಾ ಶೈಲಿಯಲ್ಲಿ ನಿರ್ಮಾಣಗೊಂಡಿದೆ.[೮೧] ಈ ಗುಹಾಲಯವು ಸುಮಾರು ಒಂದು ನೂರು ಅಡಿಗಳಿಗೂ ಉದ್ದವಾದ ಕಣಶಿಲೆಯ, ವಿಶಾಲ ಬಂಡೆಗಲ್ಲಿನ ಕೆಳಭಾಗದಲ್ಲಿರುವ ಗುಹಾಂತರ ದೇವಾಲಯ. ಬಂಡೆಯ ಕೆಳಭಾಗದಲ್ಲಿ ಅದರ ಉದ್ದಕ್ಕೂ ಇರುವ ಸ್ಥಳಾವಕಾಶವನ್ನು ಬಳಸಿಕೊಂಡು ಐದು ಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ಗುಹಾಲಯದಲ್ಲಿ ಐದು ಲಿಂಗಗಳನ್ನು ಪ್ರತಿಷ್ಠಾಪಿಸಲಾಗಿರುವುದರಿಂದ ಪಂಚಲಿಂಗೇಶ್ವರ ಗುಹಾಲಯವೆಂದು ಕರೆಯುವರು. ಈ ಗುಹಾಲಯದ ಪರಿಸರದಲ್ಲಿ ಆದಿಮಾನವರ ಬಗ್ಗೆ ರೇಖಾ ಬಂಡೆ ಚಿತ್ರಗಳು (ಬಿಳಿವರ್ಣ) ಕಂಡುಬಂದಿವೆ. ಹೀಗಾಗಿ ಈ ಗುಹಾಲಯ ಪ್ರಾಗಿತಿಹಾಸ ಕಾಲದ ಆದಿಮಾನವನ ತಾಣವಾಗಿತ್ತು ಎನ್ನಲಾಗಿದೆ. ಈ ಗುಹಾಲಯದ ಪರಿಸರದಲ್ಲಿ ವಿವಿಧ ಬಗೆಯ ಹೆಬ್ಬಂಡೆಗಳು, ಗುಪ್ತ ಮಾರ್ಗಗಳು ಕಂಡುಬರುತ್ತವೆ.

ಚೌಳೇಶ್ವರ ದೇವಾಲಯ

ಚೌಳೇಶ್ವರ ದೇವಾಲಯವು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿದೆ. ಇದರ ಕಾಲಮಾನ ೧೩ನೇ ಶತಮಾನ. ಈ ದೇವಾಲಯವನ್ನು ದ್ವಿಕೂಟ ಮಾದರಿಯಲ್ಲಿ ನಿರ್ಮಿಸಲಾಗಿದೆ. ಅಂದರೆ ದೇವಾಲಯವು ಎರಡು ಗರ್ಭಗೃಹಗಳನ್ನು ಹೊಂದಿದೆ. ಮುಖ್ಯ ಗರ್ಭಗುಡಿಯಲ್ಲಿ ಸಣ್ಣ ಲಿಂಗವಿದೆ. ಎಡಭಾಗದಲ್ಲಿರುವ ಇನ್ನೊಂದು ಗರ್ಭಗುಡಿಯಲ್ಲಿ ಯಾವುದೇ ಲಿಂಗಗಳಲ್ಲಿ ಸಭಾಮಂಟಪದಲ್ಲಿ ನಂದಿ ಶಿಲ್ಪಗಳಿವೆ. ವಿವಿಧ ಬಗೆಯ ಕೆತ್ತನೆ ಮಾಡಿರುವ ಕಂಬಗಳು ಆಕರ್ಷಣೀಯವಾಗಿವೆ. ಗರ್ಭಗುಡಿಯ ಮೇಲೆ ಶಿಖರಗಳು ಕಂಡುಬರುವುದಿಲ್ಲ.

ಲಕ್ಷ್ಮಿವೆಂಕಟೇಶ್ವರ ದೇವಾಲಯ

ಈ ದೇವಾಲಯವು ವಿಜಯನಗರೋತ್ತರ ಶೈಲಿಯಲ್ಲಿದ್ದು ೧೮ನೇ ಶತಮಾನದಲ್ಲಿ ಕೆತ್ತಲ್ಪಟ್ಟಿದೆ. ಈ ದೇವಾಲಯದಲ್ಲಿ ಗರ್ಭಗೃಹ ಮತ್ತು ತೆರೆದ ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ಇತ್ತೀಚೆಗೆ ಪ್ರತಿಷ್ಠಾಪಿಸಲಾಗಿರುವ ಲಕ್ಷ್ಮೀವೆಂಕಟೇಶ್ವರ ಮತ್ತು ಪದ್ಮಾವತಿಯರ ವಿಗ್ರಹಗಳಿವೆ. ನಾಲ್ಕು ಸರಳ ಕಂಬಗಳು, ದೀಪಸ್ತಂಭಗಳಿವೆ.

ಈ ದೇಗುಲಗಳನ್ನು ಹೊರತುಪಡಿಸಿದರೆ ಆಂಜನೇಯ, ಚೌಡಮ್ಮ, ಮಲಿಯಮ್ಮ, ಕಾಳಮ್ಮ ದೇವಾಲಯಗಳಿವೆ. ಇವುಗಳ ಜೊತೆಗೆ ಉಪ್ಪರಿಗೆ, ಕೋಟೆ, ಮಠಗಳಿವೆ. ಈ ಸ್ಮಾರಕಗಳೆಲ್ಲವೂ ಗುಡೇಕೋಟೆ ಪಾಳೆಯಗಾರರ ಕಾಲದ ಐತಿಹಾಸಿಕ ಸ್ಮಾರಕಗಳಾಗಿವೆ.

ನಾಯಕರ ಕಾಲದ ಜಾನಪದ ಕಲೆ

ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ನಾಯಕರು ಜಾನಪದ ಕಲೆಯನ್ನು ಪ್ರೋತ್ಸಾಹಿಸಿದ್ದರು. ಕೆಳದಿ, ಯಲಹಂಕ, ಗುಮ್ಮನಾಯಕನ ಪಾಳೆಯ, ಚಿತ್ರದುರ್ಗ, ಹರತಿ, ಹಂಡೆ ಹಾಗೂ ಗುಡೇಕೋಟೆ ನಾಯಕರು ತಮ್ಮ ತಮ್ಮ ಆಡಳಿತ ಪ್ರದೇಶಗಳಲ್ಲಿ ಜನಸಾಮಾನ್ಯರಿಗೆ

ನಿಕಟವಾದ ಜಾನಪದ ಸಂಸ್ಕೃತಿಯನ್ನು ಪೋಷಿಸಿ ಬೆಳೆಸಿದರು. ನಾಯಕರ ಕಾಲದಲ್ಲಿ ಆಚರಣೆಯಲ್ಲಿದ್ದ ಕಲೆಗಳೆಂದರೆ ಕೋಲಾಟ, ತಮಟೆ, ಕುಣಿತ, ಡೊಳ್ಳು ಕುಣಿತ, ಪಾಳೆಯಗಾರ ಕುಣಿತ, ಸೋಮನ ಕುಣಿತ, ಕಹಳೆ ಊದುವುದು, ನಂದಿಧ್ವಜ ಕುಣಿತ, ದಾಸಯ್ಯ ಕುಣಿತ, ಬಯಲಾಟ, ಭಜನೆ, ಹುಲಿವೇಷ, ಲಂಬಾಣಿ ಕರಪಾಲ, ಕರಡಿಮಜಲು, ಗೊರವರ ಕುಣಿತ, ಗೊಂದಲಿಗರ ಕುಣಿತ, ವಟ ಕುಣಿತ, ಹೆಜ್ಜೆಮೇಳ, ಚೌಡಿಕೆ, ಹುತ್ತರಿ, ತೊಗಲು ಬೊಂಬೆಯಾಟ, ಪುರವಂತಿಗೆ, ತಾಳಮದ್ದಲೆ, ಭೂತದ ಸೇವೆ, ಹಲಗೆ ಕುಣಿತ, ಕರಗ, ಸೂತ್ರದ ಗೊಂಬೆ ಕುಣಿತ, ಅಲಾಯಿ ಹೆಜ್ಜೆ, ಕೊಡದ ಕುಣಿತ, ಭಾಗಂತಿಗೆ, ಗೀಗಿ ಮೇಳ, ಪಂಜಿನ ಕುಣಿತ, ರಂಗದ ಕುಣಿತ ಹೀಗೆ ಹಲವಾರು ಜನಪದ ಕಲೆಗಳು ಹುಟ್ಟಿಕೊಂಡವು. ಇವುಗಳ ಜೊತೆಗೆ ಲಾವಣಿ ಹಾಡುವುದು, ವೀರಗಾಥೆಯನ್ನು ಹಾಡುವುದು ಮೊದಲಾದ ಕಲೆಗಳು ಬೆಳೆದುಬಂದವು.[೮೨]

ಕರಗ ನೃತ್ಯ

ಕೋಲಾರ ಹಾಗೂ ಬೆಂಗಳೂರು ಜಿಲ್ಲೆಗಷ್ಟೇ ಸೀಮಿತವಾಗಿರುವ ಕರಗ ಶಕ್ತಿ ನೃತ್ಯ ಯಲಹಂಕ ನಾಡಪ್ರಭುಗಳ ಕಾಲದಲ್ಲಿ ಆಚರಣೆಯಲ್ಲಿತ್ತು. ಕರಗ ಮಹೋತ್ಸವವು ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಈಗಲೂ ನಡೆಯುವ ಒಂದು ಜನಪದ ನೃತ್ಯವಾಗಿದೆ. ನಿರ್ದಿಷ್ಟ ದಿನದಂದು ಆರಂಭವಾಗುವ ಕರಗ ನೃತ್ಯವು ಅಥವಾ ಮಹೋತ್ಸವ ಏಳು ಅಥವಾ ಒಂಬತ್ತು ದಿನಗಳ ಕಾಲ ನಡೆಯುತ್ತದೆ. ಕರಗ ಹೊರಲು ನಿಯುಕ್ತನಾಗಿರುವ ವ್ಯಕ್ತಿ ಹಾಗೂ ವೀರಕುಮಾರರು ಧ್ವಜಾರೋಹಣ ದಿನದಿಂದ ಪ್ರತಿನಿತ್ಯ ವಿವಿಧ ಆಚರಣೆಯನ್ನು ಕೈಗೊಂಡು ಐದನೇ ದಿನ ಕರಗ ಹೊತ್ತು ಊರಲ್ಲಿ ಮೆರವಣಿಗೆಯಂತೆ ಬರುತ್ತಾರೆ. ಕರಗವನ್ನು ತಲೆಯ ಮೇಲೆ ಹೊತ್ತು ಕೈಗಳನ್ನು ಇಳಿಬಿಟ್ಟು ತಮಟೆ, ಡೋಲು, ನಾಗಸ್ವರಗಳ ಗತ್ತು ಮತ್ತು ರಾಗತಾಳಗಳಿಗನುಗುಣವಾಗಿ ಕರಗ ಪೂಜಾರಿಯು ವಿವಿಧ ಆಕರ್ಷಕ ಭಂಗಿಯಲ್ಲಿ ಕುಣಿಯುತ್ತಾನೆ. ಧರ್ಮರಾಯನ ಕರಗ, ದ್ರೌಪತಮ್ಮ ಕರಗ, ಯಲ್ಲಮ್ಮ ಕರಗ, ಪಟಾಲಮ್ಮನ ಕರಗ ಇತ್ಯಾದಿ ಕರಗಗಳಿವೆ.

ಹರತಿಯಲ್ಲಿ ನಡೆಯುವ ವೀರಭದ್ರ ಸ್ವಾಮಿ ಅಗ್ನಿಕುಂಡವು ಬೆಂಗಳೂರಿನ ಕರಗ ನಡೆಯುವ ದಿನದಂದೇ ಹರ್ತಿಕೋಟೆಯಲ್ಲಿ ನೆರವೇರುತ್ತದೆ. ಮಾರನೆಯ ದಿನ ಹೂವಿನತೇರು; ಮೂರನೆಯ ದಿನ ವೀರಭದ್ರ ಸ್ವಾಮಿಯ ರಥೋತ್ಸವ ನೆರವೇರುತ್ತದೆ.[೮೩]

ಪಾಳೆಯಗಾರರ ಕುಣಿತ: ಪಾಳೆಯಗಾರನ ವೇಷವನ್ನು ಧರಿಸಿದವನು, ಶರೀರಕ್ಕೆ ಬಿಗಿಯಾಗಿ ಕಾಚಾ ಕಟ್ಟಿಕೊಂಡು, ದೊಡ್ಡ ಭಾರೀ ಮೀಸೆಯನ್ನು ತಗುಲಿಸಿಕೊಂಡು ಮುಖಕ್ಕೆ ವಿವಿಧ ಬಣ್ಣಗಳನ್ನು ಬಳಿದುಕೊಂಡು, ತೋಳು ಸೊಂಟಗಳಿಗೆ ಹಗ್ಗ ಕಟ್ಟಿಕೊಂಡು ಒಂದು ಕೈಯಲ್ಲಿ ಕತ್ತಿ, ಮತ್ತೊಂದರಲ್ಲಿ ಗುರಾಣಿ, ಬಾಯಿಯಲ್ಲಿ ನಿಂಬೆಹಣ್ಣನ್ನು ಕಚ್ಚಿಕೊಂಡು ಗತ್ತಿನಿಂದ ಕುಣಿಯುತ್ತಾ, ಸೊಂಟಕ್ಕೆ ಕಟ್ಟಿದ ಹಗ್ಗವನ್ನು ಹಿಡಿದವರನ್ನು ಎಳೆಯುತ್ತಾ ಕುಣಿಯುವನು. ಇವನ ನಡಿಗೆ ಮತ್ತು ಕುಣಿತ ರಾಜಠೀವಿಯಲ್ಲಿರುತ್ತದೆ.[೮೪]

ವೀರಭದ್ರ ಕುಣಿತ: ನಾಯಕರ ಕಾಲದ ಜಾನಪದ ಕಲೆಗಳಲ್ಲಿ ವೀರಭದ್ರ ಕುಣಿತವು ಪ್ರಮುಖ ಜನಪದ ನೃತ್ಯವಾಗಿದೆ. ಕೈಯಲ್ಲಿ ಕತ್ತಿ, ಎದೆಯ ಮೇಲೆ ವೀರಭದ್ರಸ್ವಾಮಿ ಕೊರಳಲ್ಲಿ ರುದ್ರಾಕ್ಷಿ ಸರಗಳು ಮುಖ ಹಾಗೂ ಮೈಗೆಲ್ಲ ವಿಭೂತಿ ಲೇಪನ, ಕಾಲಿಗೆ ಜಂಗು, ತಲೆಯ ಮೇಲೆ ಈಶ್ವರನ ಜಟೆ ಹೋಲುವಂತೆ ಕೇಶ ಧರಿಸಿ, ಕರಡಿ ವಾದ್ಯ, ಜಾಗಟೆ, ಕೋಲು ಮುಂತಾದ ವಾದ್ಯಗಳನ್ನು ಪಕ್ಕಾ ವಾದ್ಯವನ್ನಾಗಿ ಮಾಡಿಕೊಂಡು ವೀರಭದ್ರನ ವಡುಬುಗಳನ್ನು ಹೇಳುತ್ತಾ, ವಾದ್ಯದ ಗತ್ತಿಗೆ ತಕ್ಕಂತೆ ಕುಣಿಯುತ್ತಾ ಕೆಲವು ಪವಾಡ ನಡೆಸುತ್ತಾ ಬರುವ ವೀರಭದ್ರ ಕುಣಿತ ಒಂದು ವೀರರಸ ಪ್ರಧಾನ ಕಲೆಯಾಗಿದೆ.

ಈ ವೀರಭದ್ರ ಕುಣಿತವು ಬೆಂಗಳೂರು, ಬಾಗೇಪಲ್ಲಿ, ಕೋಲಾರ, ಚಿತ್ರದುರ್ಗ, ತುಮಕೂರು, ಬಳ್ಳಾರಿ ಜಿಲ್ಲಾ ಪ್ರದೇಶ ವ್ಯಾಪ್ತಿಯಲ್ಲಿ ಆಚರಣೆಯಲ್ಲಿರುವ ಜನಪದ ನೃತ್ಯವಾಗಿದೆ.

ನಂದಿಧ್ವಜ ಕುಣಿತ: ನಂದೀಧ್ವಜ ಶಿವನ ಲಾಂಛನವಾಗಿದ್ದರಿಂದ ಶೈವ ದೇವಾಲಯಗಳಲ್ಲಿ ನಂದಿ ಕಂಬವಿರುತ್ತದೆ. ಶೈವ ದೇವಾಲಯದ ಉತ್ಸವಗಳಲ್ಲಿ ನಂದಧ್ವಜ ಕುಣಿತವನ್ನು ಆಚರಿಸುತ್ತಾರೆ. ಇದೊಂದು ಗಂಡುಕಲೆಯಾಗಿದೆ.

ಡಿಕಾಂಬರಿ ವೇಷ: ಡಿಕಾಂಬರಿ ವೇಷ ಹೆಸರಿಗೆ ತಕ್ಕಂತೆ ವರ್ಣಮಯ ವೇಷಗಾರಿಕೆಯಿಂದ ಕೂಡಿದ್ದು ಬಿಲ್ಲು, ಬಾಣ, ಬತ್ತಳಿಕೆ, ಗಾಜಿನ ಫಲಕದ ಕಿರೀಟ, ನವಿಲುಗರಿ, ಮಣಿಗಳು, ಧ್ವಜ, ಹೂ, ಬಣ್ಣದ ಕಾಗದ ಧರಿಸಿ ಮೈಗೆ ಬಣ್ಣ ಬಳಿದು ಗೆಜ್ಜೆ ಹಾಗೂ ಕಾಲಿಗೆ ಸರಪಳಿಯಿಂದ ಭಾರವಾದ ಗುಂಡು ಕಟ್ಟಿಕೊಂಡು ತಲೆಯ ಮೇಲೆ ಉರಿಯುವ ದೀಪವಿರಿಸಿ ತಮಟೆ, ವಾಲಗ, ರಂಡೋಲುಗಳ ನಾದಕ್ಕೆ ಕುಣಿಯುವ ನೃತ್ಯ ಇದಾಗಿದೆ. ದೇವರ ಹಬ್ಬ ಮತ್ತು ಉತ್ಸವಗಳಲ್ಲಿ ಡಿಕಾಂಬರಿ ವೇಷವನ್ನು ಧರಿಸಿ ರಂಜಿಸಲಾಗುತ್ತದೆ.

ಲಂಬಾಣಿ ಕುಣಿತ: ಸ್ತ್ರೀಯರೇ ಪ್ರಧಾನವಾಗಿ ಕುಣಿಯುವ ಲಂಬಾಣಿ ಕುಣಿತವು ನಾಯಕರ ಕಾಲದಿಂದಲೂ ಆಚರಣೆಯಲ್ಲಿರುವ ನೃತ್ಯವಾಗಿದ್ದು ಬಾಗೇಪಲ್ಲಿ, ಬಳ್ಳಾರಿ, ಚಿತ್ರದುರ್ಗ, ಬೆಂಗಳೂರು ಮುಂತಾದ ಕಡೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಮರಗಾಲು ಕುಣಿತ: ಮರಗಾಲು ಕುಣಿತ ಒಂದು ರೀತಿಯ ಸಾಹಸ ಕ್ರೀಡೆಯಂತಿದ್ದು ಮರದಿಂದ ಮಾಡಿದ ಕೃತಕವಾದ ಕಾಲಿನ ರೀತಿಯಲ್ಲಿರುವ ಉಪಕರಣಗಳನ್ನು ಕಾಲುಗಳ ತಳಭಾಗಕ್ಕೆ ಕಟ್ಟಿಕೊಂಡು ಸಮತೋಲನವನ್ನು ನಿಯಂತ್ರಿಸುತ್ತಾ ಕುಣಿಯುವಂಥದ್ದು. ಸಾಮಾನ್ಯ ಮನುಷ್ಯಾಕಾರಕ್ಕಿಂತ ಉದ್ದವಿದ್ದು, ವಿಚಿತ್ರ ವೇಷಭೂಷಣಗಳೊಂದಿಗೆ ತಮಟೆ, ಓಲಗಗಳ ಧ್ವನಿಗೆ ಕುಣಿಯುವುದು ಮನೋರಂಜಕವಾಗಿರುತ್ತದೆ.[೮೫]

ಸೋಮನ ಕುಣಿತ: ಇದೊಂದು ಗಂಡು ಕಲೆ, ದೇವತೆಯ ಆರಾಧನೆಯ ಪ್ರತೀಕ. ವಿಶಾಲವಾದ ಹಣೆ, ದೊಡ್ಡ ಕಿವಿ, ಉಬ್ಬಿದ ದೊಡ್ಡ ಕಣ್ಣುಗಳು, ಕೋರೆ ಹಲ್ಲುಗಳು, ಎದ್ದು ಕಾಣುವ ಮೂಗು ಮತ್ತು ಮೀಸೆಗಳಿರುವ ಭೂತಾಳಿ ಮರದಿಂದ ಮಾಡಿದ ಮುಖವಾಡಕ್ಕೆ ಸೋಮಗಳು ಎನ್ನುವರು.

ಈ ಸೋಮನ ಮುಖವಾಡ ಧರಿಸಿ ಕುಣಿಯುವಂತಹವರು ಕಾಲಿಗೆ ಗೆಜ್ಜೆ, ಕೈಗಳಲ್ಲಿ ಬಳೆಗಳು, ಕೊರಳಲ್ಲಿ ದೇವತೆಯ ಮುದ್ರೆಯುಳ್ಳ ಪದಕಗಳನ್ನು ತೊಟ್ಟು ಸೀರೆ ಉಟ್ಟಿರುತ್ತಾನೆ. ಒಂದು ಕೈಯಲ್ಲಿ ಕೋಲು ಹಿಡಿದು, ಅರೆ ಡೊಳ್ಳು ಹೊಟ್ಟೆ, ತಮಟೆ ಮುಂತಾದ ವಾದ್ಯಗಳ ತಾಳಕ್ಕೆ ತಕ್ಕಂತೆ ಪದಗಾರ ಪದ ಹೇಳಲು ಶುರು ಮಾಡಿದಂತೆ ಸೋಮಗಳು ತೂಗಿ, ಬಾಗಿ, ಲಯಬದ್ಧವಾಗಿ ಕುಣಿಯುತ್ತವೆ. ಈ ಸೋಮನ ಕುಣಿತ ಹಬ್ಬಗಳ ಸಂದರ್ಭದಲ್ಲಿ ಆಯೋಜಿಸಲಾಗಿರುತ್ತದೆ.

ಹಬ್ಬಗಳು, ಜಾತ್ರೆಗಳು ಹಾಗೂ ದೇವರ ತೇರು ಉತ್ಸವಗಳಲ್ಲಿ ಸಾಮಾನ್ಯವಾಗಿ ಬೀರದೇವರ ಡೊಳ್ಳು ಕಂಡುಬರುತ್ತವೆ. ದೊಡ್ಡ ಆಕಾರದ, ಚರ್ಮವಾದ್ಯವಾದ ಡೊಳ್ಳನ್ನು ಹೆಗಲಿಗೆ ತಗುಲಿ ಹಾಕಿಕೊಂಡು, ಅಬ್ಬರದ ಕೇಕೆ ಹಾಕುತ್ತಾ ಕುಣಿಯುವವರ ಡೊಳ್ಳಿನ ನಿನಾದ ಜಾತ್ರೆಗೆ ರಂಗು ನೀಡುತ್ತದೆ. ಚಿತ್ರದುರ್ಗ ಜಿಲ್ಲೆಯಾದ್ಯಂತ ಉರುಮೆ ಎಂದು ಕರೆಯಲಾಗುವ ಡೊಳ್ಳನ್ನು ಪ್ರತಿ ಜಾತ್ರೆ ಹಾಗೂ ಹಬ್ಬದ ಸಮಯದಲ್ಲಿ ಬಾರಿಸಲಾಗುವುದು.

ಒಟ್ಟಾರೆಯಾಗಿ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ನಾಯಕರು ಜನಪದ ಸಂಸ್ಕೃತಿಯನ್ನು ಬೆಳೆಸಿ ಪೋಷಿಸಿದ್ದಾರೆ. ನಾಯಕರ ಕಾಲದಲ್ಲಿ ಇದ್ದ ಎಲ್ಲಾ ಜನಪದ ಕಲೆಗಳು ಇಂದಿಗೂ ಜೀವಂತವಾಗಿದ್ದು ಸಂಸ್ಕೃತಿಯನ್ನು ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿವೆ.

ಕೊನೆ ಟಿಪ್ಪಣಿಗಳು

೧. ಶ್ಯಾಮಲಾ ಸಿ.ಆರ್., ಪೂರ್ವ ಕರ್ನಾಟಕದ ಪಾಳೆಯಗಾರರು, ಪು. ೧೨೭.

೨. ಅದೇ, ಪೂರ್ವೋಕ್ತ, ಪು. ೧೨೮.

೩. ಶಿವಣ್ಣ ಕೆ (ಸಂ), ವಿಜಯನಗರೋತ್ತರ ಕಾಲದ ರಾಜ್ಯಾಡಳಿತ, ಕರ್ನಾಟಕ ಚರಿತ್ರೆ ಸಂಪುಟ–೩, ಪು. ೨೯೫.

೪. ಗಂಗಾನಾಯಕ್ ಕೆ.ಎನ್. (ಪ್ರಸಂ), ಪಾಳೆಯಗಾರರ ಶಾಸನಗಳು, ಸಂಪುಟ–೧, ಪು. ೪.

೫. ಗಂಗಾನಾಯಕ್ ಕೆ.ಎನ್. (ಪ್ರಸಂ), ಅದೇ, ಪೂರ್ವೋಕ್ತ, ಪು. ೧೧.

೬. ಅದೇ, ಪೂರ್ವೋಕ್ತ, ಪು. ೧೫.

೭. ಅದೇ, ಪೂರ್ವೋಕ್ತ, ಪು. ೩೯.

೮. ಅದೇ, ಪೂರ್ವೋಕ್ತ, ಪು. ೫೦.

೯. ದೇವರಕೊಂಡಾರೆಡ್ಡಿ (ಸಂ), ಬಳ್ಳಾರಿ ಜಿಲ್ಲೆಯ ಶಾಸನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೩೫–೧೩೬.

೧೦. ಶೈಲಜ ಬಿ.ಎಂ. (ಸಂ), ಪಾಳೆಯಗಾರರ ಶಾಸನಗಳು, ಸಂಪುಟ–೨, ಪು. ೧೮೩.

೧೧. ಅದೇ, ಪೂರ್ವೋಕ್ತ, ಪು. ೨೦೭.

೧೨. ಅದೇ, ಪೂರ್ವೋಕ್ತ, ಪು. ೨೧೭.

೧೩. ರೈಸ್ ಬಿ.ಎಲ್. (ಸಂ), ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ–೩, ಪು. ೧೨೨.

೧೪. ರೈಸ್ ಬಿ.ಎಲ್. (ಸಂ), ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ–೪, ಪು. ೩೦.

೧೫. ಯೋಗೀಶ್ವರಪ್ಪ ಡಿ.ಎನ್. ಮಧ್ಯಕಾಲೀನ ಕರ್ನಾಟಕದ ಪಾಳೆಯಗಾರರು, ಪು. ೩೦.

೧೬. ಅದೇ, ಪೂರ್ವೋಕ್ತ, ಪು. ೫೨.

೧೭. ಶಿವಣ್ಣ ಕೆ. (ಸಂ), ವಿಜಯನಗರೋತ್ತರ ಕಾಲದ ರಾಜ್ಯಾಡಳಿತ ಕರ್ನಾಟಕ ಚರಿತ್ರೆ ಸಂಪುಟ–೩, ಪು. ೩೦.

೧೮. ದೇವರಕೊಂಡಾರೆಡ್ಡಿ (ಸಂ), ಅದೇ ಪೂರ್ವೋಕ್ತ, ಪು. ೧೪೪.

೧೯. ಗಂಗಾನಾಯಕ್ ಕೆ.ಎನ್. (ಸಂ), ಅದೇ ಪೂರ್ವೋಕ್ತ, ಪು. ೧೪೭.

೨೦. ಅದೇ, ಪೂರ್ವೋಕ್ತ, ಪು. ೧೬೮.

೨೧. ಶಿವಣ್ಣ ಕೆ (ಸಂ), ಅದೇ, ಪೂರ್ವೋಕ್ತ, ಪು. ೨೯೬.

೨೨. ತುಳಸಿರಾಮ ನಾಯಕ್, ಬೆಂಗಳೂರಿನ ಹಿರಿಯ ಕೆಂಪೇಗೌಡ ಹಾಗೂ ವಂಶಿಕರ ಧಾರ್ಮಿಕ ದತ್ತಿಗಳು, ಇತಿಹಾಸ ದರ್ಶನ, ಸಂಪುಟ–೨೪, ಪು. ೧೦೭.

೨೩. ಶೇಕ್ ಮಸ್ತಾನ್, ಗುಮ್ಮನಾಯಕನ ಪಾಳೆಯ ಪಾಳೆಯಗಾರರು (ಲೇ), ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪು. ೩೪೨.

೨೪. ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗ ನಾಯಕ ಅರಸರ ರಾಜಕೀಯ ಚಿತ್ರ, ಪು. ೧೨.

೨೫. ಗೋವಿಂದಯ್ಯ (ಟಿ), ಮಾಗಡಿ ಕೆಂಪೇಗೌಡ ರಾಜವಂಶಸ್ಥ, ಯಲಹಂಕ ನಾಡಪ್ರಭುಗಳ ಭವ್ಯ ಐತಿಹಾಸಿಕ ಪರಂಪರೆ, ಪು. ೫೮೬.

೨೬. ರೈಸ್ ಬಿ.ಎಲ್. (ಸಂ), ಎಪಿಗ್ರಾಫಿಯಾ ಶಾಸನ ಸಂಪುಟ–೧೨, ಪು. ೧೪೦.

೨೭. ಕಾವಲಮ್ಮ ಆರ್. ಬಿಜ್ಜಾವರ ಮಹಾನಾಡ ಪ್ರಭುಗಳು, (ಲೇ) ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪು. ೨೩೮

೨೮. ಶ್ಯಾಮಲಾ ಸಿ.ಆರ್. ಅದೇ ಪೂರ್ವೋಕ್ತ, ಪು. ೨೩೯.

೨೯. ರೈಸ್ ಬಿ.ಎಲ್. (ಸಂ), ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ–೧, ಪು. ೪೨.

೩೦. ರೈಸ್ ಬಿ.ಎಲ್. (ಸಂ), ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ–೮, ಹಾಸನ ಜಿಲ್ಲೆ, ಅರಕಲಗೂಡು, ಶಾಸನ ಸಂಖ್ಯೆ೨೩, ಪು. ೧೨೮.

೩೧. ಎಂ.ಎ.ಆರ್., ಮಧುಗಿರಿ ೯೫, (ತುಂಗೋಟ) ಪು. ೨೫೫.

೩೨. ಶ್ಯಾಮಲಾ ಸಿ.ಆರ್., ಪೂರ್ವೋಕ್ತ, ಪು. ೧೨೯.

೩೩. ಗೋವಿಂದಯ್ಯ ಟಿ., ಅದೇ, ಪೂರ್ವೋಕ್ತ, ಪು. ೧೫೦.

೩೪. ವಸು (ಸಂ), ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪು. ೩೦೮.

೩೫. ಶಿವಣ್ಣ ಕೆ., ಅದೇ, ಪೂರ್ವೋಕ್ತ, ಪು. ೨೯೮.

೩೬. ಕಲಬುರ್ಗಿ ಎಂ.ಎಂ. (ಸಂ) ಕರ್ನಾಟಕದ ಕೈಫಿಯತ್ತುಗಳು, ಪು. ೧೫೦.

೩೭. ಕೃಷ್ಣರಾವ್ ಮತ್ತು ಕೇಶವಭಟ್ಟ (ಸಂ), ಕರ್ನಾಟಕ ಇತಿಹಾಸ ದರ್ಶನ, ಪು. ೫೯೦.

೩೮. ಶ್ಯಾಮಲಾ ಸಿ.ಆರ್., ಪೂರ್ವೋಕ್ತ, ಪು. ೧೩೩.

೩೯. ಗಂಗಾನಾಯಕ್ ಕೆ.ಎನ್. (ಸಂ), ಅದೇ ಪೂರ್ವೋಕ್ತ.

೪೦. ಷೇಕ್ ಅಲಿ (ಸಂ), ಪೂರ್ವೋಕ್ತ, ಪು. ೨೯೮.

೪೧. ರಾಜಶೇಖರಪ್ಪ ಬಿ. ಚಿತ್ರದುರ್ಗ ಪಾಳೆಯಗಾರರು, ಪು. ೩, ೫.

೪೨. ಜ್ಯೋತಿಬಾಯಿ, ನಾಯಕರ ಆಡಳಿತದಲ್ಲಿ ಚಿತ್ರದುರ್ಗ, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪು. ೧೫೬.

೪೩. ನಾಗರಾಜ್ ಎಂ.ಜಿ., ನಾಯಕರ ಆಡಳಿತ, ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು. ೧೫೬.

೪೪. ಲಕ್ಷ್ಮಣ್ ತೆಲಗಾವಿ (ಸಂ), ಚಿತ್ರದುರ್ಗ ನಾಯಕರಸರ ನ್ಯಾಯಾಡಳಿತ, ಪಾಳೆಯಗಾರರ ಕಾಲದ ನ್ಯಾಯಾಡಳಿತ ಪು. ೧೩೩.

೪೫. ಅದೇ, ಪೂರ್ವೋಕ್ತ, ಪು. ೧೩೩, ೧೩೪.

೪೬. ಕುಂಬಾ ಸದಾಶಿವಪ್ಪ, ಹರಪನಹಳ್ಳಿ ಪಾಳೆಯಗಾರರ ನ್ಯಾಯಾಡಳಿತ (ಲೇ), ಪಾಳೆಯಗಾರರ ಕಾಲದ ನ್ಯಾಯಾಡಳಿತ ಪು. ೨೨೯.

೪೭. ಅಮರೇಶ ಯತಗಲ್, ಗುಡಿಗಂಟಿ ಸಂಸ್ಥಾನಿಕರ ನ್ಯಾಯಾಡಳಿತ (ಲೇ), ಪಾಳೆಯಗಾರರ ಕಾಲದ ನ್ಯಾಯಾಡಳಿತ ಪು. ೨೫೧.

೪೮. ರಾಜಶೇಖರ್ ಕೆ.ಎಲ್., ಯಲಹಂಕ ನಾಡಪ್ರಭುಗಳ ನ್ಯಾಯಾಡಳಿತ (ಲೇ), ಪಾಳೆಯಗಾರರ ಕಾಲದ ನ್ಯಾಯಾಡಳಿತ ಪು. ೩೨೫.

೪೯. ರೈಸ್ ಬಿ.ಎಲ್. ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ–೯, ಪು. ೪೨೦.

೫೦. ಬಾಗೂರು ಆರ್. ನಾಗರಾಜಪ್ಪ, ಮತ್ತೋಡು ಪಾಳೆಯಗಾರರ ನ್ಯಾಯಾಡಳಿತ, ಪು. ೨೪೫.

೫೧. ಶ್ರೀನಿವಾಸ ಎಂ.ವಿ., ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಪಾಳೆಯಗಾರರ ಪಾತ್ರ, ನಾಗಧಿನಂದನ (ಎಂ.ಜಿ. ನಾಗರಾಜ್‌ರವರ ಅಭಿನಂದನಾ ಗ್ರಂಥ), ಪು. ೧೫೨.

೫೨. ಶಿವಣ್ಣ ಕೆ. (ಸಂ), ಪೂರ್ವೋಕ್ತ, ಪು. ೩೦೭.

೫೩. ಜ್ಯೋತಿಬಾಯಿ, ಪೂರ್ವೋಕ್ತ, ಪು. ೧೬೬.

೫೪. ಅದೇ ಪೂರ್ವೋಕ್ತ, ಪು. ೩೧೦.

೫೫. ವೆಂಕಟರತ್ನಂ ಎ.ವಿ., ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರಕಾರಗಳು, ಪು. ೨೫.

೫೬. ಗಂಗಾನಾಯಕ್ ಕೆ.ಎನ್. (ಸಂ), ಪೂರ್ವೋಕ್ತ, ಸಂಪುಟ–೧, ಪು. ೧೦೮.

೫೭. ಅದೇ, ಪೂರ್ವೋಕ್ತ, ಪು. ೪೪.

೫೮. ಚಿಟ್ನಿಸ್ ಕೆ.ಎನ್., ಕೆಳದಿಯ ರಾಜ್ಯಭಾರ ಪದ್ಧತಿ (ಲೇ), ಪು. ೭೫–೭೬.

೫೯. ಶ್ಯಾಮಲಾ ಸಿ.ಆರ್., ಪೂರ್ವ ಕರ್ನಾಟಕದ ಪಾಳೆಯಗಾರರು, ಪು. ೧೬೬

೬೦. ಶ್ರೀಮತಿ ವಿನೋದಾ ಪಾಟೀಲ, ಕೆಳದಿ ನಾಯಕರ ಕಲೆ ಮತ್ತು ವಾಸ್ತುಶಿಲ್ಪ, ಪು. ೧೭೦

೬೧. ಚಿನ್ನಸ್ವಾಮಿ ಸೋಸಲೆ, ಸಾಮ್ರಾಜ್ಯ ಮತ್ತು ಸಂಸ್ಥಾನ, ಪು. ೧೯೩

೬೨. ಕೆಳದಿ ಗುಂಡಾ ಜೋಯಿಸ್, ಕೆಳದಿ ಸಂಕ್ಷಿಪ್ತ ಇತಿಹಾಸ, ಪು. ೨೪

೬೩. ಶ್ರೀಮತಿ ವಿನೋದಾ ಪಾಟೀಲ, ಅದೇ, ಪುರ್ವೋಕ್ತ, ಪು. ೧೭೧

೬೪. www.wikepediaa keladi

೬೫. ಚಿನ್ನಸ್ವಾಮಿ ಸೋಸಲೆ, ಅದೇ, ಪೂರ್ವೋಕ್ತ, ಪು. ೧೯೭

೬೬. ತುಳಸಿರಾಮ ನಾಯಕ್, ಬೆಂಗಳೂರಿನ ಸಂಕ್ಷಿಪ್ತ ಇತಿಹಾಸ, ಪು. ೪೯

೬೭. ಅಣ್ಣಾಸ್ವಾಮಿ ಟಿ.ವಿ., ಬೆಂಗಳೂರು ಟು ಬೆಂಗಳೂರು, ಅರ್ಬನ್ ಹಿಸ್ಟರಿ ಆಫ್ ಬೆಂಗಳೂರು ಫ್ರಮ್ ದಿ ಹಿಸ್ಟಾರಿಕ್ ಪಿರಿಯಡ್ ಟು ಎಂಡ್ ಆಫ್ ಯೆಟಿಂತ್ ಸೆಂಚುರಿ, ಪು. ೧೧೯–೧೨೧

೬೮. ಜಮುನಾ ಎಂ., ಯಲಹಂಕ ನಾಡಪ್ರಭುಗಳ ವಾಸ್ತುಶಿಲ್ಪ ಮತ್ತು ಶಿಲ್ಪಕಲೆ, ಪು. ೪೭

೬೯. ಜಮುನಾ ಎಂ., ಅದೆ, ಪೂರ್ವೋಕ್ತ, ಪು. ೭೯

೭೦. ತುಳಸಿರಾಮ್ ನಾಯಕ್, ಬೆಂಗಳೂರಿನ ಸಂಕ್ಷಿಪ್ತ ಇತಿಹಾಸ, ಪು. ೫೭

೭೧. ಅನುರಾಧ ವಿ., ಚಿತ್ರದುರ್ಗ ಜಿಲ್ಲೆಯ ದೇವಾಲಯಗಳಲ್ಲಿನ ಮೂರ್ತಿಶಿಲ್ಪ ಮತ್ತು ಶಿಲ್ಪಕಲೆ (ಲೇ), ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪು. ೨೨೬

೭೨. ಸುರೇಖ ಬಿ., ಚಿತ್ರದುರ್ಗ ಜಿಲ್ಲೆಯ ದೇವಾಲಯಗಳು ಪು. ೭೪

೭೩. ರೈಸ್ ಬಿ.ಎಲ್., ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ–೧೧, ಪು. ೨–೩

೭೪. ಮಹಮ್ಮದ್ ಜಪುರುಲ್ಲಾ ಝುಡ್., ಚಿತ್ರದುರ್ಗ ಜಿಲ್ಲೆಯ ವಿಜಯನಗರೋತ್ತರ ಕಲೆ ಮತ್ತು ವಾಸ್ತುಶಿಲ್ಪ (ಲೇ), ಪು. ೨೦೫.

೭೫. ತಿಪ್ಪಣ್ಣ ಮರಿಕುಂಟೆ, ಹರ್ತಿಕೋಟೆಯ ಸ್ಮಾರಕಗಳು (ಲೇ) ಹರತಿಸಿರಿ, ಪು. ೫೧೧

೭೬. ಬಿರಾದಾರ ಎಸ್.ಟಿ., ಬಳ್ಳಾರಿ ಹಂಡೆ ಪಾಳೆಯಗಾರರ ವಾಸ್ತುಕಲೆ, ವಿಜಯನಗರ ಅಧ್ಯಯನ, ಪು. ೧೬೯

೭೭. ಅದೇ, ಪೂರ್ವೋಕ್ತ ಪು. ೧೬೮

೭೮. ಬಸವರಾಜು ಹೆಚ್.ಎಲ್., ಗುಡೇಕೋಟೆ ಪಾಳೆಯಗಾರರು ಚಾರಿತ್ರಿಕ ಅಧ್ಯಯನ, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಪು. ೬೩

೭೯. ವಿರೂಪಾಕ್ಷಿ ಪೂಜಾರಹಳ್ಳಿ, ಬಳ್ಳಾರಿ ಜಿಲ್ಲೆಯ ಪಾಳೆಯಗಾರರು, ಪು. ೩೧

೮೦. ಯೋಗೀಶ್ವರಪ್ಪ ಡಿ.ಎನ್., ಮಧ್ಯಕಾಲೀನ ಕರ್ನಾಟಕದ ಪಾಳೆಯಗಾರರು, ಪು. ೬೭

೮೧. ಸುರೇಶ ಕೆ.ಎಂ., ಕರ್ನಾಟಕ ದೇವಾಲಯ ಕೋಶ, ಪು. ೧೪.

೮೨. ಶ್ಯಾಮಲಾ ಸಿ.ಆರ್., ಪೂರ್ವ ಕರ್ನಾಟಕದ ಪಾಳೆಯಗಾರರು, ಪು. ೨೦೮-೨೦೯

೮೩. ತಿಪ್ಪಣ್ಣ ಬಿ. ಮರಿಕುಂಟೆ, ಅದೇ, ಪೂರ್ವೋಕ್ತ, ಪು. ೨೦೯

೮೪. ಶ್ಯಾಮಲಾ ಸಿ.ಆರ್., ಅದೇ, ಪೂರ್ವೋಕ್ತ, ಪು. ೨೦೯

೮೫. ಕೋಲಾರ ಜಿಲ್ಲಾ ಗೆಝೆಟಿಯರ್, ಪು. ೭೦೭

❖❖❖

ಅಧ್ಯಾಯ : ಆರು

ಪಾಳೆಯಗಾರರ ಏಳಿಗೆ

೬.೧ ಪಾಳೆಯಗಾರ ವ್ಯವಸ್ಥೆಯ ಬೆಳವಣಿಗೆ

೬.೨ ಅಮರನಾಯಕ ವ್ಯವಸ್ಥೆಯ ಸ್ಥಿತ್ಯಂತರದ ಫಲಿತಗಳು

ಎ. ರಾಜಕೀಯ ಸ್ಥಿತ್ಯಂತರದ ಫಲಿತಗಳು

ಬಿ. ಸಾಮಾಜಿಕ ಸ್ಥಿತ್ಯಂತರದ ಫಲಿತಗಳು

ಸಿ. ಆರ್ಥಿಕ ಸ್ಥಿತ್ಯಂತರದ ಫಲಿತಗಳು

ಡಿ. ಸಾಂಸ್ಕೃತಿಕ ಸ್ಥಿತ್ಯಂತರದ ಫಲಿತಗಳು

೬.೩ ಪಾಳೆಯಗಾರರ ಅಧಿಕಾರದ ಸ್ವರೂಪ ಮತ್ತು ಅಮರನಾಯಕತ್ವದಿಂದ ಪಾಳೆಯಗಾರಿಕೆ ಪಡೆಯುವ ಲಕ್ಷಣಗಳು

೬.೪ ಅಮರನಾಯಕರು ಪರಿಪಾಲಿಸುತ್ತಿದ್ದ ಪ್ರದೇಶಗಳೇ ಮುಂದೆ ಪಾಳೆಯಪಟ್ಟುಗಳಾದವೇ ಇಲ್ಲವೇ

ಅಧ್ಯಾಯ: ಆರು

ಪಾಳೆಯಗಾರರ ಏಳಿಗೆ

೬.೧ ಪಾಳೆಯಗಾರ ವ್ಯವಸ್ಥೆಯ ಬೆಳವಣಿಗೆ

ವಿಜಯನಗರೋತ್ತರ ಕಾಲದಲ್ಲಿ ರಾಜಕೀಯ ರಂಗದಲ್ಲಿ ಪ್ರವರ್ಧಮಾನಕ್ಕೆ ಬಂದ ಪಾಳೆಯಗಾರರು ಮೂಲತಃ ವಿಜಯನಗರ ಕಾಲದಲ್ಲಿ ರಾಜಕೀಯ ಅಸ್ತಿತ್ವವನ್ನು ಪಡೆದುಕೊಂಡಿದ್ದ ಅಮರನಾಯಕರೇ ಆಗಿದ್ದಾರೆ. ಈ ಕುರಿತು ಹಿಂದಿನ ಅಧ್ಯಾಯಗಳಲ್ಲಿ ವಿವರವಾಗಿ ಚರ್ಚಿಸಲಾಗಿದೆ. ವಿಜಯನಗರ ಕಾಲದ ಅಮರನಾಯಕರೇ ವಿಜಯನಗರೋತ್ತರ ಕಾಲದ ಪಾಳೆಯಗಾರರು. ಈ ಪಾಳೆಯಗಾರರ ಉಗಮ, ಪಾಳೆಯಗಾರರ ಪದ್ಧತಿಯ ಬೆಳವಣಿಗೆ ಮತ್ತು ಪ್ರಾಮುಖ್ಯತೆ ಅಮರನಾಯಕರಿಗೂ, ಪಾಳೆಯಗಾರರಿಗೂ ಇರುವಂತಹ ವ್ಯತ್ಯಾಸಗಳನ್ನು ವಿಶ್ಲೇಷಿಸುವ ಮುನ್ನ ಪಾಳೆಯಪಟ್ಟುವಿನ ಅರ್ಥವನ್ನು, ಪಾಳೆಯಗಾರ ಶಬ್ದದ ನಿಷ್ಪತ್ತಿಯನ್ನು ಕುರಿತು ತಿಳಿಯಬೇಕಾಗುತ್ತದೆ.

ಪಾಳೆಯಗಾರರನ್ನು ತಮಿಳುನಾಡಿನಲ್ಲಿ ಪಾಲೈಕಾರ್ ಎಂದೂ, ಆಂಧ್ರಪ್ರದೇಶದಲ್ಲಿ ಪಾಳೆಯಗಾಡು ಎಂದೂ ಕರ್ನಾಟಕದಲ್ಲಿ ಪಾಳೆಯಗಾರ ಎಂದು ಕರೆಯಲಾಗುತ್ತದೆ.[೧]

ವಿಶ್ವಕೋಶಗಳಲ್ಲಿ ಉಲ್ಲೇಖಿತವಾಗಿರುವಂತೆ ಪಾಳೆ, ಪಾಳೆಯವು ಪಾಳ್ಯೆ, ಪಾಳ್ಯ, ಅರಸು ಬಿಡುವ ಪಾಳೆಯ (ನಿವೇಶನ, ಶಿಬಿರ, ಶಣ್ಡ) ಎಂಬುದಾಗಿ ವರ್ಣಿತಗೊಂಡಿದೆ[೨]

ಎಂ.ಎಸ್ ಪುಟ್ಟಣನವರು ಪಾಳೆಯಗಾರ ಎಂಬ ಪದವನ್ನು "ದಂಡಿನೊಡನೆ ಪಾಳೆಯವನ್ನು ಹಾಕಿ ಇಳಿದುಕೊಂಡು ಕದನಕ್ಕೆ ಸಿದ್ಧವಾಗಿರತಕ್ಕವರು" ಎಂದು ವ್ಯಾಖ್ಯಾನಿಸಿದ್ದಾರೆ.[೩]

ಒಂದೊಂದು ಚಿಕ್ಕ ಪ್ರಾಂತ್ಯಗಳಲ್ಲಿ ದೊಡ್ಡ ಪ್ರಮಾಣದ ದೊರೆಗಳಂತೆ ಆಳಿಕೊಂಡು ಜನರಿಂದ ಕಂದಾಯ, ಕಾಣಿಕೆ ಮೊದಲಾದ ವರಿಗಳನ್ನು ತೆಗೆದುಕೊಳ್ಳುತ್ತ, ದುಷ್ಟರನ್ನು ನಿಗ್ರಹಿಸುತ್ತ, ಶಿಷ್ಟರನ್ನು ಕಾಪಾಡುತ್ತ ಇದ್ದ ಮುಖಂಡರನ್ನು ಪಾಳೆಯಗಾರ ಎಂದು ಕರೆಯುತ್ತಿದ್ದರು ಅಥವಾ ವಿಜಯನಗರದ ದಂಡು ಶತ್ರುಗಳ ಮೇಲೆ ಹೊರಟಾಗ ಈ ಪ್ರಭುಗಳು ದಂಡಿನೊಡನೆ ಅವರ ಸಹಾಯಕ್ಕೆ ಹೋಗಿ ಒಂದೊಂದು ಸ್ಥಳದಲ್ಲಿ ಇಳಿದುಕೊಳ್ಳುತ್ತಿದ್ದರಿಂದ ಅವರಿಗೆ ಪಾಳೆಯಗಾರರೆಂಬ ಹೆಸರು ಅಭಿದಾನವಾಯಿತೋ ಖಚಿತವಾಗಿ ಯಾವ ಮೂಲವೂ ಗೊತ್ತಾಗಿಲ್ಲ. ಆದರೆ ಪಾಳೆಯಗಾರ ಎಂಬ ಹೆಸರೇನೂ ರೂಢಿಗೆ ಬಂದಿತು ಎಂದಿದ್ದಾರೆ.[೪]

ಬಿ. ವೆಂಕಟರಾಮಣ್ಣನವರು ವಿಜಯನಗರ ಇತಿಹಾಸಕ್ಕೆ ಕೋಲಾರ ಜಿಲ್ಲೆಯ ಕೊಡುಗೆ ಎಂಬ ತಮ್ಮ ಪ್ರಕಟಿತ ಪಿ.ಎಚ್.ಡಿ ಮಹಾಪ್ರಬಂಧದಲ್ಲಿ ಪಾಳೆಯಗಾರ ಎಂಬ ಪದದ ಅರ್ಥವನ್ನು ಈ ರೀತಿ ಹೇಳಿದ್ದಾರೆ. "ಪಾಳೆಯಪಟ್ಟಿನ ಮುಖಂಡನೇ ಪಾಳೆಯಗಾರ; ಪಾಳೆಯಪಟ್ಟು ಅವನ ನೆಲೆವೀಡು ಅದಾಗಿ ಅವನು ನಾಯಕ."[೫]

ಎಂ.ಜಿ ನಾಗರಾಜ್‌ರವರು ಪಾಳೆಯಪಟ್ಟಿನ ಸ್ವರೂಪವನ್ನು ವಿವರಿಸುತ್ತಾ ಪಾಳೆಯಪಟ್ಟು ನಾಯಕನೊಬ್ಬನ ನೆಲೆವೀಡು ಆಗಿ ಸ್ವಯಂ ಸ್ಥಾಪಿತವಿರಬಹುದು ಅಥವಾ ಅಧಿರಾಜನ ಅನುಮತಿಯಿಂದ ಸ್ಥಾಪನೆಗೊಂಡ ನಾಯಕನ ನೆಲೆ ಆಗಿರಬಹುದು. ಅದು ನಾಯಕತನಕ್ಕೆ ಸಂದದ್ದು; ಅಂಥ ಪಾಳೆಯಪಟ್ಟಿನಲ್ಲಿ ಅಶ್ವ, ಗಜಶಾಲೆ, ಬೊಕ್ಕಸ, ಆಸ್ಥಾನ, ಪುಟ್ಟಕೋಟೆ ನೇರ್ಪುಗೊಂಡಿರುತ್ತದೆ. ರೈತ, ವ್ಯಾಪಾರಗಾರ, ರಾಯಸದವ, ಶಿಲ್ಪಿ, ಓಲೆಗಾರ, ಭಟ್ಟಂಗಿ, ಓಲಗ, ತಾಳ, ಮೇಳ, ಠಾಣ್ಯದ ಗುರಿಕಾರರು, ಶಾನುಭೋಗ, ರೆಡ್ಡಿ, ತೋಟಿ, ತಳವಾರ ವ್ಯವಸ್ಥೆ ಇರುತ್ತದೆ. ಇನಾಂ ನೀಡಿಕೆ, ಕಂದಾಯ ವಸೂಲಿ ಕಾರ್ಯಗಳು ಇತರ ಆರ್ಥಿಕ ವ್ಯವಹಾರವು ಅಲ್ಲಿ ಇರುತ್ತದೆ.[೬]

ಇದು ಒಟ್ಟಾರೆ ವಿಜಯನಗರ ಹಾಗೂ ಪೂರ್ವ ವಿಜಯನಗರ ವಿಜಯನಗರೋತ್ತರ ಕಾಲದ ಪಾಳೆಯಪಟ್ಟುವಿನ ಸ್ವರೂಪವನ್ನು ವಿವರಿಸುತ್ತದೆ. ಇದಕ್ಕೆ ಉದಾಹರಣೆಯಾಗಿ ವಿಜಯನಗರ ಪೂರ್ವಕಾಲದ ಪಾಳೆಯ ಪಟ್ಟಾದ ಗುಮ್ಮನಾಯಕ ಪಾಳೆಯಪಟ್ಟು ಕ್ರಿ.ಶ. ೧೨೪೩ರಲ್ಲಿ ಕೋಲಾರ ಜಿಲ್ಲೆಯಲ್ಲಿ ಸ್ಥಾಪನೆಯಾಯಿತು. ಈ ವಂಶದ ಚಿನ್ನಮನಾಯಕನು ಅತ್ಯಂತ ಪ್ರಭಾವಿ ಹಾಗೂ ಬಲಾಢ್ಯ ಪಾಳೆಯಗಾರನಾಗಿದ್ದ. ಆರ್ಥಿಕವಾಗಿ ಪ್ರಬಲನಾಗಿದ್ದ ಈತ ತನ್ನ ರಾಜಧಾನಿಗೆ ಕಲ್ಯಾಣನಗರವೆಂದು ನಾಮಕರಣ ಮಾಡಿ ಕೋಟೆ ಕೊತ್ತಲಗಳನ್ನು ಕಟ್ಟಿಸಿದ. ಈತ ತನ್ನ ರಾಜಧಾನಿಯಲ್ಲಿ ಅಶ್ವಶಾಲೆ, ಗಜಶಾಲೆ, ಬೊಕ್ಕಸ, ಉಗ್ರಾಣ ಆಸ್ಥಾನ ಮಂಟಪಗಳನ್ನು ನಿರ್ಮಿಸಿದನು. ರಾಯಸದವರು ಠಾಣ್ಯದ ಗುರಿಕಾರರು, ಸೇರುವೆಗಾರರು, ಸಾವಿರಗಟ್ಟಲೆ ಓಲೆಗಾರರು, ಹೊಗಳು ಭಟ್ಟಂಗಿಗಳನ್ನು ನೇಮಿಸಿದನು. ಹೊಸದಾಗಿ ನಿರ್ಮಿಸಿದ ಆಳ್ವಿಕೆಗೆ ಬಂದ ಇತರ ಗ್ರಾಮಗಳಿಗೆ ಶ್ಯಾನುಭೋಗ, ರೆಡ್ಡಿ, ತೋಟಿ, ತಳವಾರರನ್ನು ನೇಮಿಸಿದನು.[೭]

ಈ ಮೇಲಿನ ಮಾಹಿತಿಯನ್ನು ವಿಶ್ಲೇಷಿಸುವಾಗ ಪಾಳೆಯಪಟ್ಟು, ಪಾಳೆಯಗಾರ ಪದ್ಧತಿಗಳು ವಿಜಯನಗರಕ್ಕೆ ಹೊಸದಾಗಿರಲಿಲ್ಲ ಎಂದು ಸ್ಪಷ್ಟವಾಗುತ್ತದೆ. ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದಲ್ಲಿ ಪಾಳೆಯಗಾರ ಮತ್ತು ಪಾಳೆಯಪಟ್ಟುಗಳನ್ನು ಪ್ರಾದೇಶಿಕ ಮಟ್ಟದಲ್ಲಿ ಅಸ್ತಿತ್ವದಲ್ಲಿರುತ್ತಿದ್ದ ಸಣ್ಣ ಪ್ರಮಾಣದ ದೊರೆಗಳಿಗೆ ಹಾಗೂ ಅವರ ಸಂಸ್ಥಾನಗಳಿಗೆ ಈ ಹೆಸರುಗಳು ಬಳಕೆಯಲ್ಲಿದ್ದವು ಎಂಬುದು ಹೆಚ್ಚು ಸೂಕ್ತವಾಗುತ್ತದೆ.

ಪಾಳೆಯಗಾರ, ಪಾಳೆ, ಪಾಳೆಯ ಎಂಬ ಪದಗಳು ವಿಜಯನಗರ ಕಾಲದ ಕೇವಲ ೪ ಶಾಸನಗಳನ್ನು ಹೊರತುಪಡಿಸಿದರೆ ಬೇರೆ ಎಲ್ಲಿಯೂ ಕಂಡು ಬರುವುದಿಲ್ಲ . ಆದರೆ ಕೈಫಿಯತ್ತುಗಳಲ್ಲಿ ಈ ಪದದ ಉಲ್ಲೇಖ ಹೆಚ್ಚು ಬಾರಿ ಕಂಡು ಬರುತ್ತದೆ. ವಿಜಯನಗರದ ಬಹುತೇಕ ಶಾಸನಗಳಲ್ಲಿ

ಅಮರನಾಯಕರು, ನಾಯಕರು, ಅಮರನಾಯಕತನ, ನಾಯಕತನ, ದೊರೆತನ, ಪ್ರಭುತನ ಎಂಬ ಉಲ್ಲೇಖಗಳು ಸಾವಿರಾರು ಬಾರಿ ಕಾಣಿಸಿಕೊಳ್ಳುತ್ತವೆ. ವಿಜಯನಗರಕ್ಕೆ ಭೇಟಿ ನೀಡಿದಂತಹ ಫಯಾಸ್ ಮತ್ತು ನ್ಯೂನಿಜ್‌ರು ಅಮರನಾಯಕರನ್ನು 'ಕ್ಯಾಪ್ಟನ್'ಗಳೆಂದು ತಮ್ಮ ದಿನಚರಿಗಳಲ್ಲಿ ದಾಖಲಿಸಿದ್ದಾರೆ.[೮] ವಿಜಯನಗರೋತ್ತರ ಕಾಲದ ದಾಖಲೆಗಳಲ್ಲಿ ತಮ್ಮನ್ನು ತಾವು ಪಾಳೆಯಗಾರರೆಂದು ಎಲ್ಲಿಯೂ ಸಂಭೋದಿಸಿಕೊಂಡಿಲ್ಲ . ಬದಲಾಗಿ ತಮ್ಮನ್ನು ಪಾಳೆಯಗಾರರು ಎಂದು ಕರೆದುಕೊಳ್ಳುವ ಬದಲಾಗಿ ಇತರ ಸಂಸ್ಥಾನದವರನ್ನು ಪಾಳೆಯಗಾರರೆಂದು ಸಂಭೋದಿಸಿಕೊಳ್ಳುತ್ತಿದ್ದರು. ಉದಾಹರಣೆಗೆ ಶಿವಮೊಗ್ಗ ಜಿಲ್ಲೆಯ ಆನಂದಪುರಂನಲ್ಲಿನ ಶ್ರೀಮುರುಘ ಮಠದ ಬಳಿ ಇರುವ ತಾಮ್ರಶಾಸನ (ಶಾಸನ ಸಂಖ್ಯೆ ೨೫)ವೂ ಕ್ರಿ.ಶ. ೧೬೭೦ ನವಂಬರ್ ೧೫ರನ್ನು ಉಲ್ಲೇಖಿಸುತ್ತದೆ. ಕೆಳದಿಯ ಶಿವಪ್ಪನಾಯಕನ ಪುತ್ರರಾದ ಸೋಮಶೇಖರ ನಾಯಕನು ಹೊರಡಿಸಿದ ಈ ಶಾಸನದಲ್ಲಿ ಶ್ರೀ ಮುರುಘ ಮಠದಲ್ಲಿ ಗುರುಗಳ ಶಿಖಾ ಪಟ್ಟಾಭಿಷೇಕದಲ್ಲಿ ಚಿತ್ರದುರ್ಗದ ಪಾಳ್ಯಗಾರನು ಭಕ್ತಿಯಿಂದ ಗುರುಗಳು ನಿಮಗೆ ಶಿಖಾ ಪಟ್ಟಾಭಿಷೇಕ ಮಾಡಿದ ಹಾಗೆ ಇಲ್ಲಿ ಪಾದದ ಕಡೆಯಿಂದ ಶಿಖಾಪಟ್ಟ ಮಾಡಿದರೆ ದುರ್ಗದ ಬಿಚ್ಚುಗತ್ತಿ ಭರಮಣ್ಣ ನಾಯಕರ ಪುತ್ರರರು ಮೆದಕೇರಿ ನಾಯಕರು ಗುರು ಸಂಪಾದಿಸಿದ ಕರ್ತೃತ್ವ ಆ ಶೀಮೆಯಲ್ಲಿ ನಡೆಸಿಕೊಡುವ ಪ್ರಮಾಣ ಎಂಬ ವಿವರಗಳಿವೆ.[೯]

ಪಾಳೆಯಗಾರ ಎಂಬ ಪದವನ್ನು ದಾಖಲಿಸಿರುವ ತೆಲುಗು ಸೀಸ ಪದ್ಯವೊಂದು ಗುಮ್ಮನಾಯಕ ಪಾಳೆಯಗಾರರ ಇತಿಹಾಸದಲ್ಲಿ ಕಂಡು ಬರುತ್ತದೆ. ಗುಮ್ಮನಾಯಕನ ಪಾಳೆಯಪಟ್ಟಿನ ಪ್ರಸಿದ್ಧ ದೊರೆ ಚಿನ್ನಮನಾಯಕನನ್ನು ಕುರಿತು ಬಣ್ಣಿಸುವ ಸೀಸ ಪದ್ಯ ಹೀಗಿದೆ.

"ಪರಡೆಬ್ಬದಿಯೇನು ಪಾಳ್ಯೆಲ ಲೋಪಲ/ಪೆದ್ದಯ್ಯೊ ಚೆನ್ನೊಂದಿ ಪೇರ್ಮಿಮರಿಸಿ/ಪಡಮಿ ವೇಕಾರಿ ವಂಶಾಬ್ದಿ ಚಂದ್ರುಡಗುಚು/ನಿಲಿಚೆ ಬೊ ಪೆದ್ದ ಪಾಳೆನನೆರ್ಪು ಮರೆಯ/ಚಿನ್ನಯಗುಮ್ಮ ಭೂಪ" ಎಂದಿದೆ.[೧೦] ಅಂದರೆ ಸಮಕಾಲೀನ ೭೭ ಪಾಳೆಯಗಾರರಲ್ಲಿ ಪ್ರಮುಖನೆನಿಸಿಕೊಂಡವನು ವೇಕರಿ ವಂಶಸಾಗರಕ್ಕೆ ಚಂದ್ರನ ಹಾಗೆ ಚಿನ್ನಯಗುಮ್ಮನು ಭೂಪನಾಗಿದ್ದಾನೆ ಎಂಬ ಅರ್ಥವನ್ನು ನೀಡುತ್ತದೆ.

ಸೀಸ ಪದ್ಯದ ಕವಿ ೭೭ ಸಂಖ್ಯೆಯನ್ನು ಸಂಖ್ಯಾಸೂಚವಾಗಿ ಬಳಸಿದ್ದರೂ ಚಿನ್ನಮ ನಾಯಕನನ್ನು ಪಾಳೆಯಗಾರನೆಂದು ಈ ಸೀಸ ಪದ್ಯ ಸ್ಪಷ್ಟವಾಗಿ ಸಾರುತ್ತದೆ. ಇದರಿಂದ ತಿಳಿದು ಬರುವುದೇನೆಂದರೆ ಪಾಳೆಯಗಾರ, ಪಾಳೆಯಪಟ್ಟು, ನಾಯಕತನ ಎಂಬ ಪದಗಳಾಗಲಿ, ಪಾಳೆಯಗಾರ ಪದ್ಧತಿ ಅಥವಾ ನಾಯಕ ಪದ್ಧತಿ ಅಥವಾ ಅಮರನಾಯಕ ಪದ್ಧತಿಯು ವಿಜಯನಗರವು ಹುಟ್ಟು ಹಾಕಿದಂತಹ ವ್ಯವಸ್ಥೆ ಅಲ್ಲ. ಇದು ವಿಜಯನಗರಪೂರ್ವ ಕಾಲದಲ್ಲಿಯೇ ಹೊಯ್ಸಳರ, ಕಾಕತೀಯರ ಕಾಲದಲ್ಲಿ ಹುಟ್ಟನ್ನು ಪಡೆದಿದ್ದರೂ ವಿಜಯನಗರ ಕಾಲದಲ್ಲಿ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಬಲಿಷ್ಠವಾಗಿ ರೂಪುಗೊಂಡಿತು. ಹಾಗೂ ವಿಜಯನಗರೋತ್ತರ ಕಾಲದಲ್ಲಿ ಪಾಳೆಯಗಾರ ಪದ್ಧತಿಯಾಗಿ ಮರುಹುಟ್ಟನ್ನು ಪಡೆದುಕೊಂಡು ಮುಂದುವರಿಯಿತು ಎಂದು ಹೇಳಬಹುದು.

ಒಟ್ಟಿನಲ್ಲಿ 'ಪಾಳೆಯಗಾರ' ಎಂದರೆ 'ಪಾಳೆಯಪಟ್ಟಿನ ಮುಖ್ಯಸ್ಥ' ಅಥವಾ ನಾಯಕ ಎಂದು ಹೇಳಬಹುದು. ಪಾಳೆಯಪಟ್ಟು ಎನ್ನುವುದು ಪಾಳೆಯಗಾರನ ಆಡಳಿತ ಸಂಸ್ಥಾನವೆಂದೂ ಹೇಳಬಹುದು. ವಿಜಯನಗರೋತ್ತರ ಕಾಲಾವಧಿಯಲ್ಲಿ ಪಾಳೆಯಗಾರರು ಕರ್ನಾಟಕದ ರಾಜಕೀಯ ಸಾಂಸ್ಕೃತಿಕ ಮುಖ್ಯವಾಹಿನಿಯಲ್ಲಿ ಪ್ರಧಾನ ಪಾತ್ರವನ್ನು ಪೋಷಿಸಿದರು.

ವಿಜಯನಗರಕ್ಕೆ ಸಂಬಂಧಿಸಿದ ಮೂರು ಶಾಸನಗಳಲ್ಲಿ ಪಾಳೆಯ, ಪಾಳೆಯಗಾರ ಎಂಬ ಪದಗಳು ಉಲ್ಲೇಖಗೊಂಡಿವೆ. ಈ ಸಂದರ್ಭದಲ್ಲಿ ಆ ಶಾಸನಗಳಲ್ಲಿನ ಮಾಹಿತಿಯನ್ನು ಇಲ್ಲಿ ದಾಖಲಿಸುವುದು ಸೂಕ್ತವೆನಿಸುತ್ತದೆ.

ಪಿರಿಯಾಪಟ್ಟಣ ತಾಲ್ಲೂಕಿನ ೫೯ನೇ ಶಾಸನದಲ್ಲಿ ವಿಜಯನಗರದ ದೊರೆ ತಿರುಮಲ ರಾಜನು ಕ್ರಿ.ಶ. ೧೬೦೪ರಲ್ಲಿ ಚಂಗಾಳ್ವ ದೊರೆ ರುದ್ರಗಣನಿಗೆ ಮಳಲವಾಡಿ ಸೀಮೆಯನ್ನು ಅಲ್ಲಿನ ಅನ್ನದಾನಿ ಮಲ್ಲಿಕಾರ್ಜುನ ಸ್ವಾಮಿಯ ಅಂಗರಂಗ ವೈಭೋಗಕ್ಕೆ ಬಿಟ್ಟು ಕೊಟ್ಟಂಥ ಶಾಸನದಲ್ಲಿ ಈ ರೀತಿ ಹೇಳಲಾಗಿದೆ.

"ನಾವು ಕೊಟಂಥಾ ಮಳಲವಾಡಿ ಸೀಮೆಯ ಪಿರಿಯ ರಾಜನ ಕೂಡಿದು ಬಿಟಂಥಾ ಪಗುದಿರೊಕವು ಪಿರಿಯರಾಜನಿಗೆ ಬಿಟು ಕೊಟುದು ಮುಂದೆ ಶ್ರೀರಂಗಪಟಣಕೆ ಬಂದು ನಿಂದಂಥಾ ದೊರೆಯಾಗಲಿ ಮಂನಿಯರಾಗಲೀ ಪಾರುಪತ್ಯೆಗಾರನಾಗಲಿ ಪ್ರಭು ಪಾಳೆಯಗಾರನಾಗಲೀ ಯೀ ಅಪಣೆಗೆ ತಪಿದವ ತಂನ ಹೆತ್ತ ತಾಯಿ ತಾನೇ ತಕಿಸಿಕೊಂಡು ಹೋದ ಹಾಗೆ"

ಈ ಶಾಸನದಲ್ಲಿ ಪಾಳೆಯಗಾರ ಎಂಬ ಪದವು ದಾಖಲಾಗಿದೆ.

ಮಂಡ್ಯ ಜಿಲ್ಲೆಯ ೬೩ನೇ ಶಾಸನದಲ್ಲಿ ಕ್ರಿ.ಶ. ೧೬೫೪ರಲ್ಲಿ ಕೆರೆಗೋಡು ತಾಲ್ಲೂಕು ಆರ್ಕ ಗುಪ್ತಪುರ ಅಲಿಯಾಸ್ ಗುತ್ತೆಯಲ್ಲಿ ಅರ್ಕೇಶ್ವರ, ದೇವಮ್ಮ, ಸಿಡಿಲ ಬಸವ, ಭೈರವ ಮುಂತಾದ ದೇವರುಗಳ ಪೂಜೆಯ ಬಗೆಗೆ ಬ್ರಾಹ್ಮಣರಿಗೂ ಮತ್ತು ಆರ ಕವಡೆಯವರಿಗೂ ವ್ಯಾಜ್ಯ ಉಂಟಾದಾಗ ಪಾಳೆಯಗಾರ ಸಿವ್ರೋಜಿ ನಾಯಕರಿಗೆ ದೂರನ್ನು ನೀಡಿ ಸಮಸ್ಯೆಯನ್ನು ಪರಿಹರಿಸಿಕೊಂಡಿದ್ದನ್ನು ದಾಖಲಿಸಿದೆ. ಆದರೆ ಈ ಶಾಸನದ ಕೊನೆಯಲ್ಲಿ ಶ್ರೀ ಪಾಳ್ಯೇಗಾರು ಸಿಓಜಿನಾಕರು ರುಜು ಶ್ರೀ ಅಂಮಲದಾರ್ ವೆಂಕಟಪ್ಪ ನಾಯಕರ ರುಜು ಎಂದಿದೆ.[೧೧]

ಹೀಗೆ ಈ ಎರಡು ಶಾಸನಗಳನ್ನು ಹೊರತುಪಡಿಸಿದರೆ "ಪಾಳೆಂ" ಎಂಬ ಪದದ ಉಲ್ಲೇಖವು ವಿಜಯನಗರದ ಅರಸ ಶ್ರೀರಂಗರಾಯನ ಕಾಲದ ಬೇಲೂರು ಶಾಸನದಲ್ಲಿ ಉಕ್ತಗೊಂಡಿದೆ. (ಶಾಸನ ಸಂಖ್ಯೆ ೧೭೭) ಕಾಮರಾಜು ರಂಗಪ ರಾಜಯ್ಯವಾರಿಕೆ ಪೌತ್ರುಲ್ಯೆನ ಗೋಪಾಲರಾಜ್ಯೆಯವಾರಿಕೆ ಪುತ್ರುಲ್ಯನ ಶ್ರೀ ಮದ್ರಾಜಾಧಿರಾಜ ರಾಜ ಪರಮೇಶ್ವರ ಶ್ರೀ ವೀರಪ್ರತಾಪಿ ಶ್ರೀ ವೀರ ಶ್ರೀರಂಗರಾಯದೇವ ಮಹಾರಾಯಲ್ಯವಾರು ಶ್ರೀವತ್ಸ ಗೋತ್ರ ಅಶ್ಲಾಯನಸೂತ್ರ ರುಕ್ಶಾಖಾದ್ಯಾಯುಲ್ಯೆನ ವೆಂಕಟಯ ಪೌತ್ರುಲ್ಯೆನ ತಿರುವೆಂಗಳಯ ಪುತ್ರುಂಡ್ಯೆನ ಕುಚ್ಚಯಕು ಪಾಲಿಂಚ್ಚಿನ ಭೂದಾನ ಧರ್ಮಶಾಸನ ಕ್ರಮಮಟ್ಲನ್ನನು ನೀವು ವೇಲಾಪುರಿ ಸ್ಥಳಮಂದು ಶ್ರೀ ಚನ್ನಕೇಶವ (ವ) ಸ್ವಾಮಿಕಿ ನೂತನ

ರಥೋತ್ಸವಂ ಶೇಯಿಂಚಿನಾವು ಗನ ರಥೋತ್ಸವ ತದಂಗಂ ಬ್ರಹ್ಮ ಪ್ರತಿಷ್ಠ ಶೇಶೆ ನಿಮಿತ್ಯಂಗ್ಗಾ ಬೇಲೂರ್ಕಿ ಚಲ್ಲೆ ಪಾಳೆಂ ಶೀಮೆಲೋನೊ... ಹೀಗೆ ಮುಂದೆ ಸಾಗುತ್ತದೆ.[೧೨]

ಈ ಶಾಸನದಲ್ಲಿನ ಮಾಹಿತಿಯನ್ನು ಪರಿಶೀಲಿಸಿದಾಗ 'ಪಾಳೆಂ' ಪ್ರದೇಶವನ್ನು ಅಥವಾ ಸ್ಥಳವನ್ನು ಸೂಚಿಸುವ ಪದವಾಗಿ ಬಳಸಿರುವುದು ಸ್ಪಷ್ಟವಾಗುತ್ತದೆ. ಹೀಗೆ ಪಾಳೆಂ ಎನ್ನುವುದು ಪ್ರದೇಶವಾಗಿದ್ದರೆ ಪಾಳೆಯಗಾರ ಎನ್ನುವವನು ಪಾಳೆಂ ಪ್ರದೇಶದ ಒಡೆಯನಾಗಿರುತ್ತಿದ್ದ.

ಒಟ್ಟಿನಲ್ಲಿ ಪಾಳೆಂ, ಪಾಳೆಯ, ಪಾಳೆಯಗಾರ ಈ ಪದಗಳೂ ಸ್ಥಳೀಯ ಮಟ್ಟದ ಆಡಳಿತಗಾರರನ್ನು ಅಡಳಿತ ಪ್ರದೇಶವನ್ನು ಸೂಚಿಸುವ ಪದಗಳಾಗಿ ವಿಜಯನಗರ ಕಾಲದಲ್ಲಿ ಬಳಕೆಯಾಗುತ್ತಿದ್ದವು.

ಗೆಝೆಟಿಯರ್‌ಗಳು, ಬಿ.ಎಲ್.ರೈಸ್ ಅವರ (ಸಂ) ಎಪಿಗ್ರಾಫಿಯಾ ಕರ್ನಾಟಿಕಾ ಶಾಸನಗಳು, ಕರ್ನಲ್ ಮೆಕಂಝಿ ಸಂಗ್ರಹಿಸಿರುವ ಕೈಫಿಯತ್ತುಗಳು, ಎಂ.ಎಂ ಕಲಬುರ್ಗಿ (ಸಂ)ಯವರ ಕರ್ನಾಟಕದ ಕೈಫಿಯತ್ತುಗಳು. ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಆಡಳಿತ ನಡೆಸಿರುವ ಪಾಳೆಯಗಾರರನ್ನು, ಅವರ ವಂಶಾವಳಿಗಳು, ದಾಖಲೆ ಪತ್ರಗಳು ಮತ್ತು ಶಾಸನಗಳನ್ನಾಧರಿಸಿ ವಿವಿಧ ಹೆಸರುಗಳಿಂದ ಗುರುತಿಸುತ್ತವೆ. ಉದಾಹರಣೆಗೆ ಗುಮ್ಮನಾಯಕ ಪಾಳೆಯದವನ್ನು ಗುಮ್ಮನಾಯಕ ಪಾಳೆಯಗಾರರೆಂದೂ, ಯಲಹಂಕದವರನ್ನು ಯಲಹಂಕ ನಾಡಪ್ರಭುಗಳೆಂದು, ಚನ್ನಪಟ್ಟಣದವರನ್ನು ಚೆನ್ನಪಟ್ಟಣದ ಪಾಳೆಯಗಾರರೆಂದೂ, ಅವತಿ, ಸುಗಟೂರುಗಳನ್ನು ಆಳಿದವರನ್ನು ಪ್ರಭುಗಳೆಂದು, ನಾಯಕನಹಟ್ಟಿಯವರನ್ನು ಹಟ್ಟಿ ಪಾಳೆಯಗಾರರೆಂದೂ, ಚಿತ್ರದುರ್ಗದವರನ್ನು ನಾಯಕರು, ಪಾಳೆಯಗಾರರೆಂದು, ಮತ್ತೋಡು, ಬೂದಿಹಾಳುಗಳಲ್ಲಿ ಆಡಳಿತ ನಡೆಸಿದವವರನ್ನು ಪಾಳೆಯಗಾರರೆಂದೂ, ಹರತಿಯವರನ್ನು ಪಾಳೆಯಗಾರರೆಂದೂ, ಮಿಡಿಗೇಶಿಯಲ್ಲಿ ಆಡಳಿತ ನಡೆಸಿರುವವರನ್ನು ಮಹಾಪ್ರಭುಗಳೆಂದು, ಬಳ್ಳಾರಿಯಲ್ಲಿ ಆಡಳಿತ ನಡೆಸಿದವರನ್ನು ಹಂಡೆಯ ಪಾಳೆಯಗಾರರೆಂದು ವಜೀರರೆಂದೂ, ಕಳಸ-ಕಾರ್ಕಳಗಳಲ್ಲಿ ಆಡಳಿತ ನಡೆಸಿರುವವರನ್ನು ಅರಸರೆಂದು, ಹಾಗಲವಾಡಿಯವರನ್ನು ಪಾಳೆಯಗಾರರೆಂದೂ, ಗುಡೇಕೋಟೆ, ಜರಿಮಲೆಯಲ್ಲಿ ಆಡಳಿತ ನಡೆಸಿದವರನ್ನು ಪಾಳೆಯಗಾರರು, ನಾಯಕರು ಎಂದು, ಕೆಂಚನಗುಡ್ಡದಲ್ಲಿ ಆಡಳಿತ ನಡೆಸಿದವರನ್ನು ಪಾಳೆಯಗಾರರೆಂದು ಕರೆದಿರುವುದನ್ನು ಗಮನಿಸಬಹುದು.

ಒಟ್ಟಾರೆಯಾಗಿ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ಸಾಮಂತ ರಾಜರು ಮತ್ತು ನಾಯಕರನ್ನು ಅರಸರು, ಪ್ರಭುಗಳು, ಪಾಳೆಯಗಾರರು, ನಾಯಕರು ಎಂದು ರೂಢಿಗತವಾಗಿ ಕರೆದಿರಬಹುದಾದ ಸಾಧ್ಯತೆಗಳಿವೆ. ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಬಹುತೇಕ ನಾಯಕರು ಪಾಳೆಯಗಾರರು ತಾವು ಹೊರಡಿಸಿದ ಶಾಸನಗಳಲ್ಲಿ ವಂಶಾವಳಿಗಳಲ್ಲಿ, ದಾನಪತ್ರಗಳಲ್ಲಿ ತಮ್ಮನ್ನು ತಾವು ರಾಜರೆಂದು, ದೊರೆಗಳೆಂದು, ಮಹಾಪ್ರಭುಗಳೆಂದು, ಮಹಾನಾಯಕಾಚಾರ್ಯರೆಂದೂ ನಾಯಕ ಶಿರೋಮಣಿಗಳೆಂದು ಪ್ರಶಂಸಿಸಿಕೊಂಡಿದ್ದಾರೆ. ಈ ಮಹಾನಾಯಕಾಚಾರ್ಯ ಎಂಬ ಬಿರುದು ಪೂರ್ವ ಕರ್ನಾಟಕದ ಬಹುತೇಕ ಬೇಡ ನಾಯಕ ಪ್ರಭುಗಳಿಗಿರುವುದು ವಿಶೇಷವಾಗಿದೆ.

ಉದಾ: ಚಿತ್ರದುರ್ಗ ನಾಯಕನಹಟ್ಟಿ, ಹರತಿ, ಮತ್ತೋಡು, ಕನಕಗಿರಿ ಮತ್ತು ಗುಮ್ಮನಾಯಕನ ಪಾಳೆಯಗಾರರಿಗೂ ಮಹಾನಾಯಕಾಚಾರ್ಯ ಎಂಬ ಬಿರುದಿತ್ತು.

ವಿಜಯನಗರ ಕಾಲದಲ್ಲಿ ಬಹುತೇಕ ಮಂದಿ ನಾಯಕರು ಮತ್ತು ಪಾಳೆಯಗಾರರು ಹುಟ್ಟಿಕೊಂಡರು. ಇದಕ್ಕೆ ಪ್ರಮುಖ ಕಾರಣ ದಕ್ಷಿಣ ಭಾರತದ ಬಹುತೇಕ ಭೂಭಾಗವನ್ನು ಗೆದ್ದಿದ್ದ ವಿಜಯನಗರ ಅರಸರು ತಮ್ಮ ಪ್ರದೇಶಗಳಲ್ಲಿ ಆಡಳಿತವನ್ನು ಕ್ರಮಬದ್ಧವಾಗಿ ಜಾರಿಗೆ ತರಲು ಹಾಗೂ ದೂರದ ಪ್ರದೇಶಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಹಾಗೂ ಕಂದಾಯವನ್ನು ವಸೂಲಿ ಮಾಡಲು, ಸುವ್ಯವಸ್ಥಿತವಾದ ಸೈನ್ಯವನ್ನು ಯುದ್ಧಗಳಿಗಾಗಿ ಸದಾ ಸಿದ್ಧವಾಗಿಟ್ಟುಕೊಳ್ಳಲು ತಮ್ಮ ಹಿಡಿತದಲ್ಲಿದ್ದ, ತಮಗೆ ನಿಷ್ಠರಾಗಿರುತ್ತಿದ್ದ ಅಧಿಕಾರಿಗಳನ್ನು ತಮ್ಮ ಪ್ರಾಂತ್ಯಗಳ ರಾಜ್ಯಪಾಲರಾಗಿ ಹಾಗೂ ನಾಯಕರುಗಳಾಗಿ ನೇಮಿಸುತ್ತಿದ್ದುದು. ಈ ಸಾಮಂತ ಅಧಿಕಾರಿಗಳೇ ಮುಂದೆ ಪಾಳೆಯಗಾರರಾಗಿ ರೂಪಾಂತರಗೊಂಡರು.[೧೩] ವಿಜಯನಗರ ಕಾಲದಲ್ಲಿ ಮಧುರೆ, ತಂಜಾವೂರು, ಜಿಂಜಿ, ಪೆನುಗೊಂಡ, ಚನ್ನಪಟ್ಟಣ, ಶ್ರೀರಂಗಪಟ್ಟಣಗಳ ನಾಯಕರು ತಮ್ಮ ಅಧೀನದಲ್ಲಿ ಹಲವಾರು ಪಾಳೆಯಗಾರರನ್ನು ನೇಮಿಸಿಕೊಂಡರು. ವಿಶ್ವನಾಥ ನಾಯಕನು ಮಧುರೆಯ ನಾಯಕನಾಗುತ್ತಿದ್ದಂತೆ ಮೊದಲು ಮಾಡಿದ ಕೆಲಸವೆಂದರೆ ಉತ್ತಮ ಆಡಳಿತಕ್ಕಾಗಿ ತನ್ನ ಸಾಮ್ರಾಜ್ಯವನ್ನು ಹಲವಾರು ಪಾಳೆಯಪಟ್ಟುಗಳಾಗಿ ರೂಪಿಸಿದ್ದು.[೧೪]

ಪಾಳೆಯಗಾರರ ಐತಿಹಾಸಿಕ (ಹಿನ್ನೆಲೆಯನ್ನು) ಬೆಳವಣಿಗೆಯನ್ನು ಗಮನಿಸುವುದಾದರೆ ಪ್ರಾಚೀನ ಭಾರತದಲ್ಲಿ ದಕ್ಷಿಣ ಪ್ರಸ್ಥಭೂಮಿಯಲ್ಲಿ ಕಾಡುಗಳ ಮಧ್ಯೆ ಬಣಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದರು. ಪ್ರಾಚೀನ ಕಾಲದಲ್ಲಿ ಪಾಳೆಯಗಾರರು ವಾಸಿಸುತ್ತಿದ್ದ ಪ್ರದೇಶಗಳಿಗೆ ಪೊಲ್ಲಂಗಳೆಂದು ಕರೆಯುತ್ತಿದ್ದರು. ಈ ಪೊಲ್ಲಂಗಳ ಒಡೆಯನೇ ಪಾಳೆಯಗಾರ; ಈತ ಹಿಂದೂರಾಜರ ಸಾಮಂತ ವರ್ಗಕ್ಕೆ ಸೇರಿದವನಾಗಿರುತ್ತಿದ್ದ.[೧೫] ಪಾಳೆಯಗಾರರಾಗಿ ಅಧಿಕಾರವನ್ನು ನಿಭಾಯಿಸುತ್ತಿದ್ದ ಬಹುತೇಕ ಬೇಡ ಜನಾಂಗದ ವೀರರೇ ಈ ಬೇಡರಾಜರ ಗಣರಾಜ್ಯಗಳಂತಿದ್ದ ಬೇಡ ವಟ್ಟುಗಳು. ಕಾಲ ಕ್ರಮೇಣ ಸಂಸ್ಥಾನಗಳಾಗಿ ರೂಪುಗೊಂಡವು. ಕರ್ನಾಟಕದಲ್ಲಿ ಈ ರೀತಿ ಸ್ಥಾಪನೆಗೊಂಡ ಪಾಳೆಯಪಟ್ಟುಗಳಲ್ಲಿ ಆನೆಗೊಂದಿಯೇ ಮೊದಲನೆಯ ಪಾಳೆಯ ಪಟ್ಟವಾಗಿತ್ತು.[೧೬] ಪಾಳೆಯಗಾರರು ಆರಂಭದಿಂದಲೂ ಅರಣ್ಯವಾಸಿಗಳಾಗಿದ್ದು, ಲೂಠಿಕೋರರು ದಾರಿಹೋಕರನ್ನು ಹಿಡಿದು ಸುಲಿಗೆ ಮಾಡುವುದು ಅವರ ಜೀವನೋಪಾಯವಾಗಿತ್ತು. ಗೆರಿಲ್ಲಾ ಮಾದರಿಯ ಯುದ್ಧಗಳಲ್ಲಿ ನೈಪುಣ್ಯ ಹೊಂದಿದ್ದ ಇವರಿಗೆ ಯುದ್ಧಕಲೆ ಜನ್ಮದತ್ತವಾಗಿ ಬಂದಿತು. ಹೀಗಾಗಿ ಕರ್ನಾಟಕವನ್ನು ಆಳಿದ ಗಂಗರ ಕಾಲದಿಂದ ಬೇಡರು ಸಾಮ್ರಾಜ್ಯದ ಸೈನ್ಯ ವಿಭಾಗದಲ್ಲಿ ಸೇವೆಯನ್ನು ಸಲ್ಲಿಸುವ ಪದ್ಧತಿಯು ಆರಂಭವಾಯಿತು. ಮೂಲತಃ ಯುದ್ಧಕಲಿಗಳು, ಧೈರ್ಯಶಾಲಿಗಳು, ಸಾಹಸಿಗಳು ಆಗಿದ್ದ ಇವರನ್ನು ಸೈನ್ಯದಲ್ಲಿ ಸೇರಿಸಿಕೊಂಡು ಗಂಗರು ಹಲವಾರು ಯುದ್ಧಗಳಲ್ಲಿ ಜಯಶಾಲಿಗಳಾದರು. ಮುಂದೆ ಹೊಯ್ಸಳರ ಕಾಲದವರೆಗೂ ಈ ಪದ್ಧತಿಯು ಮುಂದುವರಿದುಕೊಂಡು ಹೋಯಿತು. ಪುನಃ ಪಾಳೆಯಗಾರರು ರಾಜಕೀಯವಾಗಿ ಹೆಚ್ಚು ಪ್ರವರ್ಧಮಾನಕ್ಕೆ ಬಂದಿದ್ದು ವಿಜಯನಗರ ಕಾಲದಲ್ಲಿಯೇ

ವಿಜಯನಗರ ಕಾಲದ ಊಳಿಗಮಾನ್ಯ ವ್ಯವಸ್ಥೆಯು ಹುಟ್ಟಿಹಾಕಿದ ನಾಯಕ ಅಥವಾ ಅಮರನಾಯಕ ಹುದ್ದೆಯನ್ನು ಪಡೆದವರಲ್ಲಿ ಇವರೇ ಅಗ್ರಗಣ್ಯರಾಗಿದ್ದಾರೆ. ಕ್ರಿ.ಶ. ೧೫೬೫ರ ರಕ್ಕಸಗಿ ತಂಗಡಿಗಿ ಕದನದ ನಂತರ ಉಂಟಾದ ಅರಾಜಕೀಯ ವಾತಾವರಣವೇ ಕರ್ನಾಟಕದಲ್ಲಿ ಪಾಳೆಯಗಾರಶಾಹಿ ಬಲವಾಗಿ ರೂಪುಗೊಳ್ಳಲು ಕಾರಣವಾಯಿತು.[೧೭] ವಿಜಯನಗರೋತ್ತರ ಕಾಲದಲ್ಲಿ ಕಂಡು ಬರುವ ಪಾಳೆಯಗಾರರೆಲ್ಲರೂ ಮೂಲತಃ ವಿಜಯನಗರದಲ್ಲಿ ನಾಯಕ ಅಥವಾ ಅಮರನಾಯಕ ಹುದ್ದೆಯಲ್ಲಿದ್ದವರೇ. ರಕ್ಕಸ ತಂಗಡಿ ಕದನದಲ್ಲಿ ರಾಮರಾಯನು ಮೃತನಾಗಿ ವಿಜಯನಗರವು ಪತನ ಹೊಂದಿದಾಗ ಬಹುತೇಕ ಅಮರನಾಯಕ ಮನೆತನಗಳು ಸ್ವತಂತ್ರವಾದವು. ಉದಾ: ಚಿತ್ರದುರ್ಗ, ಕೆಳದಿ, ಗುಮ್ಮನಾಯಕನ ಪಾಳೆಯ, ಹಂಡೆ ಪಾಳೆಯಗಾರರು, ಗುಡೇಕೋಟೆ, ಜರಿಮಲೆ, ನಾಯಕನಹಟ್ಟಿ, ಹಾಗಲವಾಡಿ, ಕನಕಗಿರಿ ಇತ್ಯಾದಿ ಇದರ ಜೊತೆಗೆ ವಿಜಯನಗರದ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದ ಬಹುತೇಕ ತಳವಾರ ನಾಯಕರು ವಿಜಯನಗರದ ಅವಸಾನವನ್ನು ತಮ್ಮ ರಾಜಕೀಯ ಲಾಭಕ್ಕಾಗಿ ಬಳಸಿಕೊಂಡು ತಮ್ಮಲ್ಲಿರುವ ಸೈನ್ಯ ಹಾಗೂ ಉಂಬಳಿಯಾಗಿ ಪಡೆದ ಭೂಮಿಯ ಬಲದಿಂದ ತಮ್ಮದೇ ಆದ ಪಾಳೆಯಪಟ್ಟುಗಳನ್ನು ನಿರ್ಮಿಸಿಕೊಂಡರು. ಉದಾಹರಣೆಗೆ ಸುರಪುರದ ನಾಯಕರು ಈ ರೀತಿಯ ನಾಡತಳವಾರಿಕೆಯ ಹಿನ್ನೆಲೆಯಿಂದ ಬಂದವರೇ[೧೮] ಬಳ್ಳಾರಿ ಜಿಲ್ಲೆಯ ಬೇಡ ಪಾಳೆಯಪಟ್ಟುಗಳಾದ ಜರಿಮಲೆ, ಗುಡೇಕೋಟೆ, ವಡ್ಡು-ದರೋಜಿ ಮೊದಲಾದವುಗಳು ಮೂಲತಃ ವಿಜಯನಗರ ಕಾಲದಲ್ಲಿ ನಾಡ ತಳವಾರಿಕೆಯನ್ನು ನಿರ್ವಹಿಸಿದಂತಹುವುಗಳೇ[೧೯] ಪಾಳೆಯಗಾರ ವ್ಯವಸ್ಥೆಯನ್ನು ರಕ್ಷಣಾ ಕಾರ್ಯಕ್ಕೆ ಅಥವಾ ಕಾವಲು ಕಾಯಲು ಬಳಸಿಕೊಳ್ಳುವ ಪದ್ಧತಿಯು ವಿಜಯನಗರದಲ್ಲಿ ಇತ್ತು. ಹಿಂದುಗಳ ಪವಿತ್ರ ಯಾತ್ರಾ ಸ್ಥಳವಾದ ತಿರುಪತಿ ಪಗೋಡದ ಪವಿತ್ರ ಪ್ರಾಕಾರಗಳು ನಾಲ್ವರು ಪಾಳೆಯಗಾರರ ರಕ್ಷಣೆಯಲ್ಲಿದ್ದವು. ಇವರು ಆ ಪಗೋಡದ ಪಾರಂಪರ್ಯಾಧಿಕಾರದ ಕಾವಲುಗಾರರಾಗಿದ್ದರು. ಇವರ ರಕ್ಷಣಾ ನಿಷ್ಠೆಯ ಫಲವಾಗಿ, ಮಹಮ್ಮದಿಯರಾಗಲಿ, ಕ್ರೈಸ್ತರಾಗಲಿ ತಿರುಪತಿಯ ಗರ್ಭಗುಡಿಯನ್ನು ಅಶುದ್ಧಗೊಳಿಸಲು ಸಾಧ್ಯವಾಗಲಿಲ್ಲ.[೨೦] ವಿಜಯನಗರ ಸಾಮ್ರಾಜ್ಯದಲ್ಲಿ ಸಾಮಂತರ ಸ್ಥಾನಮಾನ ಪಡೆದಿದ್ದ ನಾಯಕರಿಗೂ ಮತ್ತು ರಕ್ಷಣಾ ಕಾರ್ಯದಲ್ಲಿ ತೊಡಗಿದ್ದ ಪಾಳೆಯಗಾರರಿಗೂ ನೇರ ಹೋಲಿಕೆ ಇರುವಂತೆ ತೋರುವುದಿಲ್ಲ ಎನ್ನುತ್ತಾರೆ ಇತಿಹಾಸಕಾರ ಲಕ್ಷ್ಮಣ್ ತೆಲಗಾವಿ ಅವರು. ಆದರೆ ತೆಲಗಾವಿಯವರ ಮಾತನ್ನು ಒಪ್ಪಲು ಸಾಧ್ಯವಿಲ್ಲ. ಕಾರಣ ತಳವಾರಿಕೆಯನ್ನು ಪಡೆದುಕೊಂಡಿದ್ದ ಬಹುತೇಕ ವಿಜಯನಗರದ ಗಡಿಯಂಚಿನಲ್ಲಿದ್ದ ತಳವಾರರು ವಿಜಯನಗರ ಕಾಲದಲ್ಲಿ ಸಾಮಂತ ಸ್ಥಾನಮಾನಗಳನ್ನು ಪಡೆದಿದ್ದರು ಎಂಬುದಕ್ಕೆ ಬಳ್ಳಾರಿ ಜಿಲ್ಲೆಯ ಬೇಡ ಪಾಳೆಯಪಟ್ಟುಗಳು ಸಾಕ್ಷಿಯಾಗುತ್ತವೆ. ಹಾಗೂ ಕೆಲವು ತಳವಾರಿಕೆಯ ಮನೆತನಗಳು ವಿಜಯನಗರೋತ್ತರ ಕಾಲದಲ್ಲಿ ಸ್ವತಂತ್ರ ಪಾಳೆಯಪಟ್ಟುಗಳನ್ನು ಸ್ಥಾಪಿಸಿಕೊಂಡು ಕ್ರಿ.ಶ. ೧೬, ೧೭ ಮತ್ತು ೧೮ನೆಯ ಶತಮಾನದವರೆಗೂ ಆಡಳಿತವನ್ನು ನಡೆಸಿದವು.

ವಿಜಯನಗರೋತ್ತರ ಪಾಳೆಯಗಾರರು ಸ್ವತಂತ್ರ ಸ್ಥಳೀಯ ನಾಯಕರಾಗಿದ್ದರು. ಈ ಪಾಳೆಯಗಾರರು ತಮ್ಮ ಸಮಕಾಲೀನ ಪಾಳೆಯಪಟ್ಟುಗಳೊಂದಿಗೆ ಪರಸ್ಪರ ಸದಾ ಕಾದಾಡುತ್ತಿದ್ದರು. ಉದಾಹರಣೆಗೆ ಚಿತ್ರದುರ್ಗವನ್ನು ಆಳಿದ ನಾಯಕರಲ್ಲಿ ಮೂರನೆಯವನಾದ ಕಸ್ತೂರಿ ರಂಗಪ್ಪನಾಯಕನ ಕಾಲದಿಂದ ಕೊನೆಯ ನಾಯಕನಾದ ರಾಜಾ ವೀರ ಮದಕರಿ ನಾಯಕನವರೆಗೂ ಹರಪನಹಳ್ಳಿ, ಸಿರಾ, ನಿಡುಗಲ್ಲು, ರಾಯದುರ್ಗ ಮೊದಲಾದ ಪಾಳೆಯಗಾರರೊಂದಿಗಿನ ಕದನಗಳು ಚಿತ್ರದುರ್ಗ ನಾಯಕರ ಇತಿಹಾಸದ ಉದ್ದಕ್ಕೂ ಕಂಡು ಬರುತ್ತವೆ. ಕೆಲವೊಮ್ಮೆ ತಮಗಿಂತ ಬಲಿಷ್ಠರಾದ ಅರಸರೊಂದಿಗೆ ಯುದ್ಧ ಮಾಡುವಾಗ ಒಂದುಗೂಡುತ್ತಿದ್ದುದೂ ಉಂಟು. ಇಂತಹ ಪಾಳೆಯಗಾರರ ಬೆಂಬಲವನ್ನು ಪಡೆದೇ ವಿಶಾಲವಾದ ಸಾಮ್ರಾಜ್ಯಗಳು ರೂಪುಗೊಳ್ಳುತ್ತಿದ್ದವು.[೨೧]

ವಿಜಯನಗರ ಕಾಲದಲ್ಲಿನ ತಳವಾರರು ವಿಜಯನಗರೋತ್ತರ ಕಾಲದಲ್ಲಿ ಪಾಳೆಯಗಾರರಾಗಿ ಹೊರಹೊಮ್ಮಲು ವಿಜಯನಗರ ಕಾಲದಲ್ಲಿನ ರಾಜಕೀಯ ಅಧಿಕಾರ ಹೇಗೆ ದಾರಿ ಮಾಡಿಕೊಟ್ಟಿತು ಎಂಬುದನ್ನು ಪರಿಶೀಲಿಸುವುದಾದರೆ ವಿಜಯನಗರದ ಅರಸರು ತಮ್ಮ ಗಡಿಭಾಗದ ರಾಜ್ಯಗಳನ್ನು ಕಾಯುತ್ತಿದ್ದ ತಳವಾರರಿಗೆ ನುರಿತ ಸೈನ್ಯವನ್ನು ಒದಗಿಸಿಕೊಡುತ್ತಿದ್ದರು. ಹಾಗೂ ಸೈನ್ಯದ ವೆಚ್ಚವನ್ನು ಭರಿಸಲು ತಳವಾರರಿಗೆ ಒಂದೆರಡು ಹಳ್ಳಿಗಳನ್ನು ಉಂಬಳಿಯಾಗಿ ನೀಡುತ್ತಿದ್ದರು. ತಳವಾರರಿಗೆ ವಸತಿ ನೆಲೆಗಳನ್ನು ನಿರ್ಮಿಸಿಕೊಳ್ಳಲು, ಕೋಟೆಗಳನ್ನು ಕಟ್ಟಿಕೊಳ್ಳಲು ಅವಕಾಶವಿತ್ತು.[೨೨]

ಕೃಷ್ಣದೇವರಾಯನ ಕೃತಿಯಾದ 'ಆಮುಕ್ತಮಾಲ್ಯದ' ಬೇಡ ತಳವಾರರನ್ನು ಕುರಿತು ಹೀಗೆ ವಿವರಿಸುತ್ತದೆ. ಕಾಡುಗಳ ದುರ್ಗ ಪ್ರದೇಶದಲ್ಲಿ ಕಾಡಿನ ಜನರಾದ ಬೇಡರು, ಚೆಂಚರು ಮುಂತಾದವರಲ್ಲಿ ಬೇಕಾದಷ್ಟು ದುರ್ಗುಣಗಳಿರುತ್ತವೆ. ಮಣ್ಣಿನ ಗೋಡೆಯನ್ನು ಎಷ್ಟು ತೊಳೆದರೂ ಮಣ್ಣಿಲ್ಲದಂತೆ ಮಾಡುವುದು ಶಕ್ತವಿಲ್ಲ ಹೇಗೋ ಹಾಗೆ, ಅವರನ್ನು ಎಷ್ಟು ಸಲ ಶಿಕ್ಷಿಸಿದರೂ ಅವರ ದುರ್ಗುಣ ಹೋಗುವುದಿಲ್ಲ. ಆದುದರಿಂದ ಅವರಿಗೆ ವಸ್ತು, ವಾಹನಗಳನ್ನಿತ್ತು ಅವರೊಂದಿಗೆ ಗೆಳೆತನ ಬೆಳೆಸುವುದು ಉತ್ತಮ. ಹಾಗೇ ಮಾಡಿದಾಗ ವೈರಿಗಳೊಂದಿಗೆ ಹೋರಾಡಲು ಅವರು ಸಹಾಯಕರಾಗಿ ಧೈರ್ಯದಿಂದ ಸೆಣಸುವರು, ಜೊತೆಗೆ ಶತ್ರುಗಳಾದ ನೆರೆರಾಜ್ಯದವರನ್ನು ಈ ಬೇಡರಿಂದ ಕೊಳ್ಳೆಹೊಡೆಸಬಹುದು.[೨೩] ಕೃಷ್ಣದೇವರಾಯನು ಗಡಿ ಪ್ರಾಂತ್ಯದ ಬೇಡ ನಾಯಕರನ್ನು ರಾಜಧಾನಿಗೆ ಕರೆಸಿ ಅವರಿಗೆ ಬಹುಮಾನಗಳನ್ನು ನೀಡಿ ಸತ್ಕರಿಸುತ್ತಿದ್ದನು. ರಾಜನ ನಂಬಿಕೆಯನ್ನು ಬಳಸಿಕೊಳ್ಳುತ್ತಿದ್ದ ಬೇಡನಾಯಕರು ನೆರೆ ರಾಜ್ಯದವರನ್ನು, ಶತ್ರುಗಳನ್ನು ಸುಳಿಯದಂತೆ ಮಾಡುತ್ತಿದ್ದರು. ಹಾಗೂ ದರೋಡೆಕೋರರನ್ನು ಮಟ್ಟ ಹಾಕುತ್ತಿದ್ದರು. ಕೃಷ್ಣದೇವರಾಯನ ಕಾಲದಲ್ಲಿ ಬೇಡ ತಳವಾರರೇ ಹೆಚ್ಚಿನ ಸಂಖ್ಯೆಯಲ್ಲಿ ಸೈನಿಕರಾಗಿ ಸೇವೆಯನ್ನು ಸಲ್ಲಿಸಿರುವುದಕ್ಕೆ ಸಾಕಷ್ಟು ನಿದರ್ಶನಗಳಿವೆ.

ಎರಡನೆಯ ದೇವರಾಯನ ಕಾಲದಿಂದ ಮುಂದುವರಿದುಕೊಂಡು ಬಂದಿರುವ ತಳವಾರ ವ್ಯವಸ್ಥೆಯು ಕೃಷ್ಣದೇವರಾಯನ ಕಾಲದಲ್ಲಿ ಇನ್ನಷ್ಟು ಬಿಗಿಯಾಗಿ ತನ್ನ ದಕ್ಷತೆಯನ್ನು ಹೆಚ್ಚಿಸಿಕೊಂಡಿತು. ತಳವಾರರು ಗಸ್ತು ಹಾಕಲು ಅನುಕೂಲವಾಗುವಂತೆ ರಾಜಧಾನಿಯನ್ನು ಪಾಳೆಯಂ, ಪಾಳ್ಯ, ಮರ

ಎಂಬ ವಿಭಾಗಗಳಾಗಿ ವಿಂಗಡಿಸಲಾಗಿತ್ತು. ಪ್ರತಿಯೊಂದು ಪಾಳೆಯಗಳ ಉಸ್ತುವಾರಿಯನ್ನು ಒಬ್ಬೊಬ್ಬ ತಳವಾರನಿಗೆ ವಹಿಸಲಾಗುತ್ತಿತ್ತು. ಕೃಷ್ಣದೇವರಾಯನು ಜಾರಿಗೆ ತಂದ ಈ ವ್ಯವಸ್ಥೆಯನ್ನು ಅನಂತರ ಇಮ್ಮಡಿ ವೆಂಕಟನು ಅನುಸರಿಸಿದನು. ಈತ ತನ್ನ ರಾಜಧಾನಿಯಾದ ಚಂದ್ರಗಿರಿಯನ್ನು ೭೭ ಪಾಳೆಯಗಳಾಗಿ ವಿಭಾಗಿಸಿ ಕಾವಲು ವ್ಯವಸ್ಥೆಯನ್ನು ಬಲಪಡಿಸಿದನು.[೨೪] ವಿಜಯನಗರ ಕಾಲದಲ್ಲಿ ಪಾಳೆಯ ಅಥವಾ ಪಾಳೆಯಂ ಎಂಬುದು ಅವಶ್ಯಕತೆಗೆ ಅನುಗುಣವಾಗಿ ವಿವಿಧ ರೀತಿಯಲ್ಲಿ ಬಳಕೆಯಲ್ಲಿತ್ತು ಎಂದು ಹೇಳಬಹುದು.

ವಿಜಯನಗರ ಕಾಲದಲ್ಲಿ ಪ್ರಾದೇಶಿಕ ಮಟ್ಟದಲ್ಲಿ ಅಮರನಾಯಕರಾಗಿರುತ್ತಿದ್ದವರು ತಮ್ಮ ಆಳ್ವಿಕೆಗೆ ಒಳಪಟ್ಟು ಭೂ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಸಾಕಷ್ಟು ಶ್ರಮವಹಿಸುತ್ತಿದ್ದರು. ಕಾಡು ಮೇಡುಗಳನ್ನು ಸಮತಟ್ಟುಗೊಳಿಸಿ ಬಂಜರು ಭೂಮಿಯನ್ನು ಕೃಷಿಯೋಗ್ಯ ಭೂಮಿಯಾಗಿಸಿ ಅನೇಕ ಕೆರೆ–ಕಾಲುವೆಗಳನ್ನು ನಿರ್ಮಿಸುತ್ತಿದ್ದರು. ತಮ್ಮದೇ ಆದ ಸ್ವಯಂ ಆಡಳಿತವನ್ನು ರೂಪಿಸಿಕೊಂಡು ತೆರಿಗೆಗಳನ್ನು ವಿಧಿಸಿ ಆರ್ಥಿಕವಾಗಿ ಪ್ರವರ್ಧಮಾನಕ್ಕೆ ಬರುತ್ತಿದ್ದರು. ತಮ್ಮ ಸ್ಥಾನಮಾನಗಳು ಹೆಚ್ಚಿಸಿಕೊಳ್ಳುತ್ತಿದ್ದರು. ತಾವು ಹೊರಡಿಸುವ ಶಾಸನಗಳಲ್ಲಿ ತಮ್ಮನ್ನು ನಾಯಕರೆಂದು, ಮಹಾನಾಯಕಾಚಾರ್ಯರೆಂದು, ನಾಯಕ ಶಿರೋಮಣಿಗಳೆಂದು, ನಾಡಪ್ರಭುಗಳೆಂದೂ, ಮಹಾನಾಡಪ್ರಭುಗಳೆಂದೂ, ಒಡೆಯರೆಂದು, ಗೌಡರೆಂದೂ ಕರೆದುಕೊಳ್ಳುತ್ತಿದ್ದರು. ವಿಜಯನಗರ ಕಾಲದಲ್ಲಿ ನಾಯಕ, ಗೌಡ, ರಾಜ ಎಂಬ ಬಿರುದುಗಳು ಅವರಿಗೆ ಪ್ರಾಪ್ತವಾಗುತ್ತಿದ್ದ ಗ್ರಾಮಸಂಖ್ಯೆಯನ್ನು ಅವಲಂಬಿಸಿತ್ತು. ಉದಾಹರಣೆಗೆ ಒಡೆಯರು ಮೂವತ್ತುಮೂರು ಗ್ರಾಮಗಳಿಗೆ ಅಧಿಪತಿಗಳಾಗಿದ್ದರೆ, ನಾಯಕರು ಇಪ್ಪತ್ತು ಗ್ರಾಮಗಳಿಗೆ ಒಡೆಯರಾಗುತ್ತಿದ್ದರು.[೨೫] ವಿಜಯನಗರದ ಸಾಮ್ರಾಜ್ಯವನ್ನು ದುರ್ಬಲ ಅರಸರು ಪಾಲಿಸುವಾಗ ಈ ನಾಯಕರು ತಮ್ಮನ್ನು ರಾಜರೆಂದು ಪ್ರಭುಗಳೆಂದು ಕರೆದುಕೊಂಡಿರುವ ನಿದರ್ಶನಗಳು ಇತಿಹಾಸದಲ್ಲಿ ದಾಖಲಾಗಿವೆ. ಉದಾಹರಣೆಗೆ ಮೈಸೂರಿನ ಒಡೆಯರ ಕಾಲಕ್ಕೆ ಸಲ್ಲುವ ಗುಂಡ್ಲುಪೇಟೆಯ ಶಾಸನವೊಂದು (ಶಾಸನ ಸಂಖ್ಯೆ –೧೨೧) ಅರವೀಡು ಮನೆತನದ ವೆಂಕಟಪತಿ ದೇವನು ವಿಜಯನಗರವನ್ನು ಪಾಲಿಸುವಾಗ ಶ್ರೀಮಂನ್‌ಮಹಾ ಮೈಸೂರು ಅಧಿಪ ನರಸರಾಜು ಅಯ್ಯನವರ ದೊರೆತನಕ್ಕೆ ಪಾಲಿಸಿದ ತೆರಕಾಣಂಬಿ ಸೀಮೆ ಎಂಬ ವಿವರಗಳು ದಾಖಲಾಗಿವೆ. ಹೀಗೆ ದುರ್ಬಲರಾದ ಅರವೀಡು ಮನೆತನದ ಶಾಸನಗಳಲ್ಲಿ ಈ ರೀತಿಯ ದೊರೆತನ ಪ್ರಭುತನದ ಉಲ್ಲೇಖಗಳು ಸಾಮಂತ ನಾಯಕರು ಪ್ರಬಲರಾಗಿ ಬೆಳೆಯುವುದನ್ನು ಸೂಚಿಸುತ್ತದೆ. ಅರವೀಡು ವಂಶವೂ ಸಂಪೂರ್ಣವಾಗಿ ಪತನವಾದ ಮೇಲೆ ಈಗಾಗಲೇ ಸಾಕಷ್ಟು ಶಕ್ತಿ ಸಾಮರ್ಥ್ಯಗಳನ್ನು ವೃದ್ಧಿಸಿಕೊಂಡು ಆರ್ಥಿಕವಾಗಿ ಬಲಾಢ್ಯರಾಗಿದ್ದ ರಾಜಕೀಯವಾಗಿ ಮೇಲೇರುವ ಹವಣಿಕೆಯಲ್ಲಿದ್ದ ನೂರಾರು ಪಾಳೆಯಗಾರ ಮನೆತನಗಳು ಸ್ವತಂತ್ರಗೊಂಡವು. ಅವುಗಳಲ್ಲಿ ಪ್ರಬಲ ಪಾಳೆಯಗಾರರೆಂದರೆ ಚಿತ್ರದುರ್ಗ ನಾಯಕರು, ಕೆಳದಿಯ ನಾಯಕರು, ಹಾಗಲವಾಡಿ ನಾಯಕರು, ಯಲಹಂಕದ ನಾಡಪ್ರಭುಗಳು, ಬಸವಾಪಟ್ಟಣ ಪಾಳೆಯಗಾರರು, ಉಮ್ಮತ್ತೂರಿನ ಪಾಳೆಯಗಾರರು, ಸುಗಟೂರಿನ ಗೌಡರು, ಮೈಸೂರಿನ ಒಡೆಯರು, ಕನಕಗಿರಿ ನಾಯಕರು, ಸುರಪುರದ ನಾಯಕರು,

ಮಿಡಿಗೇಶಿ ಮಹಾಪ್ರಭುಗಳು, ಮಧುಗಿರಿಯ ಪಾಳೆಯಗಾರರು, ಗುಮ್ಮನಾಯಕನ ಪಾಳೆಯಗಾರರು ಪ್ರಮುಖರಾಗಿದ್ದಾರೆ.

೬.೨ ಅಮರನಾಯಕ ವ್ಯವಸ್ಥೆಯ ಸ್ಥಿತ್ಯಂತರದ ಫಲಿತಗಳು

ಕ್ರಿ.ಶ. ಹದಿನೇಳನೆಯ ಶತಮಾನದ ಅರವೀಡು ಮನೆತನದ ಅಧಿಕಾರದ ಅವಧಿಯಲ್ಲಿ ವಿಜಯನಗರದ ಸಾರ್ವಭೌಮಾಧಿಕಾರವು ಸಂಪೂರ್ಣವಾಗಿ ಪತನಗೊಂಡಿತು. ಕ್ರಿ.ಶ. ೧೫೬೫ರ ರಕ್ಕಸ ತಂಗಡಿ ಯುದ್ಧದ ನಂತರ ಬಹುತೇಕ ಅಮರನಾಯಕರು ವಿಜಯನಗರದ ಒಕ್ಕೂಟದಿಂದ ಹೊರನಡೆದಿದ್ದರು. ಹಾಗೂ ಸ್ವತಂತ್ರ ಪಾಳೆಯಗಾರರೆಂದು ಘೋಷಿಸಿಕೊಂಡರು. ಅರವೀಡು ಮನೆತನದ ರಾಮರಾಯನ ಮರಣವು ವಿಜಯನಗರದ ರಾಜಕೀಯ ಶಕ್ತಿಯನ್ನು ಮಣ್ಣುಪಾಲು ಮಾಡಿತು. ರಾಮರಾಯನು ರಕ್ಕಸ ತಂಗಡಿ ಯುದ್ಧದಲ್ಲಿ ಕೊಲೆಯಾದ ನಂತರ ಅವನ ತಮ್ಮ ತಿರುಮಲರಾಯನು ಪೆನುಗೊಂಡೆಗೆ ಪಲಾಯನ ಮಾಡಿದನು. ಈ ಯುದ್ಧ ಜರುಗಿದ ಮೂರನೆಯ ದಿನವೇ ಮುಸ್ಲಿಂ ಸೈನಿಕರು ವಿಜಯನಗರವನ್ನು ಧ್ವಂಸ ಮಾಡಿ ಘೋರಕೃತ್ಯಗಳನ್ನು ಎಸಗಿ ಸಂಪತ್ತನೆಲ್ಲ ಕೊಳ್ಳೆಹೊಡೆದುಕೊಂಡು ಹೋದರು. ಸುತ್ತಮುತ್ತಲು ಇದ್ದವರು ಲೂಟಿ ಮಾಡಿಕೊಂಡು ವಿಜಯನಗರವನ್ನು ಹಾಳು ಮಾಡಿದರು. ಉಳಿದ ಪುರವಾಸಿಗಳು ಆ ಊರು ಬಿಟ್ಟು ತಮಗೆ ಅನುಕೂಲವಿದ್ದ ಕಡೆ ಓಡಿಹೋದರು. ವಿಜಯನಗರವು ವಿಜಯ ಸ್ಥಾನವಾಯಿತು.[೨೬] ವಿಜಯನಗರ ಸಾಮ್ರಾಜ್ಯಕ್ಕೆ ಬಂದೊದಗಿದ ಇಂತಹ ವಿಷಮ ಪರಿಸ್ಥಿತಿಯಲ್ಲಿ ಬಹುತೇಕ ಅಮರನಾಯಕರು ಸ್ವತಂತ್ರರಾಗಿಬಿಟ್ಟರು. ತಿರುಮಲರಾಯನು ವಿಜಯನಗರದ ಆಡಳಿತವನ್ನು ಪುನರ್ ಪ್ರತಿಷ್ಠಾಪನೆ ಮಾಡಲು ಪ್ರಯತ್ನಿಸಿದರೂ ಸಂಪೂರ್ಣವಾಗಿ ವಿಫಲಗೊಂಡನು. ವಿಜಯನಗರ ಕಾಲದಲ್ಲಿ ಬಹುಸಂಖ್ಯಾತರಾಗಿದ್ದ ಹಿಂದೂ ಧರ್ಮದ ವಿವಿಧ ಸಮುದಾಯಗಳು ಅಮರನಾಯಕತವನ್ನು ಪಡೆದುಕೊಂಡು ತಮ್ಮ ಶಕ್ತಿ, ನಿಷ್ಠೆ, ಬೆಂಬಲವನ್ನು ವಿಜಯನಗರಕ್ಕೆ ಸಮರ್ಪಿಸಿದ್ದವು. ಆದರೆ ವಿಜಯನಗರದ ಆಂತರಿಕ ದೌರ್ಬಲ್ಯಗಳು, ಅತಿಯಾದ ಬಹುಮನಿ ರಾಜ್ಯಗಳೊಂದಿಗಿನ ಬಾಂಧವ್ಯಗಳು ವಿಜಯನಗರಕ್ಕೆ ಮುಳುವಾಗಿ ರಕ್ಕಸ ತಂಗಡಿ ಯುದ್ಧದಲ್ಲಿ ಮುಸ್ಲಿಂ ಸುಲ್ತಾನರ ಒಕ್ಕೂಟದ ಮುಂದೆ ಸೋಲುವಂತೆ ಮಾಡಿತು. ಮುಸ್ಲಿಂ ಸುಲ್ತಾನರ ಕುಟಿಲ ರಾಜಕೀಯ ನಡೆಗಳು, ದಬ್ಬಾಳಿಕೆಗಳು ವಿಜಯನಗರವನ್ನು ವಿನಾಶದ ಅಂಚಿಗೆ ನೂಕಿದವು. ಮುಸ್ಲಿಂ ಸುಲ್ತಾನರ ವಿರುದ್ಧ ಸೋತ ವಿಜಯನಗರಕ್ಕೆ ಹಿಂದು ಸಮುದಾಯದ ಅಮರನಾಯಕರು ಪುನಃ ಬೆಂಬಲವನ್ನು ನೀಡಲಿಲ್ಲ. ಹೀಗಾಗಿ ವಿಜಯನಗರವು ಸಾಮಂತರ ಸಂಪೂರ್ಣ ಬೆಂಬಲವನ್ನು ಕಳೆದುಕೊಂಡು ರಾಜಕೀಯವಾಗಿ, ಪ್ರಾದೇಶಿಕವಾಗಿ, ಆರ್ಥಿಕವಾಗಿ ಕುಗ್ಗತೊಡಗಿತು. ಬದಲಾದ ರಾಜಕೀಯ ಸನ್ನಿವೇಶಗಳು ನಾಡಿನ ಇತಿಹಾಸದ ಮೇಲೆ ಗಂಭೀರ ಪರಿಣಾಮಗಳನ್ನು ಉಂಟುಮಾಡಿದವು. ಅಮರನಾಯಕ ವ್ಯವಸ್ಥೆಯ ಸ್ಥಿತ್ಯಂತರದ ಫಲಿತಗಳು ೧೭ ಮತ್ತು ೧೮ನೆಯ ಶತಮಾನದವರೆಗೂ ಮುಂದುವರಿದವು. ಈ ವ್ಯವಸ್ಥೆಯಲ್ಲಿ ಉಂಟಾದ ಕೆಲವು ಸ್ಥಿತ್ಯಂತರದ ಫಲಿತಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದು.

ಎ. ರಾಜಕೀಯ ಸ್ಥಿತ್ಯಂತರದ ಫಲಿತಗಳು

೧. ೧೫೬೪-೬೫ರ ರಕ್ಕಸಗಿ ತಂಗಡಿಗಿ ಯುದ್ಧದ ನಂತರ ಭೌಗೋಳಿಕವಾಗಿ ಅಮರನಾಯಕರೆಲ್ಲರೂ ತಮ್ಮ ತಮ್ಮ ಆಳ್ವಿಕೆಯ ಪ್ರದೇಶದಲ್ಲಿಯೂ ಸ್ಥಿರವಾಗಿ ನೆಲೆನಿಂತರು. ಇದಕ್ಕೆ ಕಾರಣವಾಗಿದ್ದು ವಿಜಯನಗರ ಕಾಲದಲ್ಲಿ ಇವರು ಕಟ್ಟಿಕೊಂಡ ಕೋಟೆ, ಅರಮನೆ, ಗುರುಮನೆ, ಮಠಗಳು, ಮದ್ದುಗುಂಡುಗಳ ಕಾರ್ಯಗಾರಗಳು, ಸ್ವತಂತ್ರ ಸೈನ್ಯ ಮುಂತಾದವುಗಳ ಸಹಾಯದಿಂದ ಇವರು ಭೌಗೋಳಿಕವಾಗಿ ಒಂದು ಭೂ ಪ್ರದೇಶದ ಮೇಲೆ ಸ್ವಾಯತ್ತತೆಯನ್ನು ಸಾಧಿಸಿ ತಮ್ಮ ರಾಜಕೀಯ ಜೀವನದಲ್ಲಿ ಸ್ಥಿರತೆಯನ್ನು ಪಡೆಯಲು ಸಾಧ್ಯವಾಯಿತು.

೨. ಮೂಲತಃ ಕರ್ನಾಟಕದಲ್ಲಿ ಬೇಡ ಸಮುದಾಯಕ್ಕೆ ಸೇರಿದ ಬಹುತೇಕ ಅಮರನಾಯಕರು ಬದಲಾದ ರಾಜಕೀಯ ಸ್ಥಿತ್ಯಂತರಗಳ ಫಲವಾಗಿ ಸ್ವತಂತ್ರಗೊಂಡರು. ಬೇಡ ಸಮುದಾಯಕ್ಕೆ ಸೇರಿದ್ದ ಬಹುತೇಕ ಅಮರನಾಯಕರು ವಿಜಯನಗರದ ಅರಸರಿಗೆ ಅತ್ಯಂತ ನಿಕಟವರ್ತಿಗಳಾಗಿದ್ದರು. ಸಾಮ್ರಾಜ್ಯದ ಆಯಕಟ್ಟಿನ ಭಾಗಗಳಲ್ಲಿ ಬೇಡರಿಗೆ ಅಮರನಾಯಕತನವನ್ನು ನೀಡುವುದರ ಮೂಲಕ ಅವರಿಂದ ರಕ್ಷಣೆ ಮತ್ತು ನಿಷ್ಠೆಯನ್ನು ವಿಜಯನಗರದ ಅರಸರು ಪಡೆಯುತ್ತಿದ್ದರು. ವಿಜಯನಗರದ ಪತನದವರೆಗೂ ಈ ವ್ಯವಸ್ಥೆ ಹಾಗೆಯೇ ಮುಂದುವರೆದಿತ್ತು. ಆದರೆ ವಿಜಯನಗರೋತ್ತರ ಕಾಲದಲ್ಲಿ ಬದಲಾದ ರಾಜಕೀಯ ಸನ್ನಿವೇಶಗಳಿಗೆ ತಕ್ಕಂತೆ ಅಮರನಾಯಕ ಮನೆತನದ ಪಾಳೆಯಗಾರರು ಬಿಜಾಪುರದ ಆದಿಲ್‌ಷಾಹಿಗಳಿಗೆ, ನಿಜಾಮರಿಗೆ, ಹೈದರಾಲಿಗೆ, ಮರಾಠರಿಗೆ, ಮೈಸೂರು ಒಡೆಯರಿಗೆ ಅಧೀನರಾಗುತ್ತ ಕಪ್ಪ ಕಾಣಿಕೆಗಳನ್ನು ನೀಡುತ್ತ ತಮ್ಮ ರಾಜಕೀಯ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸದಾ ಸಂಘರ್ಷಗಳಲ್ಲಿ ತೊಡಗಿಕೊಳ್ಳಬೇಕಾಯಿತು. ಹೀಗಾಗಿ ಅಮರನಾಯಕರಾಗಿದ್ದಾಗ ರಾಜಕೀಯವಾಗಿ ವಿಜಯನಗರಕ್ಕಷ್ಟೇ ಅಧೀನರಾಗಿದ್ದ ನಾಯಕರು ಈ ಸ್ಥಿತ್ಯಂತರಗಳ ಫಲವಾಗಿ ರಾಜಕೀಯವಾಗಿ ಅಸ್ಥಿರತೆಯನ್ನು ಹೊಂದಬೇಕಾಯಿತು. ಹಾಗೂ ತಮ್ಮ ರಾಜ್ಯಗಳನ್ನು ಕಾಪಾಡಿಕೊಳ್ಳಲು ನಿರಂತರವಾದ ಯುದ್ಧಗಳಲ್ಲಿ ತೊಡಗಬೇಕಾಯಿತು.

೩. ೧೬ನೆಯ ಶತಮಾನದ ಕೊನೆಯ ಭಾಗದಲ್ಲಿ ವಿಜಯನಗರವು ಪತನ ಹೊಂದಿದ ನಂತರ ಅಮರನಾಯಕರು ಸ್ವಂತಂತ್ರರಾಗಿ ತಮ್ಮದೇ ಆದ ಸಂಸ್ಥಾನಗಳನ್ನು ರೂಪಿಸಿಕೊಂಡರು. ಆದರೆ ಕೇವಲ ತಮಗಿದ್ದ ಸೇನಾ ಬಲವೊಂದರಿಂದಲೇ ರಾಜಕೀಯ ನೆಲೆಗಾಗಿ ಹೋರಾಡುವ ಸ್ಥಿತಿಗೆ ತಲುಪಿದರು. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಕೆಳದಿ, ಯಲಹಂಕ, ಮೈಸೂರು, ಚಿತ್ರದುರ್ಗ, ನಿಡುಗಲ್ಲುಗಳಂತಹ ಬಲಿಷ್ಠ ಪಾಳೆಯಪಟ್ಟುಗಳ ಉಪಟಳಕ್ಕೆ ಹಲವಾರು ದುರ್ಬಲ ಪಾಳೆಯಪಟ್ಟುಗಳು ಅವನತಿಯಾದವು. ಇಲ್ಲವೇ ಕೆಲವು ಪಾಳೆಯಪಟ್ಟುಗಳು ಬಲಿಷ್ಠ ಪಾಳೆಯಪಟ್ಟುಗಳಿಗೆ ಅಧೀನವಾಗಿ ಮುಂದುವರಿದವು. ಇಲ್ಲವೇ ಬಲಿಷ್ಠ ಪಾಳೆಯಪಟ್ಟುಗಳೊಂದಿಗೆ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಂಡು ತಮ್ಮ ಅಸ್ತಿತ್ವವನ್ನು ಮುಂದುವರಿಸಿಕೊಂಡು ಹೋಗಲು ಪ್ರಯತ್ನಿಸಿದವು. ಉದಾ: ಮೈಸೂರು ಒಡೆಯರೊಂದಿಗೆ ಕಳಲೆ ಮನೆತನದ ದಳವಾಯಿಗಳು

ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಂಡರು. ಚಿತ್ರದುರ್ಗದ ಪಾಳೆಯಗಾರರೊಂದಿಗೆ ಗುಡೇಕೋಟೆ ನಾಯಕನಹಟ್ಟಿ, ಮತ್ತೋಡು, ಕನಕಗಿರಿ ಮೊದಲಾದ ಅಮರನಾಯಕ ಮನೆತನದವರು ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಂಡು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡರು. ರಾಜಕೀಯ ಏರುಪೇರುಗಳ ಆ ದಿನಗಳಲ್ಲಿ ದುರ್ಬಲ ನಾಯಕ ಮನೆತನಗಳಿಗೆ ಅದು ಅನಿವಾರ್ಯವೂ ಆಗಿತ್ತು.

೪. ೧೬ನೆಯ ಶತಮಾನದ ಉತ್ತರಾರ್ಧದಲ್ಲಿ ತಲೆ ಎತ್ತಿ ನಿಂತುಕೊಂಡ ಅರವೀಡು ಸಂತತಿಯ ಆರಂಭ ಕಾಲದಲ್ಲಿಯೇ ಬಹುತೇಕ ಅಮರನಾಯಕರು ವಿಜಯನಗರದ ಮೇಲೆ ಪೂರ್ಣಪ್ರಮಾಣದ ವಿಶ್ವಾಸವನ್ನು ಕಳೆದುಕೊಂಡರು. ಹಾಗೂ ಈ ಅವಧಿಯಲ್ಲಿ ಕರ್ನಾಟಕದಲ್ಲಿ ಬಹುತೇಕ ನಾಯಕ ಮನೆತನಗಳು ಸ್ವತಂತ್ರವಾದ ರಾಜಕೀಯ ಅಸ್ತಿತ್ವವನ್ನು ಪಡೆದುಕೊಂಡು ಪ್ರಾದೇಶಿಕವಾಗಿ ಸ್ಥಳೀಯ ಮಟ್ಟದಲ್ಲಿ ತಮ್ಮ ವಂಶಪಾರಂಪರ್ಯವಾದ ಆಡಳಿತವನ್ನು ರೂಪಿಸಿಕೊಂಡವು. ಇದು ಅಮರನಾಯಕ ವ್ಯವಸ್ಥೆಯ ಸ್ಥಿತ್ಯಂತರದ ಬಹುಮುಖ್ಯ ಫಲಿತವೆಂದು ಗುರುತಿಸಬಹುದು. ಹೀಗೆ ಸ್ವತಂತ್ರವಾಗಿ ರೂಪುಗೊಂಡ ನಾಯಕ ಮನೆತನಗಳೇ ಮುಂದೆ ಪಾಳೆಯಪಟ್ಟುಗಳಾಗಿ ಪಾಳೆಯಗಾರ ಎಂಬ ಸ್ಥಳೀಯ ಅರಸರುಗಳಾಗಿ ಐಡೆಂಟಿ ಪಡೆಯಲು ಸಾಧ್ಯವಾಯಿತು.

೫. ರಕ್ಕಸ ತಂಗಡಿ ಯುದ್ಧವು ಇಡೀ ವಿಜಯನಗರದ ರಾಜಕೀಯ ವ್ಯವಸ್ಥೆಯನ್ನು ಬುಡಮೇಲು ಮಾಡಿತು. ಅರವೀಡು ಮನೆತನವು ಚದುರಿಹೋದ ತನ್ನ ರಾಜಕೀಯ ಭೂಪಟವನ್ನು ಪುನರ್‌ರಚಿಸುವ ಪ್ರಯತ್ನಕ್ಕೆ ಕೈ ಹಾಕದೇ ಹಲವಾರು ರಾಜಕೀಯ ಸಂದಿಗ್ಧತೆಗಳಿಗೆ ಬಲಿಯಾಗಬೇಕಾಯಿತು. ಅರವೀಡು ಮನೆತನದ ಅರಸರು ತಮ್ಮ ಹಿಂದಿನ ರಾಜರಂತೆಯೇ ಅಮರನಾಯಕ ಪದ್ಧತಿಯನ್ನು ಮುಂದುವರಿಸಿದರು. ಆದರೆ ಈ ನಾಯಕ ವ್ಯವಸ್ಥೆಯಲ್ಲಿ ಸಣ್ಣ ಬದಲಾವಣೆಗಳನ್ನು ಮಾಡಿಕೊಂಡರು. ಅದು ಅವರಿಗೆ ರಾಜಕೀಯವಾಗಿ ಅನಿವಾರ್ಯವಾಗಿತ್ತು. ವಿಜಯನಗರದ ಆರಂಭ ರಾಜಮನೆತನಗಳಾದ ಸಂಗಮ, ಸಾಳ್ವ, ತುಳುವ, ವಂಶದ ಆಳ್ವಿಕೆಯಲ್ಲಿ ಅಮರನಾಯಕರು ಪ್ರಾಂತೀಯ ಮಟ್ಟದಲ್ಲಿ ನಾಡು, ಸೀಮೆಗಳ ಮೇಲ್ವಿಚಾರಕರಾಗಿ ನಿಯುಕ್ತಿಗೊಳ್ಳುತ್ತಿದ್ದರು. ಕೆಲವೊಮ್ಮೆ ರಾಜ್ಯಪಾಲರಾಗಿ ನಿಯುಕ್ತಿಗೊಳ್ಳುತ್ತಿದ್ದ ಮಹಾಮಂಡಲೇಶ್ವರರಿಗೂ, ಮಹಾ ದಂಣನಾಯಕರಿಗೂ ಅಮರನಾಯಕತನಕ್ಕಾಗಿ ಸೀಮೆಗಳನ್ನು ಕೊಡಲಾಗುತ್ತಿತ್ತು. ಹಾಗೂ ಅಮರನಾಯಕರನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವರ್ಗಾವಣೆಯನ್ನು ಮಾಡಲಾಗುತ್ತಿತ್ತು. ವರ್ಗಾವಣಾ ನೀತಿಯನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿತ್ತು. ಇದರ ಹಿಂದಿನ ಉದ್ದೇಶ ರಾಜಕೀಯವಾಗಿ ವಂಶಪಾರಂಪರ್ಯವಾಗಿ ನಾಯಕರನ್ನು ಬೆಳೆಯಲು ಬಿಡುತ್ತಿರಲಿಲ್ಲ. ಆದರೆ ವಿಜಯನಗರದ ಅಧಿಕಾರವು ಕ್ಷೀಣಿಸುವ ಹಂತದಲ್ಲಿ ವಿಜಯನಗರದ ಸಿಂಹಾಸನದ ಗದ್ದುಗೆಯನ್ನು ಏರಿದಂತಹ ಅರವೀಡು ಮನೆತನವು ಸಂಪೂರ್ಣವಾಗಿ ದುರ್ಬಲ ಮನೆತನವಾಗಿತ್ತು. ಈಗಾಗಲೇ ರಾಜಕೀಯವಾಗಿ ಸಾಕಷ್ಟು ಶಕ್ತಿಯನ್ನು ವೃದ್ಧಿಸಿಕೊಂಡಿದ್ದ ಅಮರನಾಯಕರಿಗೆ ತಲೆಬಾಗುವಂತ ಹೀನ ಪರಿಸ್ಥಿತಿ ಅರವೀಡು ಮನೆತನದ ಕೆಲ ಅರಸರಿಗೆ ಅನಿವಾರ್ಯವಾಗಿತ್ತು.

ಇವರು ಅಮರನಾಯಕ ವ್ಯವಸ್ಥೆಯಲ್ಲಿನ ವರ್ಗಾವಣಾ ನೀತಿಯನ್ನು ರದ್ದುಗೊಳಿಸಿ ಆಯಾ ಸ್ಥಳದಲ್ಲಿ ಆಳ್ವಿಕೆ ಮಾಡುತ್ತಿದ್ದ ಅಮರನಾಯಕರನ್ನು ಅಧಿಕಾರದಲ್ಲಿ ಹಾಗೆಯೇ ಮುಂದುವರಿಯಲು ಅವಕಾಶ ಮಾಡಿಕೊಟ್ಟರು ಹಾಗೂ ವಂಶವಾರಂಪರ್ಯವಾಗಿ ನಾಯಕತ್ವವನ್ನು ನೀಡಿದರು. ಇದು ಮುಂದಿನ ಹಂತದಲ್ಲಿ ಅಮರನಾಯಕರು ರಾಜಕೀಯ ಸ್ಥಿತ್ಯಂತರಗಳ ಫಲವಾಗಿ ಪಾಳೆಯಗಾರರಾಗಿ ಕಿರು ರಾಜಮನೆತನಗಳನ್ನು ರೂಪಿಸಿಕೊಳ್ಳಲು ಕಾರಣವಾಯಿತು.

೭. ವಿಜಯನಗರವು ರಕ್ಕಸ ತಂಗಡಿ ಯುದ್ಧದಲ್ಲಿ ಸೋತ ನಂತರ ಅಂದರೆ ಕ್ರಿ.ಶ. ೧೫೬೫ರ ನಂತರ ಅಮರನಾಯಕರು ಕ್ರಿ.ಶ. ೧೭–೧೮ನೇ ಶತಮಾನದಲ್ಲಿ ನಡೆದ ರಾಜಕೀಯ ಘಟನೆಗಳ ಮುಂಚೂಣಿಯಲ್ಲಿದ್ದರು. ಅಮರನಾಯಕ ರೂಪವನ್ನು ಕಳಚಿ ಪಾಳೆಯಗಾರ ವೇಷ ಧರಿಸಿದ ನಾಯಕ ವಂಶಗಳು ಸಂಪೂರ್ಣವಾಗಿ ಯುದ್ಧ ಚಟುವಟಿಕೆಗಳಲ್ಲಿ ತೊಡಗಿಕೊಂಡವು. ಪ್ರಾದೇಶಿಕ ಭೂಭಾಗಳ ವಿಸ್ತರಣೆಯೇ ಈ ಯುದ್ಧ ಚಟುವಟಿಕೆಗಳ ಪ್ರಧಾನ ಅಂಶವಾಗಿತ್ತು. ಪಾಳೆಯಪಟ್ಟುಗಳ ಅಸ್ತಿತ್ವ ಮುಂದುವರಿಕೆಗಾಗಿ ಇವು ದ್ವೇಷ, ಅಸೂಯೆ ಕ್ರೌರ್ಯಗಳಿಂದ ಕಚ್ಚಾಡುತ್ತಲೇ ಇದ್ದವು. ಇದೇ ಸಮಯದಲ್ಲಿ ಪಾಳೆಯಗಾರರು ತಮ್ಮ ನೆರೆಹೊರೆಯ ಪಾಳೆಯಗಾರರನ್ನು ರಾಜಕೀಯವಾಗಿ ಮುಗಿಸಲು ಮಾಡಲು ಮುಸ್ಲಿಂ ಸುಲ್ತಾನರನ್ನು ಕರ್ನಾಟಕಕ್ಕೆ ಆಹ್ವಾನಿಸಿದರು. ಹೀಗಾಗಿ ೧೭ನೇ ಶತಮಾನದಲ್ಲಿ ಮೊಗಲ್ ಸೇನಾನಿ ರಣದುಲ್ಲಾಖಾನನ ದಾಳಿಗಳು ಆರಂಭಗೊಂಡವು. ರಣದುಲ್ಲಾಖಾನ್ ಮೈಸೂರಿನ ಮೇಲೆ ದಾಳಿ ಮಾಡಿದಾಗ ಹರಪನಹಳ್ಳಿ, ಕನಕಗಿರಿ, ಸಂಡೂರು, ಉಜ್ಜನಿ, ಪಾಳೆಯಗಾರರು ಖಾನನಿಗೆ ಸಹಾಯವನ್ನು ಮಾಡಿದರು. ಆದರೆ ಮುಸ್ಲಿಂ ಸುಲ್ತಾನರ ಯಾವ ಸಹಾಯ ಸಹಕಾರಗಳು ಪಾಳೆಯಗಾರರಿಗೆ ದೊರೆಯದೆ ಪಾಳೆಯಗಾರರೇ ರಣದುಲ್ಲಾಖಾನನ ದಾಳಿಗೆ ಬಲಿಯಾಗುವ ಸ್ಥಿತಿಗೆ ತಲುಪಿತು. ಪ್ರೊ. ಎಂಜಿರೊ ಅವರು ಸಮಕಾಲೀನ ರಾಜಕೀಯ ಸನ್ನಿವೇಶಗಳನ್ನು ಕುರಿತು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ.

ಪಾಳೆಯಗಾರರು ಕುಟೀಲ ಮನೋವೃತ್ತಿಯುಳ್ಳವರು, ಸ್ವಾರ್ಥಿಗಳೂ, ಸಂಕುಚಿತ ಮನಸ್ಸಿನವರು ಒಬ್ಬನ ಸಂಕಟ ಇನ್ನೊಬ್ಬನ ಸುಖ, ಒಬ್ಬನ ದೌರ್ಬಲ್ಯ ಇನ್ನೊಬ್ಬನ ಸದಾವಕಾಶವಾಗಿತ್ತು. ಅವರ ವೈಯುಕ್ತಿಕ ಈರ್ಷೆ ಹಾಗೂ ಭೂದಾಹ ಇಡೀ ಕರ್ನಾಟಕವನ್ನು ಗೊಂದಲದಲ್ಲಿ ಮುಳುಗಿಸಿತು. ತಮ್ಮ ನೆರೆಯ ರಾಜರನ್ನು ಸೋಲಿಸದೇ ಪಾಳೆಯಗಾರರು ವಿಜಾಪುರದ ಸುಲ್ತಾನ ಅಥವಾ ಗೋಲ್ಕಂಡದ ಸುಲ್ತಾನನ ಸಹಾಯದಿಂದ ಅವರನ್ನು ದ್ವಂಸ ಮಾಡಲು ಹವಣಿಸುತ್ತಿದ್ದರು. ಈ ದೇಶದ ಮುದಿ ದೊರೆಗಳು ತಮ್ಮ ದ್ವೇಷಾಸೂಯೆ ಮತ್ತು ಮುಂದಾಲೋಚನೆ ಇಲ್ಲದ ಕೆಲಸಗಳಿಂದ ತಮ್ಮ ಇಡಿ ದೇಶವನ್ನೆಲ್ಲ ಮುಸ್ಲಿಮರ ಪಾಲಿಗೆ ವಹಿಸಿಕೊಡುವಂತೆ ಕಾಣುತ್ತಿದೆ ಎಂದಿದ್ದಾರೆ.[೨೭] (ಡಾ. ಎಂ.ಕೆ ದುರುಗಪ್ಪ ಪು. ೬೦) ಒಟ್ಟಿನಲ್ಲಿ ಬಿಜಾಪುರದ ಆದಿಲ್‌ಷಾಹಿ ಸುಲ್ತಾನರು, ಗೋಲ್ಕಂಡದ ಸುಲ್ತಾನರು ರಣದುಲ್ಲಾಖಾನ್ ಇವರು ಪಾಳೆಯಗಾರರ ಸಂಪತ್ತನ್ನು ಕೊಳ್ಳೆ ಹೊಡೆಯುವುದರಲ್ಲಿ ತುಂಬಾ ಯಶಸ್ವಿಯಾದರು. ತಮ್ಮಲ್ಲಿನ ಅನ್ಯೆಕ್ಯತೆ ರಾಜಕೀಯ ಒಗ್ಗಟ್ಟಿನ ಕೊರತೆಯಿಂದಾಗಿ ನಾಯಕರು ಪತನವಾದರು.

೮. ಅಮರನಾಯಕ ವ್ಯವಸ್ಥೆಯ ಸ್ಥಿತ್ಯಂತರದ ಮತ್ತೊಂದು ಪ್ರಮುಖ ಫಲಿತಾಂಶವೆಂದರೆ ವಿಜಯನಗರವು ರಾಜಕೀಯವಾಗಿ ಅಸ್ತಂಗತವಾದದ್ದು. ಕಾರಣ ವಿಜಯನಗರದ ಆಡಳಿತ ವ್ಯವಸ್ಥೆಯ ಗರ್ಭದಿಂದ ಹೊರಬಂದ ಅಮರನಾಯಕರು ಕಾಲಕ್ರಮೇಣ ರಾಜಕೀಯವಾಗಿ ಹೆಚ್ಚು ಸಂಘಟಿತಗೊಂಡರು. ಅಮರನಾಯಕರು ರಾಜಕೀಯವಾಗಿ ಹೆಚ್ಚು ಸಂಘಟನೆಗೊಂಡಿದ್ದು ತುಳುವರ ಕಾಲದಲ್ಲಿ ತುಳು ವಂಶದ ಅರಸರಾದ ಕೃಷ್ಣದೇವರಾಯ ಮತ್ತು ಸದಾಶಿವರಾಯನ ಕಾಲದಲ್ಲಿ ನಾಯಕ ವ್ಯವಸ್ಥೆಯು ಉಚ್ಛ್ರಾಯ ಹಂತದಲ್ಲಿತ್ತು. ಕರ್ನಾಟಕವನ್ನು ಒಳಗೊಂಡಂತೆ ಆಂಧ್ರ ತಮಿಳುನಾಡುಗಳಲ್ಲಿಯೂ ಇವರ ಕಾಲ ನಾಯಕ ವ್ಯವಸ್ಥೆಯ ಪ್ರವರ್ಧಮಾನ ಕಾಲವೆಂದು ವೆಂಕಟರಮಣಯ್ಯ, ಕೃಷ್ಣಸ್ವಾಮಿ ಅಯ್ಯರ್, ಬರ್ಟನ್ ಸ್ಟೈನ್, ನೊಬರೊ ಕರಾಷಿಮಾ, ಡಿ.ಎಮ್. ಯೋಗೀಶ್ವರಪ್ಪ, ವೈ ಸುಬ್ಬರಾಯಲು, ಸಿಂಥಿಯಾ ಟಾಲ್ಬಾಟ್ ಮೊದಲಾದ ಇತಿಹಾಸಕಾರರು ಆಧಾರಗಳ ಮೂಲಕ ನಿರೂಪಿಸಿದ್ದಾರೆ. ಈ ಎಲ್ಲ ವಿದ್ವಾಂಸರ ಸಂಶೋಧನೆಗಳು ಕೃಷ್ಣದೇವರಾಯ ಮತ್ತು ಸದಾಶಿವರಾಯರ ಕಾಲದಲ್ಲಿ ಭಾರೀ ಸಂಖ್ಯೆಯಲ್ಲಿ ಅಮರನಾಯಕರನ್ನು ನೇಮಕ ಮಾಡಲಾಗಿತ್ತು ಎಂಬುದನ್ನು ದೃಢೀಕರಿಸುತ್ತವೆ. ಕೃಷ್ಣದೇವರಾಯ, ಅಚ್ಯುತರಾಯ ಮತ್ತು ಸದಾಶಿವರಾಯನ ಕಾಲದಲ್ಲಿಯೇ ನಾಯಕರು ಸ್ವತಂತ್ರ ಸಂಸ್ಥಾನಗಳನ್ನು ರೂಪಿಸಿಕೊಳ್ಳುವಷ್ಟು ರಾಜಕೀಯ ಶಕ್ತಿಯನ್ನು ಸಂಪಾದಿಸಿಕೊಂಡಿದ್ದರು. ವಿಜಯನಗರದ ರಾಜಕೀಯ ಶಕ್ತಿಯು ವೃದ್ದಿಗೊಂಡಂತೆ ಅಮರನಾಯಕರು ಕೋಟೆಗಳ ನಿರ್ಮಾಣ ಮದ್ದುಗುಂಡುಗಳ ತಯಾರಿಕೆ ಮತ್ತು ಸಂಗ್ರಹಣೆ, ರಾಜಕೀಯವಾಗಿ ಆಡಳಿತದಲ್ಲಿ ಅನುಭವಿಗಳಾಗಿದ್ದು ಅಮರನಾಯಕರು ನಿಗದಿತ ಕಾಲದಲ್ಲಿ ವಿಜಯನಗರಕ್ಕೆ ಅಗತ್ಯವಿದ್ದ ಸೈನ್ಯ ಮತ್ತು ಹಣಕಾಸಿನ ಪೂರೈಕೆಯನ್ನು ಮಾಡುತ್ತಾ ವಿಜಯನಗರಕ್ಕೆ ರಕ್ಷಕರಾದರು. ಹೀಗಾಗಿ ಕೃಷ್ಣದೇವರಾಯ, ಅಚ್ಯುತರಾಯ ಸದಾಶಿವರಾಯರು ಈ ವ್ಯವಸ್ಥೆಯಿಂದ ಮುಂದೆ ಬರಬಹುದಾದ ಗಂಭೀರ ಪರಿಣಾಮಗಳನ್ನು ಯೋಚಿಸದೇ ಅಮರನಾಯಕ ವ್ಯವಸ್ಥೆಯನ್ನು ಪೋಷಿಸಿಕೊಂಡು ಬಂದರು. ಆರ್ಥಿಕವಾಗಿ, ಸೈನಿಕ ಬಲವಾಗಿ, ತಮ್ಮೆಲ್ಲ ರಾಜಕೀಯ ಶಕ್ತಿಯನ್ನು ವೃದ್ಧಿಸಿಕೊಂಡಿದ್ದ ಅಮರನಾಯಕರಿಗೆ ಸ್ವತಂತ್ರ ರಾಜರಾಗಲು ೧೫೬೫ರ ರಕ್ಕಸಗಿ ತಂಗಡಿಗಿ ಯುದ್ಧ ಒಂದು ಅವಕಾಶವಾಗಿ ಬಂದದೊಗಿತು. ಈ ಯುದ್ಧದ ಪತನವು ಏಕಾಏಕೀ ಪಾಳೆಯಗಾರರಾಗಿ ರೂಪುಗೊಳ್ಳಲು ಕಾರಣವಾಗಿರದೇ ಈ ಸ್ಥಿತ್ಯಂತರಗಳು ತುಳುವರ ಕಾಲದಿಂದಲೇ ಆರಂಭವಾಗಿ ಅದು ಅರವೀಡು ಮನೆತನದ ಅಧಿಕಾರಾವಧಿಯಲ್ಲಿ ಸ್ಫೋಟಗೊಂಡಿತು. ಒಂದು ಕಾಲಕ್ಕೆ ವಿಜಯನಗರದ ರಾಜಕೀಯ ಸಂಘಟನೆಗೆ ಕಾರಣವಾಗಿದ್ದ ಅಮರನಾಯಕ ವ್ಯವಸ್ಥೆಯು ಬದಲಾದ ಕಾಲದಲ್ಲಿ ಅದರ ವಿಘಟನೆಗೂ ಕಾರಣವಾಯಿತು. ಒಟ್ಟಿನಲ್ಲಿ ವಿಜಯನಗರದ ವಿಘಟನೆ ಅಮರನಾಯಕರ ಸ್ಥಿತ್ಯಂತರದ ಫಲವೆಂದು ಹೇಳಬಹುದು.

೯. ವಿಜಯನಗರ ಕಾಲದಲ್ಲಿ ನಾಯಕತನವನ್ನು ಪಡೆದುಕೊಳ್ಳುತ್ತಿದ್ದ ಅಮರನಾಯಕರು ತಮ್ಮ ಆಡಳಿತ ವ್ಯಾಪ್ತಿಯ ಪ್ರದೇಶಗಳಲ್ಲಿ ಇತರ ಅಮರನಾಯಕರಂತೆ ಸಮಾನಾಂತರ ರಾಜಕೀಯ ಅಧಿಪತ್ಯವನ್ನು ಸಾಧಿಸಿದ್ದರು. ವಿಜಯನಗರಕ್ಕೆ ಅಧೀನರಾಗಿದ್ದ ಈ ಅಮರನಾಯಕರು ಯುದ್ಧಗಳ

ಸಂದರ್ಭದಲ್ಲಿ ಮುಖ್ಯ ಸೈನ್ಯಕ್ಕೆ ತಮ್ಮ ಭಾಗದ ನಿಗದಿತ ಸೇನೆಯನ್ನು ಕಳುಹಿಸುವ ಹಾಗೂ ವರ್ಷವೊಂದರಲ್ಲಿ ನಿಗದಿಪಡಿಸಿದ ಮೊತ್ತವನ್ನು ಪಾವತಿ ಮಾಡುವ ಹಾಗೂ ಸ್ಥಳೀಯ ಮಟ್ಟದಲ್ಲಿ ಕಾನೂನು ಪಾಲನೆ, ಕಂದಾಯ ವಸೂಲಿ, ನ್ಯಾಯ ತೀರ್ಮಾನ ಹೊರಡಿಸುವ ಅಧಿಕಾರಗಳನ್ನು ಹೊಂದಿದ್ದು, ಬಹುತೇಕವಾಗಿ ವಿಜಯನಗರಕ್ಕೆ ಅಧೀನನಾಗಿದ್ದಂತಹ ಸ್ಥಳೀಯ ಮಟ್ಟದ ಊಳಿಗಮಾನ್ಯ ದೊರೆಗಳೇ ಆಗಿದ್ದರು. ಇವರಿಗೆ ಸಣ್ಣ ಪ್ರಮಾಣದ (ಮಣ್ಣಿನ) ಅರಮನೆಗಳನ್ನು, ಕಲ್ಲಿನ ಕೋಟೆಗಳನ್ನು ನಿರ್ಮಿಸಿಕೊಳ್ಳಲು ವಿಜಯನಗರದವರೇ ಅನುಮತಿಯನ್ನು ನೀಡಿದ್ದರು. ಸ್ಥಳೀಯ ಮಟ್ಟದಲ್ಲಿ ಗರಿಷ್ಠ ರಕ್ಷಣೆ ಪಡೆಯಲು ಅಮರನಾಯಕರಿಗೆ ಅನುಕೂಲವಾಗುವ ಉದ್ದೇಶದಿಂದ ಕೋಟೆಗಳ ನಿರ್ಮಾಣ ಕಾರ್ಯಕ್ಕೆ ವಿಜಯನಗರದ ಅನುಮತಿಯಿತ್ತು. ಆದರೆ ಬದಲಾದ ರಾಜಕೀಯ ಸನ್ನಿವೇಶಗಳಲ್ಲಿ ವಿಜಯನಗರದ ಪತನದ ನಂತರ ಅಮರನಾಯಕರು ಪಾಳೆಯಗಾರರಾಗಿ ಸ್ವತಂತ್ರ ರಾಜರ ಸ್ಥಾನಮಾನ 'ಗಳಿಸುವಲ್ಲಿ ಕೋಟೆಗಳು ನಿರ್ಣಾಯಕ ಪಾತ್ರವಹಿಸಿದವು. ಉದಾ:- ಕೆಳದಿ, ಯಲಹಂಕ, ಚಿತ್ರದುರ್ಗ, ಹಂಡೆ, ಹರತಿ, ಗುಡೇಕೋಟೆ, ಗುಮ್ಮನಾಯಕ ಪಾಳೆಯ, ಮೈಸೂರು, ನಿಡುಗಲ್ಲು, ರತ್ನಗಿರಿ, ಬೂದಿಹಾಳು, ಮತ್ತೋಡು, ಪಾವಗಡ, ಕನಕಗಿರಿ, ಬಸವಾಪಟ್ಟಣ, ಸೀರಾ, ಮಿಡಿಗೇಶಿ, ಮೊದಲಾದ ಪಾಳೆಯಗಾರರು ಸುಭದ್ರವಾದ ಕೋಟೆ ಕೊತ್ತಲಗಳ ಸಹಾಯದಿಂದಲೇ ರಾಜ್ಯಾಡಳಿತ ನಿರ್ವಹಿಸಲು ಸಾಧ್ಯವಾಯಿತು. ವಿಜಯನಗರ ಅರಸರ ಆಳ್ವಿಕೆಯ ಅವಧಿಯಲ್ಲಿ ಕೇವಲ ಮಹಿಸೂರು ನಗರ ಎಂಬುದೊಂದು ಸಣ್ಣ ಹಳ್ಳಿಯ ಒಡೆಯನಾಗಿದ್ದ ಚಾಮರಾಜರು ಈ ಪ್ರಾಂತ್ಯದ ನಾಯಕನಾಗಿದ್ದ ಸಂದರ್ಭದಲ್ಲಿ (೧೬೧೦)ರಲ್ಲಿ ಕೊನೆಯ ವಿಜಯನಗರದ ಅರಸರು ಶ್ರೀರಂಗಪಟ್ಟಣ ಕೋಟೆಯನ್ನು ಮಾರಾಟ ಮಾಡಿದರು. ಯಲಹಂಕ ಅಮರನಾಯಕ ನಾಡಪ್ರಭು ಹಿರಿಯ ಕೆಂಪೇಗೌಡನು ಅಚ್ಯುತರಾಯನ ಆಳ್ವಿಕೆಯ ಅವಧಿಯಲ್ಲಿ ಬೆಂಗಳೂರಿನಲ್ಲಿ ಕೋಟೆಯನ್ನು ನಿರ್ಮಿಸಿದನು. ಕೆಳದಿಯ ಚೌಡಪ್ಪ ನಾಯಕರು ವಿಜಯನಗರದಿಂದ ಕೆನರಾವನ್ನು ಬಳುವಳಿಯಾಗಿ ಪಡೆದು ಕೋಟೆಯನ್ನು ನಿರ್ಮಿಸಿಕೊಂಡರು.[೨೮] ಹಂಡೆಯ ಪಾಳೆಯಗಾರ/ವಜೀರ ಹನುಮಪ್ಪನಾಯಕ ವಿಜಯನಗರದ ಅರಸ ರಾಮರಾಯನ ಅನುಮತಿಯಿಂದ ಬಳ್ಳಾರಿಯಲ್ಲಿ ಕೋಟೆಯನ್ನು ನಿರ್ಮಿಸಿಕೊಂಡನು. ಗುಡೇಕೋಟೆಯ ಪಾಳೆಯಗಾರ ಗಂಡಳನಾಯಕ ಕೃಷ್ಣದೇವರಾಯನ ಅನುಮತಿಯಿಂದ ಗುಡೇಕೋಟೆಯಲ್ಲಿ ಕೋಟೆಯನ್ನು ನಿರ್ಮಿಸಿಕೊಂಡನು. ಹೀಗೆ ಪ್ರಾಂತೀಯ ಮಟ್ಟದಲ್ಲಿ ರಾಜಕೀಯವಾಗಿ ನೆಲೆಗಳನ್ನು ಕಂಡುಕೊಂಡ ಅಮರನಾಯಕರು ಮುಂದೆ ಪಾಳೆಯಗಾರರಾಗಿ ಸ್ಥಿತ್ಯಂತರವನ್ನು ಪಡೆಯುವಲ್ಲಿ ಕೋಟೆಗಳು ನಿರ್ಣಾಯಕ ಪಾತ್ರವನ್ನು ವಹಿಸಿದವು.

೧೦. ಸುಮಾರು ಮೂರು ಶತಮಾನಗಳಿಗೂ ಅಧಿಕ ಕಾಲ ಇಡೀ ದಕ್ಷಿಣ ಭಾರತದಲ್ಲಿಯೇ ವಿಜಯನಗರವು ರಾಜಕೀಯ ಸಾರ್ವಭೌಮತ್ವವನ್ನು ಸಾಧಿಸಿತ್ತು. ವಿಜಯನಗರವು ತಾನು ಕೈಗೊಳ್ಳುತ್ತಿದ್ದ ಯುದ್ಧ-ಸಂಘರ್ಷಗಳು ಹಾಗೂ ಅಳವಡಿಸಿಕೊಂಡಿದ್ದ ಅಮರನಾಯಕ ವ್ಯವಸ್ಥೆಯಿಂದಾಗಿ ಬಹುತೇಕ ಭೂ ಭಾಗಗಳನ್ನು ಗೆದ್ದುಕೊಂಡಿತು. ಹಾಗೂ ತನಗೆ ನಿಷ್ಠರಾಗಿದ್ದಂತಹ ಅಮರನಾಯಕರಿಗೆ

ಭೂಮಿಯನ್ನು ಹಂಚುವುದರ ಮೂಲಕ ಆರ್ಥಿಕ ಮತ್ತು ಸೇನಾ ಬಲವನ್ನು ವೃದ್ಧಿಸಿಕೊಂಡಿತು ಹಾಗೂ ಪ್ರಬಲವಾಗಿ ಬೆಳೆಯತೊಡಗಿತು. ಯಾವ ಯುದ್ಧ ಸಂಘರ್ಷಗಳಿಂದ ಹಾಗೂ ನಾಯಕ ವ್ಯವಸ್ಥೆಯಿಂದಾಗಿ ರಾಜಕೀಯವಾಗಿ ಮೇಲಿನ ಹಂತಕ್ಕೆ ತಲುಪಿತ್ತೋ ಅದೇ ಯುದ್ಧ ಮತ್ತು ನಾಯಕ ವ್ಯವಸ್ಥೆಗಳು ರಕ್ಕಸಗಿ ತಂಗಡಿಗಿ ಯುದ್ಧದಲ್ಲಿ ವಿಜಯನಗರದ ನಾಶಕ್ಕೆ ಕಾರಣವಾದವು. ಈ ಯುದ್ಧದ ನಂತರ ಬೃಹತ್ ಸಾಮ್ರಾಜ್ಯವಾಗಿದ್ದ ವಿಜಯನಗರವು ತನ್ನ ಸಂಸ್ಥಾನಗಳನ್ನು ಕಳೆದುಕೊಂಡು ಸಣ್ಣ ಸಂಸ್ಥಾನವಾಗಿ ರೂಪುಗೊಂಡಿತು. ಸೀಸರ್ ಫೆಡರಿಕ್‌ರವರು ಈ ಸ್ಥಿತ್ಯಂತರವನ್ನು ಕುರಿತು ಕ್ರಿ.ಶ. ೧೫೭೦ರ ವೇಳೆಗೆ ವಿಜಯನಗರ ಸಾಮ್ರಾಜ್ಯವು ಅದರ ಹಿಂದಿನ ಆತ್ಮದ ಕರಿ ನೆರಳಾಗಿತ್ತು (a shadow of its formen self) ಎಂದಿದ್ದಾರೆ.[೨೯] ಈ ಹಿಂದಿನ ರಾಜಮನೆತನಗಳಲ್ಲಿ ಯುದ್ಧ-ಸಂಘರ್ಷಗಳು ಸಾಮಾನ್ಯವಾಗಿ ನಡೆದರೂ ಸಹ ಸಾಮ್ರಾಜ್ಯದ ಅಸ್ತಿತ್ವಕ್ಕೆ ಧಕ್ಕೆ ತರುವಂತಹ ಯುದ್ಧಗಳು ನಡೆದಿರಲಿಲ್ಲ. ಒಂದು ವೇಳೆ ನಡೆದಿದ್ದರೂ ಕೂಡ ಅವುಗಳನ್ನು ಹತ್ತಿಕ್ಕುವಂತಹ ಸಾಮರ್ಥ್ಯವು ವಿಜಯನಗರದ ಪ್ರಾದೇಶಿಕ ಮಟ್ಟದ ಅಮರನಾಯಕರ ಸೇನೆಗಿತ್ತು. ಈ ಯುದ್ಧದಲ್ಲಾದ ಬಹುದೊಡ್ಡ ದುರಂತವೆಂದರೆ ಯುದ್ಧದಲ್ಲಿ ರಾಮರಾಯನ ಮರಣ ಸೇನೆಯನ್ನು ಮುನ್ನೆಡೆಸುತ್ತಿದ್ದ ಅಮರನಾಯಕರಲ್ಲಿ ಭಾರೀ ಗೊಂದಲವನ್ನು ಉಂಟುಮಾಡಿತು. ಈ ವ್ಯವಸ್ಥೆಯ ಕುರಿತು ಸಿವೆಲ್ ಹೇಳುವಂತೆ ರಕ್ಕಸಗಿ ತಂಗಡಿಗಿ ಯುದ್ಧದಲ್ಲಿ ದಖನ್ನಿನ ಸುಲ್ತಾನರು ಸಂಪೂರ್ಣ ಜಯ ಗಳಿಸಿದರು. ಹಿಂದೂ ಸೈನವು ಓಡಿಹೋಯಿತು. ಅಲ್ಲಿನ ಅವ್ಯವಸ್ಥೆ ಎಷ್ಟಿತ್ತೆಂದರೆ ಯಾರು ಯುದ್ಧ ಮಾಡುವ ಪ್ರಯತ್ನವನ್ನು ಮಾಡಲಿಲ್ಲ; ಸೋಲು ಸಂಪೂರ್ಣವಾಗಿತ್ತು.[೩೦] ಹೀಗೆ ಯಾವ ಯುದ್ಧ ಸಂಘರ್ಷಗಳಿಂದ ಪದೋನ್ನತಿ ಗಳಿಸಿತ್ತೋ ಅದೇ ಯುದ್ಧ ಸಂಘರ್ಷಗಳಿಂದ ವಿಜಯನಗರವು ಪತನಗೊಂಡಿತು. ಬಹುತೇಕ ಅಮರನಾಯಕರು ಯುದ್ಧ ಭೂಮಿಯಿಂದ ಹೊರನಡೆದು ತಮ್ಮ ಮುಂದಿನ ರಾಜಕೀಯ ಬೆಳವಣಿಗೆಗಳ ಕಡೆಗೆ ಆಸಕ್ತಿ ವಹಿಸಿದರು. ಈ ಯುದ್ಧ ಅಮರನಾಯಕರ ಮುಂದಿನ ರಾಜಕೀಯ ಬೆಳವಣಿಗೆಗಳಿಗೆ ನಿರ್ಣಾಯಕ ತಿರುವನ್ನು ನೀಡಿತು.

ಬಿ. ಸಾಮಾಜಿಕ ಸ್ಥಿತ್ಯಂತರದ ಫಲಿತಗಳು

ವಿಜಯನಗರ ಕಾಲದಲ್ಲಿ ಸೈನಿಕರಾಗಿ, ಅಧಿಕಾರಿಗಳಾಗಿ, ಅಮರನಾಯಕರಾಗಿ ಗುರುತಿಸಿಕೊಂಡ ನಾಯಕರು ರಾಜಕೀಯ ಸ್ಥಿಂತ್ಯಂತರಗಳ ಫಲವಾಗಿ ಸ್ವತಂತ್ರ ರಾಜರಾಗಿ ಗುರುತಿಸಿಕೊಂಡರು. ಈ ಬದಲಾವಣೆಯು ಅಮರನಾಯಕರ ಸಾಮಾಜಿಕ ಸ್ಥಾನಮಾನಗಳ ಮೇಲೆಯೂ ಗುರುತರವಾದ ಪರಿಣಾಮಗಳನ್ನು ಉಂಟುಮಾಡಿದವು. ವಿಜಯನಗರ ಕಾಲದ ಸಮಾಜವು ಸಂಪೂರ್ಣವಾಗಿ ವರ್ಣಾಶ್ರಮ ಧರ್ಮದ ಮೇಲೆ ನಿಂತಿದ್ದರಿಂದ ಸಹಜವಾಗಿಯೇ ಜಾತಿ ವ್ಯವಸ್ಥೆಯು ಅಮರನಾಯಕರ ಸ್ಥಾನಮಾನಗಳ ಮೇಲೆಯೂ ಪರಿಣಾಮ ಬೀರಿತು. ಅಂದಿನ ಕಾಲದ ಸಾಮಾಜಿಕ ಸಂರಚನೆಯ ಪ್ರಧಾನ ಭಾಗಗಳಾದ ಜಾತಿ, ಕುಟುಂಬ, ಶಿಕ್ಷಣ, ಆಡಳಿತಗಳ ಮೇಲೆ ಅಮರನಾಯಕ ವ್ಯವಸ್ಥೆಯ ಸ್ಥಿತ್ಯಂತರದ ಫಲಿತಗಳನ್ನು ಈ ಕೆಳಗಿನಂತೆ ವಿಶ್ಲೇಶಿಸಬಹುದು.

೧. ಭಾರತೀಯ ಸಮಾಜದ ಯಾವುದೇ ಕಾಲಮಾನದಿಂದಲೂ ಸಾಮಾಜಿಕ ಶ್ರೇಣಿಯಲ್ಲಿ ಬ್ರಾಹ್ಮಣರ ನಂತರದ ಸ್ಥಾನ ಕ್ಷತ್ರಿಯರದ್ದು; ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ ಬ್ರಾಹ್ಮಣರದೇ ಮೇಲುಗೈಯಾಗಿತ್ತು. ವಿಜಯನಗರದ ಪತನದ ನಂತರ ರಾಜಕೀಯವಾಗಿ ಕ್ಷತ್ರಿಯ ದರ್ಜೆಗೇರಿದ ಅಮರನಾಯಕರು ತಮ್ಮದು ಕ್ಷತ್ರಿಯ ಸ್ಥಾನಮಾನವೆಂದು ಹೇಳಿಕೊಂಡರು. ಆ ಕಾರಣಕ್ಕಾಗಿ ತಮ್ಮ ಮೂಲವನ್ನು ಸೂರ್ಯವಂಶ ಮತ್ತು ಚಂದ್ರವಂಶ ಎಂಬ ಪೌರಾಣಿಕ ಮೂಲಗಳಿಂದ ಗುರುತಿಸಿಕೊಳ್ಳಲು ಪ್ರಯತ್ನಪಟ್ಟರು.[೨೧] ಉದಾ: ಯಲಹಂಕ ನಾಡಪ್ರಭುಗಳು ಇಕ್ಷ್ವಾಕು ವಂಶದವರೆಂದು ಹೇಳಿಕೊಂಡಿರುವುದು. ಮಿಡಿಗೇಶಿ, ಮಧುಗಿರಿ, ಯಲಹಂಕ ಮೊದಲಾದ ಪಾಳೆಯಪಟ್ಟುಗಳು ತಮ್ಮ ಸಂಸ್ಥಾನಗಳ ಉಗಮದ ಮೂಲವನ್ನು ವಿಜಯನಗರದ ಮೂಲವನ್ನು ಹೋಲುವ ಐತಿಹ್ಯದೊಂದಿಗೆ ಹೋಲಿಸಿಕೊಂಡಿರುವುದು ಕೂಡ ಇದೇ ಉದ್ದೇಶಗಳಿಂದ ಕೂಡಿರುವುದೆಂದು ಹೇಳಬಹುದು.

೨. ವಿಜಯನಗರದ ಅರಸರು ತಮ್ಮ ಅಧಿಕಾರಾವಧಿಯಲ್ಲಿ ಬಹುತೇಕ ಅಲಕ್ಷಿತ ಸಮುದಾಯಗಳ ಮುಖಂಡರಿಗೆ ಅಮರನಾಯಕತನವನ್ನು ನೀಡಿರುವುದು ಕಂಡುಬರುತ್ತದೆ. ಉದಾ: ಬೇಡ, ಕುರುಬ, ಗೊಲ್ಲ, ಒಕ್ಕಲಿಗ, ವೀರಶೈವ, ಬಲಿಜ, ರೆಡ್ಡಿ ಮೊದಲಾದ ಕೆಳವರ್ಗದ ತಳಹದಿಯಿಂದ ಬಂದ ಅಮರನಾಯಕರು ರಾಜಕೀಯವಾಗಿ ಪಾಳೆಯಗಾರರಾಗಿ ಗುರುತಿಸಿಕೊಂಡ ಸಂದರ್ಭದಲ್ಲಿ ಅವರ ಮೂಲ ಜಾತಿಯ ನೆಲೆಯಲ್ಲಿಯೇ ಹಲವಾರು ಸಾಮಾಜಿಕ ಸ್ಥಿತ್ಯಂತರಗಳು ಕಂಡು ಬಂದವು. ವೀರಶೈವ ಮತ್ತು ಒಕ್ಕಲಿಗ ಜಾತಿಯ ಅಮರನಾಯಕರನ್ನು ಹೊರತುಪಡಿಸಿ ಉಳಿದ ಜಾತಿಯ ನಾಯಕರು ಸಂಪೂರ್ಣವಾಗಿ ಸಂಸ್ಕೃತಿಕರಣದ ಪ್ರಕ್ರಿಯೆಗೆ ಒಳಗಾದರು. ಇವರು ತಮ್ಮ ಹಿಂದಿನ ಜೀವನ ಶೈಲಿಗಳನ್ನು ತೊರೆದು ಮೇಲ್ವರ್ಗಗಳ ಜೀವನ ಶೈಲಿಯನ್ನು ಅಳವಡಿಸಿಕೊಂಡರು. ಮೇಲ್ವರ್ಗದ ಜನರ ರೀತಿ–ನೀತಿಗಳನ್ನು, ಆಚಾರ–ವಿಚಾರಗಳನ್ನು ಅಳವಡಿಸಿಕೊಂಡರು. ಪುರೋಹಿತ ಮತ್ತು ಅಧಿಕಾರ ವರ್ಗವನ್ನು ಇಟ್ಟುಕೊಂಡು ರಾಜದರ್ಬಾರನ್ನು ಸ್ಥಾಪಿಸಿಕೊಂಡರು. ಈ ವರ್ಗದ ನಾಯಕರು ವೇಷಭೂಷಣಗಳಿಂದ ಹಿಡಿದು ಆಹಾರ, ಜೀವನ ಶೈಲಿ ರೂಢಿ–ಸಂಪ್ರದಾಯಗಳನ್ನು ಸಂಪೂರ್ಣವಾಗಿ ಮೇಲ್ವರ್ಗಗಳಂತೆ ಅಳವಡಿಸಿಕೊಳ್ಳುವ ಪ್ರಯತ್ನವನ್ನು ಮಾಡಿದರು.

ಪ್ರಸ್ತುತ ಕರ್ನಾಟಕದ ಭೌಗೋಳಿಕ ವ್ಯಾಪ್ತಿಯಲ್ಲಿ ವಿಜಯನಗರ ಕಾಲದಲ್ಲಿ ಅಮರನಾಯಕತನವನ್ನು ಪಡೆದುಕೊಂಡಿದ್ದ ಜಾತಿಗಳೆಂದರೆ ಬೇಡರು ಮತ್ತು ಕುರುಬರು; ಈ ಎರಡು ಜಾತಿಗಳು ಸಮಾಜದಲ್ಲಿ ಅಲಕ್ಷಿತ ಜಾತಿಗಳಾಗಿದ್ದವು. ಬೇಟೆ, ಪಶುಪಾಲನೆ, ಆಹಾರ ಸಂಗ್ರಹಣೆ ಇವರ ಕಸುಬಾಗಿತ್ತು. ಈ ವರ್ಗದಿಂದ ಬಂದ ಬಹುತೇಕ ದಕ್ಷರನ್ನು ನಾಯಕರನ್ನಾಗಿ ಅಧಿಕಾರಕ್ಕೆ ವಿಜಯನಗರದವರು ತಂದರು. ವಿಜಯನಗರದ ರಾಜ್ಯಾಡಳಿತದಲ್ಲಿ ಅಮರನಾಯಕರೆಂದು ಗುರುತಿಸಿಕೊಂಡ ಅಲಕ್ಷಿತ ವರ್ಗಗಳು ಬದಲಾದ ರಾಜಕೀಯ ಪರಿಸ್ಥಿತಿಗಳಲ್ಲಿ ಕ್ಷತ್ರಿಯ ಸ್ಥಾನಮಾನಗಳನ್ನು ಪಡೆದುಕೊಂಡು ಸಮಾಜದ ಶ್ರೇಣೀಕೃತ ವ್ಯವಸ್ಥೆಯಲ್ಲಿ ದ್ವಿತೀಯ ದರ್ಜೆಯ ಕ್ಷತ್ರಿಯರಾಗಲು ಸಾಕಷ್ಟು ಶ್ರಮ ವಹಿಸಬೇಕಾಯಿತು.

೩. ಅಮರನಾಯಕರು ಪಾಳೆಯಗಾರರಾಗಿ ರೂಪಾಂತರಗೊಳ್ಳುವ ಪಕ್ರಿಯೆಯಲ್ಲಿ ಪುರೋಹಿತರ ಹಾಗೂ ವೀರಶೈವ ಮಠದ ಗುರುಗಳ ಪಾತ್ರ ಬಹುದೊಡ್ಡದಾಗಿತ್ತು. ತಮ್ಮನ್ನು ರಾಜತ್ವದ ಪಟ್ಟಕ್ಕೇರಿಸಿದ ಮಠದ ಗುರುಗಳನ್ನು ನಾಯಕರು ತಮ್ಮ ರಾಜಗುರುಗಳನ್ನಾಗಿಸಿಕೊಂಡರು. ಪುರೋಹಿತರು ಮತ್ತು ಗುರುಗಳು ನಾಯಕರ ಧೈರ್ಯ, ಸಾಹಸ, ಆಳ್ವಿಕೆ ಮುಂತಾದವುಗಳನ್ನು ಗುಣಗಾನ ಮಾಡಿ ಮೇಲಕ್ಕೇರಿಸಿದರು. ಅದಕ್ಕೆ ಪ್ರತಿಫಲವಾಗಿ ನಾಯಕರು ಮಠಗಳಿಗೆ ಸಾಕಷ್ಟು ಭೂದಾನಗಳನ್ನು, ದಾನಗಳನ್ನು ನೀಡಿದರು. ನಾಯಕರ ಕಾಲದ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಪ್ರಧಾನ ಪಾತ್ರವನ್ನು ವಹಿಸಿದ ವೀರಶೈವ ಮಠಗಳು ರಾಜತ್ವವನ್ನು ಮಾನ್ಯ ಮಾಡುವ ಧಾರ್ಮಿಕ ಸಂಸ್ಥೆ (ಕೇಂದ್ರ)ಗಳಾಗಿ ರೂಪುಗೊಂಡವು. ಉದಾ:ಬಿಜ್ಜಾವರದಲ್ಲಿ ಗುರು ಬೋಳ ಬಸವೇಶ್ವರರು ಸಪ್ಪೇಗೌಡನಿಗೆ ಪಟ್ಟ ಕಟ್ಟಿ ಮುಮ್ಮಡಿ ಚಿಕ್ಕಪ್ಪಗೌಡನೆಂದು ಕರೆದರು.[೩೨] ರಾಜಾ ವೀರ ಮದಕರಿ ನಾಯಕನು ಹೈದರಾಲಿಯೊಡನೆ ಕೊನೆಯ ಯುದ್ಧಕ್ಕೆ ಹೋಗುವ ಮೊದಲು ಮುರುಘ ಮಠದ ಗುರುಗಳಿಂದ ತನ್ನ ಹಿರಿಯ ರಾಜಕುಮಾರನಾದ ಬಾಲಕ ಭರಮಣ್ಣ ನಾಯಕನಿಗೆ ಪಟ್ಟ ಕಟ್ಟಿಸಿದನು. ಹೀಗೆ ಪಾಳೆಯಗಾರರ ರಾಜತ್ವವನ್ನು ಮಾನ್ಯ ಮಾಡುವ ಪ್ರಕ್ರಿಯೆಗಳಲ್ಲಿ ವೀರಶೈವ ಮಠಗಳ ಪಾತ್ರ ಮುಖ್ಯವಾಗಿತ್ತು. ಹರತಿ, ನಿಡುಗಲ್ಲು, ಚಿತ್ರದುರ್ಗ, ಸಂತೆಬೆನ್ನೂರು, ಹರಪನಹಳ್ಳಿ, ಗುಡೇಕೋಟೆ, ಜರಿಮಲೆ, ಬಿಜ್ಜಾವರ ಮೊದಲಾದ ಅಮರನಾಯಕ ಮನೆತನದ ಪ್ರಭುಗಳು ಕೂಡಲಿ ಶೃಂಗೇರಿ ಮಠದೊಂದಿಗೆ ಸೌಹಾರ್ದಯುತವಾದ ಸಂಬಂಧವನ್ನು ಹೊಂದಿದ್ದು ಮಠದ ಅಭಿವೃದ್ಧಿಗೆ ಅಪಾರ ಪ್ರಮಾಣದ ಭೂದತ್ತಿಗಳನ್ನು ನೀಡಿರುವುದು ಸಮಕಾಲೀನ ಶಾಸನಾಧಾರಗಳಿಂದ ದೃಢಪಟ್ಟಿದೆ.

೪. ಸಮಾಜದಲ್ಲಿ ಮತಾಂತರ ಪ್ರಕ್ರಿಯೆಗಳು ನಾಯಕರ ಕಾಲದಲ್ಲಿ ನಿರಂತರವಾಗಿ ನಡೆಯುತ್ತಲೇ ಹೋಯಿತು. ಈ ಮತಾಂತರ ಪ್ರಕ್ರಿಯೆಯನ್ನು ಆರಂಭ ಮಾಡಿದ್ದು ಬ್ರಾಹ್ಮಣರು (ವೈಷ್ಣವರು) ಮತ್ತು ವೀರಶೈವರು. ಅಲಕ್ಷಿತ ಅಥವಾ ಸಮಾಜದ ಕೆಳವರ್ಗದಿಂದ ಬಂದಿದ್ದ ಅಮರನಾಯಕರನ್ನು ರಾಜತ್ವ ಪದವಿಗೇರಿಸಲು ಈ ಎರಡು ಮತಗಳು ಪೈಪೋಟಿಗೆ ನಿಂತವು. ವಿಜಯನಗರದ ಪತನದ ನಂತರ ಅಲ್ಲಿಂದ ಪಲಾಯನ ಮಾಡಿ ಬಂದ ಈ ಮತಗಳ ಮುಖ್ಯಸ್ಥರು ನಾಯಕರಲ್ಲಿ ರಾಜಾಶ್ರಯವನ್ನು ಪಡೆದುಕೊಂಡರು. ವೈಷ್ಣವರು ಕೆಲವು ನಾಯಕರಿಗೆ ಕ್ಷಾತ್ರತ್ವದ ಹೆಸರಿನಲ್ಲಿ ಜನಿವಾರ ಧಾರಣೆ ಮಾಡಿಸಿದವು. ಆ ಮೂಲಕ ಶ್ರಿವೈಷ್ಣವ ಪಂಥವನ್ನು ಜನಪ್ರಿಯಗೊಳಿಸಿಲು ಪ್ರಯತ್ನಿಸಿದವು. ವೈಷ್ಣವ ಪಂಥಕ್ಕಿಂತಲೂ ಶೈವ ಪಂಥ ಈ ಸಮಯದಲ್ಲಿ ಹೆಚ್ಚು ಜನಪ್ರಿಯಗೊಂಡಿತು. ಕೆಲವು ಮಠಗಳು, ಮಠಾಧಿಪತಿಗಳು ಅಮರನಾಯಕ ಮನೆತನದ ದೊರೆಗಳಿಗೆ ಲಿಂಗಧಾರಣೆ ಮಾಡಿದರು. ರಾಜಕೀಯದ ಉಳಿವಿಗಾಗಿ ಅಥವಾ ಇನ್ನಾವುದೇ ಕಾರಣಗಳಿಗಾಗಿ ಈ ರೀತಿಯ ಧರ್ಮಾಂತರ ಕ್ರಿಯೆಗೆ ನಾಯಕರು ಒಳಗಾದರು. ಚಿತ್ರದುರ್ಗ, ಸುರಪುರ, ಗುಡಗಂಟಿ, ಗುಡೇಕೋಟೆ, ಜರಿಮಲೆ ಮುಂತಾದ ಬೇಡ ನಾಯಕರು ಬ್ರಾಹ್ಮಣರಿಂದ ಜನಿವಾರ ಧಾರಣೆಯನ್ನು ಮಾಡಿಸಿಕೊಳ್ಳುತ್ತಿದ್ದರು. ಮತ್ತೊಂಡು ಹಾಗಲವಾಡಿ, ಹರಪನಹಳ್ಳಿ ಪಾಳೆಯಗಾರರು ಲಿಂಗಧಾರಿಗಳಾದರು[೩೩]

೫. ಬಹುಪತ್ನಿತ್ವವು ವಿಜಯನಗರ ಕಾಲದಿಂದಲೂ ಆಚರಣೆಯಲ್ಲಿತ್ತು. ವಿಜಯನಗರ ಕಾಲದಲ್ಲಿ ಸಾಮಂತ ರಾಜರ ಸ್ಥಾನಮಾನವನ್ನು ಗಳಿಸಿಕೊಂಡಿದ್ದ ಅಮರನಾಯಕರಲ್ಲಿಯೂ ಮುಂದುವರೆದ ಈ ಅನಿಷ್ಟ ಪದ್ಧತಿಯು ವಿಜಯನಗರೋತ್ತರ ಪಾಳೆಯಗಾರರ ಕಾಲದಲ್ಲಿಯೂ ಮುಂದುವರಿದುಕೊಂಡು ಹೋಯಿತು. ಪ್ರತಿಯೊಂದು ನಾಯಕ ಮನೆತನಕ್ಕೆ ಸಂಬಂಧಿಸಿದ ಶಾಸನಗಳಲ್ಲಿ ಈ ಕುರಿತು ಮಾಹಿತಿಗಳು ಸಿಗುತ್ತವೆ. ಬಹುಶಃ ಅಂದಿನ ಸಾಮಾಜಿಕ ವ್ಯವಸ್ಥೆಯು ಬಹುಪತ್ನಿತ್ವಕ್ಕೆ ಮನ್ನಣೆ ನೀಡಿದ್ದರಿಂದ ರಾಜ ಕುಟುಂಬಗಳಲ್ಲಿ ಈ ವ್ಯವಸ್ಥೆ ಹೆಚ್ಚಾಗಿ ಅಳವಡಿಕೆಯಲ್ಲಿತ್ತು. ನಾಯಕರು ತಮ್ಮ ರಾಜಕೀಯ ಪ್ರತಿಷ್ಠೆಗಳನ್ನು ಹೆಚ್ಚು ಮಾಡಿಕೊಳ್ಳಲು ಹಾಗೂ ಸಮಕಾಲೀನ ಬಲಿಷ್ಠ ನಾಯಕ ಅರಸರೊಂದಿಗೆ ಅಸ್ತಿತ್ವವನ್ನು ಉಳಿಸಿಕೊಳ್ಳಲು ಒಬ್ಬರಿಗಿಂತ ಹೆಚ್ಚು ಪತ್ನಿಯರನ್ನು ವಿವಾಹವಾಗುತ್ತಿದ್ದರು. ಈ ಬಗೆಯ ರಾಜಕೀಯ ಉದ್ದೇಶಗಳಿಗಾಗಿ ಮಾಡಿಕೊಂಡ ವಿವಾಹಗಳು ಕೆಲವು ನಾಯಕರಿಗೆ ಲಾಭ ತಂದರೆ ಮತ್ತೆ ಕೆಲವರಿಗೆ ವಿನಾಶವನ್ನು ತಂದೊಡ್ಡುತ್ತಿದ್ದವು. ಉದಾ: ಗುಡೇಕೋಟೆ ನಾಯಕ ಜಟ್ಟಿಂಗರಾಜನು ಹಿರೇ ಮೇದಕೇರಿ ನಾಯಕನ ತಂಗಿಯನ್ನು ವಿವಾಹವಾದ. ಆದರೆ ಜಟ್ಟಿಂಗರಾಜನು ಪ್ರಾಪ್ತ ವಯಸ್ಸಿಗೆ ಬಂದ ನಂತರ ಚಿತ್ರದುರ್ಗದವರೊಂದಿಗೆ ಮಾಡಿಕೊಂಡಿದ್ದ ವಿವಾಹವನ್ನು ಧಿಕ್ಕರಿಸಿ ಅವರನ್ನು ಊರ ಬೇಡರೆಂದು ಜರಿದು ಕನಕಗಿರಿ ಸಂಸ್ಥಾನಕ್ಕೆ ಸೇರಿದ ಒಬ್ಬ ನಾಗತಿ ಮತ್ತು ಗುಡಿಬಂಡೆ ಸಂಸ್ಥಾನಕ್ಕೆ ಸೇರಿದ ೪ ಜನ ನಾಗತಿಯರನ್ನು ವಿವಾಹವಾದವನು.[೩೪] (ಯೋಗಿ-ಪು. ೫೭) ಈ ವಿವಾಹಗಳು ಜಟ್ಟಿಂಗರಾಜನು ರಾಜಕೀಯ ನೆಲೆಗಳನ್ನು ಕಳೆದುಕೊಳ್ಳಲು ಕಾರಣವಾಯಿತು. ಬಲಿಷ್ಠ ಪಾಳೆಯಗಾರನಾಗಿದ್ದ ಚಿತ್ರದುರ್ಗದ ಮೇದಕೇರಿ ನಾಯಕನು ತನ್ನ ಸಹೋದರಿಯನ್ನು ತ್ಯಜಿಸಿದ್ದರಿಂದ ಜರಿಮಲೆ ಗುಡೇಕೋಟೆಯ ಮೇಲೆ ಆಕ್ರಮಣ ಮಾಡಿಕೊಂಡು ಈ ನಾಯಕರನ್ನು ತನ್ನ ಅಧೀನರನ್ನಾಗಿಸಿದನು. ಚಿತ್ರದುರ್ಗದ ನಾಯಕರು ನಾಯಕನಹಟ್ಟಿ ಪಾಳೆಯಗಾರರು ಹರತಿ ನಾಯಕರು ಹಾಗೂ ಇತರ ಸಮಕಾಲೀನ ನಾಯಕರಲ್ಲಿ ಬಹುಪತ್ನಿತ್ವ ಆಚರಣೆಯಲ್ಲಿತ್ತು. ರಾಜನ ಹಿರಿಯ ರಾಣಿಯನ್ನು ನಾಗತಿ ಎಂದು ಉಪಪತ್ನಿಯರನ್ನು ಬಂಗಾರ ಸ್ತ್ರೀಯರೆಂದು ಕರೆಯುತ್ತಿದ್ದರು. ಉಪತ್ನಿಯರ ಮಕ್ಕಳಿಗೆ ಸಿಂಹಾಸನದ ಹಕ್ಕು ದೊರೆಯುತ್ತಿರಲಿಲ್ಲ ಹಾಗೂ ದತ್ತು ಸ್ವೀಕಾರ ಸಂಪ್ರದಾಯವಿತ್ತು. ಸ್ವಜಾತಿ ವಿವಾಹ ಪದ್ಧತಿಯಿತ್ತು. ಸ್ವಗೋತ್ರಗಳಲ್ಲಿ ವಿವಾಹವಾಗುವಂತಿರಲಿಲ್ಲ.

೬. ಸತಿ ಪದ್ಧತಿ ಆಚರಣೆ ಹಾಗೂ ಪರದಾ ಪದ್ಧತಿಯು ನಾಯಕರ ಕಾಲದ ರಾಜಮನೆತನದ ಸ್ತ್ರಿಯರಲ್ಲಿತ್ತು. ಇದು ಮಹಿಳೆಯರನ್ನು ಶೋಷಣೆಗೆ ಒಳಪಡಿಸಿತು. ಆದರೆ ಆ ಕಾಲದ ಸಾಮಾಜಿಕ ಆಚರಣೆಗಳೊಂದಿಗೆ ಈ ಪದ್ಧತಿಗಳು ತಳುಕು ಹಾಕಿಕೊಂಡಿದ್ದರಿಂದ ಅದು ಸಮಾಜದಲ್ಲಿ ರೂಢಿಗತವಾಗಿತ್ತು. ಅಂದಿನ ಸಮಾಜದಲ್ಲಿ ಹೆಣ್ಣಿನ ಶೋಷಣೆ ಎಷ್ಟು ತೀವ್ರವಾಗಿತ್ತು ಎನ್ನುವುದಕ್ಕೆ ಶಾಸನ ಮತ್ತು ಸಾಹಿತ್ಯ ಕೃತಿಗಳಲ್ಲಿ ದಾಖಲೆಗಳು ದೊರೆಯುತ್ತವೆ. ದೇವದಾಸಿಯಂತಹ ಸಾಮಾಜಿಕ ಅನಿಷ್ಟ ಪದ್ಧತಿಗಳು ಆಚರಣೆಯಲ್ಲಿದ್ದವು. ಈ ಉದ್ದೇಶಕ್ಕಾಗಿಯೇ ದೇವಾಲಯಗಳಲ್ಲಿ ಅಂಗಭೋಗ-ರಂಗಭೋಗಗಳ ಸೇವೆಯನ್ನು ಹೆಚ್ಚಿಸಲಾಯಿತು. ದೇವದಾಸಿ ಮತ್ತು ಬಸವಿ ಬಿಡುವ ಪದ್ಧತಿಯು

ಸಮಾಜದ ಮೇಲ್ಜಾತಿ ಮತ್ತು ಕೆಳ ಜಾತಿಗಳಲ್ಲಿ ಆಚರಣೆಯಲ್ಲಿತ್ತು. ನಾಯಕರು ಕೂಡ ಇಂತಹ ಅನಿಷ್ಟ ಪದ್ಧತಿಗಳ ಬೆಂಬಲಕ್ಕೆ ನಿಂತಿದ್ದರು.

೭. ವಿಜಯನಗರ ಕಾಲದಲ್ಲಿ ಸಾಮಾಜಿಕವಾಗಿ ಅಲಕ್ಷಿತ ಗುಂಪಿನ ನಾಯಕರು, ಅಮರನಾಯಕರು ಅಮರನಾಯಕತನವನ್ನು ಪಡೆದುಕೊಂಡು ಸೈನಿಕ ವರ್ಗವಾಗಿ, ಅಧಿಕಾರಿ ವರ್ಗವಾಗಿ ಗುರುತಿಸಿಕೊಂಡು ತಮ್ಮ ಸ್ಥಾನಮಾನಗಳನ್ನು ಹೆಚ್ಚಿಸಿಕೊಂಡರು. ಹಾಗೆಯೇ ನಂತರದ ಕಾಲದಲ್ಲಿ ರಾಜರಾಗಿ ರೂಪುಗೊಂಡು ಭವ್ಯವಾದ ಅರಮನೆಗಳನ್ನು ನಿರ್ಮಿಸಿಕೊಂಡು ವಿಲಾಸಿ ಜೀವನವನ್ನು ನಡೆಸತೊಡಗಿದರು. ಕೆಳದಿ, ಯಲಹಂಕ, ಮೈಸೂರು, ಕನಕಗಿರಿ, ಗುಡಗಂಟಿ, ದೇವದುರ್ಗ ಮುಂತಾದ ನಾಯಕರ ಕಾಲದ ಅರಮನೆಗಳು ಇಂದಿಗೂ ಅವರ ವಿಲಾಸ ಜೀವನದ ಸ್ಮಾರಕ ಅವಶೇಷಗಳಾಗಿವೆ.

ಸಿ. ಆರ್ಥಿಕ ಸ್ಥಿತ್ಯಂತರಗಳ ಫಲಿತಗಳು

ವಿಜಯನಗರ ಸಾಮ್ರಾಜ್ಯದ ಆರ್ಥಿಕ ಸದೃಢತೆಗೆ ಕಾರಣರಾಗಿದ್ದ ಅಮರನಾಯಕರು ರಾಜಕೀಯವಾಗಿ ಸ್ಥಿತ್ಯಂತರಗೊಂಡ ನಂತರ ತಮ್ಮ ಆಡಳಿತ ಪ್ರದೇಶದ ವ್ಯಾಪ್ತಿಯಲ್ಲಿ ಆರ್ಥಿಕವಾಗಿ ಸದೃಢರಾಗತೊಡಗಿದರು. ಈ ಹಿಂದೆ ಸಂಪತ್ತು ವಿಜಯನಗರಕ್ಕೆ ಸಂದಾಯವಾಗುತ್ತಿದ್ದರಿಂದ ಸಂಪತ್ತು ಹೊರಗಡೆ ಸೋರಿಕೆಯಾಗದೆ ಹಾಗೆಯೇ ಉಳಿದುಕೊಂಡಿತು. ಹೀಗಾಗಿ ನಾಯಕರು ತಮ್ಮದೇ ಆದ ಆರ್ಥಿಕ ನೀತಿಗಳನ್ನು ಅಳವಡಿಸಿಕೊಂಡು ಆಡಳಿತವನ್ನು ಮುನ್ನಡೆಸಿಕೊಂಡು ಹೋದರು. ಅಮರನಾಯಕ ವ್ಯವಸ್ಥೆಯದಿಂದ ಪಾಳೆಯಗಾರಿಕೆ ಪಡೆದ ನಂತರದಲ್ಲಾದ ಆರ್ಥಿಕ ಸ್ಥಿತ್ಯಂತರದ ಫಲಿತಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದಾಗಿದೆ.

೧. ವಿಜಯನಗರ ಕಾಲದಲ್ಲಿ ಅರಸನೇ ಸಾಮ್ರಾಜ್ಯ ಭೂಮಿಯ ಒಡೆಯನಾಗಿರುತ್ತಿದ್ದ. ರಾಜನಿಂದ ಭೂಮಿಯನ್ನು ದಾನದ ರೂಪದಲ್ಲಿ ಪಡೆಯುತ್ತಿದ್ದ ಅಮರನಾಯಕರು ಅದಕ್ಕೆ ಪ್ರತಿಯಾಗಿ ಸೈನಿಕ ಸೇವೆಯನ್ನು ಸಲ್ಲಿಸಬೇಕಾಗಿತ್ತು. ಹೀಗಾಗಿ ವಿಜಯನಗರದ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಭೂಮಿಯನ್ನು ದಾನವಾಗಿ ನೀಡುವ ಪದ್ಧತಿಯು ಹಲವಾರು ಮಹತ್ತರವಾದ ಬದಲಾವಣೆಗಳಿಗೆ ದಾರಿ ಮಾಡಿಕೊಟ್ಟಿತು. ಈ ಪದ್ಧತಿಯು ಅಮರನಾಯಕರೆಂಬ ನೂತನವಾದ ಭೂಮಾಲೀಕ ಮಧ್ಯವರ್ತಿಗಳ ಹುಟ್ಟಿಗೆ ಕಾರಣವಾಯಿತು. ವಿಜಯನಗರ ಸಾಮ್ರಾಜ್ಯವು ಈ ರೀತಿಯಲ್ಲಿ ಆಡಳಿತ ಮತ್ತು ವರಮಾನದ ಹಕ್ಕುಗಳನ್ನು ಅಮರನಾಯಕರಿಗೆ, ದೇವಾಲಯಗಳಿಗೆ, ಅಗ್ರಹಾರಗಳಿಗೆ ವರ್ಗಾಯಿಸಿತು. ಇದರಿಂದ ರೈತಾಪಿ ವರ್ಗವೂ ಶೋಷಣೆಗೆ ಗುರಿಯಾಯಿತು. ರೈತಾಪಿ ವರ್ಗವು ಬಿಟ್ಟಿ ದುಡಿಮೆ, ಜೀತ ಪದ್ಧತಿಗಳಿಗೆ ಗುರಿಯಾಗಬೇಕಾಯಿತು. ಈ ವ್ಯವಸ್ಥೆಯು ಅಮರನಾಯಕರು ಪಾಳೆಯಗಾರರಾದ ನಂತರದ ಕಾಲದಲ್ಲಿಯೂ ಯಥಾವತ್ತಾಗಿ ಮುಂದುವರಿಯಿತು. ಆದರೆ ಈ ಅವಧಿಯಲ್ಲಿ ಭೂಮಾಲೀಕರಾಗಿದ್ದ ಅಮರನಾಯಕರು ರಾಜಕೀಯ ಸ್ಥಿತ್ಯಂತರಗಳ ಫಲವಾಗಿ ಸಣ್ಣ ರಾಜರಾಗಿ ರೂಗೊಂಡು ತಮ್ಮ ಆಡಳಿತ ವ್ಯಾಪ್ತಿಯ ಎಲ್ಲಾ ಭೂಮಿಗೂ ತಾವೇ ನಿಜವಾದ ಒಡೆಯರಾದರು. ಇದು ಆರ್ಥಿಕ ವ್ಯವಸ್ಥೆಯಲ್ಲುಂಟಾದ ಸ್ಥಿತ್ಯಂತರದ ಫಲವೆನ್ನಬಹುದು.

೨. ವಿಜಯನಗರದಂತಹ ಬೃಹತ್ ಸಾಮ್ರಾಜ್ಯದ ಅಡಿಯಲ್ಲಿ ಸೈನ್ಯ ಮತ್ತು ಕಂದಾಯಾಧಿಕಾರಿಗಳಾಗಿ ಸೇವೆಯನ್ನು ಸಲ್ಲಿಸುತ್ತಿದ್ದ ಅಮರನಾಯಕರು ವಿಜಯನಗರದ ಪತನದ ನಂತರ ಸಂಪೂರ್ಣವಾಗಿ ರಾಜಕೀಯ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದರಿಂದ ಬದಲಾದ ಸನ್ನಿವೇಶದಲ್ಲಿ ಇವರು ರಾಜರಾದರೂ ಸಾಕಷ್ಟು ರಾಜಕೀಯ ಅಸ್ಥಿರತೆಯನ್ನು ಅನುಭವಿಸಬೇಕಾಯಿತು. ಕಾರಣ ತಮ್ಮ ಸಂಸ್ಥಾನಗಳ ಮೇರೆಗಳನ್ನು ವಿಸ್ತರಿಸಿಕೊಳ್ಳಲು ಯುದ್ಧಗಳನ್ನು ಮಾಡುತ್ತಿದ್ದರು. ಯುದ್ಧಗಳಲ್ಲಿ ಅಪಾರ ಪ್ರಮಾಣದ ಸೈನ್ಯ ನಷ್ಟದ ಜೊತೆಗೆ ಸಂಪತ್ತು ಲೂಟಿಯಾಗುತ್ತಿದ್ದರಿಂದ ತಮ್ಮ ಸಂಪತ್ತನ್ನು ಸಂರಕ್ಷಿಸಿಕೊಳ್ಳುವುದು ತುಂಬಾ ಕಠಿಣವಾದ ಕಾರ್ಯವಾಗಿತ್ತು. ಕೆಲವು ಪಾಳೆಯಗಾರರು ತಾವು ಕೈಗೊಳ್ಳುತ್ತಿದ್ದ ಯುದ್ಧಗಳಿಂದಾಗಿಯೇ ಆರ್ಥಿಕವಾಗಿ ಸಾಕಷ್ಟು ದುಸ್ಥಿತಿಯನ್ನು ತಲುಪಿದರು ಹಾಗೂ ಹೊರಗಿನ ಶತ್ರುಗಳು ನಿರಂತರವಾಗಿ ಸಣ್ಣಪುಟ್ಟ ಸಂಸ್ಥಾನಗಳ ಮೇಲೆ ದಾಳಿಯನ್ನು ಮಾಡಿ ಕಪ್ಪವನ್ನು ಒತ್ತಾಯಪೂರ್ವಕವಾಗಿ ವಸೂಲಿ ಮಾಡುತ್ತಿದ್ದವು. ಇಂತಹ ಕಪ್ಪವನ್ನು ಕೊಡಲಾಗದಂತಹ ದಾನಿವಾಸ, ಮತ್ತೋಡು, ನಾಯಕನಹಟ್ಟಿಯಂತಹ ಪಾಳೆಯಪಟ್ಟುಗಳು ಆರ್ಥಿಕವಾಗಿ ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ನಾಶವಾದವು.

೩. ಪಾಳೆಯಗಾರರಾಗಿ ಅಧಿಕಾರಕ್ಕೆ ಬಂದಂತಹ ಕೆಲವು ಅಮರನಾಯಕರ ಆರ್ಥಿಕ ಸ್ಥಿತಿಗತಿಗಳು ಸದೃಢಗೊಂಡವು. ಮಲೆನಾಡು ಪ್ರದೇಶದಲ್ಲಿ ಅಸ್ತಿತ್ವಕ್ಕೆ ಬಂದ ಕೆಳದಿಯು ಭೌಗೋಳಿಕವಾಗಿ ಶ್ರೀಮಂತಿಕೆಯನ್ನು ಪಡೆದುಕೊಂಡಿತ್ತು. ಅದಕ್ಕೆ ತಕ್ಕಂತೆ ಕೆಳದಿಯ ನಾಯಕರು ತಮ್ಮ ಆರ್ಥಿಕ ನೀತಿಯನ್ನು ರೂಪಿಸಿಕೊಂಡು ದೇಶಿ–ವಿದೇಶಿ ವ್ಯಾಪಾರವನ್ನು ಆಮದು–ರಫ್ತುಗಳ ಪ್ರಮಾಣವನ್ನು ವೃದ್ಧಿಸಿಕೊಂಡಿದ್ದರಿಂದ ಆರ್ಥಿಕವಾಗಿ ಸಬಲತೆಯನ್ನು ಸಾಧಿಸಿದರು. ಅದರಂತೆ ಬಯಲುಸೀಮೆಯ ಭಾಗಗಳಲ್ಲಿ ಅಸ್ತಿತ್ವಕ್ಕೆ ಬಂದಂತಹ ಚಿತ್ರದುರ್ಗ, ಹರತಿ, ಹಂಡೆ, ಗುಡೇಕೋಟೆಗಳು ತಮ್ಮ ಆರ್ಥಿಕ ಸ್ಥಿತಿಯನ್ನು ತಮ್ಮ ಭೌಗೋಳಿಕ ಸಂಪನ್ಮೂಲಗಳ ಮಿತಿಯಲ್ಲಿಯೇ ವೃದ್ಧಿಸಿಕೊಂಡು ಅಭಿವೃದ್ಧಿಯನ್ನು ಸಾಧಿಸಿಕೊಂಡವು. ಯಲಹಂಕವು ಸುಪ್ರಸಿದ್ಧ ವ್ಯಾಪಾರ ವಾಣಿಜ್ಯ ಕೇಂದ್ರವನ್ನಾಗಿ ಬೆಂಗಳೂರು ನಗರವನ್ನು ರೂಪಿಸಿತು. ಈ ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಿದಾಗ ರಾಜಕೀಯ ಅಸ್ಥಿರತೆಗಳ ಮಧ್ಯೆಯೂ ಇವರು ಸ್ಥಿರವಾದ ಆರ್ಥಿಕ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದರೆಂದು ಹೇಳಬಹುದು.

೪. ಹೈದರಾಲಿ ಮತ್ತು ಅವನ ಮಗ ಟಿಪ್ಪು ಸುಲ್ತಾನರಿಗೆ ರಾಜ್ಯ ವಿಸ್ತರಣೆಯ ಜೊತೆ ಬ್ರಿಟಿಷರ ಮೇಲೆ ದ್ವೇಷಾಸೂಯೆಗಳು ಹೆಚ್ಚಾಗಿದ್ದವು. ಬ್ರಿಟಿಷರಿಗೂ ಕೂಡ ದಕ್ಷಿಣದಲ್ಲಿ ತಮ್ಮ ರಾಜಕೀಯ ನೆಲೆಗಳನ್ನು ಸ್ಥಾಪಿಸಿಕೊಳ್ಳಲು ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಬಹುದೊಡ್ಡ ತೊಡಕಾಗಿದ್ದರು. ಬ್ರಿಟಿಷರು ಹೈದರಾಲಿ ಮತ್ತು ಟಿಪ್ಪು ಸುಲ್ತಾನರನ್ನು ಸೋಲಿಸಲು ಸ್ಥಳೀಯ ಪಾಳೆಯಗಾರರೊಂದಿಗೆ ಕೈಜೋಡಿಸಿದರು. ಆದರೆ ಬ್ರಿಟಿಷರನ್ನು ಸೋಲಿಸಲು ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಸ್ಥಳೀಯ ಪಾಳೆಯಗಾರರ ಮೇಲೆ ಯುದ್ಧಗಳನ್ನು ಮಾಡಿ ಅಪಾರ ಪ್ರಮಾಣದ ಹಣವನ್ನು, ಸಂಪತ್ತನ್ನು ಲೂಟಿ ಮಾಡಿದರು. ವಿದೇಶಿಯರ ಮೇಲೆ ಯುದ್ಧ ಮಾಡದೇ ಸ್ಥಳೀಯ

ರಾಜರೇ ಪರಸ್ಪರ ಯುದ್ಧ ಮಾಡುವ ಸ್ಥಿತಿಯು ಹಲವಾರು ನಾಯಕರು ನಿರ್ನಾಮವಾಗಲು ಕಾರಣವಾಯಿತು. ಉದಾ: ಹೈದರಾಲಿಯು ಚಿತ್ರದುರ್ಗದ ಮೇಲೆ ಕೊನೆಯ ಬಾರಿ ದಾಳಿ ಮಾಡಿದಾಗ ಒಟ್ಟು ಮೂರು ದಿನಗಳ ಕಾಲ ಖಜಾನೆಯನ್ನು ಲೂಟಿ ಮಾಡಿದನು. ಖಜಾನೆಯಿಂದ ಹೈದರಾಲಿಯು ೬೪ ಲಕ್ಷ ಬೆಳ್ಳಿ ದಾಬೋಲಿ ಕದಲಿ, ೧೦ ಲಕ್ಷ ಚವರಿಯಷ್ಟು ಸಂಪತ್ತನ್ನು ದೋಚಿದನು. ಹೀಗೆ ಹೈದರಾಲಿ ಮತ್ತು ಟಿಪ್ಪುವಿನೊಂದಿಗೆ ಮರಾಠರು, ಮೊಗಲರು, ಬಿಜಾಪುರದ ಸುಲ್ತಾನರು ನಾಯಕರನ್ನು ಭಾರಿ ಪ್ರಮಾಣದಲ್ಲಿ ಲೂಟಿ ಮಾಡಿದ್ದರಿಂದ ತಮ್ಮೆಲ್ಲ ಸಂಪತ್ತನ್ನು ಕಳೆದುಕೊಂಡ ನಾಯಕರು ಆರ್ಥಿಕವಾಗಿ ಸಾಕಷ್ಟು ಸಂಕಷ್ಟಗಳಿಗೆ ಗುರಿಯಾಗಬೇಕಾಯಿತು.

೫. ಬ್ರಿಟಿಷರು ನಾಲ್ಕು ಆಂಗ್ಲೋ-ಮೈಸೂರು ಯುದ್ಧಗಳಲ್ಲಿ ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ವಿರುದ್ಧ ಹೋರಾಟ ಮಾಡುವುದರಲ್ಲಿ ತಮಗೆ ಸಹಾಯ ಮಾಡಿದ ನಾಯಕ ಮನೆತನಗಳನ್ನು ಮೂಲೆಗುಂಪು ಮಾಡಿದರು. ಅವರಿಗೆ ಅವರ ಸಂಸ್ಥಾನಗಳನ್ನು ಹಿಂತಿರುಗಿಸದೇ ನಿವೃತ್ತಿ ವೇತನಗಳನ್ನು ಮಂಜೂರುಗೊಳಿಸಿ ರಾಜಕೀಯವಾಗಿ, ಆರ್ಥಿಕವಾಗಿ ನಾಯಕರ ಶಕ್ತಿಯನ್ನು ಕುಂದಿಸಿದರು. ಹೀಗಾಗಿ ಆರ್ಥಿಕವಾಗಿ ನಾಯಕರು ಚೇತರಿಸಿಕೊಳ್ಳಲು ಸಾಧ್ಯವೇ ಆಗಲಿಲ್ಲ. ಇದು ಕೂಡ ಆರ್ಥಿಕ ವ್ಯವಸ್ಥೆಯ ಸ್ಥಿತ್ಯಂತರಗಳ ಫಲವೆನ್ನಬಹುದು.

ಡಿ. ಸಾಂಸ್ಕೃತಿಕ ಸ್ಥಿತ್ಯಂತರದ ಫಲಿತಗಳು

೧. ವಿಜಯನಗರದ ಪತನದ ನಂತರ ಸಾಂಸ್ಕೃತಿಕ ಸ್ಥಿತ್ಯಂತರಗಳ ಫಲಿತಗಳು ಸಮಾಜ ಎಲ್ಲ ವಲಯಗಳ ಮೇಲೆಯೂ ಗಂಭೀರವಾದಂತಹ ಪರಿಣಾಮಗಳನ್ನು ಬೀರಿದವು. ವೀರಶೈವ ಮತ್ತು ವೈಷ್ಣವ ಮಠದ ಗುರುಪೀಠಗಳು, ಮಠಗಳು ಎಲ್ಲಾ ನಾಯಕ ಸಂಸ್ಥಾನಗಳಲ್ಲಿಯೂ ಅಸ್ತಿತ್ವಕ್ಕೆ ಬಂದವು. ಈ ಗುರುಪೀಠ ಮತ್ತು ಮಠಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ನಾಯಕರು ಹಲವಾರು ದಾನ-ದತ್ತಿಗಳನ್ನು ಉಂಬಳಿಗಳ ರೂಪದಲ್ಲಿ ನೀಡತೊಡಗಿದರು. ಈ ಕಾಲದಲ್ಲಿ ಶೈವ ಮತ್ತು ವೈಷ್ಣವ ದೇವಾಲಯಗಳ ನಿರ್ಮಾಣ ಕಾರ್ಯದಲ್ಲಿ ಈ ಮಠಗಳು ಸಾಕಷ್ಟು ಅನುಕೂಲತೆಗಳನ್ನು ನಾಯಕ ಅರಸರಿಂದ ಪಡೆದವು. ಅಪಾರ ಪ್ರಮಾಣದ ಭೂದತ್ತಿಗಳನ್ನು ಪಡೆದುಕೊಂಡಿದ್ದರಿಂದ ಮಠಗಳು ಹೊಸ ಭೂ ಮಾಲೀಕ ವರ್ಗವಾಗಿ ತಲೆಎತ್ತಿದವು. ಹಾಗೂ ನಾಯಕರ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ ವ್ಯವಸ್ಥೆಯ ಮೇಲೆ ಈ ಮಠಗಳು ತಮ್ಮದೇ ಆದ ಹಿಡಿತವನ್ನು ಸಾಧಿಸಿದವು ಎಂದು ಹೇಳಬಹುದು.

೨. ಈ ಅವಧಿಯಲ್ಲಿ ಈ ಹಿಂದೆ ವಿಜಯನಗರದ ಕೃಷ್ಣದೇವರಾಯ ಅಚ್ಯುತದೇವರಾಯ, ಸದಾಶಿವರಾಯ ಕಾಲದಲ್ಲಿ ಜನಪ್ರಿಯಗೊಂಡಿದ್ದ ತಿರುಪತಿ ಮತ್ತು ರಂಗನಾಥನ ಆರಾಧನೆಯು ಹಾಗೆಯೇ ಮುಂದುವರಿಯಿತು. ಹನುಮಂತ, ಲಕ್ಷ್ಮಿನರಸಿಂಹ ಸ್ವಾಮಿಯು ನಾಯಕರ ಕುಲದೈವಗಳಾಗಿ ಕಾಣಿಸಿಕೊಂಡವು. ಕಂಪಳ ರಂಗನಾಥ, ಓಬಳದೇವರು, ಅಹೋಬಲ ನರಸಿಂಹ ಮುಂತಾದ ದೇವರುಗಳು ಪ್ರಖ್ಯಾತಿಗೆ ಬಂದರು. ಈ ದೇವತೆಗಳ ಆರಾಧನೆಯ ಜೊತೆಗೆ ಶಾಕ್ತ ಪರಂಪರೆಯ

ಆರಾಧನೆಯು ರೂಢಿಯಲ್ಲಿತ್ತು. ಬಹುತೇಕ ತಳ ಸಮುದಾಯದಿಂದಲೇ ಅಮರನಾಯಕರಾಗಿ ಆಯ್ಕೆಗೊಂಡು ನಂತರ ಪಾಳೆಯಗಾರರಾಗಿ ರಾಜತ್ವವನ್ನು ಪಡೆದುಕೊಂಡ ನಾಯಕರು ತಮ್ಮ ಜನಾಂಗದ ಹಿಂದಿನ ಎಲ್ಲ ಸಂಪ್ರದಾಯಗಳನ್ನು ಬದಿಗೊತ್ತಿ ವೈಷ್ಣವ ಮತ್ತು ವೀರಶೈವ ಧರ್ಮದ ಅನುಯಾಯಿಗಳಾಗಿ ರೂಪಾಂತರಗೊಂಡು ಈ ಎರಡು ಪಂಥಗಳನ್ನು ಪೋಷಿಸಿದ್ದು ಈ ಕಾಲದ ಸಾಂಸ್ಕೃತಿಕ ಸ್ಥಿತ್ಯಂತರದ ಫಲವೆಂದು ಹೇಳಬಹುದು.

೩. ಅಮರನಾಯಕರು ಸ್ಥಳೀಯ ದೊರೆಗಳಾಗಿ ಗುರುತಿಸಿಕೊಂಡ ನಂತರ ತಾವು ಸಾರ್ವಜನಿಕವಾಗಿ ನಿರ್ಮಿಸುವ ಕೆರೆ ಕಾಲುವೆಗಳ ನಿರ್ಮಾಣ, ದೇವಾಲಯಗಳ ನಿರ್ಮಾಣ, ಹಾಗೂ ಬ್ರಹ್ಮದೇಯ ಮತ್ತು ದೇವಾದಾಯಗಳನ್ನು ನೀಡುವಾಗ ತಮ್ಮ ವಂಶದೊಂದಿಗೆ ತಮ್ಮ ಹೆಸರನ್ನು ದಾನದ ಹಿಂದಿನ ಉದ್ದೇಶವನ್ನು ಸ್ಪಷ್ಟವಾಗಿ ನಮೂದಿಸುತ್ತಿದ್ದರು. ಆದರೆ ವಿಜಯನಗರ ಕಾಲದಲ್ಲಿ ಅಮರನಾಯಕರಾಗಿದ್ದ ಮೊದಲ ವರ್ಗದ ನಾಯಕರನ್ನು ಹೊರತುಪಡಿಸಿ ಇತರ ವರ್ಗಗಳ ನಾಯಕರಿಗೆ ಈ ಬಗೆಯ ಅಧಿಕಾರಗಳಿರಲಿಲ್ಲ. ಆದರೆ ವಿಜಯನಗರದ ಪತನದ ನಂತರ ಸ್ವತಂತ್ರಗೊಂಡ ನಾಯಕರು ಈ ಬಗೆಯ ಎಲ್ಲ ಹಕ್ಕುಗಳನ್ನು ಬಳಸಿಕೊಂಡರು.

೬.೩ ಪಾಳೆಯಗಾರರ ಅಧಿಕಾರದ ಸ್ವರೂಪ ಮತ್ತು ಅಮರನಾಯಕತ್ವದಿಂದ ಪಾಳೆಯಗಾರಿಕೆ ಪಡೆಯುವ ಲಕ್ಷಣಗಳು

ವಿಜಯನಗರದ ಪತನದ ನಂತರ ಅಮರನಾಯಕರು ರಾಜರಾಗಿ ರೂಪುಗೊಂಡ ಪ್ರಕ್ರಿಯೆಗಳಲ್ಲಿ ಅವರ ಅಧಿಕಾರದ ಸ್ವರೂಪವನ್ನು ಗಮನಿಸಬೇಕಾಗುತ್ತದೆ. ಹಾಗೂ ಅಮರನಾಯಕತ್ವದಿಂದ ಪಾಳೆಯಗಾರಿಕೆ ಪಡೆಯುವಲ್ಲಿನ ಲಕ್ಷಣಗಳನ್ನು ಸಹ ಇಲ್ಲಿ ಗುರುತಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಇಡೀ ವ್ಯವಸ್ಥೆಯು ಒಳಗೊಂಡಿದ್ದ ಕೆಲವು ಪ್ರಧಾನ ಅಂಶಗಳನ್ನು ಕೆಳಗಿನಂತೆ ಗುರುತಿಸಬಹುದು.

೧. ಅಮರನಾಯಕರು ಪಾಳೆಯಗಾರರಾಗಿ ರೂಪಾಂತರಗೊಂಡ ನಂತರ ಸ್ವಯಂ ಅಧಿಪತ್ಯದ ಅಧಿಕಾರವನ್ನು ಸ್ಥಾಪಿಸಿದರು. ತಮ್ಮ ಆಡಳಿತದ ವ್ಯಾಪ್ತಿಯಲ್ಲಿ ಕೇಂದ್ರಾಡಳಿತ ಮತ್ತು ಗ್ರಾಮಾಡಳಿತವನ್ನು ಸ್ಥಾಪಿಸಿದರು. ವಿಜಯನಗರದವರಂತೆ ಬಾರಬಲೂತಿ ಪದ್ಧತಿಯನ್ನು ಅಳವಡಿಸಿಕೊಳ್ಳುವುದರ ಮೂಲಕ ಸ್ವಯಂ ಆಡಳಿತ ಘಟಕಗಳನ್ನು ಮುಂದುವರಿಸಿದರು. ಗೌಡ, ಶ್ಯಾನುಭೋಗ, ತೋಟಿ, ತಳವಾರ ನೀರುಗಂಟಿ, ಜೋಯಿಸ, ಕಮ್ಮಾರ, ಬಡಗಿ, ಅಗಸ, ಅಕ್ಕಸಾಲಿಗ, ನಾಯಿಂದ, ಪಟೇಲರು ಗ್ರಾಮಾಡಳಿತದ ಉಸ್ತುವಾರಿಯನ್ನು ಹೊಂದಿದ್ದರು. ಕೇಂದ್ರಾಡಳಿತದಲ್ಲಿ ನಾಯಕ, ಮಂತ್ರಿಗಳು, ಪ್ರಧಾನ ಗುರಿಕಾರ, ಗುರಿಕಾರ ಸೇನಾಧಿಪತಿಗಳು, ಪ್ರಧಾನ ದಳಪತಿಗಳು, ಉಪದಳಪತಿಗಳು ಆಡಳಿತವನ್ನು ನಿರ್ವಹಿಸುತ್ತಿದ್ದರು. ನಾಯಕರು ವಿಜಯನಗರೋತ್ತರ ಕಾಲದಲ್ಲಿ ಅಳವಡಿಸಿಕೊಂಡ ಆಡಳಿತ ಪದ್ಧತಿಯು ವಿಜಯನಗರ ಕಾಲದಲ್ಲಿ ಅಸ್ತಿತ್ವದಲ್ಲಿಂತಹ ಆಡಳಿತ ವ್ಯವಸ್ಥೆಯ ಮುಂದುವರಿಕೆಯ ಭಾಗವಾಗಿತ್ತು. ನಾಯಕರು ತಮ್ಮ ಸಂಸ್ಥಾನಗಳಿಗೆ ಬ್ರಹ್ಮದೇಯಗಳನ್ನು, ದೇವಾದೇಯಗಳನ್ನು ನೀಡುತ್ತಾ ಊಳಿಗಮಾನ್ಯ ವ್ಯವಸ್ಥೆಯನ್ನು ಮುಂದುವರಿಸಿದರು. ನಾಯಕರು ತಮ್ಮ ಕೆಳಗೆ ಅನೇಕ

ಉಪನಾಯಕರನ್ನು ಸೃಷ್ಟಿಮಾಡಿಕೊಳ್ಳುವುದರ ಮೂಲಕ ಉಪಉಂಬಳಿಗಮಾನ್ಯವನ್ನು ಸೃಷ್ಟಿ ಮಾಡಿದರು. ನಾಯಕರ ಕಾಲದ ಶಾಸನಗಳನ್ನು ಪರಿಶೀಲಿಸಿದಾಗ ಉಪನಾಯಕರು ತಮ್ಮನ್ನು ನಾಯಕರ ಕಾರ್ಯಕರ್ತರೆಂದು ಕರೆದುಕೊಂಡಿದ್ದಾರೆ. ಒಟ್ಟಿನಲ್ಲಿ ಅಮರನಾಯಕತ್ವದಿಂದ ಪಾಳೆಯಗಾರರಾಗಿ ರಾಜತ್ವವನ್ನು ಗಳಿಸಿಕೊಂಡ ಸಂದರ್ಭದಲ್ಲಿ ನಾಯಕರು ಬಹುತೇಕ ವಿಜಯನಗರದ ಮಾದರಿಯನ್ನು ಹೋಲುವಂತಹ ಆಡಳಿತ ವ್ಯವಸ್ಥೆಯನ್ನು ರೂಪಿಸಿಕೊಂಡರು. ಸ್ಥಿರವಾದ ಆಡಳಿತವನ್ನು ಅಳವಡಿಸಿಕೊಂಡಿದ್ದರಿಂದ ನಾಯಕರು ೧೭ ಮತ್ತು ೧೮ನೆಯ ಶತಮಾನದ ಪೂರ್ವಾರ್ಧದವರೆಗೂ ರಾಜಕೀಯ ರಂಗದಲ್ಲಿ ಅಸ್ತಿತ್ವದಲ್ಲಿರಲು ಸಾಧ್ಯವಾಯಿತು.

೨. ಸಿಂಹಾಸನದ ಮತ್ತು ರಾಜಲಾಂಛನಗಳ ಬಳಕೆ: ಅಮರನಾಯಕರಾಗಿ ವಿಜಯನಗರ ಕಾಲದಲ್ಲಿ ಅಧಿಕಾರದಲ್ಲಿದ್ದ ನಾಯಕರು ವಿಜಯನಗರೋತ್ತರ ಕಾಲದಲ್ಲಿ ಸ್ವತಂತ್ರರಾಗಿ ರಾಜತ್ವವನ್ನು ಪಡೆದುಕೊಂಡ ನಂತರ ತಮ್ಮದೇ ಆದ ಸ್ವಯಂ ಅಧಿಕಾರವನ್ನು ಸ್ಥಾಪಿಸಿಕೊಂಡರು. ವಿಜಯನಗರ ಅರಸರಂತೆ ಸಿಂಹಾಸನ, ಪಟ್ಟಾಭಿಷೇಕ, ಅಧಿಕಾರವನ್ನು ಸಂಕೇತಿಸುವ ರಾಜಲಾಂಛನಗಳನ್ನು ಬಳಸತೊಡಗಿದರು. ಚಿತ್ರದುರ್ಗ, ಕೆಳದಿ, ಯಲಹಂಕ ಮೊದಲಾದ ನಾಯಕರು ಸಿಂಹಾಸನಗಳನ್ನು ಹೊಂದಿದ್ದರು. ಖಾಸಗಿ ದರ್ಬಾರು ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದರು. ಕೆಳದಿಯವರ ರಾಜಲಾಂಛನವು ಗಂಡಬೇರುಂಡವಾಗಿದ್ದು ಅದು ಕೆಳದಿಯ ವೀರಭದ್ರ ದೇವಾಲಯದ ಗೋಡೆಯೊಂದರ ಮೇಲೆ ಕೆತ್ತಲಾಗಿದೆ. ಮುಂದೆ ಮೈಸೂರು ಒಡೆಯರು ಇದೇ ಲಾಂಛನವನ್ನು ಬಳಸಿಕೊಂಡರು. ಪ್ರಸ್ತುತ ನಮ್ಮ ಕರ್ನಾಟಕ ರಾಜ್ಯವು ಇದೇ ಲಾಂಛನವನ್ನು ರಾಜ್ಯಲಾಂಛನವಾಗಿ ಬಳಸಿಕೊಂಡಿದೆ.

೩. ಪರಮಾಧಿಕಾರ ಸ್ಥಾಪನೆ: ಅಮರನಾಯಕತ್ವದಿಂದ ಪಾಳೆಯಗಾರಿಕೆಯನ್ನು ಪಡೆದುಕೊಂಡ ಪ್ರಕ್ರಿಯೆಗಳಲ್ಲಿ ಪರಮಾಧಿಕಾರದ ಸ್ಥಾಪನೆಯು ಒಂದಾಗಿದೆ. ವಿಜಯನಗರೋತ್ತರ ಕಾಲದಲ್ಲಿ ಬಲಿಷ್ಠ ಸಂಸ್ಥಾನಗಳಾಗಿ ರೂಪುಗೊಂಡಂತಹ ಕೆಳದಿ, ಚಿತ್ರದುರ್ಗ, ಯಲಹಂಕ, ಹಂಡೆ, ಹರತಿ, ಗುಡೇಕೋಟೆ, ಗುಮ್ಮನಾಯಕ ಪಾಳೆಯ, ಜರಿಮಲೆ, ಹರಪನಹಳ್ಳಿ ಮೊದಲಾದ ಪಾಳೆಯಪಟ್ಟುಗಳು ತಮ್ಮ ಆಡಳಿತ ಪ್ರದೇಶದ ವ್ಯಾಪ್ತಿಯಲ್ಲಿ ಪರಮಾಧಿಕಾರವನ್ನು ಹೊಂದಿದ್ದರು. ಈ ಮೇಲಿನ ಸಂಸ್ಥಾನಗಳಲ್ಲಿ ಕೆಳದಿ ಮತ್ತು ಮೈಸೂರು ಮಾತ್ರ ಅತ್ಯಂತ ಬಲಿಷ್ಠ ಸಂಸ್ಥಾನಗಳಾಗಿ ರೂಪುಗೊಂಡವು. ಕೆಳದಿಯು ತನ್ನ ಅಧಿಕಾರ ಬಲದಿಂದ ಕೆನರಾದವರೆಗೂ ಸಂಸ್ಥಾನದ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡರೆ, ಮೈಸೂರು ಸಂಸ್ಥಾನವು ದಕ್ಷಿಣ ಕರ್ನಾಟಕದ ಬಹುತೇಕ ಪ್ರದೇಶಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿತು. ಕೆಳದಿ, ಮೈಸೂರು, ಚಿತ್ರದುರ್ಗ ಮೊದಲಾದ ನಾಯಕರಸರು ತಮಗಿದ್ದ ಶಕ್ತಿ ಸಾಮರ್ಥ್ಯ ಮತ್ತು ಸೈನ್ಯ ಬಲದಿಂದ ಅನೇಕ ಚಿಕ್ಕಪುಟ್ಟ ಸಂಸ್ಥಾನಗಳ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿದರು. ಹಾಗೂ ಕಪ್ಪ ಕಾಣಿಕೆಗಳನ್ನು ವಸೂಲಿ ಮಾಡತೊಡಗಿದರು. ಉದಾ: ಕೆಳದಿಯು ಗೇರುಸೊಪ್ಪೆ ಅಜಿಲರು, ದಾನಿವಾಸ ಒಡೆಯರು, ಆಳುಪರು ಮೊದಲಾದ ಪಾಳೆಯಪಟ್ಟುಗಳನ್ನು ತನ್ನ

ಹಿಡಿತದಲ್ಲಿಟ್ಟುಕೊಂಡರೆ, ಚಿತ್ರದುರ್ಗವು ಹರತಿ, ಮತ್ತೋಡು, ನಿಡುಗಲ್ಲು, ನಾಯಕನಹಟ್ಟಿ, ಗುಡೇಕೋಟೆ, ಜರಿಮಲೆ ಮೊದಲಾದ ಪಾಳೆಯಪಟ್ಟುಗಳ ಮೇಲೆ ತನ್ನ ಅಧಿಕಾರವನ್ನು ಚಲಾಯಿಸಿತು.

೪. ಸ್ವತಂತ್ರ ಸೈನ್ಯದ ಸಂಘಟನೆ: ಅಮರನಾಯಕತ್ವದಿಂದ ರಾಜತ್ವವನ್ನು ಪಡೆದುಕೊಂಡ ಲಕ್ಷಣಗಳಲ್ಲಿ ಇದು ಪ್ರಧಾನ ಲಕ್ಷಣಗಳಾಗಿ ಕಂಡುಬರುತ್ತದೆ. ವಿಜಯನಗರ ಕಾಲದಿಂದಲೂ ಅಮರನಾಯಕರು ತಮ್ಮ ಆಡಳಿತ ಪ್ರದೇಶಗಳಲ್ಲಿ ಸೈನ್ಯವನ್ನು ಹೊಂದಿದ್ದರು. ಈ ಸೈನ್ಯವನ್ನು ಖಾಸಾ ಸೈನ್ಯ ಮತ್ತು ಮೀಸಲು ಸೈನ್ಯ ಎಂಬ ಎರಡು ಭಾಗಗಳನ್ನು ಮಾಡಿಕೊಂಡಿದ್ದರು. ಖಾಸಾ ಸೈನ್ಯವು ಅಮರನಾಯಕರ ಸೇವೆಗಾಗಿ ಸಜ್ಜಾಗಿದ್ದರೆ ಮೀಸಲು ಸೈನ್ಯವು ಕೇಂದ್ರದ ಸೇವೆಗಾಗಿ ಸದಾ ಸಜ್ಜಾಗಿರಬೇಕಾಗಿತ್ತು. ವಿದೇಶಿ ಪ್ರವಾಸಿಗರಾದ ಫಯಾಸ್ ಮತ್ತು ನ್ಯೂನಿಜರ ಬರವಣಿಗೆಗಳು ಈ ಅಂಶವನ್ನು ದೃಢೀಕರಿಸುತ್ತವೆ. ಪ್ರತಿಯೊಬ್ಬ ಅಮರನಾಯಕರು ಕೂಡ ತನ್ನ ಭೂಪ್ರದೇಶದ ವ್ಯಾಪ್ತಿಗೆ ಅನುಗುಣವಾಗಿ ಕಾಲ್ದಳ, ಅಶ್ವದಳ ಮತ್ತು ಗಜದಳಗಳನ್ನು ಹೊಂದಿದ್ದರು. ಅಮರನಾಯಕರು ಸ್ವತಂತ್ರ ರಾಜರಾಗಲು ಅವರ ಬಳಿಯಿದ್ದ ಸೇನಾಪಡೆಯು ಪ್ರಮುಖ ಕಾರಣವಾಗಿತ್ತು.

ಚಿತ್ರದುರ್ಗದ ನಾಯಕರು ಸ್ವತಂತ್ರರಾದ ನಂತರ ತಮ್ಮ ಸೈನ್ಯವನ್ನು ವ್ಯವಸ್ಥಿತವಾಗಿ ಸಂಘಟಿತಗೊಳಿಸಿಕೊಂಡಿದ್ದರು. ಚಿತ್ರದುರ್ಗದ ಸೈನ್ಯದಲ್ಲಿ ಮರಾಠರು, ರಜಪೂತರು, ರೋಹಿಲರು, ಬೇಡರು ಮುಂತಾದವರು ಸೈನ್ಯದಲ್ಲಿ ದಾಖಲಾಗಿದ್ದರು. ಚಿತ್ರದುರ್ಗವು ನಿರಂತರವಾಗಿ ಶತ್ರುಗಳ ದಾಳಿಗೆ ಒಳಗಾಗಿದ್ದು ಯುದ್ಧದ ವಾತಾವರಣ ಅನಿವಾರ್ಯವಾಗಿದ್ದರಿಂದ ಸೈನ್ಯವು ಕದನ–ಕೋಟೆಗಳ ಮುತ್ತಿಗೆಯಲ್ಲಿ ತೊಡಗಿರುತ್ತಿತ್ತು. ಫಿರಂಗಿ ತುಪಾಕಿಗಳನ್ನು ಹಾರಿಸುವುದು, ಉಡಗಳನ್ನು ಹಾಕಿ ಹಲ್ಲಾ ಹತ್ತುವುದು, ಕೋಟೆಗೋಡೆಗೆ ಸರಿಯಾಗಿ ಮೋರ್ಜಿಕಟ್ಟಿ ಹಾರಿಸುವುದು ಮೊದಲಾದ ಕದನ ತಂತ್ರಗಳು ಬಳಕೆಯಲ್ಲಿದ್ದವು. ದಂಡಿನವರ ತಿಳುವಳಿಕೆಗೆ ಕೂಚು ನಗಾರಿ, ಧರ್ಮಕಹಳೆ ಮೊದಲಾದವುಗಳನ್ನು ಬಳಸುತ್ತಿದ್ದರು.[೩೫] ಚಿತ್ರದುರ್ಗದ ಸೈನ್ಯದಲ್ಲಿ ಮಹಿಳಾ ಸೈನ್ಯದ ಪಡೆಯಿತ್ತು. ಕೆಳದಿಯ ನಾಯಕರು ಕೂಡ ಸುಸಜ್ಜಿತ ಸೈನ್ಯವನ್ನು ಹೊಂದಿದ್ದರು. ಕೆಳದಿಯ ಸೈನ್ಯವನ್ನು ಪದಾತಿ, ಅಶ್ವದಳ, ಗಜದಳ ಮತ್ತು ಫಿರಂಗಿಗಳೆಂಬ ನಾಲ್ಕು ಭಾಗಗಳಾಗಿ ವಿಂಗಡಿಸಿಕೊಂಡಿದ್ದರು. ಪದಾತಿ ದಳದ ಗರಿಷ್ಠ ಸಂಖ್ಯೆ ೧,೫೦,೦೦೦, ಅಶ್ವದಳ ೪,೦೦೦ ಇತ್ತು. ಗಜದಳದಲ್ಲಿ ೮೦ ಆನೆಗಳು ಇದ್ದವು. ಪದಾತಿ ದಳದಲ್ಲಿ ಖಡ್ಗಧಾರಿ, ಭರ್ಜಿಕಾರ ಧನುರ್ಧಾರಿ, ಬಂದೂಕುಧಾರಿಗಳಿದ್ದರೆ, ಕತ್ತಿಸ ಡಾಲುಗಳಿಂದ ಸಜ್ಜಿತರಾದ ವಿವಿಧ ಬಗೆಯ ಯೋಧರಿರುತ್ತಿದ್ದರು. ಕೆಳದಿಯ ಅರಸರು ಬಂದೂಕುಗಳನ್ನು, ಸಿಡಿಮದ್ದನ್ನು ಮತ್ತು ಸಣ್ಣ ಫಿರಂಗಿಗಳನ್ನು ವಿದೇಶಿ ಕಂಪನಿಗಳಿಂದ ಕೊಂಡುಕೊಳ್ಳುತ್ತಿದ್ದರು. ಇಲ್ಲವೇ ಗುತ್ತಿಗೆ ಪಡೆಯುತ್ತಿದ್ದರು. ಕೆಳದಿಯ ಅನೇಕ ಅರಸರು ಸಮಸ್ತ ಸೇನೆಗಳ ಮೇಲ್ವಿಚಾರಕನ ಬದಲು ತಾವೇ ಸೈನ್ಯದ ನೇತೃತ್ವ ವಹಿಸಿ ರಣಭೂಮಿಗೆ ಇಳಿಯುತ್ತಿದ್ದರು. ಕೆಳದಿಯ ಸೇನಾಪಪತಿಗಳನ್ನು ದಳವಾಯಿಗಳೆಂದು ಕರೆಯುತ್ತಿದ್ದರು. ಅವನ ಕೆಳಗೆ ಸಬ್ಬುನಿಸ ಸುಭೇದಾರ, ಜಮಾದಾರ ಮತ್ತಿತರ ಅಧಿಕಾರಿಗಳು ಇರುತ್ತಿದ್ದರು. ಅನೇಕ ಸಂದರ್ಭಗಳಲ್ಲಿ ಪ್ರಾಂತಪಾಲರು ಸಹ ಸೇನೆಯ ಮುಂದಾಳತ್ವವನ್ನು ವಹಿಸುತ್ತಿದ್ದರು. ದುರ್ಗಗಳ ಏರ್ಪಾಟು ಉತ್ತಮವಾಗಿತ್ತು.[೩೬] ಒಟ್ಟಿನಲ್ಲಿ ಕೆಳದಿಯ ನಾಯಕರು

ಅತ್ಯುತ್ತಮವಾದ ಸೈನ್ಯವನ್ನು ಹೊಂದಿದ್ದು ತೀರ ಪ್ರದೇಶದವರೆಗೆ ತಮ್ಮ ಸಂಸ್ಥಾನದ ಮೇರೆಗಳನ್ನು ಹಿಗ್ಗಿಸಿಕೊಂಡರು. ಯಲಹಂಕ ನಾಡಪ್ರಭುಗಳು ಆಕ್ರಮಣಶೀಲ ಚಟುವಟಿಕೆಗಳಲ್ಲಿ ಹೆಚ್ಚು ಮಗ್ನರಾಗದಿದ್ದರೂ ಸಹ ಬಲಿಷ್ಠವಾದ ಸೇನಾಪಡೆಯನ್ನು ಹೊಂದಿದ್ದರು. ಇವರ ಸೇನೆಯಲ್ಲಿ ಫಿರಂಗಿದಳದ ಜೊತೆಗೆ ಕಾಲ್ದಳ, ಅಶ್ವದಳ, ಗಜದಳವಿತ್ತು. ಮದ್ದುಗುಂಡುಗಳನ್ನು ತಯಾರಿಸುವ ಕಾರ್ಯಾಗಾರಗಳನ್ನು ಸ್ಥಾಪಿಸಿಕೊಂಡಿದ್ದರು. ಹಂಡೆ, ಹರತಿ, ಗುಡೇಕೋಟೆ ಮತ್ತು ಗುಮ್ಮನಾಯಕ ಪಾಳೆಯದ ಪಾಳೆಯಗಾರರು ಸಹ ತಮ್ಮ ಪ್ರದೇಶವಾರು ಇತಿಮಿತಿಯಲ್ಲಿ ಸೈನ್ಯವನ್ನು ಹೊಂದಿದ್ದರು. ಈ ನಾಯಕರು ಸೇನಾಪಡೆಗಳು ೧೫೬೫ರ ರಕ್ಕಸ ತಂಗಡಿ ಕದನದಲ್ಲಿ ಭಾಗವಹಿಸಿದ್ದವು. ಯುದ್ಧದ ನಂತರ ತಮಗಿದ್ದ ಸೇನಾ ಬಲದಿಂದಲೇ ಅಮರನಾಯಕರು ತಮಗೆ ತಾವೇ ಸ್ವತಂತ್ರರೆಂದು ಘೋಷಿಸಿಕೊಂಡರು. ಯಲಹಂಕದ ನಾಡಪ್ರಭುಗಳು ಮಾತ್ರ ನಾಮಮಾತ್ರವಾಗಿ ವಿಜಯನಗರದ ಅರವೀಡು ಮನೆತನದ ಅಧೀನತೆಯಲ್ಲಿದ್ದರು. ಹೀಗೆ ಸೇನಾಪಡೆಯು ಸಹ ಅಮರನಾಯಕರು ರಾಜತ್ವವನ್ನು ಪಡೆಯುವಲ್ಲಿ ಸಹಾಯಕವಾಯಿತು. ಹಾಗೂ ಅಮರನಾಯರನ್ನು ಸ್ವತಂತ್ರ ಅರಸರನ್ನಾಗಿ ಗುರುತಿಸುವ ಪ್ರಧಾನ ಲಕ್ಷಣಗಳಲ್ಲಿ ಒಂದಾಯಿತು.

೫. ಸ್ವತಂತ್ರ ವಿದೇಶಾಂಗ ನೀತಿ: ಅಮರನಾಯಕತ್ವದಿಂದ ರಾಜತ್ವವನ್ನು ಪಡೆದುಕೊಂಡ ನಂತರ ನಾಯಕರಸರು ತಮ್ಮ ತಮ್ಮ ಆಡಳಿತ ಪ್ರದೇಶದ ವ್ಯಾಪ್ತಿಗೆ ಅನುಗುಣವಾಗಿ ತಮ್ಮದೇ ಆದಂತಹ ಸ್ವತಂತ್ರ ವಿದೇಶಾಂಗ ನೀತಿಯನ್ನು ಅಳವಡಿಸಿಕೊಂಡರು. ಕೆಳದಿಯ ನಾಯಕರು ಪೋರ್ಚುಗೀಸರು ಮತ್ತು ಬ್ರಿಟಿಷರೊಂದಿಗೆ ಉತ್ತಮವಾದ ವ್ಯಾಪಾರ ವಾಣಿಜ್ಯ ಸಂಬಂಧಗಳನ್ನು ಹೊಂದಿದ್ದರು. ಹಾಗೂ ಸಮಕಾಲೀನ ನಾಯಕರೊಂದಿಗೆ ತಮ್ಮದೇ ಆದ ಆಂತರಿಕ ನೀತಿಯನ್ನು ಅಳವಡಿಸಿಕೊಂಡು ಸಂಬಂಧವನ್ನು ವೃದ್ಧಿಸಿಕೊಂಡರು. ಯಲಹಂಕ ನಾಡಪ್ರಭುಗಳು, ಚಿತ್ರದುರ್ಗ ನಾಯಕರು ಸ್ವತಂತ್ರವಾದ ವಿದೇಶಾಂಗ ನೀತಿಯನ್ನು ರೂಪಿಸಿಕೊಂಡಿದ್ದರು. ಯಲಹಂಕ ನಾಡು ಬ್ರಿಟಿಷರೊಂದಿಗೆ ಉತ್ತಮವಾದ ವ್ಯಾಪಾರ ಸಂಬಂಧಗಳನ್ನು ಹೊಂದಿತ್ತು. ಚಿತ್ರದುರ್ಗ ನಾಯಕರು ಹಂಡೆ ನಾಯಕರು ಗುಮ್ಮನಾಯಕ ಪಾಳೆಯಗಾರರು ಮೊದಲಾದವರು ಕೂಡ ಮುಕ್ತವಾದ ವ್ಯಾಪಾರ ವಾಣಿಜ್ಯ ನೀತಿಗಳನ್ನು ಹೊಂದಿದ್ದು, ಸಮಕಾಲೀನ ಪಾಳೆಯಗಾರರು ಹಾಗೂ ವಿದೇಶಿಯರೊಂದಿಗೆ ತಮ್ಮದೇ ಆದ ವಿದೇಶಾಂಗ ನೀತಿಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು.

೬. ಸ್ವತಂತ್ರವಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ವ್ಯವಸ್ಥೆ: ಅಮರನಾಯಕತ್ವದಿಂದ ರಾಜತ್ವವನ್ನು ಪಡೆದ ನಾಯಕ ಅರಸು ಮನೆತನಗಳಲ್ಲಿ ಕಾಣುವ ಮತ್ತೊಂದು ಪ್ರಧಾನ ಲಕ್ಷಣವೇ ಸ್ವತಂತ್ರವಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ವ್ಯವಸ್ಥೆಯಾಗಿದೆ. ಕೆಳದಿಯ ನಾಯಕರು, ಚಿತ್ರದುರ್ಗದ ನಾಯಕರು, ಯಲಹಂಕದ ನಾಡಪ್ರಭುಗಳು ವಿಜಯನಗರದ ಅಧೀನದಲ್ಲಿದ್ದಾಗ ವಿಜಯನಗರದ ಅನುಮತಿ ಇಲ್ಲದೇ ಶಾಸನಗಳನ್ನು ಹೊರಡಿಸುವ ಅಧಿಕಾರನ್ನು ಹೊಂದಿದ್ದರು. ಇವರು ಮೊದಲ ದರ್ಜೆಯ ಅಮರನಾಯಕರಾಗಿದ್ದರಿಂದ ಈ ಬಗೆಯ ಅಧಿಕಾರವಿತ್ತು.

ಆದರೆ ಎರಡನೆ ದರ್ಜೆಯ ಅಮರನಾಯಕರಾಗಿದ್ದ ಹಂಡೆ, ಹರತಿ, ಗುಡೇಕೋಟೆ, ಜರಿಮಲೆ, ಮತ್ತೋಡು, ನಾಯಕನಹಟ್ಟಿ ಮೊದಲಾದ ಪಾಳೆಯಪಟ್ಟುಗಳು ತಮ್ಮ ಆಳ್ವಿಕೆಯ ಅವಧಿಯಲ್ಲಿ ಹೊರಡಿಸುವ ಶಾಸನಗಳಲ್ಲಿ ವಿಜಯನಗರದ ಅರಸರನ್ನು ಉಲ್ಲೇಖಿಸಿ ಶಾಸನಗಳನ್ನು ಹೊರಡಿಸುತ್ತಿದ್ದವು. ಆದರೆ ಈ ಎಲ್ಲ ಪಾಳೆಯಪಟ್ಟುಗಳು ಸ್ವತಂತ್ರಗೊಂಡ ನಂತರ ತಮ್ಮ ಕಾಲಾವಧಿಯಲ್ಲಿ ಹೊರಡಿಸಿದಂತಹ ಶಾಸನಗಳಲ್ಲಿ ಸ್ವತಂತ್ರವಾಗಿ ಯಾವ ಅರಸರ ಉಲ್ಲೇಖವಿಲ್ಲದೆ ನೇರವಾಗಿ ತಮ್ಮ ಹೆಸರುಗಳನ್ನು ನಮೂದಿಸುತ್ತಿದ್ದರು. ಉದಾಹರಣೆಗೆ ಚಿತ್ರದುರ್ಗ ನಾಯಕರ ಶಾಸನಗಳನ್ನು ಪರಿಶೀಲಿಸುವುದಾದರೆ–

೧. ಶುಭಮಸ್ತು ನಮಃ ಕೇಶವನಾಥಯಾನಯನಾ

೨. ನಂದ ಮೂರ್ತ್ತಯೇ ವೇಲಾಪುರೀನಿವಾಸಾಯ ಸತ್ಯ

೩. ಗ್ಯಾನಾಯ–ವಿಷ್ಣವೇ ಸ್ವಸ್ತಿಶ್ರಿಯದ್ದು (ದ)ಯ ಶಾಲಿವಾ

೪. ಹನ ಸಕ ವರುಷಂಗಳು ೧೫೦೨ ಮನ್ಮಥಸಂವತ್ಸ

೫. ರದಚಯಿತ್ರಶು ೧ ಗುರುವಾರದಲುಶ್ರೀಮತು

೬. ದುರ್ಗದ ರಂಗಪ್ಪನಾಯಕರು ಬಾಣವರಕ್ಕೆಸಲು

೭. ವಗ್ರಾಮಸೊಪಿನಹಳಿಯನು ತಿರುವೆಂಗಳಯಾಗಿ ಕೊ

೮. ಟನುಸೊಪಿಹಳಿಗ್ರಾಮವನು ಬೇಲೂರಚೆಂನಿಗರಾಯ

೯. ನಿಗೆ–ಸಮರ್ಪಿಸಿದನು ಯಿಗ್ರಾಮಕ್ಕೆಅಳುಪಿದವನು

೧೦. ತಂಮ್ಮತಾಯಿತಂದೆಯನು ವಾರಣಾಸಿಯಲಿ ಕೊಂಳ

೧೧. ಯಿದ (ಪಾ)ತಕೆ ಹೋಗುವನು.

ಇದು ೧೫೫೫ರ ಕಾಲದ ಶಾಸನವಾಗಿದ್ದು ಚಿತ್ರದುರ್ಗದ ರಂಗಪ್ಪನಾಯಕರು ಬಾಣವರಕೆ ಸಲ್ಲುವ ಸೊಪ್ಪಿನಹಳ್ಳಿ ಗ್ರಾಮವನ್ನು ಬೇಲೂರ ಚೆನ್ನಿಗರಾಯ ದೇವರ ಸೇವಾರ್ಥವಾಗಿ ತಿರುವೆಂಗಳಯ್ಯನಿಗೆ ಕೊಟ್ಟ ದಾನವನ್ನು ಉಲ್ಲೇಖಿಸಿದೆ. ಶಾಸನವು ಚಿತ್ರದುರ್ಗ ಜಿಲ್ಲೆಯ ಸೊಪ್ಪಿನಹಳ್ಳಿಯಲ್ಲಿದೆ.

ಗುಂಡಸಮುದ್ರದ ಮದಕೇರಿ ನಾಯಕನ ಶಿಲಾ ಶಾಸನವೊಂದು ೧೬೬೦ರ ಕಾಲಮಾನದ್ದಾಗಿದ್ದು, ಕಾಮಗೇತಿ ಕಸ್ತೂರಿ ಮದಕೇರಿ ನಾಯಕರು ಬಾಗುರಚರುತ್ತಿ ರಾಮದೇವರಿಗೆ ಗುಂಡಸಮುದ್ರದ ಪುರವರ್ಗವನ್ನು ದಾನ ಕೊಟ್ಟ ವಿವರಗಳನ್ನು ದಾಖಲಿಸುತ್ತದೆ.

೧. ಶ್ರೀಮತು ಸಾರ್ವರಿಶಂವಚರ

೨. ದಲುಬಾಗುರಚರುತ್ತಿ ರಾಮ

೩. ಗಿರಿದೇವರಿಗೆ ಕಾಮಗೆತ್ತಿಕಸ್ತುರಿ

೪. ಮದಕರಿ ನಾಯ್ಕರು

೫. ಗುಂಡ ಸಮುದ್ರದ ಪುರವರ್ಗ

೬. ಕೊಟದೂಯಿದ ಕೆತ

೭. ಪಿದವರು ತಂಮ ತಾಯಿಗೆ ತಪಿ

೮. ದ ಹಾಗೆಯಂದು

೯. ಪುರ ವರ್ಗ[೩೭] ಒಟ್ಟಿನಲ್ಲಿ ನಾಯಕರು ವಿಜಯನಗರದಿಂದ ಕ್ರಿ.ಶ. ಸ್ವತಂತ್ರಗೊಂಡ ನಂತರ ತಾವು ಹೊರಡಿಸುವ ಶಾಸನಗಳಲ್ಲಿ ಎಲ್ಲಿಯೂ ಕೂಡ ತಮ್ಮ ವಂಶ, ನಾಮ, ಕುಲ, ಗೋತ್ರಗಳನ್ನು ಹೊರತುಪಡಿಸಿ ಬೇರೆ ರಾಜಮನೆತನದ ಅಧೀನತೆಯನ್ನು ಒಪ್ಪುವಂತಹ ನಾಮಧೇಯಗಳನ್ನು ಹಾಕಿಸಿಲ್ಲ. ಮೊದಲ ವರ್ಗದ ನಾಯಕರಲ್ಲಿ ಈ ಬಗೆಯ ಸ್ವತಂತ್ರವನ್ನು ಕಾಣಬಹುದಾಗಿದೆ. ಇನ್ನು ಕಾರ್ಯಾಂಗ ಮತ್ತು ನ್ಯಾಯಾಂಗ ವ್ಯವಸ್ಥೆಗಳನ್ನು ವಿಶ್ಲೇಷಿಸುವುದಾದರೆ ಕಾರ್ಯಾಂಗ ಮತ್ತು ನ್ಯಾಯಾಂಗಳೆರಡು ರಾಜನ ಅಥವಾ ನಾಯಕರಸರ ಅಧೀನತೆಗೆ ಒಳಪಟ್ಟಿದ್ದವು.

ಕಾರ್ಯಾಂಗದಲ್ಲಿ ನಾಯಕರಸರು, ಪ್ರಧಾನರು, ಗುರಿಕಾರರು ದಳಪತಿಗಳು, ದಂಣನಾಯಕರು ಸೇನಾಧಿಪತಿಗಳು ಕಾರ್ಯನಿರ್ವಹಿಸಿದರೆ ನ್ಯಾಯಾಂಗದಲ್ಲಿ ಪ್ರಧಾನ ನ್ಯಾಯಾಧೀಶನಾಗಿ ನಾಯಕರಸರು ದಂಣನಾಯಕರು, ಪಟೇಲರು, ಗೌಡರು ಕಾರ್ಯವನ್ನು ನಿರ್ವಹಿಸುತ್ತಿದ್ದರು.

೭. ಪ್ರಾದೇಶಿಕ ವಿಸ್ತರಣೆಗಾಗಿ ಕೈಗೊಳ್ಳುತ್ತಿದ್ದ ಯುದ್ಧಗಳು: ಅಮರನಾಯಕರಾಗಿದ್ದವರು ಪಾಳೆಯಗಾರರಾಗಿ ರಾಜತ್ವವನ್ನು ಗಳಿಸಿಕೊಂಡ ನಂತರ ತಮ್ಮ ರಾಜಕೀಯ ಅಸ್ತಿತ್ವದ ಮುಂದುವರಿಕೆಗಾಗಿ ಯುದ್ಧಗಳನ್ನು ಅನಿವಾರ್ಯವಾಗಿ ಮಾಡಲೇಬೇಕಿತ್ತು. ಕ್ರಿ.ಶ. ೧೭ ಮತ್ತು ೧೮ನೇ ಶತಮಾನಗಳು ರಾಜಕೀಯವಾಗಿ ಅನ್ಯೆಕ್ಯತೆಯಿಂದ ಕೂಡಿದ್ದು ಪಾಳೆಯಗಾರರು ಸದಾ ಈರ್ಷ್ಯೆ ದ್ವೇಷಾಸೂಯೆಗಳಿಂದ ಒಬ್ಬರನ್ನು ಮತ್ತೊಬ್ಬರು ಹತ್ತಿಕ್ಕುವಂತಹ ಕುಟಿಲ ನೀತಿಗಳ ಯುದ್ಧಗಳಲ್ಲಿ ಭಾಗಿಯಾಗುತ್ತಿದ್ದರು. ಪ್ರಾದೇಶಿಕ ವಿಸ್ತರಣೆ ಮತ್ತು ಸ್ವಪ್ರತಿಷ್ಠೆಗಾಗಿ ನಾಯಕರು ಮಾಡುತ್ತಿದ್ದ ಯುದ್ಧಗಳು ಆರ್ಥಿಕವಾಗಿ ರಾಜಕೀಯವಾಗಿ ದುರ್ಬಲರಾಗಲು ಕಾರಣವಾಗಿ ಮುಂದೆ ಸಂಭವಿಸಲಿದ್ದ ಅವನತಿಯ ಹಾದಿಗೆ ಅಂಕುರವಾದವು.

೮. ಅಮರನಾಯಕರು ಪಾಳೆಯಗಾರರಾದ ನಂತರ ತಮ್ಮ ಆಡಳಿತದಲ್ಲಿ ಶೈಕ್ಷಣಿಕ ಪ್ರಗತಿಗಾಗಿ ಶ್ರಮಿಸಿದರು. ಮಠಗಳನ್ನು, ಅಗ್ರಹಾರಗಳನ್ನು ಹೊಸದಾಗಿ ಸ್ಥಾಪಿಸಿದರು. ಹಾಗೂ ಹಳೆಯ ಕಾಲದ ಮಠಗಳನ್ನು ಮತ್ತು ಅಗ್ರಹಾರಗಳನ್ನು ಜೀರ್ಣೋದ್ಧಾರಗೊಳಿಸಿದರು. ಇವುಗಳ ಪ್ರಗತಿಗಾಗಿ ಅಪಾರ ಪ್ರಮಾಣದ ಭೂದಾನಗಳನ್ನು ನೀಡಿದರು.

೯. ಕೃಷಿ ಕೈಗಾರಿಕೆ, ವ್ಯಾಪಾರ ವಾಣಿಜ್ಯ ಕ್ಷೇತ್ರಗಳನ್ನು ಸುಧಾರಿಸಲು ತಮ್ಮದೇ ಆದಂತಹ ಹೊಸ ಆಡಳಿತಾತ್ಮಕ ಸುಧಾರಣಾ ನೀತಿಗಳನ್ನು ಜಾರಿಗೆ ತಂದರು. ವಿಜಯನಗರದವರಂತೆ ಅತಿಯಾದ ಕಂದಾಯವನ್ನು ಪ್ರಜೆಗಳ ಮೇಲೆ ಹೇರದೆ ಕಂದಾಯ ನೀತಿಗಳನ್ನು ಸರಳಗೊಳಿಸಿದರು. ಆದರೆ ಕೆಲವು ನಾಯಕರು ಪ್ರಜಾಪೀಡಕರಾಗಿದ್ದು ದೌರ್ಜನ್ಯ, ದಬ್ಬಾಳಿಕೆ ಮತ್ತು ದುರಂಹಕಾರಗಳಿಂದ ಅಧಿಕಾರವನ್ನು ನಡೆಸಿರುವಂತಹ ಪ್ರಕರಣಗಳು ಸಹ ಕಂಡು ಬರುತ್ತವೆ. ೧೭ ಮತ್ತು ೧೮ನೇ ಶತಮಾನದಲ್ಲಿ ತಮ್ಮ ಸಂಸ್ಥಾನಗಳನ್ನು ರಕ್ಷಿಸಿಕೊಳ್ಳಲು ಪಾಳೆಯಗಾರರು ಸಾಕಷ್ಟು ಕಷ್ಟಪಡುತ್ತಿದ್ದರು. ಮೊಗಲರು, ಮರಾಠರು ಮತ್ತು ನಿಜಾಮರಿಗೆ ಕಪ್ಪಗಳನ್ನು ಕೊಡಲಾಗದೆ ಜರ್ಜರಿತರಾಗಿ ಜನ ಸಾಮಾನ್ಯರ ಕರಭಾರವನ್ನು ವಿಧಿಸುತ್ತಿದ್ದರು.

೧೦. ಸಾಂಸ್ಕೃತಿಕ ವಲಯವನ್ನು ಶ್ರೀಮಂತಗೊಳಿಸಲು ತಮ್ಮ ಆಡಳಿತ ವ್ಯಾಪ್ತಿಯ ಭೂ ಪ್ರದೇಶಗಳಲ್ಲಿ ಚಿತ್ರದುರ್ಗ, ಕೆಳದಿ, ಹರತಿ, ಹಂಡೆ, ಗುಮ್ಮನಾಯಕ ಪಾಳೆಯ, ಗುಡೇಕೋಟೆ, ಮೊದಲಾದ ನಾಯಕರು ಹಲವಾರು ಹೊಸ ದೇವಾಲಯಗಳನ್ನು ನಿರ್ಮಾಣ ಮಾಡಿದರು. ಹಳೆಯ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿದರು. ಧರ್ಮ ಮತ್ತು ಸಂಸ್ಕೃತಿಯನ್ನು ಪೋಷಿಸಿದರು. ನಾಯಕರ ಕಾಲದಲ್ಲಿ ವೈಷ್ಣವ, ವೀರಶೈವ, ಶಾಕ್ತ ಪಂಥಗಳು ಜನಪ್ರಿಯ ಮತಪಂಥಗಳಾಗಿ ಉದಯವಾದವು. ಒಟ್ಟಿನಲ್ಲಿ ಅಮರನಾಯಕತನದಿಂದ ಸ್ಥಳೀಯ ಮಟ್ಟದ ದೊರೆಗಳಾಗಿ ಕಾಣಿಸಿಕೊಂಡ ನಾಯಕರು ರಾಜರುಗಳಂತೆ ಅಧಿಕಾರವನ್ನು ನಡೆಸಿದರು ಎನ್ನುವುದಕ್ಕೆ ಮೇಲಿನ ಅಂಶಗಳು ಸಮರ್ಥನೆಯನ್ನು ನೀಡುತ್ತವೆ.

೬.೪ ಅಮರನಾಯಕರು ಪರಿಪಾಲಿಸುತ್ತಿದ್ದ ಪ್ರದೇಶಗಳೇ ಮುಂದೆ ಪಾಳೆಯಪಟ್ಟುಗಳಾದವೇ ಇಲ್ಲವೇ?

ವಿಜಯನಗರ ಕಾಲದ ಅಮರನಾಯಕರ ಸ್ಥಿತ್ಯಂತರಗಳನ್ನು ಕುರಿತು ಅಧ್ಯಯನ ಮಾಡುವಾಗ ಏಳುವ ಬಹುದೊಡ್ಡ ಪ್ರಶ್ನೆಯೆಂದರೆ ಅಮರನಾಯಕರು ಪರಿಪಾಲಿಸುತ್ತಿದ್ದ ಪ್ರದೇಶಗಳೇ ಮುಂದೆ ಪಾಳೆಯಪಟ್ಟುಗಳಾದವೇ ಅಥವಾ ಇಲ್ಲವೇ ಎಂಬುದು. ಈ ಸಮಸ್ಯೆಗಳನ್ನು ಪರಿಹರಿಸಲು ಇರುವ ಸುಲಭ ಮಾರ್ಗವೆಂದರೆ ವಿಜಯನಗರ ಆಡಳಿತಾವಧಿಯಲ್ಲಿ ಶಾಸನೋಕ್ತವಾಗಿ ಉಲ್ಲೇಖಗೊಂಡಿರುವ ಅಮರನಾಯಕರನ್ನು ಪತ್ತೆಹಚ್ಚುವುದು. ಹಾಗೂ ವಿಜಯನಗರೋತ್ತರ ಕಾಲದ ಪಾಳೆಯಗಾರರು ಮೂಲದಲ್ಲಿ ವಿಜಯನಗರ ಕಾಲದ ಅಮರನಾಯಕರಾಗಿದ್ದರೇ ಅಥವಾ ಇಲ್ಲವೇ ಎಂಬುದನ್ನು ಶೋಧಿಸಿದಾದ ಮಾತ್ರ ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಬಹುದಾಗಿದೆ. ಉದಾ: ವಿಜಯನಗರೋತ್ತರ ಕಾಲದಲ್ಲಿ ರಾಜತ್ವವನ್ನು ಪಡೆದುಕೊಂಡ ಅಮರನಾಯಕರುಗಳ ಸಂಕ್ಷಿಪ್ತ ಇತಿಹಾಸವನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದು.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಅಮರನಾಯಕರಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದ ನಾಯಕರು ವಿಜಯನಗರೋತ್ತರ ಕಾಲದಲ್ಲಿ ಪಾಳೆಯಗಾರರಾಗಿ ಸಣ್ಣ ಪ್ರಮಾಣದ ರಾಜರುಗಳಾಗಿ

ಪ್ರವರ್ಧಮಾನಕ್ಕೆ ಬಂದರು. ಇವರನ್ನು ರೂಢಿಗತವಾಗಿ ಪಾಳೆಯಗಾರರೆಂದು ಕರೆದರೂ ಇವರು ತಮ್ಮನ್ನು ಪಾಳೆಯಗಾರರೆಂದು ಕರೆದುಕೊಳ್ಳದೇ ನಾಯಕರು, ನಾಯಕ ಅರಸರು, ಮಹಾನಾಡುಪ್ರಭು, ನಾಡಪ್ರಭು, ನಾಡಗೌಡ ಕರೆದುಕೊಂಡಿದ್ದಾರೆ. ವಿಜಯನಗರೋತ್ತರ ಕಾಲದ ಪಾಳೆಯಗಾರರ ಅಧ್ಯಯನವಿಲ್ಲದೇ ವಿಜಯನಗರ ಕಾಲದ ಅಮರನಾಯಕ ಅಧ್ಯಯನವು ಪೂರ್ಣಗೊಳ್ಳುವುದಿಲ್ಲ. ಏಕೆಂದರೆ ವಿಜಯನಗರ ಕಾಲದ ಅಮರನಾಯಕರೇ ವಿಜಯನಗರೋತ್ತರ ಕಾಲದಲ್ಲಿ ಪಾಳೆಯಗಾರರಾಗಿದ್ದರಿಂದ ಈ ನಾಯಕರ ಇತಿಹಾಸವನ್ನು ಅಮರನಾಯಕರ ಇತಿಹಾಸದ ಮೂಲದಿಂದಲೇ ಚರ್ಚಿಸಬೇಕಾಗುತ್ತದೆ. ವಿಜಯನಗರ ಕಾಲದಲ್ಲಿ ಪ್ರಾದೇಶಿಕ ಮಟ್ಟದಲ್ಲಿ ಸೈನ್ಯ ಮತ್ತು ಕಂದಾಯಾಧಿಕಾರಿಗಳಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದ ಅಮರನಾಯಕರು ಬದಲಾದ ರಾಜಕೀಯ ಸನ್ನಿವೇಶಗಳಲ್ಲಿ ತಮ್ಮ ತಮ್ಮ ಆಳ್ವಿಕೆಯ ಪ್ರದೇಶಗಳಲ್ಲಿ ಸಣ್ಣ ಮಟ್ಟದ ರಾಜರುಗಳಾಗಿ ರೂಪುಗೊಂಡರು. ಆದರೆ ವಿಜಯನಗರದ ಮೊದಲ ಮತ್ತು ಎರಡನೆಯ ದರ್ಜೆಯ ನಾಯಕರು ಮಾತ್ರ ರಾಜತ್ವವನ್ನು ಪಡೆದುಕೊಂಡರೆ, ೩ನೇ ವರ್ಗದ ನಾಯಕರು ಹಿಂದಿನ ನಾಯಕರ ಅಧೀನದಲ್ಲಿಯೇ ಮುಂದುವರಿದರು. ಹಾಗೂ ಬಹುತೇಕ ಶಾಸನೋಕ್ತ ೩ನೇ ವರ್ಗದ ಅಮರನಾಯಕರು ಇತಿಹಾಸದಿಂದ ಕಣ್ಮರೆಯಾದರು. ಅಂತಹ ಮರೆಯಾಗಿಹೋದ ನೂರಾರು ನಾಯಕ ಮನೆತನಗಳು ಉಪಜೀವಿಗಳಾಗಿ ಬಲಿಷ್ಠ ನಾಯಕರ ಅಧೀನರಾಗಿ ಮುಂದುವರಿದರೆ ಇನ್ನು ಕೆಲವು ನಾಯಕ ಮನೆತನಗಳು, ಸಂಪೂರ್ಣ ಇತಿಹಾಸದಿಂದ ಕಣ್ಮರೆಯಾಗಿಹೋದವು. ಅಂತಹ ಕೆಲವು ಅಮರನಾಯಕ ಮನೆತನಗಳು ಪಾಳೆಯಗಾರರಾಗಿ ರೂಪುಗೊಂಡ ನಂತರ ತಮಗೆ ವಿಜಯನಗರವು ನಾಯಕತನಕ್ಕಾಗಿ ನೀಡಿದ ಸೀಮೆಗಳಲ್ಲಿಯೇ ಮುಂದೆ ಪಾಳೆಯಗಾರರಾಗಿ ಮುಂದುವರೆದರೆ ಅಥವಾ ಇಲ್ಲವೆ ಎಂಬುದನ್ನು ಪರಿಶೀಲಿಸಲಾಗಿದೆ.

ಕ್ರಿ.ಶ. ೧೪೯೯ರಲ್ಲಿ ಕೆಳದಿಯ ಸಂಸ್ಥಾನವನ್ನು ಚೌಡಪ್ಪ ಮತ್ತು ಭದ್ರಪ್ಪ ಎಂಬುವರು ಸ್ಥಾಪನೆ ಮಾಡಿದರು. ವಿಜಯನಗರದ ಅರಸರು ಇವರಿಗೆ ಚಂದ್ರಗುತ್ತಿ, ಕೆಳದಿ, ಇಕ್ಕೇರಿ, ಪೆರ್ಬಯಲು, ಎಲಗಳಲೆ, ಮೇದೂರು, ಕಲಸೆ, ಲಾಟವಾಡಿ ಎಂಬ ಎಂಟು ಮಾಗಣೆಗಳನ್ನು ಅಮರನಾಯಕತನಕ್ಕಾಗಿ ನೀಡಿದರು. ಈ ಎಂಟು ಮಾಗಣೆಗಳನ್ನು ತಮ್ಮ ನಾಯಕತನಕ್ಕಾಗಿ ಪಡೆದುಕೊಂಡು ಅದರಲ್ಲಿ ಕೆಳದಿ ಪ್ರದೇಶವನ್ನು ತಮ್ಮ ಆಡಳಿತ ವ್ಯವಸ್ಥೆಯ ಮುಖ್ಯ ಕೇಂದ್ರವನ್ನಾಗಿಸಿಕೊಂಡು ಆಳಿದರು. ನಂತರ ಕ್ರಿ.ಶ. ೧೫೪೫ರ ನಂತರ ಕೆಳದಿಯ ಸ್ವತಂತ್ರ ರಾಜ್ಯವೆಂದು ಪರಿಗಣಿಸಲ್ಪಟ್ಟಿತು. ರಕ್ಕಸ ತಂಗಡಿ ಯುದ್ಧದಲ್ಲಿ ವಿಜಯನಗರವು ಸೋತರೂ ಇವರು ವಿಜಯನಗದೊಂದಿಗೆ ಸಂಬಂಧಗಳನ್ನು ಹಾಗೆಯೇ ಮುಂದುವರೆಸಿದ್ದರು. ಕೆಳದಿಯ ನಂತರ ಇಕ್ಕೇರಿ ಮತ್ತು ಬಿದನೂರುಗಳನ್ನು ತಮ್ಮ ರಾಜಧಾನಿಗಳನ್ನಾಗಿ ಕ್ರಿಶ ೧೭೬೩ರವರೆಗೂ ಕೆಳದಿ ನಾಯಕರು ಆಳ್ವಿಕೆ ನಡೆಸಿ ಅನಂತರ ಹೈದರಾಲಿಯಿಂದ ಸೋತು ಅವನತಿಯಾದರು.

ಯಲಹಂಕ ನಾಡಪ್ರಭುಗಳು ಆರಂಭದಲ್ಲಿ ವಿಜಯನಗರ ಕಾಲದ ನಾಡಗೌಡರಾಗಿ ಸೇವೆಯನ್ನು ಸಲ್ಲಿಸುತ್ತಿದ್ದರು. ನಂತರದ ಕಾಲದಲ್ಲಿ ಈ ವಂಶದ ಕೆಂಪನಂಜೇಗವುಡರು ಕೃಷ್ಣದೇವರಾಯನಿಂದ

ಯಲಹಂಕನಾಡನ್ನು ಅಮರನಾಯಕತನಕ್ಕಾಗಿ ಪಡೆದುಕೊಂಡು ಏಳಿಗೆಗೆ ಬಂದರು. ನಂತರ ಅಚ್ಯುತದೇವರಾಯನ ಆಡಳಿತಾವಧಿಯಲ್ಲಿ ಹಿರಿಯ ಕೆಂಪೇಗೌಡರು ಯಲಹಂಕ ರಾಜ್ಯವನ್ನು ನಾಯಕತನಕ್ಕಾಗಿ ಪಡೆದುಕೊಂಡರು. ಕೃಷ್ಣದೇವರಾಯನ ಕಾಲದಲ್ಲಿ ಕೇವಲ ನಾಡಿನ ಸ್ಥಾನಮಾನವನ್ನು ಪಡೆದುಕೊಂಡಿದ್ದ ಯಲಹಂಕ ಅಚ್ಯುತದೇವರಾಯನ ಆಡಳಿತದ ವೇಳೆಗೆ ಸಾಮಂತ ರಾಜ್ಯದ ಸ್ಥಾನಮಾನವನ್ನು ಪಡೆದುಕೊಂಡಿತು. ಕೆಂಪೇಗೌಡನ ನಂತರ ಅಧಿಕಾರಕ್ಕೆ ಬಂದ ಈತನ ಮಗ ಇಮ್ಮಡಿ ಕೆಂಪೇಗೌಡನ ಕಾಲಕ್ಕೂ ಯಲಹಂಕವೇ ಇವರ ರಾಜಧಾನಿಯಾಗಿ ಆಡಳಿತ ಕೇಂದ್ರವಾಗಿ ಗುರುತಿಸಿಕೊಂಡಿತು. ನಂತರದ ದಿನಗಳಲ್ಲಿ ಪ್ರಬಲರಾದ ಮೈಸೂರು ಒಡೆಯರಿಂದ ಪಾರಾಗಲು ಇಮ್ಮಡಿ ಕೆಂಪೇಗೌಡರು ತನ್ನ ರಾಜಧಾನಿಯನ್ನು ಯಲಹಂಕದಿಂದ ಮಾಗಡಿಗೆ ಹಸ್ತಾಂತರಿಸಿದರು. ಹೀಗಾಗಿ ಇಮ್ಮಡಿ ಕೆಂಪೇಗೌಡನಿಂದ ಕೊನೆಯ ಅರಸ ಮುಮ್ಮಡಿ ಕೆಂಪವೀರಪ್ಪ ಗೌಡನ ಕಾಲದವರೆಗಿನ ರಾಜರನ್ನು ಮಾಗಡಿ ಪ್ರಭುಗಳೆಂದೇ ಇತಿಹಾಸಕಾರರು ಗುರುತಿಸಿದ್ದಾರೆ. ಒಟ್ಟಿನಲ್ಲಿ ಆರಂಭದಲ್ಲಿ ವಿಜಯನಗರದವರಿಂದ ಅಮರನಾಯಕತನಕ್ಕಾಗಿ ಪಡೆದುಕೊಂಡಿದ್ದ ಯಲಹಂಕ ನಾಡು ಇವರ ರಾಜಧಾನಿಯಾಗಿ ಪರಿವರ್ತನೆಯಾಯಿತು. ನಂತರ ಮಾಗಡಿಯನ್ನು ರಾಜಧಾನಿಯಾಗಿಸಿ ಕೊಂಡು ಆಳಿದರು. ಹರತಿಯವರು ವಿಜಯನಗರದವರಿಂದ ಹರತಿ, ದೊಡ್ಡೇರಿಗಳನ್ನು ನಾಯಕತನಕ್ಕಾಗಿ ಪಡೆದು ಆಳ್ವಿಕೆ ನಡೆಸಿದರು. ಮುಂದೆ ಈ ನಾಯಕರ ವಿವಿಧ ಶಾಖೆಗಳು ನಿಡುಗಲ್ಲು, ಮಡಕಶಿರಾ, ರತ್ನಗಿರಿ, ಮಿಡಿಗೇಶಿಗಳಲ್ಲಿ ಆಡಳಿತವನ್ನು ನಡೆಸಿದವು. ಅವರು ತಮ್ಮ ಮೂಲವನ್ನು ಶಾಸನೋಕ್ತವಾಗಿ ಹರತಿ ನಾಯಕರೆಂದೇ ಗುರುತಿಸಿಕೊಂಡಿದ್ದಾರೆ.

ಹಂಡೆ ವಜೀರರೆಂದೇ ಪ್ರಖ್ಯಾತಿಯನ್ನು ಪಡೆದುಕೊಂಡಿರುವ ಬಳ್ಳಾರಿಯ ಪಾಳೆಯಗಾರರು ಆರಂಭದಲ್ಲಿ ಬಿಜಾಪುರದ ಸುಲ್ತಾನ ಒಂದನೇ ಆದಿಲ್‌ಷಾಹನ ಅಧಿಕಾರಿಗಳಾಗಿ ಬಳ್ಳಾರಿ ಪ್ರದೇಶಕ್ಕೆ ವಲಸೆ ಬಂದರು. ಈ ವಂಶದ ಮೂಲ ಪುರುಷನಾದ ಬಾಲದ ಹನುಮಪ್ಪ ನಾಯಕನು ಆದಿಲ್‌ಷಾಹನ ವಜೀರನಾಗಿ ಕೆಲವು ಕಾಲ ಕಾರ್ಯನಿರ್ವಹಿಸಿದನು. ನಂತರ ವಿಜಯನಗರದ ಅಳಿಯ ರಾಮರಾಯನಿಗೆ ಯುದ್ಧವೊಂದರಲ್ಲಿ ನೆರವಾಗಿ ಅವನಿಂದ ನಂದ್ಯಾಲ ಬುಕ್ಕರಾಯನ ಸಮುದ್ರ, ಧರ್ಮವರ, ಕಣೇಕಲ್ಲು ಮುಂತಾದ ಪ್ರದೇಶಗಳನ್ನು ನಾಯಕತನತಕ್ಕಾಗಿ ಪಡೆದುಕೊಂಡನು. ಹಾಗೂ ಬಳ್ಳಾರಿಯನ್ನು ತನ್ನ ಆಡಳಿತ ಕೇಂದ್ರವನ್ನಾಗಿಸಿಕೊಂಡುನು. ಇಲ್ಲಿಂದ ಮುಂದೆ ಈ ವಂಶದ ಕೊನೆಯ ದೊರೆ ದೊಡ್ಡಪ್ಪನಾಯಕನ ಕಾಲದವರೆಗೂ ಬಳ್ಳಾರಿಯೇ ಇವರ ಪ್ರಮುಖ ಆಡಳಿತ ಕೇಂದ್ರವಾಗಿ ಮುಂದುವರಿಯಿತು. ಹೀಗಾಗಿ ರಾಮರಾಯನಿಂದ ಅಮರನಾಯಕತ್ವಕ್ಕಾಗಿ ಪಡೆದ ಬಳ್ಳಾರಿಯೇ ಇವರ ಪಾಳೆಯಪಟ್ಟಿನ ಕೇಂದ್ರವಾಯಿತು.

ಗುಡೇಕೋಟೆ ಪಾಳೆಯಗಾರರು ಗಂಡಳನಾಯಕನ ಕಾಲದಲ್ಲಿ ವಿಜಯನಗರದ ಕೃಷ್ಣದೇವರಾಯನಿಂದ ಗುಡೇಕೋಟೆಯನ್ನು ತಮ್ಮ ಅಮರನಾಯಕತನಕ್ಕಾಗಿ ಪಡೆದುಕೊಂಡರು. ಗುಡೇಕೋಟೆಯಲ್ಲಿ ಕೋಟೆಕೊತ್ತಲಗಳನ್ನು ನಿರ್ಮಿಸಿ ತಮ್ಮ ರಾಜಕೀಯದ ಅವಸಾನದವರೆಗೂ

ಗುಡೇಕೋಟೆಯನ್ನು ತಮ್ಮ ಪಾಳೆಯಪಟ್ಟಿನ ಆಡಳಿತ ಕೇಂದ್ರವಾಗಿ ಮುಂದುವರಿಸಿಕೊಂಡು ಹೋದರು. ಗುಮ್ಮನಾಯಕ ಪಾಳೆಯವನ್ನು ರಾಜಧಾನಿಯಾಗಿಸಿಕೊಂಡ ಪಾಳೆಯಗಾರರು ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ನಾಯಕತನವನ್ನು ಪಡೆದುಕೊಂಡು ತಮ್ಮ ರಾಜಕೀಯ ಪತನವಾಗುವವರೆಗೂ ಅದನ್ನು ಹಾಗೆಯೇ ಮುಂದುವರಿಸಿದರು.

ಒಟ್ಟಾರೆಯಾಗಿ ವಿಜಯನಗರ ಕಾಲದಲ್ಲಿ ಅಮರನಾಯಕ ಹುದ್ದೆಯಲ್ಲಿದ್ದ ಬಹುತೇಕ ನಾಯಕರು ತಮ್ಮಲ್ಲಿನ ಸೈನ್ಯ ಮತ್ತು ಆರ್ಥಿಕ ಸಂಪನ್ಮೂಲಗಳ ಕ್ರೋಢೀಕರಣದಿಂದಾಗಿ ಬಲಿಷ್ಠವಾದ ಊಳಿಗಮಾನ್ಯ ಪ್ರಭುಗಳಾಗಿ ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ತಲೆಎತ್ತಿದರು. ಈ ಊಳಿಗಮಾನ್ಯ ದೊರೆಗಳು ವಿಜಯನಗರದ ಸಾರ್ವಭೌಮರ ಸರ್ವೋಚ್ಚ ಅಧಿಕಾರವನ್ನು ಒಪ್ಪಿಕೊಂಡಿದ್ದರು. ಅವರು ತಮ್ಮ ಆಳ್ವಿಕೆಯ ಪ್ರದೇಶಗಳಲ್ಲಿ ಭಾಗಶಃ ಸ್ವತಂತ್ರ ರಾಜರೇ ಆಗಿದ್ದರು. ಕೆಲವೊಮ್ಮೆ ಅಮರನಾಯಕ ಮೇಲಾಧಿಕಾರಿಗಳಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದ ಮಹಾಮಂಡಲೇಶ್ವರರು ಅಮರನಾಯಕರ ಮೇಲೆ ಹತೋಟಿ ಸಾಧಿಸಲು ಸಾಧ್ಯವಾಗದಿದ್ದಾಗ ಸಾರ್ವಭೌಮನಿಂದ ನಾಯಕರನ್ನು ಕಠಿಣವಾದ ಶಿಕ್ಷೆಗೆ ಗುರಿ ಮಾಡಿ ಅಧೀನರನ್ನಾಗಿಕೊಳ್ಳುತ್ತಿದ್ದರು. ಆ ಮೂಲಕ ವಿಜಯನಗರ ಕಾಲದಲ್ಲಿ ಅಮರನಾಯಕರಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಅರೆ ಸ್ವತಂತ್ರ ಸ್ಥಾನಮಾನವನ್ನು ಹೊಂದಿದ್ದರು. ವಿಜಯನಗರ ಕಾಲದಲ್ಲಿ ಅಮರನಾಯಕರು ತಾತ್ವಿಕವಾಗಿ ಸ್ವತಂತ್ರರಾಗಿದ್ದರು. ಆದರೆ ಪ್ರಾಯೋಗಿಕವಾಗಿ ಸ್ವತಂತ್ರರಾಗಿರಲಿಲ್ಲ. ಹಾಗಾಗಿ ಅಮರನಾಯಕರ ಅಧಿಕಾರವು ಪ್ರಾದೇಶಿಕ ಮಟ್ಟದಲ್ಲಿ ಹಲವಾರು ಅಡೆತಡೆಗಳು ಮತ್ತು ಸಮತೋಲನಗಳಿಂದ ನಿಯಂತ್ರಿತವಾಗುತ್ತಿತ್ತು.

ವಿಜಯನಗರ ಕಾಲದ ಅಮರನಾಯಕರು ಸಂಗಮ, ಸಾಳ್ವ, ಮತ್ತು ತುಳುವರ ಕಾಲದಲ್ಲಿ ರಾಜಕೀಯವಾಗಿ, ಆರ್ಥಿಕವಾಗಿ ಪ್ರಾದೇಶಿಕ ಮಟ್ಟದಲ್ಲಿ ಹೆಚ್ಚು ಸಂಘಟಿತರಾಗಿದ್ದರು. ವಿಜಯನಗರವು ತನ್ನ ವ್ಯಾಪ್ತಿಯಲ್ಲಿ ಭೂಪ್ರದೇಶವನ್ನು ಹೆಚ್ಚು ಮಾಡಿಕೊಂಡಂತೆ ಅಮರನಾಯಕತನ ನೀಡುವ ಪದ್ಧತಿಯನ್ನು ಹೆಚ್ಚು ಜನಪ್ರಿಯಗೊಳಿಸಿತು. ಸ್ಥಾನಿಕ ಸಂಸ್ಥೆಗಳ ಮುಖಂಡರಾಗಿದ್ದ ಅಮರನಾಯಕರು ತಮಗಿದ್ದ ಸೇನಾಬಲದಿಂದ ಹಾಗೂ ಆರ್ಥಿಕ ಸಂಪತ್ತಿನ ಬಲದಿಂದ ರಕ್ಕಸ ತಂಗಡಿ ಯುದ್ಧದ ವೇಳೆಗೆ ಬಹುತೇಕ ನಾಯಕರು ವಿಜಯನಗರದ ಒಕ್ಕೂಟದಿಂದ ಮುಕ್ತರಾಗಿ ಸ್ವತಂತ್ರವನ್ನು ಘೋಷಿಸಿಕೊಳ್ಳುವ ತರಾತುರಿಯಲ್ಲಿದ್ದರು. ಈ ವೇಳೆಗಾಗಲೇ ಅತ್ಯಂತ ಬಲಿಷ್ಠ ಸಂಸ್ಥಾನವಾಗಿದ್ದ ಕೆಳದಿಯು ಸ್ವತಂತ್ರಗೊಂಡಿತು. ಚಿತ್ರದುರ್ಗದವರು ಕೂಡ ವಿಜಯನಗರದ ಸಾರ್ವಭೌಮತೆಯನ್ನು ನಾಮಮಾತ್ರವಾಗಿ ಅಂಗೀಕರಿಸಿದ್ದರು.

ವಿಜಯನಗರದ ಅರಸ ಅಳಿಯ ರಾಮರಾಯನ ಆಡಳಿತಾವಧಿಯು ಅಮರನಾಯಕರು ಸ್ಥಿತ್ಯಂತರಗೊಂಡು ಪಾಳೆಯಗಾರರಾಗಿ ಸ್ವತಂತ್ರ ಪಾಳೆಪಟ್ಟುಗಳನ್ನು ಸ್ಥಾಪಿಸಿಕೊಳ್ಳಲು ಪರ್ವಕಾಲವಾಗಿತ್ತು. ವಿಜಯನಗರ ಸಾಮ್ರಾಜ್ಯದ ವಿಘಟನೆಗಾಗಿ ಕಾಯುತ್ತಿದ್ದ ನಾಯಕರು ರಕ್ಕಸ ತಂಗಡಿ ಯುದ್ಧವನ್ನು ತಮ್ಮ ರಾಜಕೀಯ ಹಿತಾಸಕ್ತಿಗಳಿಗೆ ಬಳಸಿಕೊಂಡರು. ಕ್ರಿ.ಶ. ೧೫೬೫ರಲ್ಲಿ ಜರುಗಿದ ಈ ಯುದ್ಧದಲ್ಲಿ

ಬಹುತೇಕ ಅಮರನಾಯಕರು ತಮ್ಮ ಸೇನಾಪಡೆಗಳೊಂದಿಗೆ ಯುದ್ಧದಲ್ಲಿ ಭಾಗವಹಿಸಿದರು. ಈ ಯುದ್ಧ ವಿಜಯನಗರ ಹಾಗೂ ಅಮರನಾಯಕರ ಪಾಲಿಗೆ ನಿರ್ಣಾಯಕ ಯುದ್ಧವಾಗಿತ್ತು. ಯುದ್ಧದಲ್ಲಿ ಬಹುಮನಿ ಸುಲ್ತಾನರಿಗೆ ವಿಜಯನಗರ ಸೋತು ಹೋಯಿತು. ಯುದ್ಧದಿಂದ ಹೊರನಡೆದ ಅಮರನಾಯಕರು ತಮಗೆ ತಾವೇ ಸ್ವತಂತ್ರರೆಂದು ಘೋಷಿಸಿಕೊಂಡರು. ವಿಜಯನಗರವು ತಮಗೆ ನಾಯಕತನಕ್ಕಾಗಿ ನೀಡಿದಂತಹ ಪ್ರದೇಶಗಳನ್ನು ತಮ್ಮ ಪಾಳೆಯಪಟ್ಟುಗಳ ಆಡಳಿತ ಕೇಂದ್ರವನ್ನಾಗಿಸಿಕೊಂಡವು. ಅಮರನಾಯಕರು ಬದಲಾದ ರಾಜಕೀಯ ಸ್ಥಿತ್ಯಂತರಗಳ ಫಲವಾಗಿ ನಾಯಕ ಪ್ರಭುತ್ವಗಳನ್ನು ಸ್ಥಾಪಿಸಿಕೊಂಡು ಪಾಳೆಯಗಾರರಾಗಿ ರೂಢಿಗತವಾಗಿ ಜನಪ್ರಿಯಗೊಂಡರು. ತಮ್ಮ ರಾಜಕೀಯ ಪ್ರಭುತ್ವದಲ್ಲಿ ಸ್ವಯಂ ಆಡಳಿತ, ಮದ್ದುಗುಂಡುಗಳ ಬಳಕೆ, ದೇಶಿ ವಿದೇಶಿ ವ್ಯಾಪಾರಗಳ ಮೇಲಿನ ಹಿಡಿತದಿಂದಾಗಿ ಕ್ರಿ.ಶ. ೧೭ ಮತ್ತು ೧೮ನೇ ಶತಮಾನದಲ್ಲಿ ನಾಯಕ ಪ್ರಭುತ್ವಗಳು ಸ್ವತಂತ್ರವಾಗಿ ಆಡಳಿತವನ್ನು ನಡೆಸಿದವು.

ಕೊನೆ ಟಿಪ್ಪಣಿಗಳು

೧. ಯೋಗೀಶ್ವರಪ್ಪ ಡಿ.ಎನ್., ಮಧ್ಯಕಾಲೀನ ಕರ್ನಾಟಕದ ಪಾಳೆಯಗಾರರು, ಪು. ೬.

೨. ಹಾ.ಮಾ.ನಾಯಕ, ಕನ್ನಡ ವಿಷಯ ವಿಶ್ವಕೋಶ, ಪು. ೧೪೫.

೩. ಪುಟ್ಟಣ್ಣ ಎಂ.ಎಸ್., ಚಿತ್ರದುರ್ಗ ಪಾಳೆಯಗಾರರು, ಪು. ೧.

೪. ಯೋಗೀಶ್ವರಪ್ಪ ಡಿ.ಎನ್., ಅದೇ, ಪೂರ್ವೋಕ್ತ ಪು. ೫.

೫. ವೆಂಕಟರಾಮಣ್ಣ, ವಿಜಯನಗರ ಇತಿಹಾಸಕ್ಕೆ ಕೋಲಾರ ಜಿಲ್ಲೆಯ ಕೊಡುಗೆ, ಪು. ೨೧.

೬. ನಾಗರಾಜ್ ಎಂ.ಜಿ. ನಾಯಕರ ಕಾಲದ ಆಡಳಿತ, ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು. ೧೫೬

೭. ಸರೋಜಾ ಪಿ.ಎಲ್., ಗುಮ್ಮನಾಯಕನ ಪಾಳೆಯದ ಪಾಳೆಯಗಾರರು, ಇತಿಹಾಸ ಪುಟಗಳು, ಲೇಖನ ಮಾಲೆ–೪, ಚೈತನ್ಯ ಕನ್ನಡ ವಾರಪತ್ರಿಕೆ, ೨೭,೪.೨೦೦೯. ಪು.

೮. ಸದಾನಂದ ಕನವಳ್ಳಿ, ಮರೆತುಹೋದ ಮಹಾಸಾಮ್ರಾಜ್ಯ, ವಿಜಯನಗರ, ಪು. ೨೮೨

೯. ಶೈಲಜ (ಸಂ), ಪಾಳೆಯಗಾರರ ಶಾಸನಗಳು, ಸಂಪುಟ–೧, ಪು–೨೦೧೨.

೧೦. ನಾಗರಾಜ್ ಎಂ.ಜಿ., ಪೂರ್ವೋಕ್ತ, ಪು. ೧೫೭

೧೧. ಯೋಗೀಶ್ವರಪ್ಪ ಡಿ.ಎನ್., ಪೂರ್ವೋಕ್ತ, ಪು. ೨.

೧೨. ರೈಸ್ ಬಿ.ಎಲ್. (ಸಂ), ಎಫಿಗ್ರಾಫಿಯಾ ಕರ್ನಾಟಿಕಾ, ಹಾಸನ ಜಿಲ್ಲೆ, ಪು. ೪೨೦.

೧೩. ಲಕ್ಷ್ಮಣ್ ತೆಲಗಾವಿ, ಪೂರ್ವೋಕ್ತ, ಪು. ೨೫.

೧೪. ಲಕ್ಷ್ಮಣ್ ತೆಲಗಾವಿ, ವಿಜಯನಗರ ಕಾಲದ ಅಮರನಾಯಕರು ಮತ್ತು ಪಾಳೆಯಗಾರರು, (ಲೇ), ಇತಿಹಾಸ ದರ್ಶನ, ಚರಿತ್ರೆ ಸಂಪುಟ–೫, ಸಂಚಿಕೆ–೪, ಪು. ೨೦.

೧೫. ಗ್ರಿಬಲ್ ಜೆ.ಡಿ.ವೈ. ಎ ಹಿಸ್ಟರಿ ಆಫ್ ಡೆಕ್ಕನ್ ಸಂಪುಟ–೧, ಪು. ೧೬೧.

೧೬. ವೀರನಾಯಕ ಹೆಚ್.ವಿ., ಕ್ಷಾತ್ರಾಂಶ ಸಂಭೋಧನೆ, ಪು. ೧೫೦.

೧೭. ದುರುಗಪ್ಪ ಎಂ.ಕೆ., ವಿಜಯನಗರೋತ್ತರ ಕಾಲದ ಬೇಡ ಜನಾಂಗದ ಸ್ಥಿತ್ಯಂತರಗಳು ಚಾರಿತ್ರಿಕ ಅಧ್ಯಯನ, ಪು. ೧೫೨.

೧೮. ತಾರಿಹಳ್ಳಿ ಹನುಮಂತಪ್ಪ (ಸಂ), ಸುರಪುರ ಸಂಸ್ಥಾನದ ಇತಿಹಾಸ ಪು. ೧೦.

೧೯. ಕಲಬುರ್ಗಿ ಎಂ.ಎಂ., ಕರ್ನಾಟಕದ ಕೈಫಿಯತ್ತುಗಳು, ಪು. ೫೧೦.

೨೦. ದುರುಗಪ್ಪ ಎಂ.ಕೆ. ಪೂರ್ವೋಕ್ತ, ಪು. ೧೫೦.

೨೧. ಲಕ್ಷ್ಮಣ್ ತೆಲಗಾವಿ, ವಿಜಯನಗರ ಕಾಲದ ಅಮರನಾಯಕರು ಮತ್ತು ಪಾಳೆಯಗಾರರು, (ಲೇ) ಪು. ೨೦.

೨೨. ಅದೇ ಪೂರ್ವೋಕ್ತ ಪು. ೨೨.

೨೩. ನಿರುಪಮಾ (ಅನು) ಕೃಷ್ಣದೇವರಾಯನ ಅಮುಕ್ತಮಾಲ್ಯದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಪು. ೨೫೦.

೨೪. ಅದೇ, ಪೂರ್ವೋಕ್ತ, ಪು. ೨೫೧.

೨೫. ಲಕ್ಷ್ಮಣ್ ತೆಲಗಾವಿ, ಪೂರ್ವೋಕ್ತ, ಪು. ೨೫.

೨೬. ಲಕ್ಷ್ಮಣ್ ತೆಲಗಾವಿ, ಜೀರ್ಣವಿಜಯನಗರಾದರ್ಶನಂ, ಪು. ೩೭.

೨೭. ದುರುಗಪ್ಪ ಎಂ.ಕೆ., ಪೂರ್ವೋಕ್ತ, ಪು. ೬೦.

೨೮. ಪುರುಷೋತ್ತಮ, ಕನಕದಾಸರ ಕೃತಿಗಳಲ್ಲಿ ಕಾಣಬರುವ ರಾಜಕೀಯಾಂಶಗಳು ಹಾಗೂ ಅವುಗಳ ಚರ್ಚೆ, ಪು. ೮೨.

೨೯. ಸೀಸರ್ ಫೆಡ್ರಿರಿಕ್, ಅರವೀಡು ಡೈನಾಸ್ಟಿ ಪು. ೧೬೧.

೩೦. ರಾಬರ್ಟ್ ಸಿವೆಲ್, ಫರಗಾಟನ್ ಎಂಪೈರ್, ಪು. ೧೭೧.

೩೧. ಮೋಹನ್‌ಕೃಷ್ಣ ರೈ, ಪ್ರಭುತ್ವ ಮತ್ತು ಜನತೆ, ಪು. ೬೩.

೩೨. ಶ್ಯಾಮಲಾ ಸಿ.ಆರ್., ಪೂರ್ವ ಕರ್ನಾಟಕದ ಪಾಳೆಯಗಾರರು, ಪು. ೧೩೪.

೩೩. ದುರುಗಪ್ಪ ಎಂ.ಕೆ., ಪೂರ್ವೋಕ್ತ. ಪು. ೧೧೧.

೩೪. ಯೋಗೀಶ್ವರಪ್ಪ ಡಿ.ಎಮ್. ಪೂರ್ವೋಕ್ತ. ಪು. ೫೭.

೩೫. ಜ್ಯೋತಿಬಾಯಿ, ನಾಯಕರ ಆಡಳಿತದಲ್ಲಿ ಚಿತ್ರದುರ್ಗ (ಲೇ) ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪು. ೧೬೬.

೩೬. ಚಿಟ್ನಿಸ್ ಕೆ.ಎನ್. ಕೆಳದಿ ರಾಜ್ಯಾಡಳಿತ (ಲೇ), ಪು. ೭೭.

೩೭. ಗಂಗಾನಾಯಕ್ ಕೆ.ಎನ್. (ಸಂ), ಪೂರ್ವೋಕ್ತ, ಸಂಪುಟ–೧, ಪು. ೨೮.

❖❖❖

ಅಧ್ಯಾಯ : ಏಳು

ಅಮರನಾಯಕ ಮನೆತನಗಳ ಅವನತಿ

೭.೧ ಹೈದರಾಲಿ, ಟಿಪ್ಪುಸುಲ್ತಾನ ಮತ್ತು ಬ್ರಿಟಿಷರೊಂದಿಗೆ ನಾಯಕರ ಸಂಬಂಧಗಳು ಹಾಗೂ ಸಂಘರ್ಷಗಳು

೭.೨ ನಾಯಕರ ಅವನತಿಗೆ ಕಾರಣಗಳು ಮತ್ತು ಪರಿಣಾಮಗಳು

ಅಧ್ಯಾಯ: ಏಳು

ಅಮರನಾಯಕ ಮನೆತನಗಳ ಅವನತಿ

ಭಾರತದಲ್ಲಿ ಬ್ರಿಟಿಷರ ಅಧಿಕಾರ ಸ್ಥಾಪನೆಯು ಭಾರತೀಯರ ಸಾಮಾಜಿಕ ಆರ್ಥಿಕ, ರಾಜಕೀಯ ಜೀವನದ ಮೇಲೆ ಪ್ರಬಲವಾದ ಬಿರುಗಾಳಿಯನ್ನು ಬೀಸಿತು. ಈ ಬಿರುಗಾಳಿಯಲೆಗೆ ಸಿಲುಕಿದ ಕರ್ನಾಟಕ ಕ್ರಿ.ಶ. ೧೮ನೆಯ ಶತಮಾನದಲ್ಲಿ ರಾಜಕೀಯವಾಗಿ ಝರ್ಜರಿತಗೊಂಡಿತು. ಉತ್ತರದಲ್ಲಿ ಮೊಗಲ್ ಸಾಮ್ರಾಜ್ಯದ ಪತನದ ನಂತರ ದಕ್ಷಿಣ ಭಾರತದಲ್ಲಿ ಮೈಸೂರು ಮತ್ತು ಮರಾಠ, ನಿಜಾಮರಂತಹ ಪ್ರಾದೇಶಿಕ ರಾಜಕೀಯ ಪ್ರಭುತ್ವಗಳು ಪ್ರವರ್ಧಮಾನಕ್ಕೆ ಬರತೊಡಗಿದವು. ಇಂತಹ ಸಮಯದಲ್ಲಿಯೇ ಯುರೋಪಿನ ವಸಹತುಶಾಹಿ ಶಕ್ತಿಗಳು ಭಾರತೀಯ ಉಪಖಂಡದಲ್ಲಿ ಪ್ರವೇಶಿಸಿದವು.[೧] ಯುರೋಪಿನ ವಸಾಹತುಶಾಹಿ ಶಕ್ತಿಗಳ ರಾಜಕೀಯ ಮಹತ್ವಾಕಾಂಕ್ಷೆಗಳಿಗೆ ಸ್ಥಳೀಯ ರಾಜ ಪ್ರಭುತ್ವಗಳು ನಿರ್ನಾಮಗೊಂಡವು. ಈ ಸಂದರ್ಭದಲ್ಲಿ ದಕ್ಷಿಣ ಭಾರತದ ರಾಜಕೀಯ ಪರಿಸ್ಥಿತಿಗಳು ಡೋಲಾಯಾನವಾಗಿದ್ದವು. ಮರಾಠ ಪೇಶ್ವೆಗಳು, ಹೈದರಾಬಾದಿನ ನಿಜಾಮರು, ಮೈಸೂರಿನ ಸರ್ವಾಧಿಕಾರಿ ಹೈದರಾಲಿಯು ಪರಸ್ಪರ ರಾಜಕೀಯ ದ್ವೇಷ, ಹಗೆತನಗಳ ಸುಳಿಯಲ್ಲಿ ಸಿಲುಕಿಕೊಂಡಿದ್ದರು. ದಕ್ಷಿಣದಲ್ಲಿ ಮರಾಠರ ಏಳಿಗೆಯನ್ನು ಹೈದರಾಬಾದಿನ ನಿಜಾಮರು ಸಹಿಸದಾದರು. ಅದರಂತೆ ಹೈದರಾಲಿಯ ರಾಜಕೀಯ ಏಳಿಗೆಯನ್ನು ಕಂಡು ಮರಾಠರು ಸಹಿಸದಾದರು. ಹೈದರಾಲಿಯು ಕರ್ನಾಟಕದ ನವಾಬ ಮತ್ತು ನಿಜಾಮನ ಪಾಲಿಗೆ ಸಿಂಹ ಸ್ವಪ್ನವಾಗಿದ್ದ. ಈ ಸಮಯದಲ್ಲಿ ಹೈದಾರಾಬಾದಿನ ನಿಜಾಮರು ಮತ್ತು ಮರಾಠರು ಹೊರಗಿನ ಶಕ್ತಿಯಾಗಿದ್ದ ಬ್ರಿಟಿಷರೊಂದಿಗೆ ಕೈ ಜೋಡಿಸಿ ಹೈದರಾಲಿಯ ರಾಜಕೀಯ ಶಕ್ತಿಯನ್ನು ಅಡಗಿಸಲು ಪ್ರಯತ್ನಪಟ್ಟರು. ಈ ಪ್ರಯತ್ನಗಳ ಫಲವಾಗಿಯೇ ಬ್ರಿಟಿಷರು ಕರ್ನಾಟಕದ ಸ್ಥಳೀಯ ರಾಜಕೀಯ ವ್ಯವಹಾರಗಳಲ್ಲಿ ತಲೆಹಾಕಲು ಸಾಧ್ಯವಾಯಿತು. ಬ್ರಿಟಿಷರು ಕರ್ನಾಟಕದ ರಾಜಕೀಯ ವಿದ್ಯಮಾನಗಳ ಬಗ್ಗೆ ಸಾಕಷ್ಟು ಆಸಕ್ತಿಯನ್ನು ಹೊಂದಿದ್ದರು. ಈ ವೇಳೆಗಾಗಲೇ ಮೈಸೂರಿನ ಸರ್ವಾಧಿಕಾರಿಯಾದ ಹೈದರಾಲಿಯು ಸ್ಥಳೀಯ ನಾಯಕರನ್ನು ಸದೆ ಬಡಿದು ಮೈಸೂರು ಸಂಸ್ಥಾನದ ರಾಜಕೀಯ ಮೇರೆಗಳನ್ನು ವಿಸ್ತರಿಸಿಕೊಂಡಿದ್ದ. ಹೈದರಾಲಿ ಮತ್ತು ಆತನ ಮಗ ಟಿಪ್ಪು ಸುಲ್ತಾನನಿಂದ ಸಂಸ್ಥಾನಗಳನ್ನು ಕಳೆದುಕೊಂಡು ರಾಜಕೀಯವಾಗಿ ನೆಲೆಯಿಲ್ಲದ ಬಹುತೇಕ ನಾಯಕರು ಪುನಃ ತಮ್ಮ ಸಂಸ್ಥಾನಗಳನ್ನು ಮರಳಿ ಪಡೆಯಲು ಬ್ರಿಟಿಷರೊಂದಿಗೆ ಕೈಜೋಡಿಸಿದರು. ಆದರೆ ಬಹುತೇಕ ನಾಯಕರು ತಮ್ಮ

ಈ ಹೋರಾಟದಲ್ಲಿ ಯಶಸ್ಸನ್ನು ಕಾಣಲಿಲ್ಲ. ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದ ತರುವಾಯ ನಾಯಕರು ತಮ್ಮ ರಾಜಕೀಯ ಸಂಸ್ಥಾನಗಳನ್ನು ಬ್ರಿಟಿಷರಿಗೆ, ಮೈಸೂರು ಒಡೆಯರ ಸಂಸ್ಥಾನದಲ್ಲಿ ವಿಲೀನಗೊಳಿಸಿ ರಾಜಕೀಯವಾಗಿ ಅಸ್ತಂಗತರಾದರು. ಬ್ರಿಟಿಷರು ನೀಡಿದ ಪಿಂಚಣಿಯನ್ನು ಪಡೆದು ಜನಸಾಮಾನ್ಯರಂತೆ ಬದುಕನ್ನು ನಡೆಸಿದರು. ಪ್ರಸ್ತುತ ನಮ್ಮ ನಾಡನ್ನು ಆಳಿದ ಬಹುತೇಕ ಅಮರನಾಯಕರ ಕುಟುಂಬಗಳು ಇಂದಿಗೂ ಜೀವಂತವಾಗಿವೆ. ಅವುಗಳಲ್ಲಿ ಬಹುತೇಕ ನಾಯಕರ ಮನೆತನಗಳು ರಾಜಕೀಯವಾಗಿ ಮುಂಚೂಣಿಯಲ್ಲಿದ್ದರೆ ಉಳಿದ ಮನೆತನಗಳು ಆರ್ಥಿಕವಾಗಿ ದುಸ್ಥಿತಿಯಲ್ಲಿದ್ದು ಸಾಮಾನ್ಯ ಜನತೆಯೊಂದಿಗೆ ಬೆರೆತುಹೋಗಿವೆ. ಬ್ರಿಟಿಷರೊಂದಿಗೆ, ಹೈದರಾಲಿ ಮತ್ತು ಟಿಪ್ಪುವಿನೊಂದಿಗೆ ರಾಜಕೀಯ ಅಸ್ತಿತ್ವಕ್ಕಾಗಿ ಹೋರಾಟಗಳನ್ನು ಮಾಡುತ್ತಾ ಅವರೊಂದಿಗೆ ರಾಜಕೀಯ ಸ್ನೇಹ ಸಂಬಂಧಗಳನ್ನು ಬೆಳೆಸಿ ತಮ್ಮ ಸಂಸ್ಥಾನಗಳನ್ನು ಮರಳಿ ಪಡೆಯಲು ಪ್ರಯತ್ನಿಸಿದ ಕೆಲವು ನಾಯಕರುಗಳ ಹೋರಾಟಗಳನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

೭.೧. ಹೈದರಾಲಿ, ಟಿಪ್ಪುಸುಲ್ತಾನ ಮತ್ತು ಬ್ರಿಟಿಷರೊಂದಿಗೆ ನಾಯಕರ ಸಂಬಂಧಗಳು ಹಾಗೂ ಸಂಘರ್ಷಗಳು

ಮತ್ತೋಡನ್ನು ಕೇಂದ್ರವಾಗಿಟ್ಟುಕೊಂಡು ಕ್ರಿ.ಶ. ೧೬೦೪ರಿಂದ ೧೭೭೯ರವಗೆ ಆಡಳಿತವನ್ನು ನಡೆಸಿದವರೇ ಮತ್ತೋಡು ನಾಯಕರು. ವಿಜಯನಗರ ಕೊನೆಯ ಸಂತತಿಯಾದ ಅರವೀಡು ಮನೆತನವ ವೆಂಕಟಪತಿರಾಯನ ಅಮರನಾಯಕನಾಗಿ ಗಿರಿಯಪ್ಪ ನಾಯಕನು ಮತ್ತೋಡು ಪಾಳೆಯಪಟ್ಟನ್ನು ಸಂಸ್ಥಾಪಿಸಿದನು. ವಿಜಯನಗರ ಅರಸರಿಂದ ಸಾಮಂತ ಸ್ಥಾನಮಾನ ಪಡೆದು ಲಕ್ಕವ್ವನಹಳ್ಳಿ ಅದರ ಸುತ್ತಮುತ್ತಲಿನ ಪ್ರದೇಶಗಳನ್ನು ನಾಯಕತನಕ್ಕೆ ಪಡೆದುಕೊಂಡನು. ಮತ್ತೋಡು ನಾಯಕರಲ್ಲಿ ದೊಡ್ಡಳನಾಯಕ ಸಂಗಪ್ಪ ನಾಯಕ ಹಾಲಪ್ಪ ನಾಯಕರು ದಕ್ಷತೆಯ ಆಡಳಿತಕ್ಕೆ ಖ್ಯಾತರಾಗಿದ್ದಾರೆ. ಹಾಲಪ್ಪ ನಾಯಕನ ಮಗ ಸಿದ್ದರಾಮಪ್ಪ ನಾಯಕ ಚಿತ್ರದುರ್ಗದ ನಾಯಕರೊಂದಿಗೆ ವೈವಾಹಿಕ ಬಂಧವನ್ನು ಏರ್ಪಡಿಸಿಕೊಂಡನು. ಸಿದ್ದರಾಮಪ್ಪ ನಾಯಕ ಮಗನಾದ ಹಾಲಪ್ಪ ನಾಯಕನೇ ಈ ಮನೆತನ ಕೊನೆಯ ನಾಯಕ. ಈತನ ಆಡಳಿತಾವಧಿಯಲ್ಲಿ ಚಿತ್ರದುರ್ಗ ನಾಯಕರೊಂದಿಗಿನ ಸಂಬಂಧಗಳು ತೀರಾ ಹದಗೆಟ್ಟು ಹೋದವು. ಇದಕ್ಕೆ ಕಾರಣವಾಗಿದ್ದು ಹಿರೇಮೆದಕೇರಿ ನಾಯಕನು ಹಾಲಪ್ಪ ನಾಯಕನಿಗೆ ಈ ಹಿಂದೆ ಸಲ್ಲಿಸುತ್ತಿದ್ದ ಮೂರು ಸಾವಿರ ಪಗೋಡಗಳಿಗೆ ಬದಲಿಗೆ ನಾಲ್ಕು ಸಾವಿರ ಪಗೋಡಗಳನ್ನು ಕಪ್ಪವಾಗಿ ಕೇಳಿದ್ದು. ಸೀಮಿತ ಆದಾಯವನ್ನು ಹೊಂದಿದ್ದ ಮತ್ತೋಡು ನಾಯಕರಿಗೆ ಹೆಚ್ಚುವರಿ ಕಪ್ಪವನ್ನು ಸಂದಾಯ ಮಾಡಲು ಸಾಧ್ಯವಾಗಲಿಲ್ಲ. ಮತ್ತೋಡು ಸಂಸ್ಥಾನದ ಆರ್ಥಿಕ ಸ್ಥಿತಿಯನ್ನು ಅರಿತ ಹಿರೇಮದಕೇರಿಯು ಹಿಂದಿನಂತೆ ಮೂರು ಸಾವಿರ ಪಗೋಡಗಳನ್ನೇ ಕಪ್ಪವಾಗಿ ಸ್ವೀಕರಿಸಿದನು. ಈ ಪ್ರಕರಣದ ನಂತರ ಮತ್ತೋಡು ಮತ್ತು ಚಿತ್ರದುರ್ಗ ಸಂಸ್ಥಾನದ ನಡುವಿನ ಬಾಂಧವ್ಯಗಳು ಸಂಪೂರ್ಣ ನಾಶವಾದವು. ಮತ್ತೋಡು ಸಂಸ್ಥಾನಿಕರು ಚಿತ್ರದುರ್ಗ ನಾಯಕರ ಮೇಲೆ ಹಗೆ ಸಾಧಿಸಲಾರಂಭಿಸಿದರು. ಇದೇ

ಸಮಯದಲ್ಲಿ ಅಂದರೆ ಕ್ರಿ.ಶ. ೧೭೬೨ರಲ್ಲಿ ಹೈದರಾಲಿ ಚಿತ್ರದುರ್ಗ ಸಂಸ್ಥಾನದ ಮೇಲೆ ದಾಳಿ ಮಾಡಿದ. ಈ ಅವಕಾಶವನ್ನು ಸರಿಯಾದ ಸಮಯವೆಂದು ಭಾವಿಸಿದ ಹಾಲಪ್ಪನಾಯಕ ಹೈದರಾಲಿಯ ಪರ ಕೈ ಜೋಡಿಸಿದ. ಈ ದಾಳಿಯಲ್ಲಿ ಹೈದರಾಲಿಯು ವಿಫಲನಾಗಿದ್ದರಿಂದ ಹಾಲಪ್ಪ ನಾಯಕ ಚಿತ್ರದುರ್ಗ ನಾಯಕರ ಕೆಂಗಣ್ಣಿಗೆ ಗುರಿಯಾದ. ಚಿತ್ರದುರ್ಗ ನಾಯಕರು ಸಿಟ್ಟಿಗೆದ್ದು ಮತ್ತೋಡನ್ನು ಆಕ್ರಮಿಸಿ ಹಾಳುಗೆಡವಿ ಹಾಲಪ್ಪ ನಾಯಕನನ್ನು ಬಂಧಿಸಿ ಸೆರೆಮನೆಯಲ್ಲಿಟ್ಟರು.[೨] ಪುನಃ ಕ್ರಿ.ಶ. ೧೭೭೯ರಲ್ಲಿ ಹೈದರಾಲಿಯು ಚಿತ್ರದುರ್ಗದ ಮೇಲೆ ಯಶಸ್ವಿ ದಂಡಯಾತ್ರೆಯನ್ನು ಕೈಗೊಂಡು ರಾಜವೀರ ಮೇದಕೇರಿ ನಾಯಕನನ್ನು ಬಂಧಿಸಿ ಶ್ರೀರಂಗಪಟ್ಟಣದ ಸೆರೆಮನೆಯಲ್ಲಿಟ್ಟ[೩] ಈ ಸಂದರ್ಭದಲ್ಲಿ ಮತ್ತೋಡಿನ ಹಾಲಪ್ಪ ನಾಯಕನು ಸೆರೆಮನೆಯಿಂದ ಬಿಡುಗಡೆಯಾದನು. ಹೈದಾರಾಲಿಯು ನಾಯಕರನ್ನು ಮಟ್ಟ ಹಾಕುವ ದಮನಕಾರಿ ನೀತಿಯನ್ನು ಅನುಸರಿಸಿದ್ದರಿಂದ ಚಿತ್ರದುರ್ಗ ಸಂಸ್ಥಾನವು ಮೈಸೂರು ಸಂಸ್ಥಾನದಲ್ಲಿ ವಿಲೀನಗೊಂಡಿತು. ಹಾಲಪ್ಪ ನಾಯಕನು ಸ್ವತಂತ್ರನಾದರೂ ಹೈದರಾಲಿಯು ಮತ್ತೋಡನ್ನು ಪುನಃ ನಾಯಕನಿಗೆ ಹಿಂತಿರುಗಿಸಲಿಲ್ಲ. ಹಾಲಪ್ಪ ನಾಯಕನು ಸೆರೆಮನೆವಾಸದಿಂದ ಹೊರಬಂದರೂ ಮತ್ತೋಡು ಸಂಸ್ಥಾನದ ಅಧಿಕಾರ ಪಟ್ಟವು ಆತನಿಗೆ ಗಗನಕುಸುಮೇ ಆಯಿತು.[೪] ರಾಜಕೀಯವಾಗಿ ತನ್ನೆಲ್ಲ ಅಧಿಕಾರ ಮತ್ತು ಸ್ಥಾನಮಾನಗಳನ್ನು ಕಳೆದುಕೊಂಡು ಹಾಗಲವಾಡಿಗೆ ಹೋಗಿ ಆನೇಕ ವರ್ಷಗಳು ಕಳೆದನು. ಪುನಃ ಮತ್ತೋಡಿಗೆ ಮರಳಿ ಬಂದು ಗುಡಿಸಲಿನಲ್ಲಿ ಇದ್ದನೆಂದು ಕ್ರಿಶಕ ೧೮೦೧ ಮೇ. ೬ ರಂದು ಹಾಲಪ್ಪ ನಾಯಕನನ್ನು ಭೇಟಿಯಾಗಿದ್ದ ಬ್ರಿಟಿಷ್ ಸರ್ವೇಕ್ಷಣಾಧಿಕಾರಿ ಫ್ರಾನ್ಸಿಸ್ ಬುಕಾನನ್ ತನ್ನ ವರದಿಯಲ್ಲಿ ತಿಳಿಸಿದ್ದಾನೆ.[೫] ಒಟ್ಟಿನಲ್ಲಿ ವಿಜಯನಗರ ಅರಸರಿಂದ ಸಾಮಂತ ರಾಜರ ಸ್ಥಾನಮಾನ ಪಡೆದು ಹೊಸದುರ್ಗದ ಸುತ್ತಮುತ್ತಲ ಪ್ರದೇಶಗಳನ್ನು ಆಳಿದಂತಹ ಮನೆತನದ ಕೊನೆಯ ನಾಯಕನಾದ ಹಾಲಪ್ಪ ನಾಯಕನ ಅಂತಿಮ ದಿನಗಳು ನಿಕೃಷ್ಟವಾಗಿ ಬಡತನದಲ್ಲಿ ಕಳೆದುದ್ದನ್ನು ಗಮನಿಸಿದಾಗ ಹೈದರಾಲಿಯ ರಾಜಕೀಯ ಅಟ್ಟಹಾಸಕ್ಕೆ ಹಾಲಪ್ಪ ನಾಯಕನಂತಹ ಆನೇಕ ನಾಯಕರ ಮನೆತನದ ಕುಡಿಗಳು ಬಲಿಯಾಗಬೇಕಾಗಿದ್ದು ಇತಿಹಾಸ ಕಂಡ ದುರ್ದೈವವೇ ಸರಿ.

ಕ್ರಿ.ಶ. ಹದಿನೈದನೆಯ ಶತಮಾನದಲ್ಲಿ ಏಳಿಗೆಗೆ ಬಂದ ಅಮರನಾಯಕರಲ್ಲಿ ಪಾವಗಡ ನಾಯಕರು ಒಬ್ಬರಾಗಿದ್ದಾರೆ. ಬಲ್ಲಪ್ಪ ನಾಯಕರು ಈ ಮನೆತನದ ಮೂಲಪುರುಷ. ಇವನು ವಿಜಯನಗರದ ಅರಸರಿಂದ ನಾಯಕತನಕ್ಕಾಗಿ ಪಾವಗಡವನ್ನು ಪಡೆದು ಆಳ್ವಿಕೆಯನ್ನು ಆರಂಭಿಸಿದನು. ತಾಳಿಕೋಟೆಯ ಕದನ ನಂತರವೇ ಈ ಪಾಳೆಯಪಟ್ಟು ಅಸ್ತಿತ್ವಕ್ಕೆ ಬಂದಿದ್ದು ಬಲ್ಲಪ್ಪ ನಾಯಕನ ಪೂರ್ವಿಕರು ವಿಜಯನಗರ ಸಾಮ್ರಾಜ್ಯದಲ್ಲಿ ಭಂಡಾರದ ರಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಬಲ್ಲಪ್ಪ ನಾಯಕನ ನಂತರ ಅವನ ಮಗ ತಿಮ್ಮಭೂಪಾಲ ಅಧಿಕಾರಕ್ಕೆ ಬಂದನು.

ಈ ವಂಶದ ತಿಮ್ಮಪ್ಪನಾಯಕನ ಅಧಿಕಾರಾವಧಿಯಲ್ಲಿ ಪಾವಗಡ ಹೈದರಾಲಿಯ ವಶವಾಯಿತು. ಕ್ರಿ.ಶ. ೧೭೭೭ರಲ್ಲಿ ಹೈದರಾಲಿಯು ಮಧುಗಿರಿಯ ಮೇಲೆ ದಾಳಿ ಮಾಡಿ ಮಧುಗಿರಿ ಕೋಟೆಯನ್ನು ವಶಪಡಿಸಿಕೊಂಡ ನಂತರ ಪಾವಗಡವನ್ನು ಗೆದ್ದುಕೊಂಡನು. ಪಾವಗಡದ ನಾಯಕರು ಹೈದಾರಾಲಿಗೆ

ಕಪ್ಪವನ್ನು ಸಲ್ಲಿಸಲು ಸಾಧ್ಯವಾಗದಾಗ ಹೈದರಾಲಿಯು ತಿಮ್ಮಪ್ಪ ನಾಯಕನನ್ನು ಸಂಸಾರ ಸಮೇತನಾಗಿ ಬಂಧಿಸಿ ಮಧುಗಿರಿಯ ಸೆರೆಮನೆಯಲ್ಲಿಟ್ಟರು.[೬] ಮುಂದೆ ಸಂಭವಿಸಿದ ಎರಡನೆಯ ಆಂಗ್ಲೋ ಮೈಸೂರು ಯುದ್ಧದಲ್ಲಿ ಬ್ರಿಟಿಷರಿಗೆ ಸಹಾಯ ನೀಡಲು ಮುಂದೆ ಬಂದ ಮರಾಠರು ಬ್ರಿಟಿಷ್ ಗವರ್ನರ್ ಲಾರ್ಡ್ ಕಾರನ್‌ವಾಲೀಸನೊಂದಿಗೆ ಒಪ್ಪಂದವನ್ನು ಮಾಡಿಕೊಂಡರು. ಆ ಒಪ್ಪಂದದ ಮೇರೆಗೆ ಹೈದರಾಲಿಯ ವಶದಲ್ಲಿದ್ದ ಮಧುಗಿರಿ ಕೋಟೆಯನ್ನು ಮರಾಠರು ವಶಪಡಿಸಿಕೊಂಡರು. ಮರಾಠರ ಕೃಪೆಯಿಂದ ಬಿಡುಗಡೆಗೊಂಡ ತಿಮ್ಮಪ್ಪ ನಾಯಕನು ಪುನಃ ತನ್ನ ಸಂಸ್ಥಾನವಾದ ಪಾವಗಡಕ್ಕೆ ಮರಳಿ ಬಂದನು. ಪಾವಗಡದಲ್ಲಿ ತನ್ನ ಆಳ್ವಿಕೆಯನ್ನು ಆರಂಭಿಸಿದನು. ಮುಂದೆ ನಡೆದ ೪ನೇ ಆಂಗ್ಲೋ–ಮೈಸೂರು ಯುದ್ಧದ ನಂತರ ಪಾವಗಡ ಬ್ರಿಟಿಷರ ವಶವಾಯಿತು. ಇಲ್ಲಿಗೆ ಪಾವಗಡ ನಾಯಕರು ಅಸ್ತಂಗತರಾದರು.

ಹಂಡೆಯ ವಜೀರರೆಂದೇ ಇತಿಹಾಸದ ಪುಟಗಳಲ್ಲಿ ದಾಖಲಾಗಿರುವ ಬಳ್ಳಾರಿಯ ಪಾಳೆಯಗಾರರು ಕ್ರಿ.ಶ. ೧೫೬೭ರಿಂದ ೧೭೭೫ರವರೆಗೂ ಬಳ್ಳಾರಿಯನ್ನು ಕೇಂದ್ರವಾಗಿರಿಸಿಕೊಂಡು ಆಡಳಿತನವನ್ನು ನಡೆಸಿದರು. ವಿಜಯನಗರದ ಅರವೀಡು ಸಂತತಿಯವರಾದ ರಾಮರಾಯನಿಂದ ಈ ವಂಶದ ಮೂಲಪುರುಷನಾದ ಬಾಲದ ಹನುಮಪ್ಪ ನಾಯಕನು ನಾಯಕತನವನ್ನು ಪಡೆದುಕೊಂಡು ವಿಜಯನಗರದ ಸಾಮಂತನಾದನು.[೭] ನಂದ್ಯಾಲ, ಬುಕ್ಕರಾಯನ ಸಮುದ್ರ, ಧರ್ಮವರ, ಕಣೇಕಲ್ಲು ಬಳ್ಳಾರಿ, ಕುರುಗೋಡು ಗ್ರಾಮಗಳನ್ನು ರಾಮರಾಯನಿಂದ ಉಂಬಳಿಯಾಗಿ ಪಡೆದನು.[೮] ವಿಜಯನಗರದ ಪತನದ ನಂತರ ಬಿಜಾಪುರದ ಆದಿಲ್‌ಷಾಹನ ಆಳ್ವಿಕೆಗೆ ಒಳಾಗಾಗಿ ಅವರಿಂದ ವಜೀರ ಎಂಬ ಬಿರುದನ್ನು ಪಡೆಯುತ್ತಾನೆ. ಬಾಲದ ಹನುಮಪ್ಪನಾಯಕ ಆಡಳಿತಾವಧಿಯಲ್ಲಿಯೇ ಹೊರಗಿನ ಶತ್ರುಗಳ ದಾಳಿಗಳು ಆರಂಭವಾದವು. ಮೊಗಲರ ನಿಜಾಮ ಅಲಿಖಾನನು ಬಸಾಲತ್‌ಜಂಗ್ ಬಹದ್ದೂರನನ್ನು ಸೈನ್ಯ ಸಮೇತ ಮುತ್ತಿಗೆ ಹಾಕಿಸಿದನು. ಈ ಮುತ್ತಿಗೆ ಸಫಲವಾಗುವ ಮುನ್ನವೇ ಮೊಗಲ್ ಸೈನ್ಯ ಕಾರಣಾಂತರದಿಂದ ಮುತ್ತಿಗೆಯನ್ನು ಹಿಂದೆ ತೆಗೆದುಕೊಂಡು ಹೋಯಿತು. ಮೊಗಲರ ವಿಪತ್ತಿನಿಂದ ತಪ್ಪಿಸಿಕೊಂಡ ಹಂಡೆಯ ಪಾಳೆಯಗಾರಿಗೆ ಮುಂದೆ ಹೈದರಾಲಿಯಿಂದ ಭಯಂಕರವಾದ ವಿಪತ್ತು ಬಂದುಬಿಟ್ಟಿತು. ಹನುಮಪ್ಪ ನಾಯಕ, ರಾಮಪ್ಪ ನಾಯಕನ ಮರಣದ ನಂತರ ಅಧಿಕಾರಕ್ಕಾಗಿ ಅಂತಃಕಲಹಗಳು ನಡೆಯತೊಡಗಿದವು. ಈ ಅವಕಾಶವನ್ನು ಬಳಸಿಕೊಳ್ಳಲು ಮುಂದಾದ ಹೈದರಾಲಿಯು ಮುತ್ತಿಗೆ ಹಾಕಿದನು. ಈ ಮುತ್ತಿಗೆಯಲ್ಲಿ ಹೈದರಾಲಿಗೆ ರಾಯದುರ್ಗದ ನಾಯಕರು ಸಹಾಯ ಮಾಡಿದರು. ಈ ಮುತ್ತಿಗೆ ಯಶಸ್ವಿಯಾಗದ ಕಾರಣ ಹೈದರಾಲಿಯು ಮೈಸೂರಿಗೆ ಹಿಂತಿರುಗಿದನು. ಪುನಃ ಹೈದರಾಲಿಯ ಮುತ್ತಿಗೆಯು ದೊಡ್ಡಪ್ಪ ನಾಯಕನ ಆಡಳಿತಾವಧಿಯಲ್ಲಿ ಸಂಭವಿಸಿತು. ಕ್ರಿ.ಶ. ೧೭೭೫ರಲ್ಲಿ ಹೈದರಾಲಿಯು ಆದವಾನಿಯ ಮೊಗಲರ ಬಸಾಲತ್‌ಜಂಗ್‌ನು ರಾಜದೇವಿಚಂದ ಹಾಗೂ ಜಮೀರ್‌ಸಾತ್‌ನಿಂದ ಬಳ್ಳಾರಿಗೆ ಮುತ್ತಿಗೆ ಹಾಕಿದ ವಿಷಯವನ್ನು ತಿಳಿದು ಸೈನ್ಯ ಸಮೇತ ಬಂದು ದೇವಿ ಚಂದನನ್ನು ಕೊಂದು ದೊಡ್ಡಪ್ಪ ನಾಯಕನನ್ನು ಸೋಲಿಸಿದನು. ಆಗ ದೊಡ್ಡಪ್ಪ ನಾಯಕನು ಕುಟುಂಬ ಸಮೇತವಾಗಿ ಕುರುಗೋಡಿಗೆ ಓಡಿಹೋದನು.[೧೦]

ಬಳ್ಳಾರಿಯು ಹೈದರಾಲಿಯ ವಶವಾಯಿತು. ಬಳ್ಳಾರಿಯ ಆಡಳಿತವನ್ನು ನೋಡಿಕೊಳ್ಳಲು ಹೈದರಾಲಿ ಬೇಗ್ ಎನ್ನುವ ಅಧಿಕಾರಿಯನ್ನು ನೇಮಿಸಿದನು. ಇವನ ನಂತರ ಹೈದರ್ ಬಕ್ಷ್, ರಾಣೋಜಿರಾಯ, ಮನೋಜಿರಾಯ ಬಳ್ಳಾರಿಯ ಆಡಳಿತಾಧಿಕಾರಿಗಳಾಗಿ ಕಾರ್ಯವನ್ನು ನಿರ್ವಹಿಸಿದರು. ಹೈದರಾಲಿಯ ಮರಣದ ನಂತರ ಬಳ್ಳಾರಿಯು ಟಿಪ್ಪು ಸುಲ್ತಾನನ ವಶಕ್ಕೆ ಬಂದಿತು. ಸಿದ್ದಮೋದಿಖಾನ್ ಎಂಬುವನು ಈ ಪ್ರದೇಶದ ಸಭೇದಾರನಾಗಿ ಅಧಿಕಾರ ನಿರ್ವಹಿಸಿದನು. ನಂತರ ಬಳ್ಳಾರಿಯು ನಿಜಾಮರ ವಶವಾಗಿ ಅಂತಿಮವಾಗಿ ಕ್ರಿ.ಶ. ೧೮೦೦ರಲ್ಲಿ ಈಸ್ಟ್ ಇಂಡಿಯಾ ಕಂಪನಿಗೆ ಹಸ್ತಾಂತರವಾಯಿತು. ಬ್ರಿಟಿಷ್ ಸರ್ಕಾರ ಆಡಳಿತಾಧಿಕಾರಿಯಾಗಿ ಬಂದ ಮನ್ರೋ ಅನಂತಪುರವನ್ನು ತನ್ನ ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು ಈ ಮಂಡಲವನ್ನು ಸುವ್ಯವಸ್ಥೆಗೊಳಿಸಿದನು. ಮನ್ರೋ ಹಂಡೆ ವಂಶದವರಿಗೆ ಜೀವನಾಂಶವನ್ನು ಬ್ರಿಟಿಷ್ ಸರ್ಕಾರದಿಂದ ನಿಗದಿಗೊಳಿಸಿದನು. ಹಂಡೆ ವಂಶದವರು ಕ್ರಿ.ಶ. ೧೮೬೦ರವರೆಗೂ ಇಂಗ್ಲೀಷ್ ಸರ್ಕಾರದಿಂದ ಜೀವನಾಂಶ ಪಡೆಯುತ್ತ ಬಂದರು.[೧೧] ಒಟ್ಟಿನಲ್ಲಿ ಹೈದರಾಲಿಯ ದಾಳಿಗೆ ಸಿಲುಕಿ ಹಂಡೆ ಪಾಳೆಯಗಾರರು ರಾಜಕೀಯದಿಂದ ತೆರೆಮರೆಗೆ ಸರಿದುಹೋದರು.

ಹೊಯ್ಸಳ ಕಾಲದಲ್ಲಿ ಸ್ಥಾಪನೆಗೊಂಡ ಪಾಳೆಯ ಪಟ್ಟುಗಳಲ್ಲಿ ಗುಮ್ಮನಾಯಕ ಪಾಳೆಯವೂ ಒಂದಾಗಿದೆ. ಈ ಸಂಸ್ಥಾನದ ಮೂಲಪುರುಷ ಖಾದ್ರಿ ಪತಿನಾಯಕ. ಕ್ರಿ.ಶ. ೧೨೪೩ರಲ್ಲಿ ಈ ಪಾಳೆಯಪಟ್ಟನ್ನು ಕೋಲಾರ ಜಿಲ್ಲೆಯ ಗುಮ್ಮನಾಯಕ ಪಾಳೆಯದಲ್ಲಿ ಸ್ಥಾಪಿಸಿದನು. ಹೊಯ್ಸಳರ ಅವನತಿಯ ನಂತರ ಈ ಸಂಸ್ಥಾನವು ವಿಜಯನಗರ ಅಧೀನಕ್ಕೆ ಸೇರ್ಪಡೆಗೊಂಡಿತು. ಕ್ರಿ.ಶ. ೧೨೯೬ರಲ್ಲಿ ಅಧಿಕಾರಕ್ಕೆ ಬಂದ ಗುಮ್ಮನಾಯಕನು ವಿಜಯನಗರದ ಪ್ರತಿನಿಧಿ ತಿರುಮಲರಾಯನ ಸೈನ್ಯದೊಂದಿಗೆ ಒಪ್ಪಂದಕ್ಕೆ ಬದ್ಧನಾಗಿ ವಿಜಯನಗರದ ಸಾಮಂತನಾದನು. ಗುಮ್ಮನಾಯಕನು ೨೫,೦೦೦ ವರಹ ಕಪ್ಪವನ್ನು ನೀಡಿ ಅವಶ್ಯಕವಾಗಿದ್ದಾಗ ಆನೆಗೊಂದಿಯ ರಕ್ಷಣೆಗೆಂದು ೨೦೦ ಜನ ಸೈನಿಕರ ಕಾಪು ಪಡೆಯನ್ನು ಸಿದ್ಧಗೊಳಿಸಿದ್ದನು.[೧೨] ಹೀಗೆ ಗುಮ್ಮನಾಯಕನ ಕಾಲದಲ್ಲಿ ವಿಜಯನಗರ ಸಾಮಂತರಾದ ಇವರು ವಿಜಯನಗರದ ಪತನವಾಗುವವರೆಗೂ ಅವರ ಸಾಮಂತರಾಗಿಯೇ ಮುಂದುವರಿದ್ದರು. (ವಿಜಯನಗರದ ಪತನದ ನಂತರ ಅಂದರೆ ೧೫೬೫ರಲ್ಲಿ ಗುಮ್ಮನಾಯಕ ಪಾಳೆಯವು ಸ್ವತಂತ್ರ ಸಂಸ್ಥಾನವಾಗಿ ರೂಪುಗೊಂಡಿತು. ವೀರದಾಸಪ್ಪ ನಾಯಕ ಈ ಸಂಸ್ಥಾನದ ಸ್ವತಂತ್ರ ಮೊದಲ ಪಾಳೆಯಗಾರ) ಗುಮ್ಮನಾಯಕನ ಪಾಳೆಯದ ಮೇಲೆ ಹೊರಗಿನ ರಾಜಕೀಯ ಶಕ್ತಿಗಳ ದಾಳಿಗಳು ಆರಂಭವಾಗಿದ್ದು ಬಂಗಾರು ತಿಮ್ಮನಾಯಕನ ಕಾಲದಲ್ಲಿ. ಈ ವೇಳೆಗಾಗಲೇ ವಿಜಯನಗರ ಸಾಮ್ರಾಜ್ಯ ಅವನತಿಯ ಹಾದಿಯಲ್ಲಿತ್ತು. ವಿಜಯನಗರದ ಅಧೀನವಾಗಿದ್ದ ಅದೆಷ್ಟೋ ಪಾಳೆಯಪಟ್ಟುಗಳು ಸ್ವತಂತ್ರಗೊಂಡಿದ್ದವು. ಈ ಸಮಯದಲ್ಲಿ ಹೈದರಾಬಾದನ ನಿಜಾಮನು ವಿಜಯನಗರದ ಅಧೀನದಲ್ಲಿದ್ದ ಪಾಳೆಯ ಪಟ್ಟುಗಳ ಮೇಲೆ ದಾಳಿ ಮಾಡಿ ತನ್ನ ಅಧೀನಕ್ಕೆ ತಂದುಕೊಂಡನು. ಹೀಗಾಗಿ ಕೆಲವು ಕಾಲ ಗುಮ್ಮನಾಯಕ ಪಾಳೆಯವು ನಿಜಾಮನ ಅಧೀನಕ್ಕೆ ಹೋಯಿತು. ೩೦,೦೦೦ ವರಹಗಳನ್ನು ಕಪ್ಪವಾಗಿ ನೀಡುವಂತೆ ಬಂಗಾರು ತಿಮ್ಮನಾಯಕನನ್ನು

ಒತ್ತಾಯಪಡಿಸಲಾಯಿತು. ಇದಾದ ಕೆಲವೇ ದಿನಗಳಲ್ಲಿ ಗುಮ್ಮನಾಯಕನ ಪಾಳೆಯ ಮರಾಠರ ಅಧೀನಕ್ಕೆ ಒಳಪಟ್ಟು ಅವರ ಅಧೀನದಲ್ಲಿ ೩೫,೦೦೦ ಕಪ್ಪ ಕೊಡುವ ಸಂಸ್ಥಾನವಾಗಿ ಮುಂದುವರಿಯಿತು. ಮುಂದೆ ಮರಾಠರ ಪೇಶ್ವೆ ಬಾಜಿರಾಯನ ಆಡಳಿತಾವಧಿಯಲ್ಲಿ ಮರಾಠ ಸೈನ್ಯವು ಗುಮ್ಮನಾಯಕ ಪಾಳೆಯದ ಮೇಲೆ ದಾಳಿ ಮಾಡಿತು. ಆಗ ಮುಮ್ಮಡಿ ಕದಿರಪ್ಪನಾಯಕ ಗುಮ್ಮನಾಯಕ ಪಾಳೆಯದ ಪಾಳೆಯಗಾರನಾಗಿದ್ದನು. ಈತ ಮರಾಠ ದಾಳಿಯನ್ನು ಎದುರಿಸಲಾರದೇ ಅವರೊಂದಿಗೆ ಒಪ್ಪಂದವನ್ನು ಮಾಡಿಕೊಂಡು ೨೫,೦೦೦ ವರಹಗಳನ್ನು ಕಪ್ಪ ನೀಡಲು ಸಮ್ಮತಿಸಿದನು. ಮರಾಠ ಸುಬೇದಾರ ದಿಲಾವರಖಾನ್‌ನಿಗೆ ೨೫,೦೦೦ ರೂಪಾಯಿಗಳನ್ನು ನೀಡಿ ಮರಾಠರ ವಶದಲ್ಲಿದ್ದ ಗೋರುಂಟ್ಲ, ಸಮ್ಮತು ಪ್ರವೇಶವನ್ನು ಐದನೆ ನರಸಿಂಹ ನಾಯಕನು ಖರೀದಿಸಿದನು. ಮರಾಠರ ಪೇಶ್ವೆ ಬಾಲಾಜಿಯನನ್ನು ಪಾಳೆಯಗಾರರಿಂದ ಮತ್ತಷ್ಟು ಕಂದಾಯವನ್ನು ಪಡೆಯಲು ತನ್ನ ಸೇನಾನಿ ಗೋಪಾಲರಾಯನ ನೇತೃತ್ವದಲ್ಲಿ ಸೈನ್ಯವನ್ನು ಕಳುಹಿಸಿದನು. ಗೋಪಾಲರಾಯನು ಕಂದುಕೂರು ತಾಲ್ಲೂಕನ್ನು ಕಸಿದುಕೊಂಡು ೪೦,೦೦೦ ರೂಪಾಯಿ ಮೊತ್ತವನ್ನು ವಾರ್ಷಿಕ ಪೊಗಾದಿಯಾಗಿ ವಿಧಿಸಿದನು.[೧೩] ಐದನೇ ನರಸಿಂಹನಾಯಕನು ಪೇಶ್ವೆಗೆ ಪತ್ರ ಬರೆದು ವಿನಂತಿಸಿಕೊಂಡಾಗ ಬಾಲಾಜಿರಾಯನು ನಾಯಕನ ಮನವಿಯನ್ನು ಪುರಸ್ಕರಿಸಿ ಅವನಿಗೆ ಕಂದುಕೂರುನ್ನು ಹಿಂತಿರುಗಿಸಿದನು. ಇಷ್ಟೆಲ್ಲ ರಾಜಕೀಯ ಅವಾಂತರಗಳ ಮಧ್ಯೆ ಹೈದರಾಬಾದಿನ ನಿಜಾಮನ ಸೇನಾನಿ ಮುರಾರಿರಾವ್ ಗುಮ್ಮನಾಯಕ ಪಾಳೆಯಕ್ಕೆ ಸೇರಿದ್ದ ಕೋಟಕೊಂಡವನ್ನು ವಶಪಡಿಸಿಕೊಂಡು ನಿಜಾಮನ ಸಾಮ್ರಾಜ್ಯಕ್ಕೆ ಸೇರಿಸಿದನು. ಹಾಗೆಯೇ ೩೫,೦೦೦ ಪೊಗಾದಿಯನ್ನು ವಿಧಿಸಿದನು.

ಐದನೇ ನರಸಿಂಹನಾಯಕನು ಆತನ ಪತ್ನಿ ರಾಮಕ್ಕ ನಾಯಕಿ ಸಂಸ್ಥಾನದ ಆಡಳಿತ ಜವಾಬ್ದಾರಿಯನ್ನು ಹೊತ್ತುಕೊಂಡಳು. ಈಕೆಯ ಅಧಿಕಾರಾವಧಿಯಲ್ಲಿ ಗುಮ್ಮನಾಯಕ ಪಾಳಯವು ತನ್ನ ಎಲ್ಲ ಪ್ರಾಂತ್ಯಗಳನ್ನು ಕಳೆದುಕೊಂಡಿತು. ಈಕೆಯ ನಂತರ ನಾಲ್ವಡಿ ವಸಂತನಾಯಕ, ಅನಂತರ ಆರನೆಯ ನರಸಿಂಹನಾಯಕ ಅಧಿಕಾರಕ್ಕೆ ಬಂದನು. ಈ ಆರನೆಯ ನರಸಿಂಹನಾಯಕನ ಅಧಿಕಾರಾವಧಿಯಲ್ಲಿಯೇ ಮೈಸೂರಿನ ಸರ್ವಾಧಿಕಾರಿ ಹೈದರಾಲಿಯು ಕ್ರಿ.ಶ. ೧೭೭೦ರಲ್ಲಿ ಗುಮ್ಮನಾಯಕ ಪಾಳೆಯದ ಮೇಲೆ ಯುದ್ಧವನ್ನು ಮಾಡಿ ದುರ್ಗವನ್ನು ವಶಪಡಿಸಿಕೊಂಡನು.[೧೪] ನರಸಿಂಹನಾಯಕನು ಕೋಟೆಯನ್ನು ಬಿಟ್ಟು ತಲೆಮರೆಸಿಕೊಂಡನು. ಪುನಃ ಗುಮ್ಮನಾಯಕ ಪಾಳೆಯವನ್ನು ಮರಳಿ ಪಡೆಯಲು ಯತ್ನಿಸಿದನು. ಈ ವೇಳೆಗೆ ಹೈದರಾಲಿಯು ಮೃತಪಟ್ಟು ಅವನ ಮಗ ಟಿಪ್ಪು ಅಧಿಕಾರಕ್ಕೆ ಬಂದನು. ಟಿಪ್ಪು ಸುಲ್ತಾನನು ಪಾಳೆಯಗಾರರನ್ನು ನಾಶ ಮಾಡಲು ಪಣ ತೊಟ್ಟಿರುವನಂತೆ ಮೀರ್‌ಸಾಧಿಕ್ ಸಾಹೇಬನ ನೇತೃತ್ವದಲ್ಲಿ ಅಪಾರ ಸೈನ್ಯವನ್ನು ಕಳುಹಿಸಿದನು. ಮೀರ್‌ಸಾಹೇಬನ ಸೈನ್ಯ ಹಲವಾರು ಪಾಳೆಯ ಪಟ್ಟುಗಳನ್ನು ನೆಲಸಮ ಮಾಡಿ ಗುಮ್ಮನಾಯಕನ ಪಾಳೆಯವನ್ನು ವಶಪಡಿಸಿಕೊಂಡಿತು. ಆಗ ನರಸಿಂಹ ನಾಯಕ ಕುಟುಂಬ ಸಮೇತ ದೋಣಿ ಬೈಲಿಗೆ ತಪ್ಪಿಸಿಕೊಂಡು ಓಡಿ ಹೋದನು. ಈ ಸಮಯದಲ್ಲಿ ಬ್ರಿಟಿಷರಿಗೂ ಟಿಪ್ಪು ಸುಲ್ತಾನನಿಗೂ ಮಧ್ಯೆ ೩ ಆಂಗ್ಲೋ ಮೈಸೂರು ಯುದ್ಧ ಆರಂಭವಾಯಿತು. ಈ ಯುದ್ಧದಲ್ಲಿ ತನ್ನ ಸಂಸ್ಥಾನವನ್ನು ಮರಳಿ ಪಡೆಯಲು

ನರಸಿಂಹ ನಾಯಕನು ಬ್ರಿಟಿಷರೊಂದಿಗೆ ಕೈಜೋಡಿಸಿದನು. ಬ್ರಿಟಿಷ್ ಜನರಲ್ ಮೆಡೋಸನು ನರಸಿಂಹ ನಾಯಕನಿಗೆ ಅಭಯಹಸ್ತವನ್ನು ನೀಡಿದನು. ಮೂರನೇ ಆಂಗ್ಲೋ-ಮೈಸೂರು ಯುದ್ಧವು ಶಾಂತಿ ಸಂಧಾನದಿಂದ ನಿಂತಿತು. ಆಗ ಟಿಪ್ಪುವಿನ ಸೇನಾಧಿಕಾರಿ ಮೀರ್ ಸಾಹೇಬನು ಗುಮ್ಮನಾಯಕನ ಪಾಳೆಯವನ್ನು ಪುನಃ ವಶಪಡಿಸಿಕೊಂಡನು. ಪುನಃ ನರಸಿಂಹ ನಾಯಕ ರಾಜಕೀಯ ನೆಲೆ ಕಳೆದುಕೊಂಡನು. ಮುಂದೆ ಸಂಭವಿಸಿದ ೪ನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಟಿಪ್ಪು ಮೃತನಾದನು. ಈ ಯುದ್ಧದಲ್ಲಿ ನರಸಿಂಹ ನಾಯಕನು ಇಂಗ್ಲೀಷ್ ಜನರಲ್ ಹ್ಯಾರಿಸ್‌ನೊಡನೆ ಒಪ್ಪಂದ ಮಾಡಿಕೊಂಡು ಬ್ರಿಟಿಷರ ಪರವಾಗಿ ನಿಂತು ಟಿಪ್ಪುವಿನ ವಿರುದ್ಧ ಹೋರಾಡಿದನು. ಅಲ್ಲದೇ ಶ್ರೀರಂಗಪಟ್ಟಣದ ಮುತ್ತಿಗೆಯ ಸಮಯದಲ್ಲಿ ಗುಮ್ಮನಾಯಕನ ಪಾಳೆಯಗಾರರ ಸೈನಿಕರು ಆಂಗ್ಲರ ಪರವಾಗಿ ಹೋರಾಟ ಮಾಡಿದ್ದು ಇತಿಹಾಸವಾಗಿ ಉಳಿದಿದೆ.[೧೫] ೪ನೇ ಆಂಗ್ಲೋ ಮೈಸೂರು ಯುದ್ಧದ ನಂತರ ಗುಮ್ಮನಾಯಕನ ಪಾಳೆಯವು ಮೈಸೂರು ಸಂಸ್ಥಾನದ ವಶಕ್ಕೆ ಬಂದಿತು. ಜನರಲ್ ಹ್ಯಾರಿಸನು ಗುಮ್ಮನಾಯಕ ಪಾಳೆಯವನ್ನು ಆರನೇ ನರಸಿಂಹ ನಾಯಕನಿಗೆ ಹಿಂತಿರುಗಿಸಿ ಮರಳಿ ನೀಡುವಂತೆ ದಿವಾನ್ ಪೂರ್ಣಯ್ಯನವರಿಗೆ ಆದೇಶಿಸಿದನು. ಆದರೆ ಪೂರ್ಣಯ್ಯ ಗುಮ್ಮನಾಯಕ ಪಾಳೆಯವನ್ನು ಹಿಂತಿರುಗಿಸದೇ ಮೈಸೂರು ಸಂಸ್ಥಾನದಲ್ಲಿ ವಿಲೀನಗೊಳಿಸಿದರು. ನಿರಾಶೆಗೊಂಡ ನರಸಿಂಹ ನಾಯಕನು ಗುರುಮಕೊಂಡ ತಾಲ್ಲೂಕಿನ ಪಡು ಗ್ರಾಮದಲ್ಲಿ ನೆಲೆಸಿ ತನ್ನ ಅಂತಿಮ ಜೀವನವನ್ನು ಕಳೆದನು.

ಒಟ್ಟಿನಲ್ಲಿ ಗುಮ್ಮನಾಯಕ ಪಾಳೆಯವು ನಿಜಾಮರ, ಮರಾಠರ, ಮೊಗಲರ, ಹೈದರಾಲಿಯ ಪದೇ ಪದೇ ರಾಜಕೀಯ ದಾಳಿಗಳಿಗೆ ಸಿಲುಕಿ ನಿರ್ನಾಮಗೊಂಡಿತು. ವಿಜಯನಗರದಂತಹ ಬಲಿಷ್ಠ ಏಕಚಕ್ರಾಧಿಪತ್ಯ ಸಾಮ್ರಾಜ್ಯದ ಅಡಿಯಲ್ಲಿ ಬೆಳೆದು ನಿಂತ ಗುಮ್ಮನಾಯಕ ಪಾಳೆಯವು ವಿಜಯನಗರದ ಪತನದ ನಂತರ ಅವನತಿಯ ಹಾದಿ ಹಿಡಿಯಿತು. ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ದಮನಕಾರಿ ನೀತಿಗಳಿಂದ ಮತ್ತಷ್ಟು ವಿನಾಶದ ಹಾದಿಯಲ್ಲಿ ನಡೆದ ಗುಮ್ಮನಾಯಕ ಪಾಳೆಯವು ಬ್ರಿಟಿಷರಿಂದ ನೆರವನ್ನು ಪಡೆಯುವ ಮಹತ್ವಾಕಾಂಕ್ಷೆಯಿಂದ ಮೂರು ಮತ್ತು ನಾಲ್ಕನೆಯ ಆಂಗ್ಲೋ-ಮೈಸೂರು ಯುದ್ಧಗಳಲ್ಲಿ ಭಾಗವಹಿಸಿತು. ಬ್ರಿಟಿಷರಪರ ಹೋರಾಟ ಬ್ರಿಟಿಷರಿಗೆ ಗೆಲುವನ್ನು ತಂದುಕೊಟ್ಟರೂ ತನ್ನ ಆಶಯವನ್ನು ಈಡೇರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಕರ್ನಾಟಕದ ಬಹುತೇಕ ಪಾಳೆಯಪಟ್ಟುಗಳಂತೆ ಗುಮ್ಮನಾಯಕನ ಪಾಳೆಯವು ಮೈಸೂರು ಸಂಸ್ಥಾನದಲ್ಲಿ ವಿಲೀನಗೊಂಡಿತು. ದಿವಾನ್ ಪೂರ್ಣಯ್ಯನವರ ರಾಜಕೀಯ ಮಹತ್ವಾಕಾಂಕ್ಷೆಗಳಿಂದ ಸಂಸ್ಥಾನವನ್ನು ಮರಳಿ ಪಡೆಯಲಾಗದೆ ಪಾಳೆಯಗಾರರು ಸಂಪೂರ್ಣವಾಗಿ ಇತಿಹಾಸದ ಪುಟಗಳಿಂದ ಕಣ್ಮರೆಯಾದರು.

ಕರ್ನಾಟಕವನ್ನು ಆಳಿದ ಪಾಳೆಯಪಟ್ಟುಗಳಲ್ಲಿ ಉಮ್ಮತ್ತೂರು ಒಂದಾಗಿದೆ. ಮೈಸೂರು, ಮಂಡ್ಯ ಚಾಮರಾಜನಗರ ಜಿಲ್ಲೆಗಳ ಮತ್ತು ಕಾವೇರಿ-ಕಪಿಲಾ ನದಿಗಳ ಪರಿಸರದಲ್ಲಿ ಅಸ್ತಿತ್ವಕ್ಕೆ ಬಂದ ಪಾಳೆಯಪಟ್ಟುಗಳಲ್ಲಿ ಉಮ್ಮತ್ತೂರು ಪ್ರಧಾನವಾಗಿದೆ. ಉಮ್ಮತ್ತೂರು ಪಾಳೆಯಗಾರರು

ವಿಜಯನಗರದ ಅಮರನಾಯಕರಾಗಿದ್ದರು. ಉಮ್ಮತ್ತೂರು ಪಾಳೆಯಗಾರರು ಮೈಸೂರಿನ ಒಡೆಯರಿಗೆ ಆ ಭಾಗದ ಕಡು ವೈರಿಗಳಾಗಿದ್ದರು.[೧೬] ಉಮ್ಮತ್ತೂರು ಪ್ರಭುಗಳ ಮೂಲಪುರುಷ ಹನುಮಂತಪ್ಪ ಒಡೆಯ ಎಂಬುದನ್ನು ಒಪ್ಪಿಕೊಳ್ಳಲಾಗಿದೆ.[೧೭] ೧೫೦೦ರ ಮಳವಳ್ಳಿ ಶಾಸನವು ಉಮ್ಮತ್ತೂರು ರಾಜ ದೇಪಣ್ಣ ಒಡೆಯನ ಮಗ ಚಿಕ್ಕರಾಯನಿಗೆ ಸಂಬಂಧಿಸಿದ್ದು, ಈತನನ್ನು ಶಾಸನಗಳು ಮಲ್ಲಿರಾಯನೆಂದು ಗುರುತಿಸಿವೆ. ಇವನು ತೆರಕಣಾಂಬಿಯನ್ನು ತನ್ನ ಕೇಂದ್ರವಾಗಿಟ್ಟುಕೊಂಡು ಆಳುತ್ತಿದ್ದನು.

ಒಟ್ಟಿನಲ್ಲಿ ಹನುಮಂತನ ವಂಶಜರು ಉಮ್ಮತ್ತೂರಿನ ಸುತ್ತಣ ಪ್ರದೇಶಗಳಲ್ಲಿ ಮಹಾಮಂಡಲೇಶ್ವರರಾಗಿ ಅಧಿಕಾರವನ್ನು ನಿರ್ವಹಿಸುತ್ತಿದ್ದರೆಂದು ಹೇಳಲಾಗಿದೆ. ೧೫ನೇ ಶತಮಾನದ ಕೊನೆಯ ವೇಳೆಗೆ ಸೋಮ ರಾಜ ಒಡೆಯನ ಮಗನಾದ ದೇಪಣ್ಣ ಒಡೆಯನು ವಿಜಯನಗರದ ಅಧಿಪತ್ಯವನ್ನು ಧಿಕ್ಕರಿಸಿದನು. ಆಗ ನರಸನಾಯಕ ದಂಡೆತ್ತಿ ಬಂದು ಶ್ರೀರಂಗಪಟ್ಟಣದ ಕೋಟೆಯನ್ನು ನಾಶ ಮಾಡಿ ವಿಜಯಸ್ತಂಭವನ್ನು ನಿರ್ಮಿಸಿದನು. ಸೋತ ದೇಪಣ್ಣ ಒಡೆಯನು ವಿಜಯನಗರಕ್ಕೆ ಶರಣಾಗತನಾಗಿ ಪುನಃ ತನ್ನ ಪ್ರಾಂತ್ಯಗಳನ್ನು ಮರಳಿ ಪಡೆದನು.[೧೮] ಇವನ ಮಗ ಮಲ್ಲಿರಾಜನು ಸಾಳುವ ನರಸಿಂಹನ ವಿರುದ್ಧ ದಂಗೆ ಎದ್ದನು. ಈ ದಂಗೆಯನ್ನು ಅಡಗಿಸಲು ಸಾಳುವ ನರಸಿಂಹನಿಂದ ಆಗಲಿಲ್ಲ. ಇದರಿಂದ ಇವರು ಸ್ವಲ್ಪಮಟ್ಟಿಗೆ ಸ್ವತಂತ್ರರಾದರು. ಪುನಃ ಕೃಷ್ಣದೇವರಾಯನ ಕಾಲದಲ್ಲಿ ಉಮ್ಮತ್ತೂರಿನ ಮೇಲೆ ದಾಳಿ ಮಾಡಿ ಗಂಗರಾಜನನ್ನು ಮಟ್ಟಹಾಕುವಲ್ಲಿ ಕೃಷ್ಣದೇವರಾಯನು ಯಶಸ್ವಿಯಾದನು. ಗಂಗರಾಜನು ಪ್ರತಿರೋಧ ತಾಳಲಾರದೆ ಕಾವೇರಿ ನದಿಯಲ್ಲಿ ಮುಳುಗಿ ಮರಣ ಹೊಂದಿದನು.[೧೯] ಇವನ ನಂತರ ಇವನ ಮಗ ವೀರಪ್ಪ ಒಡೆಯರ್ ಅಧಿಕಾರಕ್ಕೆ ಬಂದನು. ಹೀಗೆ ಉಮತ್ತೂರು ಪ್ರಭುಗಳು ೧೬೧೫ರವರೆಗೂ ಪಾಳೆಯಗಾರರಾಗಿ ಅಧಿಕಾರದಲ್ಲಿದ್ದರು.

ಉಮ್ಮತ್ತೂರು ಪಾಳೆಯಗಾರರು ಹೊರಗಿನ ಶಕ್ತಿಗಳಿಂದಾಗಿರದೇ ಒಳ ಶತ್ರುಗಳಿಂದಲೇ ಅವನತಿ ಹೊಂದಿದರು. ಮೈಸೂರು ಒಡೆಯರಿಗೂ, ಉಮ್ಮತ್ತೂರಿನ ಪಾಳೆಯಗಾರರಿಗೂ ಅಗಾಧ ಶತ್ರುತ್ವ ಆರಂಭದಿಂದಲೂ ಇತ್ತು. ಇದಕ್ಕೆ ಕಳಲೆ ದಳವಾಯಿಗಳು ಹೊರತಾಗಿರಲಿಲ್ಲ. ಉಮ್ಮತ್ತೂರು ಪಾಳೆಯಗಾರರನ್ನು ಸದೆಬಡಿಯಲು ನಿರ್ಧರಿಸಿದ ಮೈಸೂರು ಒಡೆಯರು ಮತ್ತು ಕಳಲೆ ದಳವಾಯಿಗಳು ಒಂದುಗೂಡಿದರು. ಈ ಎರಡು ಮನೆತನಗಳ ನಡುವೆ ಏರ್ಪಟ್ಟ ವೈವಾಹಿಕ ಸಂಬಂಧಗಳು ಅವರನ್ನು ಮತ್ತಷ್ಟು ರಾಜಕೀಯವಾಗಿ ಸನಿಹಕ್ಕೆ ತಂದವು. ರಕ್ತಸಂಬಂಧಿಗಳಾದ ಕಳಲೆ ದಳವಾಯಿಗಳು ಮತ್ತು ಮೈಸೂರು ಒಡೆಯರು ಉಮ್ಮತ್ತೂರು ಪಾಳೆಯಗಾರರ ವಿರುದ್ಧ ಬಣವನ್ನು ರಚಿಸಿಕೊಂಡವು. ಕ್ರಿ.ಶ. ೧೬೧೫ರಲ್ಲಿ ಉಮ್ಮತ್ತೂರು ಪಾಳೆಯಗಳನ್ನು ಸಂಪೂರ್ಣವಾಗಿ ಸೋಲಿಸಿ ಅವರ ಎಲ್ಲ ಪ್ರದೇಶಗಳನ್ನು ಗೆದ್ದುಕೊಂಡವು. ರಾಜ ಒಡೆಯರ ಕಾಲದಲ್ಲಿ ಉಮ್ಮತ್ತೂರು ಪಾಳೆಯಪಟ್ಟು ಮೈಸೂರು ರಾಜ್ಯದಲ್ಲಿ ಸೇರಿಕೊಂಡಿತು.[೨೦]

ಹರಪನಹಳ್ಳಿ ಪಾಳೆಯಪಟ್ಟು ಬೇಡ ಸಂಸ್ಥಾನವಾಗಿತ್ತು. ಆರಂಭದಿಂದಲೂ ಹರಪನಹಳ್ಳಿಯ ಪಾಳೆಯಗಾರರು ವಿಜಯನಗರದ ಅಜನ್ಮ ವೈರಿಗಳಾಗಿದ್ದ ಆಲಿ ಆದಿಲ್‌ಷಾಹನಿಗೆ ಆಪ್ತರಾಗಿದ್ದರು.[೨೧]

ಹರಪನಹಳ್ಳಿಯ ಪಾಳೆಯಗಾರನಾದ ಬಸಪ್ಪ ನಾಯಕ ಹೈದರಾಲಿ ಮತ್ತು ಟಿಪ್ಪುವಿಗೆ ವಿಧೇಯಕನಾಗಿ ಪಾಳೆಯಪಟ್ಟನ್ನು ಆಳುತ್ತಿದ್ದನು. ಟಿಪ್ಪು ಸುಲ್ತಾನನಿಗೆ ವಶವಾಗದ ಕೊಪ್ಪಳ ದುರ್ಗವನ್ನು ಬಸಪ್ಪನಾಯಕನು ಗೆದ್ದು ಕೊಟ್ಟಿದ್ದನು. ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಬೇಡ ಪಾಳೆಯಗಾರರ ಮೇಲೆ ದ್ವೇಷ ಅಸೂಯೆಗಳನ್ನು ಹೊಂದಿದ್ದರು. ಆದರೂ ಮೇಲ್ನೋಟಕ್ಕೆ ಅದನ್ನು ತೋರಿಸಿಕೊಳ್ಳದೇ ಅವರಿಂದ ಸಹಾಯವನ್ನು ಪಡೆಯುತ್ತಿದ್ದರು. ಕೊಪ್ಪಳ ದುರ್ಗವನ್ನು ಗೆದ್ದು ಕೊಟ್ಟ ಬಸಪ್ಪ ನಾಯಕನ ಬಗ್ಗೆ ಹೆಮ್ಮೆ ಪಡದೆ ಟಿಪ್ಪು ಆತನ ಶೌರ್ಯ-ಸಾಹಸಗಳ ಬಗ್ಗೆ ಈರ್ಷೆ ಪಡತೊಡಗಿದ. ಈ ದ್ವೇಷ-ಅಸೂಯೆಗಳೇ ಹರಪನಹಳ್ಳಿ ನಾಯಕರ ಅವನತಿಗೆ ಕಾರಣವಾದವು. ಟಿಪ್ಪು ಸುಲ್ತಾನನು ಬಸವಪ್ಪ ನಾಯಕ ಮತ್ತು ಆತನ ಆಪ್ತವರ್ಗವನ್ನು ಸನ್ಮಾನ ಮಾಡುವ ನೆಪದಲ್ಲಿ ಹಗರಿಬೊಮ್ಮನಹಳ್ಳಿಗೆ ಕರೆಸಿಕೊಂಡು ಮೋಸದಿಂದ ಬಂಧಿಸಿ ಶ್ರೀರಂಗಪಟ್ಟಣದ ಸೆರೆಯಲ್ಲಿಟ್ಟ, ಅನಂತರ ಕೊಟ್ಟೂರು, ನಾರಾಯಣದೇವರಕೆರೆ, ಹರಪನಹಳ್ಳಿ, ಉಚ್ಚಂಗಿ ದುರ್ಗಗಳನ್ನು ವಶಪಡಿಸಿಕೊಂಡನು.[೨೨] ಕ್ರಿ.ಶ. ೧೭೯೨ರವರೆಗೂ ಹರಪನಹಳ್ಳಿಯ ಪಾಳೆಯಗಾರರ ಸಂತತಿಯು ಅವನತಿಯಾಗಲಿಲ್ಲ. ಚಿತ್ರದುರ್ಗದಲ್ಲಿ ಟಿಪ್ಪುವಿನ ಅಧಿಕಾರಿಗಳ ಕ್ರೂರವರ್ತನೆಯಿಂದ ಹಲವಾರು ಬೇಡನಾಯಕರು ದಂಗೆ ಎದ್ದರು. ಅದರಲ್ಲಿ ಹರಪನಹಳ್ಳಿ ನಾಯಕ ಮನೆತನಕ್ಕೆ ಸಂಬಂಧಿಸಿದವರು ಇದ್ದರು. ಈ ದಂಗೆಯನ್ನು ನಿಗ್ರಹಿಸುವುದು ಟಿಪ್ಪುವಿಗೆ ಕಷ್ಟವಾಯಿತು. ೪ನೇ ಆಂಗ್ಲೋ-ಮೈಸೂರು ಯುದ್ಧದ ನಂತರ ಹರಪನಹಳ್ಳಿಯು ನಿಜಾಮದ ಅಧೀನಕ್ಕೆ ಒಳಪಟ್ಟು ನಂತರ ಬ್ರಿಟಿಷರ ವಶವಾಯಿತು.

ನಿಡುಗಲ್ಲು ಸಂಸ್ಥಾನದ ಮೇಲೆ ಹೈದರಾಲಿಯು ಕ್ರಿ.ಶ. ೧೭೬೯ರಲ್ಲಿ ದಾಳಿಯನ್ನು ಮಾಡಿದನು. ನಿಡುಗಲ್ಲು ಸಂಸ್ಥಾನವು ಹೈದರಾಲಿಯ ದಾಳಿಗೆ ಮುಂಚೆ-ಸೀರ್ಯದ ಅಧೀನ ಪಾಳೆಯ ಪಟ್ಟಾಗತ್ತು. ಹೈದರಾಲಿಯ ದಾಳಿಯ ನಂತರ ನಿಡುಗಲ್ಲು ನಾಯಕನಾಗಿದ್ದ ತಿಮ್ಮಣ್ಣ ನಾಯಕನು ಶರಣಾಗತನಾಗಿ ವಾರ್ಷಿಕವಾಗಿ ೭,೦೦೦ ವರಹಗಳನ್ನು ಪೊಗಾದಿಯಾಗಿ ಸಲ್ಲಿಸಲು ಒಪ್ಪಿಕೊಂಡನು. ಹೈದರಾಲಿಯ ಮಗನಾದ ಟಿಪ್ಪು ಸುಲ್ತಾನನ ಜೊತೆ ಮಂಗಳೂರು ದಂಡಯಾತ್ರೆಯಲ್ಲಿ ಮುನ್ನಡೆಯುವಾಗ ಅಸ್ವಸ್ಥನಾಗಿ ಮರಣ ಹೊಂದಿದನು. ಆದರೆ ಸಾಯುವ ಮುಂಚೆ ನಾಯಕನು ನಿಡುಗಲ್ಲನ್ನು ಬಿಟ್ಟು ಕೊಡುವುದಾಗಿಯೂ ಅದನ್ನು ಚಿತ್ರದುರ್ಗ ನಾಯಕನಿಗೆ ಸಮರ್ಪಿಸುವಂತೆ ತನ್ನ ಮಗ ಹೊಟ್ಟಣ್ಣ ನಾಯಕನಿಗೆ ವಿಧಿಸುವುದಾಗಿಯೂ ಪತ್ರ ಬರೆದುಕೊಡುವಂತೆ ಟಿಪ್ಪು ಒತ್ತಾಯಿಸಿದನು. ಅದರಂತೆ ಟಿಪ್ಪು ಸುಲ್ತಾನನು ಮೋಸ ಮತ್ತು ಕುತಂತ್ರಗಳಿಂದ ನಿಡುಗಲ್ಲು ಕೋಟೆಯನ್ನು ಕೈವಶ ಮಾಡಿಕೊಂಡನು.[೨೩] ೪ನೇ ಆಂಗ್ಲೋ-ಮೈಸೂರು ಯುದ್ಧದ ನಂತರ ನಿಡುಗಲ್ಲು ಸಂಸ್ಥಾನವು ಮೈಸೂರಿನಲ್ಲಿ ವಿಲೀನಗೊಂಡಿತು.

ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ರಾಜ್ಯ ವಿಸ್ತರಣಾನೀತಿಗೆ ಬಲಿಯಾದ ಪಾಳೆಯ ಪಟ್ಟುಗಳಲ್ಲಿ ಗುಬ್ಬಿ ಹೊಸಹಳ್ಳಿ ಸಂಸ್ಥಾನದ ಪಾಳೆಯ ಪಟ್ಟು ಒಂದಾಗಿದೆ. ಈ ಮನೆತನದ ಮೂಲ ಪುರುಷ ಕಾಳ ಚಿಕ್ಕಪ್ಪಗೌಡ. ಇವರು ನೊಣಬ ಒಕ್ಕಲಿಗರಾಗಿದ್ದು ಶಿವನ ಆರಾಧಕರಾಗಿದುದ್ದು.

ಗುಬ್ಬಿ ಹೊಸಹಳ್ಳಿ ಪಾಳೆಯಗಾರರು ಮೈಸೂರು ಒಡೆಯರ ಸಾಮಂತರಾಗಿದ್ದು ಪ್ರತಿವರ್ಷವೂ ಒಡೆಯರಿಗೆ ಐದುನೂರು ಪಗೋಡಾಗಳ ಕಪ್ಪವನ್ನು ಸಲ್ಲಿಸುತ್ತಿದ್ದರು. ಹೈದರಾಲಿಯು ಮೈಸೂರು ಸಂಸ್ಥಾನದ ಸರ್ವಾಧಿಕಾರಿಯಾದ ನಂತರ ಕಪ್ಪದ ಮೊತ್ತವನ್ನು ದುಪ್ಪಟ್ಟು ಮಾಡಿದ. ಹಿಂದೆ ಕೇವಲ ೫೦೦ ಪಗೋಡಾ ಸಲ್ಲಿಸಬೇಕಾಗಿದ್ದು ನಾಯಕರು ಏಕಾಏಕಿ ೨೫೦೦ ಪಗೋಡಗಳನ್ನು ಕಪ್ಪವಾಗಿ ಸಂದಾಯ ಮಾಡಲೇಬೇಕಾಯಿತು. ಹೈದರಾಲಿಗೆ ಭಾರೀ ಮೊತ್ತದ ಕಪ್ಪವನ್ನು ಸಲ್ಲಿಸಲಾಗದ ಪಾಳೆಯಗಾರರು ನಿಸ್ಸಾಹಯಕರಾದರು. ಆಗ ಹೈದಾರಾಲಿಯು ಕಪ್ಪ ನೀಡದ ನೆಪವನ್ನು ಮುಂದೊಡ್ಡಿಕೊಂಡು ಗುಬ್ಬಿ ಹೊಸಹಳ್ಳಿ ಪ್ರಾಂತ್ಯವನ್ನು ಪಾಳೆಯಗಾರರಿಂದ ಕಿತ್ತುಕೊಂಡು ತನ್ನ ಅಧೀನಕ್ಕೆ ಒಳಪಡಿಸಿಕೊಂಡ. ಹೈದರಾಲಿಯ ಕ್ರಮದಿಂದ ರಾಜಕೀಯ ಸಂಸ್ಥಾನವನ್ನು ಕಳೆದುಕೊಂಡು ನಿರಾಶ್ರಿತರಾದ ನಾಯಕರಸರು ಸಾಮಾನ್ಯ ರೈತರಾಗಿ ಜೀವನ ನಡೆಸತೊಡಗಿದರು.

ದೇವದುರ್ಗ ಸಂಸ್ಥಾನವನ್ನು ಬೇಡ ಜನಾಂಗಕ್ಕೆ ಸೇರಿದ ನಲವತ್ತೈದಕ್ಕೂ ಹೆಚ್ಚು ದೊರೆಗಳು ಆಡಳಿತ ಮಾಡಿರುವುದು ತಿಳಿದು ಬರುತ್ತದೆ.[೨೪] ವಾಸುದೇವನಾಯಕ ಈ ಸಂಸ್ಥಾನದ ಮೂಲ ಪುರುಷ. ಈತನ ನಂತರ ಕಿಲಿಚನಾಯಕ, ರಂಗಪ್ಪ ನಾಯಕರು ದೇವದುರ್ಗ ಸಂಸ್ಥಾನವನ್ನು ಪರಿಪಾಲಿಸಿದರು. ದೇವದುರ್ಗ ಮತ್ತು ಸುರಪುರದ ಮಧ್ಯೆ ವೈವಾಹಿಕ ಸಂಬಂಧಗಳಿದ್ದರೂ ಸುರಪುರವು ದೇವದುರ್ಗ ಪಳೆಯ ಪಟ್ಟನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿತು. ಈ ಎರಡು ಸಂಸ್ಥಾನಗಳ ನಡುವೆ ಕಲಹಗಳು ಆಗಾಗ್ಗೆ ನಡೆಯುತ್ತಿದ್ದವು. ಜಾತಿ ವೈಷಮ್ಯ ಕಾರಣಗಳಿಂದಾಗಿ ರಂಗಪ್ಪ ನಾಯಕ ಆತ್ಮಾಹುತಿಯಾಗಲು ಆತನ ಮಗ ಕೃಷ್ಣಪ್ಪ ನಾಯಕನು ಮುಂದೆ ದೇವದುರ್ಗ ಸಂಸ್ಥಾನದ ಪಾಳೆಯಗಾರನಾಗಿ ಅಧಿಕಾರಕ್ಕೆ ಬಂದನು. ದೇವದುರ್ಗ, ಅರಕೇರಿ, ಕ್ಯಾದಿಗೆರಿ, ಜಾಲಿಬೆಂಚಿ ಗೋನವಟ್ಟಲು ವೆಂಕಟಪ್ಪ ನಾಯಕನ ಅಧಿಕಾರ ವ್ಯಾಪ್ತಿಗೆ ಸೇರ್ಪಡೆಗೊಂಡವು. ಹೈದರಬಾದಿನ ನಿಜಾಮನು ಸಹ ಈ ಪ್ರದೇಶಗಳನ್ನು ವೆಂಕಟಪ್ಪ ನಾಯಕನಿಗೆ ಕೊಟ್ಟು ಸನ್ನದನ್ನು ಬರೆದುಕೊಟ್ಟ.[೨೫]

ಕ್ರಿ.ಶ. ೧೮೫೩ ಮೇ ೨೧ರಂದು ನಿಜಾಮನು ಬೀರಾರ್ ಒಪ್ಪಂದಕ್ಕೆ ಸಹಿ ಮಾಡಿದನು. ಈ ಒಪ್ಪಂದದ ಪ್ರಕಾರ ಬೀರಾರ್ ಪ್ರಾಂತ್ಯ ಉಸ್ಮಾನಾಬಾದ್ ಹಾಗೂ ರಾಯಚೂರು ಜಿಲ್ಲೆಗಳು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಅಧೀನಕ್ಕೆ ಒಳಗಾಯಿತು. ಹೀಗಾಗಿ ನಿಜಾಮನಿಂದ ದೇವದುರ್ಗ ಪಾಳೆಯಗಾರರು ತಮ್ಮ ಸಂಸ್ಥಾನವನ್ನು ಕಳೆದುಕೊಂಡರು.

ವಿಜಯನಗರದ ಮೊದಲ ವರ್ಗದ ಅಮರನಾಯಕರಾಗಿ ಗುರುತಿಸಿಕೊಂಡು ಏಳಿಗೆಗೆ ಬಂದ ಪಾಳೆಯ ಪಟ್ಟುಗಳಲ್ಲಿ ಕೆಳದಿಯು ಅಗ್ರಸ್ಥಾನದಲ್ಲಿದೆ. ಚೌಡಪ್ಪ ನಾಯಕನು ಈ ನಾಯಕ ಸಂಸ್ಥಾನದ ಮೂಲ ಪುರುಷನಾಗಿದ್ದಾನೆ. ಈ ಸಂಸ್ಥಾನದ ಅವನತಿಯು ರಾಣಿ ವೀರಮ್ಮಾಜಿಯ ಕಾಲದಲ್ಲಿ ನಡೆಯಿತು. ಹೈದರಾಲಿಯ ಕ್ರಿ.ಶ. ೧೭೬೩ರಲ್ಲಿ ಕೆಳದಿಗೆ ಮುತ್ತಿಗೆ ಹಾಕಿದನು. ಈ ಯುದ್ಧದಲ್ಲಿ ವೀರಮ್ಮಾಜಿಯು ಸವಣೂರ ನವಾಬ ಅಬ್ದುಲ್ ಹಕೀಂಖಾನನ ಸೈನ್ಯದ ಸಹಾಯವನ್ನು ಪಡೆದಳು.[೨೬]

ಈ ಯುದ್ಧದಲ್ಲಿ ವೀರಮ್ಮಾಜಿಯ ಸೈನ್ಯವು ಸೋತು ಹೋಯಿತು. ಹೈದರಾಲಿಗೆ ಸೆರೆಸಿಕ್ಕ ವೀರಮ್ಮಾಜಿ, ನಂಜಯ್ಯ ಮತ್ತು ಚೆನ್ನಬಸಪ್ಪರನ್ನು ಮಧುಗಿರಿಯ ಸೆರೆಯಲ್ಲಿಡಲಾಯಿತು. ಪೇಶ್ವೆ ದಪ್ತರುಗಳ ಪ್ರಕಾರ ಮಾಧವರಾಯನ ನೇತೃತ್ವದಲ್ಲಿ ಮರಾಠ ಸೈನ್ಯವು ಮಧುಗಿರಿಯನ್ನು ಗೆದ್ದು ಇವರನ್ನು ಸೆರೆಯಿಂದ ಬಿಡಿಸಿತು. ವೀರಮ್ಮಾಜಿಯು ಪುಣೆಗೆ ಹೋಗುವಾಗ ದುಃಖಿತಪ್ತಳಾಗಿ ಅಸುನೀಗಿದಳು. ಸೋಮಶೇಖರ ನಾಯಕನು ನರಗುಂದದಲ್ಲಿ ನೆಲೆಸಿದನೆಂದು ತಿಳಿಯಲಾಗಿದೆ.[೨೭] ಹೈದರಾಲಿಯ ಮರಣದ ನಂತರ ಬ್ರಿಟಿಷ್ ಅಧಿಕಾರಿ ಕ್ರಿ.ಶ. ೧೭೮೩ರಲ್ಲಿ ಜನರಲ್ ಮ್ಯಾಥೋಸ್ ಕೆಳದಿಯನ್ನು ವಶಪಡಿಸಿಕೊಂಡನು. ನಂತರ ಟಿಪ್ಪು ಸುಲ್ತಾನ ೧೭೮೩ರಲ್ಲಿ ಪುನಃ ಕೆಳದಿಯನ್ನು ಬ್ರಿಟಿಷರಿಂದ ಗೆದ್ದುಕೊಂಡನು. ಟಿಪ್ಪುವಿನ ಮರಣದ ನಂತರ ಕೆಳದಿಯು ಮೈಸೂರು ಸಂಸ್ಥಾನದಲ್ಲಿ ಸೇರ್ಪಡೆಯಾಯಿತು.

ಹೊಯ್ಸಳರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ನಾಯಕರಲ್ಲಿ ದಾನಿವಾಸವು ಒಂದು. ಹೊಯ್ಸಳ ಕಾಲದಲ್ಲಿ ದಾನಿವಾಸ ಸೀಮೆಯ ನಾಯಕತ್ವನ್ನು ಪಡೆದುಕೊಂಡಿದ್ದ ದಾನಿವಾಸ ಒಡೆಯರು ಹೊಯ್ಸಳರ ಪತನದ ನಂತರ ವಿಜಯನಗರದ ಅಡಿಯಲ್ಲಿ ನಾಯಕತನ ಪಡೆದು ಮುಂದುವರೆದಿರುವುದನ್ನು ಕೊಪ್ಪ ತಾಲೂಕು ಲಿಂಗಾಪುರ ಗ್ರಾಮದ ಶಿಲಾಶಾಸನವು ಉಲ್ಲೇಖಿಸುತ್ತದೆ.[೨೮] ವಿರೂಪಾಕ್ಷರಸರು ಈ ಸಂತತಿಯ ಶಾಸನೋಕ್ತ ಮೊದಲ ಅರಸರಾಗಿದ್ದಾರೆ. ಇವರ ನಂತರ ಚಲುವರಾಯ ಒಡೆಯರ್, ಲಿಂಗಣ್ಣ ನಾಯಕ, ಅರಸಪ್ಪ ಒಡೆಯರ್, ಚಲನವೀರಣ ನಾಯಕ ಲಿಂಗನಾಯಕ, ಮಲ್ಲಣ ನಾಯಕ, ಚಿಕ್ಕ ಮಲ್ಲಣ ನಾಯಕ, ಚಿಕ್ಕವೀರಪ್ಪ ಒಡೆಯರ್, ಚಲನವೀರಪ್ಪ ಒಡೆಯರು ದಾನಿವಾಸ ಸಂಸ್ಥಾನವನ್ನು ಆಳಿದರು. ಕ್ರಿ.ಶ. ೧೫೮೮ರ ನಂತರ ದಾನಿವಾಸ ಒಡೆಯರು ಪತನಗೊಂಡರು. ದಾನಿವಾಸ ಒಡೆಯರು ಚಿಕ್ಕ ಸೀಮೆಯನ್ನು ಆಳುತ್ತಿದ್ದರಿಂದ ಅವರ ಅರ್ಥಿಕ ಶಕ್ತಿ ಮತ್ತು ಸೈನಿಕ ಶಕ್ತಿಯು ದುರ್ಬಲವಾಗಿತ್ತು. ತಾಳಿಕೋಟೆಯ ಕದನದ ನಂತರ ಮಲೆ ಕರ್ನಾಟಕದಲ್ಲಿ ದೊಡ್ಡ ಮಟ್ಟದ ರಾಜಕೀಯ ಶಕ್ತಿಯಾಗಿ ಬೆಳೆದ ಕೆಳದಿ ಸಂಸ್ಥಾನವು ಸಣ್ಣಪುಟ್ಟ ಪಾಳೆಯ ಪಟ್ಟುಗಳನ್ನು ಹಿಡಿತದಲ್ಲಿಟ್ಟುಕೊಂಡಿತು. ಕೆಳದಿಯ ಹಿರಿಯ ವೆಂಕಟಪ್ಪನಾಯಕನು ದಾನಿವಾಸವನ್ನು ಸ್ವಾಧೀನಪಡಿಸಿಕೊಂಡನು ಅಥವಾ ಈ ಮನೆತನದ ಕೊನೆಯ ನಾಯಕ ಚನ್ನವೀರಪ್ಪ ಒಡೆಯರ್ ಹಿರಿಯ ವೆಂಕಟಪ್ಪ ನಾಯಕನಿಗೆ ದಾನಿವಾಸ ಸೀಮೆಯನ್ನು ಒಪ್ಪಿಸಿರುವ ಸಾಧ್ಯತೆಗಳಿವೆ ಎನ್ನುತ್ತಾರೆ ಇತಿಹಾಸಕಾರ ಡಾ.ಡಿ.ಎಂ. ಯೋಗೀಶ್ವರಪ್ಪ. ಒಟ್ಟಿನಲ್ಲಿ ದಾನಿವಾಸ ಪಾಳೆಯಪಟ್ಟು ಹೊಯ್ಸಳ ಮತ್ತು ವಿಜಯನಗರ ಕಾಲದಲ್ಲಿ ಅಸ್ತಿತ್ವದಲ್ಲಿತ್ತು. ಪ್ರಾದೇಶಿಕವಾಗಿ ಬಲಾಢ್ಯವಾಗಿದ್ದ ಕೆಳದಿ ಸಂಸ್ಥಾನದ ಅಡಿಯಲ್ಲಿ ಸಿಲುಕಿ ಪತನಹೊಂದಿತು ಎಂದು ಹೇಳಬಹುದು.

ಚನ್ನಪಟ್ಟಣವನ್ನು ಕೇಂದ್ರವನ್ನಾಗಿರಿಸಿಕೊಂಡು ಆಡಳಿತವನ್ನು ನಡೆಸಿದವರೇ ಚನ್ನಪಟ್ಟಣ ಪಾಳೆಯಗಾರರು. ವಿಜಯನಗರದ ಕೊನೆಯ ಸಂತತಿಯಾದ ಅರವೀಡು ಮನೆತನದ ಅವಧಿಯಲ್ಲಿ ಈ ಪಾಳೆಯಪಟ್ಟು ಅಸ್ತಿತ್ವಕ್ಕೆ ಬಂದಿತು. ಈ ವಂಶದ ಮೂಲಪುರುಷ ರಾಣೋಜಿರಾವ್. ಇವರು

ತೆಲುಗು ಬಣಜಿಗ ಜಾತಿಯವರೆಂದು ಫ್ರಾನ್ಸಿಸ್ ಬುಕಾನನ್ ತನ್ನ ವರದಿಯಲ್ಲಿ ಉಲ್ಲೇಖಿಸಿದ್ದಾನೆ.[೨೯] ಇಮ್ಮಡಿ ವೆಂಕಟಪತಿರಾಯನ ಆಡಳಿತಾವಧಿಯಲ್ಲಿ ಇಮ್ಮಡಿ ಜಗದೇವರಾಯನು ಚನ್ನಪಟ್ಟಣವನ್ನು ರಾಜಧಾನಿಯಾಗಿಸಿಕೊಂಡು ಮುಳುಬಾಗಿಲು, ಪಿರಿಯಾಪಟ್ಟಣ, ನಣನಹಳ್ಳಿ, ಬೂದಿಹಾಳು, ಬಾರಮಹಲಿನಿಂದ ಪಶ್ಚಿಮ ಘಟ್ಟಗಳನ್ನು ಒಳಗೊಂಡಂತೆ ಬಂದು ವಿಶಾಲವಾದ ಪಾಳೆಯಪಟ್ಟನ್ನು ಸ್ಥಾಪಿಸಿದ. ಅರವೀಡು ಸಂತತಿಯವರೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಿಕೊಂಡಿದ್ದರಿಂದ ಸಮಕಾಲೀನ ಪಾಳೆಯಗಾರರಲ್ಲಿ ಬಲಾಢ್ಯ ಪಾಳೆಯಗಾರನಾಗಲು ಕಾರಣವಾಯಿತು. ಇಮ್ಮಡಿ ಜಗದೇವರಾಯನು ಯಲಹಂಕ ನಾಡಪ್ರಭು ಹಿರಿಯ ಕೆಂಪೇಗೌಡನ ಸಮಕಾಲೀನನಾಗಿದ್ದು. ಇವನ ನಂತರ ಪೆದ್ದಜಗ ದೇವರಾಯನ ತಮ್ಮ ಅಂಕುಶರಾಯ, ತದನಂತರ ಕುಮಾರ ಜಗದೇವರಾಯ, ಅಂಕುಶ ಜಗದೇವರಾಯರು ಅಧಿಕಾರಕ್ಕೆ ಬಂದನು. ಅಂಕುಶ ಜಗದೇವರಾಯನೇ ಈ ವಂಶದ ಕೊನೆಯ ದೊರೆ. ಇವನ ಕಾಲದಲ್ಲಿ ಚನ್ನಪಟ್ಟಣ ಅವನತಿಯಾಯಿತು. ಈ ಪಾಳೆಯಪಟ್ಟಿನ ಅವನತಿಯಲ್ಲಿ ಪ್ರಧಾನವಾಗಿ ಎದ್ದು ಕಾಣುವ ಅಂಶಗಳೇನೆಂದರೆ. ೧) ಪಾಳೆಯಪಟ್ಟು ದೊಡ್ಡ ಗ್ರಾತವನ್ನು ಹೊಂದಿತ್ತು. ಬಾರಮಹಲಿನಿಂದ ಪಶ್ಚಿಮ ಘಟ್ಟಗಳನ್ನು ಒಳಗೊಂಡಂತೆ ದೂರದ ಪ್ರದೇಶಗಳಾದ ಮುಳಬಾಗಿಲು, ಪಿರಿಯಾಪಟ್ಟಣ, ಕಾನಕಾನಹಳ್ಳಿ, ಬೂದಿಹಾಳು ಪಾಳೆಯ ಪಟ್ಟಿನ ಪ್ರಮುಖ ಆಡಳಿತ ಪ್ರದೇಶಗಳಾಗಿದ್ದರು. ಹೀಗಾಗಿ ಏಕರೂಪದ ಆಡಳಿತ ವ್ಯವಸ್ಥೆಯನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ನಾಯಕರು ವಿಫಲರಾದರು. ೨) ೧೫ನೇ ಶತಮಾನದಲ್ಲಿ ರೂಪುಗೊಂಡ ಮೈಸೂರು ಕೆಳದಿ, ಚಿತ್ರದುರ್ಗ, ಯಲಹಂಕದಂತಹ ಬಲಿಷ್ಠ ಪಾಳೆಯಪಟ್ಟುಗಳ ನಡುವೆ ರಾಜಕೀಯ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ೩) ಕ್ರಿ.ಶ. ೧೬೩೦ರಲ್ಲಿ ಮೈಸೂರಿನ ಚಾಮರಾಜ ಒಡೆಯರ ದಳಪತಿ ವಿಕ್ರಮರಾಯನು ಚನ್ನಪಟ್ಟಣವನ್ನು ಆಕ್ರಮಿಸಿಕೊಂಡು ಈ ಸಂಸ್ಥಾನವನ್ನು ಮೈಸೂರಿನಲ್ಲಿ ವಿಲೀನಗೊಳಿಸಿದನು.[೩೦] ಇದರೊಂದಿಗೆ ಚನ್ನಪಟ್ಟಣ ಪಾಳೆಯಗಾರರು ರಾಜಕೀಯದಿಂದ ನಿರ್ಗಮಿಸಬೇಕಾಯಿತು.

ಒಟ್ಟಿನಲ್ಲಿ ಚನ್ನಪಟ್ಟಣ ಪಾಳೆಯಗಾರರ ಅವನತಿಯು ಆಂತರಿಕ ಕಾರಣಗಳಿಂದ ಸಂಭವಿಸಿತೆಂದು ಹೇಳಬಹುದು. ಅರವೀಡು ಮನೆತನದ ಆಡಳಿತಾವಧಿಯಲ್ಲಿ ಮಿಂಚಿನಂತೆ ಉದಯವಾಗಿ ಮಿಂಚಿನಂತೆ ಉದಯವಾಗಿ ಮಿಂಚಿನಂತೆ ಮರೆಯಾಗಿಹೋಯಿತು. ವ್ಯವಸ್ಥಿತವಾದ ಏಕರೂಪದ ಆಡಳಿತ ವ್ಯವಸ್ಥೆಯ ವಿಫಲತೆಯೇ ಈ ಪಾಳೆಯಪಟ್ಟು ರಾಜಕೀಯವಾಗಿ ಕುಸಿಯಲು ಹಾಗೂ ಶತ್ರುಗಳ ಬಾಯಿಗೆ ಸುಲಭವಾಗಿ ತುತ್ತಾಗಲು ಕಾರಣವಾಯಿತು.

ಬಸವಾಪಟ್ಟಣವು ಕರ್ನಾಟಕವನ್ನು ಆಳಿದ ಪ್ರಬಲ ಬೇಡ ನಾಯಕ ಮನೆತನಗಳಲ್ಲಿ ಒಂದಾಗಿದೆ. ಬಸವಾಪಟ್ಟಣ ಪಾಳೆಯಗಾರರ ಮೂಲಪುರುಷ ಧೂಮರಾಜ. ಈತ ವಿಜಯನಗರದಿಂದ ಇಲ್ಲಿಗೆ ಬಂದು ನಾಯಕ ಕುಲವನ್ನು ಸ್ಥಾಪಿಸಿದನೆಂದು ಹೇಳಲಾಗಿದೆ.[೩೧] ಧೂಮರಾಜನ ನಂತರ ಹಿರಿಯ ಪುತ್ರ ಕೊಂಗಣ ನಾಯಕ ಬಸವಾಪಟ್ಟಣವನ್ನು ಪರಿಪಾಲನೆ ಮಾಡಿದ. ಇವನ ನಂತರ ಕ್ರಮವಾಗಿ ವೀರ ಹನುಮಪ್ಪ ನಾಯಕ, ಇಮ್ಮಡಿ ಹನುಮಪ್ಪ ನಾಯಕ, ಹುಚ್ಚು ಹನುಮಪ್ಪ ನಾಯಕ,

ಇಮ್ಮಡಿ ಕೊಂಗಣ ನಾಯಕರು ಬಸವಾಪಟ್ಟಣವನ್ನು ಆಳಿದರು. ಕೊಂಗಣ ನಾಯಕ ಈ ನಾಯಕರಲ್ಲಿ ಕೊನೆಯವನು. ಈತನ ಆಡಳಿತಾವಧಿಯಲ್ಲಿ ಬಿಜಾಪುರದ ರಣದುಲ್ಲಾಖಾನನು ಕ್ರಿ.ಶ. ೧೬೨೬ರಲ್ಲಿ ಬಸವಾಪಟ್ಟಣದ ಮೇಲೆ ದಾಳಿಯನ್ನು ಮಾಡಿದನು. ಈ ದಾಳಿಗೆ ಹೆದರಿದ ಕೊಂಗಣ ನಾಯಕನು ತರೀಕೆರೆಗೆ ಪಲಾಯನ ಮಾಡಿದನು. ಇಲ್ಲಿಗೆ ನಾಯಕರ ಆಡಳಿತ ಅಂತ್ಯಗೊಂಡು ಬಿಜಾಪುರದ ರಣದುಲ್ಲಾಖಾನನ ಆಳ್ವಿಕೆ ಆರಂಭವಾಯಿತು. ನಂತರ ಬಿದನೂರು ನಾಯಕರ ವಶವಾಯಿತು. ನಂತರ ಮರಾಠರು, ಹೈದರಾಲಿಯ ಆಳ್ವಿಕೆಗೆ ಒಳಗಾಯಿತು. ಒಟ್ಟಿನಲ್ಲಿ ಬಸವಾಪಟ್ಟಣವು ಕ್ರಿ.ಶ. ೧೬೨೬ರಲ್ಲಿ ರಣದುಲ್ಲಾಖಾನನಿಂದ, ಹೊಳೆನರಸೀಪುರದ ನಾಯಕರು ಕ್ರಿ.ಶ. ೧೫೮೦ರಿಂದ ೧೬೬೩ರವರೆಗೂ ಆಡಳಿತವನ್ನು ನಡೆಸಿದರು. ಇವರು ಬೇಲೂರಿನ ಬಯ್ಯಪನಾಯಕನ ವಂಶಸ್ಥರೆಂದು ಇವರ ಕಾಲದ ಶಾಸನಗಳು ಸ್ಪಷ್ಟವಾಗಿ ಸಾರುತ್ತವೆ. ಈ ಮನೆತನದ ಮೊದಲ ನಾಯಕ ಲಕ್ಷ್ಮಪ್ಪ ನಾಯಕ; ಇವನು ಕೃಷ್ಣಪ್ಪ ನಾಯಕನ ಮೊಮ್ಮಗ ಮತ್ತು ವೆಂಕಟಪ್ಪ ನಾಯಕನ ಮಗ. ಇವನ ನಂತರ ರಂಗಪ್ಪನಾಯಕ (೧೬೨೯–೧೬೫೪) ನರಸಿಂಹನಾಯಕ (೧೬೫೪–೫೫) ಇಮ್ಮಡಿ ರಂಗಪ್ಪ ನಾಯಕ (೧೬೫೫–೫೭) ಇಮ್ಮಡಿ ನರಸಿಂಹನಾಯಕರು ಕ್ರಮವಾಗಿ ಹೊಳೆನರಸೀಪುರವನ್ನು ಆಳಿದರು.[೩೨] ಇಮ್ಮಡಿ ನರಸಿಂಹನಾಯಕನ ಅವಧಿಯಲ್ಲಿ ಈ ಪಾಳೆಯಪಟ್ಟು ಅವನತಿಯಾಯಿತು. ೧೬೬೩ರಲ್ಲಿ ಮೈಸೂರಿನ ದೇವರಾಜ ಒಡೆಯರು ಇಮ್ಮಡಿ ನರಸಿಂಹನಾಯಕನನ್ನು ಸೋಲಿಸಲು ಪಣತೊಟ್ಟರು. ಕಾರಣ ಇಮ್ಮಡಿ ನರಸಿಂಹನಾಯಕನು ಮೈಸೂರು ಒಡೆಯರಿಗೆ ಆಜನ್ಮಸಿದ್ಧ ವೈರಿಯಾಗಿದ್ದನು. ಈ ಹಿಂದೆ ಕ್ರಿ.ಶ. ೧೬೨೯ರಲ್ಲಿ ಕೆಳದಿಯ ಶಿವಪ್ಪನಾಯಕನು ಮೈಸೂರು ಸಂಸ್ಥಾನದ ಮೇಲೆ ಯುದ್ಧ ಮಾಡಿದಾಗ ಇಮ್ಮಡಿ ನರಸಿಂಹ ನಾಯಕನು ಮೈಸೂರಿನ ವಿರುದ್ಧ ಶಿವಪ್ಪ ನಾಯಕನೊಂದಿಗೆ ಸಹಾಯ ಮಾಡಿದ್ದನು. ಇದೇ ನೆಪವನ್ನು ಮುಂದೊಡ್ಡಿಕೊಂಡು ಕ್ರಿ.ಶ. ೧೬೬೩ರಲ್ಲಿ ಮೈಸೂರು ಒಡೆಯರು ಹೊಳೆನರಸೀಪುರದ ಮೇಲೆ ಯುದ್ಧವನ್ನು ಸಾರಿದರು. ಹೊಳೆನರಸೀಪುರದಲ್ಲಿ ನಡೆದಂತಹ ಭೀಕರ ಯುದ್ಧದಲ್ಲಿ ಇಮ್ಮಡಿ ನರಸಿಂಹನಾಯಕನು ಸೋತನು. ಅವನನ್ನು ಬಂಧಿಸಿ ಸೆರೆಮನೆಯಲ್ಲಿಡಲಾಯಿತು. ಹೊಳೆನರಸೀಪುರವನ್ನು ಮೈಸೂರು ಸಂಸ್ಥಾನದಲ್ಲಿ ಸೇರ್ಪಡೆ ಮಾಡಿಕೊಳ್ಳಲಾಯಿತು. ಕ್ರಿ.ಶ. ೧೬೬೩ ನಂತರ ಹೊಳೆನರಸೀಪುರದ ನಾಯಕರು ಹೇಳ ಹೆಸರಿಲ್ಲದಂತೆ ನಿರ್ನಾಮವಾದರು.

ಕೊಡಗಿನ ಹಾಲೇರಿ ಅರಸರು ಕ್ರಿ.ಶ. ೧೬೩೩ರಿಂದ ೧೮೩೪ರವರೆಗೆ ಸುಮಾರು ಇನ್ನೂರು ವರ್ಷಗಳ ಕಾಲ ಕೊಡಗಿನ ಹಾಲೇರಿಯಿಂದಲೂ, ಅನಂತರ ಮಡಿಕೇರಿಯಿಂದಲೂ ರಾಜ್ಯವನ್ನು ಆಳಿದರು. ಇವರ ಕಾಲದ ಆನೇಕ ಪತ್ರಗಳು ಸಮಕಾಲೀನ ವಿದೇಶಿ ಬರಹಗಾರರ ವೃತ್ತಾಂತಗಳು ಈ ಅರಸರ ರಾಜಕೀಯ ಇತಿಹಾಸವನ್ನು, ಅವನತಿಯ ಪಥವನ್ನು ತಿಳಿಸುತ್ತವೆ. ಕೊಡಗಿನ ಅರಸರು ತಾವು ಚಂದ್ರವಂಶ, ಭಾರದ್ವಾಜಗೋತ್ರ, ಆಸ್ವಲಾಯನ ಸೂತ್ರ ಋಕ್‌ಶಾಖೆಗೆ ಸೇರಿದವರೆಂದೂ ವೀರಶೈವ ಮತಾನುಯಾಯಿಗಳೆಂದು ಹೇಳಿಕೊಳ್ಳುತ್ತಾರೆ.[೩೩] ಹಾಲೇರಿ ಅರಸು ಮನೆತನದ ಹದಿಮೂರು ಮಂದಿ ಕೊಡಗನ್ನು ಆಳಿದರು ಮತ್ತು ಅವರಲ್ಲಿ ಚಿಕ್ಕಪ್ರಾಯದ ಒಬ್ಬ ಮಹಿಳೆಯೂ ಇದ್ದಳೆಂದು

ಡಿ.ಎನ್.ಕೃಷ್ಣಯ್ಯನವನು ಬರೆಯುತ್ತಾರೆ. ಆದರೆ ೧೭೭೪-೭೫ರಲ್ಲಿ ಕೊಡಗನ್ನು ಒಂದು ವರ್ಷ ಆಳಿದ ಅಪ್ಪಾಜಿರಾಜನ ಆಳ್ವಿಕೆಯನ್ನು ಗಣನೆಗೆ ತೆಗೆದುಕೊಂಡರೆ ಕೊಡಗನ್ನು ಆಳಿದವರ ಸಂಖ್ಯೆ ಹದಿನಾಲ್ಕಾಗುತ್ತದೆ.[೩೪] ಒಟ್ಟು ೧೪ ಮಂದಿ ಕೊಡಗನ್ನು ಆಳಿರುವುದು ಕಂಡು ಬರುತ್ತದೆ.

ಮೈಸೂರಿನ ಸರ್ವಾಧಿಕಾರಿಯಾದ ಹೈದರಾಲಿಯು ಕೊಡಗಿನ ರಾಜಕೀಯ ವಲಯದಲ್ಲಿ ಹಸ್ತಕ್ಷೇಪ ಮಾಡಿದ್ದು ಕ್ರಿ.ಶ. ೧೭೭೫ರಲ್ಲಿ. ೧೭೬೬ರಿಂದ ೧೭೭೦ರವರೆಗೂ ಕೊಡಗನ್ನು ಹಾಲೇರಿ ಮನೆತನದ ಅಪ್ಪಾಜಿ ರಾಜನ ಮಗ ಮುದ್ದುರಾಜ ಮತ್ತು ಹೊರಮಲೆ ನಂದರಾಜನ ಮಗ ಮುದ್ದಯ್ಯ ಜಂಟಿಯಾಗಿ ಆಳುತ್ತಿದ್ದರು. ೧೭೭೦ರಲ್ಲಿ ಈ ನಾಯಕರು ಮರಣ ಹೊಂದಿದ ನಂತರ ಕೊಡಗು ಸಿಂಹಾಸನದ ಅಧಿಪತ್ಯಕ್ಕಾಗಿ ಅಂತಃಕಲಹಗಳು ಶುರುವಾದವು. ಹಾಲೇರಿಯ ಲಿಂಗರಾಜನಿಗೆ ಮುದ್ದುರಾಜನ ಮಗನನ್ನು ಅಧಿಕಾರಕ್ಕೆ ತರುವ ಹಂಬಲವಿದ್ದರೆ, ಹೊರಮಲೆ ಅರಸ ಮುದ್ದಯ್ಯನ ಮಗ ಮಲ್ಲಯ್ಯನು ತನ್ನ ಮಗ ದೇವರಾಜಪ್ಪನನ್ನು ಕೊಡಗಿನ ಅರಸನಾಗಿ ಮಾಡಬೇಕೆಂಬ ಆಲೋಚನೆಯನ್ನು ಹೊಂದಿದ್ದನು. ಕೊನೆಗೆ ದೇವರಾಜಪ್ಪನು ಕೊಡಗಿನ ರಾಜನಾದನು. ಲಿಂಗರಾಜನು ತನ್ನ ಮಗ ವೀರರಾಜನೊಂದಿಗೆ ಪಲಾಯನ ಮಾಡಿದನು. ಹಾಗೂ ಕೊಡಗು ಸಿಂಹಾಸನ ಪಡೆಯಲು ಹೈದರಾಲಿಯ ಸಹಾಯವನ್ನು ಕೇಳಿದನು. ಹೈದರಾಲಿಯು ಲಿಂಗರಾಜನಿಗೆ ಶ್ರೀರಂಗಪಟ್ಟಣದಲ್ಲಿ ರಾಜಾಶ್ರಯ ನೀಡಿದನು. ಹಾಗೂ ಕೊಡಗು ಸಿಂಹಾಸನವನ್ನು ಮರಳಿ ಕೊಡಿಸುವ ಭರವಸೆಯನ್ನು ನೀಡಿದನು. ಅದರಂತೆ ಹೈದರಾಲಿ ಲಿಂಗರಾಜನ ಸಂಯುಕ್ತ ಸೇನೆ ಕ್ರಿ.ಶ. ೧೭೭೩ರಲ್ಲಿ ಕೊಡಗನ್ನು ಮುತ್ತಿತು. ಈ ಮುತ್ತಿಗೆಯಲ್ಲಿ ಜಯ ಸಿಗದೆ ಹೈದರಾಲಿಯ ಸೈನ್ಯ ಓಡಿ ಹೋಯಿತು. ಈ ಸಂದರ್ಭದಲ್ಲಿ ಲಿಂಗರಾಜನು ಕಿಗ್ಗಟ್ಟುನಾಡಿನ ಕೊಡವರೊಂದಿಗೆ ಗುಪ್ತ ಒಪ್ಪಂದವನ್ನು ಮಾಡಿಕೊಂಡನು. ಹೀಗಾಗಿ ಎರಡನೆ ಬಾರಿ ಹೈದರಾಲಿಯ ಸೇನೆಯು ಕೊಡಗನ್ನು ಮುತ್ತಿದಾಗ ಯಾವ ಪ್ರತಿರೋಧವಿಲ್ಲದೆ ಕೊಡಗು ಹೈದರಾಲಿಯ ವಶವಾಯಿತು. ದೇವರಾಜಪ್ಪನನ್ನು ಹಾಗೂ ಆತನ ಕುಟುಂಬದವನ್ನು ಹೈದರಾಲಿಯು ಕ್ರಿ.ಶ. ೧೭೭೪ರಲ್ಲಿ ಕೊಂದು ಹಾಕಿದನು. ಹೀಗೆ ಕೊಡಗು ಲಿಂಗರಾಜನಿಗೆ ವಶವಾಯಿತು. ಲಿಂಗರಾಜನು ಹೈದರಾಲಿಗೆ ಯುದ್ಧ ವೆಚ್ಚವಾಗಿ ಪ್ರತಿವರ್ಷ ೨೪,೦೦೦ ರೂಪಾಯಿಗಳನ್ನು ಕೊಡುವುದಾಗಿ ಒಪ್ಪಿಕೊಂಡನು. ಕ್ರಿ.ಶ. ೧೭೮೦ರಲ್ಲಿ ಲಿಂಗರಾಜನು ಮರಣ ಹೊಂದಿದನು. ಆಗ ಅವನಿಗೆ ೧೬ ವರ್ಷದ ವೀರ ರಾಜೇಂದ್ರ ಹಾಗೂ ಲಿಂಗರಾಜ ಎಂಬ ಮಕ್ಕಳಿದ್ದರು. ಈಗ ಹೈದರಾಲಿಯು ಕೊಡಗನ್ನು ಕಬಳಿಸಲು ಸುಲಭವಾಯಿತು. ಈ ಇಬ್ಬರು ಮಕ್ಕಳನ್ನು ಗೊರೂರಿಗೆ ಸಾಗಿಸಿ ಸುಬ್ಬಸಯ್ಯ ಎಂಬ ಬ್ರಾಹ್ಮಣನನ್ನು ಕಮೀಷನರ್ ಆಗಿ ನೇಮಿಸಿ ಮಡಿಕೇರಿ ಕೋಟೆಯನ್ನು ತನ್ನ ವಶಕ್ಕೆ ತೆಗೆದುಕೊಂಡು ಕೊಡಗರ ದಂಗೆಯನ್ನು ಹತ್ತಿಕ್ಕಿದ. ೧೭೮೨ರಲ್ಲಿ ಹೈದರಾಲಿಯು ದ್ವಿತೀಯ ಆಂಗ್ಲೋ ಮೈಸೂರು ಯುದ್ಧದ ಸಮಯದಲ್ಲಿ ರೋಗಪೀಡಿತನಾಗಿ ಮರಣ ಹೊಂದಿದ. ಆಗ ಕೊಡವರು ಮಡಿಕೇರಿಯನ್ನು ವಶಪಡಿಸಿಕೊಂಡರು. ಪನಃ ಮಡಿಕೇರಿಯು ೧೭೮೪ರಲ್ಲಿ ಟಿಪ್ಪುವಿನ ವಶವಾಯಿತು. ಟಿಪ್ಪು ಸುಲ್ತಾನನು ಕೊಡಗಿನ

ರಾಜಕುಮಾರರನ್ನು ರಾಜಮನೆತನದವರನ್ನು ಪಿರಿಯಾಪಟ್ಟಣದಲ್ಲಿಟ್ಟು ವರ್ಷಾಸನವಾಗಿ ಮುನ್ನೂರು ಪಗೋಡಗಳನ್ನು ನೀಡಿದನು.

ದ್ವಿತೀಯ ಆಂಗ್ಲೋ ಮೈಸೂರು ಯುದ್ಧದ ನಂತರ ಟಿಪ್ಪು ಸುಲ್ತಾನನು ಕೊಡಗಿನಲ್ಲಿ ಅತ್ಯಂತ ಕಠಿಣಕರವಾದ ಕಾನೂನುಗಳನ್ನು ಜಾರಿಗೆ ತಂದನು. ಕೊಡಗಿನ ಜನರನ್ನು ಸಾಮೂಹಿಕವಾಗಿ ಮುಸ್ಲಿಂ ಧರ್ಮಕ್ಕೆ ಮತಾಂತರ ಮಾಡಿದನು. ಈ ಸಂದರ್ಭದಲ್ಲಿಯೇ ವೀರರಾಜನು ತನ್ನ ಕುಟುಂಬ ಸಮೇತ ಪಿರಿಯಾಪಟ್ಟಣದಿಂದ ಕೊಡಗಿಗೆ ಪಲಾಯನ ಮಾಡಿದನು. ಟಿಪ್ಪು ವೀರರಾಜನನ್ನು ಬಂಧಿಸಲು ಯಶಸ್ವಿಯಾಗಲಿಲ್ಲ. ಕ್ರಿ.ಶ. ೧೭೮೮ ರಿಂದ ೧೭೯೦ರ ಅವಧಿಯಲ್ಲಿ ವೀರರಾಜನು ರಾಜಕೀಯವಾಗಿ ಪ್ರಬಲಗೊಂಡನು. ಈತ ಕುಶಾಲನಗರ ಬೆಪ್ಪುನಾಡಿನ ಕೋಟೆಗಳನ್ನು ಗೆದ್ದುಕೊಂಡು ಅಧಿಕಾರ ಸ್ಥಾಪಿದನು. ೧೭೯೧ರ ವೇಳಗೆ ಮಡಿಕೇರಿಯನ್ನು ಹೊರತುಪಡಿಸಿ ಕೊಡಗು ಪ್ರವೇಶದ ಬಹುಭಾಗ ವೀರರಾಜನ ಆಡಳಿತಕ್ಕೆ ಒಳಪಟ್ಟಿತು. ಈತ ಮುಂದೆ ಟಿಪ್ಪುವಿಗೆ ವಿರುದ್ಧವಾಗಿ ಬ್ರಿಟಿಷರ ಅಧಿಕಾರ ರಾಬರ್ಟ್ ಟೇಲರನೊಂದಿಗೆ ಒಪ್ಪಂದವನ್ನು ಮಾಡಿಕೊಂಡನು. ೧೭೯೦ ಅಕ್ಟೋಬರ್ ೧೫ ರಂದು ಈ ಒಪ್ಪಂದ ವೀರರಾಜ ಮತ್ತು ಬ್ರಿಟಿಷರ ನಡುವೆ ನಡೆಯಿತು. ಈ ವೇಳೆಗಾಗಲೇ ಮೂರನೇ ಆಂಗ್ಲೋ–ಮೈಸೂರು ಯುದ್ಧ ಶುರುವಾಗಿತ್ತು. ವೀರರಾಜನು ಬ್ರಿಟಿಷರೊಂದಿಗೆ ಕೈಜೋಡಿಸಿರುವ ವಿಷಯ ತಿಳಿದ ಟಿಪ್ಪು ಕ್ರಿ.ಶ. ೧೭೯೨ರಲ್ಲಿ ವೀರರಾಜನಿಗೆ ಒಂದು ನಿಯೋಗ ಕಳುಹಿಸಿ ಮೈತ್ರಿ ಮಾಡಿಕೊಳ್ಳಲು ಮುಂದಾದ ವೀರರಾಜ ಟಿಪ್ಪುವಿನ ಮನವಿಯನ್ನು ತಿರಸ್ಕರಿಸಿದನು. ೩ನೇ ಆಂಗ್ಲೋ–ಮೈಸೂರು ಯುದ್ಧ ಮುಕ್ತಾಯವಾಗಿ ಟಿಪ್ಪು ಬ್ರಿಟಿಷ್ ಗವರ್ನರ್ ಜನರಲ್ ಲಾರ್ಡ್ ಕಾರನ್‌ವಾಲೀಸ್‌ನೊಂದಿಗೆ ಶಾಂತಿ ಒಪ್ಪಂದವನ್ನು ಮಾಡಿಕೊಂಡು ೩ನೇ ಆಂಗ್ಲೋ ಮೈಸೂರು ಯುದ್ಧವನ್ನು ಅಂತಿಮಗೊಳಿಸಿದ. ಈ ಶಾಂತಿ ಸಂಧಾನದ ಸಮಯದಲ್ಲಿ ಕಾರ್ನ್‌ವಾಲಿಸನು ಟಿಪ್ಪು ಸುಲ್ತಾನನು ಕೊಡಗಿನ ರಾಜನೊಂದಿಗೆ ಯುದ್ಧ ಮಾಡದೇ ಸ್ನೇಹದಿಂದರಬೇಕೆಂದು ತಾಕೀತು ಮಾಡಿದನು. ಟಿಪ್ಪು ಇದಕ್ಕೆ ಸಮ್ಮತಿಸದಿದ್ದಾಗ ಬ್ರಿಟಿಷ್ ಸೇನೆಯು ಪುನಃ ಟಿಪ್ಪು ಸುಲ್ತಾನನ ಕೋಟೆಗೆ ಮುತ್ತಿಗೆಯನ್ನು ಹಾಕಿತು. ಹೆದರಿದ ಟಿಪ್ಪು ಮತ್ತೊಮ್ಮೆ ಬ್ರಿಟಿಷರೊಂದಿಗೆ ಶಾಂತಿ ಸಂಧಾನ ಮಾಡಿಕೊಂಡನು. ಈ ಶಾಂತಿ ಒಪ್ಪಂದ ಬಹುದಿನ ಮುಂದುವರಿಯದೇ ೪ನೇ ಆಂಗ್ಲೋ–ಮೈಸೂರು ಯುದ್ಧ ನಡೆದು ಟಿಪ್ಪು ಕ್ರಿ.ಶ. ೧೭೯೯ರಲ್ಲಿ ಮರಣ ಹೊಂದಿದನು.

ಟಿಪ್ಪುವಿನ ಮರಣದ ನಂತರ ಬ್ರಿಟಿಷರು ವೀರರಾಜನನ್ನು ಕೊಡಗಿನ ರಾಜನಾಗಿ ಅಂಗೀಕರಿಸಿ ಗೌರವಿಸಿದರು. ವೀರರಾಜನ ಮರಣದ ನಂತರ ಕ್ರಿ.ಶ. ೧೮೦೯ರಲ್ಲಿ ಆತನ ೧೦ ವರ್ಷದ ಮಗಳು ದೇವಮ್ಮಾಜಿ ಕೊಡಗಿನ ಸಿಂಹಾಸನವನ್ನು ಏರಿದಳು. ವೀರರಾಜನ ತಮ್ಮನಾದ ಲಿಂಗರಾಜನು ದೇವಮ್ಮಾಜಿಯ ರಾಜಪ್ರತಿನಿಧಿಯಾಗಿ ಕೆಲವು ಕಾಲ ಆಡಳಿತ ನಡೆಸಿದನು. ೧೮೧೧ರ ವೇಳೆಗೆ ಬ್ರಿಟಿಷರ ಬೆಂಬಲದಿಂದ ಲಿಂಗರಾಜನು ಕೊಡಗಿನ ಸಿಂಹಾಸನವನ್ನು ಆಕ್ರಮಿಸಿಕೊಂಡನು.

ಲಿಂಗರಾಜನ ಅಧಿಕಾರಕ್ಕೆ ಇತಿಶ್ರೀ ಹಾಡಲು ನಿರ್ಧರಿಸಿದ ಬ್ರಿಟಿಷರು ೧೮೩೪ ಏಪ್ರಿಲ್ ೪ ರಂದು ಕೊಡಗಿಗೆ ಮುತ್ತಿಗೆ ಹಾಕಿದರು. ಬ್ರಿಗೇಡಿಯನ್ ಲಿಂಡ್ಸ್ ಹಾಗೂ ಅವನ ಸಹಾಯಕ ಕರ್ನಲ್ ಪ್ರೇಸರನ ನೇತೃತ್ವದ ಬ್ರಿಟಿಷ್ ಸೈನ್ಯಕ್ಕೆ ಹೆಚ್ಚು ಪ್ರತಿಭಟನೆ ಎದುರಾಗದೆ ಕೊಡಗು ವಶವಾಗುತ್ತದೆ. ಏಪ್ರಿಲ್ ೫ ರಂದು ರಾಜನ ದಿವಾನ್ ಅಪ್ಪಾರಂಡ ಬೋಪು ೪೦೦ ಜನ ಕೊಡವ ಸೈನಿಕರೊಂದಿಗೆ ಬ್ರಿಟಿಷರಿಗೆ ಶರಣಾಗತನಾದನು.[೩೫] ಹಾಗೆಯೇ ಬ್ರಿಟಿಷ್ ಸೈನವು ಮಡಿಕೇರಿಗೆ ಬಂದು ಕೊಡಗಿನ ಚಿಕ್ಕವೀರರಾಜನನ್ನು ಆತನ ಪತ್ನಿಯರನ್ನು ಕಾಶಿಗೆ ಗಡಿಪಾರು ಮಾಡಿತು. ಕರ್ನಲ್ ಪ್ರೇಸರ್ ಕೊಡಗಿನ ಮೊದಲ ಬ್ರಿಟಿಷ್ ಆಡಳಿತಾಧಿಕಾರಿಯಾಗಿ ನೇಮಕಗೊಂಡನು. ಹೀಗೆ ಕ್ರಿ.ಶ. ೧೮೩೪ರಲ್ಲಿ ಕೊಡಗು ಬ್ರಿಟಿಷರ ಆಡಳಿತದಲ್ಲಿ ಸೇರ್ಪಡೆಗೊಂಡಿತು.

ಒಟ್ಟಿನಲ್ಲಿ ಕೊಡಗಿನ ಜನ ಸ್ವತಂತ್ರ ಬಯಸಿ ಹೈದರ-ಟಿಪ್ಪುವಿನ ವಿರುದ್ಧ ಹಲವಾರು ಬಾರಿ ದಂಗೆ ಎದ್ದು ಹಾಲೇರಿ ಅರಸರ ಆಳ್ವಿಕೆಯ ಆಸರೆಯಲ್ಲಿ ಬದುಕಬೇಕೆಂದು ನಿರ್ಧರಿಸಿದರು.[೩೬] ಆದರೆ ಅವರ ದಂಗೆಯನ್ನು ಪ್ರತಿಭಟನೆಯನ್ನು ಹತ್ತಿಕ್ಕುವಲ್ಲಿ ಬ್ರಿಟಿಷರು ಯಶಸ್ವಿಯಾದರು. ಟಿಪ್ಪುವಿನ ಮರಣದವರೆಗೂ ಕೊಡಗು ಮತ್ತು ಬ್ರಿಟಿಷರ ನಡುವೆ ಮೈತ್ರಿಯುತ ಸಂಬಂಧಗಳಿದ್ದು ವೀರರಾಜನ ಮರಣದವರೆಗೂ ಈ ಸಂಬಂಧಗಳು ಹಾಗೆಯೇ ಮುಂದುವರಿದವರು. ನಂತರ ವೀರರಾಜನ ತಮ್ಮ ಲಿಂಗರಾಜನು ಕೊಡಗಿನ ಸಿಂಹಾಸನವೇರಲು ಬ್ರಿಟಿಷರ ಬೆಂಬಲವೂ ಕಾರಣವಾಯಿತು. ಆದರೆ ಬ್ರಿಟಿಷರು ಅಧಿಕಾರ ದಾಹದಿಂದ ಲಿಂಗರಾಜನ ಮೇಲೆ ದುರಾಡಳಿತದ ನೆಪವನ್ನು ಮುಂದಿಟ್ಟುಕೊಂಡು ದಾಳಿ ಮಾಡಿ ಕೊಡಗನ್ನು ಆಕ್ರಮಿಸಿಕೊಂಡರು.

ವಿಜಯನಗರ ಕಾಲದಲ್ಲಿ ಅಮರನಾಯಕರಾಗಿ ಅಧಿಕಾರಕ್ಕೆ ಬಂದ ತರೀಕೆರೆ ನಾಯಕರು ವಿಜಯನಗರದ ಪತನದ ನಂತರ ಒಂದು ಶತಮಾನದವರೆಗೆ ಸ್ವತಂತ್ರರಾಗಿ ಆಡಳಿತವನ್ನು ನಡೆಸಿದರು. ಈ ಪಾಳೆಯಗಾರರು ಮೂಲತಃ ಬಸವಾಪಟ್ಟಣದ ಪಾಳೆಯಗಾರರಾಗಿದ್ದಾರೆ. ಕ್ರಿ.ಶ. ೧೬೭೬ರಲ್ಲಿ ಬಿಜಾಪುರದ ಸೇನೆಯು ರಣದುಲ್ಲಾಖಾನನ ನೇತೃತ್ವದಲ್ಲಿ ಬಸವಾಪಟ್ಟಣಕ್ಕೆ ಮುತ್ತಿಗೆ ಹಾಕಿತು. ಸಂತೆಬೆನ್ನೂರು ಪ್ರದೇಶವನ್ನು ವಶಪಡಿಸಿಕೊಂಡವು. ಆಗ ಸಂತೆಬೆನ್ನೂರು ನಾಯಕರು ತರೀಕೆರೆಗೆ ಮರಳಿ ಬಂದರು. ತಮ್ಮ ಅಧಿಕಾರವನ್ನು ಮುಂದುವರಿಸಿ ತರೀಕೆರೆಯ ಪಾಳೆಯಗಾರೆಂದೇ ಪ್ರಖ್ಯಾತಿಯನ್ನು ಪಡೆದುಕೊಂಡರು.

ತರೀಕೆರೆ ಸಂಸ್ಥಾನದ ಮೇಲೆ ಹೊರಗಿನ ಶಕ್ತಿಗಳ ದಾಳಿ ಆರಂಭವಾಗಿದ್ದು ಕ್ರಿ.ಶ. ೧೭೭೭ರಲ್ಲಿ. ಈ ವೇಳೆಗಾಗಲೇ ತರೀಕೆರೆ ಸಂಸ್ಥಾನವು ತನ್ನ ಎಲ್ಲ ಭೂಭಾಗಗಳನ್ನು ಕಳೆದುಕೊಂಡಿತ್ತು. ತರೀಕೆರೆ ಮತ್ತು ಯಗಟಿಗಳು ಈ ಪಾಳೆಯ ಪಟ್ಟಿನ ವ್ಯಾಪ್ತಿಯಲ್ಲಿದ್ದವು. ನಿಜಾಮರು, ಮರಾಠರು, ಹೈದರಾಲಿ ಈ ಪ್ರದೇಶಗಳ ಮೇಲೆ ಪದೇ ಪದೇ ದಾಳಿಗಳನ್ನು ಮಾಡುತ್ತ ಹಣವನ್ನು ಲೂಟಿ ಮಾಡತೊಡಗಿದರು. ಟಿಪ್ಪು ಸುಲ್ತಾನನು ಕ್ರಿ.ಶ. ೧೭೮೩ರಲ್ಲಿ ೫,೦೦೦ ವಾರ್ಷಿಕ ಕಪ್ಪವನ್ನು ನಿಗದಿಗೊಳಿಸಿ ವರ್ಷಕ್ಕೆ ೧೦೮೦ ವರಹಗಳನ್ನು ವೇತನವಾಗಿ ನಿಗದಿಗೊಳಿಸಿದನು. ಟಿಪ್ಪು ಸುಲ್ತಾನನು ತರೀಕೆರೆಯ

ಪಾಳೆಯಗಾರ ಸರ್ಜಾ ಹನುಮಪ್ಪ ನಾಯಕನನ್ನು ಹಲವಾರು ಯುದ್ಧಗಳಲ್ಲಿ ಬಳಸಿಕೊಂಡನು. ಹನುಮಪ್ಪ ನಾಯಕನ ಮರಣದ ನಂತರ ಅವನ ಮಗ ಕೃಷ್ಣಪ್ಪನಾಯಕನಿಗೂ ವೇತನವನ್ನು ಮುಂದುವರಿಸಿದನು.

ಕೃಷ್ಣಪ್ಪನಾಯಕನು ಟಿಪ್ಪುವಿನಲ್ಲಿ ವಿಶ್ವಾಸ ಹೊಂದಿರಲಿಲ್ಲ. ಈತ ಮರಾಠರ ಧೊಂಡೋಜಿಯ ಜೊತೆ ಟಿಪ್ಪುವಿನ ವಿರುದ್ಧ ಕೈ ಜೋಡಿಸಿದನು. ವಿಷಯ ತಿಳಿದ ದಿವಾನ್ ಪೂರ್ಣಯ್ಯ ಕೃಷ್ಣಪ್ಪನಾಯಕನನ್ನು ಕ್ರಿ.ಶ. ೧೭೯೯ರಲ್ಲಿ ಬಂಧಿಸಿ ಶ್ರೀರಂಗಪಟ್ಟಣದ ಸೆರೆಮನೆಯಲ್ಲಿಟ್ಟನು. ನಂತರ ೧೮೦೯ರಲ್ಲಿ ಬಿಡುಗಡೆ ಮಾಡಿದನು. ದಿವಾನ್ ಪೂರ್ಣಯ್ಯ ಪುನಃ ಕೃಷ್ಣಪ್ಪನಾಯಕನಿಗೆ ನಿವೃತ್ತಿ ವೇತನವನ್ನು ಮಂಜೂರು ಮಾಡಿದನು.

ಕೃಷ್ಣಪ್ಪನಾಯಕನ ಮನೆತನಕ್ಕೆ ಸೇರಿದ ಸರ್ಜಪ್ಪ ನಾಯಕ, ನಂಜಪ್ಪ ನಾಯಕ ಮತ್ತು ಹನುಮಪ್ಪ ನಾಯಕನು ಬ್ರಿಟಿಷರ ವಿರುದ್ಧ ದಂಗೆ ಏಳಲು ನಿರ್ಧರಿಸಿದರು. ಇವರು ದಂಗೆ ಏಳುವ ಮುನ್ಸೂಚನೆಯನ್ನು ಅರಿತು ಈಸ್ಟ್ ಇಂಡಿಯಾ ಕಂಪನಿಯು ೧೮೩೧ ಅಕ್ಟೋಬರ್ ೨೮ ರಂದು ಬಂದು ಆಯೋಗ ರಚಿಸಿ ಈ ಮೂಲಕ ಪಾಳೆಯಗಾರರ ದಂಗೆಯನ್ನು ಅಡಗಿಸಲು ನಿರ್ಧರಿಸಿತು. ಹಾಗೂ ಪಾಳೆಯಗಾರರಿಗೆ ಎಚ್ಚರಿಕೆಯ ಘೋಷಣೆಯನ್ನು ಹೊರಡಿಸಿತು. ಪಾಳೆಯಗಾರರು ಈ ಘೋಷಣೆಯನ್ನು ನಿರ್ಲಕ್ಷಿಸಿ ಊರುಗಳನ್ನು ಕೊಳ್ಳೆಹೊಡೆಯತೊಡಗಿದರು. ಆಗ ಬ್ರಿಟಿಷ್ ಸರ್ಕಾರ ಕಠಿಣವಾದ ಕ್ರಮಗಳನ್ನು ಕೈಗೊಂಡು ಪರಿಸ್ಥಿತಿಯನ್ನು ಹತೋಟಿಗೆ ತರಲು ಮತ್ತೊಂದು ಆಯೋಗ ರಚನೆ ಮಾಡಿತು. ಪಾಳೆಯಗಾರರಿಗೆ ಕ್ಷಮದಾನ ನೀಡುವ ಭರವಸೆ ನೀಡಿತು.

ಕೊನೆಗೆ ಸರ್ಜಪ್ಪ ನಾಯಕ ಬ್ರಿಟಿಷ್ ಕಮೀಷನರ್ ಕರ್ನಲ್ ಬ್ರಿಗ್ಸ್‌ಗೆ ಶರಣಾಗತನಾದನು. ಬ್ರಿಟಿಷರು ಸರ್ಜಪ್ಪ ನಾಯಕನನ್ನು ಕ್ಷಮಿಸಿ ಅವನಿಗೆ ೩೦ ವರಹ ಮಾಸಿಕ ವೇತನವನ್ನು ನಿಗದಿಗೊಳಿಸಿದರು. ಅವನ ಅನುಯಾಯಿಗಳಿಗೂ ಇದೇ ಬಗೆಯ ರಕ್ಷಣೆಯನ್ನು ನೀಡಿದರು. ಆದರೆ ಸ್ವಾಭಿಮಾನಿಯಾದ ಸರ್ಜಪ್ಪ ನಾಯಕನಿಗೆ ಬ್ರಿಟಿಷರ ಅಡಿಯಾಳಾಗಿ ಬದುಕಲು ಸಾಧ್ಯವಾಗಲಿಲ್ಲ. ಈತ ಪುನಃ ೧೮೩೪ರಲ್ಲಿ ಬ್ರಿಟಿಷರ ವಿರುದ್ಧ ದಂಗೆಯನ್ನು ನಡೆಸಿದನು. ಆದರೆ ಬ್ರಿಟಿಷರು ಸರ್ಜಪ್ಪ ನಾಯಕನನ್ನು ಬಂಧಿಸಿ ೧೮೩೪ರಲ್ಲಿ ಗಲ್ಲಿಗೇರಿಸಿದರು.

ವಿಜಯನಗರದ ಸಾಮಂತರಾಗಿ ಅಧಿಕಾರಕ್ಕೆ ಬಂದವರಲ್ಲಿ ಮಲೆನಾಡು ಪ್ರದೇಶದ ಬೆಳಗುತ್ತಿ ಅರಸರು ಪ್ರಮುಖರಾಗಿದ್ದಾರೆ. ಸಂಗಮ ವಂಶದ ಬುಕ್ಕರಾಯನ ಅನುಮತಿಯೊಂದಿಗೆ ಚೆಲುವರಂಗಪ್ಪನು ಬೆಳಗುತ್ತಿಯಲ್ಲಿ ಕ್ರಿ.ಶ. ೧೩೫೮ರಲ್ಲಿ ಸಂಸ್ಥಾನವನ್ನು ಸ್ಥಾಪಿಸಿದನು. ಚೆಲುವ ರಂಗಪ್ಪನನ್ನು ಬುಕ್ಕರಾಯನ ಮೊಮ್ಮಗ ಹಾಗೂ ದೇವರಾಯನ ಮಗನೆಂದು ಹೇಳಲಾಗಿದೆ.[೩೮] ಚೆಲುವರಂಗಪ್ಪನು ದಕ್ಷ ಆಡಳಿತಗಾರನಾಗಿದ್ದು ಹೊನ್ನಾಳಿ, ಚಂದ್ರಗುತ್ತಿ, ಕವಲೆದುರ್ಗ ಮತ್ತು ನಡುಗಣಿಯಲ್ಲಿ ಕೋಟೆಗಳನ್ನು ನಿರ್ಮಿಸಿದ. ಇವನ ನಂತರ ಮಾರಭೂಪ, ಸುರಭೂಪ, ದೇವರಾಯ ಮತ್ತು ಅಭ್ರಮಾದವರು ಬೆಳಗುತ್ತಿಯನ್ನು ಆಳಿದರು. ಅಭ್ರಮಾದವನ ಮಗ ಬೆವುಲೆ ವೆಂಕಾಟಾದ್ರಿ ನಂತರ ರಾಮಕೋಟೆರಾಯರು

ಬೆಳಗುತ್ತಿಯನ್ನು ಪರಿಪಾಲಿಸಿದರು. ಇವನ ನಂತರ ದಾನಪ್ಪ ಬೆಳಗುತ್ತಿಯನ್ನು ಆಳಿದನು. ಮುಂದೆ ಈ ದಾನಪ್ಪನ ಮಗನಾದ ವೆಂಕಟರಾಯನೇ ಆನೆಗೊಂದಿಯಲ್ಲಿ ರಾಜನಾಗಿ ಅಧಿಕಾರಕ್ಕೆ ಬಂದನು. ದಾನಪ್ಪನ ಆಡಳಿತಾವಧಿಯಲ್ಲಿ ತರೀಕೆರೆಯ ಪಾಳೆಯಗಾರರು ಮತ್ತು ಸಂತೆಬೆನ್ನೂರು ಕೆಂಗ ಹನುಮಪ್ಪರು ದಂಗೆ ಎದ್ದು ಸ್ವತಂತ್ರರಾದರು. ಈ ದಂಗೆಯನ್ನು ಅಡಗಿಸಲು ಬಂಕಾಪುರದ ರಂಗರಾಯನ ನೆರವನ್ನು ಕೇಳಿದ. ಈತ ಕೆಂಗ ಹನುಮಪ್ಪ ನಾಯಕನಿಂದ ಹಣವನ್ನು ಪಡೆದುಕೊಂಡಿದ್ದರಿಂದ ದಂಗೆ ಶಮನಗೊಳಿಸಲು ಯಾವ ನೆರವನ್ನು ನೀಡಲಿಲ್ಲ.

ಕೊನೆಗೆ ದಾನಪ್ಪನು ಬಿಜಾಪುರ ಸುಲ್ತಾನರ ನೆರವನ್ನು ಯೋಚಿಸಿದನು. ಬಿಜಾಪುರದ ಸುಲ್ತಾನ ಪಡೆಯ ಸೇನೆಯು ಬಿಲಾಖಾನ ಎಂಬ ಸೇನಾಧಿಪತಿಯ ನೇತೃತ್ವದಲ್ಲಿ ಬಂದು ದಾನಪ್ಪನಿಗೆ ಸಹಾಯ ಮಾಡದೇ ಬೆಳಗುತ್ತಿಯನ್ನು ಆಕ್ರಮಿಸಿಕೊಂಡಿತು. ಕೆಲವು ವರ್ಷಗಳ ಕಾಲ ಬೆಳಗುತ್ತಿಯು ಬಿಜಾಪುರ ಸುಲ್ತಾನನ ವಶದಲ್ಲಿತ್ತು. ನಂತರ ದಾನಪ್ಪನ ಮಗನಾದ ಎರಡನೆಯ ವೆಂಕಟಾದ್ರಿಯು ಬೆಳಗುತ್ತಿಯಿಂದ ಬಿಜಾಪುರದ ಸೇನೆಯನ್ನು ಓಡಿಸಿ ಬೆಳಗುತ್ತಿಯನ್ನು ಮರಳಿ ಪಡೆಯುವಲ್ಲಿ ಯಶಸ್ವಿಯಾದನು. ಈ ವೇಳೆಗಾಗಲೇ ಮಲೆನಾಡಿನಲ್ಲಿ ಪ್ರಬಲ ನಾಯಕರಾಗಿದ್ದ ಕೆಳದಿಯವರು ಅನೇಕ ಪಾಳೆಯಪಟ್ಟುಗಳನ್ನು ಗೆಲ್ಲುತ್ತ ಬಂದರು. ರಾಘವಪ್ಪನು ಬೆಳಗುತ್ತಿಯನ್ನು ಪರಿಪಾಲಿಸುತ್ತಿದ್ದಾಗ ಕೆಳದಿಯ ಶಿವಪ್ಪ ನಾಯಕನು ಕ್ರಿ.ಶ. ೧೬೫೪ರಲ್ಲಿ ಬೆಳಗುತ್ತಿಯ ಮೇಲೆ ಆಕ್ರಮಣ ಮಾಡಿ ವಶಪಡಿಸಿಕೊಂಡನು. ನಂತರ ಕೆಳದಿಯ ಅಧೀನ ದೊರೆಗಳಾದ ಇವರು ೧೭೬೩ರವರೆಗೆ ಕೆಳದಿಯ ಸಾಮಂತರಾಗಿ ಮುಂದುವರಿದರು.

ಹೈದರಾಲಿಯು ಕ್ರಿ.ಶ. ೧೬೮೪ರಲ್ಲಿ ಬಿದನೂರು ಪ್ರದೇಶಕ್ಕೆ ಮುತ್ತಿಗೆ ಹಾಕಿದಾಗ ಬೆಳಗುತ್ತಿಯ ಅರಸರಾದ ತಿಮ್ಮಪ್ಪನು ಸೈನ್ಯದ ನೆರವನ್ನು ಹೈದರಾಲಿಗೆ ನೀಡಿ ಹೈದರಾಲಿಗೆ ಸಹಾಯ ಮಾಡಿದನು. ಇದರಿಂದ ಸಂತೋಷಗೊಂಡ ಹೈದರಾಲಿಯು ತಿಮ್ಮಪ್ಪನಿಗೆ ಸಾವಿರ ವರಹಗಳನ್ನು ನೀಡಿದನು. ಮತ್ತೊಮ್ಮೆ ಹೈದರಾಲಿಯು ನಗರಕ್ಕೆ ಬಂದಾಗ ಈ ಅರಸು ಮನೆತನದ ವೆಂಕಟಪ್ಪ ೫೦೦ ವರಹಗಳನ್ನು ವಾರ್ಷಿಕ ವೇತನವಾಗಿ ನಿಗದಿಗೊಳಿಸಿ ಮೈಸೂರು ಪಡೆಯ ಸೈನ್ಯಾಧಿಕಾರಿಯಾಗಿ ನೇಮಿಸಿಕೊಂಡನು. ಹೈದರಾಲಿಯು ಬ್ರಿಟಿಷರಿಂದ ಕೊಡಿಯಾಲಬೈಲು ಮತ್ತು ಬಸವರಾಜ ದುರ್ಗವನ್ನು ಗೆಲ್ಲಲು ಬೆಳಗುತ್ತಿಯ ಸೈನ್ಯವನ್ನು ಬಳಸಿಕೊಂಡನು.[೫] ಪ್ರತಿಯಾಗಿ ವೆಂಕಟಪ್ಪನನ್ನು ೪೦೦ ಕುದುಗಳ ಅಧಿಪತಿಯಾಗಿ ನೇಮಿಸಿದನು. ವೆಂಕಟಪ್ಪ ಸಹೋದರ ರಾಜರಾಮನಿಗೆ ಹೋಬಳಿ ನಾಯಕನಾಗಿ ನೇಮಿಸಿ ೩೦ ವರಹಗಳನ್ನು ನೀಡಿದನು. ಚಿತ್ರದುರ್ಗದ ಮೆದಕೇರಿ ನಾಯಕನ ವಿರುದ್ಧ ನಡೆದ ಯುದ್ಧದಲ್ಲಿ ಸಹಾಯ ಮಾಡಿದ ವೆಂಕಟಪ್ಪನಿಗೆ ಹೈದರಾಲಿಯು ಬಹುಮಾನವಾಗಿ ೪ ಹೋಬಳಿಗಳನ್ನು ಜಹಗೀರು ರೂಪದಲ್ಲಿ ನೀಡಿದನು. ವೆಂಕಟಪ್ಪನು ಟಿಪ್ಪುವಿನ ಕಾಲದಲ್ಲಿ ಅವನ ಸೈನಾಧಿಕಾರಿಯಾಗಿ ಮುಂದುವರಿದನು. ೪ನೇ ಆಂಗ್ಲೋ-ಮೈಸೂರು ಯುದ್ಧದ ತರುವಾಯ ನಗರ ಪ್ರದೇಶವೂ ಸೇರಿದಂತೆ ಬೆಳಗುತ್ತಿಯು ಮೈಸೂರು ಒಡೆಯರ ಅಧೀನವಾಯಿತು. ಮುಮ್ಮಡಿ

ಕೃಷ್ಣರಾಜ ಒಡೆಯರು ಈ ಮನೆತನದ ಅರಸರಿಗೆ ೩೪ ವರಹಗಳನ್ನು ಮಾಸಿಕವಾಗಿ ನೀಡಲು ಮುಂದಾದರು. ಇದೇ ಸಮಯದಲ್ಲಿ ನಗರ ಪ್ರದೇಶದಲ್ಲಿ ದಂಗೆಗಳು ಸಂಭವಿಸಿದ್ದರಿಂದ ಬ್ರಿಟಿಷರು ಮೈಸೂರಿನ ಅಧಿಕಾರವನ್ನು ತಾವೇ ನೇರವಾಗಿ ವಹಿಸಿಕೊಂಡರು. ಬೆಳಗುತ್ತಿಯ ಅರಸು ಮನೆತನದ ಬಲರಾಮರಾಯ ಮತ್ತು ಮರಿಯಪ್ಪ ರಾಕಯ್ಯನು ವೆಂಕಟಪ್ಪನ ಮೂಲಕ ಬ್ರಿಟಿಷ್ ಗವರ್ನರ್ ಜನರಲ್ ಲೂಶಿಲಗ್ ಟನ್ನನಿಗೆ ಪತ್ರ ಬರೆದು ಪಿಂಚಣಿ ನೀಡುವಂತೆ ಕೋರಿದರು. ಬ್ರಿಟಿಷರು ಇವರ ಮನವಿಯನ್ನು ತಿರಸ್ಕರಿಸಿದರು. ಇದರಿಂದ ಇವರು ತೆರೆಮರೆಗೆ ಸರಿದುಹೋದರು.

ಈ ಮೇಲೆ ನೀಡಿರುವ ಮಾಹಿತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಕರ್ನಾಟಕವನ್ನು ಆಳಿದಂತಹ ಸುಮಾರು ೩೦೦ಕ್ಕೂ ಹೆಚ್ಚು ಪಾಳೆಯಗಾರರ ಮನೆತನಗಳು ಕ್ರಿ.ಶ. ಹದಿನೆಂಟನೆಯ ಶತಮಾನದ ವೇಳೆಗೆ ವಿನಾಶದ ಅಂಚಿನಲ್ಲಿದ್ದವು. ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದ್ದ ಬಹುತೇಕ ನಾಯಕರ ಮನೆತನಗಳು ಅವನತಿಯಾಗಲು ಕಾರಣವಾಗಿದ್ದು ಹೈದರಾಲಿ, ಟಿಪ್ಪು ಸುಲ್ತಾನ್ ಮತ್ತು ಬ್ರಿಟಿಷರು. ಇವರ ಜೊತೆಗೆ ಬಿಜಾಪುರದ ಸುಲ್ತಾನರು, ಹೈದರಾಬಾದಿನ ನಿಜಾಮರು, ಮೊಗಲರು, ಮರಾಠರು ಪದೇ ಪದೇ ಪಾಳೆಯಪಟ್ಟುಗಳ ಮೇಲೆ ದಾಳಿ ಮಾಡಿ ರಾಜಕೀಯವಾಗಿ, ಅರ್ಥಿಕವಾಗಿ ಪಾಳೆಯಪಟ್ಟುಗಳ ಶಕ್ತಿಯನ್ನು ಕುಂಠಿತಗೊಳಿಸಿದರು. ನಾಯಕರೊಂದಿಗೆ ಹೈದರಾಲಿ ಟಿಪ್ಪು ಸುಲ್ತಾನ ಸಂಬಂಧಗಳನ್ನು ವಿಶ್ಲೇಷಿಸುವುದಾದರೆ ಆರಂಭದಲ್ಲಿ ಹೈದರಾಲಿಯು ಇವರೊಂದಿಗೆ ಉತ್ತಮವಾದ ಸ್ನೇಹ ಬಾಂಧವ್ಯಗಳನ್ನು ಹೊಂದಿದ್ದನು. ಪ್ರಸಿದ್ಧ ಪಾಳೆಯ ಪಟ್ಟುಗಳಾದ ಚಿತ್ರದುರ್ಗ, ಮಧುಗಿರಿ, ಸಂತೆಬೆನ್ನೂರು ಮೊದಲಾದ ನಾಯಕರನ್ನು ಮುಂದಿಟ್ಟುಕೊಂಡು ಅವರ ಸೈನ್ಯದ ಬಲದಿಂದಲೇ ಹಲವಾರು ಯುದ್ಧಗಳಲ್ಲಿ ಅದ್ವಿತಿಯ ಗೆಲುವನ್ನು ಸಂಪಾದಿಸಿದನು. ಹಾಗೂ ಮೈಸೂರು ಸಂಸ್ಥಾನದ ಗಡಿರೇಖೆಗಳನ್ನು ವಿಸ್ತರಿಸಿದನು. ಹೈದರಾಲಿಯು ಮತ್ತು ಟಿಪ್ಪು ಸುಲ್ತಾನ ಬಳ್ಳಾರಿ, ವಡ್ಡು, ಬಾಣಾರಾವಿ, ಆದವಾನಿ, ಆನೆಗೊಂದಿ ಕನಕಗಿರಿ, ದರೋಜಿ, ಗುಡೇಕೋಟೆ, ಜರಿಮಲೆ, ಸೊಂಡೂರು ಕೊಪ್ಪಳ, ಕೊಟ್ಟೂರು, ನಾರಾಯಣದೇವರಕೆರೆ, ಹರಪನಹಳ್ಳಿ, ಉಚ್ಚಂಗಿ ದುರ್ಗ, ಬಿದನೂರು, ನಿಡುಗಲ್ಲು, ಚಿತ್ರದುರ್ಗ, ರತ್ನಗಿರಿ, ಬಿದನೂರು, ಮಧುಗಿರಿ, ಮಿಡಗೇಶಿ, ನಿಜಗಲ್ಲು, ಕೆಳದಿ ಇನ್ನು ಮುಂತಾದ ಸಂಸ್ಥಾನಗಳನ್ನು ಗೆಲ್ಲಲು ಸ್ಥಳೀಯ ಪಾಳೆಯಗಾರರೇ ಕಾರಣರಾದರು. ರಾಜಕೀಯವಾಗಿ ಬಹು ಚಾಣಾಕ್ಷನಾಗಿದ್ದ ಹೈದರಾಲಿಯು ಕೆಲವು ನಾಯಕರನ್ನು ಬಳಸಿಕೊಂಡು ಮತ್ತೆ ಕೆಲವು ನಾಯಕರ ವಿರುದ್ಧ ಯುದ್ಧ ಮಾಡುತ್ತಿದ್ದನು. ನಾಯಕರನ್ನು ಪರ ಮತ್ತು ವಿರೋಧಿಗಳನ್ನಾಗಿಸಿದ್ದರ ಫಲವಾಗಿ ಅಭೇದ್ಯವಾದ ಅದೆಷ್ಟೋ ಕೋಟೆಗಳು ಹೈದರಾಲಿಯ ವಶವಾದವು. ಉದಾಹರಣೆಗೆ ಬಳ್ಳಾರಿಯ ಕೋಟೆಯನ್ನು ವಶಪಡಿಸಿಕೊಳ್ಳಲು ರಾಯದುರ್ಗದ ಕೃಷ್ಣಪ್ಪನಾಯಕನ ನೆರವನ್ನು ಪಡೆದನು. ಚಿತ್ರದುರ್ಗ ಕೋಟೆಯನ್ನು ಗೆಲ್ಲಲು ಜರಿಮಲೆ ನಾಯಕರ ನೆರವನ್ನು, ಬೆಳಗುತ್ತಿ ಅರಸರ ಸಹಾಯವನ್ನು ಪಡೆದನು. ಬಿದನೂರು, ನಿಡುಗಲ್ಲುಗಳಂಥ ಬಲಿಷ್ಠ ಕೋಟೆಗಳನ್ನು ಗೆಲ್ಲಲು ಚಿತ್ರದುರ್ಗದ ನಾಯಕ ರಾಜವೀರ ಮದಕೇರಿ ನಾಯಕನ ನೆರವನ್ನು ತೆಗೆದುಕೊಂಡಿದ್ದನು. ಮತ್ತೋಡಿನ ನಾಯಕ ಹಾಲಪ್ಪ ನಾಯಕನು ಹೈದರಾಲಿಗೆ ಚಿತ್ರದುರ್ಗದ ಮುತ್ತಿಗೆಯಲ್ಲಿ ಅಪಾರ

ಸಹಾಯವನ್ನು ಮಾಡಿದ್ದನು. ಕೊಪ್ಪಳ ದುರ್ಗವನ್ನು ಹರಪನಹಳ್ಳಿಯ ನಾಯಕನಾದ ಬಸವಪ್ಪ ನಾಯಕನು ಗೆದ್ದುಕೊಟ್ಟಿದ್ದನು. ಕೆಳದಿ ಕೋಟೆಯ ರಹಸ್ಯಗಳನ್ನು ಕುಂಸಿಯ ಸೆರೆಮನೆಯಲ್ಲಿದ್ದ ಲಿಂಗಣ್ಣನಿಂದ ತಿಳಿದುಕೊಂಡು ಗೆದ್ದುಕೊಂಡನು. ಹೀಗೆ ಕರ್ನಾಟಕದಲ್ಲಿ ಪಾಳೆಯಗಾರರ ಹಲವಾರು ಬಲಿಷ್ಠ ಕೋಟೆಗಳನ್ನು, ಪ್ರದೇಶಗಳನ್ನು ಗೆಲ್ಲಲು ಹೈದರಾಲಿಯು ಒಡೆದು ಆಳುವ ನೀತಿಯನ್ನು ಯಶಸ್ವಿಯಾಗಿ ಬಳಸಿಕೊಂಡಿದ್ದರಿಂದ ಸಾಧ್ಯವಾಯಿತು. ಸಮಕಾಲೀನ ಪಾಳೆಯಗಾರರಲ್ಲಿ ದ್ವೇಷ, ಅಸೂಯೆ ಬೀಜಗಳನ್ನು ಬಿತ್ತುವುದರ ಮೂಲಕ ಹೈದರಾಲಿಯು ಮತ್ತು ಆತನ ಮಗ ಟಿಪ್ಪು ಸುಲ್ತಾನರು ತಮ್ಮ ಕಾರ್ಯ ಸಾಧನೆಯಲ್ಲಿ ಯಶಸ್ಸು ಗಳಿಸಿಕೊಂಡರು ಹಾಗೂ ನಾಯಕರನ್ನು ಸ್ನೇಹಕ್ಕಾಗಿ ಚಾಚಿದ ಕೈಗಳ ಮೂಲಕವೇ ನಿರ್ನಾಮ ಮಾಡಿದರು. ನಾಯಕರ ಶೌರ್ಯ, ಸಾಹಸ, ಧೈರ್ಯಗಳನ್ನು, ಪರಾಕ್ರಮಗಳನ್ನು ಕಣ್ಣಾರೆ ಕಂಡ ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಈರ್ಷ್ಯೆ, ದ್ವೇಷ, ಅಸೂಯೆಗಳಿಂದ ಕುದಿಯುತ್ತಿದ್ದರು. ಬಹುತೇಕ ನಾಯಕರನ್ನು ಸ್ನೇಹದ ನೆಪವೊಡ್ಡಿ ತಮ್ಮ ರಾಜಧಾನಿಯಾದ ಶ್ರೀರಂಗಪಟ್ಟಣಕ್ಕೆ ಆಹ್ವಾನಿಸಿ ಅವರನ್ನು ಬಂಧಿಸಿ ಮೋಸದಿಂದ ಅವರ ಸಂಸ್ಥಾನಗಳನ್ನು ತಮ್ಮ ಸುಪರ್ದಿಗೆ ತೆಗೆದುಕೊಳ್ಳುತ್ತಿದ್ದರು. ಉದಾಹರಣೆಗೆ ಟಿಪ್ಪು ಸುಲ್ತಾನನು ಹರಪನಹಳ್ಳಿ ಪಾಳೆಯಗಾರ ಬಸಪ್ಪ ನಾಯಕನಿಂದ ಕೊಪ್ಪಳ ದುರ್ಗವನ್ನು ಗೆದ್ದ. ಈ ಯುದ್ಧದಲ್ಲಿ ಬಸಪ್ಪ ನಾಯಕನ ಶೌರ್ಯ, ಸಾಹಸ, ಕಲಿತನಗಳನ್ನು ಕಣ್ಣಾರೆ ಕಂಡ ಟಿಪ್ಪು ಸುಲ್ತಾನನು ಸನ್ಮಾನ ಮಾಡುವ ನೆಪವೊಡ್ಡಿ ಬಸಪ್ಪ ನಾಯಕ ಮತ್ತು ಅವನ ಕುಟುಂಬದವರನ್ನು ಹಗರಿಬೊಮ್ಮನಹಳ್ಳಿಗೆ ಕರೆಸಿಕೊಂಡು ಬಂಧಿಸಿ ಶ್ರೀರಂಗಪಟ್ಟಣದ ಸೆರೆಮನೆಯಲ್ಲಿಟ್ಟ. ಇಂತಹ ಸಾಕಷ್ಟು ನಿದರ್ಶನಗಳು ಇತಿಹಾಸದ ಪುಟಗಳಲ್ಲಿ ದಾಖಲುಗೊಂಡಿವೆ. ಚಿತ್ರದುರ್ಗ ಪಾಳೆಯಗಾರನಾದ ಮದಕೇರಿ ನಾಯಕನೊಂದಿಗಿನ ಸ್ನೇಹವು ಹೈದರಾಲಿಯು ರಾಜಕೀಯವಾಗಿ ಮೇಲೇರಲು ಕಾರಣವಾಗಿತ್ತು. ಆದರೆ ವಿಶ್ವಾಸಘಾತುಕನಾಗಿದ್ದ ಹೈದರಾಲಿಯು ರಾಜಾವೀರ ಮದಕೇರಿ ನಾಯಕನ ಉನ್ನತಿಯನ್ನು ಸಹಿಸಲಾಗದೆ ಚಿತ್ರದುರ್ಗವನ್ನು ಮೋಸದಿಂದ ಗೆದ್ದು ಮದಕೇರಿ ನಾಯಕನನ್ನು ಆತನ ಸಹೋದರ ಪರಶುರಾಮಪ್ಪ ನಾಯಕನನ್ನು ಹಾಗೂ ಮಗ ಭರಮಪ್ಪ ನಾಯಕನನ್ನು ಸೆರೆಮನೆಯಲ್ಲಿಟ್ಟ. ಹಾಲೇರಿ ಮನೆತನದ ವೀರರಾಜನನ್ನು ಹಾಗೂ ಅವನ ಕುಟುಂಬದವರನ್ನು ಟಿಪ್ಪು ಸುಲ್ತಾನನು ಬಂಧಿಸಿ ಪಿರಿಯಾಪಟ್ಟಣದ ಸೆರೆಮನೆಯಲ್ಲಿಟ್ಟಿದ್ದ. ಹೀಗೆ ಅದೆಷ್ಟೋ ಪಾಳೆಯಗಾರರು ಪರಸ್ಪರ ಒಗ್ಗಟ್ಟಿಲ್ಲದೇ ಹೈದರಾಲಿಗೆ ತನು, ಮನ, ಧನಗಳನ್ನು ಅರ್ಪಿಸಿ ಸಂಪೂರ್ಣವಾಗಿ ಪತನಗೊಂಡರು.

ಕ್ರಿ.ಶ. ಹದಿನೆಂಟನೆಯ ಶತಮಾನದ ರಾಜಕೀಯ ಪರಿಸ್ಥಿತಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಪ್ರತಿ ನಾಯಕನು ತನ್ನ ರಾಜಕೀಯ ಅಸ್ತಿತ್ವಕ್ಕಾಗಿ ನೆರೆಹೊರೆಯ ನಾಯಕರೊಂದಿಗೆ ಹಾಗೂ ಸಣ್ಣ ಸಣ್ಣ ಸಂಸ್ಥಾನಗಳೊಂದಿಗೆ ನಿರಂತರವಾಗಿ ಕಾದಾಡುವಂತಹ ರಾಜಕೀಯ ಸಂಘರ್ಷ ವಾತಾವರಣ ಸೃಷ್ಟಿಯಾಯಿತು. ವಿಜಯನಗರದ ಪತನದ ನಂತರ ಬಲಿಷ್ಠ ಸಾಮ್ರಾಜ್ಯಗಳು ಕರ್ನಾಟಕದಲ್ಲಿ ತಲೆ ಎತ್ತಲೇ ಇಲ್ಲ. ಹೀಗಾಗಿ ೧೮ನೇ ಶತಮಾನದ ಉದ್ದಕ್ಕೂ ತುಂಡರಸರ ಪ್ರಾಬಲ್ಯವೇ ಕರ್ನಾಟಕದಲ್ಲಿ ಮನೆ ಮಾಡಿತು. ಪ್ರತಿಯೊಬ್ಬ ನಾಯಕನು ತನ್ನ ಸಂಸ್ಥಾನದ ಪ್ರಭುತ್ವ, ರಕ್ಷಣೆ ಮತ್ತು ಆರ್ಥಿಕ

ಬಲಕ್ಕಾಗಿ ನೆರೆಯ ನಾಯಕರೊಂದಿಗೆ ಯುದ್ಧವನ್ನು ಮಾಡಬೇಕಿತ್ತು ಇಲ್ಲವೇ ಶಾಂತಿ ಸಂಧಾನ ಮಾಡಿಕೊಂಡು ಸ್ನೇಹಹಸ್ತ ಚಾಚಬೇಕಾಗಿತ್ತು. ಬಲಿಷ್ಠ ನಾಯಕರಾದ ಕೆಳದಿ, ಚಿತ್ರದುರ್ಗ, ಯಲಹಂಕ, ಮೈಸೂರು ಸಂಸ್ಥಾನಗಳ ಕೆಳಗೆ ಹಲವಾರು ಸಣ್ಣಪುಟ್ಟ ಪಾಳೆಯಪಟ್ಟುಗಳು ಅಧೀನವಾಗಿದ್ದರು. ಪರಸ್ಪರ ರಕ್ಷಣೆ ಹಾಗೂ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ಸಣ್ಣಪುಟ್ಟ ನಾಯಕರಸರಿಗೆ ಇದು ರಾಜಕೀಯವಾಗಿಯೇ ಅನಿವಾರ್ಯವಾಗಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಗಳು ತಲೆ ಎತ್ತಿ ನಿಂತ ಸಂದರ್ಭದಲ್ಲಿಯೇ ಮೈಸೂರಿನ ಸರ್ವಾಧಿಕಾರಿಯಾಗಿ ಹೈದರಾಲಿಯು ತಲೆ ಎತ್ತಿ ನಿಂತಿದ್ದು. ಈತನ ರಾಜ್ಯ ವಿಸ್ತರಣಾ ಆಕಾಂಕ್ಷೆಗಳಿಗೆ ಅದೆಷ್ಟೋ ನಾಯಕ ಸಂಸ್ಥಾನಗಳು ಸಂಪೂರ್ಣವಾಗಿ ನಿರ್ನಾಮಗೊಂಡವು. ರಾಜಕೀಯ ಪ್ರತಿಷ್ಠೆ ಮತ್ತು ಆರ್ಥಿಕ ಸಂಪನ್ಮೂಲಗಳ ಹೆಚ್ಚಳ ಮತ್ತು ಸಾಮ್ರಾಜ್ಯದ ಮೇರೆಗಳನ್ನು ವಿಸ್ತರಿಸಿಕೊಳ್ಳಲು ಪಾಳೆಯಗಾರರು ಯುದ್ಧಗಳನ್ನು ಮಾಡುವಾಗ ಮುಸ್ಲಿಂ ದೊರೆಗಳ ನೆರವನ್ನು ಪಡೆಯುವುದು ಅನಿವಾರ್ಯವಾಯಿತು. ಹೀಗೆ ಮುಸ್ಲಿಮರು ಹಿಂದೂ ನಾಯಕರನ್ನು ಮಟ್ಟಹಾಕಲು ಬೇರೆ ಹಿಂದೂ ನಾಯಕರನ್ನು ಬಳಸಿಕೊಳ್ಳುತ್ತಿದ್ದರು. ಇಂತಹ ರಾಜಕೀಯ ಹೊಂದಾಣಿಕೆಗಳು, ಒಳಒಪ್ಪಂದಗಳು ತಾತ್ಕಾಲಿಕವಾಗಿದ್ದವು. ಯುದ್ಧಗಳ ನಂತರ ನಾಯಕರ ವಿಶ್ವಾಸವನ್ನು, ಸ್ನೇಹಗಳನ್ನು ಹೈದರಾಲಿಯು ಮುಂದುವರಿಸದೇ ಸಹಾಯ ಮಾಡಿದ ನಾಯಕರನ್ನು ರಾಜಕೀಯವಾಗಿ ಮಟ್ಟಹಾಕಲು ತಂತ್ರಗಳನ್ನು ರೂಪಿಸುತ್ತಿದ್ದ. ಹೀಗಾಗಿ ಹೈದರಾಲಿಯೊಂದಿಗೆ ಸ್ನೇಹ ಸಂಬಂಧಗಳನ್ನು ಹೊಂದಿದ ಬಹುತೇಕ ನಾಯಕರಸರೇ ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕೈಯಲ್ಲಿ ಹತರಾಗಿಬಿಟ್ಟರು.

ನಾಯಕರು ತಮ್ಮ ಪ್ರಜೆಗಳ ಜೀವ ಆಸ್ತಿಪಾಸ್ತಿಯ ರಕ್ಷಣೆಯ ಸಲುವಾಗಿ, ಪರಕೀಯರ ದಾಳಿಯನ್ನು ತಡೆಗಟ್ಟುವ ಸಲುವಾಗಿ ಬಲಿಷ್ಠವಾದ ಅಭೇದ್ಯವಾದ ಕೋಟೆಗಳನ್ನು, ಗಿರಿ ದುರ್ಗಗಳನ್ನು ನಿರ್ಮಿಸಿಕೊಂಡಿದ್ದರು. ಉದಾ: ಚಿತ್ರದುರ್ಗ, ನಿಡುಗಲ್ಲು, ಪಾವಗಡ, ಜರಿಮಲೆ, ಗುಡೇಕೋಟೆ, ಮಧುಗಿರಿ, ಮಿಡಿಗೇಶಿ, ಹಾಗಲವಾಡಿ, ಕನಕಗಿರಿ ಇತ್ಯಾದಿ. ಇಂತಹ ಬಲಿಷ್ಠವಾದ ಕೋಟೆಗಳನ್ನು ವಶಪಡಿಸಿಕೊಂಡ ಹೈದರಾಲಿ ಮತ್ತು ಟಿಪ್ಪು ಅವುಗಳನ್ನು ತಮ್ಮ ಸೇನಾನೆಲೆಗಳಾಗಿ, ಮದ್ದು ಗುಂಡುಗಳನ್ನು ಸಂಗ್ರಹಿಸುವ ತಾಣಗಳನ್ನಾಗಿ ಬಳಸಿಕೊಂಡಿದ್ದರು.

ನಾಯಕರ ಹೋರಾಟಗಳು ೪ನೇ ಆಂಗ್ಲೋ-ಮೈಸೂರು ಯದ್ಧದವರೆಗೂ ಮುಂದುವರಿದವು. ಬ್ರಿಟಿಷರು ೪ನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಟಿಪ್ಪುವಿನ ರಾಜಕೀಯ ಶಕ್ತಿಯನ್ನು ಮೆಟ್ಟಿನಿಂತರು. ಟಿಪ್ಪುವಿನ ಮರಣದ ನಂತರ ಪಾಳೆಯ ಪಟ್ಟುಗಳು ಮೈಸೂರು ಸಂಸ್ಥಾನದಲ್ಲಿ ವಿಲೀನಗೊಂಡವು. ರಾಜಕೀಯ ದೂರದೃಷ್ಟಿಯಿಂದ ದಿವಾನ್ ಪೂರ್ಣಯ್ಯ ಈ ಪಾಳೆಯ ಪಟ್ಟುಗಳನ್ನು ನಾಯಕರಿಗೆ ಹಿಂತಿರುಗಿಸಲಿಲ್ಲ. ಕೆಲವು ನಾಯಕರು ಬ್ರಿಟಿಷರಿಂದ ಪಿಂಚಣಿ ಪಡೆದರೆ ಕೆಲವರು ಪಿಂಚಣಿಯಿಲ್ಲದೇ ನಿರಾಶ್ರಿತರಾಗಿ ಜೀವನ ಕಳೆದರು.

ಇನ್ನು ಬ್ರಿಟಿಷರೊಂದಿಗೆ ನಾಯಕರ ನಡುವಿನ ಸಂಬಂಧಗಳನ್ನು ವಿಶ್ಲೇಷಿಸುವುದಾದರೆ ಬ್ರಿಟಿಷರು ೧೮ನೇ ಶತಮಾನದ ಉತ್ತಾರಾರ್ಧದಲ್ಲಿ ಕರ್ನಾಟಕದ ರಾಜಕೀಯ ರಂಗವನ್ನು ಪ್ರವೇಶಿಸಿದರು. ಈ ವೇಳೆಗಾಗಲೇ ಕರ್ನಾಟಕವು ದಕ್ಷಿಣ ಭಾಗದಲ್ಲಿ ಒಡೆಯರಿಂದ ಆಳಲ್ಪಡುತ್ತಿತ್ತು. ಮೈಸೂರು ಒಡೆಯರು ರಾಜಕೀಯ ಪ್ರವರ್ಧಮಾನದಲ್ಲಿದ್ದು ಬಹುತೇಕ ನಾಯಕರನ್ನು ತಮ್ಮ ಸಾಮಂತರನ್ನಾಗಿಸಿಕೊಂಡಿದ್ದರು. ಮೈಸೂರು ಸಂಸ್ಥಾನದಲ್ಲಿ ದಳವಾಯಿಗಳ ಆಡಳಿತ ಅಂತ್ಯಗೊಂಡು ಸರ್ವಾಧಿಕಾರಿಯಾಗಿ ಹೈದರಾಲಿಯು ತಲೆ ಎತ್ತಿದ್ದ, ಹೈದರಾಲಿಯ ದುರಾಸೆ, ರಾಜಕೀಯ ಕುತಂತ್ರಗಳಿಗೆ, ಯುದ್ಧಗಳಿಗೆ ಬಹುತೇಕ ಪಾಳೆಯಗಾರರು ಕಂಗೆಟ್ಟು ಹೋಗಿದ್ದರು. ಬ್ರಿಟಿಷರ ಕರ್ನಾಟಕದಲ್ಲಿ ರಾಜಕೀಯ ನೆಲೆಯನ್ನು ಕಂಡುಕೊಳ್ಳಲು ಮೈಸೂರು ಸಂಸ್ಥಾನದ ಸರ್ವಾಧಿಕಾರಿಯಾದ ಹೈದರಾಲಿ ಮತ್ತು ಟಿಪ್ಪು ಸುಲ್ತಾನನ ವಿರುದ್ಧ ೪ ಆಂಗ್ಲೋ–ಮೈಸೂರು ಯುದ್ಧಗಳನ್ನು ಮಾಡಬೇಕಾಯಿತು. ಮೊದಲ ಎರಡು ಆಂಗ್ಲೋ ಮೈಸೂರು ಯುದ್ಧಗಳಲ್ಲಿ ನಿಶ್ಚಿತವಾದ ಗೆಲುವನ್ನು ಪಡೆಯಲು ಬ್ರಿಟಿಷರಿಗೆ ಸಾಧ್ಯವಾಗಲೇ ಇಲ್ಲ. ಅಂತಿಮವಾಗಿ ಬ್ರಿಟಿಷರು ಟಿಪ್ಪು ಸುಲ್ತಾನನ್ನು ರಾಜಕೀಯವಾಗಿ ಮಣಿಸಲು ಸ್ಥಳೀಯ ನಾಯಕರಸರ ನೆರವನ್ನು ಪಡೆದರು. ಗುಮ್ಮನಾಯಕನಹಳ್ಳಿ, ಗುಡೇಕೋಟೆ, ಚಿತ್ರದುರ್ಗ ಮೊದಲಾದ ನಾಯಕರು ಆಂಗ್ಲೊ–ಮೈಸೂರು ಯುದ್ಧಗಳಲ್ಲಿ ಭಾಗವಹಿಸಿ ಬ್ರಿಟಿಷರಿಗೆ ಜಯವನ್ನು ತಂದುಕೊಡುವಲ್ಲಿ ನೆರವಾದರು. ಕ್ರಿ.ಶ. ೧೭೯೨ರಲ್ಲಿ ನಡೆದಂತಹ ಒಪ್ಪಂದದ ಪ್ರಕಾರ ಬ್ರಿಟಿಷರು ಟಿಪ್ಪುವಿನ ವಜ್ರಮುಷ್ಠಿಯಿಂದ ನಾಯಕರನ್ನು ಮುಕ್ತಗೊಳಿಸಲು ಶ್ರಮಿಸಿದರು. ೪ನೇ ಆಂಗ್ಲೋ–ಮೈಸೂರು ಯುದ್ಧದ ತರುವಾಯ ಕ್ರಿ.ಶ. ೧೭೯೯ರಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಸಂಚಾಲಕ ಮಂಡಳಿಗೆ ನಾಯಕರ ಕುರಿತು ವರದಿಯನ್ನು ನಿವೇದನೆ ಮಾಡಿದರು. ಥಾಮಸ್ ಮನ್ರೋ ಈ ಮಂಡಳಿಯ ಅಧ್ಯಕ್ಷನಾಗಿ ನಿಯುಕ್ತಿಗೊಂಡನು. ಮನ್ರೋ ನೀಡಿದ ವರದಿಯ ಸಲಹಾ ಸೂಚನೆಗಳನ್ನು ಈಸ್ಟ್ ಇಂಡಿಯಾ ಕಂಪನಿಯ ಸಂಚಾಲಕ ಮಂಡಳಿಯು ಸಮ್ಮತಿಸಿತು. ಪಾಳೆಯಗಾರರ ಪಟ್ಟಿಯನ್ನು ತಯಾರಿಸಿ ಅವರಿಗೆ ನಿವೃತ್ತಿ ವೇತನವನ್ನು ಮಂಜೂರು ಮಾಡಲಾಯಿತು. ಪಾಳೆಯಗಾರರ ಸೈನ್ಯ ಬಲವನ್ನು ಸಂಪೂರ್ಣವಾಗಿ ನಿಗ್ರಹಿಸಿ ಅವರು ಪ್ರತಿವರ್ಷವೂ ಸಂದಾಯ ಮಾಡುವ ಪೊಗಾದಿಗೆ ಬದಲಾಗಿ ಅವರ ಸಂಸ್ಥಾನಗಳ ಆದಾಯಕ್ಕೆ ತಕ್ಕಂತೆ ಹಣವನ್ನು ಸಂಗ್ರಹಿಸಬೇಕೆಂದು ನಿಗದಿಪಡಿಸಲಾಯಿತು. ಹೀಗೆ ಪಾಳೆಯಗಾರರ ಶಕ್ತಿಯನ್ನು ಕುಂಠಿತಗೊಳಿಸಿದ ಬ್ರಿಟಿಷರು ಕ್ರಮೇಣವಾಗಿ ಪಾಳೆಯಗಾರರನ್ನು ರಾಜಕೀಯವಾಗಿ ಬಗ್ಗು ಬಡಿಯುವಲ್ಲಿ ಯಶಸ್ವಿಯಾದರು.

ಬ್ರಿಟಿಷರು ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಆಡಳಿತಾವಧಿಯಲ್ಲಿ ಪಾಳೆಯಗಾರರ ಬಗ್ಗೆ ಮೃದು ನೀತಿಗಳನ್ನು ಅನುಸರಿಸಿದರು. ಟಿಪ್ಪುವಿನ ಮರಣದ ನಂತರ ಬ್ರಿಟಿಷರು ಕೆಲವು ಕಾಲ ಇದೇ ನೀತಿಯನ್ನು ಅನುಸರಿಸಿದರೂ ಕಾಲ ಕ್ರಮೇಣ ಹೈದರಾಲಿ ಮತ್ತು ಟಿಪ್ಪು ಸುಲ್ತಾನರಿಗಿಂತಲೂ ಕಠಿಣವಾದ ನೀತಿಗಳನ್ನು ಅನುಸರಿಸಿದರು. ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ತಮಗೆ

ಶರಣಾದವರನ್ನು, ಕಪ್ಪ-ಕಾಣಿಕೆ ನೀಡುವವರನ್ನು ಆಳ್ವಿಕೆ ಮುಂದುವರಿಸಲು ಅವಕಾಶ ನೀಡಿದರೆ ಬ್ರಿಟಿಷರು ಅಂತಹ ಅವಕಾಶ ನೀಡಲಿಲ್ಲ.[೬೦]

೭.೨. ನಾಯಕರ ಅವನತಿಗೆ ಕಾರಣಗಳು ಮತ್ತು ಪರಿಣಾಮಗಳು

ವಿಜಯನಗರ ಕಾಲದಲ್ಲಿ ನಾಯಕರಾಗಿ ಅಸ್ತಿತ್ವನ್ನು ಪಡೆದುಕೊಂಡು, ವಿಜಯನಗರೋತ್ತರ ಕಾಲದಲ್ಲಿ ಸ್ವತಂತ್ರ ನಾಯಕರಾಗಿ ಕ್ರಿ.ಶ. ಹದಿನೆಂಟನೆಯ ಶತಮಾನದ ಅಂತ್ಯದವರೆಗೂ ಆಡಳಿತವನ್ನು ನಡೆಸಿದರು. ನಾಯಕರಿಗೆ ಕರ್ನಾಟಕದ ಇತಿಹಾಸದಲ್ಲಿ ಸುಮಾರು ೪ ಶತಮಾನಗಳಷ್ಟು ಸುದೀರ್ಘವಾದ ಇತಿಹಾಸವಿರುವುದನ್ನು ಗಮನಿಸಬಹುದು. ವಿಜಯನಗರ ಕಾಲದಲ್ಲಿ ಅವರ ಸೇವಕರಾಗಿ, ಊಳಿಗದವರಾಗಿ, ರಾಜ ಪ್ರತಿನಿಧಿಗಳಾಗಿ, ಮಹಾಮಂಡಲೇಶ್ವರರಾಗಿ, ರಾಜ್ಯಪಾಲರುಗಳಾಗಿ, ನಾಡ ತಳವಾಳರಾಗಿ, ಅಮರನಾಯಕರಾಗಿ ಸೇವೆ ಸಲ್ಲಿಸಿದ ವರ್ಗವೊಂದು ತಾವು ನಾಯಕತನಕ್ಕಾಗಿ ಪಡೆದ ಉಂಬಳಿ ಗ್ರಾಮಗಳು ಅಥವಾ ಭೂಮಿಗಳು, ಕಟ್ಟಿಕೊಂಡು ಕೋಟೆಗಳು ಹಾಗೂ ಮಿಲಿಟರಿ ಬಲದಿಂದಾಗಿ ವಿಜಯನಗರದ ಪತನದ ನಂತರ ಸ್ವತಂತ್ರ ಅರಸು ಮನೆತನಗಳಾಗಿ ರೂಪುಗೊಂಡಿದ್ದು ಇತಿಹಾಸವೇ ಸರಿ. ಕರ್ನಾಟಕದಾದ್ಯಂತ ಈ ಬಗೆಯ ೩೦೦ಕ್ಕಿಂತ ಹೆಚ್ಚು ಸಣ್ಣಮಟ್ಟ ಪಾಳೆಯಪಟ್ಟುಗಳು ಆಡಳಿತ ನಡೆಸುತ್ತಿದ್ದವು. ಈ ನಾಯಕ ಮನೆತನಗಳು ಇದ್ದಕ್ಕಿದಂತೆ ಕರ್ನಾಟಕದ ರಾಜಕೀಯ ಇತಿಹಾಸದಿಂದ ಕಣ್ಮರೆಯಾಗಿ ಹೋದರು. ಶೌರ್ಯ, ದಕ್ಷತೆ, ಪರಾಕ್ರಮ ಹೋರಾಟಗಳಿಗೆ ಖ್ಯಾತಗೊಂಡಿದ್ದ ಈ ಮನೆತನಗಳು ಅವನತಿಯು ಕೇವಲ ಒಂದೆರಡು ಕಾರಣಗಳಿಂದ ಸಂಭವಿಸಲಿಲ್ಲ. ಹುಡುಕುತ್ತ ಹೋದರೆ ಅನೇಕ ಸಮಸ್ಯೆಗಳು ಕಾಣಿಸಿಕೊಂಡು ನಾಯಕ ಮನೆತನಗಳ ಅವನತಿಯ ಚಿತ್ರಗಳು ಕಣ್ಮುಂದೆ ಬರುತ್ತವೆ. ಅಂತಹ ಕೆಲವು ಕಾರಣಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

೧. ಪಾಳೆಯಪಟ್ಟುಗಳ ನಡುವಿನ ಅಂತಃಕಲಹಗಳು ಮತು ಪರಸ್ಪರ ದ್ವೇಷ ರಾಜಕಾರಣ: ಕ್ರಿ.ಶ. ೧೬, ೧೭, ೧೮ ಶತಮಾನಗಳಲ್ಲಿ ಕರ್ನಾಟಕವನ್ನು ಆಳಿದಂತಹ ಬಹುತೇಕ ನಾಯಕ ಮನೆತನಗಳು ಪರಸ್ಪರ ಒಗ್ಗಟ್ಟಿನಿಂದ ಕೂಡಿರದೇ ಆಂತರಿಕ ಕಚ್ಚಾಟಗಳಲ್ಲಿ ತೊಡಗಿಕೊಂಡಿದ್ದವು. ಪ್ರತಿಯೊಬ್ಬ ನಾಯಕರು ತಮ್ಮ ನೆರೆಹೊರೆಯ ನಾಯಕರನ್ನು ಸದಾ ಬಗ್ಗುಬಡಿಯಲು ಸಮಯಾವಕಾಶವನ್ನು ಕಾಯುತ್ತಿದ್ದವು. ನಾಡಪ್ರಭು ಕೆಂಪೇಗೌಡನನ್ನು ಮಟ್ಟಹಾಕಲು ಚನ್ನಪಟ್ಟಣದ ಪಾಳೆಯಗಾರ ಜಗದೇವರಾಯನು ಪ್ರಯತ್ನಿಸಿದರು. ಉಮ್ಮತ್ತೂರು ಪಾಳೆಯಗಾರರನ್ನು ಸದೆ ಬಡಿಯಲು ಕಳಲೆ ದಳವಾಯಿಗಳು ಮತ್ತು ಮೈಸೂರು ಒಡೆಯರು ಕೈ ಜೋಡಿಸಿ ಯಶಸ್ವಿಯಾದರು.

ನಿಡುಗಲ್ಲು ಪಾಳೆಯಗಾರರನ್ನು ಸಿರಾದ ನವಾಬರು ರಾಜಕೀಯವಾಗಿ ಹತ್ತಿಕ್ಕುವಲ್ಲಿ ಯಶಸ್ವಿಯಾದರು. ಗುಮ್ನಳ್ಳಿ ಕದನದಲ್ಲಿ ಚಿತ್ರದುರ್ಗದ ನಾಯಕನ ವಿರುದ್ಧ ಯುದ್ಧ ಮಾಡಲು ಪ್ರೇರೇಪಿಸಿದ ತರೀಕೆರೆಯ ಪಾಳೆಯಗಾರರು ರಣದುಲ್ಲಾಖಾನನ ಸಹಾಯದಿಂದ ಸೀರ್ಯಾ ಪಾಳೆಯಗಾರರೊಂದಿಗೆ ಗುಮ್ನಳ್ಳಿ ಬಯಲಿನಲ್ಲಿ ಯುದ್ಧ ಮಾಡಿದರು.[೬೧] ಸೀರ್ಯಾ ಪಾಳೆಯ ಪಟ್ಟು

ಅವನತಿಯಾಗಲು ಕಾರಣಕರ್ತರಾದರು. ಗುಡೇಕೋಟೆಯ ಪಾಳೆಯಗಾರರು ಚಿತ್ರದುರ್ಗದ ನಾಯಕರೊಂದಿಗೆ ವೈವಾಹಿಕ ಬಂಧಗಳನ್ನು ಏರ್ಪಡಿಸಿಕೊಂಡು ರಕ್ತ ಸಂಬಂಧಿಕರಾದರೂ ಚಿತ್ರದುರ್ಗ ನಾಯಕರೊಂದಿಗೆ ವೈವಾಹಿಕ ಬಂಧಗಳನ್ನು ಏರ್ಪಡಿಸಿಕೊಂಡು ರಕ್ತ ಸಂಬಂಧಿಕರಾದರೂ ಚಿತ್ರದುರ್ಗ ನಾಯಕರ ಪತನಕ್ಕೆ ಶಕ್ತಿ ಮೀರಿ ಪ್ರಯತ್ನಿಸಿದರು. ಗುಡೇಕೋಟೆ ಪಾಳೆಯಗಾರ ರಾಮಪ್ಪ ನಾಯಕ ಹೈದರಾಲಿಯೊಂದಿಗೆ ಒಪ್ಪಂದ ಮಾಡಿಕೊಂಡು ಚಿತ್ರದುರ್ಗ ಮುತ್ತಿಗೆಯಲ್ಲಿ ಪ್ರಧಾನ ಪಾತ್ರವಹಿಸಿದ. ರಾಜ ವೀರ ಮೇದಕೇರಿ ನಾಯಕನು ಅವನತಿಯಾಗಲು ಗುಡೇಕೋಟೆ ನಾಯಕರಂತೆ ಜರಿಮಲೆ ನಾಯಕರು ಸಹ ಹೈದರಾಲಿಗೆ ಸಹಕರಿಸಿದರು. ಕನಕಗಿರಿ ನಾಯಕರು ಸಹ ಚಿತ್ರದುರ್ಗ ನಾಯಕರ ವಿರುದ್ಧ ಹೈದರಾಲಿಗೆ ಸಹಕರಿಸಿದರು. ಮತ್ತೋಡು ರಕ್ತ ಸಂಬಂಧಿಕರಾಗಿದ್ದರೂ ವೈಮನಸ್ಸುಗಳು ಏರ್ಪಟ್ಟು ಮತ್ತೋಡು ಪಾಳೆಯಗಾರರು ಹೈದರಾಲಿಗೆ ಸಹಕರಿಸಿದರು. ಹೀಗೆ ಬಹುತೇಕ ನಾಯಕರು ದ್ವೇಷ–ಅಸೂಯೆ–ವೈಮನಸ್ಸುಗಳ ಮೂಲಕ ಪರಸ್ಪರ ಶತ್ರುಗಳಾಗಿ ತಮ್ಮ ಅವನತಿಯನ್ನು ತಾವೇ ತಂದುಕೊಂಡರು. ತಮ್ಮ ಶತ್ರುತ್ವ ರಾಜಕಾರಣದಲ್ಲಿ ಹೊರಗಿನ ಶಕ್ತಿಗಳ ಜೊತೆ ಕೈ ಜೋಡಿಸಿ ಸಂಪೂರ್ಣ ನಿರ್ನಾಮವಾದರು.

೨. **ಮೈಸೂರು ಒಡೆಯರ ಪ್ರಾಬಲ್ಯತೆ:** ಕ್ರಿ.ಶ. ಹದಿನೆಂಟೆಯ ಶತಮಾನದಲ್ಲಿ ರಾಜಕೀಯ ಶಕ್ತಿಯನ್ನು ಒಗ್ಗೂಡಿಸಿಕೊಂಡು ಪ್ರಬಲ ರಾಜಮನೆತನವಾಗಿ ತಲೆ ಎತ್ತಿ ನಿಂತರು. ಮೈಸೂರು ಒಡೆಯರ ರಾಜಕೀಯ ಪ್ರಾಬಲ್ಯತೆಯು ಆನೇಕ ಪಾಳೆಯಪಟ್ಟುಗಳ ಮುಳುಗಡೆಗೆ ಕಾರಣವಾಯಿತು.

೩. **ಹೈದರಾಲಿಯ ರಾಜ್ಯ ವಿಸ್ತರಣಾ ನೀತಿ:** ಹೈದರಾಲಿಯ ರಾಜ್ಯ ವಿಸ್ತರಣಾ ನೀತಿಗೆ ಕರ್ನಾಟಕದ ಎಲ್ಲಾ ಪಾಳೆಯಪಟ್ಟುಗಳು ನಿರ್ನಾಮವಾದವು. ಹೈದರಾಲಿಯು ತನ್ನ ರಾಜಕೀಯ ಜೀವನದ ಏಳಿಗೆಯಲ್ಲಿ ನಾಯಕರನ್ನು ಪಗಡೆ ಆಟದ ಕಾಯಿಗಳಂತೆ ಬಳಸಿಕೊಂಡನು. ಹೈದರಾಲಿಯು ನಾಯಕರ ಶಕ್ತಿ ಸಾಮರ್ಥ್ಯಗಳನ್ನು ಅರಿತುಕೊಂಡು ಅವರೊಡನೆ ಯುದ್ಧ ಮಾಡದೇ ಸ್ನೇಹ ಹಸ್ತವನ್ನು ಚಾಚುತ್ತಿದ್ದನು. ಹೈದರಾಲಿಯ ಮರ್ಮವನ್ನು ಅರಿಯದೆ ಬಹುತೇಕ ನಾಯಕರು ಅವನ ಸ್ನೇಹ ಸಂಬಂಧಗಳಿಗೆ ತಲೆಬಾಗುತ್ತಿದ್ದರು. ಹೈದರಾಲಿಯು ಇದನ್ನೆ ಬಂಡವಾಳ ಮಾಡಿಕೊಂಡನು. ತನ್ನಿಂದ ಗೆಲ್ಲಲು ದುಸ್ಸಾಧ್ಯವಾದ ಕಠಿಣ ಕೋಟೆಗಳನ್ನು ನೆರವಿನಿಂದಲೇ ಗೆದ್ದುಕೊಂಡನು. ಉದಾಹರಣೆಗೆ ಚಿತ್ರದುರ್ಗದ ಮೇದಕೇರಿ ನಾಯಕನು ನಿಡುಗಲ್ಲು ಕೋಟೆಯನ್ನು ಗೆದ್ದುಕೊಂಡನು. ರಾಯದುರ್ಗ ಪಾಳೆಯಗಾರರ ನೆರವಿನಿಂದ ಬಳ್ಳಾರಿಯನ್ನು ಗೆದ್ದುಕೊಂಡನು. ಚಿತ್ರದುರ್ಗ, ಮಧುಗಿರಿ, ಪಾವಗಡ, ನಿಡುಗಲ್ಲು ರತ್ನಗಿರಿ, ಜರಿಮಲೆ, ಗುಡೇಕೋಟೆ, ಸಂತೆಬೆನ್ನೂರು, ತರೀಕೆರೆ, ಮಿಡಿಗೇಶಿ, ವಡ್ಡು, ದರೋಜಿ, ಬಾಣಾವಿ, ಕುಡುತಿನಿ, ರತ್ನಗಿರಿ, ಗುಮ್ಮನಾಯಕನ ಪಾಳೆಯ ಇನ್ನು ಮುಂತಾದ ಬಲಾಢ್ಯ ಪಾಳೆಯ ಪಟ್ಟುಗಳನ್ನು ತನ್ನ ಕುತಂತ್ರ ಮೋಸ, ಕಪಟ ನೀತಿಗಳಿಂದಲೇ ಗೆದ್ದುಕೊಂಡನು. ಒಬ್ಬ ನಾಯಕನ ವಿರುದ್ಧ ಮತ್ತೊಬ್ಬ ನಾಯಕನು ಯುದ್ಧ ಮಾಡುವಂತೆ ಮಾಡಿ ನಾಯಕರನ್ನು ಸದೆಬಡಿದನು. ತಾನು ಕೈಗೊಂಡ ರಾಜ್ಯ ವಿಸ್ತರಣಾ

ಯುದ್ಧಗಳಲ್ಲಿ ಪಾಳೆಯಗಾರರನ್ನು ಮುಂಚೂಣಿಯಲ್ಲಿಟ್ಟು ಯುದ್ಧ ಮಾಡಿ ಮತ್ತೊಬ್ಬ ಪಾಳೆಯಗಾರನ ಸಂಸ್ಥಾನವನ್ನು ಕಬಳಿಸಿ ಪಾಳೆಯಗಾರರನ್ನು ಬಲಹೀನರನ್ನಾಗಿಸಿದನು. ಹೈದರಾಲಿಯು ಕೈಗೊಂಡ ರಾಜ್ಯ ವಿಸ್ತರಣಾ ನೀತಿಗಳು ಬ್ರಿಟಿಷರ ಒಡೆದು ಆಳುವ ನೀತಿಗಳಿಗಿಂತ ಕಡಿಮೆಯೇನು ಇರಲಿಲ್ಲ.

೪. ಮರಾಠರ ಪ್ರಾಬಲ್ಯತೆ : ಮೈಸೂರು ಒಡೆಯರಿಗೂ ಮರಾಠರಿಗೂ ಸದಾ ನಡೆಯುತ್ತಿದ್ದ ಯುದ್ಧಗಳ ಪರಿಣಾಮವಾಗಿ ಮೈಸೂರು ಸಂಸ್ಥಾನದ ಪಾಳೆಯಗಾರರು ಒಮ್ಮೆ ಒಡೆಯರಿಗೂ ಮತ್ತೊಮ್ಮೆ ಮರಾಠರಿಗೂ ಹಸ್ತಾಂತರ ಹೊಂದುತ್ತಿದ್ದರು. ಇದರಿಂದಾಗಿ ಪಾಳೆಯಗಾರರು ತೀವ್ರ ಸಂಕಷ್ಟಗಳಿಗೆ ಗುರಿಯಾಗಬೇಕಾಗಿತು.[೨] ಮರಾಠರಿಗೂ ಮತ್ತು ಒಡೆಯರಿಗೂ ಅಪಾರ ಪ್ರಮಾಣದ ಖಂಡಣೆಯ ಹಣವನ್ನು ನೀಡಬೇಕಾಗಿತ್ತು. ಪದೇ ಪದೇ ಮರಾಠರ ದಾಳಿಗಳು ನಾಯಕರನ್ನು ರಾಜಕೀಯವಾಗಿ, ಆರ್ಥಿಕವಾಗಿ ಅಧೋಗತಿಗೆ ತಂದಿಳಿಸಿದವು. ಪಾಳೆಯಪಟ್ಟುಗಳು ಸೀಮಿತವಾದ ಆರ್ಥಿಕ ಆದಾಯವನ್ನು ಹೊಂದಿದ್ದು ತಮ್ಮ ರಾಜಕೀಯ ಅಸ್ತಿತ್ವಕ್ಕಾಗಿ ಮರಾಠರಿಗೆ ಹಣವನ್ನು ತೆರಬೇಕಾಗಿದ್ದರಿಂದ ನಷ್ಟಗೊಂಡವು.

೫. ಪಾಳೆಯಗಾರರ ಅನಾವಶ್ಯಕ ಯುದ್ಧಗಳು: ಕ್ರಿ.ಶ. ೧೭ ಮತ್ತು ೧೮ನೆಯ ಶತಮಾನದಲ್ಲಿ ಆ ರಾಜಕೀಯ ವಾತಾವರಣದಲ್ಲಿ ನಾಯಕರು ಸದಾ ಯುದ್ಧಗಳಲ್ಲಿಯೇ ಮಗ್ನರಾಗಿರುತ್ತಿದ್ದರು. ಯುದ್ಧ ಮತ್ತು ಸಂಘರ್ಷಗಳು ನಾಯಕರ ರಾಜಕೀಯ ಜೀವನದ ಅಳಿವು ಉಳಿವನ್ನು ನಿರ್ಧರಿಸುತ್ತಿದ್ದವು. ಹೀಗಾಗಿ ಬಹುತೇಕ ನಾಯಕರು ತಮ್ಮ ರಾಜಕೀಯ ಜೀವನದ ಅಸ್ತಿತ್ವದ ಮುಂದುವರಿಕೆಗಾಗಿ ಸ್ವಯಂ ಪ್ರತಿಷ್ಠೆಗಾಗಿ ತಮ್ಮ ನೆರೆಹೊರೆಯ ನಾಯಕ ಸಂಸ್ಥಾನಗಳ ಜೊತೆ ಸದಾ ಸಂಘರ್ಷಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದವು. ಈ ಬಗೆಯ ಅನಾವಶ್ಯಕ ಯುದ್ಧಗಳು ನಾಯಕ ಸಂಸ್ಥಾನಗಳನ್ನು ವಿನಾಶದ ಅಂಚಿಗೆ ನೂಕಿದವು.

೬. ವಿಜಯನಗರದ ಅವನತಿ: ಅಮರ ನಾಯಕ ಏಳಿಗೆ, ಪ್ರಾಬಲ್ಯ ಹಾಗೂ ರಾಜಕೀಯ ಸದೃಢತೆಯು ಸಂಪೂರ್ಣವಾಗಿ ವಿಜಯನಗರವನ್ನು ಅವಲಂಬಿಸಿತ್ತು. ರಾಜಕೀಯವಾಗಿ ದಕ್ಷಿಣ ಭಾರತದ ಬಹುತೇಕ ಭೂಭಾಗವನ್ನು ವಶಪಡಿಸಿಕೊಂಡಿದ್ದ ವಿಜಯನಗರ ಸಾಮ್ರಾಜ್ಯವು ತನ್ನ ನೆರಳಿನಲ್ಲಿ ಹಲವಾರು ಸಾಮಂತ ನಾಯಕ ಮನೆತನಗಳ ಉಗಮಕ್ಕೆ ಕಾರಣವಾಯಿತು. ಈ ಸಾಮಂತ ನಾಯಕರು ವಿಜಯನಗರದಂತಹ ಬೃಹತ್ ಸಾಮ್ರಾಜ್ಯದ ಅಡಿಯಲ್ಲಿ ಸಾಮ್ರಾಜ್ಯದ ರಕ್ಷಕರಾಗಿ ತಮ್ಮನ್ನು ತಾವು ರಕ್ಷಿಸಿಕೊಂಡು ವಿಜಯನಗರದ ಅಭ್ಯುದಯಕ್ಕೆ ಕಾರಣರಾದರು. ಆದರೆ ಕ್ರಿ.ಶ. ೧೫೬೫ರ ರಕ್ಕಸ ತಂಗಡಿ ಯುದ್ಧದ ತರುವಾಯ ವಿಜಯನಗರವು ಸಂಪೂರ್ಣವಾಗಿ ನೆಲಕಚ್ಚಿತು. ಅರವೀಡು ಮನೆತನದ ತಿರುಮಲರಾಯನು ಘನಗಿರಿಯೆಂದೇ ಖ್ಯಾತವಾಗಿರುವ ಪೆನುಗೊಂಡೆಯಿಂದ ಪುನಃ ವಿಜಯನಗರದ ಆಡಳಿತವನ್ನು ಸ್ಥಾಪಿಸಲು ಪ್ರಯತ್ನಿಸಿದನಾದರೂ ಹಿಂದಿನ ವೈಭವ, ದಕ್ಷತೆ, ದೃಢತೆಯನ್ನು ತಂದುಕೊಡಲು ಸಾಧ್ಯವಾಗಲಿಲ್ಲ. ರಕ್ಕಸ ತಂಗಡಿ ಯುದ್ಧದ ನಂತರ ಹಲವಾರು ಅಮರನಾಯಕರು ತಮ್ಮ ನೆಲೆಯನ್ನು ಕಳೆದುಕೊಂಡು ಕಣ್ಮರೆಯಾದರು.

ಆದರೆ ಈ ವೇಳೆಗೆ ಆರ್ಥಿಕವಾಗಿ ಸೈನಿಕವಾಗಿ ಸದೃಢರಾಗಿದ್ದಂತಹ, ಕೆಳದಿ, ಚಿತ್ರದುರ್ಗ, ಗುಮ್ಮನಾಯಕ ಪಾಳೆಯ, ಬಳ್ಳಾರಿ ಪಾಳೆಯಗಾರರು ಇನ್ನು ಮೊದಲಾದ ಪಾಳೆಯಗಾರರು ಸ್ವತಂತ್ರ ಸಂಸ್ಥಾನಗಳನ್ನು ರೂಪಿಸಿಕೊಂಡು ಪಾಳೆಯಪಟ್ಟುಗಳನ್ನು ನಿರ್ಮಿಸಿಕೊಂಡು ವಿಜಯನಗರ ಕೂಟದಿಂದ ಹೊರಬಂದರು. ಆದರೆ ವಿಜಯನಗರವು ಸಂಪೂರ್ಣ ಭಗ್ನಗೊಂಡರೂ ವಿಜಯನಗರಕ್ಕೆ ನಿಷ್ಠೆಯಿಂದ ಇದ್ದ ಕೆಲವು ನಾಯಕ ಮನೆತನಗಳು ಭಾಗಶಃ ಸ್ವತಂತ್ರರಾದರೂ ವಿಜಯನಗರದ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಅವರ ಆಶ್ರಿತ ನಾಯಕರಾಗಿ ಹಾಗೆಯೇ ಮುಂದುವರಿದರು. ಉದಾ. ಯಲಹಂಕನಾಡ ಪ್ರಭುಗಳು, ಮಧುಗಿರಿಯ ಮಹಾನಾಡ ಪ್ರಭುಗಳು, ಮತ್ತೋಡು ಪಾಳೆಯಗಾರರು, ಹಂಡೆ ಪಾಳೆಯಗಾರರು ಮೊದಲಾದ ನಾಯಕ ಸಂಸ್ಥಾನಗಳು ಅರವೀಡು ಮನೆತನದ ಆಶ್ರಿತರಾಗಿ ಅವರ ನಾಯಕರಾಗಿ ಮುಂದುವರಿದಿದ್ದನ್ನು ಶಾಸನಗಳು ಸ್ಪಷ್ಟಪಡಿಸುತ್ತವೆ. ಒಟ್ಟಿನಲ್ಲಿ ಕ್ರಿ.ಶ. ೧೬೬೮ರ ಅರವೀಡು ಮನೆತನದ ಶ್ರೀರಂಗರಾಯನ ಮರಣದ ನಂತರವೇ ಈ ಅಮರನಾಯಕ ಪದ್ಧತಿಯು ಸಂಪೂರ್ಣವಾಗಿ ಇತಿಹಾಸದ ಪುಟಗಳಿಂದ ಕಣ್ಮರೆಯಾಯಿತು.

೭. ವಿಜಯನಗರೋತ್ತರ ಕಾಲದ ರಾಜಕೀಯ ಪ್ರತಿಕೂಲ ಘಟನೆಗಳು: ವಿಜಯನಗರೋತ್ತರ ಕಾಲದ ನಾಯಕರು ಸಂಪೂರ್ಣವಾಗಿ ಅವನತಿಯಾಗಲು ಕ್ರಿ.ಶ. ೧೮ನೆಯ ಶತಮಾನದ ಕೊನೆಯ ಭಾಗದಲ್ಲಿ ರಾಜಕೀಯವಾಗಿ ಏರ್ಪಟ್ಟ ಪ್ರತಿಕೂಲ ಸನ್ನಿವೇಶಗಳೇ ಕಾರಣವಾದವು. ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬಂದಿದ್ದ ಕೆಳದಿ, ಯಲಹಂಕ, ಚಿತ್ರದುರ್ಗ, ಗುಮ್ಮನಾಯಕನ ಪಾಳೆಯ ಮೊದಲಾದ ಪಾಳೆಯಪಟ್ಟುಗಳ ನಾಯಕರು ಸ್ವತಂತ್ರವಾದ ಯುದ್ಧನೀತಿ ಮತ್ತು ರಕ್ಷಣಾ ವ್ಯವಸ್ಥೆಗಳನ್ನು ಅಳವಡಿಸಿಕೊಂಡಿದ್ದರು. ಬಲಾಢ್ಯವಾದ ಕೋಟೆಗಳ ನಿರ್ಮಾಣ ಮತ್ತು ಅಪಾರವಾಗಿ ಸಂಗ್ರಹಿಸಿಕೊಂಡಿದ್ದ ಮದ್ದುಗುಂಡುಗಳು ಹಾಗೂ ಆರ್ಥಿಕ ಸಂಪತ್ತು ನಾಯಕರನ್ನು ಸ್ವತಂತ್ರರನ್ನಾಗಿಸಿದ್ದಲ್ಲದೇ ಸದಾ ಯುದ್ಧಗಳಲ್ಲಿ ಲೀನವಾಗುವಂತೆ ಮಾಡಿತು. ಹೈದರಾಲಿಯ ರಾಜ್ಯ ವಿಸ್ತರಣೆಗೆ, ಮರಾಠರ ಮತ್ತು ನಿಜಾಮರ ಲೂಟಿಗಳಿಗೆ, ಬ್ರಿಟಿಷರ ಸಾಮ್ರಾಜ್ಯ ವಿಸ್ತರಣೆ ನೀತಿಯನ್ನು ತಡೆಗಟ್ಟುವಲ್ಲಿ ಬಹುತೇಕ ನಾಯಕ ಸಂಸ್ಥಾನಗಳು ವಿಫಲವಾದವು. ಕ್ರಿ.ಶ. ೧೮ನೆಯ ಶತಮಾನದ ಕೊನೆಯ ಭಾಗದಲ್ಲಿ ಏರ್ಪಟ್ಟಂತಹ ರಾಜಕೀಯ ಪ್ರತಿಕೂಲ ಸನ್ನಿವೇಶಗಳನ್ನು ಎದುರಿಸುವಲ್ಲಿ ವಿಫಲರಾದ ಚಿತ್ರದುರ್ಗ, ಕೆಳದಿ, ಯಲಹಂಕ, ಗುಮ್ಮನಾಯಕ ಪಾಳೆಯ, ಹಂಡೆ ಮತ್ತು ಹರತಿ ಪಾಳೆಯಗಾರರು, ಗುಡೇಕೋಟೆಯ ಪಾಳೆಯಗಾರರು ಸಂಪೂರ್ಣ ಅವನತಿ ಹೊಂದಿದರು.

೮. ಮೂರನೇ ಮತ್ತು ನಾಲ್ಕನೇ ಆಂಗ್ಲೋ ಮೈಸೂರು ಯುದ್ಧಗಳು ನಾಯಕರ ಅವನತಿಗೆ ಕಾರಣವಾದವು: ಕ್ರಿ.ಶ. ೧೭೯೨ ಹಾಗೂ ೧೭೯೯ರಲ್ಲಿ ನಡೆದ ಮೂರು ಮತ್ತು ನಾಲ್ಕನೇ ಆಂಗ್ಲೋ ಮೈಸೂರು ಯುದ್ಧಗಳು ವಿಜಯನಗರೋತ್ತರ ಕಾಲದ ನಾಯಕರ ರಾಜಕೀಯ ಅಸ್ತಿತ್ವದ ಮುಂದುವರಿಕೆ ಹಾಗೂ ನಿರ್ನಾಮವಾಗುವುದರಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದವು. ೧೭೯೨ರಲ್ಲಿ ನಡೆದ ಮೂರನೇ ಆಂಗ್ಲೋ ಮೈಸೂರು ಯುದ್ಧದ ಸಮಯದಲ್ಲಿ ಬ್ರಿಟಿಷರು ಕರ್ನಾಟಕದಾದ್ಯಂತ ಆಡಳಿತವನ್ನು ನಡೆಸುತ್ತಿದ್ದ ಸಣ್ಣಪುಟ್ಟ ಪಾಳೆಯಗಾರರೊಂದಿಗೆ ಕೈ ಜೋಡಿಸಿ ಒಪ್ಪಂದ ಮಾಡಿಕೊಂಡರು.

ಒಪ್ಪಂದ ಪ್ರಕಾರ ಹೈದರ್ ಮತ್ತು ಟಿಪ್ಪುಸುಲ್ತಾನನ ದಾಳಿಗೆ ಸಿಲುಕಿ ತಮ್ಮ ಸಂಸ್ಥಾನಗಳನ್ನು ಕಳೆದುಕೊಂಡು ಪಾಳೆಯಗಾರರಿಗೆ ತಮ್ಮ ತಮ್ಮ ಸಂಸ್ಥಾನಗಳನ್ನು ಮರಳಿ ಕೊಡಿಸುವುದು ಹಾಗೂ ಅವರ ಸ್ಥಿತಿಗತಿಗಳನ್ನು ಸುಧಾರಿಸುವುದಾಗಿ ಬ್ರಿಟಿಷರು ಪಾಳೆಯಗಾರರಿಗೆ ಅಭಯ ನೀಡಿದರು. ಚಿತ್ರದುರ್ಗ, ಗುಮ್ಮನಾಯಕ ಪಾಳೆಯ, ಸುಗಟೂರು, ಹಂಡೆ, ತರೀಕೆರೆ, ನಿಡುಗಲ್ಲು, ಮಧುಗಿರಿ, ಪಾವಗಡ ಇನ್ನು ಹಲವಾರು ಪಾಳೆಯಗಾರರು ಬ್ರಿಟಿಷ್ ಗವರ್ನರ್ ಜನರಲ್ ಲಾರ್ಡ್ ಕಾರನ್‌ವಾಲೀಸ್‌ನ ಜೊತೆ ಕೈಜೋಡಿಸಿ ಕ್ರಿ.ಶ. ೧೭೯೨ರಲ್ಲಿ ಮೂರನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಭಾಗಿಯಾಗಿ ಬ್ರಿಟಿಷರಿಗೆ ಜಯವನ್ನು ತಂದುಕೊಟ್ಟರು. ಟಿಪ್ಪುಸುಲ್ತಾನನು ಬ್ರಿಟಿಷರ ವಿರುದ್ಧ ಸೋತು ಅವಮಾನಕರವಾದ ಶ್ರೀರಂಗಪಟ್ಟಣ ಒಪ್ಪಂದಕ್ಕೆ ಸಹಿ ಹಾಕಬೇಕಾಯಿತು. ಮೂರನೇ ಆಂಗ್ಲೋ-ಮೈಸೂರು ಯುದ್ಧದ ತರುವಾಯ ಬ್ರಿಟಿಷರು ಪಾಳೆಯಗಾರರನ್ನು ಟಿಪ್ಪುವಿನ ಕಬಂಧಹಸ್ತದಿಂದ ವಿಮುಕ್ತಿಗೊಳಿಸಿತು. ಬ್ರಿಟಿಷರು ಆಯಾಯ ಪಾಳೆಯಗಾರಿಕೆಗಳಲ್ಲಿ ನಾಯಕರ ಸ್ಥಿತಿಗತಿಗಳನ್ನು ಸ್ವಲ್ಪಮಟ್ಟಿಗೆ ಸುಧಾರಿಸಲು ಪ್ರಯತ್ನಿಸಿದರು. ಕ್ರಿ.ಶ. ೧೭೯೭ರಲ್ಲಿ ಲಾರ್ಡ್ ಹೋಬರ್ಟ್‌ನು ಪಾಳೆಯಗಾರರ ಸ್ಥಿತಿಗತಿಗಳನ್ನು ಕುರಿತು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೆ ವರದಿ ನೀಡಿದನು. ಹಾಗೂ ಪಾಳೆಯಗಾರರ ಸ್ಥಿತಿಗತಿಗಳನ್ನು ಸುಧಾರಿಸಲು ಕೆಲವು ಕ್ರಮಗಳನ್ನು ಕೈಗೊಳ್ಳಲು ಶಿಫಾರಸ್ಸು ಮಾಡಿದನು. ಲಾರ್ಡ್ ಹೋಬರ್ಟ್‌ನ ವರದಿಗೆ ಅನುಗುಣವಾಗಿ ಬ್ರಿಟಿಷರು ಪಾಳೆಯಗಾರರ ಸೈನ್ಯವನ್ನು ನಿಯಂತ್ರಿಸಿ, ಅವರ ಸಂಸ್ಥಾನಗಳಿಗೆ ತಕ್ಕಂತೆ ಕಂದಾಯವನ್ನು ನಿಗದಿಪಡಿಸಿ ವಿಶ್ರಾಂತಿ ವೇತನವನ್ನು ಜಾರಿಗೊಳಿಸಿದರು. ಸ್ವಾಭಿಮಾನಿಗಳು, ಸ್ವತಂತ್ರಪ್ರಿಯರು ಆಗಿದ್ದ ಪಾಳೆಯಗಾರರು ತಮ್ಮೆಲ್ಲ ರಾಜಕೀಯ ಹಕ್ಕುಗಳನ್ನು ಕಳೆದುಕೊಂಡು ಬ್ರಿಟಿಷರಿಂದ ನಿವೃತ್ತಿ ವೇತನ ಪಡೆದು ಜನಸಾಮಾನ್ಯರಂತೆ ಬದುಕುವ ದುಸ್ಥಿತಿಯನ್ನು ತಲುಪಿದರು.

ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧದ ತರುವಾಯ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಪೂರ್ಣಯ್ಯನವರು ಬ್ರಿಟಿಷರಿಗೆ ಸಹಾಯ ಮಾಡಿದ ಬಹುತೇಕ ನಾಯಕ ಸಂಸ್ಥಾನಗಳನ್ನು ನಾಯಕರಿಗೆ ಹಿಂತಿರುಗಿಸದೇ ಮೈಸೂರು ಸಂಸ್ಥಾನದಲ್ಲಿ ವಿಲೀನಗೊಳಿಸಿಕೊಂಡರು. ಈ ವೇಳೆಗೆ ಬ್ರಿಟಿಷರು ಪಾಳೆಯಗಾರರಿಗೆ ವಿಶ್ರಾಂತಿ ವೇತನವನ್ನು ನಿಗದಿಪಡಿಸಿಕೊಟ್ಟಿದ್ದರಿಂದ ಮೈಸೂರು ಸಂಸ್ಥಾನವು ಕೂಡ ವಿಶ್ರಾಂತಿ ವೇತನವನ್ನು ಪಾಳೆಯಗಾರರಿಗೆ ಮುಂದುವರಿಸಿತು. ಹಾಗೂ ಉತ್ತರಾಧಿಕಾರ ಸೌಲಭ್ಯವನ್ನು ನೀಡಿತು. ಹಾಗೂ ವಿಶ್ರಾಂತಿ ವೇತನ ನಿಮಿತ್ತವಾಗಿ ದತ್ತಕ ಸ್ವೀಕಾರಕ್ಕೆ ಅನುಮತಿಯನ್ನು ಸಹ ನೀಡಿತು. ಆದರೆ ರಾಜಕೀಯ ಪರಮಾಧಿಕಾರ ಕಳೆದುಕೊಂಡ ನಾಯಕರ ವಿಶ್ರಾಂತಿ ವೇತನ ಪಡೆಯುತ್ತ ಮೂಲೆಗುಂಪಾದರು.

ಪರಿಣಾಮಗಳು

ಕ್ರಿ.ಶ. ೧೩೩೬ರಲ್ಲಿ ಆರಂಭಗೊಂಡ ವಿಜಯನಗರ ಸಾಮ್ರಾಜ್ಯ ತನ್ನ ಆಳ್ವಿಕೆಯ ಕಾಲದಲ್ಲಿ ನೂರಾರು ಸಾಮಂತ ರಾಜಮನೆತನಗಳು ಅಸ್ತಿತ್ವಕ್ಕೆ ಬರಲು ದಾರಿ ಮಾಡಿಕೊಟ್ಟಿತು. ವಿಜಯನಗರವು

ತನ್ನ ಆಡಳಿತ ವರ್ಗಕ್ಕೆ ಉಂಬಳಿಯಾಗಿ ನೀಡುತ್ತಿದ್ದ ಭೂ ಹಿಡುವಳಿಗಳು ಅಮರನಾಯಕರೆಂಬ ಹೊಸ ಭೂಮಾಲೀಕ ವರ್ಗ ಹುಟ್ಟಿಕೊಳ್ಳಲು ಕಾರಣವಾಯಿತು. ಹಾಗೂ ವಿಜಯನಗರದ ಪತನಕ್ಕೆ ಕಾರಣವಾದ ಕ್ರಿ.ಶ. ೧೫೬೫ರ ರಕ್ಕಸಗಿ ತಂಗಡಗಿ ಯುದ್ಧದಲ್ಲಿ ಬಹು ದೊಡ್ಡ ನಿರ್ಣಾಯಕ ಪಾತ್ರವನ್ನು ವಹಿಸಿತು. ಈ ಯುದ್ಧದ ತರುವಾಯ ಬಹುತೇಕ ಅಮರನಾಯಕರು ಸ್ವತಂತ್ರರಾಗಿ ತಮ್ಮದೇ ಆದ ರಾಜಕೀಯ ಸಂಸ್ಥಾನಗಳನ್ನು ಸ್ಥಾಪಿಸಿಕೊಂಡರು. ಹೀಗೆ ಸ್ವತಂತ್ರಗೊಂಡ ನಾಯಕರು ತಮ್ಮ ರಾಜಕೀಯ ಪರಮಾಧಿಕಾರವನ್ನು ೧೭ನೇ ಶತಮಾನದ ಉತ್ತರಾರ್ಧದಲ್ಲಿ ಅಧಿಕಾರಕ್ಕೆ ಬಂದ ಹೈದರಾಲಿಯಿಂದ ಕಳೆದುಕೊಂಡರು. ಹೈದರಾಲಿಯ ಮರಣದ ನಂತರ ಟಿಪ್ಪುಸುಲ್ತಾನನು ಹಾಗೂ ಬ್ರಿಟಿಷರು ನಾಯಕರು ಸಂಪೂರ್ಣ ನೆಲೆಕಚ್ಚುವಂತೆ ಮಾಡಿದರು. ಮೈಸೂರು ಸಂಸ್ಥಾನವು ೪ನೇ ಆಂಗ್ಲೋ-ಮೈಸೂರು ಯುದ್ಧದ ನಂತರ ಪಾಳೆಯಗಾರರನ್ನು ನಿರ್ನಾಮ ಮಾಡುವಲ್ಲಿ ಬಹುದೊಡ್ಡ ಪಾತ್ರವನ್ನು ವಹಿಸಿತು. ಹೀಗೆ ನಾಯಕರ ಮೇಲೆ ನಡೆದ ಸತತವಾದ ಆಕ್ರಮಣಗಳು ಅವರು ರಾಜಕೀಯ ನೆಲೆಯನ್ನು ಕಳೆದುಕೊಳ್ಳುವಲ್ಲಿ ಪ್ರಧಾನ ಪಾತ್ರ ವಹಿಸಿತು. ಬ್ರಿಟಿಷರು ಬೇಟೆಯಾಡವುದನ್ನು ನಿಷೇದಿಸಿದ್ದರಿಂದ ಬೇಟೆಯನ್ನು ಅವಲಂಬಿಸಿದ್ದ ನಾಯಕ ಮನೆತನಗಳು ತೊಂದರೆಗೆ ಗುರಿಯಾದರು. ಸ್ವಾಭಿಮಾನಿಗಳು, ಸ್ವತಂತ್ರಪ್ರಿಯರು ಆಗಿದ್ದ ನಾಯಕರು ಬ್ರಿಟಿಷರ ವಿರುದ್ಧ ದಂಗೆ ಎದ್ದರು. ಆದರೆ ನಾಯಕರ ದಂಗೆಯನ್ನು ಅಡಗಿಸುವಲ್ಲಿ ಯಶಸ್ವಿಯಾದ ಬ್ರಿಟಿಷರು ಕಾಲಕ್ರಮೇಣ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಪಾಳೆಯಗಾರರಿಗೆ ನೀಡುತ್ತಿದ್ದ ವಿಶ್ರಾಂತಿ ವೇತನಗಳನ್ನು ಕಿತ್ತುಕೊಂಡಿತು.

ಹೀಗೆ ಬ್ರಿಟಿಷರಿಂದ ಆರ್ಥಿಕವಾಗಿ, ರಾಜಕೀಯವಾಗಿ ಸಂಕಷ್ಟಗಳಿಗೆ ಗುರಿಯಾದ ನಾಯಕರು ವ್ಯವಸಾಯ ಮತ್ತು ಪಶುಪಾಲನೆಯನ್ನು ನಂಬಿ ಜೀವನ ನಡೆಸುವ ದುಸ್ಥಿತಿಗೆ ಇಳಿಯಬೇಕಾಯಿತು. ಪಾಳೆಯಗಾರರ ದುಸ್ಥಿತಿಯನ್ನು ಕಣ್ಣಾರೆ ಕಂಡ ಬ್ರಿಟಿಷ್ ಅಧಿಕಾರಿ ಫ್ರಾನ್ಸಿಸ್ ಬುಕಾನನ್ ತನ್ನ ವರದಿಯಲ್ಲಿ ಈ ರೀತಿ ಪ್ರಸ್ತಾಪಿಸಿದ್ದಾನೆ.

At present as they recieve no pay, the are obliged to apply more closely to agriculture; for in that way they always employed their leisure; and there is a prospect of their becoming a quiet and industrious people, although they still retain their arms and an anxious desire for plunder.

ಹೀಗೆ ರಾಜಕೀಯವಾಗಿ ತಮ್ಮ ನೆಲೆಗಳನ್ನು ಕಳೆದುಕೊಂಡ, ಆರ್ಥಿಕವಾಗಿ ತಮ್ಮ ಭೂಮಿಗಳ ಭೂಮಾಲೀಕತ್ವವನ್ನು ಕಳೆದುಕೊಂಡ ಬಹುತೇಕ ನಾಯಕ ಸಂಸ್ಥಾನಗಳು ನಿರ್ನಾಮವಾದವು. ಈ ಸಂಸ್ಥಾನಗಳ ವಂಶಸ್ಥರು ಜನಸಾಮಾನರಲ್ಲಿ ಜನಸಾಮಾನ್ಯರಾಗಿ ಬದುಕಬೇಕಾಗಿ ಅನಿವಾರ್ಯತೆಗೆ ಬಂದು ತಲುಪಿಸಿದರು. ಕರ್ನಾಟಕದಲ್ಲಿ ಚಿತ್ರದುರ್ಗ, ಮತ್ತೋಡು, ಹರತಿ, ಗುಮ್ಮನಾಯಕ ಪಾಳೆಯ, ಹಂಡೆ, ನಾಯಕನಹಟ್ಟಿ, ಗುಡೇಕೋಟೆ, ಜರೀಮಲೆ, ಕನಕಗಿರಿ, ಗುಡಗಂಟಿ ಮೊದಲಾದ ನಾಯಕ ಸಂಸ್ಥಾನಗಳ ವಂಶಸ್ಥರಿದ್ದು ಸಾಮಾನ್ಯ ಜನರಾಗಿ ಜೀವಿಸುತ್ತಿದ್ದಾರೆ.

ಕೊನೆ ಟಿಪ್ಪಣಿಗಳು

೧. ವಿಜಯ್ ಪೂಣಚ್ಚ ತಂಬಂಡ (ಸಂ), ಭಾರತ ಉಪಖಂಡದ ಆಧುನಿಕ ಪೂರ್ವ ಚರಿತ್ರೆ, ಸಂಪುಟ–೨, ಪು. ೪೫೯.

೨. ದುರುಗಪ್ಪ ಎಂ.ಕೆ., ವಿಜಯನಗರೋತ್ತರ ಕಾಲದ ಬೇಡ ಜನಾಂಗದ ಸ್ಥಿತ್ಯಂತರಗಳು, ಪು. ೮೧.

೩. ರಾಜಶೇಖರಪ್ಪ ಬಿ. ಇತಿಹಾಸ ಕಥನ, ಪು. ೮೪

೪. ಬಾಗೂರು ಆರ್. ನಾಗರಾಜಪ್ಪ, ಹೊಸದುರ್ಗದ ಸುತ್ತ, ಪು. ೧೫೦.

೫. ಮತ್ತೋಡಿನ ಪಾಳೆಯಗಾರರು, ಕರ್ನಾಟಕದ ಅರಸು ಮನೆತನಗಳು, ಪು. ೧೭೫

೬. ಮೂರ್ತಿ ಕೆ.ಎಲ್.ಎನ್. ತುಮಕೂರು ಜಿಲ್ಲೆಯ ಪಾಳೆಯಪಟ್ಟುಗಳು, ಪು. ೩೯೫.

೭. Krishnaswami ayyar, Sourcess of the Vijayanagara history, p. 181

೮. ಶ್ಯಾಮಲಾ ಸಿ.ಆರ್., ಪೂರ್ವ ಕರ್ನಾಟಕದ ಪಾಳೆಯಗಾರರು, ಪು. ೧೬.

೯. ಕೊಟ್ರೇಶ್ ಎಂ., ಬಳ್ಳಾರಿ ಜಿಲ್ಲೆಯ ಕೋಟೆಗಳು, ಪು. ೬೧.

೧೦. ಪಾಟೀಲ ಎಸ್.ಸಿ., ಬಳ್ಳಾರಿ ಹಂಪೆ ಪಾಳೆಯಗಾರರ ಐತಿಹಾಸಿಕ ಹಿನ್ನೆಲೆ, ವಿಜಯನಗರ ಸಂಪುಟ–೧೨, ಪು. ೩೨೭.

೧೧. ಕೃಷ್ಣರಾವ್ ಮತ್ತು ಕೇಶವಭಟ್ಟ, ಕರ್ನಾಟಕ ಇತಿಹಾಸ ದರ್ಶನ, ಪು. ೪೮೨.

೧೨. ಅದೇ ಪೂರ್ವೋಕ್ತ, ಪು. ೪೮೯.

೧೩. ಶೇಕ್ ಮಸ್ತಾನ್, ದಕ್ಷಿಣ ಕರ್ನಾಟಕದ ಅರಸು ಮನೆತನಗಳು (ಲೇ), ಪು. ೩೪೬.

೧೪. ಕೃಷ್ಣ ಬಿ.ಆರ್., ಐತಿಹಾಸಿಕ ಗುಮ್ಮನಾಯಕನ ಪಾಳ್ಯ, ಪು. ೪೨.

೧೫. ಶಿವಣ್ಣ ಕೆ.ಎಸ್. (ಸಂ), ಕರ್ನಾಟಕ ಚರಿತ್ರೆ ಸಂಪುಟ–೨, ಪು. ೧೧೯.

೧೬. ಅದೇ, ಪೂರ್ವೋಕ್ತ, ಪು. ೧೨೦.

೧೭. ಅದೇ, ಪೂರ್ವೋಕ್ತ, ಪು. ೧೨೧.

೧೮. ನಿರ್ಮಲ್ ರಾಜು, ದಕ್ಷಿಣ ಕರ್ನಾಟಕದ ಅರಸು ಮನೆತನಗಳು (ಲೇ) ಪು. ೪೧೯.

೧೯. ಶಿವಣ್ಣ ಕೆ. (ಸಂ), ಪೂರ್ವೋಕ್ತ, ಪು. ೧೨೧.

೨೦. ಕೃಷ್ಣರಾವ್ ಮತ್ತು ಕೇಶವಭಟ್ಟ (ಸಂ), ಪೂರ್ವೋಕ್ತ, ಪು. ೪೯೧.

೨೧. ಶ್ಯಾಮಲಾ ಸಿ.ಆರ್., ಪೂರ್ವೋಕ್ತ, ಪು. ೧೫೩.

೨೨. ಶ್ರೀನಿವಾಸ ಜಿ.ಎಮ್., ಗುಬ್ಬಿ ಹೊಸಹಳ್ಳಿ ಸಂಸ್ಥಾನದ ಪಾಳೆಯಗಾರರು, ಪು. ೨೧೫.

೨೩. ಕೃಷ್ಣರಾವ್ ಮತ್ತು ಕೇಶವಭಟ್ಟ (ಸಂ), ಕರ್ನಾಟಕ ಇತಿಹಾಸ ದರ್ಶನ, ಸಂಪುಟ–೧, ಪು. ೪೭೨.

೨೪. ಅದೇ, ಪೂರ್ವೋಕ್ತ, ಪು. ೨೫೧.

೨೫. ಸುಂದರ ಅ. ಕೆಳದಿ ಅರಸರ ಕಾಲದ ವಾಸ್ತು ಮತ್ತು ಮೂರ್ತಿಶಿಲ್ಪ, ಪು. ೨೮.

೨೬. ಅದೇ, ಪೂರ್ವೋಕ್ತ, ಪು. ೨೩.

೨೭. ಎಪಿಗ್ರಾಫಿಯಾ ಕರ್ನಾಟಿಕಾ, ಸಂ. ೧೨, ಮೈಸೂರು ವಿಶ್ವವಿದ್ಯಾನಿಲಯ, ಪು. ೪೭೨, ೪೭೩.

೨೮. ಬುಕಾನನ್, ಎ ಜರ್ನಿ ಫ್ರಮ್ ಮೈಸೂರು, ಕೆನರಾ ಮಲಬಾರ್, ಸಂಪುಟ–೧, ಪು. ೧೪೭.

೨೯. ಶ್ರೀನಿವಾಸ ಎಂ.ವಿ., ಚನ್ನಪಟ್ಟಣ ಪಾಳೆಯಗಾರರು (ಲೇ), ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪು. ೩೦೯.

೩೦. ಕೃಷ್ಣರಾವ್ ಮತ್ತು ಕೇಶವಭಟ್ಟ (ಸಂ), ಪೂರ್ವೋಕ್ತ, ಪು. ೩೫೦.

೩೧. ಶಿವಣ್ಣ ಕೆ. (ಸಂ), ಪೂರ್ವೋಕ್ತ ಪು. ೨೧೦.

೩೨. ಶೈಲಜ (ಸಂ), ಪಾಳೆಯಗಾರರ ಶಾಸನಗಳು, ಸಂಪುಟ–೨, ಪು. XVIII.

೩೩. ವಿಜಯ್ ಟಿ.ಪಿ. ಹಾಲೇರಿ ಅರಸರು (ಲೇ), ಮಲೆಕರ್ನಾಟಕದ ಅರಸು ಮನೆತನಗಳು, ಪು. ೩೧೧.

೩೪. ಅದೇ ಪೂರ್ವೋಕ್ತ, ಪು. ೩೧೧.

೩೫. ನಾಗರಾಜ್ ಎಂ.ಜಿ., ಕೊಡಗಿನ ಹಾಲೇರಿ ರಾಜವಂಶ (ಲೇ), ಪು. ೨೪೮.

೩೬. ಕೃಷ್ಣರಾವ್ ಮತ್ತು ಕೇಶವಭಟ್ಟ (ಸಂ), ಪೂರ್ವೋಕ್ತ, ಪು. ೪೬೮.

೩೭. ರಾಮಭಟ್ಟ ಬಿ.ಎಸ್. ಬೆಳಗುತ್ತಿ ಅರಸರು (ಲೇ), ಇತಿಹಾಸ ದರ್ಶನ, ಸಂಪುಟ–೧೪, ಪು. ೨೮೬.

೩೮. ಅದೇ, ಪೂರ್ವೋಕ್ತ, ಪು. ೨೪೮.

೩೯. ದುರುಗಪ್ಪ ಎಂ.ಕೆ., ಪೂರ್ವೋಕ್ತ, ಪು. ೧೩೬

೪೦. ಶ್ಯಾಮಲಾ ಸಿ.ಆರ್., ಪೂರ್ವೋಕ್ತ, ಪು. ೧೦೮.

೪೧. ಕೃಷ್ಣರಾವ್ ಮತ್ತು ಕೇಶವಭಟ್ಟ (ಸಂ), ಪೂರ್ವೋಕ್ತ, ಪು. ೫೦೦.

೪೨. ಬುಕಾನನ್, ಅದೇ, ಪೂರ್ವೋಕ್ತ, ಪು. ೨೪೮–೨೪೯

❖❖❖

ಅಧ್ಯಾಯ : ಎಂಟು

ಸಮಾರೋಪ

ಅನುಬಂಧಗಳು

ವಂಶಾವಳಿ

ನಕ್ಷೆಗಳು

ಪರಾಮರ್ಶನ ಗ್ರಂಥಗಳು

ಛಾಯಾಚಿತ್ರಗಳು

ಅಧ್ಯಾಯ: ಎಂಟು

ಸಮಾರೋಪ

ವಿಜಯನಗರದ ಚರಿತ್ರೆಯೆಂದರೆ ರಾಜ ಮಹಾರಾಜರುಗಳ ಭವ್ಯ ಚರಿತ್ರೆಯೆಂಬ ತಪ್ಪು ಗ್ರಹಿಕೆಯಿದೆ. ಕ್ರಿ.ಶ. ೧೩೩೬ರಲ್ಲಿ ಸ್ಥಾಪಿಸಲ್ಪಟ್ಟು ೧೬೬೮ರವರೆಗೂ ಸಂಗಮ, ಸಾಳುವ, ತುಳುವ, ಅರವೀಡು ಮನೆತನಗಳಿಂದ ಆಳಲ್ಪಟ್ಟ ವಿಜಯನಗರವು ದೇಶ ವಿದೇಶಗಳಲ್ಲಿ ಪ್ರಸಿದ್ಧಿಯಾಗಿರುವ ಚರಿತ್ರೆಯಾಗಿದೆ. ದಕ್ಷಿಣ ಭಾರತದ ಬಹುತೇಕ ಭೂ ಭಾಗವನ್ನು ತನ್ನ ಆಡಳಿತ ವ್ಯಾಪ್ತಿಗೆ ಒಳಪಡಿಸಿಕೊಂಡಿದ್ದ ವಿಜಯನಗರವು ತನ್ನ ಸುಗಮ ಆಡಳಿತ ವ್ಯವಸ್ಥೆಗಾಗಿ ಅಳವಡಿಸಿಕೊಂಡ ವ್ಯವಸ್ಥೆಯೇ ಅಮರನಾಯಕ ಪದ್ಧತಿ. ವಿಜಯನಗರ ರಾಜ್ಯಾಡಳಿತ ಭದ್ರವಾದ ಬುನಾದಿಯಾಗಿದ್ದು ಮಾತ್ರ ಅಮರನಾಯಕ ಪದ್ಧತಿಯೇ. ಹೀಗಾಗಿಯೇ ವಿಜಯನಗರದ ರಾಜ ಮಹಾರಾಜರುಗಳ ಭವ್ಯ ಚರಿತ್ರೆಯೊಳಗೆ ಅಮರನಾಯಕರೆಂಬ ಸ್ಥಳೀಯ ಮಟ್ಟದ ಊಳಿಗಮಾನ್ಯ ದೊರೆಗಳ ಚರಿತ್ರೆಯು ಅಡಕಗೊಂಡಿದೆ. ಈ ವಿಜಯನಗರದ ರಾಜಕೀಯ ಚರಿತ್ರೆ, ಆಡಳಿತ, ಕಲೆ ಮತ್ತು ವಾಸ್ತುಶಿಲ್ಪ, ಸಾಹಿತ್ಯ ಮೊದಲಾದ ವಿಷಯಗಳ ಕುರಿತು ರಚನೆಯಾದ ಕೃತಿಗಳು ಸಾಕಷ್ಟಿವೆ. ಆದರೆ ಇಡೀ ವಿಜಯನಗರ ಸಾಮ್ರಾಜ್ಯದ ಅಡಿಪಾಯವಾದ ನಾಯಕರ ಬಗೆಗಿನ ಚರಿತ್ರೆಯು ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೆ ಗುರಿಯಾಗಿದೆ. ಪ್ರಸ್ತುತ ಕರ್ನಾಟಕದ ಮಟ್ಟಿಗಂತೂ ಇದು ಅಕ್ಷರಶಃ ನಿಜವಾಗಿದೆ. ವಿಜಯನಗರ ಕಾಲದ ಸಾವಿರಾರು ಶಾಸನಗಳು, ಲಿಖಿತ ಸಾಹಿತ್ಯ ಆಧಾರಗಳು, ಕಾವ್ಯಗಳು, ಸಮಕಾಲೀನ ಸಾಹಿತ್ಯ ಕೃತಿಗಳು, ಸ್ಮಾರಕಗಳು, ವಿಜಯನಗರ ಕಾಲದ ಅಮರನಾಯಕರ ಕುರಿತು ಸಾಕಷ್ಟು ಮಾಹಿತಿಗಳ ಮೇಲೆ ಬೆಳಕು ಚೆಲ್ಲುತ್ತವೆ. ವಿಜಯನಗರದ ರಾಜಕೀಯ ವ್ಯವಸ್ಥೆ, ಅವರ ಆಡಳಿತ ವ್ಯವಸ್ಥೆಯನ್ನು ಕುರಿತು ಅಧ್ಯಯನ ಮಾಡುವವರಿಗೆ ಈ ದಾಖಲೆಗಳು ಮಹತ್ವ ಪೂರ್ಣವೆನಿಸುತ್ತವೆ.

ವಿಜಯನಗರ ಕಾಲದ ಅಮರನಾಯಕರು ಸಾಮ್ರಾಜ್ಯದ ಅರಸನಿಂದ "ಅಮರಂ" ಗಳನ್ನು(ಸೇನಾಸೇವೆಗಾಗಿ ನೀಡಿದ ಭೂಮಿ) ಪಡೆದು ಅಮರನಾಯಕರೆನಿಸಿಕೊಳ್ಳುತ್ತಿದ್ದರು. ವಿಜಯನಗರದಲ್ಲಿ ರೂಢಿಯಲ್ಲಿದ್ದ ಅಮರನಾಯಕ ಪದ್ಧತಿಯು ಹೊಸತೇನು ಆಗಿರಲಿಲ್ಲ. ವಿಜಯನಗರದ ಸಾಮ್ರಾಜ್ಯದ ಸ್ಥಾಪನೆಗೂ ಪೂರ್ವದಲ್ಲಿಯೇ ಅಂದರೆ ಹೊಯ್ಸಳರ ಮತ್ತು ಕಾಕತೀಯರ ಕಾಲದಲ್ಲಿಯೇ

ನಾಯಕತನ ನೀಡುವ ಪದ್ಧತಿಯು ಜಾರಿಯಲ್ಲಿತ್ತು ಎಂಬುದನ್ನು ಸಮಕಾಲೀನ ಶಾಸನ ಮತ್ತು ಸಾಹಿತ್ಯಾಧಾರಗಳು ಸ್ಪಷ್ಟಪಡಿಸುತ್ತವೆ. ಹೊಯ್ಸಳರು ಮತ್ತು ಕಾಕತೀಯರ ಕಾಲಕ್ಕಿಂತ ನಾಯಕತನ ವ್ಯವಸ್ಥೆಯು ಹೆಚ್ಚು ರೂಢಿಗೆ ಬಂದಿದ್ದು ವಿಜಯನಗರ ಕಾಲದಲ್ಲಿಯೇ; ಅದರಲ್ಲಿಯೂ ತುಳುವ ವಂಶದ ಕಾಲದಲ್ಲಿ ನಾಯಕತನ ವ್ಯವಸ್ಥೆಯು ಪ್ರವರ್ಧಮಾನಕ್ಕೆ ತಲುಪಿತ್ತು. ವಿಜಯನಗರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ನಾಯಕನ/ಅಮರನಾಯಕತನವನ್ನು ಸಂಗಮ ವಂಶದ ಹರಿಹರರಾಯ ಮತ್ತು ಬುಕ್ಕರಾಯರು ಆರಂಭಿಸಿದರು/ ಈ ವಂಶದ ಹರಿಹರರಾಯ ತನ್ನ ಆಡಳಿತಾವಧಿಯಲ್ಲಿ ಹೆಚ್ಚು ಭೂಮಿಗಳನ್ನು ಬ್ರಹ್ಮದೇಯ, ದೇವಾದಾಯಗಳಿಗೆ ನೀಡಿದನು. ಹಾಗೂ ತನ್ನ ಅಧಿಕಾರಿ ವರ್ಗ ಮತ್ತು ಸ್ಥಳೀಯ ಮಟ್ಟದ ಆಡಳಿತಗಾರರಿಗೆ ಅವರ ಸೇವೆಗಾಗಿ ಪ್ರತಿಫಲವಾಗಿ ಉಂಬಳಿಗಳನ್ನು ನೀಡಿರುವುದನ್ನು ಗಮನಿಸಿದಾಗ ಬಹುಶಃ ಹರಿಹರರಾಯನು ಹೊಯ್ಸಳರ ಮತ್ತು ಕಾಕತೀಯ ಕಾಲದ ನಾಯಕ ಪದ್ಧತಿಯನ್ನು ಪರಿಷ್ಕರಿಸಿಕೊಂಡು ಊಳಿಗಮಾನ್ಯ ತತ್ವಗಳ ಅಡಿಯಲ್ಲಿ ಕಾರ್ಯ ನಿರ್ವಹಿಸಿರುವುದು ಸ್ಪಷ್ಟವಾಗುತ್ತದೆ. ಹರಿಹರರಾಯನ ನಂತರ ಅಧಿಕಾರಕ್ಕೆ ಬಂದ ಮೊದಲನೆ ಬುಕ್ಕರಾಯನು ಅಮರನಾಯಕ ಪದ್ಧತಿಯನ್ನು ಅಳವಡಿಸಿಕೊಂಡಿರುವುದಕ್ಕೆ ಸಾಕಷ್ಟು ಶಾಸನಗಳು ಸಮರ್ಥನೆಯನ್ನು ನೀಡುತ್ತವೆ. ಹೀಗಾಗಿ ಅಮರನಾಯಕತನ ಪದ್ಧತಿಯನ್ನು ಅಧಿಕೃತವಾಗಿ ಜಾರಿಗೆ ತಂದಿದ್ದು ಒಂದನೇ ಬುಕ್ಕರಾಯ ಎಂಬುದನ್ನು ಒಪ್ಪಬೇಕಾಗುತ್ತದೆ. ಹೀಗೆ ಮೊದಲನೆ ಬುಕ್ಕರಾಯನಿಂದ ಆರಂಭಗೊಂಡ ಅಮರನಾಯಕ ಪದ್ಧತಿಯು ಎರಡನೇ ಹರಿಹರ, ಒಂದನೇ ದೇವರಾಯ, ಎರಡನೇ ದೇವರಾಯ, ಮಲ್ಲಿಕಾರ್ಜುನ, ವಿರೂಪಾಕ್ಷನ ಕಾಲದವರೆಗೂ ಮುಂದುವರೆದಿರುವುದನ್ನು ಶಾಸನಗಳು ದೃಢೀಕರಿಸುತ್ತವೆ. ಸಾಳುವ ವಂಶ ಮತ್ತು ತುಳುವ ವಂಶಗಳು ನಾಯಕತನ ನೀಡುವ ಪದ್ಧತಿಯನ್ನು ಹಾಗೆಯೇ ಮುಂದುವರಿಸಿದವು. ತುಳುವ ವಂಶದ ಕೃಷ್ಣದೇವರಾಯನ ಕಾಲದಲ್ಲಿಯೇ ಸುಮಾರು ಇನ್ನೂರಕ್ಕೆ ಹೆಚ್ಚು ನಾಯಕರಿರುವುದು ಈ ಪದ್ಧತಿಯ ಜನಪ್ರಿಯತೆಗೆ ನಿದರ್ಶನವಾಗಿದೆ. ಕ್ರಿ.ಶ. ೧೫೬೫ ರಕ್ಕಸಗಿ ತಂಗಡಿಗಿ ಯುದ್ಧದ ನಂತರ ಅಧಿಕಾರಕ್ಕೆ ಬಂದ ಅರವೀಡು ಮನೆತನದ ಅವಧಿಯಲ್ಲಿಯೂ ಈ ನಾಯಕತನ ನೀಡುವ ಪದ್ಧತಿಯು ಹಿಂದಿನಂತೆಯೇ ಮುಂದುವರೆದುಕೊಂಡು ಬಂದಿತು. ಆದರೆ ಈ ವೇಳೆಗೆ ಅಂದರೆ ೧೫೬೫ರ ಯುದ್ಧದ ನಂತರ ವಿಜಯನಗರದ ಒಕ್ಕೂಟದಿಂದ ಹೊರಬಂದ ಬಹುತೇಕ ನಾಯಕರು ಸ್ವಯಂ ಅಧಿಪತ್ಯದ ಪಾಳೆಯ ಪಟ್ಟುಗಳನ್ನು ಸ್ಥಾಪಿಸಿಕೊಂಡರು. ಅರವೀಡು ಮನೆತನದ ಶಾಖೆಯ ಕೊನೆಯ ದೊರೆ ೩ನೇ ಶ್ರೀರಂಗನು ಶ್ರೀರಂಗಪಟ್ಟಣದಲ್ಲಿ ವಿಜಯನಗರದ ರಾಜನಾಗಿ ಆಳುತ್ತಿದ್ದನು. ಕ್ರಿ.ಶ. ೧೬೧೦ರ ಬೇಲೂರು ಕದನದ ನಂತರ ಮೈಸೂರು ಒಡೆಯರಿಗೆ ಶ್ರೀರಂಗರಾಯನು ಸೋತುಹೋದನು. ಈ ಯುದ್ಧದ ತರುವಾಯ ವಿಜಯನಗರ ಕೊನೆಯ ಮನೆತನವಾದ ಅರವೀಡು ಸಂತತಿಯು ಸಂಪೂರ್ಣವಾಗಿ ಅವನತಿಗೀಡಾಯಿತು. ಇಲ್ಲಿಂದ ಮುಂದೆ ಅಂದರೆ ೧೮ನೇ ಶತಮಾನದ ಕೊನೆಯ ಭಾಗದವರೆಗೂ ಪಾಳೆಯಗಾರರೇ ವಿಜಯನಗರೋತ್ತರ ಕಾಲದ ರಾಜಕೀಯ ಇತಿಹಾಸದ ಮುಖ್ಯವಾಹಿನಿಯಲ್ಲಿದ್ದರು.

ಈ ವೇಳೆಗೆ ದಕ್ಷಿಣ ಭಾರತಕ್ಕೆ ಬ್ರಿಟಿಷರ ಆಗಮನವಾಗಿತ್ತು. ಕರ್ನಾಟಕದಲ್ಲಿಯೂ ಬ್ರಿಟಿಷರು ರಾಜಕೀಯ ನೆಲೆಯನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದರು. ಮೈಸೂರು ಒಡೆಯರನ್ನು ಬದಿಗೊತ್ತಿ ಸರ್ವಾಧಿಕಾರಿಯಾಗಿದ್ದ ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಬ್ರಿಟಿಷರ ರಾಜಕೀಯ ಹಿತಾಸಕ್ತಿಗಳಿಗೆ ಬಹುದೊಡ್ಡ ತೊಡಕಾಗಿದ್ದರು. ಈ ಸಂದರ್ಭದಲ್ಲಿ ಮರಾಠರ. ಮೊಗಲರ, ನಿಜಾಮರ ರಾಜಕೀಯ ಪ್ರೇರಿತ ಯುದ್ಧಗಳು, ದಾಳಿಗಳು ಅಮರನಾಯಕ ಮನೆತನಗಳನ್ನು ನಿರ್ನಾಮಗೊಳಿಸಿದವು. ಈ ಎಲ್ಲ ಅಂಶಗಳು ಕರ್ನಾಟಕದ ಇತಿಹಾಸದ ಮೇಲೆ ಮಹತ್ತರವಾದ ತಿರುವುಗಳನ್ನು ಈ ಅವಧಿಯಲ್ಲಿ ನೀಡಿದವು.

ವಿಜಯನಗರ ಕಾಲದ ಅಮರನಾಯಕರು ಮೂಲತಃ ಸೈನ್ಯಾಧಿಕಾರಿಗಳು; ಸೈನಿಕ ಸೇವೆಯನ್ನು ಒದಗಿಸುವ ಷರತ್ತಿನ ಮೇಲೆ ಅವರು ವಿಜಯನಗರದ ಅರಸರಿಂದ ಭೂಮಿಯನ್ನು ಪಡೆದುಕೊಂಡು ಭಾಗಶಃ ಆ ಭೂಮಿಗೆ ಒಡೆಯರಾಗುತ್ತಿದ್ದರು. ತಮ್ಮ ಪ್ರದೇಶದ ಆಡಳಿತ ವ್ಯಾಪ್ತಿಯಲ್ಲಿ ಬರುವ ಎಲ್ಲ ಕೃಷಿಕರ ಮೇಲೆ ನೇರವಾದ ನಿಯಂತ್ರಣವನ್ನು ಹೊಂದಿರುತ್ತಿದ್ದರು. ಹಾಗೂ ಕೃಷಿ ಉತ್ಪನ್ನಗಳ ಮೇಲೆ ೧/೩ ಭಾಗವನ್ನು ತೆರಿಗೆಯಾಗಿ ವಿಧಿಸುತ್ತಿದ್ದರು. ಕೃಷಿ ಉತ್ಪನ್ನಗಳ ಮೇಲೆ ತೆರಿಗೆಯನ್ನು ವಿಧಿಸುವುದು ಮತ್ತು ವಸೂಲಿ ಮಾಡುವುದು ಇವರ ಜವಾಬ್ದಾರಿಯಾಗಿತ್ತು. ತಮ್ಮ ಪ್ರದೇಶಗಳ ವ್ಯಾಪ್ತಿಯಲ್ಲಿ ಬರುವ ತೆರಿಗೆಗಳನ್ನು ಸಂಗ್ರಹಿಸಿ ಅದರಲ್ಲಿ ತಮ್ಮ ಸೈನ್ಯ ಹಾಗೂ ಆಡಳಿತ ವೆಚ್ಚಕ್ಕೆ ತಗಲುವ ಮೊತ್ತವನ್ನು ತೆಗೆದುಕೊಂಡು ಉಳಿದ ನಿಗದಿಯಾದ ಮೊತ್ತವನ್ನು ನಿಗದಿಯಾದ ದಿನದಂದೇ ವಿಜಯನಗರಕ್ಕೆ ಸಲ್ಲಿಸುತ್ತಿದ್ದರು. ಅದಕ್ಕೆ ಪ್ರತಿಯಾಗಿ ತಮ್ಮ ಅರಸರಿಂದ ರಕ್ಷಣೆಯನ್ನು ಪಡೆಯುತ್ತಿದ್ದರು. ಪರಸ್ಪರ ರಕ್ಷಣೆ ಮತ್ತು ನಿಷ್ಠೆಯೇ ಅಮರನಾಯಕ ಪದ್ಧತಿಯ ಉಸಿರಾಗಿತ್ತು. ಈ ಪದ್ಧತಿಯನ್ನು ವಿಜಯನಗರ ಸಾಮ್ರಾಜ್ಯವು ತನ್ನ ಭೌಗೋಳಿಕ ಸಮಗ್ರತೆ ಮತ್ತು ಪ್ರಭುತ್ವ ರಕ್ಷಣೆಗೆ ಯಶಸ್ವಿ ಸಾಧನವಾಗಿ ಬಳಸಿಕೊಂಡಿತು. ಸೈನ್ಯ ಮತ್ತು ಕಂದಾಯ ಸೇವೆಗಳು ಈ ಪದ್ಧತಿಯಲ್ಲಿ ಅಡಕವಾಗಿದ್ದರಿಂದ ವಿಜಯನಗರ ಸಾಮ್ರಾಜ್ಯವು ಬಲಿಷ್ಠವಾದ ಸೇನಾ ಸಾಮ್ರಾಜ್ಯವಾಗಿ ತಲೆ ಎತ್ತಿ ನಿಲ್ಲಲು ಕಾರಣವಾಯಿತು.

ಆರಂಭಕಾಲದ ಸಂಗಮ, ಸಾಳುವ, ತುಳುವರ ಕಾಲದಲ್ಲಿ ನಾಯಕರನ್ನು ಪ್ರಭಾವಶಾಲಿಯಾಗಿ ಬೆಳೆಯಲು ಬಿಡಲಿಲ್ಲ. ನಾಯಕರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾವಣೆ ಮಾಡಲಾಗುತ್ತಿತ್ತು. ಹಾಗೂ ನಾಯಕತನಕ್ಕಾಗಿ ಪಾಲಿಸಿದಂತಹ ಸೀಮೆಗಳನ್ನು ಬದಲಾಯಿಸಲಾಗುತ್ತಿತ್ತು. ಹೀಗೆ ಪದೇ ಪದೇ ನಡೆಯುತ್ತಿದ್ದ ವರ್ಗಾವಣೆಗಳು ಹಾಗೂ ಸೇವೆಗಳ ಬದಲಾವಣೆಯಿಂದಾಗಿ ನಾಯಕರಿಗೆ ಪ್ರದೇಶ ಮಟ್ಟದಲ್ಲಿ ರಾಜಕೀಯ ಶಕ್ತಿಗಳಾಗಿ ನೆಲೆ ನಿಲ್ಲಲು ಸಾಧ್ಯವಾಗಲಿಲ್ಲ. ಆದರೆ ಅರವೀಡು ಮನೆತನದ ಆಳ್ವಿಕೆಯ ವೇಳೆಗೆ ಸಂಪೂರ್ಣ ರಾಜಕೀಯ ಚಿತ್ರಣವೇ ಬದಲಾಗಿ ಹೋಗಿತ್ತು. ಕ್ರಿ.ಶ. ೧೫೬೫ರ ರಕ್ಕಸಗಿ ತಂಗಡಿಗಿ ಯುದ್ಧದ ನಂತರ ಹಲವು ನಾಯಕ ಮನೆತನಗಳು ಸ್ವತಂತ್ರವಾದವು. ಅಳಿದುಳಿದ ನಾಯಕ ಮನೆತನಗಳು ಅರವೀಡು ಮನೆತನದ ಅಧೀನವಾಗಿ ಮುಂದುವರೆದವು.

ಅರವೀಡು ಮನೆತನದ ದುರ್ಬಲ ಅರಸರ ಕಾರಣದಿಂದಾಗಿ ಈ ನಾಯಕರು ತಾವು ಹೊರಡಿಸುವ ಶಾಸನಗಳಲ್ಲಿ ಉದಾ. ಮೈಸೂರಿನ ಒಡೆಯರು ತಮ್ಮನ್ನು ರಾಜಕೀಯ ದೊರೆಗಳೆಂದು ಕರೆದುಕೊಂಡಿರುವುದು ಹಾಗೂ ತಮ್ಮ ದೊರೆತನಕ್ಕೆ ವಿಜಯನಗರದ ಅರಸರು ಪಾಲಿಸಿದ ಸೀಮೆಗಳೆಂದು ಹೇಳಿಕೊಂಡಿರುವುದು ವಿಜಯನಗರದ ದುರ್ಬಲತೆಗೆ ಕನ್ನಡಿ ಹಿಡಿಯುತ್ತದೆ. ಆದರೆ ಇವೇ ಮನೆತನಗಳು ಮುಂದೆ ವಿಜಯನಗರದ ಪತನದ ನಂತರ ಸ್ವತಂತ್ರ ಪಾಳೆಯಪಟ್ಟನ್ನು ಹೊಂದಿ ತಮ್ಮದೇ ಆದ ಕಿರು ರಾಜಪ್ರಭುತ್ವಗಳನ್ನು ರೂಪಿಸಿಕೊಂಡವು.

ವಿಜಯನಗರ ಕಾಲದ ಪ್ರಾಂತೀಯ ಮಟ್ಟದಲ್ಲಿ ಜಾರಿಯಲ್ಲಿದ್ದ ಅಮರನಾಯಕ ಪದ್ಧತಿಯು ಊಳಿಗಮಾನ್ಯ ವ್ಯವಸ್ಥೆಯ ತಳಪಾಯದ ಮೇಲೆ ನಿಂತಿತ್ತು. ವಿಜಯನಗರ ಕಾಲದಲ್ಲಿ ಹೆಚ್ಚಾದ ಭೂದಾನಗಳು ಅಮರನಾಯಕರೆಂಬ ಊಳಿಗಮಾನ್ಯ ಪ್ರಭುಗಳು ಸ್ಥಳೀಯ ಮಟ್ಟದ ಆಡಳಿತದಲ್ಲಿ ತಲೆ ಎತ್ತಲು ಕಾರಣವಾಯಿತು.

ಸೈನಿಕ ಹಿನ್ನೆಲೆಯಿಂದ ಬಂದವರೇ ನಾಯಕತನವನ್ನು ಪಡೆದುಕೊಳ್ಳುತ್ತಿರಲಿಲ್ಲ. ಬದಲಾಗಿ ವಿಜಯನಗರ ಕಾಲದಲ್ಲಿ ರಾಯಸದವರು, ಹಡಪ ವೃತ್ತಿಯರು, ಅಧಿಕಾರ ವರ್ಗವೂ ಕೊನೆಯ ರಾಜಮನೆತನವರಿಗೂ ಮಹಾಪ್ರಧಾನರಿಗೂ, ಮಹಾಪ್ರಧಾನರ ಕುಟುಂಬಗಳ ಸದಸ್ಯರಿಗೂ, ಮಹಾಮಂಡಲೇಶ್ವರರಿಗೂ ಕೊಡಲ್ಪಡುತ್ತಿತ್ತು ಎಂಬುದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ವಿಜಯನಗರ ಕಾಲದಲ್ಲಿ ನಾಯಕತವೆನ್ನುವುದು ಮೂರು ಹಂತಗಳಲ್ಲಿ ಕೊಡಲ್ಪಡುತ್ತಿತ್ತು. ವಿಜಯನಗರದ ಅರಸರು ಮಹಾಮಂಡಲೇಶ್ವರರಿಗೆ ನಾಯಕತನಕ್ಕಾಗಿ ಸೀಮೆಗಳನ್ನು ಪಾಲಿಸುತ್ತಿದ್ದರು. ಅಧೀನ ಅಮರ ನಾಯಕರು ತಮ್ಮ ಕೆಳಗೆ ಉಪನಾಯಕರಿಗೆ ಒಂದೆರಡು ಗ್ರಾಮಗಳನ್ನು ನಾಯಕತನಕ್ಕಾಗಿ ಪಾಲಿಸುತ್ತಿದ್ದರು. ಹೀಗಾಗಿ ವಿಜಯನಗರದಲ್ಲಿ ನಾಯಕತನವೆನ್ನುವುದು ಯಾವುದೇ ಒಂದು ನಿರ್ದಿಷ್ಟ ವರ್ಗಕ್ಕೆ ಸೀಮಿತವಾಗಿರಲಿಲ್ಲ. ಶಾಸನಗಳಲ್ಲಿ ಉಲ್ಲೇಖಿತಗೊಂಡಿರುವ ಕಾರ್ಯಕರ್ತರು ದಂಣನಾಯಕರು, ಮಹಾಮಂಡಲೇಶ್ವರರು, ಮಹಾಪ್ರಧಾನರು, ಮಹಾಸಾಮಂತಿಧಿಪತಿಗಳು ಊಳಿಗದವರು ಅರಮನೆಯಲ್ಲಿ ಕುದುರೆಗಳನ್ನು ಪಾಲನೆ ಮಾಡುವವರು ಕೂಡ ನಾಯಕತನಕ್ಕಾಗಿ ಸೀಮೆಗಳನ್ನು ಪಡೆದಿರುವುದನ್ನು ಶಾಸನಗಳು ಸ್ಪಷ್ಟಪಡಿಸುತ್ತವೆ. ವಿಜಯನಗರ ಕಾಲದಲ್ಲಿ ನಾಯಕತನ ಎನ್ನುವುದು ಯಾವುದೇ ನಿರ್ದಿಷ್ಟ ಜಾತಿ ನಿರ್ದಿಷ್ಟ ವರ್ಗಕ್ಕೆ ಸೀಮಿತವಾಗಿರದೆ ದಕ್ಷತೆ ಮತ್ತು ಅರ್ಹತೆಯನ್ನು ಪಡೆದವರಿಗಷ್ಟೇ ಪ್ರಾಪ್ತವಾಗುತ್ತಿತ್ತು. ಈ ಅಂಶವನ್ನು ಪ್ರಧಾನವಾಗಿ ಗಮನಿಸುವುದಾದರೆ ಕರ್ನಾಟಕದಲ್ಲಿ ಅಮರನಾಯಕತನವನ್ನು ಪಡೆದವರಲ್ಲಿ ಬೇಡ ನಾಯಕರು ಹೆಚ್ಚಿನ ಸಂಖ್ಯೆಯಲ್ಲಿರುವುದು ಅವರ ದಕ್ಷತೆ, ಅರ್ಹತೆಗೆ ಸಾಕ್ಷಿಯಾಗಿದೆ. ಮುಸ್ಲಿಮರು, ರೆಡ್ಡಿಗಳು, ಒಕ್ಕಲಿಗ, ಗೌಡ, ವೀರಶೈವ, ಲಿಂಗಾಯತ, ಬೇಡ, ಬಲಿಜ ಮನೆತನಗಳು ವಿಜಯನಗರ ಕಾಲದಲ್ಲಿ ಕರ್ನಾಟಕದಲ್ಲಿ ನಾಯಕತನವನ್ನು ಪಡೆದುಕೊಂಡಿರುವ ಇತರೆ ಸಮುದಾಯಗಳಾಗಿವೆ. ವಿಜಯನಗರ ಕಾಲದಲ್ಲಿ ಜಾರಿಯಲ್ಲಿದ್ದ ಅಮರನಾಯಕ ಪದ್ಧತಿಯನ್ನು ಯುರೋಪಿನ ಫ್ಯೂಡಲಿಸಂನೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನಗಳನ್ನು ಬಹುತೇಕ ವಿದ್ವಾಂಸರು ಮಾಡಿದ್ದಾರೆ. ಆದರೆ ವಿಜಯನಗರ ಅಮರನಾಯಕ

ಪದ್ಧತಿಗೂ ಯುರೋಪಿನ ಫ್ಯೂಡಿಸಲಿಸಂಗೂ ಕೆಲವೊಂದು ಅಂಶಗಳಲ್ಲಿ ಹೋಲಿಕೆಯಾದರೂ ವಿಜಯನಗರ ಸಂಪೂರ್ಣವಾಗಿ ಸ್ಥಳೀಯ ಆಡಳಿತವನ್ನು ಮೈಗೂಡಿಸಿಕೊಂಡಿದ್ದರಿಂದ ಕೆಲವು ವ್ಯತ್ಯಾಸಗಳನ್ನು ಸಹ ಗುರುತಿಸಬಹುದಾಗಿದೆ. ಯುರೋಪಿನಲ್ಲಿದ್ದು ಊಳಿಗಮಾನ್ಯ ವ್ಯವಸ್ಥೆಯಲ್ಲಿ ಕಂಡುಬರುವ ಬಲವಂತದ ದುಡಿಮೆ, ಜೀತಗಾರಿಕೆ, ದಬ್ಬಾಳಿಕೆ, ಶೋಷಣೆ ವಿಜಯನಗರ ಕಾಲದ ಅಮರನಾಯಕ ಪದ್ಧತಿಯಲ್ಲಿ ಮಿತಿಮೀರಿದಂತೆ ಕಂಡು ಬರುವುದಿಲ್ಲ. ಬಿಟ್ಟಿ ದುಡಿಮೆ ಎನ್ನುವುದು ಸಾರ್ವಜನಿಕ ಕಾಮಗಾರಿಗಳು ನಡೆಯುತ್ತಿದ್ದ ಸಂದರ್ಭಗಳಲ್ಲಿ ಮಾತ್ರ ಬಳಕೆಯಲ್ಲಿರುವುದು ಕಂಡುಬರುತ್ತದೆ. ಹೀಗಾಗಿ ಯುರೋಪಿನ ಊಳಿಗಮಾನ್ಯ ವ್ಯವಸ್ಥೆಯು ವಿಜಯನಗರ ಕಾಲದಲ್ಲಿ ಯಥಾವತ್ತಾಗಿ ಜಾರಿಯಲ್ಲಿತ್ತು ಎಂದರೆ ತಪ್ಪಾಗುತ್ತದೆ.

ವಿಜಯನಗರದ ಕಾಲದ ಕೆಲವು ನಾಯಕ ಮನೆತನಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಸಾಮ್ರಾಜ್ಯ ಮತ್ತು ಸಂಸ್ಥಾನಗಳ ನಡುವಿನ ಆಡಳಿತ ವ್ಯವಸ್ಥೆಯಲ್ಲಿನ ರೂಪುರೇಷೆಗಳು ಸ್ಪಷ್ಟವಾಗಿ ಗೋಚರವಾಗುತ್ತವೆ. ಹಂಪಿಯನ್ನು ಕೇಂದ್ರವಾಗಿಟ್ಟು ಆಡಳಿತ ನಡೆಸಿದ ವಿಜಯನಗರದ ಆಡಳಿತವು ನೇರವಾಗಿ ಜಾರಿಯಲ್ಲಿದ್ದುದು ತನ್ನ ರಾಜಧಾನಿ, ಅದರ ಸುತ್ತಮುತ್ತಲಿನ ಪ್ರದೇಶಗಳು ಹಾಗೂ ತನ್ನ ನೇರ ಹಿಡಿತದಲ್ಲಿದ್ದ ಪ್ರದೇಶಗಳಲ್ಲಷ್ಟೇ ಎಂಬುದು ಸ್ಪಷ್ಟವಾಗುತ್ತದೆ. ಉಳಿದಂತೆ ವಿಜಯನಗರದವರಿಂದ ಅಮರನಾಯಕತನವನ್ನು ಪಡೆದುಕೊಂಡು ಪ್ರಾದೇಶಿಕ ಮಟ್ಟದಲ್ಲಿ ಆಡಳಿತವನ್ನು ನಡೆಸುತ್ತಿದ್ದ ಅಮರನಾಯಕರ ಸಂಸ್ಥಾನಗಳಲ್ಲಿ ಆಡಳಿತವು ಸ್ಥಳೀಯ ಅವಶ್ಯಕತೆಗಳ ಅನುಗುಣವಾಗಿ ಜಾರಿಯಲ್ಲಿತ್ತು. ಬಹುತೇಕ ಮೊದಲ ವರ್ಗದ ಅಮರನಾಯಕರು ತಮ್ಮ ಸಂಸ್ಥಾನಗಳಲ್ಲಿ ಸ್ವಾಯತ್ತತಾ ಆಡಳಿತವನ್ನು ರೂಪಿಸಿಕೊಂಡಿದ್ದರು. ನಾಣ್ಯಗಳ ಚಲಾವಣೆ, ವರ್ತಕರಿಗೆ ವಾಣಿಜ್ಯೋದ್ಯಮಿಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಪೇಟೆ ಬೀದಿಗಳ ನಿರ್ಮಾಣ ಕಾರ್ಯ ಕೈಗೊಂಡಿರುವುದು ಸಮಕಾಲೀನ ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ವಿಜಯನಗರದ ಅರಸರ ಮತ್ತು ನಾಯಕರ ನಡುವಿನ ಸಂಬಂಧಗಳು ಕೇವಲ ರಾಜಕೀಯ ಮತ್ತು ಹಣಕಾಸಿನ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿತ್ತು. ಉಳಿದಂತೆ ಪ್ರಾಂತೀಯ ಮಟ್ಟದಲ್ಲಿ ನಾಯಕರು ದೊರೆಗಳಂತೆ ಭಾಗಶಃ ಸ್ವಾಯತ್ತತಾ ಆಡಳಿತವನ್ನು ತಮ್ಮ ನೆಲದ ಅಗತ್ಯಗಳಿಗೆ ತಕ್ಕಂತೆ ರೂಪಿಸಿಕೊಂಡು ಆಡಳಿತ ನಡೆಸಿರುವುದು ತಿಳಿದು ಬರುತ್ತದೆ. ಚಿತ್ರದುರ್ಗ, ಹರತಿ, ಗುಡೇಕೋಟೆ, ಹಂಡೆ ಮತ್ತು ಗುಮ್ಮನಾಯಕನ ಪಾಳೆಯಗಾರರು ವಿಜಯನಗರದೊಂದಿಗೆ ಹೊಂದಿದ್ದಂತಹ ಸಹ ಸಂಬಂಧಗಳನ್ನು ಪರಿಶೀಲಿಸಿದಾಗ ಈ ನಾಯಕರು ವಿಜಯನಗರದ ಬಹುತೇಕ ಯುದ್ಧಗಳಲ್ಲಿ ಭಾಗಿಯಾಗಿ ವಿಜಯನಗರಕ್ಕೆ ಜಯಭೇರಿಯನ್ನು ತಂದು ಕೊಡುವುದರ ಮೂಲಕ ವಿಜಯನಗರದವರ ಯಶಸ್ಸಿನ ಸೋಪಾನವಾಗಿದ್ದರು ಎಂದು ಹೇಳಬೇಕಾಗುತ್ತದೆ. ವಿಜಯನಗರದ ಪತನದ ನಂತರ ಬದಲಾದ ರಾಜಕೀಯ ಸ್ಥಿತ್ಯಂತರಗಳಲ್ಲಿ ಸ್ವತಂತ್ರಗೊಂಡ ಪಾಳೆಯಗಾರರು ತಮ್ಮ ನಿಷ್ಠೆಯನ್ನು ಬಿಜಾಪುರದವರಿಗೂ, ಮೊಗಲರಿಗೂ, ಮರಾಠರಿಗೂ ವ್ಯಕ್ತಪಡಿಸುತ್ತಿದ್ದರು. ಬಿಜಾಪುರದವರಿಗೆ ಹಂಡೆಯ ಪಾಳೆಯಗಾರರು, ಗುಮ್ಮನಾಯಕ ಪಾಳೆಯಗಾರರು, ಗುಡೇಕೋಟೆ ಪಾಳೆಯಗಾರರು ಅಧೀನರಾಗಿದ್ದರು. ಚಿತ್ರದುರ್ಗ ಮತ್ತು ಹರತಿಯ

ಪಾಳೆಯಗಾರರು ಸ್ವತಂತ್ರರಾಗಿದ್ದರೂ ಮರಾಠರಿಗೆ, ಮೊಗಲರಿಗೆ ಪೊಗಾದಿಗಳನ್ನು ಸಲ್ಲಿಸುತ್ತಲೇ ಬಂದರು. ಇದು ಹೈದರಾಲಿ-ಟಿಪ್ಪುವಿನ ಕಾಲದವರೆಗೂ ಮುಂದುವರೆದುಕೊಂಡು ಬಂದಿತು.

ಅಮರನಾಯಕ ಮನೆತನಗಳ ವಿಜಯನಗರೋತ್ತರ ಕಾಲದ ಪಾಳೆಯಗಾರರು ವಿಜಯನಗರದ ಆಡಳಿತ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋದರು. ವಿಜಯನಗರದವರಂತೆ ಇವರು ಕೂಡ ಉಪ ಊಳಿಗತನವನ್ನು ಸೃಷ್ಟಿಸಿಕೊಂಡು ಬಲಿಷ್ಠ ನಾಯಕರು ದುರ್ಬಲ ನಾಯಕರನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರು. ಚಿತ್ರದುರ್ಗ, ಕೆಳದಿ ಮೈಸೂರು ಸಂಸ್ಥಾನಗಳು ಬಹಳಷ್ಟು ದುರ್ಬಲ ನಾಯಕ ಅರಸರು ಇತಿಹಾಸ ಪುಟಗಳಿಂದ ಕಣ್ಮರೆಯಾಗಲು ಕಾರಣಕರ್ತರಾದರು. ಅಮರನಾಯಕರು ತಮ್ಮ ರಾಜ್ಯಾಡಳಿತವನ್ನು ಸಪ್ತಾಂಗ ಸೂತ್ರಗಳ ಮೇಲೆ ಅಳವಡಿಸಿಕೊಂಡಿದ್ದರು. ಕೇಂದ್ರಾಡಳಿತ, ರಾಜ್ಯಾಡಳಿತ, ಗ್ರಾಮಾಡಳಿತಗಳನ್ನು ವ್ಯವಸ್ಥಿತವಾಗಿ ಅಳವಡಿಸಿಕೊಂಡಿದ್ದರು. ವಿಜಯನಗರೋತ್ತರ ಕಾಲದ ನಾಯಕರು ಉತ್ತಮ ಆಡಳಿತಗಾರರು ಹಾಗೂ ಧರ್ಮ ಪ್ರಭುಗಳು ಆಗಿದ್ದರು. ಇವರ ಕಾಲದ ಹಲವಾರು ವ್ಯಾಜ್ಯಗಳು ಇದಕ್ಕೆ ಉತ್ತಮ ನಿದರ್ಶನವಾಗಿವೆ. ಸರ್ವೋಚ್ಚ ನ್ಯಾಯಾಧಿಕಾರಿಗಳು ನಾಯಕರೇ ಆಗಿದ್ದರೂ, ನ್ಯಾಯ ತೀರ್ಮಾನ ಮಾಡುವಾಗ ನ್ಯಾಯಾಂಗದ ಇತರ ಅಧಿಕಾರಿಗಳೊಡನೆ ಚರ್ಚಿಸಿ ತೀರ್ಪನ್ನು ಕೊಡುತ್ತಿದ್ದರು. ಸುವ್ಯವಸ್ಥಿತವಾದ ಸೈನ್ಯ ವ್ಯವಸ್ಥೆಯನ್ನು ಸಂಘಟಿಸಿಕೊಂಡು ಯುದ್ಧಗಳನ್ನು ಮಾಡುತ್ತಿದ್ದರು. ತಮ್ಮ ರಕ್ಷಣೆ ಹಾಗೂ ಪ್ರಜೆಗಳ ರಕ್ಷಣೆಗಾಗಿ ಹಲವಾರು ಕೋಟೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಕೋಟೆ ಕಾಳಗಗಳು ನಾಯಕರ ಕಾಲದಲ್ಲಿ ಜನಪ್ರಿಯವಾಗಿದ್ದವು. ಅಭೇದ್ಯವಾದ ಕೋಟೆಗಳನ್ನು ನಾಯಕರು ಹೈದರಾಲಿಗೆ ಗೆದ್ದು ಕೊಟ್ಟಿರುವುದು ಸ್ಮರಣೀಯವಾಗಿದೆ. ವಿಜಯನಗರದ ವಾಸ್ತುಶಿಲ್ಪದ ಪ್ರಭಾವವೇ ಪಾಳೆಯಗಾರರ ಕಾಲದಲ್ಲಿ ಮುಂದುವರಿದರೂ ವಿಜಯನಗರದಷ್ಟು ಶ್ರೀಮಂತಿಕೆಯಿಂದ ಕೂಡಿದ ದೇವಾಲಯಗಳನ್ನು ನಿರ್ಮಿಸಲಾಗಲಿಲ್ಲ. ಆದರೆ ತಮ್ಮ ಆರ್ಥಿಕ ಸ್ಥಿತಿಗೆ ತಕ್ಕಂತೆ ದೇವಾಲಯಗಳನ್ನು ನಿರ್ಮಿಸಿರುವುದು ಕಂಡು ಬರುತ್ತದೆ. ಇವರ ಕಾಲದ ಕಲಾ ಶೈಲಿಯನ್ನು ವಿಜಯನಗರೋತ್ತರ ದ್ರಾವಿಡ ಕಲಾ ಶೈಲಿಯೆಂದೇ ಗುರುತಿಸಲಾಗಿದೆ. ವಾಸ್ತುಶಿಲ್ಪದ ಜೊತೆಗೆ ಚಿತ್ರಕಲೆಗೂ ಅಪಾರ ಪ್ರೋತ್ಸಾಹವನ್ನು ನೀಡಿರುವುದು ಕೆಳದಿ, ಮೈಸೂರು, ಸುರಪುರ ಮುಂತಾದ ಕಡೆ ದೊರೆತಿರುವ ಚಿತ್ರಕಲೆಯಿಂದ ತಿಳಿಯುತ್ತದೆ.

ಬ್ರಿಟಿಷರು ಹೈದರಾಲಿ ಮತ್ತು ಟಿಪ್ಪುಸುಲ್ತಾನರು ನಾಯಕರಿಗೆ ಒಮ್ಮೆ ಶತ್ರುಗಳು ಮತ್ತು ಮಿತ್ರರುಗಳಾಗಿ ಕಾಣಿಸಿಕೊಂಡು ನಾಯಕರು ಪತನರಾಗಲು ಕಾರಣಕರ್ತರಾದರು. ಮೈಸೂರಿನ ಸರ್ವಾಧಿಕಾರಿಗಳಾದ ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಅನೇಕ ನಾಯಕರೊಂದಿಗೆ ಸ್ನೇಹ ಸಂಬಂಧಗಳು ವೃದ್ಧಿಸಿಕೊಂಡು ತಮ್ಮ ರಾಜ್ಯವನ್ನು ವಿಸ್ತೀರ್ಣ ಮಾಡಿಕೊಂಡರು. ತಮ್ಮ ಕುಟಿಲ ನೀತಿಗಳನ್ನು ಬಳಸಿ ನಾಯಕರ ವಿರುದ್ಧ ನಾಯಕರೇ ಯುದ್ಧವನ್ನು ಮಾಡುವಂತಹ ಸ್ಥಿತಿಗೆ ತಂದು ನಾಯಕರು ನಾಶವಾಗಲು ಕಾರಣರಾದರು. ಕೆಲವು ನಾಯಕರನ್ನು ಯುದ್ಧದಲ್ಲಿ ಬಂಧಿಸಿದರೆ

ಮತ್ತೆ ಕೆಲವನ್ನು ಸ್ನೇಹಪೂರ್ವಕವಾಗಿ ಶ್ರೀರಂಗಪಟ್ಟಣಕ್ಕೆ ಕುಟುಂಬ ಸಮೇತರಾಗಿ ಬರಮಾಡಿಕೊಂಡು ಬಂಧಿಸಿ ಸೆರೆಮನೆಯಲ್ಲಿಟ್ಟರು. ಹೀಗೆ ಹೈದರ್ ಮತ್ತು ಟಿಪ್ಪು ಅನುಸರಿಸಿದ ದಮನಕಾರಿ ನೀತಿಗಳಿಂದಾಗಿ ನಾಯಕರು ಅವನತಿಯಾದರು. ಬ್ರಿಟಿಷರು ಕೂಡ ಹೈದರ್ ಮತ್ತು ಟಿಪ್ಪುವಿನ ನೀತಿಗಳನ್ನು ಮುಂದುವರೆಸಿದರು. ಹೈದರಾಲಿ ಮತ್ತು ಟಿಪ್ಪು ಸುಲ್ತಾನನ ವಿರುದ್ಧ ಹೋರಾಡುವಾಗ ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧಗಳಲ್ಲಿ ಬಹುತೇಕ ನಾಯಕರನ್ನು ಸಂಧಿಸಿ ಒಪ್ಪಂದ ಮಾಡಿಕೊಂಡು ಯುದ್ಧಗಳನ್ನು ಮಾಡಿ ಹೈದರ್ ಮತ್ತು ಟಿಪ್ಪುವಿನ ರಾಜಕೀಯ ಜೀವನವನ್ನು ಅಸ್ತಂಗತ ಮಾಡುವಲ್ಲಿ ಯಶಸ್ವಿಯಾದರು. ಆದರೆ ನಾಯಕರಿಗೆ ಯುದ್ಧಗಳ ನಂತರ ಅವರ ಸಂಸ್ಥಾನಗಳನ್ನು ಹಿಂತಿರುಗಿಸಿ ನೀಡುವ ಭರವಸೆಯನ್ನು ಈಡೇರಿಸಬಲ್ಲ. ಬದಲಾಗಿ ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧದ ತರುವಾಯ ಮೈಸೂರು ಸಂಸ್ಥಾನ ದಿವಾನ್ ಪೂರ್ಣಯ್ಯಗೆ ಬ್ರಿಟಿಷರೂ ಆದೇಶಿಸಿದರೂ ನಾಯಕರಿಗೆ ಅವರ ಸಂಸ್ಥಾನಗಳನ್ನು ಹಿಂತಿರುಗಿಸದೆ ಮೈಸೂರು ಸಂಸ್ಥಾನದಲ್ಲಿ ವಿಲೀನಗೊಳಿಸಿಕೊಂಡನು. ಹಾಗೂ ಮೈಸೂರು ಸಂಸ್ಥಾನದ ವತಿಯಿಂದ ನಿವೃತ್ತಿ ವೇತನಗಳನ್ನು ನಾಯಕರಿಗೆ ಮಂಜೂರು ಮಾಡಿದನು. ಬ್ರಿಟಿಷರು ಕೂಡ ಮನ್ರೋ ನೇತೃತ್ವದಲ್ಲಿ ನಾಯಕರ ಪಟ್ಟಿಯನ್ನು ಸಿದ್ಧಗೊಳಿಸಿ ಇವರನ್ನು ರಾಜಕೀಯವಾಗಿ ಸದೆಬಡಿದು ನಿವೃತ್ತಿ ವೇತನಗಳನ್ನು ಮಂಜೂರು ಮಾಡಿ ಮೂಲೆಗುಂಪು ಮಾಡಿದರು.

೧೮ನೇ ಶತಮಾನದ ಅನೈಕ್ಯತೆಯಿಂದ ಕೂಡಿದ ರಾಜಕೀಯ ರಣರಂಗದಲ್ಲಿ ಪದೇ ಪದೇ ಪಾಳೆಯಪಟ್ಟುಗಳ ಮೇಲೆ ಸಂಭವಿಸುತ್ತಿದ್ದ ಮರಾಠರ ಮತ್ತು ಮೊಗಲರ ದಾಳಿಗಳು ರಾಜಕೀಯವಾಗಿ ಆರ್ಥಿಕವಾಗಿ ಅಮರ ನಾಯಕರ ಮನೆತನಗಳು ಕ್ಷೀಣಿಸಲು ಕಾರಣವಾಯಿತು.

ದಕ್ಷಿಣ ಭಾರತದಾದ್ಯಂತ ಕ್ರಿ.ಶ. ೧೪, ೧೫, ೧೬, ೧೭ನೇ ಶತಮಾನದವರೆಗೂ ಅಸ್ತಿತ್ವದಲ್ಲಿದ್ದ ನಾಯಕ ವ್ಯವಸ್ಥೆಯನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಕಂಡುಬಂದಂತಹ ಕೆಲವೊಂದು ಸಾಮಾನ್ಯ ತೀರ್ಮಾನಗಳನ್ನು ಈ ಮುಂದಿನಂತೆ ಪ್ರಸ್ತಾಪಿಸಬಹುದು.

ಅಧ್ಯಯನದ ಫಲಿತಗಳು

೧. ವಿಜಯನಗರದ ಅರಸರು ತಮ್ಮ ಪ್ರಾಂತೀಯ ಮಟ್ಟದಲ್ಲಿ ಅಳವಡಿಸಿಕೊಂಡ ನಾಯಕ ವ್ಯವಸ್ಥೆಯು ಈ ಹಿಂದೆ ಹೊಯ್ಸಳರ ಹಾಗೂ ಕಾಕತೀಯರ ಕಾಲದಲ್ಲಿ ರೂಢಿಯಲ್ಲಿದ್ದ ನಾಯಕ ಪದ್ಧತಿಯ ಮುಂದುವರಿಕೆಯೇ ಆಗಿತ್ತು. ಹೊಯ್ಸಳರ ಕಾಲದ ಶಾಸನಗಳು ಮತ್ತು ಕಾಕತೀಯರ ಕಾಲದ ಶಾಸನಗಳು ನಾಯಕ ವ್ಯವಸ್ಥೆಯನ್ನು ಕುರಿತು ಸ್ಪಷ್ಟನೆಯನ್ನು ನೀಡುತ್ತವೆ. ವಿಜಯನಗರದ ಅರಸರು ಈ ಹಿಂದಿನ ನಾಯಕ ಪದ್ಧತಿಯನ್ನು ಪರಿಷ್ಕರಿಸಿಕೊಂಡು ಅತ್ಯಂತ ಜನಪ್ರಿಯ ಆಡಳಿತ ಪದ್ಧತಿಯನ್ನಾಗಿ ರೂಪಿಸಿಕೊಂಡರು. ಈ ಪದ್ಧತಿಯಿಂದಾಗಿ ವಿಜಯನಗರದ ಅರಸರು ಭೌಗೋಳಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಗಟ್ಟಿಯಾಗಿ ನೆಲೆ ನಿಲ್ಲಲು ಸಾಧ್ಯವಾಯಿತು ಹಾಗೂ ದಕ್ಷಿಣ ಭಾರತದ ಮೇಲೆ ಹಿಡಿತ ಸಾಧಿಸಿ ಬೃಹತ್ ಸಾಮ್ರಾಜ್ಯವಾಗಿ ರೂಪಗೊಳ್ಳಲು ಸಾಧ್ಯವಾಯಿತು.

೨. ವಿಜಯನಗರದ ಅರಸರು ತಮ್ಮ ಆಡಳಿತಾವಧಿಯಲ್ಲಿ ಕೇಂದ್ರೀಕರಣ ಮತ್ತು ವಿಕೇಂದ್ರೀಕರಣ ಅಂಶಗಳನ್ನು ಸಂಯೋಜನೆಗೊಳಿಸಿಕೊಳ್ಳುವುದರ ಮೂಲಕ ಸಾಮ್ರಾಜ್ಯ, ಸಂಸ್ಥಾನ ಹಾಗೂ ಅಮರನಾಯಕರನ್ನು ಒಳಗೊಂಡ ಒಕ್ಕೂಟ ವ್ಯವಸ್ಥೆಯನ್ನು ರೂಢಿಸಿಕೊಂಡರು. ಹೀಗಾಗಿ ಅಧಿಕಾರವು ಕೇಂದ್ರಭಾಗದಲ್ಲಿ ಮಾತ್ರ ಕ್ರೋಢೀಕರಣವಾಗದೇ ವಿವಿಧ ಆಡಳಿತ ಘಟಕಗಳ ಮೂಲಕ ಕೆಳ ಹಂತದಲ್ಲಿ ಸಂಚಯಿಸಿತು. ಹೀಗೆ ವಿಜಯನಗರದ ಅರಸರು ಕೆಳ ಹಂತದವರೆಗೂ ಅಧಿಕಾರವನ್ನು ವಿಕೇಂದ್ರೀಕರಣಗೊಳಿಸಿದ್ದರಿಂದ ಸ್ಥಳೀಯವಾಗಿ ಅಮರನಾಯಕರು ಪ್ರಭಾವಿ ನಾಯಕರಾಗಿ ರಾಜಕೀಯವಾಗಿ ಶಕ್ತಿ ವೃದ್ಧಿಸಿಕೊಳ್ಳಲು ಕಾರಣವಾಯಿತು. ವಿಜಯನಗರದ ಅರಸರಿಂದ ನಾಯಕತನಕ್ಕಾಗಿ ಸೀಮೆಗಳನ್ನು ಪಡೆದು ಆಯಾ ಪ್ರದೇಶಗಳ ಭೂಮಿಯ ಮೇಲೆ ಹತೋಟಿಯನ್ನು ಸಾಧಿಸುವುದರ ಮೂಲಕ ರಾಜಕೀಯವಾಗಿ ಆರ್ಥಿಕವಾಗಿ ಬಲಾಢ್ಯರಾಗಿ ರೂಪುಗೊಂಡು ವಿಜಯನಗರದ ಪತನದ ನಂತರ ಸ್ವತಂತ್ರ ಕಿರು ರಾಜಪ್ರಭುತ್ವಗಳಾಗಿ ರೂಪುಗೊಂಡರು. ಒಂದು ಕಾಲಕ್ಕೆ ವಿಜಯನಗರದ ರಾಜಕೀಯ ಶಕ್ತಿ ಸಮತೋಲನಕ್ಕೆ ಕಾರಣವಾಗಿದ್ದ ಅಮರನಾಯಕ ಪದ್ಧತಿಯು ತುಳುವ ಮನೆತನದ ಪತನದ ನಂತರ ಸ್ವತಂತ್ರ ರಾಜಪ್ರಭುತ್ವಗಳ ಅಸ್ತಿತ್ವಕ್ಕೆ ಕಾರಣವಾಯಿತು.

೩. ವಿಜಯನಗರದ ಅರಸರು ತಮ್ಮ ಸಾಮ್ರಾಜ್ಯದೆಲ್ಲಡೆ ಭೂ ಪ್ರದೇಶಗಳ ವ್ಯಾಪ್ತಿಗೆ ಅನುಗುಣವಾಗಿ ಅಮರನಾಯಕರೆಂಬ ಅಧಿಕಾರಿಗಳನ್ನು ನೇಮಿಸುತ್ತಿದ್ದರು. ಅಮರನಾಯಕರ ನೇಮಕಾತಿಯಲ್ಲಿ ದಕ್ಷತೆ ಮತ್ತು ಅರ್ಹತೆಯನ್ನು ಪ್ರಧಾನ ಮಾನದಂಡವಾಗಿ ಬಳಸಿಕೊಂಡರು ಸಹ ಬಹುತೇಕವಾಗಿ ಮೊದಲ ದರ್ಜೆಯ ನಾಯಕತನವನ್ನು ತಮ್ಮ ರಕ್ತಸಂಬಂಧಿಗಳಿಗೆ ಹಾಗೂ ತಮ್ಮ ಆಸ್ಥಾನದ ಪ್ರಧಾನ ಅಧಿಕಾರ ವರ್ಗಗಳಿಗೆ ಹಾಗೂ ತಮ್ಮಿಂದ ಸೋತ ರಾಜಕುಮಾರರಿಗೆ ನಾಯಕತನವನ್ನು ನೀಡಿ ಅವರುಗಳ ಬೆಂಬಲವನ್ನು ಪಡೆಯಲು ಪ್ರಯತ್ನಿಸುತ್ತಿದ್ದರು. ರಾಜಕೀಯವಾಗಿ ತಮ್ಮ ಮಹಾತ್ವಾಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಅಮರನಾಯಕ ಪದ್ಧತಿಯು ವಿಜಯನಗರದವರಿಗೆ ನೆರವಾಗುತ್ತಿತ್ತು. ವಿಜಯನಗರದ ಅರಸರು ತಮ್ಮ ಆಡಳಿತದ ಕೆಳ ಹಂತದಲ್ಲಿ ವಿಭಿನ್ನ ಜಾತಿ ಮತ್ತು ಪಂಗಡಗಳ ಪ್ರಭಾವಿ ನಾಯಕರಿಗೆ ಅಮರನಾಯಕತನವನ್ನು ನೀಡುವುದರ ಮೂಲಕ ವಿವಿಧ ಸಮುದಾಯಗಳ ಮೇಲೆ ರಾಜಕೀಯವಾಗಿ ಹತೋಟಿಯನ್ನು ಸಾಧಿಸಲು ಸಾಧ್ಯವಾಯಿತು.

೪. ಅಮರನಾಯಕ ವ್ಯವಸ್ಥೆಯು ಸಂಪೂರ್ಣವಾಗಿ ಶ್ರೇಣೀಕೃತ ತತ್ವದ ಅಡಿಯಲ್ಲಿ ಕಾರ್ಯನಿರ್ವಹಿಸುತಿತ್ತು. ವಿಜಯನಗರ ಕಾಲದ ಅಮರನಾಯಕರಲ್ಲಿ ಪ್ರಥಮ ದರ್ಜೆ, ದ್ವಿತೀಯ ದರ್ಜೆ ಮತ್ತು ತೃತೀಯ ದರ್ಜೆಯ ನಾಯಕರೆಂಬ ಮೂರು ವರ್ಗಗಳಿತ್ತು. ಸಮಾಜದ ಜಾತಿ ವ್ಯವಸ್ಥೆಯಲ್ಲಿ ಮೊದಲ ವರ್ಗವಾಗಿದ್ದ ಬ್ರಾಹ್ಮಣ ಸಮುದಾಯದ ನಾಯಕರು ವಿಜಯನಗರದ ರಾಜ್ಯಾಡಳಿತದಲ್ಲಿ ಮಹಾಮಂಡಲೇಶ್ವರರಾಗಿ ನಿಯುಕ್ತಗೊಂಡು ಮೊದಲ ದರ್ಜೆಯ ನಾಯಕತ್ವವನ್ನು ಪಡೆಯುತ್ತಿದ್ದರು. ಉಳಿದಂತೆ ಸಮಾಜದ ಬಹುತೇಕ ಅಲಕ್ಷಿತ ವರ್ಗಗಳಾದ ರೆಡ್ಡಿ, ಒಕ್ಕಲಿಗ, ಕುರುಬ, ಗೊಲ್ಲ, ಬಲಿಜ, ಬೇಡ, ಲಿಂಗಾಯಿತ, ವೀರಶೈವ ಮೊದಲಾದ ಜಾತಿಗಳ ನಾಯಕರು

ದ್ವಿತೀಯ ಮತ್ತು ತೃತೀಯ ದರ್ಜೆಯ ನಾಯಕತನವನ್ನು ಪಡೆಯುತ್ತಿದ್ದರು. ಮಹಾಮಂಡಲೇಶ್ವರರ ಕೆಳಗೆ ಕಾರ್ಯನಿರ್ವಹಿಸುತ್ತಿದ್ದ ನಾಯಕರನ್ನು ಮಹಾನಾಯಕಚಾರ್ಯರೆಂದು, ಮಹಾನಾಯಕಚಾರ್ಯರರ ಕೆಳಗೆ ಕಾರ್ಯನಿರ್ವಹಿಸುತ್ತಿದ್ದವರನ್ನು ನಾಯಕರೆಂದು ಕರೆಯುತ್ತಿದ್ದರು. ವಿಜಯನಗರ ರಾಜ್ಯಾಡಳಿತದಲ್ಲಿ ಮಹಾಮಂಡಲೇಶ್ವರರಾಗಿ ನಿಯುಕ್ತಿಗೊಳ್ಳುತ್ತಿದ್ದ ಬಹುತೇಕ ಬ್ರಾಹ್ಮಣ ವರ್ಗದ ಮೊದಲ ದರ್ಜೆಯ ನಾಯಕರು ಉಳಿದ ದ್ವಿತೀಯ ಮತ್ತು ತೃತೀಯ ದರ್ಜೆಯ ನಾಯಕರನ್ನು ಸಂಪೂರ್ಣವಾಗಿ ನಿಯಂತ್ರಿಸುತ್ತಿದ್ದರು.

೫. ಅಮರನಾಯಕ ವ್ಯವಸ್ಥೆಯು ಸಂಗಮ, ಸಾಳುವ ವಂಶದ ಅಧಿಕಾರವಧಿಯಲ್ಲಿ ರೂಢಿಗತವಾಗಿ ಅಸ್ತಿತ್ವಕ್ಕೆ ಬಂದಿದ್ದರೂ ಇದು ತುಳುವ ಮನೆತನದವರ ಆಡಳಿತಾವಧಿಯಲ್ಲಿಯೇ ರಾಜಕೀಯವಾಗಿ ಅತಿ ಹೆಚ್ಚು ಪ್ರವರ್ಧಮಾನಕ್ಕೆ ಬಂದಿತು. ತುಳುವ ವಂಶದ ಪ್ರಭುಗಳಾದ ಕೃಷ್ಣದೇವರಾಯ, ಸದಾಶಿವರಾಯ, ಅಚ್ಯುತರಾಯರ ಆಡಳಿತಾವಧಿಯಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ಅಮರನಾಯಕರು ಕಾರ್ಯನಿರ್ವಹಿಸಿರುವುದು ಶಾಸನಾಧಾರಗಳಿಂದ ದೃಢಪಟ್ಟಿದೆ. ಅಚ್ಯುತರಾಯ, ಸದಾಶಿವರಾಯನ ಆಡಳಿತಾವಧಿಯಲ್ಲಿ ರಾಜಕೀಯವಾಗಿ, ಆರ್ಥಿಕವಾಗಿ ಬಾಲಢ್ಯಗೊಂಡಿದ್ದ ಅಮರನಾಯಕರು ಸ್ವತಂತ್ರವಾಗಲು ಹವಣಿಸುತ್ತಿದ್ದರು. ಇದಕ್ಕೆ ಪೂರಕವೆಂಬಂತೆ ನಾಯಕರು ನಿರ್ಮಿಸಿಕೊಂಡ ಅಭೇದ್ಯವಾದ ಕೋಟೆ ಕೊತ್ತಲಗಳ ನಿರ್ಮಾಣ, ಪಶ್ಚಿಮ ರಾಷ್ಟ್ರಗಳೊಂದಿಗೆ ವೃದ್ಧಿಸಿಕೊಂಡ ವ್ಯಾಪಾರ ಮತ್ತು ವಾಣಿಜ್ಯ ಸಂಬಂಧಗಳು, ಮದ್ದುಗುಂಡುಗಳ ತಯಾರಿಕೆ, ಯುದ್ಧ ಸಾಮಗ್ರಿಗಳ ತಯಾರಿಕೆಯ ಕಾರ್ಖಾನೆಗಳ ಸ್ಥಾಪನೆ, ಸ್ವತಂತ್ರ ವಿದೇಶಾಂಗ ನೀತಿಗಳು ನಾಯಕರು ಬಲಿಷ್ಠರಾಗಲು ಕಾರಣವಾಯಿತು. ಇಂತಹ ರಾಜಕೀಯ ಪ್ರಕ್ಷುಬ್ಧ ಸನ್ನಿವೇಶಗಳಲ್ಲಿ ಕ್ರಿ.ಶ. ೧೫೬೫ರಲ್ಲಿ ರಕ್ಕಸಗಿ ತಂಗಡಿಗಿ ಯುದ್ಧ ನಡೆದಿದ್ದು ಈ ಸಮಯದಲ್ಲಿ ವಿಜಯನಗರವು ಷಾಹಿ ಸುಲ್ತಾನ ವಿರುದ್ಧ ಸೋತಾಗ ಯುದ್ಧದಲ್ಲಿ ಭಾಗವಹಿಸಿದ ಬಹುತೇಕ ನಾಯಕರು ವಿಜಯನಗರದ ಒಕ್ಕೂಟದಿಂದ ಹೊರ ನಡೆದು ಸ್ವತಂತ್ರರಾದರು. ಒಟ್ಟಿನಲ್ಲಿ ವಿಜಯನಗರದ ಕೃಷ್ಣದೇವರಾಯ, ಅಚ್ಯುತರಾಯ, ಸದಾಶಿವರಾಯರು ನಾಯಕತನಕ್ಕಾಗಿ ನೀಡಿದ ಅತಿಯಾದ ಭೂದಾನಗಳು ಪ್ರಾದೇಶಿಕ ವಲಯದಲ್ಲಿ ನಾಯಕರು ಸ್ಥಳೀಯ ದೊರೆಗಳಾಗಿ ರೂಪಗೊಂಡು ಈ ಮಹಾನ್ ಸಾಮ್ರಾಜ್ಯದ ವಿಘಟನೆಯಲ್ಲಿ ಪ್ರಧಾನ ಪಾತ್ರವನ್ನು ಪೋಷಿಸಿದರು.

೬. ಕ್ರಿ.ಶ. ೧೫೬೫ರಲ್ಲಿ ನಡೆದ ರಕ್ಕಸಗಿ ತಂಗಡಿಗಿ ಯುದ್ಧವು ಇಡೀ ವಿಜಯನಗರದ ರಾಜಕೀಯ ವ್ಯವಸ್ಥೆಯನ್ನು ಬುಡಮೇಲು ಮಾಡಿತು. ಈ ಯುದ್ಧದ ನಂತರ ಅಧಿಕಾರಕ್ಕೆ ಬಂದ ಅರವೀಡು ಮನೆತನವು ಚದುರಿಹೋದ ತನ್ನ ರಾಜಕೀಯ ಭೂಪಟವನ್ನು ಪುನರ್ ರಚಿಸುವ ಪ್ರಯತ್ನಕ್ಕೆ ಕೈಹಾಕದೇ ಹಲವಾರು ರಾಜಕೀಯ ಸಂದಿಗ್ಧತೆಗಳಿಗೆ ಬಲಿಯಾಗಬೇಕಾಯಿತು. ರಾಜಕೀಯವಾಗಿ ತಮ್ಮ ಪ್ರಧಾನ ನೆಲೆಗಳನ್ನು ಕಳೆದುಕೊಂಡ ಅರವೀಡು ಮನೆತನ ಹಿಂದಿನ ಅರಸರಂತೆಯೇ ಅಮರನಾಯಕ ಪದ್ಧತಿಯನ್ನು ಮುಂದುವರಿಸಿತು. ಈ ನಾಯಕ ಪದ್ಧತಿಯಲ್ಲಿ ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಿಕೊಂಡಿತು. ಸಂಗಮ, ಸಾಳ್ವ, ತುಳುವ ವಂಶದ ಆಳ್ವಿಕೆಯಲ್ಲಿ ನಾಯಕರು ಪ್ರಾಂತೀಯ ಮಟ್ಟದಲ್ಲಿ ರಾಜ್ಯ, ವೇಂಠೆ, ವಳಿತ, ನಾಡು, ಸೀಮೆಗಳ ಅಧಿಕಾರಿಗಳಾಗಿ

ನಿಯುಕ್ತಿಗೊಳ್ಳುತ್ತಿದ್ದರು. ಮಹಾಮಂಡಲೇಶ್ವರರು ದಂಣಾನಾಯಕರು ನಾಯಕಾಚಾರ್ಯರು ಅಮರನಾಯಕತನಕ್ಕಾಗಿ ಭೂ ಪ್ರದೇಶಗಳನ್ನು ನೀಡಲಾಗುತ್ತಿತ್ತು. ಅಮರನಾಯಕರು ಪ್ರಾಂತೀಯ ಮಟ್ಟದಲ್ಲಿ ಕಂದಾಯಾಧಿಕಾರಿಗಳಾಗಿ ಸೇನಾಧಿಕಾರಿಗಳಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದರು. ನಾಯಕರುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾವಣೆ ಜಾರಿಯಲ್ಲಿತ್ತು. ಇದರ ಹಿಂದಿನ ಉದ್ದೇಶ ರಾಜಕೀಯವಾಗಿ ವಂಶಪಾರಂಪರ್ಯವಾಗಿ ನಾಯಕರನ್ನು ಬೆಳೆಯಲು ಬಿಡುತ್ತಿರಲಿಲ್ಲ. ಆದರೆ ವಿಜಯನಗರದ ಅಧಿಕಾರವು ಕ್ಷೀಣಿಸುವ ಹಂತದಲ್ಲಿದ್ದಾಗ ಅಧಿಕಾರಕ್ಕೆ ಬಂದ ಅರವೀಡು ಮನೆತನ ಸಂಪೂರ್ಣವಾಗಿ ದುರ್ಬಲವಾಗಿತ್ತು. ಈಗಾಗಲೇ ರಾಜಕೀಯವಾಗಿ ಆರ್ಥಿಕವಾಗಿ ತಮ್ಮ ಶಕ್ತಿ ಸಂಪನ್ಮೂಲಗಳನ್ನು ವೃದ್ಧಿಸಿಕೊಂಡು ಅಮರನಾಯಕರಾಗಿ ತಲೆಬಾಗುವಂತಹ ಪರಿಸ್ಥಿತಿ ಅರವೀಡು ಮನೆತನದ ಕೆಲ ಅರಸರಿಗೆ ಅನಿವಾರ್ಯವಾಗಿತ್ತು. ಅರವೀಡು ಮನೆತನದ ಅರಸರು ವರ್ಗಾವಣೆ ನೀತಿಯನ್ನು ರದ್ದುಗೊಳಿಸಿ ಆಯಾ ಸ್ಥಳೀಯ ನಾಯಕರನ್ನು ಹಾಗೆಯೇ ನಾಯಕರನ್ನಾಗಿ ಮುಂದುವರೆಸಿದರು. ಇದು ವಂಶಪಾರಂಪರ್ಯ ಅಧಿಕಾರ ಮುಂದುವರಿಯಲು ಕಾರಣವಾಯಿತು. ಮುಂದಿನ ಹಂತದಲ್ಲಿ ಸ್ಥಳೀಯ ನಾಯಕರು ಸ್ವತಂತ್ರ ರಾಜರಾಗಿ ರೂಪುಗೊಳ್ಳಲು ಕಾರಣವಾಯಿತು.

೭. ವಿಜಯನಗರೋತ್ತರ ಕಾಲದ ಬಹುತೇಕ ನಾಯಕ ಪ್ರಭುತ್ವಗಳ ಮೂಲ ವಿಜಯನಗರ ಸಾಮ್ರಾಜ್ಯದ ಹುಟ್ಟು, ಬೆಳವಣಿಗೆ ಮತ್ತು ಅವನತಿಯ ಹಂತದಲ್ಲಿ ಕಾಣಿಸಿಕೊಂಡಿತು. ಅಮರನಾಯಕರೆಂಬ ಸೇನಾಧಿಕಾರಿಗಳ ವರ್ಗವೊಂದು ಬದಲಾದ ರಾಜಕೀಯ ಸನ್ನಿವೇಶಗಳಿಗೆ ತಕ್ಕಂತೆ ಸ್ವತಂತ್ರ ಅರಸು ಮನೆತನಗಳಾಗಿ ಕಾಣಿಸಿಕೊಂಡವು. ಇಂತಹ ನಾಯಕ ಪ್ರಭುತ್ವಗಳಲ್ಲಿ ಕೆಳದಿ, ಯಲಹಂಕ, ಚಿತ್ರದುರ್ಗ, ಗುಮ್ಮನಾಯಕನ ಪಾಳೆಯಗಳು ಮೊದಲ ದರ್ಜೆಯ ಅಮರನಾಯಕರಾಗಿ ಸಂಸ್ಥಾನಗಳನ್ನು ರೂಪಿಸಿಕೊಂಡರೆ ಹರತಿ, ಹಂಡೆ, ಗುಡೇಕೋಟೆ ಪಾಳೆಯಗಾರರು ದ್ವಿತೀಯ ದರ್ಜೆಯ ಅಮರನಾಯಕರಾಗಿದ್ದು ವಿಜಯನಗರದ ಪತನದ ನಂತರ ಸ್ವತಂತ್ರರಾದರು. ಕೆಳದಿ, ಯಲಹಂಕ, ಚಿತ್ರದುರ್ಗ, ಗುಮ್ಮನಾಯಕನ ಪಾಳೆಯಗಾರರಿಗೆ ಹೋಲಿಸಿ ನೋಡಿದಾಗ ಹರತಿ, ಹಂಡೆ, ಗುಡೇಕೋಟೆ ಪಾಳೆಯಗಾರರು ಪ್ರಾದೇಶಿಕ ಮತ್ತು ಸಂಪನ್ಮೂಲಗಳ ದೃಷ್ಟಿಯಿಂದ ಕಿರಿದಾಗಿದ್ದರೂ ಹೋರಾಟಗಳಲ್ಲಿ ಸಾಕಷ್ಟು ಹೆಸರನ್ನು ಗಳಿಸಿಕೊಂಡಿದ್ದರು. ಇವುಗಳ ಪೈಕಿ ಕೆಳದಿ, ಚಿತ್ರದುರ್ಗ, ಹಂಡೆ, ಹರತಿ, ಗುಡೇಕೋಟೆ, ಗುಮ್ಮನಾಯಕನ ಪಾಳೆಯದ ಪಾಳೆಯಗಾರರು ಸಂಪೂರ್ಣ ಪತನಗೊಂಡಿದ್ದು ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಕೈಗೊಂಡ ಯುದ್ಧಗಳಿಂದಾಗಿ ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಪಾಳೆಯಗಾರರ ಮೇಲೆ ದಮನಕಾರಿ ನೀತಿಯನ್ನು ಮುಂದುವರಿಸಿದರೆ ಬ್ರಿಟಿಷರು ಪಾಳೆಯಗಾರರನ್ನು ರಾಜಕೀಯದಲ್ಲಿ ಏಳಿಗೆಯಾಗದಂತೆ ನೆಲಸಮ ಮಾಡಿದರು. ಯಲಹಂಕದ ನಾಡಪ್ರಭುಗಳು ತಮ್ಮ ಅವನತಿಯವರೆಗೂ ಅರವೀಡು ಮನೆತನದ ಸಾಮಂತರಾಗಿ ಮುಂದುವರಿದು ಮೈಸೂರು ಒಡೆಯರ ಕಾಲದಲ್ಲಿ ಅವನತಿಯಾದರು. ವಿಜಯನಗರ ಕಾಲ ಮತ್ತು ವಿಜಯನಗರೋತ್ತರ ಕಾಲದಲ್ಲಿ ತಮ್ಮ ರಾಜಕೀಯ ಬದುಕಿನಲ್ಲಿ ಸಾಕಷ್ಟು ಏರಿಳಿತವನ್ನು ಕಂಡರು. ಸಾಹಸಿಗಳು ಸ್ವತಂತ್ರಪ್ರಿಯರು ಆಗಿದ್ದ ನಾಯಕರು ವಿಜಯನಗರೋತ್ತರ ಕಾಲದ ಪ್ರಕ್ಷುಬ್ಧ ರಾಜಕೀಯ

ಪರಿಸ್ಥಿತಿಯಲ್ಲಿ ತಮ್ಮ ಸ್ವಾತಂತ್ರ್ಯದ ಅಸ್ತಿತ್ವಕ್ಕಾಗಿ ಹಲವಾರು ಯುದ್ಧಗಳನ್ನು ಮಾಡಿ ನಾಶವಾದರು. ಇಷ್ಟೆಲ್ಲಾ ರಾಜಕೀಯ ಅವಾಂತರಗಳ ಮಧ್ಯೆಯು ಕೋಟೆಗಳನ್ನು ನಿರ್ಮಿಸಿ ಪ್ರಜೆಗಳನ್ನು ರಕ್ಷಣೆ ಮಾಡಿದರು. ವಿಜಯನಗರದ ಮಾದರಿಯಲ್ಲಿಯೇ ತಮ್ಮ ಸಂಸ್ಥಾನದಲ್ಲಿ ಆಡಳಿತವನ್ನು ಏರ್ಪಡಿಸಿ ಉತ್ತಮವಾದ ಆಡಳಿತವನ್ನು ರೂಪಿಸುವಲ್ಲಿ ಯಶಸ್ವಿಯಾದರು. ನಾಯಕರು ದರ್ಪಿಷ್ಟ ಪ್ರಭುತ್ವ ನಡೆಸಿದರೂ ಅವರ ಆಡಳಿತ ಪ್ರಜಾಭಿಮುಖಿಯಾಗಿತ್ತು.

೮. ಅಮರನಾಯಕರು ಪಾಳೆಯಗಾರರಾಗಿ ರೂಪಾಂತರಗೊಂಡ ಪ್ರಕ್ರಿಯೆಯ ನಂತರ ಮತಾಂತರ ಕಾರ್ಯಗಳು ನಿರಂತರವಾಗಿ ನಡೆದವು. ಈ ಮತಾಂತರ ಪ್ರಕ್ರಿಯೆಯನ್ನು ಬ್ರಾಹ್ಮಣರು ಹಾಗೂ ವೀರಶೈವರು ಆರಂಭಿಸಿದರು. ಬಹುತೇಕ ಅಲಕ್ಷಿತ ಹಾಗೂ ಸಮಾಜದ ಕೆಳವರ್ಗದಿಂದ ಬಂದಿದ್ದ ನಾಯಕರನ್ನು ರಾಜತ್ವ ಪದವಿಗೇರಿಸಲು ಈ ಎರಡು ಮತಗಳು ನಿರಂತರವಾಗಿ ಪೈಪೋಟಿಗೆ ಇಳಿದವು. ವಿಜಯನಗರದ ಪತನದ ನಂತರ ಅಲ್ಲಿಂದ ಪಲಾಯನ ಮಾಡಿ ಬಂದ ಬ್ರಾಹ್ಮಣ ಹಾಗೂ ವೀರಶೈವ ಮತಗಳ ಮುಖ್ಯಸ್ಥರು ಸ್ವತಂತ್ರ ರಾಜರಾಗಿದ್ದ ನಾಯಕರುಗಳ ಪ್ರಭುತ್ವದಲ್ಲಿ ರಾಜಾಶ್ರಯ ಪಡೆದುಕೊಂಡರು. ವೈಷ್ಣವ ಪಂಥದ ಕೆಲವು ಪುರೋಹಿತರು ನಾಯಕರಿಗೆ ಕ್ಷಾತ್ರತ್ವದ ಹೆಸರಿನಲ್ಲಿ ಜನಿವಾರಧಾರಣೆ ಮಾಡಿಸಿ ಆ ಮೂಲಕ ನಾಯಕರನ್ನು ವೈಷ್ಣವರನ್ನಾಗಿ ಈ ಪಂಥವನ್ನು ಜನಪ್ರಿಯಗೊಳಿಸಲು ಪ್ರಯತ್ನಿಸಿದವು. ಆದರೆ ಈ ಸಂದರ್ಭದಲ್ಲಿ ವೈಷ್ಣವ ಮತಕ್ಕಿಂತಲೂ ಶೈವ ಪಂಥವೇ ಹೆಚ್ಚು ಜನಪ್ರಿಯಗೊಂಡಿತು. ಕೆಲವು ಶೈವ ಮಠಗಳು ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬಂದು ಗುರುಮನೆಗಳೆನಿಸಿಕೊಂಡು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡವು. ವೀರಶೈವ ಮಠಾಧಿಪತಿಗಳು ನಾಯಕ ಪ್ರಭುಗಳಿಗೆ ಲಿಂಗಧಾರಣೆ ಮಾಡಿಸಿದರು. ರಾಜಕೀಯ ಉಳಿವಿಗಾಗಿ ಅಥವಾ ಇನ್ನಾವುದೋ ಕಾರಣಗಳಿಗಾಗಿ ಈ ರೀತಿ ಧಾರ್ಮಿಕ ಮತಾಂತರ ಪ್ರಕ್ರಿಯೆಗೆ ನಾಯಕ ಪ್ರಭುಗಳು ಒಳಗಾದರು. ಚಿತ್ರದುರ್ಗ, ನಾಯಕನಹಟ್ಟಿ, ಸುರಪುರ, ಗುಡೇಕೋಟೆ, ಜರಿಮಲೆ ಮುಂತಾದ ಬೇಡನಾಯಕರು ಬ್ರಾಹ್ಮಣರಿಂದ ಜನಿವಾರಧಾರಣೆ ಮಾಡಿಸಿಕೊಂಡರು. ಹಾಗಲವಾಡಿ, ಮತ್ತೋಡು, ಹರಪನಹಳ್ಳಿ, ಹಂಡೆ ನಾಯಕರು ಲಿಂಗಧಾರಿಗಳಾದರು. ಈ ನಾಯಕರು ತಮ್ಮ ಆಡಳಿತ ಪ್ರದೇಶಗಳಲ್ಲಿ ಹಲವಾರು ಮಠಗಳನ್ನು, ಅಗ್ರಹಾರಗಳನ್ನು ನಿರ್ಮಿಸಿ ಇವುಗಳ ಮುಖಾಂತರ ಧರ್ಮ ಪ್ರಸಾರ ಮತ್ತು ಶಿಕ್ಷಣ ಪ್ರಸಾರ, ಅನ್ನ ದಾಸೋಹದಂತಹ ಸಾಮಾಜಿಕ, ಧಾರ್ಮಿಕ ಕಾರ್ಯಗಳು ಮುಂದುವರಿಯಲು ನೆರವಾದರು.

೯. ಅಮರನಾಯಕರು ಪಾಳೆಯಗಾರರಾಗಿ ರೂಪಾಂತರಗೊಂಡ ನಂತರ ತಮ್ಮ ತಮ್ಮ ಸಂಸ್ಥಾನಗಳಲ್ಲಿ ಸ್ವಯಂ ಆಡಳಿತವನ್ನು ಜಾರಿಗೆ ತಂದರು. ಸ್ವತಂತ್ರ ವಿದೇಶಾಂಗ ನೀತಿ, ರಕ್ಷಣಾ ನೀತಿ, ಆರ್ಥಿಕ ನೀತಿಗಳನ್ನು ಅಳವಡಿಸಿಕೊಂಡರೂ ಸಹ ಆಡಳಿತವನ್ನು ಮಾತ್ರ ವಿಜಯನಗರದ ಮಾದರಿಯಲ್ಲಿಯೇ ಮುಂದುವರಿಸಿಕೊಂಡು ಹೋದರು. ಇದಕ್ಕೆ ನಾಯಕರ ಕಾಲದ ಆಡಳಿತ ದಾಖಲಾತಿ ಪತ್ರಗಳು ಮತ್ತು ಶಾಸನಗಳು ಸಮರ್ಥನೆಯನ್ನು ನೀಡುತ್ತವೆ. ವಿಜಯನಗರದವರಂತೆ

ನಾಯಕರು ತಮ್ಮ ಸಂಸ್ಥಾನಗಳ ಗ್ರಾಮಾಡಳಿತ ವಿಭಾಗದಲ್ಲಿ ಬಾರ ಬಲೂತಿ ಪದ್ಧತಿಯನ್ನು ಮುಂದುವರಿಸಿಕೊಂಡು ಹೋದರು. ಗ್ರಾಮಾಡಳಿತದಲ್ಲಿ ಗೌಡ, ಶಾನುಭೋಗ, ತೋಟಿ, ತಳವಾರ, ನೀರಗಂಟಿ, ಜೋಯಿಸ, ಕಮ್ಮಾರ, ಬಡಗಿ, ಅಗಸ, ಅಕ್ಕಸಾಲಿಗ, ನಾಯಿಂದ, ಪಟೇಲರು ಗ್ರಾಮದ ಉಸ್ತುವಾರಿಯನ್ನು ಹೊಂದಿದ್ದರು. ಇನ್ನು ನಾಯಕರ ಸಂಸ್ಥಾನಗಳಲ್ಲಿ ನಾಯಕರು ಪ್ರಧಾನ ಆಡಳಿತಗಾರರಾಗಿದ್ದರೆ ಆತನ ಕೆಳಗೆ ಮಂತ್ರಿ, ಪ್ರಧಾನ ಗುರಿಕಾರ, ಸೇನಾಧಿಪತಿ, ಪ್ರಧಾನ ದಳಪತಿ, ಉಪ ದಳಪತಿಗಳು ಆಡಳಿತದ ಪ್ರಮುಖ ಅಧಿಕಾರಿಗಳಾಗಿದ್ದರು.

ನಾಯಕ ಪ್ರಭುಗಳು ತಮ್ಮ ಆಡಳಿತ ವ್ಯಾಪ್ತಿಗೆ ಒಳಪಟ್ಟ ಪ್ರದೇಶಗಳಲ್ಲಿ ಬ್ರಹ್ಮದೇಯ, ದೇವಾದೇಯಗಳನ್ನು ನೀಡುತ್ತಾ ಊಳಿಗಮಾನ್ಯ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋದರು. ನಾಯಕರು ತಮ್ಮ ಅಧೀನದಲ್ಲಿ ಹಲವಾರು ಉಪ ನಾಯಕರನ್ನು ನೇಮಿಸಿಕೊಳ್ಳುವುದರ ಮೂಲಕ ಉಪ ಊಳಿಗಮಾನ್ಯವನ್ನು ಮುಂದುವರಿಸಿದರು. ವಿಜಯನಗರೋತ್ತರ ಕಾಲದ ರಾಜಕೀಯ ಅಸ್ಥಿರತೆಗಳ ನಡುವೆಯೂ ಸ್ಥಿರವಾದ ಆಡಳಿತವನ್ನು ನೀಡಲು ಪ್ರಯತ್ನಿಸಿದರು.

೧೦. ನಾಯಕರುಗಳ ಆಳ್ವಿಕೆಯ ಕಾಲದಲ್ಲಿ ವಿವಿಧ ಧರ್ಮಗಳು ಅಸ್ತಿತ್ವದಲ್ಲಿದ್ದರೂ ಮತ ಧರ್ಮಗಳ ನಡುವೆ ಸಂಘರ್ಷವಿರಲಿಲ್ಲ. ನಾಯಕರು ಎಲ್ಲಾ ಮತ ಧರ್ಮಗಳನ್ನು ಸಮಾನ ದೃಷ್ಟಿಯಿಂದ ಕಂಡು ತಮ್ಮ ಪ್ರದೇಶದಲ್ಲಿ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಸಮತೋಲನವನ್ನು ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾದರು. ಚಿತ್ರದುರ್ಗ, ಹಂಡೆ, ಹರತಿ, ಯಲಹಂಕ, ಗುಡೇಕೋಟೆ, ಕೆಳದಿ, ಗುಮ್ಮನಾಯಕ ಪಾಳೆಯದ ನಾಯಕರು ಶೈವ ಧರ್ಮಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದರೂ ಸಹ ವೈಷ್ಣವ ಧರ್ಮ ಮತ್ತು ಶಾಕ್ತ ಪಂಥಗಳಿಗೂ ಸಮಾನ ಆದ್ಯತೆಯನ್ನು ನೀಡಿದರು. ಇವರ ಕಾಲದಲ್ಲಿ ನಿರ್ಮಾಣಗೊಂಡಿರುವ ಶೈವ, ಶಾಕ್ತ ಮತ್ತು ವೈಷ್ಣವ ಪಂಥದ ದೇವಾಲಯಗಳು ಇದಕ್ಕೆ ಸಮರ್ಥನೆಯನ್ನು ನೀಡುತ್ತವೆ. ಮಠಗಳನ್ನು, ಅಗ್ರಹಾರಗಳನ್ನು, ಕೆರೆ, ಬಾವಿಗಳನ್ನು, ದೇವಾಲಯಗಳನ್ನು, ಮಂದಿರಗಳನ್ನು ನಿರ್ಮಿಸುವುದರ ಮೂಲಕ ಧರ್ಮ ಸಂರಕ್ಷಣೆಯನ್ನು ಮಾಡುತ್ತಾ ಜನಪಯೋಗಿ ಕಾರ್ಯಗಳನ್ನು ಮಾಡಿದರು. ಚಿತ್ರದುರ್ಗ ನಾಯಕರು, ಕೆಳದಿ, ಯಲಹಂಕ ನಾಯಕರ ಕಾಲದಲ್ಲಿ ನಿರ್ಮಾಣಗೊಂಡಿರುವ ನೂರಾರು ಕೆರೆಗಳು ಇಂದಿಗೂ ಜೀವಂತವಾಗಿದ್ದು ನಾಯಕರ ಕಾಲದ ಸಮಾಜಮುಖಿ ಕಾರ್ಯಗಳಿಗೆ ದಾಖಲೆಗಳಾಗಿವೆ. ನಾಯಕರುಗಳ ಸಂಸ್ಥಾನಗಳಲ್ಲಿ ಶಿಷ್ಟ ಮತ ಧರ್ಮಗಳ ಜೊತೆಗೆ ಜಾನಪದ ಧರ್ಮ, ಸಂಸ್ಕೃತಿ, ಆಚರಣೆಗಳು ಜಾರಿಯಲ್ಲಿದ್ದವು. ಉದಾಹರಣೆಯಾಗಿ ಜುಂಜಪ್ಪನ ಆರಾಧನೆ, ಜಗಲೂರಯ್ಯ ಪಾಪಯ್ಯ ನಾಯಕರೆಂಬ ವೀರರ ಆರಾಧನೆ ಮೊದಲಾದ ಸಾಂಸ್ಕೃತಿಕ ವೀರರ ಆರಾಧನೆಗಳು ಅಸ್ತಿತ್ವದಲ್ಲಿದ್ದವು.

೧೧. ವಿಜಯನಗರೋತ್ತರ ಕಾಲದ ನಾಯಕರು ಆರ್ಥಿಕವಾಗಿ ಬಲಾಢ್ಯರಾಗಿದ್ದರಿಂದ ಪದೇ ಪದೇ ಮರಾಠರ, ಮೊಗಲ್ ಸೇನಾನಿಗಳ ಹಾಗೂ ಹೈದರಾಲಿ, ಟಿಪ್ಪು, ಬ್ರಿಟಿಷರ ದಾಳಿಗೆ ಸಿಲುಕಿ ತಮ್ಮ ಆರ್ಥಿಕ ಸದೃಢತೆಯನ್ನು ಕಳೆದುಕೊಂಡವು. ಯಲಹಂಕ, ಗುಮ್ಮನಾಯಕನ ಪಾಳೆಯ,

ಗುಡೇಕೋಟೆ, ಹಂಡೆ, ಹರತಿ ಮೊದಲಾದ ನಾಯಕರ ಆಳ್ವಿಕೆಯ ಪ್ರದೇಶಗಳು ಹೆಚ್ಚಾಗಿ ಬಯಲುಸೀಮೆಯ ಪ್ರದೇಶಗಳಲ್ಲಿ ಸಂಘಟಿತವಾಗಿದ್ದರಿಂದ ಈ ಪ್ರದೇಶದ ರೈತರು ಕೃಷಿಯನ್ನೇ ಹೆಚ್ಚಾಗಿ ಅವಲಂಬಿಸಿದ್ದರು. ಬಯಲುಸೀಮೆಯ ಪ್ರದೇಶದ ನಾಯಕ ಪ್ರಭುಗಳು ನೂರಾರು ಕೆರೆಗಳನ್ನು ನಿರ್ಮಿಸಿ ಕೃಷಿಗೆ ಹೆಚ್ಚು ಉತ್ತೇಜನ ನೀಡಿದರು. ಕೆಳದಿಯು ಮಲೆನಾಡು ಪ್ರದೇಶವಾಗಿದ್ದರಿಂದ ಕೆಳದಿಯ ನಾಯಕರು ಆರ್ಥಿಕವಾಗಿ ಬಲಾಢ್ಯರಾಗಿದ್ದರು. ನಾಯಕರ ಸಂಸ್ಥಾನಗಳಲ್ಲಿ ಭೂಮಿಯು ರಾಜ್ಯ, ಖಾಸಗಿಯವರ ಹಿಡಿತದಲ್ಲಿತ್ತು. ಕೃಷಿ ಭೂಮಿಯನ್ನಾಧರಿಸಿ ಭೂಮಾಲೀಕರು, ಗೇಣಿದಾರರು, ಜೀತದಾಳು ವರ್ಗಗಳು ಅಸ್ತಿತ್ವದಲ್ಲಿದ್ದವು. ಕೆಳದಿ, ಯಲಹಂಕ ನಾಯಕರು ವ್ಯಾಪಾರ ವಾಣಿಜ್ಯೋದ್ಯಮಗಳಿಗೆ ಹೆಚ್ಚು ಒತ್ತನ್ನು ನೀಡಿದರು. ಕೆಳದಿ ನಾಯಕರು ಪಶ್ಚಿಮ ರಾಷ್ಟ್ರಗಳೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿದ್ದರು. ಯಲಹಂಕ, ಚಿತ್ರದುರ್ಗ, ಗುಮ್ಮನಾಯಕ ಪಾಳೆಯ, ಹಂಡೆ, ಹರತಿ, ಗುಡೇಕೋಟೆ ಸಂಸ್ಥಾನಗಳ ನಾಯಕರು ಕೃಷಿ, ಕೈಗಾರಿಕೆ, ವ್ಯಾಪಾರ ವಾಣಿಜ್ಯೋದ್ಯಮಗಳಿಗೆ ಪ್ರೋತ್ಸಾಹ ನೀಡುತ್ತಾ ತಮ್ಮ ತಮ್ಮ ಸಂಸ್ಥಾನಗಳ ಆರ್ಥಿಕ ಸ್ಥಿತಿಯ ಸಮತೋಲನವನ್ನು ಕಾಯ್ದುಕೊಳ್ಳುತ್ತಿದ್ದರು.

೧೨. ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ನಾಯಕರಸರ ವಾಸ್ತು ಮತ್ತು ಮೂರ್ತಿಶಿಲ್ಪಗಳ ಮೇಲೆ ವಿಜಯನಗರದ ಪ್ರಭಾವ ದಟ್ಟವಾಗಿರುವುದು ಕಂಡುಬರುತ್ತದೆ. ವಿಜಯನಗರ ಕಾಲದ ಅಮರನಾಯಕರಾಗಿ ವಿಜಯನಗರದ ಪತನದ ನಂತರ ಸ್ವತಂತ್ರ ನಾಯಕ ಪ್ರಭುತ್ವಗಳನ್ನು ಸ್ಥಾಪಿಸಿದ ನಾಯಕರಸರು ತಾವು ನಿರ್ಮಿಸಿದ ಕಲಾ ಸ್ಮಾರಕಗಳನ್ನು ವಿಜಯನಗರದ ಶೈಲಿಯಲ್ಲಿ ನಿರ್ಮಿಸಿಕೊಂಡರು. ಆದರೆ ವಿಜಯನಗರದವರಷ್ಟು ಶ್ರೀಮಂತ ಮತ್ತು ಭವ್ಯ ವಾಸ್ತು ರಚನೆ ಕಂಡುಬರುವುದಿಲ್ಲ.

ನಾಯಕರ ಕಾಲದ ಕಲಾ ಸ್ಮಾರಕಗಳು ವೈಭವಕ್ಕೆ ಬದಲಾಗಿ ಸರಳವಾಗಿ ರಚನೆಗೊಂಡಿವೆ. ಕೆಳದಿ, ಮಾಗಡಿ, ಬೆಂಗಳೂರು, ಶಿವಗಂಗೆ, ಚಿತ್ರದುರ್ಗ, ಚಳ್ಳಕೆರೆ, ಗುಡೇಕೋಟೆ, ಗುಮ್ಮನಾಯಕ ಪಾಳೆಯ ಹರತಿ, ಬಳ್ಳಾರಿ ಮೊದಲಾದ ಕಡೆ ನಾಯಕರ ಕಾಲದ ವಿಜಯನಗರೋತ್ತರ ಕಾಲದ ಕಲಾ ಸ್ಮಾರಕಗಳ ಅವಶೇಷಗಳಾದ ಕೋಟೆಗಳು, ಕಲ್ಲು ಮಂಟಪಗಳು, ದೇವಾಲಯಗಳು, ಮಠಗಳು ಕಂಡುಬರುತ್ತವೆ. ಸ್ಥಳೀಯವಾಗಿ ಲಭ್ಯವಿರುವ ಗ್ರಾನೈಟ್ ಶಿಲೆಯನ್ನು ತಮ್ಮ ಕಲಾ ಸ್ಮಾರಕಗಳ ನಿರ್ಮಾಣ ಕಾರ್ಯಕ್ಕೆ ಬಳಸಿರುವುದು ಕಂಡುಬರುತ್ತವೆ. ಬಲಾಢ್ಯ ಮತ್ತು ಅಭೇದ್ಯವಾದ ಕೋಟೆಗಳ ನಿರ್ಮಾಣ ವಿಜಯನಗರೋತ್ತರ ಕಾಲದ ರಾಜಕೀಯ ಪ್ರಕ್ಷುಬ್ಧತೆಯನ್ನು ಹಾಗೂ ರಕ್ಷಣೆಯ ಅನಿವಾರ್ಯತೆಯನ್ನು ಸಾರಿ ಹೇಳುತ್ತದೆ.

೧೩. ವಿಜಯನಗರೋತ್ತರ ಕಾಲದ ನಾಯಕ ಪ್ರಭುತ್ವಗಳಲ್ಲಿ ಹಲವಾರು ಸಾಮಾಜಿಕ ಪಿಡುಗುಗಳು ಜಾರಿಯಲ್ಲಿದ್ದವು. ಜಾತಿ ಪದ್ಧತಿಯು ಅತ್ಯಂತ ಕಟ್ಟುನಿಟ್ಟಾಗಿ ಆಚರಣೆಯಲ್ಲಿತ್ತು. ಸ್ವಗೋತ್ರಗಳಲ್ಲಿ ವಿವಾಹಗಳು ಸಂಪೂರ್ಣ ನಿಷೇಧವಾಗಿದ್ದವು. ಸತಿ ಪದ್ಧತಿ, ಪರದಾ ಪದ್ಧತಿಯು

ನಾಯಕರ ಕಾಲದ ರಾಜಮನೆತನದ ಸ್ತ್ರೀಯರಲ್ಲಿತ್ತು. ದೇವದಾಸಿ ಪದ್ಧತಿಯು ಆಚರಣೆಯಲ್ಲಿತ್ತು. ದೇವದಾಸಿ ಮತ್ತು ಬಸವಿ ಬಿಡುವ ಪದ್ಧತಿ ಮತ್ತು ಬಹುಪತ್ನಿತ್ವ ಮೇಲ್ಜಾತಿ ಮತ್ತು ಕೆಳಜಾತಿಗಳಲ್ಲಿ ಆಚರಣೆಯಲ್ಲಿತ್ತು. ಸಾಮಾಜಿಕ ಅನಿಷ್ಟ ಪದ್ಧತಿಗಳ ಮುಂದುವರಿಕೆಗೆ ನಾಯಕ ಪ್ರಭುಗಳ ಬೆಂಬಲವಿತ್ತು. ಸಾಮಾಜಿಕ ಪಿಡುಗುಗಳಾದ ಈ ಪದ್ಧತಿಗಳು ಅಂದಿನ ಕಾಲದ ಸಮಾಜದಲ್ಲಿ ಸಾಮಾನ್ಯ ಪದ್ಧತಿಗಳಾಗಿ ರೂಢಿಗತವಾಗಿತ್ತು. ಈ ಅನಿಷ್ಟ ಪದ್ಧತಿಗಳಿಂದಾಗಿ ಸ್ತ್ರೀಯರು ಮತ್ತಷ್ಟು ಶೋಷಣೆಗೆ ಒಳಗಾದರು. ಮೇಲ್ವರ್ಗದ ಸ್ತ್ರೀಯರನ್ನು ಹೊರತುಪಡಿಸಿದರೆ ಉಳಿದ ಸ್ತ್ರೀಯರು ಸಂಪೂರ್ಣವಾಗಿ ಹಕ್ಕುಗಳ ವಂಚಿತ ಸಮುದಾಯವಾಗಿ ಕಾಣಿಸಿಕೊಂಡರು. ಪ್ರಾಂತೀಯ ಮಟ್ಟದಲ್ಲಿ ದಂಗೆಗಳನ್ನು ಹತ್ತಿಕ್ಕುತ್ತಾ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುತ್ತಿದ್ದರು. ಹಲವಾರು ಮಠಗಳನ್ನು, ಅಗ್ರಹಾರಗಳನ್ನು ನಿರ್ಮಿಸಿ ಶಿಕ್ಷಣದ ಪ್ರಗತಿಗೆ ಕಾರಣರಾಗಿ ಆ ಮೂಲಕ ವಿಜಯನಗರದ ಅಭ್ಯುದಯ ಸಾಧಿಸಿದರು.

೧೪. ವಿಜಯನಗರ ಕಾಲದಲ್ಲಿ ವಿವಿಧ ಜಾತಿಗಳಿಗೆ ಮತ್ತು ಸಮುದಾಯಗಳಿಗೆ ನಾಯಕತನವನ್ನು ನೀಡಿದ್ದರು ಸಹ ಬ್ರಾಹ್ಮಣರೇ ನಾಯಕತನವನ್ನು ಪಡೆಯುವುದರಲ್ಲಿ ಮೇಲುಗೈ ಸಾಧಿಸಿದ್ದರು. ಮಹಾಪ್ರಧಾನರಾಗಿ, ಮಹಾಮಂಡಲೇಶ್ವರರಾಗಿ, ರಾಯರಾಸದವರಾಗಿ, ಕಾರ್ಯಕರ್ತರಾಗಿ, ಪ್ರಧಾನರಾಗಿ ಆಡಳಿತದ ಮುಖ್ಯ ಆಯಕಟ್ಟಿನಲ್ಲಿದ್ದು ಹೆಚ್ಚು ಭೂ ಹಿಡುವಳಿಗಳನ್ನು ಉಂಬಳಿ ರೂಪದಲ್ಲಿ ಬ್ರಾಹ್ಮಣ ಸಮುದಾಯವು ಪಡೆದುಕೊಂಡಿತು. ಬ್ರಾಹ್ಮಣ ಸಮುದಾಯವನ್ನು ಹೊರತುಪಡಿಸಿದರೆ ಬೇಡ ಸಮುದಾಯವು ಹೆಚ್ಚು ನಾಯಕತನವನ್ನು ಪಡೆದುಕೊಂಡಿದೆ. ಇನ್ನುಳಿದಂತೆ ಒಕ್ಕಲಿಗ, ಗೌಡ, ಲಿಂಗಾಯಿತ, ಬಲಿಜ, ಗೊಲ್ಲ ಸಮುದಾಯಗಳು ಕಡಿಮೆ ಪ್ರಮಾಣದಲ್ಲಿ ನಾಯಕತನವನ್ನು ಪಡೆದುಕೊಂಡಿವೆ. ವಿಜಯನಗರದ ಶಾಸನಗಳಲ್ಲಿ ಮುಸ್ಲಿಂ ಸಮುದಾಯದ ರುಸ್ತುಂಖಾನ್ ಒಡೆಯ ಎಂಬುವನು ವಿಜಯಪುರ ಸೀಮೆಯನ್ನು ಕ್ರಿ.ಶ. ೧೫೫೪ರಲ್ಲಿ ಪಡೆದುಕೊಂಡಿರುವುದು ಶಾಸನೋಕ್ತವಾಗಿದೆ.

ಸದಾಶಿವನ ಆಳ್ವಿಕೆಯಲ್ಲಿ ಆಡಳಿತದ ಪ್ರಮುಖ ರೂವಾರಿಯಾಗಿದ್ದ ರಾಮರಾಯನು ಮುಸ್ಲಿಮರ ಪರ ಮೃದು ಧೋರಣೆಯನ್ನು ಹೊಂದಿದ್ದ. ಈತ ವಿಜಯನಗರದ ಸೇನೆಯಲ್ಲಿ ಮುಸ್ಲಿಮರನ್ನು ಕೂಡ ನೇಮಿಸಿಕೊಂಡಿದ್ದ. ಅಳಿಯ ರಾಮರಾಯನ ಉದಾರ ನೀತಿಗಳಿಂದ ರುಸ್ತುಂಖಾನ್ ಒಡೆಯನಿಗೆ ನಾಯಕತನ ದೊರೆತಿರುವ ಸಾಧ್ಯತೆಗಳಿದ್ದು ಈತನನ್ನು ಹೊರತು ಜೊತೆಗೆ ಮುಸ್ಲಿಂ ಸಮುದಾಯದ ಆಯನ ಮಲುಕ ವೊಡೆಯರು ನಾಯಕತನವನ್ನು ಕ್ರಿ.ಶ. ೧೫೬೩ರಲ್ಲಿ ಸದಾಶಿವರಾಯ ಮತ್ತು ರಾಮರಾಯನಿಂದ ಪಡೆದಿದ್ದ. ಆಯನ ಮಲಕು ಎಂಬುದು ಐನ್-ಉಲ್-ಮುಲ್ಕ್ ಎಂಬ ಮುಸ್ಲಿಂ ಹೆಸರು ಅಪಭ್ರಂಶವಾಗಿರಬಹುದೆಂದು ಡಾ.ಬಾ.ರಾ. ಗೋಪಾಲ್ ಅಭಿಪ್ರಾಯಪಡುತ್ತಾರೆ.

೧೫. ನಾಯಕತನವನ್ನು ಪಡೆದುಕೊಂಡ ವ್ಯಕ್ತಿಗಳು ತಮ್ಮ ಆಡಳಿತ ವ್ಯಾಪ್ತಿಯಲ್ಲಿ ಸೇನಾ ಠಾಣೆಗಳನ್ನು ಸ್ಥಾಪಿಸಿಕೊಂಡು ಆ ಸೇನಾ ಠಾಣೆಗಳನ್ನು ತೆರಿಗೆ ವಸೂಲಿ ಕೇಂದ್ರಗಳನ್ನಾಗಿಸಿಕೊಂಡು ವಿಜಯನಗರದ ಅರಸರಿಗೆ ನಿರ್ದಿಷ್ಟ ಸಮಯದಲ್ಲಿ ನಿಗದಿ ಪಡಿಸಿದ ತೆರಿಗೆಯ ಮೊತ್ತವನ್ನು

ಸಂದಾಯ ಮಾಡುತ್ತಿದ್ದರು. ಇಲ್ಲವೇ ವಿಜಯನಗರದ ಅರಸರ ಅನುಮತಿಯ ಮೇರೆಗೆ ತಾವು ಸಂಗ್ರಹ ಮಾಡಿಕೊಂಡ ತೆರಿಗೆಯಲ್ಲಿ ದೇವಾಲಯಗಳಿಗೆ, ಅಗ್ರಹಾರಗಳಿಗೆ ದಾನ ದತ್ತಿಗಳನ್ನು ನೀಡುತ್ತಿದ್ದರು. ಈ ಬಗೆಯ ಸೇನಾ ಠಾಣೆಗಳ ಉಸ್ತುವಾರಿಯನ್ನು ನಾಯಕರು ನಿಭಾಯಿಸುತ್ತಿದ್ದರು ಎಂಬುದನ್ನು ಸಂಗಮ ವಂಶದ ಇಮ್ಮಡಿ ದೇವರಾಯನ ಕಾಲದ ಮಳವಳ್ಳಿಯ ಕಿರಗಸೂರು ಶಾಸನವು (ಶಾ.ಸಂ. ೧೦೨, ಮಳವಳ್ಳಿ, ಎ.ಕ.ಸಂ.೭, ಪು. ೪೦೪) ತಿಳಿಸುತ್ತದೆ. ಈ ಶಾಸನದಲ್ಲಿ ಗಜಾರಣ್ಯ ಕ್ಷೇತ್ರವಾದ ತಳಕಾಡಿನ ವೈದ್ಯನಾಥ ದೇವರ ಪೂಜೆ ನೈವೇದ್ಯಗಳಿಗಾಗಿ ಪೂರ್ವದಲ್ಲಿ ಬಿಡಲಾದ ದತ್ತಿ ಸಾಲುತ್ತಿರಲಿಲ್ಲವಾದ ಕಾರಣ ಮಹಾಪ್ರಧಾನ ಲಕ್ಕಣ್ಣ ದಂಡನಾಯಕನು ಕಳುಹಿಸಿದ ರಾಯಸದ ಮೇರೆಗೆ ಪಟ್ಟಣದ ರಾಯಣ್ಣವೊಡೆಯನು ತಳಕಾಡ ಪೆರುಮಾಳ ದೇವರಿಗೆ ಕಿರಗುಸೂರ ಗ್ರಾಮದಿಂದ ಅರಮನಗೆ ರಾಜನಿಗೆ ಸಂದಾಯವಾಗಬೇಕಿದ್ದ ಬೆಳಕವಾಡಿಯ ಠಾಣೆಗೆ ಸಲ್ಲಿಸಬೇಕಾಗಿದ್ದ ಹಲವು ಸೂಚಿತ ತೆರಿಗೆಗಳನ್ನು ವೈದ್ಯನಾಥ ದೇವರ ದೇವಾಲಯಕ್ಕೆ ನೀಡುವಂತೆ ನಿರೂಪವನ್ನು ಕಳುಹಿಸಿದನೆಂದು ಹೇಳಲಾಗಿದೆ. ರಾಜಧಾನಿಯಿಂದ ಹೊರಟ ಆಜ್ಞೆಯು ಪೆರುಮಾಳ ದೇವನಿಗೆ ಅವನ ಮೇಲಾಧಿಕಾರಿಗಳಿಂದ ಬಂದಿತೆಂದು ಹೇಳಬಹುದು. ಹಾಗೂ ಬೆಳಕವಾಡಿಯ ಠಾಣೆಯಂತೆ ವಿಜಯನಗರದಾದ್ಯಂತ ನಿಗದಿಪಡಿಸಿದ ಸ್ಥಳಗಳಲ್ಲಿ ಸೈನಿಕ ಠಾಣೆಗಳಿದ್ದು ಅಲ್ಲಿ ರಾಜನಿಗೆ ಸಂದಾಯವಾಗಬೇಕಾಗಿದ್ದ ತೆರಿಗೆಗಳನ್ನು ರಾಜ ಬೊಕ್ಕಸಕ್ಕೆ ಸಲ್ಲಿಸಬೇಕಾಗಿತ್ತು ಎಂಬುದನ್ನು ತಿಳಿಯಬಹುದು. ಇಂತಹ ಸೈನಿಕ ಠಾಣೆಗಳ ಉಸ್ತುವಾರಿಯನ್ನು ಅಮರನಾಯಕರು ನೋಡಿಕೊಳ್ಳುತ್ತಿದ್ದರು. ಹಾಗೂ ವಿಜಯನಗರ ಅರಸನ ಅನುಮತಿಯಿಂದ ತೆರಿಗೆಯ ಹಣದಲ್ಲಿ ದೇವಾಲಯಗಳಿಗೆ ಅರಸನಿಗೆ ಪುಣ್ಯವಾಗಲೆಂದು ದತ್ತಿಗಳನ್ನು ನೀಡುತ್ತಿದ್ದರು. ಹೀಗೆ ದೇವಾಲಯಗಳಿಗೆ ದತ್ತಿಗಳನ್ನು ನೀಡುವಾಗ ತಮ್ಮ ಅರಸರ ನಾಮವನ್ನು ಹಾಗೂ ತಮಗೆ ಅವರು ನಾಯಕತನಕ್ಕಾಗಿ ಪಾಲಿಸಿದ ಸೀಮೆಗಳ ಹೆಸರನ್ನು ಶಾಸನೋಕ್ತವಾಗಿ ಬರೆಯಿಸುತ್ತಿದ್ದರು. ಹೀಗೆ ಅರಸರ ಹೆಸರಿನಲ್ಲಿ ದಾನ ನೀಡುವ ಪ್ರಕ್ರಿಯೆಗಳಿಂದ ವಿಜಯನಗರದ ಅರಸನಿಗೆ ತಮ್ಮ ನಿಷ್ಠೆಯನ್ನು ವ್ಯಕ್ತಪಡಿಸುತ್ತಿದ್ದರು.

ವಿಜಯನಗರದ ಆಡಳಿತಾವಧಿಯಲ್ಲಿ ನಾಯಕ ಎಂಬ ಪದವೂ ಜಾತಿ ಸೂಚಕವಾಗಿರದೆ ಅದು ಅಧಿಕಾರವನ್ನು ಸೂಚಿಸುವ ಪದವಾಗಿತ್ತು. ವಿಜಯನಗರ ಕಾಲದಲ್ಲಿ ನಾಯಕತನವನ್ನು ಪಡೆದುಕೊಂಡ ವಿವಿಧ ಸಮುದಾಯಗಳ ನಾಯಕರು ತಮ್ಮ ಹೆಸರಿನ ಕೊನೆಯಲ್ಲಿ ನಾಯಕ ಎಂಬ ಅಧಿಕಾರ ಸೂಚಕ ಪದವನ್ನು ಸೇರಿಸಿಕೊಳ್ಳುತ್ತಿದ್ದರು. ಉದಾಹರಣೆಯಾಗಿ ಬಳ್ಳಾರಿ ಪಾಳೆಯಗಾರ ಹಂಡೆ ಹನುಮನಾಯಕ ಕುರುಬ ಸಮುದಾಯಕ್ಕೆ ಸೇರಿದವಾದರೂ ಆತ ನಾಯಕ ಎಂಬ ಹೆಸರನ್ನು ಪಡೆದುಕೊಂಡಿದ್ದ. ಗುಮ್ಮನಾಯಕ ಪಾಳೆಯದ ಪಾಳೆಯಗಾರರೂ ರೆಡ್ಡಿ ಸಮುದಾಯದವರಾಗಿದ್ದರೂ ತಮ್ಮ ಹೆಸರಿನ ಕೊನೆಯಲ್ಲಿ ನಾಯಕ ಎಂಬ ನಾಮವನ್ನು ಹೊಂದಿದ್ದರು. ಕೆಳದಿ ನಾಯಕರು ಲಿಂಗಾಯಿತ ಸಮುದಾಯಕ್ಕೆ ಸೇರಿದವರಾಗಿದ್ದರೂ ತಮ್ಮ ಹೆಸರಿನ ಕೊನೆ ಭಾಗದಲ್ಲಿ ನಾಯಕ ಎಂಬ ನಾಮಧೇಯವನ್ನು ಹೊಂದಿದ್ದರು. ಹೀಗೆ ತಮ್ಮ ಹೆಸರಿನ ಕೊನೆಯ ಭಾಗದಲ್ಲಿ ನಾಯಕ ಎಂಬ ಬಿರುದನ್ನು ಧರಿಸಿದ್ದವರೆಲ್ಲ ಜಾತಿ ಸೂಚಕ ನಾಯಕರಾಗಲು ಹೇಗೆ

ಸಾಧ್ಯವಿಲ್ಲವೋ ಅದರಂತೆ ವಿಜಯನಗರದ ಅಧಿಕಾರಿ ವರ್ಗದವರೆಂದು ಗುರುತಿಸಲು ಸಾಧ್ಯವಿಲ್ಲ. ಹೆಸರಿನ ಕೊನೆಯಲ್ಲಿ ನಾಯಕ ಎಂಬ ಬಿರುದಿನ ಜೊತೆಗೆ ವಿಜಯನಗರದ ಅರಸನಿಂದ ನಾಯಕತನಕ್ಕಾಗಿ ಭೂಹಿಡುವಳಿಗಳನ್ನು ಪಡೆದವರನ್ನು ಮಾತ್ರ ನಾಯಕರೆಂದು ಗುರುತಿಸಬೇಕಾಗುತ್ತದೆ. ಹೀಗೆ ವಿಜಯನಗರದವರಿಂದ ನಾಯಕತನಕ್ಕಾಗಿ ಭೂಹಿಡುವಳಿಗಳನ್ನು ಪಡೆದುಕೊಂಡ ನಾಯಕರು ವಿಜಯನಗರದ ಆಡಳಿತ ಘಟಕಗಳಾದ ರಾಜ್ಯ, ವಳಿತ, ವೇಂಠೆ, ನಾಡು, ಸೀಮೆ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ವಿಜಯನಗರದ ಅರಸ ಮತ್ತು ಅಮರನಾಯಕರ ಮಧ್ಯೆ ಕಾರ್ಯಕರ್ತರೆಂಬ ಅಧಿಕಾರಿ ವರ್ಗವೂ ಕಾರ್ಯನಿರ್ವಹಿಸುತ್ತಿತ್ತು. ಹೀಗೆ ವಿಜಯನಗರದ ಅಧಿಕಾರವು ಅರಸನಿಂದ ಹಿಡಿದು ವಿವಿಧ ಹಂತದ ನಾಯಕರಲ್ಲಿ ಸಂಚಯನವಾಗುತ್ತಿತ್ತು.

೧೬. ವಿಜಯನಗರ ಕಾಲದಲ್ಲಿ ನಾಯಕತನ ನೀಡುವಿಕೆ ಸಂಗಮ ವಂಶದ ಒಂದನೇ ಹರಿಹರರಾಯನ ಕಾಲದಿಂದ ಆರಂಭವಾಯಿತು. ಸಂಗಮ ವಂಶದಲ್ಲಿ ವಿಜಯನಗರದಲ್ಲಿ ಒಟ್ಟು ೪೭ ಜನ ನಾಯಕರು ನಾಯಕತನಕ್ಕಾಗಿ ೪೮ ಬಾರಿ ವಿವಿಧ ಸೀಮೆಗಳನ್ನು ಪಡೆದಿರುವುದು ಶಾಸನೋಕ್ತವಾಗಿದೆ. ಅದರಂತೆ ಸಂಗಮರ ಕಾಲದಲ್ಲಿ ತೆಪ್ಪದ ನಾಗಂಣವೊಡೆಯ ಎರಡು ಬಾರಿ ನಾಯಕತನಕ್ಕಾಗಿ ಸೀಮೆಗಳನ್ನು ಪಡೆಯುತ್ತಾನೆ. ಅದರಂತೆ ಸಾಳುವರ ಕಾಲದಲ್ಲಿ ೨೦ ಜನ ನಾಯಕರು, ತುಳುವರ ಕಾಲದಲ್ಲಿ ೧೭೩ ಬಾರಿ ನಾಯಕತನಗಳನ್ನು ೧೬೩ ಜನ ನಾಯಕರು ವಿವಿಧ ಕಾಲಘಟ್ಟಗಳಲ್ಲಿ ಎರಡು ಬಾರಿ ನಾಯಕತನಗಳನ್ನು ಪಡೆದಿರುವುದು ಶಾಸನೋಕ್ತವಾಗಿದೆ. ಮತ್ತು ಅರವೀಡು ಕಾಲದಲ್ಲಿ ೫೧ ಬಾರಿ ೫೦ ನಾಯಕರು ವಿವಿಧ ಕಾಲಘಟ್ಟಗಳಲ್ಲಿ ನಾಯಕತನವನ್ನು ಪಡೆದುಕೊಂಡಿದ್ದಾರೆ. ಒಟ್ಟಿನಲ್ಲಿ ವಿಜಯನಗರ ಕಾಲದಲ್ಲಿ ೨೮೦ ಜನ ಅಮರನಾಯಕರು ಕಾರ್ಯನಿರ್ವಹಿಸಿರುವುದು ಶಾಸನೋಕ್ತವಾಗಿದೆ. ವಿಜಯನಗರದ ಸಂಗಮ, ಸಾಳುವ, ತುಳುವ ಮತ್ತು ಅರವೀಡು ಕಾಲದಲ್ಲಿ ೨೮೦ ನಾಯಕರು ೨೯೧ ಬಾರಿ ನಾಯಕತನಗಳನ್ನು ಪಡೆದುಕೊಂಡಿದ್ದಾರೆ. ಒಬ್ಬ ನಾಯಕನೇ ನಾಲ್ಕು ಬಾರಿ ಮತ್ತು ಎರಡು ಬಾರಿ ನಾಯಕತನಗಳನ್ನು ಪಡೆದಿರುವುದರಿಂದ ಇವರ ಒಟ್ಟಾರೆ ಸಂಖ್ಯೆ ೨೮೦ಕ್ಕೆ ಸೀಮಿತವಾಗಿದೆ.

ಶಾಸನಗಳ ಸಂಖ್ಯೆಯನ್ನು ಆಧರಿಸಿ ಹೇಳುವುದಾದರೆ ಸಂಗಮ ಮತ್ತು ಸಾಳುವರ ಕಾಲ ನಾಯಕ ಪದ್ಧತಿಯ ಬೆಳವಣಿಗೆಯ ಆರಂಭ ಕಾಲವಾದರೆ, ತುಳುವರ ಕಾಲ ಈ ವ್ಯವಸ್ಥೆಯ ಪ್ರವರ್ಧಮಾನ ಕಾಲವೆಂದು ಹಾಗೂ ಅರವೀಡು ಮನೆತನದ ಕಾಲ ನಾಯಕ ವ್ಯವಸ್ಥೆಯ ಅವನತಿಯ ಕಾಲವೆಂದು ಪರಿಗಣಿಸಬಹುದು.

೧೭. ವಿಜಯನಗರದ ಅರಸರು ಪ್ರಾದೇಶಿಕ ಮಟ್ಟದಲ್ಲಿ ನಾಯಕರಿಗೆ ನಾಯಕತ್ವವನ್ನು ನೀಡಿರುವುದರ ಮೂಲಕ ಭಾಗಶಃ ಸ್ವಯಂ ಆಡಳಿತದಿಂದ ಕೂಡಿದ ಪ್ರಾಂತೀಯ ಮಟ್ಟದ ಆಡಳಿತ ವ್ಯವಸ್ಥೆಯನ್ನು ರೂಪಿಸಿದರು. ಇದರಿಂದ ಕೇಂದ್ರವು ಪ್ರದೇಶಗಳ ಮೇಲೆ ನಿಯಂತ್ರಣಗಳನ್ನು ಹೊಂದಿದ್ದರೂ ಅದು ಕೇವಲ ರಾಜಕೀಯ ಮತ್ತು ಆರ್ಥಿಕ ಮತ್ತು ಸಾಂಸ್ಕೃತಿಕ ಸಂಬಂಧಗಳಿಗೆ

ಸೀಮಿತವಾಗಿತ್ತು. ಹಾಗೂ ಪ್ರಾಂತ್ಯಗಳಲ್ಲಿ ಅಲ್ಲಿನ ಮೂಲಭೂತ ವ್ಯವಸ್ಥೆಗಳಿಗೆ ತಕ್ಕಂತೆ ಸ್ಥಳೀಯ ಆಡಳಿತವೇ ಜಾರಿಯಲ್ಲಿದುದು ವೈಶಿಷ್ಟ್ಯವಾಗಿದೆ. ವಿವಿಧ ಭಾಷೆ, ಧರ್ಮ, ಜಾತಿ, ಜನಾಂಗಗಳಿಗೆ ತಕ್ಕಂತೆ ಸ್ಥಳೀಯ ಆಡಳಿತ ವ್ಯವಸ್ಥೆಯೊಂದು ರೂಪುಗೊಳ್ಳಲು ಕಾರಣವಾಯಿತು.

೧೮. ವಿಜಯನಗರ ಕಾಲದಲ್ಲಿ ಪ್ರಾಂತ್ಯಾಧಿಕಾರಿಗಳಾಗಿ ಸೇನಾಧಿಕಾರಿಗಳಾಗಿದ್ದ ಅಮರನಾಯಕರು ತಮ್ಮ ಆಡಳಿತ ವ್ಯಾಪ್ತಿಯ ಪ್ರದೇಶಗಳಲ್ಲಿ ಕ್ಷಾಮ ಡಾಮರಗಳನ್ನು ನಿಯಂತ್ರಿಸಿ, ಆಸ್ಪತ್ರೆಗಳನ್ನು ಔಷಧಾಲಯಗಳನ್ನು ಸಾರ್ವಜನಿಕರ ಬಳಕೆಗಾಗಿ ಕೆರೆ, ಕಾಲುವೆ-ಬಾವಿಗಳನ್ನು ನಿರ್ಮಿಸುತ್ತಿದ್ದರು. ಪ್ರಾಂತೀಯ ಮಟ್ಟದಲ್ಲಿ ದಂಗೆಗಳನ್ನು ಹತ್ತಿಕ್ಕುತ್ತ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುತ್ತಿದ್ದರು. ಮಠಗಳನ್ನು, ಅಗ್ರಹಾರಗಳನ್ನು, ದೇವಾಲಯಗಳನ್ನು ನಿರ್ಮಿಸಿ ಶಿಕ್ಷಣದ ಪ್ರಗತಿಗೆ ಕಾರಣರಾಗಿ ಆ ಮೂಲಕ ವಿಜಯನಗರದ ಅಭ್ಯುದಯ ಸಾಧಿಸಿದರು.

❖❖❖

ಅನುಬಂಧ-1

ಸಂಗಮ ಮನೆತನದ ವಂಶಾವಳಿ

- ಸಂಗಮ
  - ಹರಿಹರ
  - ಕಂಪಣ
  - ಬುಕ್ಕ(ಕ್ರಿ.ಶ.1344–77)
    - ಕುಮಾರ ಕಂಪಣ
    - ವಿರೂಪಣ್ಣ
    - ಹರಿಹರ II (ಕ್ರಿ.ಶ. 1377–1404)
      - ವಿರೂಪಾಕ್ಷ I (ಕ್ರಿ.ಶ. 1404–5)
      - ಬುಕ್ಕ II (ಕ್ರಿ.ಶ.1405–6)
      - ದೇವರಾಯ I (ಕ್ರಿ.ಶ.1406–1422)
        - ರಾಮಚಂದ್ರರಾಯ (ಕ್ರಿ.ಶ.1422)
        - ವಿಜಯರಾಯ II (ಕ್ರಿ.ಶ. 1422–26)
          - ಪ್ರೌಢದೇವರಾಯ II (ಕ್ರಿ.ಶ. 1422–1446)
            - ವಿಜಯರಾಯ II (ಕ್ರಿ.ಶ.1446–7)
            - ಮಲ್ಲಿಕಾರ್ಜುನ (ಕ್ರಿ.ಶ.1447–1465)
              - ರಾಜಶೇಖರ(ಕ್ರಿ.ಶ.1466)
          - ಪ್ರತಾಪರಾಯ
            - ವಿರೂಪಾಕ್ಷ II (ಕ್ರಿ.ಶ.1469–1485)
              - ಪ್ರೌಢರಾಯ(ಕ್ರಿ.ಶ.1485)
  - ಮಾರಪ್ಪ
  - ಮುದ್ದಪ್ಪ

ವಿಜಯನಗರದ ಕೃಷ್ಣದೇವರಾಯನ ಕಾಲ

ಸಾಳುವ ಮನೆತನದ ವಂಶಾವಳಿ

ಗುಂಡ

ಸಾಳುವ ನರಸಿಂಹ (ಕ್ರಿ.ಶ. 1466–91) — ತಿಮ್ಮ

ಸಾಳುವ ನರಸಿಂಹ:

ತಿರುಮಲ ಅದವಾ ತಿಮ್ಮ (ಕ್ರಿ.ಶ. 1491) — ದಮ್ಮರಾಯ ಅದವಾ ಇಮ್ಮಡಿ ನರಸಿಂಹ (ಕ್ರಿ.ಶ. 1491–1505)

ವಿಜಯನಗರದ ಕೃಷ್ಣದೇವರಾಯನ ಕಾಲ


ಸಾಳುವ ಮನೆತನದ ವಂಶಾವಳಿ

ಗುಂಡ

- ಸಾಳುವ ನರಸಿಂಹ (ಕ್ರಿ.ಶ. 1466–91)
  - ತಿರುಮಲ ಅದವಾ ತಿಮ್ಮ (ಕ್ರಿ.ಶ. 1491)
  - ದಮ್ಮರಾಯ ಅದವಾ ಇಮ್ಮಡಿ ನರಸಿಂಹ (ಕ್ರಿ.ಶ. 1491–1505)
- ತಿಮ್ಮ


ವಿಜಯನಗರದ ಕೃಷ್ಣದೇವರಾಯನ ಕಾಲ

ತುಳುವ ಮನೆತನದ ವಂಶಾವಳಿ



1. ವೆಂಕಟ I, ಈತನು ಸೋದರಮಾವ ಸಲಕರಾಜು ತಿರುಮಲ ಎಂಬಾತನಿಂದ ಕೊಲ್ಲಲ್ಪಟ್ಟನು ಮತ್ತು ಸಲಕರಾಜು ತಿರುಮಲನೇ ಕೆಲವು ತಿಂಗಳು ರಾಜ್ಯ ಸೂತ್ರ ವಹಿಸಿದನು, ಆಮೇಲೆ ಸದಾಶಿವ ರಾಜನಾದ.

ಅರವೀಡು ವಂಶವೃಕ್ಷ



(ವಿ.ಸೂ.: ಕಂಸಗಳಲ್ಲಿ ಕೊಟ್ಟಿರುವ ಅಂಕಿಗಳು ಆಳ್ವಿಕೆಗೆ ಬಂದ ಕ್ರಮವನ್ನು ತಿಳಿಸುತ್ತವೆ.)

ಕೆಳದಿ ಅರಸು ವಂಶಾವಳಿ

1. ದೇವಗೊಂಡ

2. ಗೋಪಗೊಂಡ (ಮಗ)

3. ಬಸಗೊಂಡ (ಮಗ)

4. ಚುಡಗೊಂಡ ಭದ್ರಗೊಂಡ (3ನೇಯವನ ದತ್ತು (?) ಮಗ): ಹೆಂಡತಿ ತಿರುಮಂದು
(1499–1540 ?)

*** ಕೆಳದಿ ಮೂಲ ಸಂಸ್ಥಾನದಮನ್ನೆಯ ಚೌಡಪ್ಪನಾಯಕ**

(4ನೆಯವನ ಮಕ್ಕಳು)

5. ಸದಾಶಿವನಾಯಕ
(1540–1566)

7. (ಚಿಕ್ಕ) ಸಂಕಣ್ಣನಾಯಕ
(5ನೆಯವನ ಮಗ)
(1570–1580)

8. ರಾಮರಾಜನಾಯಕ
(5ನೇಯವನ ಮಗ)
(1580–1590)

6. ಭದ್ರಪ್ಪ=(ದೊಡ್ಡ)ಸಂಕಣ್ಣ=ಸುಕ್ಕುಲ
= ಸಂಕುಳ = ಇಮ್ಮಡಿ ಸದಾಶಿವರಾಯನಾಯಕ
(1566–1570)

9. (ಹಿರಿಯ) ವೆಂಕಟಪ್ಪನಾಯಕ
(6ನೆಯವನ ಮಗ)
(1590–1629)

10. ವೀರಭದ್ರನಾಯಕ
(7ನೇಯವನ ಮಗ)
(1629–1645)

11. ಶಿವಪ್ಪನಾಯಕ
(7ನೇ ಯವನ ಮೊಮ್ಮಗ)
(1645–1665–16/81 ?)

12. ಇಮ್ಮಡಿ ವೆಂಕಟಪ್ಪನಾಯಕ
(11ನೇಯವನ ತಮ್ಮ)
(1660–1661)

13. ಭದ್ರಪ್ಪನಾಯಕ
(11ನೇಯವನ ಮಗ)
(1662–1664)

|

14. (ಹಿರಿಯ) ಸೋಮಶೇಖರನಾಯಕ
(11ನೇ ಯವನ ಮಗ)
(1662–1677 ?)

|

15. ಕುತ್ಸಿತ ಶಿವಪ್ಪನಾಯಕ
(9ನೇಯವನ ಮಗಳು ಹಿರಿಯಮ್ಮ ಕಡೆಯಿಂದ
ಮರಿಮಗನ ಮಗ? 1669 ಇವನು ಅರಸನಾಗಿ ಆಳಲಿಲ್ಲ)

|

16. ರಾಣಿ ಚೆನ್ನಮ್ಮಾಜಿ
(17ನೆಯವನ ಧರ್ಮಪತ್ನಿ)
(1672–1697)

|

17. (ಹಿರಿಯ) ಬಸಪ್ಪನಾಯಕ
(19ನೆಯವನ ದತ್ತು ಮಗ)
(1697–1714)

|


18. ಇಮ್ಮಡಿ ಸೋಮಶೇಖರನಾಯಕ
(20ನೆಯವನ ಮಗ)
(1714–1740)

|

19. ಇಮ್ಮಡಿ ಬಸಪ್ಪನಾಯಕ
(21ನೆಯವನ ತಮ್ಮನ ಮಗ)
(1740–1755)


|

ಯಲಹಂಕ ಪ್ರಭುಗಳ ವಂಶವೃಕ್ಷ




ಆಧಾರ: ಡಾ. ಮುನಿರಾಜಪ್ಪ, ಮಾಗಡಿ ಸೀಮೆ ಸೀಮೆ ಇತಿಹಾಸ – ಸಂಸ್ಕೃತಿ

ಬೆಂಗಳೂರು ಕೆಂಪೇಗೌಡನ ವಂಶವೃಕ್ಷ



ಆಧಾರ: ಪ್ರೊ. ಎಂ.ವಿ. ಕೃಷ್ಣರಾವ್ ಅವರ ಬೆಂಗಳೂರು ಕೆಂಪೇಗೌಡ

ಯಲಹಂಕ, ಬೆಂಗಳೂರು, ಮಾಗಡಿ ನಾಡ ಪ್ರಭುಗಳ ವಂಶಾವಳಿ



ಆಧಾರ: ಎಸ್.ಕೆ. ನಂರಸಿಂಹಯ್ಯ, 924, ಮಾಗಡಿ ಕೆಂಪೇಗೌಡ ಬೆಂಗಳೂರು ಸ್ಥಾಪಕ ಮತ್ತು ಆತನ ವಂಶೀಕರು

ಗುಮ್ಮನಾಯಕನ ಪಾಳೆಪಟ್ಟು ನಾಯಕರ ವಂಶವೃಕ್ಷ

ಹಿರೇನಾರಸಿಂಹನಾಯಕ ಖಾದ್ರಿಪತಿನಾಯಕ + ದೊಡ್ಡಮ್ಮ

ಚೆನ್ನಮ್ಮ ನಾಯಕ

ಗುಮ್ಮನಾಯಕ

ಲಕ್ಕನಾಯಕ

ಕೃಷ್ಣಪ್ಪ ನಾಯಕ

ಹಿರೇಕದರಪ್ಪನಾಯಕ | ವಸಂತಪ್ಪನಾಯಕ | ಬಂಗಾರಪ್ಪನಾಯಕ

ಹಿರೇಕದರಪ್ಪನಾಯಕ:

ಹಿರೇಸಿಂಗಪ್ಪನಾಯಕ

ದೊಡ್ಡವಂಸತನಾಯಕ (ಕ್ರಿ.ಶ. 1457–67)

ದೊಡ್ಡಕದಿರಪ್ಪನಾಯಕ (ಕ್ರಿ.ಶ. 1467–73)

ಇಮ್ಮಡಿ ನಾರಸಿಂಹನಾಯಕ (ಕ್ರಿ.ಶ. 1473–82)

ಇಮ್ಮಡಿ ಕದಿರಪ್ಪನಾಯಕ (ಕ್ರಿ.ಶ. 1482–1508) (ಕ್ರಿ.ಶ. 1605 ಬೌರಿಂಗಪೇಟೆ ತೆಲುಗು ಶಾಸನದಲ್ಲಿ (ಸಂ.20) 'ಇಮ್ಮಡಿ ಕದಿರಪ್ಪನಾಯಿನಿ'ಯ ಪ್ರಸ್ತಾಪವಿದೆ. ಆದರೆ ಕಾಲಮಾನ ವ್ಯತ್ಯಾಸವಿರಲು ಇಲ್ಲಿ ವಂಶಿಕ ಶಾಖೆಯ ಬೇರೆ ವ್ಯಕ್ತಿ ಇರಬಹುದೆನಿಸುತ್ತದೆ)

ಅಗ್ಗಿತಿಮ್ಮನಾಯಕ (ಕ್ರಿ.ಶ. 1508–14) | ಕೃಷ್ಣಪ್ಪನಾಯಕ

ಅಗ್ಗಿತಿಮ್ಮನಾಯಕ:

ಹಿರೇ ವಸಂತನಾಯಕ (ಕ್ರಿ.ಶ. 1514–17) | ನಾಗಪ್ಪನಾಯಕ

ಹಿರೇ ವಸಂತನಾಯಕ:

ಇಮ್ಮಡಿ ಸಿಂಗಪ್ಪನಾಯಕ (ಕ್ರಿ.ಶ. 1517–21)

ಮುಮ್ಮಡಿ ನಾರಸಿಂಹನಾಯಕ (ಕ್ರಿ.ಶ. 1521–24)

ಇಮ್ಮಡಿ ವಸಂತನಾಯಕ (ಕ್ರಿ.ಶ. 1524–48)

ವೀರದಾಸಪ್ಪನಾಯಕ (ಕ್ರಿ.ಶ. 1548–84)

|

ಮುಮ್ಮಡಿ ವಸಂತನಾಯಕ (ಕ್ರಿ.ಶ. 1584–1644) [+ ಕದಿರಮ್ಮ (?)]

|

ನಾಲ್ವಡಿ ನರಸಿಂಹನಾಯಕ (ಕ್ರಿ.ಶ. 1644–80) + ಲಕ್ಷ್ಮಮ್ಮಣ್ಣಿ

|

ಬಂಗಾರ ತಿಮ್ಮನಾಯಕ (ಕ್ರಿ.ಶ. 1680–1728)

|

ಮುಮ್ಮಡಿಕದಿರಪ್ಪನಾಯಕ (ಕ್ರಿ.ಶ. 1728–40)

|

ಐಮುಡಿ ನಾರಸಿಂಹನಾಯಕ (ಕ್ರಿ.ಶ. 1740–60) + ಕದರಮ್ಮ + ರಾಮಕ್ಕನಾಯಕಿರಾಲು + 7 ಜನ ಇತರ ರಾಣಿಯರು


|

ನಾಲ್ವಡಿ ವಸಂತನಾಯಕ (ಕ್ರಿ.ಶ. 1760–65)


|

ಅರ್ಮುಡಿ ನಾರಸಿಂಹನಾಯಕ (ಕ್ರಿ.ಶ. 1765–1803)

ಚಿತ್ರದುರ್ಗದ ನಾಯಕರ ವಂಶಾವಳಿ (ರೈಸ್ ಆಧಾರಿತ)




ಚಿತ್ರದುರ್ಗ ಜಿಲ್ಲೆಯಲ್ಲಿ ಹರತಿ ಪಾಳೆಯಗಾರರು



ಅನುಬಂಧ-೨


ನಕ್ಷೆಗಳು

ವಿಜಯನಗರ ಸಾಮ್ರಾಜ್ಯದ ನಕ್ಷೆ






ವಿಜಯನಗರೋತ್ತರ ಕಾಲದ ನಕ್ಷೆ





ವಿಜಯನಗರ ಕಾಲದ ರಾಜ್ಯಗಳು





ಅನುಬಂಧ-೩

ಪರಾಮರ್ಶನ ಗ್ರಂಥಗಳು

ಪ್ರಾಥಮಿಕ ಆಕರಗಳು

ಶಾಸನ ಸಂಪುಟಗಳು

ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೩, ೧೯೭೪, ಮೈಸೂರು ಜಿಲ್ಲೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೪, ೧೯೭೫, ಮೈಸೂರು ಜಿಲ್ಲೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೫, ೧೯೭೬, ಮೈಸೂರು ಜಿಲ್ಲೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೬, ೧೯೭೭, ಮಂಡ್ಯ ಜಿಲ್ಲೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೭, ೧೯೭೯, ಮಂಡ್ಯ ಜಿಲ್ಲೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೮, ೧೯೮೪, ಹಾಸನ ಜಿಲ್ಲೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೯, ೧೯೯೦, ಹಾಸನ ಜಿಲ್ಲೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೧೦, ೧೯೮೭, ಹಾಸನ ಜಿಲ್ಲೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೧೧, ೧೯೯೮, ಚಿಕ್ಕಮಗಳೂರು ಜಿಲ್ಲೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೧೨, ೨೦೦೩, ಚಿಕ್ಕಮಗಳೂರು ಜಿಲ್ಲೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ೧೯೯೮, **ಬಳ್ಳಾರಿ ಜಿಲ್ಲೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨, ೧೯೯೯, **ಕೊಪ್ಪಳ ಜಿಲ್ಲೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೩, ೨೦೦೦, **ಹಂಪಿ ಶಾಸನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೪, ೨೦೦೦, **ತಮಿಳುನಾಡಿನ ಕನ್ನಡ ಶಾಸನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭, ೨೦೦೩, **ರಾಯಚೂರು ಜಿಲ್ಲೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೮, ೨೦೦೬, **ಬೀದರ್ ಜಿಲ್ಲೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೯, ೨೦೦೬, **ಬಾಗಲಕೋಟೆ ಜಿಲ್ಲೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧೦, ೨೦೧೧, **ಬಿಜಾಪುರ ಜಿಲ್ಲೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕಲಬುರ್ಗಿ ಎಂ.ಎಂ., ೧೯೭೯, **ಧಾರವಾಡ ತಾಲೂಕಿನ ಶಾಸನಗಳು**, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಗಂಗಾನಾಯಕ್ ಕೆ.ಎನ್. (ಪ್ರಸಂ), ೨೦೧೧, **ಕೆಳದಿ ಅರಸರ ಶಾಸನ ಸಂಪುಟ**, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ

ಗೋಪಾಲ್ ಬಿ.ಆರ್.(ಸಂ), ೧೯೯೦, **ವಿಜಯನಗರ ಶಾಸನ ಸಂಪುಟ-೨**, ಡೈರೆಕ್ಟರೇಟ್ ಆಫ್ ಆರ್ಕಿಯಾಲಜಿಕಲ್ ಆ್ಯಂಡ್ ಮ್ಯೂಜಿಯಂ, ಮೈಸೂರು.

ಗೋಪಾಲ್ ಬಿ.ಆರ್.(ಸಂ), ೧೯೯೦, **ವಿಜಯನಗರ ಶಾಸನ ಸಂಪುಟ-೩**, ಡೈರೆಕ್ಟರೇಟ್ ಆಫ್ ಆರ್ಕಿಯಾಲಜಿಕಲ್ ಆ್ಯಂಡ್ ಮ್ಯೂಜಿಯಂ, ಮೈಸೂರು

ಗೋಪಾಲ್ ಬಿ.ಆರ್.(ಸಂ), ೧೯೯೦, **ವಿಜಯನಗರ ಶಾಸನ ಸಂಪುಟ-೪**, ಡೈರೆಕ್ಟರೇಟ್ ಆಫ್ ಆರ್ಕಿಯಾಲಜಿಕಲ್ ಆ್ಯಂಡ್ ಮ್ಯೂಜಿಯಂ, ಮೈಸೂರು

ಜಮುನಾ ಎಂ., ೨೦೦೬, **ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ**, ಕೆಂಪೇಗೌಡ ಅಧ್ಯಯನ ಪೀಠ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ

ಪರಮಶಿವಮೂರ್ತಿ ಡಿ.ಬಿ., ೨೦೧೧, **ಕೃಷ್ಣದೇವರಾಯನ ಶಾಸನಗಳು**, ಸಂಪುಟ-೧, ಕನ್ನಡ ಸಂಸ್ಕೃತ ಶಾಸನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಮಶಿವಮೂರ್ತಿ ಡಿ.ಬಿ., ೨೦೦೭, **ಪ್ರೌಢದೇವರಾಯನ ಶಾಸನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ರೈಸ್ ಬಿ.ಎಲ್. (ಸಂ), ೧೮೯೪, **ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೩**, ಮೈಸೂರು ಜಿಲ್ಲೆ, ಮೈಸೂರು ಗವರ್ನಮೆಂಟ್, ಸೆಂಟ್ರಲ್ ಪ್ರೆಸ್, ಬೆಂಗಳೂರು

ರೈಸ್ ಬಿ.ಎಲ್. (ಸಂ), ೧೮೯೮, **ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೪**, ಭಾಗ-೨, ಮೈಸೂರು ಜಿಲ್ಲೆ, ಮೈಸೂರು ಗವರ್ನಮೆಂಟ್, ಸೆಂಟ್ರಲ್ ಪ್ರೆಸ್, ಬೆಂಗಳೂರು

ರೈಸ್ ಬಿ.ಎಲ್. (ಸಂ), ೧೯೦೨, **ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೫**, ಹಾಸನ ಜಿಲ್ಲೆ, ಮೈಸೂರು ಗವರ್ನಮೆಂಟ್, ಸೆಂಟ್ರಲ್ ಪ್ರೆಸ್, ಬೆಂಗಳೂರು

ರೈಸ್ ಬಿ.ಎಲ್. (ಸಂ), ೧೯೦೧, **ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೬**, ಕಡೂರು ಜಿಲ್ಲೆ, ಮೈಸೂರು ಗವರ್ನಮೆಂಟ್, ಸೆಂಟ್ರಲ್ ಪ್ರೆಸ್, ಬೆಂಗಳೂರು

ರೈಸ್ ಬಿ.ಎಲ್. (ಸಂ), ೧೯೦೧, **ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೭**, ಶಿವಮೊಗ್ಗ ಜಿಲ್ಲೆ, ಭಾಗ-೧, ಮೈಸೂರು ಗವರ್ನಮೆಂಟ್, ಸೆಂಟ್ರಲ್ ಪ್ರೆಸ್, ಬೆಂಗಳೂರು

ರೈಸ್ ಬಿ.ಎಲ್. (ಸಂ), ೧೯೦೨, **ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೮**, ಭಾಗ-೨, ಶಿವಮೊಗ್ಗ ಜಿಲ್ಲೆ, ಮೈಸೂರು ಗವರ್ನಮೆಂಟ್, ಸೆಂಟ್ರಲ್ ಪ್ರೆಸ್, ಬೆಂಗಳೂರು

ರೈಸ್ ಬಿ.ಎಲ್. (ಸಂ), ೧೯೦೨, **ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೯**, ಬೆಂಗಳೂರು ಜಿಲ್ಲೆ, ಮೈಸೂರು ಗವರ್ನಮೆಂಟ್, ಸೆಂಟ್ರಲ್ ಪ್ರೆಸ್, ಬೆಂಗಳೂರು

ರೈಸ್ ಬಿ.ಎಲ್. (ಸಂ), ೧೯೦೫, **ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೧೦**, ಕೋಲಾರ ಜಿಲ್ಲೆ, ಮೈಸೂರು ಗವರ್ನಮೆಂಟ್, ಸೆಂಟ್ರಲ್ ಪ್ರೆಸ್, ಬೆಂಗಳೂರು

ರೈಸ್ ಬಿ.ಎಲ್. (ಸಂ), ೧೯೦೨, **ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ-೧೧**, ತುಮಕೂರು ಜಿಲ್ಲೆ, ಮೈಸೂರು ಗವರ್ನಮೆಂಟ್, ಸೆಂಟ್ರಲ್ ಪ್ರೆಸ್, ಬೆಂಗಳೂರು.

ಕೈಫಿಯತ್ತುಗಳು, ಬಖೈರುಗಳು

ಅಬ್ದುಲ್ ಸತ್ತಾರ್ ಪಿ., ೧೯೮೭, ತರೀಕೆರೆ ಸಂಸ್ಥಾನದ ಕೈಫಿಯತ್ತು, ಹರತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.

ಕಲಬುರ್ಗಿ ಎಂ.ಎಂ. (ಸಂ), ೧೯೮೪, ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹುಲ್ಲೂರು ಶ್ರೀನಿವಾಸ ಜೋಯಿಸ (ಸಂ), ೧೯೬೮, ಚಿತ್ರದುರ್ಗದ ಬಖೈರು, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

ಶರ್ಮಾ ತಿ.ತಾ. (ಸಂ), ೧೯೯೯, ರಾಮರಾಯನ ಬಖೈರು, ಚಾರಿತ್ರಿಕ ದಾಖಲೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ರಾಮರಾವ್ (ಸಂ), ೧೯೪೨, ಚಿತ್ರದುರ್ಗ ಪಾಳೆಯಗಾರ ಜಂಪಣ್ಣ ನಾಯಕನ ಕೈಫಿಯತ್ತು, ಇಂಡಿಯನ್ ಹಿಸ್ಟಾರಿಕಲ್ ರೆಕಾರ್ಡ್ ಕಂಡಿಷನ್.

ವರದಿಗಳು

Mysore Archeological Reports.

Census of India, Mysore, 1891, 1901, 1921, 1961, 1971.

Political consulation, Fort St'George 7 August 1801, report of March 1802 to the board printed at Bellary, 1892.

Manual of the administration of the Madras presidency in illustration of the records of Government and the yearly administration report, 1886.

ಗೆಜೆಟಿಯರ್‌ಗಳು

ಅಭಿಶಂಕರ್ ಕೆ., ೧೯೭೨, ಬಳ್ಳಾರಿ ಡಿಸ್ಟ್ರಿಕ್ಟ್ ಗೆಜೆಟಿಯರ್, ಬೆಂಗಳೂರು.

ಅಭಿಶಂಕರ್ ಕೆ., ೧೯೭೫, ಶಿವಮೊಗ್ಗ ಡಿಸ್ಟ್ರಿಕ್ಟ್ ಗೆಜೆಟಿಯರ್, ಬೆಂಗಳೂರು.

ಫ್ರಾನ್ಸಿಸ್ ಡಬ್ಲ್ಯೂ., ೧೯೦೪, ಬಳ್ಳಾರಿ ಡಿಸ್ಟ್ರಿಕ್ಟ್ ಗೆಜೆಟಿಯರ್, ಮದ್ರಾಸ್.

ರೈಸ್ ಬಿ.ಎಲ್. (ಸಂ), ೧೮೯೭, ಮೈಸೂರು ಗೆಜೆಟಿಯರ್, ಸಂಪುಟ-೧,೨, ಲಂಡನ್, ಬೆಂಗಳೂರು.

ಸೂರ್ಯನಾಥ ಕಾಮತ್ ಯು. (ಸಂ), ೧೯೮೯, ಭಾರತದ ಗೆಜೆಟಿಯರ್, ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ-೧, ಕರ್ನಾಟಕ ರಾಜ್ಯ ಸರಕಾರ, ಪ್ರಕಟಣೆ.

ಹಯವದನರಾವ್ (ಸಂ), **ಮೈಸೂರು ಗೆಜೆಟಿಯರ್, ಸಂಪುಟ–೧, ೨, ೩, ೪, ೫** ಮೈಸೂರು ಸರಕಾರ, ಬೆಂಗಳೂರು.

ವಿಶ್ವಕೋಶಗಳು

ಅರವಿಂದ ಮಾಲಗಿತ್ತಿ (ಪ್ರ.ಸಂ.) ೨೦೦೫, **ಕನ್ನಡ ವಿಷಯ ವಿಶ್ವಕೋಶ,** ಕರ್ನಾಟಕ ಸಂಪುಟ–೧, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಅಂಬಳಿಕೆ ಹಿರಿಯಣ್ಣ (ಪ್ರ.ಸಂ.) ೨೦೦೯, **ಕನ್ನಡ ವಿಷಯ ವಿಶ್ವಕೋಶ,** ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಹಾ.ಮಾ. ನಾಯಕ (ಸಂ), ೧೯೭೪, **ಕನ್ನಡ ಜಾನಪದ ವಿಶ್ವಕೋಶ, ಸಂಪುಟ–೭,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಹಾ.ಮಾ. ನಾಯಕ (ಸಂ), ೧೯೭೯, **ಕನ್ನಡ ವಿಷಯ ವಿಶ್ವಕೋಶ,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಆನುಷಂಗಿಕ ಆಕರಗಳು

ಅಬ್ದುಲ್ ಸತ್ತಾರ್, ೧೯೯೭, **ತರೀಕೆರೆಯ ಪಾಳೆಯಗಾರರು,** ಶ್ರೀಲೋಕಪಾವನಿ ಪ್ರಕಾಶನ, ಪಾಂಡವಪುರ, ಮಂಡ್ಯ ಜಿಲ್ಲೆ.

ಈಶ್ವರಪ್ಪ ಎಂ.ಜಿ., ೧೯೮೨, **ಮ್ಯಾಸಬೇಡರು,** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ಕಪಟರಾಳ ಕೃಷ್ಣರಾವ್, **೧೯೭೭, ಸುರಪುರ ಸಂಸ್ಥಾನ ಇತಿಹಾಸ,** ಮಂಜುನಾಥ ಪ್ರಕಾಶನ, ಬೆಂಗಳೂರು.

ಕಲಬುರ್ಗಿ ಎಂ.ಎಂ. (ಸಂ), ೧೯೯೭, **ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ,** ಧಾರವಾಡ.

ಕಲಬುರ್ಗಿ ಎಂ.ಎಂ. (ಸಂ), ೧೯೯೪, **ಕರ್ನಾಟಕದ ಕೈಫಿಯತ್ತುಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕಲಬುರ್ಗಿ ಎಂ.ಎಂ. (ಸಂ), ೧೯೯೯, **ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು ಭಾಗ–೧,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕಲಬುರ್ಗಿ ಎಂ.ಎಂ. (ಸಂ), ೧೯೯೪, **ಗೊಲ್ಲಸಿರುಮನ ಚರಿತೆ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕಲಬುರ್ಗಿ ಎಂ.ಎಂ. (ಸಂ), ೧೯೯೫, **ಮಹಾನಾಡ ಪ್ರಭುಗಳು,** ನೊಳಂಬ ವೀರಶೈವ ಸಂಘ, ಬೆಂಗಳೂರು.

ಕುಶಾಲಪ್ಪ ಗೌಡ ಕೆ. (ಅನು), ೧೯೮೯, **ಮಧುರಾವಿಜಯಂ ಅಥವಾ ವೀರಕಂಪಣರಾಯ ಚರಿತಂ,** ಜಯಗೌರಿ ಪ್ರಕಾಶನ, ಸುಳ್ಯ

ಕೃಷ್ಣ ಭಟ್ ಕೆ., ೧೯೭೨, **ಕೌಟಿಲ್ಯನ ಅರ್ಥಶಾಸ್ತ್ರ,** ಸಮಾಜ ಪುಸ್ತಕಾಲಯ, ಧಾರವಾಡ.

ಕೃಷ್ಣರಾವ್ ಎ.ವಿ. ಮತ್ತು ಕೇಶವ ಭಟ್, ೧೯೭೦, **ಕರ್ನಾಟಕ ಪರಂಪರೆ ಸಂಪುಟ–೧,** ಬೆಂಗಳೂರು.

ಕೃಷ್ಣರಾವ್ ಎ.ವಿ. ಮತ್ತು ಕೇಶವಭಟ್, ೧೯೭೦, **ಕರ್ನಾಟಕ ಇತಿಹಾಸ ದರ್ಶನ,** ಕರ್ನಾಟಕ ಸರಕಾರಿ ಪ್ರಕಾಶನ, ಬೆಂಗಳೂರು.

ಕೆಳದಿ ಗುಂಡಾಜೋಯಿಸ್ (ಗದ್ಯಾನುವಾದ), ೧೯೯೯, **ಕೆಳದಿ ನೃಪವಿಜಯ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕೆಳದಿ ಗುಂಡಾಜೋಯಿಸ್, ೧೯೯೯, **ಲಿಂಗಣ್ಣ ಕವಿಯ ಕೆಳದಿ ನೃಪವಿಜಯಂ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕೇಶವರಾವ್ ಟಿ.ಬಿ., **ಹರಪನಹಳ್ಳಿ ಪಾಳೆಯಗಾರರು,** ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.

ಕೊಟ್ರೇಶ್ ಎಂ., ೨೦೧೦, **ಬಳ್ಳಾರಿ ಜಿಲ್ಲೆಯ ಕೋಟೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕೋಡದ ಎಸ್.ಬಿ., ೧೯೬೦, **ವಿಜಯನಗರ ನಿರ್ಣಾಯಕ ಯುದ್ಧ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಗಿರಿಜಾ ಟಿ., ೧೯೯೧, **ಚಿತ್ರದುರ್ಗ ಜಿಲ್ಲಾ ದರ್ಶಿನಿ,** ರೇಖಾ ಪ್ರಕಾಶನ, ದಾವಣಗೆರೆ.

ಗೋಪಾಲ ಬಾ.ರಾ. (ಸಂ), ೨೦೦೪, **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ಹೊಸಪೇಟೆ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ.

ಗೋಪಾಲ ಬಾ.ರಾ. (ಸಂ), ೨೦೦೮, **ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ಮೈಸೂರು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ.

ಗುಡ್ಡದೇಶ್ವರಪ್ಪ ಎಚ್., ೨೦೧೪, **ಚಿತ್ರದುರ್ಗ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳು,** ಪೂಜಾ ಪ್ರಕಾಶನ, ಚಿತ್ರದುರ್ಗ.

ಚಿದಾನಂದಮೂರ್ತಿ ಎಂ., ೧೯೮೫, **ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,

ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಚಿನ್ನಸ್ವಾಮಿ ಸೋಸಲೆ ಎನ್., ೨೦೦೪, **ಸಾಮ್ರಾಜ್ಯ ಮತ್ತು ಸಂಸ್ಥಾನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚೆಲುವರಾಜು (ಸಂ), **ಹಂಪಿಯ ಶಿಲ್ಪಗಳಲ್ಲಿ ಜಾನಪದೀಯ ಅಂಶಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಡಂಗ ಡಿ.ಬಿ., ೧೯೮೮, **ಜನಾಂಗ ಪರಿಚಯ**, ಪೆರಿಯಾರ್ ಪ್ರಕಾಶನ, ಧಾರವಾಡ.

ತಾರೀಹಳ್ಳಿ ಹನುಮಂತಪ್ಪ, ೨೦೧೨, **ನಾಯಕರ ಮಹಾಸಾಂಸ್ಥಾನ ಸುರಪುರ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ತಿರುಮಲೆ ತಾತಾಚಾರ್ಯ ಶರ್ಮ, ೧೯೫೭, **ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ**, ಮೈಸೂರು ಸರಕಾರ, ಬೆಂಗಳೂರು.

ತಿಪ್ಪೇರುದ್ರಸ್ವಾಮಿ ಹೆಚ್., ೧೯೮೫, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

ದಿವಾಕರ್ ಆರ್.ಆರ್., ೧೯೭೦, **ಕರ್ನಾಟಕ ಪರಂಪರೆ ಭಾಗ-೧ ಮತ್ತು ೨**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ದೀಕ್ಷಿತ್ ಜಿ.ಎಸ್. (ಸಂ), **ಸಂಗಮರ ಕಾಲದ ವಿಜಯನಗರ**, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

ದುರುಗಪ್ಪ ಎಂ.ಕೆ., ೨೦೧೦, **ವಿಜಯನಗರೋತ್ತರಕಾಲೀನ ಬೇಡ ಜನಾಂಗ ಚಾರಿತ್ರಿಕ ಅಧ್ಯಯನ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.

ನರಸಿಂಹಮೂರ್ತಿ ಎ.ಬಿ., ೧೯೯೬, **ವಿಜಯನಗರ ನಾಣ್ಯ ಸಂಪತ್ತು**, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ನಾಗರಾಜಪ್ಪ ಬಿ.ಆರ್., **ಹೊಸದುರ್ಗ ತಾಲ್ಲೂಕು ದರ್ಶನ**, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.

ನಾಗೇಗೌಡ ಹೆಚ್.ಎಲ್. (ಅನು), ೧೯೬೬, **ಪ್ರವಾಸಿ ಕಂಡ ಇಂಡಿಯಾ**, ಸಂಪುಟ-೩, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ನಾರಾಯಣಾಚಾರ್ ಕೆ., ೧೯೪೫, **ಮಧುಗಿರಿ ಚರಿತ್ರೆ**, ಐ.ವಿ.ಬಿ. ಸುಬ್ಬಯ್ಯ ಅಂಡ್ ಸನ್ಸ್, ಬೆಂಗಳೂರು.

ನಂಜುಂಡಸ್ವಾಮಿ ಎ.ಎಸ್ (ಸಂ), ೧೯೮೫, **ಕರ್ನಾಟಕದ ಪಾಳೆಯಗಾರರು ಮತ್ತು ಒಡೆಯರ ಇತಿಹಾಸ**, ಸಮಾಜ ಪುಸ್ತಕಾಲಯ, ಧಾರವಾಡ.

ನಂದೀಮಠ ಎನ್.ಸಿ., ೧೯೭೫, **ಕನ್ನಡ ನಾಡಿನ ಚರಿತ್ರೆ,** ಭಾಗ-೨, ಬೆಂಗಳೂರು.

ಪುರುಷೋತ್ತಮ ಬಿಳಿಮಲೆ ಮತ್ತು ಇತರರು, ೧೯೯೪, **ಹೊಸಪೇಟೆ ತಾಲ್ಲೂಕು ದರ್ಶನ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪುರುಷೋತ್ತಮ ಬಿಳಿಮಲೆ ಮತ್ತು ಚೆಲುವರಾಜು, ೧೯೯೬, **ಹಂಪಿ ಜಾನಪದ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪುಟ್ಟಣ್ಣ ಎಂ.ಎಸ್., ೧೯೨೪, **ಚಿತ್ರದುರ್ಗ ಪಾಳೆಯಗಾರರು,** ದಿ ಪವರ್ ಪ್ರಿಂಟಿಂಗ್ ಪ್ರೆಸ್, ಬೆಂಗಳೂರು.

ಪುಟ್ಟಣ್ಣ ಎಂ.ಎಸ್., ೧೯೨೩, **ಪಾಳೆಯಗಾರರು,** ಐದು ಉಪನ್ಯಾಸಗಳು, ಬೆಂಗಳೂರು.

ಪುಟ್ಟಣ್ಣ ಎಂ.ಎಸ್., ೧೯೨೪, **ಹಾಗಲವಾಡಿಯ ಪಾಳೆಯಗಾರರು,** ದಿ ಪವರ್ ಪ್ರಿಂಟಿಂಗ್ ಪ್ರೆಸ್, ಬೆಂಗಳೂರು.

ಪಂಚಮುಖಿ ಆರ್.ಎಸ್. ಮತ್ತು ಲಕ್ಷ್ಮೀನಾರಾಯಣರಾವ್, ೧೯೭೫, **ಕರ್ನಾಟಕದ ಅರಸು ಮನೆತನಗಳು,** ಧಾರವಾಡ.

ಬಸವರಾಜು ಎಲ್ (ಸಂ), ೧೯೭೧, **ಮಹಾದೇವನ ಮಹಾಲಿಂಗೇಂದ್ರ ವಿಜಯ,** ಮುರುಘಾಮಠ, ಚಿತ್ರದುರ್ಗ.

ಬಾಗೂರು ಆರ್. ನಾಗರಾಜಪ್ಪ, ೧೯೮೪, **ಹೊಸದುರ್ಗದ ಸುತ್ತಮುತ್ತ,** ಅಭಿವ್ಯಕ್ತಿ ವೇದಿಕೆ, ಹೊಸದುರ್ಗ.

ಬೆಟಗೇರಿ ಕೃಷ್ಣಶರ್ಮ, ೧೯೮೩, **ಕರ್ನಾಟಕದ ಜನ ಜೀವನ,** ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು.

ಭಾಸ್ಕರರಾವ್ ಮುಡಬೂಳ, ೨೦೦೧, **ಮರೆತುಹೋದ ಸುರಪುರದ ಇತಿಹಾಸ,** ಬೆಂಗಳೂರು,

ಭಾನುಮತಿ ವೈ.ಸಿ., **ಕೃಷ್ಣಶರ್ಮ ವಿರಚಿತ ಸರಜಾ ಹನುಮೇಂದ್ರ ಯಶೋವಿಲಾಸಂ,** ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಮಹಮ್ಮದ್ ಇಬ್ರಾಹಿಂ ಜುಬೇರಿ (ಅನು:ಕೃಷ್ಣ ಕೋಲ್ಹಾರ ಕುಲಕರ್ಣಿ) ೧೯೯೯, **ಬುಸಾತಿನೆ ಸಲಾತಿನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹಾಂತೇಶ್ ಎನ್.ಎಸ್., ೨೦೧೫, **ಚಿತ್ರದುರ್ಗ ಕೋಟೆ ಪರಿಸರದ ದೇವಾಲಯಗಳು,** ರೇಣುಕಾ ಪ್ರಕಾಶನ, ಚಿತ್ರದುರ್ಗ.

ಮಹಾದೇವಪ್ಪ ಹೆಚ್.ಬಿ., ೧೯೮೭, **ಮಧುಗಿರಿ ತಾಲ್ಲೂಕು ದರ್ಶನ,** ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.

ಮೀರಾಸಾಬಿಹಳ್ಳಿ ಶಿವಣ್ಣ, ೧೯೯೯, **ದುರುಗ ಜಾನಪದ**, ಶಕ್ತಿ ಮುದ್ರಣ ಮತ್ತು ಪ್ರಕಾಶನ, ರಾಜಾಜಿನಗರ, ಬೆಂಗಳೂರು.

ಮೋಹನ್ ಕೃಷ್ಣ ರೈ.ಕೆ., ೨೦೦೪, **ಪ್ರಭುತ್ವ ಮತ್ತು ಜನತೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಯೋಗೀಶ್ವರಪ್ಪ ಡಿ.ಎನ್., ೨೦೦೯, **ಮಧ್ಯಕಾಲೀನ ಕರ್ನಾಟಕದ ಪಾಳೆಯಗಾರರು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಯೋಗೀಶ್ವರಪ್ಪ ಡಿ.ಎನ್. ೧೯೯೯, **ಹಾಗಲವಾಡಿಯ ನಾಯಕರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಾಜಾ ಬಿಚ್ಚುಗತ್ತಿ ಪರಶುರಾಮಪ್ಪ ನಾಯಕ, ೧೯೬೧, **ಚಿತ್ರದುರ್ಗದ ಗಜಕೇಸರಿ, ಭಾಗ–೧**, ಚಿತ್ರದುರ್ಗ.

ರಾಜಶೇಖರಪ್ಪ ಬಿ., ೨೦೦೧, **ಇತಿಹಾಸ ಕಥನ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.

ರಾಜಣ್ಣ ಆರ್, ೧೯೮೨, **ನಾಯಕ ಜನಾಂಗದ ಇತಿಹಾಸ**, ಶ್ರೀ ಮೈಲಾರ ಮುದ್ರಣಾಲಯ, ಚಳ್ಳಕೆರೆ.

ರಾಜಶೇಖರ ಪಿ.ಕೆ., ೧೯೭೦, **ಪಿರಿಯಾಪಟ್ಟಣದ ಕಾಳಗ**, ಹೊನ್ನೂರು ಜನಪದ ಗಾಯಕರು, ಮೈಸೂರು.

ರಾಮರಾವ್ ಆರ್.ಎಸ್., ೧೯೮೯, **ಎಚ್ಚಮನಾಯಕ**, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.

ರಾಜಶೇಖರಪ್ಪ ಬಿ., ೨೦೦೧, **ದುರ್ಗಶೋಧನ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ರಾಜಶೇಖರಪ್ಪ ಬಿ., ೨೦೦೭, **ಚಿತ್ರದುರ್ಗ ಪಾಳೆಯಗಾರರ ದಾಖಲೆಗಳು**, ಕರ್ನಾಟಕದ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು.

ರಾಜಾರಾಮ ಹೆಗಡೆ, ಅಶೋಕ ಶೆಟ್ಟರ್ (ಸಂ), ೨೦೦೧, **ಮಲೆ ಕರ್ನಾಟಕದ ಅರಸು ಮನೆತನಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಾಮಪ್ರಸಾದ್ ಎಸ್.ಎಸ್., ೧೯೮೩, **ಪ್ರಾಚೀನ ಕರ್ನಾಟಕದಲ್ಲಿ ರಾಜ್ಯಾಡಳಿತ**, ಬೆಂಗಳೂರು.

ರಾಮಶೇಷನ್ ವೀ.ಕೃ., ೧೯೮೪, **ಕರ್ನಾಟಕದ ಕೋಟೆ ಕೊತ್ತಲಗಳು**, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.

ಲಕ್ಷ್ಮಣ್ ತೆಲಗಾವಿ, ೨೦೦೮, **ಕರ್ನಾಟಕ ಪಾಳೆಯಗಾರರ ನ್ಯಾಯಾಡಳಿತ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.

ಲಕ್ಷ್ಮಣ್ ತೆಲಗಾವಿ, ೨೦೦೯, **ಚಿತ್ರದುರ್ಗ ನಾಯಕ ಅರಸರ ರಾಜಕೀಯ ಚಿತ್ರ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.

ಲಕ್ಷ್ಮಣ್ ತೆಲಗಾವಿ, ೨೦೦೯, **ವಿಜಯನಗರ ಕಾಲದ ರಾಮಾನುಜಕೂಟಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಲಕ್ಷ್ಮಣ್ ತೆಲಗಾವಿ, ೨೦೧೦, **ಎಪ್ಪತ್ತೇಳು ಪಾಳೆಯಗಾರರು: ಸಂಖ್ಯಾ ಆಶಯ ನೆಲೆಯ ಚಾರಿತ್ರಿಕ ವಿವೇಚನೆ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.

ಲಿಂಗಣ್ಣ ಕವಿ, ೧೯೭೭, **ಕೆಳದಿ ನೃಪವಿಜಯ**, (ಗದ್ಯಾನುವಾದ ಕೆಳದಿ ಗುಂಡಾ ಜೋಯಿಸ್), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ವಸು ಎಂ.ವಿ. (ಸಂ), ೨೦೦೧, **ದಕ್ಷಿಣ ಕರ್ನಾಟಕದ ಅರಸು ಮನೆತನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಸುಂಧರಾ ಫಿಲಿಯೋಜಾ, ೧೯೮೨, **ಅಳಿದುಳಿದ ಹಂಪೆ**, ಮಾನಸೊಲ್ಲಾಸ ಪ್ರಕಾಶನ, ಬೆಂಗಳೂರು.

ವಾಸುದೇವ ಬಡಿಗೇರ, ೧೯೯೬, **ಸಂಡೂರು ಪರಿಸರದ ಕಾರ್ತಿಕೇಯ ತಪೋವನ ಚಾರಿತ್ರಿಕ ಅಧ್ಯಯನ**, ಮಾಯ ಪ್ರಕಾಶನ, ಕಮಲಾಪುರ, ಬಳ್ಳಾರಿ.

ವೀರನಾಯಕ ಎಚ್.ಬಿ., **ಕ್ಷಾತ್ರಾಂಶ ಪ್ರಬೋಧ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ಚಿತ್ರದುರ್ಗ ಜಿಲ್ಲೆ.

ವಸುಂಧರಾ ಫಿಲಿಯೋಜಾ, ೧೯೮೨, **ಅಳಿದುಳಿದ ಹಂಪೆ**, ಮಾನಸೋಲ್ಲಾಸ ಪ್ರಕಾಶನ, ಬೆಂಗಳೂರು.

ವರದರಾಜರಾವ್ ಜಿ., ೧೯೭೩, **ಕುಮ್ಮಟ ಕೇಸರಿ**, ಉಷಾ ಸಾಹಿತ್ಯ ಮಾಲೆ, ಮೈಸೂರು.

ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೪, **ಬಳ್ಳಾರಿ ಜಿಲ್ಲೆಯ ಪಾಳೆಯಗಾರರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿರೂಪಾಕ್ಷಿ ಪೂಜಾರಹಳ್ಳಿ, ೨೦೧೫, **ವಿಜಯನಗರ ಕಾಲದ ಸಂಸ್ಕೃತಿ, ಬೇಟೆ, ಪಶುಪಾಲನೆ ಮತ್ತು ಕೃಷಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿವೇಕ ರೈ. ಬಿ.ಎ., ೨೦೦೬, **ಪ್ರವಾಸಿ ಕಂಡ ವಿಜಯನಗರ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೭, **ಬೇಟೆ ಮತ್ತು ಬೇಡರು**, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ.

ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೬, **ಕರ್ನಾಟಕದಲ್ಲಿ ತಳವಾರಿಕೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೆಂಕಟರತ್ನಂ ಎಂ.ವಿ., ೧೯೭೪, **ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರಕಾರ**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

ವೆಂಕಟೇಶಯ್ಯ ಎಂ.ಜಿ., ೧೯೭೧, **ಚಿತ್ರದುರ್ಗ ಪಾಳೆಯಗಾರರು**, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.

ವೆಂಕಣ್ಣಾಚಾರ್ ಕೆ., ಲಕ್ಷ್ಮಣ್ ತೆಲಗಾವಿ, ೧೯೭೯, **ಐತಿಹಾಸಿಕ ಚಿತ್ರದುರ್ಗ**, ದಿ ಡಿಸ್ಟ್ರಿಕ್ಟ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್, ಚಿತ್ರದುರ್ಗ.

ವೆಂಕಣ್ಣ ಶಾಮಣ್ಣ ಬಿ. (ಸಂ), ೧೯೬೫, **ಶ್ರೀ ಕೂಡಲ ಶೃಂಗೇರಿ ಸಂಸ್ಥಾನದ ಪ್ರಾಚೀನ ಶಾಸನ ಲೇಖನ ಸಂಗ್ರಹ, ಭಾಗ-೧**, ಮೈಸೂರು.

ಶಾಮಶಾಸ್ತ್ರಿ ಆರ್., ೧೯೭೩, **ಕೆಳದಿ ನೃಪವಿಜಯಂ**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಶಿವಣ್ಣ ಕೆ.ಎಸ್. (ಸಂ), ೧೯೯೭, **ಕರ್ನಾಟಕ ಚರಿತ್ರೆ ಸಂಪುಟ-೩**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಂ.ಬಾ. ಜೋಶಿ, ೧೯೩೬, **ಕರ್ನಾಟಕದ ವೀರಕ್ಷತ್ರಿಯರು ಅಥವಾ ಹಟ್ಟಿಕಾರರು**, ಮನೋಹರ ಗ್ರಂಥ ಭಂಡಾರ, ಧಾರವಾಡ.

ಸದಾನಂದ ಕನವಳ್ಳಿ (ಅನು), ರಾಬರ್ಟ್ ಸಿವೆಲ್ (ಮೂಲ), ೧೯೯೨, **ಮರೆತುಹೋದ ಮಹಾಸಾಮ್ರಾಜ್ಯ, ವಿಜಯನಗರ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸದಾಶಿವಪ್ಪ ಕುಂ.ಬಾ., ೧೯೯೦, **ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ**, ಹರಪನಹಳ್ಳಿ, ಶಬರಿ ಮಾಂತೇಶ ಪ್ರಕಾಶನ, ಕುಂಚೂರು.

ಸುರೇಶ ಬಿ., ೨೦೦೯, **ಚಿತ್ರದುರ್ಗ ದಾವಣಗೆರೆ ಜಿಲ್ಲೆಗಳ ದೇವಾಲಯಗಳು**, ಸಂಶೋಧನಾ ಪ್ರಕಾಶನ, ಬಾಲೇನಹಳ್ಳಿ.

ಸೋಮಶೇಖರ್ ಎಸ್.ವೈ., ೨೦೦೦, **ವಿಜಯನಗರ ಕಾಲದ ಸೈನಿಕ ಆಡಳಿತ ವ್ಯವಸ್ಥೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅಪ್ರಕಟಿತ ಎಂ.ಫಿಲ್., ಪಿಎಚ್.ಡಿ. ಮಹಾಪ್ರಬಂಧಗಳು

ಅರುಣ್ ಹೆಚ್.ಟಿ., ೨೦೦೬, **ಕೆಳದಿ ಅರಸರ ತೆರಿಗೆ ಪದ್ಧತಿ**, (ಪಿಎಚ್.ಡಿ. ಮಹಾಪ್ರಬಂಧ), ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

ಕೊಟ್ರೇಶ್ ಎಂ., ೨೦೦೨, **ಕೋಟೆ-ಕೊತ್ತಲುಗಳು ಒಂದು ಅಧ್ಯಯನ (ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ)**, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ತಿಪ್ಪೇಸ್ವಾಮಿ ಎಸ್., ೨೦೦೪, **ರಕ್ಷಣಾ ವಾಸ್ತುಶಿಲ್ಪ ಚಿತ್ರದುರ್ಗ ಜಿಲ್ಲೆ**, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದುರುಗಪ್ಪ ಎಂ.ಕೆ., ೨೦೦೩, **ವಿಜಯನಗರೋತ್ತರಕಾಲೀನ ಬೇಡ ಜನಾಂಗ ಚಾರಿತ್ರಿಕ ಅಧ್ಯಯನ**, (ಪಿಎಚ್.ಡಿ. ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬಸವರಾಜ ಎಚ್.ಎಂ., ೨೦೦೨, **ಗುಡೇಕೋಟೆ, ಸಾಂಸ್ಕೃತಿಕ ಅಧ್ಯಯನ** (ಅಪ್ರಕಟಿತ ಎಂ.ಫಿಲ್. ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಂಜಣ್ಣ ಟಿ., ೨೦೧೦, ಚಿತ್ರದುರ್ಗ ಪಾಳೆಯಗಾರರ ಅವನತಿ: ಒಂದು ಅಧ್ಯಯನ, (ಕ್ರಿ.ಶ. ೧೭೦೦-೧೮೦೦) (ಪಿಎಚ್.ಡಿ. ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ರಮೇಶ್ ಕೆ., ೨೦೦೨, **ಉಜ್ಜನಿ ಗ್ರಾಮಾಧ್ಯಯನ** (ಅಪ್ರಕಟಿತ ಎಂ.ಫಿಲ್. ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶ್ಯಾಮಲಾ ಸಿ.ಆರ್., ೨೦೦೮, **ಪೂರ್ವ ಕರ್ನಾಟಕದ ಪಾಳೆಯಗಾರರು ಒಂದು ಅಧ್ಯಯನ** (ಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ) ಪ್ರಕಾಶಕರು-ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು.

ವಿರೂಪಾಕ್ಷಿ ಪೂಜಾರಹಳ್ಳಿ, ೧೯೯೫, **ಬಳ್ಳಾರಿ ಜಿಲ್ಲೆಯಲ್ಲಿ ಕಲೆಕ್ಟರುಗಳ ಆಳ್ವಿಕೆ** (ಪ್ರಕಟಿತ ಎಂ.ಫಿಲ್.ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಇಂಗ್ಲಿಶ್ ಪರಾಮರ್ಶನ ಗ್ರಂಥಗಳು

Cynthia Talbot, 2001, 'The Nayakas of Vijayanagara Andhra: A Preliminary Prosopography', in Kenneth R. Hall, ed, Structure and Society in Early South India: Essays in Honour of Noboru Karashima, Oxford University Press, New Delhi, pp. 251-75.

Dallapiccola, Anna Libera, Lallemant, Stephanie Z. (ed), 1985, Vijayanagara- City and Empire, New Currents of Research. Franz Steiner Verlag, Wiesbaden, GMBH, 73-87.

Desai, P.B. (ed), 1970, A History of Karnataka: From Prehistory to Unification (Karnataka University, Dharwad).

Dikshit G.S. (ed), 1988, Early Vijayanagara: Studies in its History and Culture (Proc. of S. Srikantaya Centenary Seminar). B.M.S. Memorial Foundation, Bangalore.

Gopal B.R., 1985-86, Vijayanagara Inscription, Vols. I-IV, Department of Arechaelogy and Museums, Mysore.

Heras, Henry, 1927, The Aravidu Dynasty of Vijayanagara, B.G. Paul & Co. Publishers, Madras.

Karashima, Subbarayalu, Shanmugam, Katti and Talbot. 1993, Statistical Study of Revenue Terms in Vijayanagara Inscriptions, Journal of Epigraphical Society of India, XIX, p. 37-51.

Karashima, Noboru. 1992, Towards a New Formation: South Indian Socieity under Vijayanagara Rule, Oxford University Press, New Delhi.

Karashima, Noboru, 2002, A Concordance of Nayakas: The Vijayanagaa Inscritpions in South india, Oxford University Press, New Delhi.

Krishnaswami (Pillai) A. 1964, The Tamil Country under Vijayanagara, Annamalai University, Chidambaram.

Krishnaswami Aiyangar S. 1919, Sources of Vijayanagara History, Madras University, Madras.

Krishnaswami Aiyangar, S. 1921, South India and Her Muhammadan Invaders Oxford University Press, London.

Kulke, Hermann. 1993, Maharajas, Mahants and Historians: Reflections on the Historigraphy of Early Vijayanagara and Sringeri, in Idem Kings and Cults, State formation in India and Southeast Asia (Manohar, New Delhi, 1993).

Mahalingam. T.V., 1940, Administration and Social life under Vijayanagara, University of Madras, Madras.

Narasimhamurthy, A.V. 1991, Coins and Currency system in Vijayanagara Empire, Numismatics Society of India, Banaras.

Nilakanta Sastri K.A. 1966, A History of South India from Prehistory to the Fall of Vijayanagara. 3rd ed. (First ed. 1955). Oxford University Press, New Delhi.

Nilakanta Sastri K.A. & Venkataramanayya N. 1946, Further Sources of Vijayanagara History-I, III, Madras University.

Parabrahma Sastri, P.V. (ed), 2010, Inscriptions of the Vijayanagara Rules, vol IV, Telugu Inscriptions, ICHR, SRC, Bangalore.

Rajendra Prasad and Bose Babu, 2006, Nayakara System in Andhar in Shanmugam and Srinivasan, pp. 67-74.

Ramesan N. 1962, A Catalogue of the Vijayanagara Coins of the A.P. Govt Museum Government of Andhra Pradesh, Hyderabad.

Ramesh K.V. (ed) Vijayanagara and Territorial Re-adjustments in Karnataka, Kannada Studies, Vol.3, no.1, University of Mysore, pp. 39-50.

Ramesh K.V. 1970, A History of South Kanara, Karnataka University, Dharwad.

Rao, Velcheru Narayana, Shulman, David and Subramanyam, Sanjay, 1992m Symobls of Substance, court and state in Nayaka Period Tamilnadu, Oxford University Press, New Delhi.

Ritti, S.H. and B.H. Gopal (ed), 2002-2009, Inscriptions of the Vijayanagara Rulers, vol, 1-III, ICHR, SRC, Bangalore.

Ritti, S.H. and Subbarayalu Y. (ed), 2010, Vijayanagara and Krishnadevaraya, ICHR SRC, Bengaluru.

Robert Sewell, 1962, A Forgotten Empire Vijayanagara, Reprint of 1900, Govt of India, Delhi.

Saletore B.A, 1934, Social and Political Life in the Vijayanagara Empire 1346-1646, B.G. Paul & Co, Publishers, Madras.

Sarojini Devi, Konduri, 1990, Religion in Vijayanagara Empire, Sterling, Delhi.

Shanmugam P. 1989, {attadai and Industries in the Tamil Country under the Vijayanagara Rule, The Journal of Asian and African Studies (Tokyo), Pp. 31-49.

Shanmugam P. and Srinivasan (ed), 2006, Recent Advance in Vijayanagara Studies, New Ear Publications, Chennai.

Stein Burton, 1980, Peasant state and Society in Medieval South India, Oxford University Press, Delhi.

Stein, Burton, 1985, Vijayanagara and the Transition to Patrimonial Systems in Dallapiccola, et.al. (1985).

Stein, Burton, 1990, The Cambridge History of India I.2: Vijayanagara Cambrigde University Press, Cambridge (Indian Edition by Orient Longman).

Subbarayalu Y. 1983, the Peasantry of Tiruchairapalli District form the 13th to 17th conturies Socio-economic Change in Villages in Tiruchairapalli District, Tamilnadu, India, Part1: Pre Modern Period ed. by Karashima, Noboru, Tokyo University of Foriegn Studies, ILCAA, Tokyo, pp. 123-132.

Subbarayalu Y. 2006, Administrative Divisions of the Vijayanagara State, in Chanmugam and Srinivasan, 2006, pp. 31349.

T.V. Mahalingam ed, Mackenzie Manuscripts, 2 Vols, University of Madras, 1972, 1976.

Venkataramanayya N. 1935, Studies in the History of the Third Dynasty of Vijayanagara. Madras University.

Venkataratnam A.V. 1972, Local Government in the Vijayanagara Empire, University of Mysore.

Vijaya Ramaswamy, 1985, Textiles and Weavers in Medieval South India, Oxford University Press, New Delhi.

Vijayanagara Sexcentenary Veolume (Karnataka Historical Research Society, Dharwar).

Wagoner Philip B., 1993, Tidings of the king: A Translation and Ethnohistorical Analysis of the Rayavachakamu, University of Hawii Press, Honolulu.

❖❖❖



ವಿಜಯನಗರದ ರಾಜಧಾನಿ ಹಂಪಿ



ವಿಜಯನಗರ ಕಾಲದ ವಿಜಯ ವಿಠ್ಠಲ ದೇವಾಲಯ







ಗುಡೇಕೋಟೆ ಪಾಳೆಯಗಾರರ ಕಾಲದಲ್ಲಿ ನಿರ್ಮಾಣವಾದ ಕೋಟೆ



ಚಿತ್ರದುರ್ಗ ನಾಯಕರ ಕಾಲದಲ್ಲಿ ನಿರ್ಮಾಣವಾದ ಚಿತ್ರದುರ್ಗದ ಕೋಟೆ



ಯಲಹಂಕ ನಾಡಪ್ರಭುಗಳ ಕಾಲದ ಬೆಂಗಳೂರಿನ ಕೋಟೆ




ಹಂಡೆ ಪಾಳೆಯಗಾರರ ಕಾಲದ ಬಳ್ಳಾರಿ ಕೋಟೆ







ಚಿತ್ರದುರ್ಗ ನಾಯಕರ ಕಾಲದಲ್ಲಿ ನಿರ್ಮಾಣಗೊಂಡ ಉಯ್ಯಾಲೆ ಕಂಬ



ಕನ್ನಡ ವಿಶ್ವವಿದ್ಯಾಲಯ